ಎರಗಿ 'ಸದ್ಗುರುನಾಥನೇ, ಪ್ರಪಂಚವನ್ನು ತ್ಯಾಗ ಮಾಡಬೇಕೆಂದರೆ ಸಾಧ್ಯ ವಾಗದಂತಾಗಿದೆ. ಪ್ರಪಂಚದಲ್ಲಿ ಎಳ್ಳುಕಾಳಿನಷ್ಟು ಸುಖವಿಲ್ಲ. ಹಗಲು-ರಾತ್ರಿ ದುಡಿದು ಹಣ್ಣಾಗುತ್ತೇನೆ. ಇದೇನು ಮೋಹವೋ, ಕರ್ಮವೋ ತಿಳಿಯದಾಗಿದೆ. ನಿನಗೆ ನಾನು ಶರಣಾಗತ ನನ್ನನ್ನು ಉದ್ಧರಿಸು, ಎನ್ನಲು ಸದ್ಗುರುವು ಗೊಂದಲಗೆಡಬೇಡ ಮಗು ತಾಳ್ಮೆ ಇರಲಿ. ನಿನ್ನ ಉದ್ಧಾರಕ್ಕೂ ಮಾರ್ಗವಿದೆ. ಪ್ರಪಂಚವನ್ನು ಬಿಡಲಾಗದಿದ್ದರೆ ಅವಶ್ಯವಾಗಿ ಮಾಡಿಕೊಂಡಿರು. ವಸಿಷ್ಠ-ಅಗಸ್ತ್ಯ ಅತ್ರಿ ಮುಂತಾದ ಶ್ರೇಷ್ಠ ಋಷಿಗಳು ಪ್ರಪಂಚದಲ್ಲಿದ್ದುಕೊಂಡು ಪರಮಾರ್ಥವನ್ನು ಸಾಧಿಸಿಕೊಂಡರು. ಆದರೆ ಅವರೆಲ್ಲ ಮಹಾಜ್ಞಾನಿಗಳೆಂದೆನಿಸಿದವರು. ಅವರಂತೆ ನೀನಾದರೂ ಮೊದಲು ಶಾಸ್ತ್ರ ಶ್ರವಣದಿಂದ ಜ್ಞಾನವನ್ನು ಪಡೆ. ಭಗವಂತನ ನಾಮಸ್ಮರಣೆಯನ್ನು ಮಾಡುತ್ತಿರು, ಪ್ರಪಂಚವು ನನಗೆ ಗಂಟು ಬಿದ್ದಿರುವುದೆಂದು ಮರುಗಬೇಡ. ಸಾಧಕರಿಗೆ ಒಂದು ಬಗೆಯಲ್ಲಿ ಪ್ರಪಂಚವು ಭದ್ರವಾದ ಕೋಟೆ ಎನಿಸುವುದು. ಅದರೊಳಗಿದ್ದು ನಮ್ಮ ಸ್ವಾರ್ಜಿತವನ್ನು ಅಪಹಾರ ಮಾಡಲೆತ್ನಿಸುವ ಕಾಮ, ಕ್ರೋಧ ಮುಂತಾದ ಚೋರರ ಮೇಲೆ ಬಾಣ ಬಿಟ್ಟು ಅವರನ್ನೋಡಿಸುವುದು ಸುಲಭ. ಸನ್ಯಾಸವೆಂದರೆ ಬಯಲು ಕಾಳಗ. ಅಲ್ಲಿ ಯಾವ ಆಶ್ರಯವೂ ಇಲ್ಲ. ತನಗೆ ತಾನೇ ಆಶ್ರಯ. ಆದುದರಿಂದ ನೀನು ಪ್ರಪಂಚದಲ್ಲಿದ್ದುಕೊಂಡೇ ಪರಮಾರ್ಥ ಸಾಧಿಸು. ಭಗವಂತ ಸಹಾಯ ಮಾಡುತ್ತಾನೆ, ಎನ್ನಲು ಭಕ್ತನು ಸಂತುಷ್ಟನಾಗಿ ಅದರಂತೆ ನಡೆದು ಬರಬರುತ್ತ ಕಮಲ ದೆಲೆಯ ಮೇಲಿನ ನೀರಿನಂತೆ ಬಾಳನ್ನು ಸಾಗಿಸುವನು.

ಇನ್ನೂ ಒಂದು ಬಗೆಯ ಭಕ್ತವರ್ಗವುಂಟು. ಆದರೆ ಇವರ ಸಂಖ್ಯೆ ಬಹಳ ಕಡಿಮೆ. ಮನಃಪೂರ್ವಕವಾಗಿ ಇವರು ಸಂಸಾರವನ್ನು ತ್ಯಾಗ ಮಾಡಿರುವರು. ಗುರುವಿನ ಸನ್ನಿಧಿಯಲ್ಲಿಯೇ ವಾಸ ಮಾಡುವರು. ಗುರು ಸೇವೆಯನ್ನು ಮಾಡುವರು. ಗುರುವಿನ ಆಜ್ಞೆಗಳನ್ನು ಮನಸಾ ಪಾಲಿಸುತ್ತ ನಿತ್ಯ ಭಿಕ್ಷೆಗೆ ತೆರಳಿ ಸಿದ್ಧಾನ್ನವನ್ನು ತರುವರು. ಅದನ್ನು ಗುರುವಿಗೆ ಅರ್ಪಿಸುವರು. ಗುರುಪ್ರಸಾದವೆಂದು ಅದನ್ನು ಸೇವಿಸುವರು. ಗುರುಸೇವೆಯಲ್ಲಿ ಇವರಿಗೆ ಅಹಂಮಮಿಕೆ ಗುರುವಿನ ಮುಖದಿಂದ ಬಂದುದೆಲ್ಲ ವೇದ. ಗುರು ಸೇವೆಯೇ ಸಾಧನ. ಗುರುಸ್ಮರಣವೇ ಧ್ಯಾನ. ಮಾತು ಬಹಳವಾಡಲಾ

ರರು. ಯಾರೊಡನೆಯಾದರೂ ಮಾತಾಡುತ್ತಿದ್ದರೆ ಅದು ವೇದಾಂತ ಚರ್ಚೆ. ಒಂದು ವೇಳೆ ಏಕಾಂತ ದೊರೆತರೆ ಅಲ್ಲಿ ಶುದ್ಧವಾಗಿ ಕುಳಿತು, ತತ್ವಗಳ ಮನನ ಮಾಡುವರು. ಹೀಗೆ ಸದ್ಗುರು ಸನ್ನಿಧಿಯಲ್ಲಿ ಶ್ರವಣ ಮನನಾದಿಗಳು ಸಾಧಿಸಹತ್ತಿದರೆ ವಿಷಯಾ ಸಕ್ತಿಯಾತಕ್ಕುಳಿದೀತು? ವಿಷಯಾಸಕ್ತಿ ಸಂಪೂರ್ಣ ನಷ್ಟವಾಗಲು ಸಾಕ್ಷಾತ್ಕಾರವಾಗುವದೇನು ದೊಡ್ಡ ಮಾತು.

ಇದಕ್ಕೂ ಉತ್ತಮಾಧಿಕಾರಿಗಳೆನಿಸಿದವರ ವರ್ಗವೂ ಉಂಟು. ಉಳಿದ ವರ್ಗಗಳನ್ನು ನೋಡಿದರೆ ಇವರ ಸಂಖೆ ಬಹಳ ಚಿಕ್ಕದೆಂದು ಹೇಳಬೇಕು. ಬಹಳ ಕಾಲದ ವರೆಗೆ ಸದ್ಗುರು ಸನ್ನಿಧಿಯಲ್ಲಿದ್ದು ಶ್ರವಣ-ಮನನಾದಿಗಳನ್ನು ಮಾಡಿ ಅಚ್ಚ ಅರಿವಿನ ಬೆಳಕಿನಲ್ಲಿ ಸೋಽಹಂ ಭಾವದಿಂದ ಇರುವರು.

ಇಂಥವರನ್ನು ಗುರುತಿಸಿದ ಗುರುವು ಅವರನ್ನು ಏಕಾಂತದಲ್ಲಿ ಕರೆದು ಕೊಂಡು ಹೋಗಿ ಮಹಾ ವಾಕ್ಯವನ್ನು ಉಪದೇಶಿಸುವನು. ಅದರಿಂದ ಹೊರಗೂ-ಒಳಗೂ ತುಂಬಿದ ಅಚ್ಚ ಅರಿವಿನ ತಿಳಿ ಬೆಳಕು ತೋರಿ ಬ್ರಹ್ಮಾತ್ಮೈಕ್ಯ ಜ್ಞಾನವಾಗಿ ಸಾಧಕನು ಕೃತಾರ್ಥನಾಗುವನು. ಪ್ರಪಂಚದಲ್ಲಿ ಅಡಗಿ ಹೋಗುವುದು. ಏಕರಸಬ್ರಹ್ಮವೊಂದೇ ಉಳಿಯುವುದು. ವೃತ್ತಿಗಳೆಲ್ಲ ಅಳಿದು ಸಚ್ಚಿದಾನಂದ ಸಾಗರದಲ್ಲಿ ಲೀನವಾಗುವವು.

ಇಂಥವರನ್ನು ಮಾತ್ರ ಸದ್ಗುರು ಕೃಪೆಗೆ ಪೂರ್ಣ ಪಾತ್ರರಾದವರೆಂದು ತಿಳಿಯಬೇಕು. ಸಗುಣ ಈಶ್ವರನಿಗಿಂತ ಇವನು ತಲುಪಿದ ಸ್ಥಾನ ಹಿರಿದು. ಅದೇ ಸರ್ವಾಧಿಷ್ಠಾನವೆನಿಸಿದ ಬ್ರಹ್ಮಪದ.

ಜ್ಞಾನಿಗಳಾದ ಮೇಲೆ ಅವರ ರೀತಿನೀತಿಗಳಿಂದ ಮೂರು ವರ್ಗಗಳೆಂದು ಹೇಳುತ್ತಾರೆ. ಬಾಲೋನ್ಮತ್ತ ಪಿಶಾಚವತ್ ಹೀಗಿದ್ದರೂ ಸದ್ಗುರು ಸನ್ನಿಧಿಯಲ್ಲಿದ್ದುಕೊಂಡು ಸಿದ್ಧಿಯನ್ನು ಪಡೆದವರು ಬಹುತರವಾಗಿ ಬಾಲ ಸ್ವಭಾವವನ್ನು ಪಡೆಯುತ್ತಾರೆನ್ನಬಹುದು.

ಇಂಥ ಪದವಿ ಪಡೆದೂ ಅಜ್ಞಾನಿಯಾದವನು ತನ್ನ ಗುರುಸೇವೆಯನ್ನು ಪ್ರೇಮದಿಂದ ನಿತ್ಯ ಮಾಡುವನು. ಒಳಹೊರಗೆಲ್ಲ ಹಸುಗೂಸಿನಂಥ ಭಾವ. ಮೊಗದಲ್ಲಿ ಮುಗುಳು ನಗೆ. ಕರ್ತವ್ಯಗಳಲ್ಲಿ ಚಟುವಟಿಕೆ. ಎಲ್ಲರಲ್ಲಿ ದಯಾ ಭಾವ.

ಭೂಮಿಯ ಮೇಲೆ ಬೇರೆ ಬೇರೆ ಬಣ್ಣವುಳ್ಳ ಮಣ್ಣುಂಟು. ಅಲ್ಲಲ್ಲಿ ಮಳೆಯಾಗಲು ನೀರು ಹಳ್ಳ-ಕೊಳ್ಳಗಳಾಗಿ ನದಿಯಾಗಿ ಹರಿಯುತ್ತ ಸಾಗರದತ್ತ ಧಾವಿಸಿ ಕಡೆಗೆ ಅದರಲ್ಲಿ ಬೆಳೆಯುವುದು. ಹೀಗೆ ಅಷ್ಟು ಬಗೆಯ ಬಣ್ಣ ಬಣ್ಣದ ನೀರು ಬಂದು ಬೆರೆತರೂ ಸಾಗರದ ಬಣ್ಣವೇನೂ ಕೆಡುವದಿಲ್ಲ. ಅದು ತನ್ನಂತೆ ಮಾಡಿಕೊಂಡು ಬಿಡುವುದು. ಅದಸ್ಥಲ ಕಾಲಗಳ ನಿರ್ಬಂಧವೇನೂ ಇಲ್ಲ.

ಆಪಣಾ ಸಾರಿಖೆ ಕರಿತಿ ತಾತ್ಕಾಳ ।
ನಾಹೀ ಕಾಳವೇಳ ತಯಾಲಾಗೀ ॥ ತುಕಾರಾಮ

ಸದ್ಗುರುವು ತನ್ನನ್ನಾರಾಧಿಸುವ ಶಿಷ್ಯನನ್ನು ತನ್ನಂತೆಯೇ ಮಾಡಿಕೊಂಡು ಬಿಡುವನು. ಅದಕೇನೂ ಹೊತ್ತು ಗೊತ್ತು ಬೇಕಾಗಿಲ್ಲ.

ಹೀಗೆ ದೂರ ದೂರದ ಪ್ರಾಂತಗಳಿಂದ ಬರುವ ಭಕ್ತರು ಸದ್ಗುರು ಕೃಪೆಯಿಂದ ತಮ್ಮ ಮನೋರಥಗಳನ್ನು ಪೂರ್ಣ ಮಾಡಿಕೊಳ್ಳುವರು. ಯಾವಾಗಲೂ ಬರುತ್ತಿರುವ ಭಕ್ತರಿಗೆ ದರ್ಶನ ಕೊಡುತ್ತ ಅವರವರ ಮನೋರಥಗಳನ್ನು ಪೂರೈಸುತ್ತ ಸದ್ಗುರುನಾಥನು ತನ್ನ ಸಿದ್ಧಾಶ್ರಮದಲ್ಲಿ ಇರುವನು. ಎಂದು ಕಾಣುತ್ತಿದ್ದರೂ ಇದ್ದ ಸ್ಥಿತಿಯಲ್ಲೆ ಇದ್ದ ತಾಣದಲ್ಲೇ। ಕೂಗಿಕೊಂಬೆ ನಿಲ್ಲೆಂ ಎಂದು ಹಲುಬುವ ದೇಶಾಂತರವಾಸಿಗಳಾದ ಭಕ್ತರಿಗೆ ಅವರಿದ್ದಲ್ಲಿಯೇ ಹೋಗಿ ಸದ್ಗುರು ಅವರ ಕಷ್ಟಗಳನ್ನು ನಿವಾರಿಸುವನು. ಮತ್ತು ಅವರಿಂದ ಪೂಜೆಯನ್ನು ಸ್ವೀಕರಿಸುವನು. ಅವರಿಗೆ ಉಪದೇಶ ಕೊಟ್ಟು ಭಕ್ತಿಮಾರ್ಗದ ರಹಸ್ಯವನ್ನು ತಿಳಿಸುವನು.

ಇಂಥ ಅನೇಕ ಸಂದರ್ಭಗಳಲ್ಲಿ ಸದ್ಗುರುವು ತೋರಿದ ಲೀಲಾ-ಚಮತ್ಕಾರ ಭರಿತವಾದ ಕಥೆಗಳು ಸಾಕಷ್ಟು ಪ್ರಸಿದ್ಧವಿರುತ್ತವೆ. ಅವುಗಳನ್ನೆಲ್ಲ ಸದ್ಗುರು ಭಕ್ತರು ಮಾತ್ರ ಬಲ್ಲರು. ಅವರೆಲ್ಲ ಒಂದೇ ಕಡೆಗೆ ದೊರೆಯುವುದು ಗುರುಭಕ್ತರಿಗೆ ಇಷ್ಟವಾಗಿದೆ. ಇತರರಿಗೆ ಸದ್ಗುರು ಮಹಿಮೆಯು ತಿಳಿದು ಬರುತ್ತದೆ.

ಈ ಚರಿತ್ರ ಪಠಣದಿಂದ ಜನರ ಪಾಪ ನಷ್ಟವಾಗಿ ಅವರು ಬ್ರಹ್ಮಾನಂದ ಭಾಗಿಗಳಾಗುವಂತೆ ಗುರುವು ಅನುಗ್ರಹಿಸಲಿ. ಪಂಡಿತ-ಪಾಮರರೆಂಬ ಭೇದವಿಲ್ಲದೇ ಎಲ್ಲರನ್ನೂ ರಂಜಿಸುವಂತೆ ಈ ಗ್ರಂಥವು ರಸಭರಿತವಾಗುವಂತೆ ಗುರುವು ತನ್ನ ಕರುಣಾದೃಷ್ಟಿಯನ್ನು ಬೀರಲಿ.

೨

ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥

ಗೀತಾ

ಪವಿತ್ರರೂ ಧನವಂತರೂ ಆದವರ ಮನೆಯಲ್ಲಿ ಹಿಂದಿನ ಜನ್ಮದಲ್ಲಿ ಯೋಗಸಾಧನೆ ಪೂರ್ಣವಾಗದೇ ಗತಿಸಿದವರು ಹುಟ್ಟುತ್ತಾರೆ.

ಭಾರತದೇಶವು ಪುಣ್ಯಭೂಮಿ ಎನಿಸಿದೆ. ಕರ್ಮಭೂಮಿಯೂ ಸರಿ. ಆಯಾ ಲೋಕಗಳನ್ನು ಪಡೆಯುವುದಕ್ಕೆ ತಕ್ಕಷ್ಟು ಪುಣ್ಯವನ್ನು ಸಂಪಾದಿಸಿಕೊಂಡು ಪುಣ್ಯ ಲೋಕಗಳನ್ನು ಪಡೆದ ದೇವ ಸದೃಶ ಮಾನವರು ಭರತ ಭೂಮಿಯಲ್ಲಿ ಹುಟ್ಟುವುದಕ್ಕೆ ಇಚ್ಛೆಪಡುವರೆಂದು ಪುರಾಣಗಳಲ್ಲಿ ಬರುತ್ತದೆ. ಯಾಕಂದರೆ ಇದು ಕರ್ಮಭೂಮಿಯಾಗಿರುವದರಿಂದ ಬೇಕಾದ ಸಾಧನೆಯನ್ನು ಮಾಡಿಕೊಂಡು ಇಲ್ಲಿ ಸಿದ್ಧಿಯನ್ನು ಪಡೆಯಬಹುದು. ಉಳಿದ ಲೋಕಗಳು ಪುಣ್ಯದ ಫಲವಾಗಿ ದೊರಕಿದವುಗಳಾಗಿರುವದರಿಂದ ಅವು ಬರಿ ಭೋಗ ಭೂಮಿಗಳೆನಿಸುವವು. ಅಲ್ಲಿ ಸಾಧನೆ ಮಾಡಲು ಆಸ್ಪದವಿಲ್ಲ.

ನಿಜಾಮ ಪ್ರಾಂತದಲ್ಲಿ ವಂಶದುರ್ಗವೆಂಬ ಊರು. ಅಲ್ಲಿ ಗುರುಶಾಂತಪ್ಪನೆಂಬ ಶಿವಭಕ್ತನು ವಾಸವಾಗಿದ್ದನು. ಸಾಧ್ವಿಯಾದ ಮಲ್ಲಮ್ಮನು ಇವನ ಹೆಂಡತಿ. ಅವಳಾದರೂ ಶಿವಭಕ್ತಳು. ನಿತ್ಯದಲ್ಲಿ ಶಿವಪೂಜೆ-ಶಿವಭಜನೆಗಳನ್ನು ಮಾಡುತ್ತ ಈ ದಂಪತಿಗಳು ಅತಿಥಿ ಅಭ್ಯಾಗತರಿಗೆ ಮನೆಯನ್ನು ಮುಕ್ತ ದ್ವಾರವಾಗಿಟ್ಟಿದ್ದರು. ಕಂಡವರೆಲ್ಲ ಅವರ ಗೃಹಸ್ಥ ಧರ್ಮದ ಪ್ರಶಂಸೆ ಮಾಡದೇ ಇರುತ್ತಿರಲಿಲ್ಲ.

ಹೀಗೆ ಈ ದಂಪತಿಗಳಲ್ಲಿ ಪಕ್ವವಾದ ಗೃಹಸ್ಥ ಧರ್ಮವು ನೆಲೆಗೊಳ್ಳಲು ಇನ್ನೊಂದು ಕಾರಣವೂ ಇತ್ತು. ಇವರ ಮನೆಗೆ ಜ್ಞಾನಿಗಳಾದ ಶ್ರೀ ವೀರಭದ್ರಸ್ವಾಮಿಗಳೆಂಬವರು ಪ್ರತಿನಿತ್ಯ ಬರುತ್ತಿದ್ದರು. ಆ ಸ್ವಾಮಿಗಳನ್ನು ದಂಪತಿಗಳು ಬಹು ಭಕ್ತಿಯಿಂದ ಕಾಣುವರು. ಅವರ ಸ್ನಾನ-ಪೂಜೆ-ಅನುಷ್ಠಾನಗಳಿಗೆ ಅನುಕೂಲತೆಗಳನ್ನೊದಗಿಸುವರು. ಶುಚಿ-ರುಚಿ ಸಾತ್ವಿಕಾನ್ನವನ್ನು ಬಡಿಸುವರು. ಇವರ ಆದರಾತಿಥ್ಯಗಳನ್ನೂ, ಪರಮಾರ್ಥದಲ್ಲಿ ಪ್ರೀತಿಯನ್ನೂ ಕಂಡು ಸ್ವಾಮಿಗಳು ಆನಂದಭರಿತರಾಗಿ ಜ್ಞಾನ ವರ್ಧಕವಾದ ಶೂನ್ಯ ಸಂಪಾದನೆ ಮುಂತಾದ ಗ್ರಂಥಗಳನ್ನು ಸುಲಲಿತವಾಗಿ ಬೋಧಿಸು

ವರು. ಅದರೊಳಗಿನ ಲಿಂಗಾಂಗ ಸಾಮರಸ್ಯ ಮುಂತಾದ ಜ್ಞಾನರಸಭರಿತ ಭಾವಗಳನು ಸ್ವಾಮಿಗಳು ವರ್ಣಿಸುತ್ತಿರಲು ದಂಪತಿಗಳು ಸ್ವರೂಪಾನಂದ ವನ್ನು ಪಡೆದು ಸುಖಿಸುವರು.

ಈ ದಂಪತಿಗಳಿಗೆ ಮೂವರು ಗಂಡು ಮಕ್ಕಳು. ಅವರಲ್ಲಿ ಚರಿತ್ರ ನಾಯಕನೆನಿಸುವ ಸಿದ್ಧನು ಮೂರನೆಯವನು ಇವನು ಶಾಲಿವಾಹನ ಕಿ. ಶಕೆ ೧೭೬೮ನೆಯ ದುರ್ಮುಖ ಸಂವತ್ಸರದ ಚೈತ್ರ ಶು| ನವಮಿ (ರಾಮ ನವಮಿ)ಯ ದಿನ ಜನ್ಮ ತಾಳಿದನು. ಆ ಕೂಸು ಒಳ್ಳೇ ಮಹಾ ಪುರುಷರ ಲಕ್ಷಣಗಳಿಂದ ಕೂಡಿ ಅಜಾನುಬಾಹುವಾಗಿತ್ತು. ತಾಯ್ತಂದೆಯರ ಪ್ರೀತಿ ಆರೈಕೆಯಲ್ಲಿ ಶುಕ್ಲಪಕ್ಷದ ಚಂದ್ರಮನಂತೆ ಕೂಸು ಪೈದುಂಬ ತೊಡಗಿತು.

ಸಾಂಸಾರಿಕ ಕಾರ್ಯಗಳನ್ನು ಮುಗಿಸಿ ಆ ದಂಪತಿಗಳು ನಿತ್ಯದಲ್ಲಿ ಶ್ರವಣ ಮಾಡತಕ್ಕವರು. ಆಗ ಸಿದ್ಧನು ತಾಯಿ ತೊಡೆಯ ಮೇಲೆ ತುಸು ದೊಡ್ಡವನಾಗಿ ಮಾತು ಬರತೊಡಗಲು ತಾಯಿಯ ಬಳಿಯಲ್ಲಿ ಬರಬರುತ್ತ ಪದ್ಮಾಸನ ಹಾಕಿ ಸ್ವಾಮಿಗಳ ಎದುರಿನಲ್ಲಿ ಬಹು ಭಕ್ತಿಯಿಂದ ಕುಳಿತು ಶ್ರವಣ ಮಾಡತೊಡಗಿದನು.

ಈ ಬಾಲಕನಲ್ಲಿ ಕಾಣುವ ಭಕ್ತಿ ಏಕಾಗ್ರತೆಗಳನ್ನು ಕಂಡು ಶ್ರೋತೃ ಗಳು ಬಹಳ ಕೌತುಕ ಪಡುವರು. ಇದೇ ಸಮಯದಲ್ಲಿ ತಕ್ಕ ಮಟ್ಟಿಗೆ ಅಕ್ಷ ರಾಭ್ಯಾಸ ನಡೆದಂತೆ ಕಾಣುತ್ತದೆ. ಆದರೆ ಜನ್ಮತಃ ಮಹಾತ್ಮರಾದವರಿಗೆ ಲೌಕಿಕ ವಿದ್ಯೆಯ ಅವಶ್ಯಕತೆಯಾದರೂ ಏನು? 'ಅಧ್ಯಾತ್ಮವಿದ್ಯಾ ವಿದ್ಯಾ ನಾಮ್, ವಿದ್ಯೆಗಳಲ್ಲಿ ನಾನು ಅಧ್ಯಾತ್ಮ ವಿದ್ಯೆಯಾಗಿದ್ದೇನೆ. ಎಂದು ಭಗ ವಂತನು ಹೇಳಿದ್ದಾನೆ. ಅಂಥ ಅಧ್ಯಾತ್ಮ ವಿದ್ಯೆಯ ಶ್ರವಣವು ತಾಯಿಯ ಗರ್ಭದಲ್ಲಿಯೇ ಪ್ರಲ್ಹಾದನಿಗೆ ದೊರೆತಂತೆ ಸಿದ್ಧನಿಗೆ ದೊರಕಿತ್ತು. ಅಲ್ಲದೇ ಮುಂದೆ ಕೂಡ ಅದರ ಲಾಭವು ನಿತ್ಯದಲ್ಲಿ ಇದ್ದೇ ಇತ್ತು. ಈ ಶ್ರವಣ ಲಾಭ ದಿಂದ ಸಿದ್ಧನಿಗೆ ಮೂರು ವರ್ಷ ತುಂಬುವಷ್ಟರಲ್ಲಿಯೇ ನಿತ್ಯಾ-ನಿತ್ಯ ವಸ್ತು ವಿವೇಕವುಂಟಾಗಿತ್ತೆಂದರೆ ಅತಿಶಯೋಕ್ತಿಯಲ್ಲ.

ಒಂದು ದಿನ ಸ್ವಾಮಿಗಳಿಂದ ಲಿಂಗೈಕ್ಯ ವಿಚಾರವು ಬಹು ಚನ್ನಾಗಿ ಪ್ರತಿಪಾದಿತವಾಗಲು ಸಿದ್ಧನು ಅದನ್ನು ದಿನಾಲು ಮನದಲ್ಲಿ ವಿಚಾರಿಸತೊಡ ಗಿದನು. ಇಂಥ ಸ್ಥಿತಿಯನ್ನು ನಾನೂ ಪಡೆಯಬೇಕೆಂಬ ಆಶೆ ಅಂಕುರಿಸಿತು.

ಆದರೆ ಪಡೆಯುವುದು ಹೇಗೆ ? ಎಲ್ಲ ಪ್ರಾಣಿಗಳನ್ನು ಸಮಭಾವದಿಂದ ಕಾಣ ತೊಡಗಿದನು. ಎಲ್ಲ ಕಡೆಗೂ ಪರಮಾತ್ಮನಿರುವನೆಂದು ಬಗೆದನು. ಇತರ ಜೀವಿಗಳನ್ನು ನೋಯಿಸುವುದೆಂದರೆ ಪರಮಾತ್ಮನಿಗೇ ನೋವು ಕೊಟ್ಟಂತೆ ಎಂದು ಭಾವನೆಯಾಯಿತು. ಗೆಳೆಯರೊಡನೆ ಆಡುವಾಗ ಸಿದ್ಧನು ಪ್ರೇಮ ಮಯನಾಗಿ ವರ್ತಿಸತೊಡಗಿದನು.

ಆಟಕ್ಕೆಂದು ಒಂದು ದಿನ ಕೂಡಿದ ಗೆಳೆಯರು ಅದೇನು ಕಾರಣವೋ ಸಿದ್ಧನಿಗೆ ನಮಗೆ ತಿನ್ನಲಿಕ್ಕೆ ಎಳ್ಳು ಕೊಡಬೇಕೆಂದು ಬೇಡಿದರು. ಗೆಳೆಯರ ಅಪೇಕ್ಷೆಯನ್ನು ಪೂರ್ಣಗೊಳಿಸುವುದು ಉಚಿತವೆಂದು ಸಿದ್ಧನಿಗನಿಸಿತು. ನೆಟ್ಟಗೆ ಮನೆಗೆ ಬಂದು ಹುಡುಕತೊಡಗಿದನು. ಕರ್ಮ–ಧರ್ಮ ಸಂಯೋಗ ವೆಂಬಂತೆ ತಾಯಿ ಮನೆಯಲ್ಲಿರಲಿಲ್ಲ. ಕೊನೆಗೆ ಎಳ್ಳು ಇದ್ದ ಸ್ಥಳವು ನೆನಪಾ ಯಿತು. ಅವು ಅಡಿಗೆಯ ಮನೆಯಲ್ಲಿ ನೆಲುವಿನ ಮೇಲಿದ್ದ ಗಡಿಗೆಯಲ್ಲಿದ್ದವು. ಚಿಕ್ಕವರಾರಿಗೂ ನಿಲುಕುವುದು ಸಾಧ್ಯವಿರಲಿಲ್ಲ. ಎಳ್ಳು ಹೇಗೆ ದೊರಕಿಸ ಬೇಕು. ಆ ಗಡಿಗೆಗೆ ಒಂದು ಕೋಲಿನಿಂದ ತೂತು ಕೆಡವಿದರು. ಎಳ್ಳು ಸೋರತೊಡಗಿದವು. ಅದನ್ನು ಕಂಡು ಸಿದ್ಧನು 'ಬೇಗ ಬನ್ನಿರಿ' ಎಂದು ಗೆಳೆಯರನ್ನು ಕರೆದು ತಾನೊಂದು ವಸ್ತ್ರವನ್ನು ಅದರ ಕೆಳಗೆ ಹಾಸಿದನು. ಸಾಕಷ್ಟು ಎಳ್ಳು ಸಂಗ್ರಹವಾದವು. ಸಿದ್ಧನು ತನ್ನ ವಸ್ತ್ರವನ್ನು ಸರಿಸಿದನು. ಗೆಳೆಯರೆಲ್ಲ ಅದೇ ಕ್ರಮವನ್ನು ಅನುಸರಿಸಿದರು. ಎಲ್ಲರಿಗೂ ಒಂದೊಂದು ಎಳ್ಳಿನ ಗಂಟಾಯಿತು. ಅವೆಲ್ಲ ಕೂಡಿದರೆ ಕೆಲವಾದರೂ ಹರಿವೆಗಳು ತುಂಬು ವಷ್ಟಿದ್ದವು. ಆದರೆ ಒಂದು ಆಶ್ಚರ್ಯ. ನೆಲವಿನ ಮೇಲೆ ಎಳ್ಳು ಹಾಕಿಟ್ಟ ಗಡಿಗೆ ಬಹು ಚಿಕ್ಕದು. ಇದನ್ನು ಕಂಡ ಆ ಬಾಲಕರು ಸಿದ್ದನಲ್ಲಿ ಏನೋ ಮಂತ್ರವುಂಟೆಂದು ಕಂಡವರ ಮುಂದೆಲ್ಲ ಸಾರುತ್ತ ತಮ್ಮ ಮನೆಗೆ ತೆರಳಿದರು.

ಜನರು ಮಾತಾಡಿಕೊಳ್ಳುವುದನ್ನು ಕೇಳಿ ಚಕಿತಳಾದ ತಾಯಿ ಮನೆಗೆ ಬಂದು ಮಗನಿಗೆ ಅಂದಳು.

'ಜನರು ಮಾತಾಡಿಕೊಳ್ಳುತ್ತಿರುವ ಎಳ್ಳಿನ ಸುದ್ದಿ ಏನು? ಸಿದ್ಧಾ'

'ನನಗೇನೂ ಗೊತ್ತಿಲ್ಲಮ್ಮಾ' ನಗೆಮೊಗದಿಂದ ಸಿದ್ಧನೆಂದನು.

'ಆಶ್ಚರ್ಯವಾಗಿದೆ'

'ಏನೂ ಆಶ್ಚರ್ಯವಿಲ್ಲ. ತಾಯೀ, ನಿಜ ಹೇಳಲೇ ? ಇದೆಲ್ಲ ನೀನು ಮನಃಪೂರ್ವಕವಾಗಿ ಗುರುಸೇವೆ ಮಾಡಿದ ಫಲ'

'ಅಂದರೆ ?'

'ಅಂದರೆ ಇಷ್ಟು. ಎಳ್ಳು ಹಾಕಿದ ಪಾತ್ರೆ ಎಂದರೆ ಜ್ಞಾನಿಗಳ ದೇಹ. ಜ್ಞಾನೋಪದೇಶವೆನಿಸುವ ವಾಕ್ಯಗಳೆಲ್ಲ ಎಳ್ಳಾಗಿ ಇಲ್ಲಿ ತುಂಬಿಕೊಂಡಿವೆ. ಆ ಎಳ್ಳಿನ ರಾಸಿಯನ್ನು ಅಜ್ಞಾನ ತುಂಬಿದ ಯಾವ ಘಟ (ದೇಹ)ವೂ ಹಿಡಿಸ ಲಾರದು. ವಿಶಿಷ್ಟವಾದ ಘಟಗಳಲ್ಲಿ ಮಾತ್ರ ಅದು ತುಂಬಿ ನಿಲ್ಲುವುದು. ಅಲ್ಲವೇ ತಾಯೀ.

ಎಂದು ಸಿದ್ಧನ ವಾಗ್ಝರಿಯು ಹರಿಯಲು ಮಲ್ಲಮ್ಮನು ಮಗನು ಮಹಿಮಾ ಪುರುಷನೆಂದು ತಿಳಿದು ಸಗುಣರೂಪ ತಳೆದ ಶಿವನೇ ಎಂದು ಬಗೆ ದಳು. ಇದೆಲ್ಲ ಕ್ಷಣ ಮಾತ್ರವೇ. ಮರು ಕ್ಷಣದಲ್ಲಿ ಮೋಹವು ಆವರಿಸಲು ಮಗನನ್ನು ಬಿಗಿದಪ್ಪಿ ಮುದ್ದಾಡತೊಡಗಿದಳು. ತಾಯಿಯ ಅಪ್ಪುಗೆಯಿಂದ ಮೆಲ್ಲನೆ ನುಸುಳಿ ಸಿದ್ಧನು ಗೆಳೆಯರೊಡನೆ ಆಟಕ್ಕೆ ತೆರಳಿದನು. ಇಂಥ ಮಗ ನನ್ನು ಪಡೆದ ತಾಯಿ ಧನ್ಯಳೆಂದು ಮಲ್ಲಮ್ಮನು ಭಾವಿಸುತ್ತಿದ್ದಳು.

ತಾಯಿ ಮಲ್ಲಮ್ಮ ವೇದಾಂತ ಶ್ರವಣನಿಷ್ಠಳು. ಪರಮಾತ್ಮನು ನಿಜ ಸ್ವರೂಪದಲ್ಲಿ ನಿರ್ಗುಣನಾಗಿರುವಂತೆ ಭಕ್ತ ಕಾರ್ಯಕ್ಕಾಗಿ ಸಗುಣನೂ ಆಗ ಬಲ್ಲನೆಂದು ಅವಳು ಅರಿತಿದ್ದಳು. ವೇದಾಂತ ಜ್ಞಾನ ಮೈಗೂಡಲಿಕ್ಕೆ ಭಕ್ತಿಯು ಅವಶ್ಯವೆಂದು ಅವಳ ನಂಬಿಕೆಯಾಗಿತ್ತು. ಅದರಂತೆ ನಿತ್ಯದಲ್ಲಿ ಬಗೆಬಗೆಯಾಗಿ ಶಿವಾರಾಧನೆ ಮಾಡುತ್ತಿದ್ದಳು. ತನ್ನ ಮೂರನೆಯ ಮಗು ವಾದ ಸಿದ್ಧನ ಲೀಲೆಗಳನ್ನು ಕಣ್ಣಾರೆ ಕಂಡು ಯಾರೋ ಯೋಗಭ್ರಷ್ಟರು ಹಿಂದಿನ ಜನ್ಮದಲ್ಲಿ ಅಪೂರ್ವವಾದ ತಮ್ಮ ಸಾಧನೆಯನ್ನು ಪೂರ್ಣ ಮಾಡಿ ಕೊಳ್ಳಲು ತನ್ನ ಹೊಟ್ಟೆಯಿಂದ ಹುಟ್ಟಿ ಬಂದಿರುವರೆಂದು ಮೈದೋರಿರುವ ನೆನ್ನುವಳು. ಇಂಥ ವಿಚಾರಗಳೆಲ್ಲ ಕ್ಷಣಮಾತ್ರದವು. ಅದೇನು ಮಾಯೆಯೋ, ಮೋಹವೋ? ತಿಳಿಯದು. ನಾನು ತಾಯಿ, ಸಿದ್ಧ ನನ್ನಮಗ. ಅವನು ಬುದ್ಧಿವಂತನಾಗಬೇಕು ಸಾಂಸಾರಿಕನಾಗಬೇಕು ಎಂದೆಲ್ಲ ನೂರು ವಿಚಾರ. ನೂರು ಆಶೆ ಆ ತಾಯಿಗೆ. ಸಿದ್ಧನಿಗೆ ಹೇಳುವಳು 'ಸಿದ್ಧಾ ಓರಿಗೆಯ ಮಕ್ಕ ಳೆಲ್ಲ ಶಾಲೆಯಲ್ಲಿ ಓದಿ-ಬರೆದು ವಿದ್ಯೆಯಲ್ಲಿ ಮುಂದುವರೆಯುತ್ತಿದ್ದಾರೆ. ಅವ ರಂತೆ ನೀನೂ ಶಾಲೆ ಕಲಿಯಬೇಕು ಮಗನೇ.

ಸಿದ್ಧನ ಉತ್ತರ ಇದಕ್ಕೆ ಸಿದ್ಧ.

'ಅವ್ವಾ ವಿದ್ಯೆ ಎಂದರೇನು? ಎಂಬುದನ್ನು ಅರಿತವಳು ನೀನು. ಎಲ್ಲರಂತೆ ಶಾಲೆಗೆ ಹೋಗಬೇಕೆಂದು ನನಗೆ ಹೇಳಬಹುದೇ? ನನಗೂ ಕಲಿಯುವ ಆಶೆಯುಂಟು. ನಾನು ದಿನಾಲು ಶಾಲೆಗೆ ಹೋಗುತ್ತೇನೆ. ಆದರೆ ನೀನು ಹೇಳುತ್ತಿರುವ ಶಾಲೆ ಮಾತ್ರ ಅದಲ್ಲ. ಅಂತರ್ಬಾಹ್ಯ ಅಪರಂಪಾರ ಶಾಲೆ ನನ್ನದು. ಅಲ್ಲಿ ಕಲಿಸುವ ಅಕ್ಷರ ಒಂದೇ ಒಂದು ಅದು ಬೀಜಕ್ಷರ. ಅದರಿಂದ ಮುಂದೆ ವರ್ಣಮಾಲೆ ಎಲ್ಲ ಸಿದ್ಧವಾಗುತ್ತದೆ. ಧ್ಯಾನದಿಂದ ಮಾತ್ರ ಆ ಬೀಜಾಕ್ಷರದ ಅರ್ಥ ತಿಳಿಯುತ್ತದೆ. ಇಲ್ಲವಾದರೆ ಇಲ್ಲ ಆ ಅರ್ಥವೇನಂದರೆ ಅಂತಃಕರಣ ವೃತ್ತಿಗಳಲ್ಲೆಲ್ಲ ವ್ಯಾಪಿಸಿದ್ದ ಶಿವನನ್ನು ಜೀವ ಕಾಣುವುದು ಅವನೇ ಎಲ್ಲದರ ಆಶ್ರಯ. ಎಲ್ಲ ಕಡೆಗೆ ತುಂಬಿದವ. ಇಂಥ ಶಾಲೆಯಲ್ಲಿ ಆನಂದದಿಂದ ನಾನು ಬೀಜಾಕ್ಷರವೊಂದನ್ನು ಕಲಿಯುತ್ತಿರುವೆನಮ್ಮ. ನೀನು ಹೇಳುವ ಶಾಲೆಗೆ ಹೋದರೆ ಏನಾಗುವದು ಗೊತ್ತೇ? ಅಲ್ಲಿ ಜ್ಞಾನ ದೊರೆಯುವದಂತೂ ಸಾಧ್ಯವಿಲ್ಲ. ಆದರೆ ಅಜ್ಞಾನ ಮಾತ್ರ ಸಾಕಷ್ಟು ಬೆಳೆಯುತ್ತದೆ. ಇದು ಒಳಿತು. ಇದು ಕೆಡಕು. ಇದು ಶ್ರೇಷ್ಠ-ಕನಿಷ್ಠ. ಇದನ್ನು ಮಾಡಬೇಕು. ಇದನ್ನು ಮಾಡಬಾರದು. ಎಂದು ಮೊದಲಾಗಿ ನಮಗೆ ಕಲಿಸಿ ನಮ್ಮಲ್ಲಿ ರಾಗ-ದ್ವೇಷಗಳು ಮಾತ್ರ ಮೊಳೆದೋರುವಂತೆ ಕಲಿಸುವರು. ಇವೆಲ್ಲ ವಿಚಾರ ನಿಜವಾದ ವಿಚಾರಕ್ಕೆ ಘಾತಕವಾದವುಗಳು ಇಷ್ಟೆಲ್ಲ ತಿಳಿದೂ ನಾವು ಶಾಲೆಗೆ ಹೋಗಿ ಅವನ್ನೆಲ್ಲ ಕಲಿತು ಬಂದರೆ ಆ ತಪ್ಪು ತಿದ್ದಿಕೊಳ್ಳಲು ಜನ್ಮಾವಧಿ ಶ್ರಮ ಪಡಬೇಕಾಗುವುದು. ಅಲ್ಲವೇನಮ್ಮಾ.

ಇಂಥ ಮಾತುಗಳು ಮಗನ ಮುಖದಿಂದ ಹೊರಬಿದ್ದಾಗೊಮ್ಮೆ ಮಲ್ಲಮ್ಮನಿಗೆ ಮಗನ ಅದ್ಭುತವಾದ ಯೋಗ್ಯತೆ ಗೋಚರಿಸದಂತಾಗಬೇಕು. ಆಗ ಅವನು ತನ್ನ ದಾರಿಯಲ್ಲಿ ತಾನು ಸಾಗಲಿ ಯಾತಕ್ಕೆ ಭೂಮಿಗೆ ಬಂದ ಮಹಿಮನೋ ನನ್ನ ಬಲಾತ್ಕಾರ ಅವನಲ್ಲಿ ಬೇಡ ಎಂದು ಮನಸ್ಸಿಗೆ ಸಮಾಧಾನ ಮಾಡಿಕೊಂಡು ಮನೆ ವಾರ್ತೆಯಲ್ಲಿ ಮಗ್ನಳಾಗುವಳು.

ಅವರ ಮನೆಯಲ್ಲಿ ದೊಡ್ಡದೊಂದು ಎಮ್ಮೆ ಇದ್ದಿತು. ಸಿದ್ಧನು ತನಗೆ ತಿಳಿದಾಗೊಮ್ಮೆ ಮೈದೊಳೆಯುವುದು ಮೇಯಿಸುವುದು ಮುಂತಾದವನ್ನು ಮಾಡುವನು. ಒಂದು ದಿನ ಅದನ್ನೇರಿಕೊಂಡು ಎಡಬಲದ ಗೆಳೆಯರನ್ನು ಬನ್ನಿರೆಂದು ಕರೆಯುತ್ತ ಬೀದಿಯಲ್ಲಿ ಸಾಗಿದನು. ಕೌತುಕಪಟ್ಟು ಗೆಳೆಯ

ರೆಲ್ಲರು ಕುಳಿತರು. ಆಗ ಸಿದ್ಧನೆಂದನು.

'ಎಲವೋ, ನಾನು ಆನೆಯ ಮೇಲೆ ಕುಳಿತು ಹೊರಟಿದ್ದೇನೆ. ಈ ದಿನ ಊರಲ್ಲಿ ಉತ್ಸವ ಮಾಡೋಣ ನೀವೆಲ್ಲರೂ ನಿಮ್ಮ ಮನೆಯಲ್ಲಿ ದೊರೆಯುವ ವಾದ್ಯಗಳನ್ನು ತಂದು ಬಾರಿಸುತ್ತ ನಡೆಯಿರಿ. ಮೆರವಣಿಗೆಯಾದಂತಾಯಿತು.

ಇದನ್ನು ಕೇಳಿ ಬಾಲಕರಿಗೆಲ್ಲ ಬಹಳ ಸಂತೋಷವೆನಿಸಿ ಕುಣಿದಾಡಿದರು. ಕೈಗೆ ಸಿಕ್ಕ ವಾದ್ಯಗಳನ್ನು ತಂದು ಬಾರಿಸತೊಡಗಿದರು. ದೊಡ್ಡ ಧ್ವನಿಯಿಂದ ಕೇಕೇ ಹಾಕಲಾರಂಭಿಸಿದರು. ಆ ಸಪ್ಪಳ ಆ ಕೇಕೆಗೆ ಕಿವಿ ಮರ್‍ರೆಂನ್ನುವಂತಾಯಿತು. ಆದರೆ ಇವರ ಉಲ್ಲಾಸದಲ್ಲಿ ಸಹಭಾಗಿಯಾಗಿ ಎಮ್ಮೆ ನಡೆದುಕೊಂಡಿದ್ದರೆ ಮುಂದೇನಿತ್ತೋ ಯಾರು ಬಲ್ಲರು. ಏನು ಪ್ರಯತ್ನ ಮಾಡಿದರೂ ಸಿದ್ಧನು ಕುಳಿತುಕೊಂಡಿದ್ದ ಎಮ್ಮೆಯು ಹೆಜ್ಜೆ ಕಿತ್ತಿಡದಾಯಿತು. ಬಾಲಕರೆಲ್ಲ ಅದನ್ನು ದೂಡಿದರು, ಜಗ್ಗಿದರು ದೊಡ್ಡ ಧ್ವನಿಯಿಂದ ಅದರ ಬಳಿಯಲ್ಲಿ ನೆರೆದು ಚೀರಿದರು. ಆದರೆ ಎಮ್ಮೆ ಕಾಲು ಕಿತ್ತಲಿಲ್ಲ. ಅದನ್ನು ಕಂಡು ಸಿದ್ಧನು ಸಿಟ್ಟಾಗಿ 'ಎಲೆ, ಎಮ್ಮೆಯೇ ನೀನು ಸತ್ತು ಹೋಗು' ಎಂದು ಶಪಿಸಿ ಕೆಳಗಿಳಿದನು. ಕೂಡಲೆ ಎಮ್ಮೆಯು ದಡಾರನೆ ಭೂಮಿಗುರುಳಿ ಅಸು ದೊರೆಯಿತು. ಎಮ್ಮೆ ಈ ರೀತಿ ಒಮ್ಮೆಲೇ ಸತ್ತು ಹೋದುದನ್ನು ಕಂಡ ಬಾಲಕರು ಕುತೂಹಲಿಗಳಾಗಿ ಮಲ್ಲಮ್ಮನ ಬಳಿಗೆ ಬಂದು ನಡೆದ ವೃತ್ತಾಂತವನ್ನು ತಿಳಿಸಿದರು. ಸಿದ್ಧನ ಶಾಪದಿಂದ ಎಮ್ಮೆ ಸತ್ತು ಹೋಯಿತೆಂಬ ಸುದ್ದಿಯನ್ನು ಕೇಳಿ ಮಲ್ಲಮ್ಮನು ಬಹಳ ಕಳವಳಿಸಿ ದುಃಖದಿಂದ ಆ ಸ್ಥಳಕ್ಕೆ ಬಂದು ಸಿದ್ಧನಿಗೆ ನುಡಿದಳು. 'ಇದೇನು ನಿನ್ನ ಆಟ ಸಿದ್ಧಾ ಬಿಂದಿಗೆ ಹಾಲು ಕರೆವ ಎಮ್ಮೆಯನ್ನು ಕೊಂದುಬಿಟ್ಟೆಯಲ್ಲ. ಅದೇನು ಬೇಡಿತ್ತು ನಿನ್ನ ಪಾಲು ಇನ್ನೇನು ಗತಿ ಶಿವನೇ ಈಗೇನು ಮಾಡಲಿ?

ಎಂದು ಹಲಬುತ್ತ ದುಃಖಿಸತೊಡಗಿದಳು. ಇದೆಲ್ಲ ವಿಚಿತ್ರವನ್ನು ನೋಡಲು ಜನ ನೆರೆಯಲಾರಂಭಿಸಿತು. ಅಷ್ಟು ಜನರ ಸಮಕ್ಷಮದಲ್ಲಿ ತಾಯಿಯು ಅಳುತ್ತ ನಿಂತಿರುವದನ್ನು ನೋಡಿ ಸಿದ್ಧನಿಗೆ ಕನಿಕರವೆನಿಸಿತು. ಥಟ್ಟನೆ ತಾಯಿ ಬಳಿಗೆ ಬಂದು 'ಅವ್ವಾ, ಎಮ್ಮೆಯು ನಿನಗೆ ಬೇಕಾದರೆ ಈಗಲೇ ಎಬ್ಬಿಸುತ್ತೇನೆ. ಮೊದಲು ಅಳುವದನ್ನು ನಿಲ್ಲಿಸು. ನಾನು

ನೋಡಲಾರೆ. ಎಂದು ನುಡಿದು ಬಾಯಿಂದ "ನಮಃ ಶಿವಾಯ" ಎಂಬ ಪಂಚಕ್ಷರಿ ಮಂತ್ರವನ್ನು ಪಠಿಸಿ ಎಮ್ಮೆಯನ್ನು ಕೈಯಿಂದ ತುಸು ಮುಟ್ಟಲು ಅದು ಕಾಲೆಳೆದುಕೊಂಡು ಎದ್ದು ನಿಂತುಕೊಂಡಿತು. ಕಂಡ ಜನರೆಲ್ಲ ಬೆರಳು ಕಚ್ಚಿದರು. ಅಸಾಧ್ಯದ ಕಾರ್ಯವನ್ನು ಕಂಡು ಈ ಬಾಲಕನು ಯಾರೋ ಅವತಾರಿ ಪುರುಷನಿರಬೇಕು. ಹಾಗಿಲ್ಲದಿದ್ದರೆ ಯುಗಾಂತರದ ಮೃತ ಸಂಜೀವಿನೀ ವಿದ್ಯೆ ಕಲಿಯುಗದಲ್ಲಿ ಸಾಧ್ಯ? ಎಂದು ಮಾತಾಡಿಕೊಳ್ಳತೊಡಗಿದರು. ಕೆಲವರು ಸಿದ್ಧನ ಸಮೀಪಕ್ಕೆ ಬಂದು ಕೇಳಿದರು. 'ಇದೇನು? ಸಿದ್ಧಾ.'

"ಅಣ್ಣಗಳಿರಾ, ಅಹಂಕಾರ ತುಂಬಿಕೊಂಡ ಈ ಎಮ್ಮೆಯ ಮೇಲೆ ಬಲಿಷ್ಠಾತ್ಮನೊಬ್ಬನು ಏರಿ ಕುಳಿತನು. ಹಾಗೆ ಕುಳಿತುಕೊಂಡ ಉದ್ದೇಶವಿಷ್ಟೇ. ಇದರ ತಮೋ ಗುಣವನ್ನು ಪೂರ್ಣವಾಗಿ ನಾಶಗೊಳಿಸಬೇಕು ಎಂಬುದು. ಆದರೆ ಎಮ್ಮೆ ಕದಲದಂತಾಯಿತು. ಬ್ರಹ್ಮ ಪಥದಲ್ಲಿ ನಡೆಯದಾಯಿತು. ಇದನ್ನು ಕಂಡು ಆತ್ಮನು ಅಹಂಕಾರವು ಅಳಿದು ಹೋಗಲೆಂದು ಸಂಕಲ್ಪ ಮಾಡಿದನು. ಆಗ ಅವಿದ್ಯಾ ಸ್ವರೂಪಿಣಿ ಓಡುತ್ತ ಬಂದು ಹಲುಬಿದಳು. ಅಯ್ಯೋ ಬಹುಕಾಲದ ವರೆಗೆ ನಾನು ಅಹಂಕಾರವನ್ನು ಪೋಷಿಸಿದ್ದೇನೆ. ಇದನ್ನು ಬಿಟ್ಟಿರುವುದು ನನ್ನಿಂದ ಆಗದು. ದಯಮಾಡಿ ಈ ಅಹಂಕಾರವನ್ನು ಬದುಕಿಸು, ಎಂದು ಅಳುತ್ತ ಆತ್ಮನನ್ನು ಬೇಡಿಕೊಂಡಳು. ಈ ದೈನ್ಯೋಕ್ತಿಗಳನ್ನು ಕೇಳಿ ಆತ್ಮನು ಅಹಂಕಾರವನ್ನು ಬದುಕಿಸಿದನು. ಈ ಅದು ಭಕ್ತಿನಮ್ರವಾಗಿ ಶಾಂತಭಾವದಿಂದ ನಡೆಯತೊಡಗಿತು.

ಗೂಢಾರ್ಥ ತುಂಬಿದ ಸಿದ್ಧನ ಮಾತು ಕೇಳಿ ಜನರು ಮೂಕ ವಿಸ್ಮಿತರಾದರು. ಮೊನ್ನೆ ಮೊನ್ನಿನ ಕೂಸು. ಎಂಥ ಸಾಮರ್ಥ್ಯ, ಏನು ಭಕ್ತಿ ಎಂದುಕೊಳ್ಳುತ್ತ ಮನೆಗೆ ತೆರಳಿದರು. ನಮ್ಮನ್ನು ನಾನಾ ಬಗೆಯಿಂದ ಪರೀಕ್ಷಿಸಿ, ಅನೇಕ ನಿದರ್ಶನಗಳನ್ನು ತೋರಿಸಿ ಉದ್ಧಾರ ಮಾಡಲು ಬಂದ ಶಿವನೇ ನಮ್ಮ ಸಿದ್ಧ. ಎನ್ನುತ್ತ ತಾಯಿ ಹೃದಯ ತುಂಬಿದಳು.

ಮತ್ತೊಂದು ದಿನ ಸಿದ್ಧನು ತನ್ನ ಗೆಳೆಯರನ್ನೆಲ್ಲ ಕರೆದುಕೊಂಡು ಒಂದು ಭಾವಿಗೆ ಸ್ನಾನಕ್ಕೆ ಬಂದನು. ದಡಬಡ ಎಲ್ಲರೂ ನೀರಿಗಿಳಿದರು. ಅವರಲ್ಲೊಬ್ಬನು ಮಾತ್ರ ನೀರಿಗಂಜಿ ಸುಮ್ಮನೇ ನಿಂತುಕೊಂಡಿರಲು ಸಿದ್ಧನಿಗೆ

ಆವನ ಪುಕ್ಕತನ ಸರಿಬರಲಿಲ್ಲ. ಕೈಹಿಡಿದು ಜಗ್ಗಿ ನೀರಿನಲ್ಲೆಳೆಯುತ್ತ ಆಳ ಕ್ಕೊಯ್ಯತೊಡಗಿದನು. ಆ ಪುಕ್ಕನು ಭಯದಿಂದ ಚೀರತೊಡಗಲು ಅವ ನನ್ನು ಬಿಟ್ಟು ಬಿಡುವಂತೆ ಇತರರು ಸಿದ್ಧನಿಗಂದರು. ಆದರೂ ಸಿದ್ಧ ಕೇಳದಿ ರಲು ಎಲ್ಲರೂ ಅವನನ್ನು ತಡೆಯಬೇಕೆಂದರು. ಸಿದ್ಧ ಅವರ ಕೈಗೆ ಸಿಲುಕದೆ ಆ ಅಂಜುಗುಳಿಯಾದ ಬಾಲಕನನ್ನು ನಡುನೀರಿಗೊಯ್ದು ಮುಳುಗಿಸಿ ಹಾಯಾಗಿ ತಾನು ದಂಡೆಗೆ ಬಂದು ಕುಳಿತನು. ಆ ಬಾಲಕ ಸತ್ತು ಹೋದ ನೆಂದೇ ಎಲ್ಲರ ಭಾವನೆಯಾಗಿ ಸಿದ್ಧಾ, ನೀನೇ, ನೀನೇ ಆ ಹುಡುಗನನ್ನು ಕೊಂದುಬಿಟ್ಟೆ ಎಂದು ಅಪವಾದವನ್ನು ಸಿದ್ಧನ ತಲೆಗೆ ಕಟ್ಟಿದರು. ಅಪವಾದ ಕ್ಕಂಜದೇ ಆವನು ಸಮಾಧಾನದಿಂದ ನುಡಿದನು.

'ಏನೇ ಆಗಲಿ. ಒಮ್ಮೆ ಆವನ ಭಯ ನಿವಾರಣೆಯಾದಂತಾಯಿತಲ್ಲ. ಮರಣಕ್ಕಿಂತ ಹೆಚ್ಚಿನ ಭಯ ಇನ್ನಾವುದಿದೆ? ಅವನು ದುಃಖ-ಭಯಗಳನ್ನು ನೀಗಿದನೆನ್ನುವುದು ಬಿಟ್ಟು ಸತ್ತನೆಂದು ಹೇಳುತ್ತಿರುವಿರಲ್ಲ.'

ಸಿದ್ಧನ ಈ ಮಾತಿನಿಂದ ಆವರಲ್ಲಿ ಒಬ್ಬರಿಗೂ ಸಮಾಧಾನವೆನಿಸಲಿಲ್ಲ. ತಿರುಗಿ ಅವರೆಲ್ಲರಿಗೆ ಭಯವೇ ಬಂದಿತೆನ್ನಬಹುದು. ಕೆಲವರು ಓಡುತ್ತ ಹೋಗಿ ಆ ಹುಡುಗನ ತಾಯಿಗೆ ಈ ವಾರ್ತೆಯನ್ನು ಕೂಡ ತಲುಪಿಸಿಬಿಟ್ಟರು. ಆವಳಿಗೆ ಅವನೊಬ್ಬನೇ ಮಗ. ಅಳುತ್ತ ಕರೆಯುತ್ತ ಬಿದ್ದೇನೆಂಬ ಪರಿವೆ ಇಲ್ಲದೇ ಭಾವಿಯ ದಡಕ್ಕೆ ಬಂದು ಸಿದ್ಧನಿಗೆ ಅಂದಳು.

'ಇದನ್ನೇನು ಘಾತ ಮಾಡಿದೆ. ಎಂಥ ದುಷ್ಟನೋ ನೀನು ಸಿದ್ಧಾ'

'ನನ್ನ ದುಷ್ಟತನ ಇದರಲ್ಲೇನೂ ಇಲ್ಲಮ್ಮಾ. ನಿಮ್ಮ ಮಗನು ಜಲ ರೂಪೀ ಪರಮಾತ್ಮನ ಬಳಿಯಲ್ಲಿ ನಿಶ್ಚಿಂತೆಯಿಂದ ಕುಳಿತು ನಿರ್ಭಯನಾಗಿ ದ್ದಾನೆ.'

'ಅಯ್ಯೋ ದುಷ್ಟಾ, ನನ್ನ ಮಗನನ್ನು ನೀರಿನಲ್ಲಿ ಮುಳುಗಿಸಿ ವೇದಾಂತ ಬೇರೆ ಹೇಳುವಿಯಾ? ಸಾಕು ಸಾಕು ನನ್ನ ರತ್ನವನ್ನು ನನಗೆ ತಂದುಕೊಡು.'

ಎಂದು ನುಡಿದು ಆವಳು ದೊಡ್ಡ ಧ್ವನಿ ತೆಗೆದು ಅಳತೊಡಗಿದಳು. ಚೀರುತ್ತ ತಲೆ ಅಪ್ಪಳಿಸಿ ರಾದ್ಧಾಂತವನ್ನೇ ಎಬ್ಬಿಸಿದಳು. ಆಗ ಸಿದ್ಧನು ಆವಳಿಗೆ ಹೇಳಿದನು.

'ಅಮ್ಮಾ, ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವಿಲ್ಲವೇ? ಆನಂದಸಾಗರದಲ್ಲಿ ನಿನ್ನ ಮಗ ಜೀವಂತವಾಗಿ ಸುಖವಾಗಿದ್ದಾನೆ. ಬೇಕಾದರೆ ಅವನನ್ನು ಕೂಗಿ ನೋಡು. ಈಗಲೇ ಎದ್ದು ಬರುತ್ತಾನೆ.

ಆ ತಾಯಿ ಆತುರದಿಂದ 'ದೇವದತ್ತಾ, ನಿನ್ನನ್ನು ಕಾಣದೇ ನನಗೆ ಬಹಳ ದುಃಖವಾಗಿದೆ. ಬೇಗನೇ ಬಾ ಮಗನೇ' ಎಂದು ಕೂಗುವುದೇ ತಡ. ದೇವದತ್ತನು ಲಗುಬಗೆಯಿಂದ ನೀರಮೇಲೆ ಬಂದು ಈಸುತ್ತ ತಾಯಿಯ ಬಳಿಗೆ ಬಂದನು.

'ಇಷ್ಟು ಹೊತ್ತು ಎಲ್ಲಿದ್ದೆ? ಮಗು!

'ತಾಯೀ ಹೇಳಲಿಕ್ಕೆ ಬಾರದ ಒಂದು ಆನಂದ ಸಾಗರದಲ್ಲಿ ನಾನು ಮುಳುಗಿದ್ದೆ. ನಿನ್ನ ಧ್ವನಿ ಕೇಳಿ ಅದನ್ನು ಬಿಟ್ಟು ಬರಲಾಗದೇ ಬಂದೆ. ನೋಡು ನೋಡು. ದುಃಖರೂಪವಾದ ಜಗತ್ತಿನ ಮೋಹಜಾಲವು ನನ್ನನ್ನು ಆವರಿಸಲಾರಂಭಿಸಿತು.

'ಯಾವುದೂ ನನಗೆ ತಿಳಿಯದು. ನೀನು ಸತ್ತ ಎಂಬ ಸುದ್ದಿ ಕೇಳಿ ನನಗೆ ಬಹಳ ದುಃಖವಾಯಿತು. ಬಂದು ಕೂಗಿದೆ. ನೀನು ಬದುಕಿ ಬಂದುದರಿಂದ ನಾನು ಧನ್ಯಳಾದೆನು. ನಿಜವಾಗಿಯೂ ನೀನು ಸತ್ತು ಹೋಗಿದ್ದರೆ ಈ ಹೊತ್ತಿನವರೆಗೆ ನಾನು ಉಳಿಯುತ್ತಿರಲಿಲ್ಲ.

ಎಂದು ನುಡಿದು ಮಗನ ಮೈಯೊರಿಸಿ ಮುಂಗುರುಳುನೇವರಿಸಿ ಆನಂದ ಬಾಷ್ಪಗಳನ್ನುದುರಿಸುತ್ತ ನಿಂತಿರಲು ಸಿದ್ಧನು ಹೇಳಿದನು.

'ಲೋಕದ ಸಜ್ಜನರೇ ಕೇಳಿ. ಕೇಳಿ. ಘಟನೆಯ ರಹಸ್ಯಾರ್ಥವಿದು. ಈ ಬಾಲಕನೆಂದರೆ ಜೀವನ ಅಜ್ಞಾನ. ಅದು ಸ್ವರೂಪ ಜ್ಞಾನವಾಗದೇ ಹೋಗಲಾರದು. ಅದೊಂದು ಜೀವನಿಗೆ ಉಪಾಧಿ ಎನಿಸಿದೆ. ಜ್ಞಾನದಿಂದ ಈ ಉಪಾಧಿಯನ್ನು ಕಳೆದುಕೊಂಡು ಆನಂದ ಸಾಗರದಲ್ಲಿ ಮುಳುಗುವುದೆಂದರೆ ತನ್ನನ್ನು ತಾನು ಅರಿತಂತೆ. ಈ ರೀತಿ ಮುಳುಗಿ ಪ್ರಶಾಂತವಾದ ಆನಂದಾನುಭವ ಪಡೆಯಲು ಅಂಜಿಕೊಂಡರೆ ಹೇಗೆ? ದಯಾವಂತನಾದ ಸದ್ಗುರುವಿಗೆ ಇಂಥ ಜೀವರ ನಡತೆ ಸರಿಬಾರದು. ಅವನು ಬಲವಂತವಾಗಿಯಾದರೂ ತನಗೆ ಬೇಕಾದ ಜೀವರನ್ನು ಬ್ರಹ್ಮಾನಂದಕ್ಕಿಳಿಸಿ ದೇಹಾಭಿಮಾನಾದಿಗಳನ್ನು ಬಿಡಿಸುತ್ತಾನೆ.

ಸಿದ್ಧ ನಾಡಿದ ಈ ನುಡಿಗಳನ್ನು ಕೇಳಿದ ಜನ ‘ಇವನು ಸಾಕ್ಷಾತ್ ಶಿವಾವತಾರನೇ ಸರಿ. ಇಲ್ಲವಾದರೆ ಇಂಥ ಜ್ಞಾನ ಬರಬೇಕೆಲ್ಲಿಂದ? ಎಂದು ಮಾತಾಡಿಕೊಳ್ಳುತ್ತ ಕೆಲವರು ಸಿದ್ಧನಿಗೆ ವಂದಿಸಲು ಮುಂದಾಗಲು ಅವನು ನಿಲ್ಲದೇ ನಗುತ್ತ ಮನೆಯ ಕಡೆಗೆ ಓಡಿ ಹೋದನು. ಈ ಘಟನೆ ಜರುಗಿ ಕೆಲ ದಿನಗಳಾಗಿರಲು ಇನ್ನೊಂದು ದಿನ ಸಿದ್ಧನು ತನ್ನ ಗೆಳೆಯರನ್ನು ಕೂಡಿಕೊಂಡು ತಿರುಗುತ್ತ ಒಂದು ತೋಟಕ್ಕೆ ಬಂದರು. ಅಲ್ಲಿ ನೀರಲ ಗಿಡಗಳು ಬಹಳವಾಗಿದ್ದವು. ಆಗ ಅವುಗಳಲ್ಲಿರುವ ಹಣ್ಣುಗಳನ್ನು ಕಂಡು ಬಾಲಕರೂ ಬಾಯ್ ನೀರು ಸುರಿಸಿ ಹಣ್ಣು ಹರಿಯಬೇಕೆಂದು ಅತ್ತಿತ್ತ ಓಡಿದರು. ಕದಲದೇ ಸಿದ್ಧನು ಒಂದು ಕಡೆಗೆ ನಿಂತು ಮನದಲ್ಲಿ ವಿಚಾರ ಮಾಡತೊಡಗಿದನು. ‘ಆಹಾ, ಏನು ಮಾಡಲಿ? ಇವರೆಲ್ಲ ಮಾಯೆಯಿಂದ ಮೋಹಿತರಾಗಿ ವಿಷಯಗಳ ಕಡೆಗೆ ಇದೇ ರೀತಿ ಧುಮುಕುವರು. ವಿಷಯಗಳ ಮೋಹವಾದರೂ ಎಂಥ ಬಲವಾದುದು. ನಾನಿಲ್ಲಿ ಕಲ್ಲು ಕಂಬದಂತೆ ನಿಂತಿದ್ದರೂ ಮರೆತು ಅತ್ತ ಮನ ಹರಿಬಿಟ್ಟದ್ದಾರೆ. ಇದೇನು ಉಪಯೋಗವಲ್ಲ. ನನ್ನ ಕಡೆಗೆ ಅವರನ್ನೆಲ್ಲ ಆಕರ್ಷಿಸಬೇಕು. ಅವರು ಇತ್ತ ಬಂದ ಮೇಲೆ ನಾಲ್ಕು ವಿವೇಕದ ಮಾತು ಹೇಳೋಣ. ಎಂದುಕೊಂಡು ಸಿದ್ಧನು ಒಂದು ನೀರಲ ಹಣ್ಣು ತೆಗೆದುಕೊಂಡು ನೆಲದ ಮೇಲಿಟ್ಟು ಸಂಕಲ್ಪ ಮಾತ್ರದಿಂದ ಹಣ್ಣಿನದೊಂದು ರಾಶಿಯನ್ನೇ ರಚಿಸಿದನು. ಇಲ್ಲಿಯ ಹಣ್ಣಿನ ರಾಶಿಯನ್ನು ಕಂಡ ಬಾಲಕರು ಓಡುತ್ತ ಅಲ್ಲಿಗೆ ಬಂದು ಆತುರದಿಂದ ಕೇಳಿದರು.

‘ಸಿದ್ಧಾ, ಇಂಥ ಹಣ್ಣಿನ ರಾಶಿ ಹೇಗೆ ಬಂದಿತು?

ಹೀಗೆ ಅವರೆಲ್ಲ ಸಿದ್ಧನನ್ನು ಕೇಳಿದ್ದು ಆ ಹಣ್ಣಿನ ರಾಶಿಯನ್ನು ಕಂಡು ಮನಸ್ಸಿಗಾದ ಸಂತೋಷದಿಂದ ಮಾತ್ರ ತಮ್ಮ ಪ್ರಶ್ನೆಗೆ ಉತ್ತರವನ್ನೇನೂ ಅವರು ಅಪೇಕ್ಷಿಸಿದವರಲ್ಲ. ನಾಮುಂದೆ-ನಾಮುಂದೆ ಎನ್ನುತ್ತ ಆತುರತೆ ಹಣ್ಣೆಲ್ಲ ಬಳಿದುಕೊಂಡು ತಿನ್ನಲಾರಂಭಿಸಿದರು. ಅದರಲ್ಲಿಯೇ ಕೆಲವು ಮನೆಗೊಯ್ಯಲು ಕಟ್ಟಿಕೊಂಡರು. ಇಷ್ಟೆಲ್ಲ ಎದುರಿಗೆ ನಡೆದರೂ ಸಿದ್ಧನು ಇದುವರೆಗೆ ಮಿಸುಕಿರಲಿಲ್ಲ. ಅವರದೆ ಎಲ್ಲ ತಿನ್ನುವುದಾದ ಮೇಲೆ ಗೆಳೆಯರೇ, ಹಣ್ಣು ತಿಂದು ಹೊಟ್ಟೆ ತುಂಬಿತಷ್ಟೇ ಬಹುಶಃ ಹಣ್ಣುಗಳು ರುಚಿಯಾಗಿರಬೇಕು. ಈ ಹಣ್ಣು ತೆಗೆದುಕೊಳ್ಳಲು ನಿಮಗೆ ಬೇಡವೆನ್ನುವವರು ಇಲ್ಲಿ

ಯಾರೂ ಇರಲಿಲ್ಲ. ಹೀಗಿರಲು ತೆಗೆದುಕೊಳ್ಳುವಾಗ ಕಚ್ಚಾಟ ಮಾಡಿದಿರೇಕೆ? ಹೋಗಲಿ ನಮ್ಮ ಸಲುವಾಗಿ ಇಷ್ಟು ರುಚಿಕರ ಹಣ್ಣುಗಳನ್ನು ನಮಗೆ ಕೊಟ್ಟವರು ಯಾರು? ಎಂಬುದನ್ನೇನಾದರೂ ವಿಚಾರ ಮಾಡಿದ್ದೀರಾ?

'ಮತ್ತಾರು ಕೊಡುತ್ತಾರೆ ದೇವರು'

'ಅಂಥ ದಯಾಘನನನ್ನು ಕಾಣಿಸಬೇಕೆನಿಸುವದಿಲ್ಲವೇ?'

'ಅನಿಸಿದರೂ ಉಪಯೋಗವೇನು? ಅವನು ಕಾಣುವನೆಲ್ಲಿ? ಕಂಡರೂ ಇವನು ದೇವರು ಎಂದು ಗುರುತಿಸುವ ಕಣ್ಣು ನಮಗಿಲ್ಲ. ನಾವು ಹೇಳಿ ಕೇಳಿ ಮೂರ್ಖರು.

'ಆದುದರಿಂದಲೇ ಸಿಕ್ಕಾವೋ, ಸಿಗಲಿಕ್ಕಿಲ್ಲವೋ ಎನ್ನುವಂತೆ ಕಚ್ಚಾಟ ಮಾಡುತ್ತ ಹಣ್ಣೆಲ್ಲ ತುಂಬಿಕೊಂಡಿರಿ. ಅಲ್ಲವೇ? ನೋಡಿರಿ ಹುಳು-ಹುಪ್ಪಡಿ-ಹಕ್ಕಿ ಅಥವಾ ಯಾರಾದರೂ ಒಬ್ಬ ದಾರಿಕಾರರು ಆಕಸ್ಮಾತ್ ಇಲ್ಲಿ ಬಂದರೆ ಒಂದಾದರೂ ಹಣ್ಣು ಉಳಿದಿರುವುದೇ ಇಲ್ಲ?

'ನಮ್ಮದು ತಪ್ಪಾಯಿತು ಸಿದ್ಧಾ. ಕಟ್ಟಿಕೊಂಡ ಇವೆಲ್ಲ ಹಣ್ಣುಗಳನ್ನು ಇಲ್ಲಿ ಹಾಕಿ ಬಿಡುತ್ತೇವೆ ಬೇಕಾದರೆ'

ಹಾಗೆ ಮಾಡುವುದೇನೂ ಬೇಡ. ನಿಮ್ಮಂತೆಯೇ ಆಸೆಯುಳ್ಳವರು ಯಾರಾದರೂ ಬಂದು ಕೊಂಡೊಯ್ಯುತ್ತಾರೆ. ಹಣ್ಣು-ಹೂಗಳನ್ನು ಕಂಡು ಮೋಹಿಸದ ಅಣ್ಣಗಳಾರು? ಕಣ್ಣಿಗೆ ಬೀಳುವುದೇ ತಡ. ಮನಸ್ಸು ಆಕರ್ಷಿತವಾಯಿತೇ. ಹಾಗೆಂದು ಕಣ್ಣು ಕಟ್ಟಿಕೊಂಡೇನೂ ತಿರುಗುವದು ಬೇಕಿಲ್ಲ. ಮನದಲ್ಲಿ ಮೋಹ, ದೇಹದ ಮೇಲೆ ಅಭಿಮಾನ ಇರುವವರೆಗೆ ಕಣ್ಣು-ಕಿವಿ-ನಾಲಿಗೆ ಮುಂತಾದವು ವಿಷಯಗಳ ಕಡೆಗೆ ಹರಿಯತಕ್ಕವುಗಳು. ಆದುದರಿಂದ ಅವುಗಳ ನಾಶಕ್ಕೆ ಮೊದಲು ಯತ್ನಿಸಬೇಕು. ಜ್ಞಾನಪೂರ್ವಕವಾಗಿ ಈಶ್ವರನನ್ನು ಧ್ಯಾನಿಸಬೇಕು. ದೇಹಾಭಿಮಾನ ನಾಶಕ್ಕೆ ವ್ರತೋಪವಾಸ ಮಾಡಬೇಕು. ಇವುಗಳ ಹೊರತು ಬೇರೊಂದು ಉಪಾಯವು ಈಶ್ವರನ ಧ್ಯಾನದಿಂದ ಬ್ರಹ್ಮಾನಂದವು ದೊರೆಯುವುದು. ಮತ್ತು ಜಗತ್ತು ಸುಳ್ಳಾದುದೆಂದು ತೋರುವದು. ಮಾಯಾ-ಮೋಹಗಳು ಅಳಿಯುವವು. ಕಾರಣ ಆನೆ ಕಳೆದುಕೊಂಡು ಬಾಲಕ್ಕೆ ಬಡಿದಾಡಿದವರಂತೆ ಮಹಾ ಲಾಭವೆನಿಸಿವ

ಬ್ರಹ್ಮಾನಂದವನ್ನು ಪಡೆಯುವುದು ಬಿಟ್ಟು ಅಲ್ಪವೆನಿಸುವ ವಿಷಯಾನಂದ ಕ್ಕಾಗಿ ಮಾಡುವುದು ಯೋಗ್ಯವಲ್ಲ. ಇನ್ನು ನಡೆಯಿರಿ.

ಹೀಗೆ ಅವರಿಗೆ ವಿವೇಕವನ್ನು ಹೇಳಿ ಸಿದ್ಧನು ಗೆಳೆಯರನ್ನು ಕೂಡಿ ಕೊಂಡು ಮನೆಯ ಕಡೆಗೆ ಸಾಗಿದನು. ಸಿದ್ಧ ಮುಂದೆ ನಡೆದಿದ್ದ. ಅವರೆಲ್ಲ ಬೆನ್ನು ಹತ್ತಿದರು. ಹೀಗೆ ಬರುತ್ತಿರಲು ದಾರಿಯಲ್ಲೊಂದು ಸರ್ಪವಿರುವುದನ್ನು ಕಂಡವರೇ ದೂರ ದೂರ ಓಡಿ ಹೋಗಿಬಿಟ್ಟರು. ಸಿದ್ಧನು ಆ ಸರ್ಪದ ಬಳಿ ಯಲ್ಲಿಯೇ ನಿಂತು ಎಲ್ಲರನ್ನು ಇದು ಸತ್ತ ಹಾವು. ಏನೂ ಹೆದರಿಕೆ ಇಲ್ಲ ಬನ್ನಿ ಎಂದು ಬೇಕಾದಷ್ಟು ಕೂಗಿದರೂ ಒಬ್ಬರೂ ಬರಲಿಲ್ಲ. ಅವರಿಗೆ ವಿಶ್ವಾಸ ಹುಟ್ಟುವಂತೆ ಮಾಡಲು ಸಿದ್ಧ ಅದನ್ನು ಕೈಯಲ್ಲಿ ಹಿಡಿದು ತೋರಿಸಬೇಕಾ ಯಿತು. ಮೆಲ್ಲನೆ ಎಲ್ಲರೂ ಅಲ್ಲಿ ಬಂದು ಕೌತುಕಪಟ್ಟರು. ಸಿದ್ಧ ನುಡಿದನು. 'ಜನದ ರೀತಿಯೇ ಹೀಗೆ. ಭಯಂಕರವೇನಾದರೂ ಕಂಡರಾಯಿತು ಹೆದರಿದರೆ. ಅದರ ನಿಜ ಸ್ಥಿತಿ ಏನು? ಎಂಬ ವಿಚಾರ ಮಾಡುವ ಗೋಜಿಗೆ ಒಬ್ಬರೂ ಹೋಗುವುದಿಲ್ಲ. ಇಲ್ಲಿಯೇ ಗುರೂಪದೇಶಬೇಕೆಂದು ಹೇಳುವುದು. ಅದ ರಿಂದ ಒಳಗಣ್ಣು ತೆರೆಯುವವು. ಆಗ ಮಾಯಾಮಯ ಜಗತ್ತಿನ ತೋರಿಕೆ ಅಡಗಿ ಅದರ ನಿಜ ರೂಪ ತೋರುವುದು. ಹೀಗೆ ನಿಜರೂಪವು ತೋರಲು ತನ್ನೊಳಗಿನ ವಸ್ತುವೇ ಅಲ್ಲಿರುವುದೆಂದು ನಂಬಿಗೆಯುಂಟಾಗಿ ಎಲ್ಲ ಕಡೆಗೆ ತಾನೇ ತಾನಾಗುವನು. ಆಗ ಭಯವೆಲ್ಲಿ?'

ತಿಳಿಯಲಿ, ತಿಳಿಯದಿರಲಿ. ಗೆಳೆಯರೆಲ್ಲ ಸಿದ್ಧನ ಮಾತಿನ ಮೋಡಿಗೆ ತಲೆದೂಗುತ್ತ ಆನಂದದಿಂದ ಮನೆಕಂಡರು.

———

೩

ತನ್ನನ್ನು ಬಿಟ್ಟು ದೇವರಿಲ್ಲ. ಮಣ್ಣು ಬಿಟ್ಟು ಮಡಿಕೆ ಇಲ್ಲ.

—ಜನಶ್ರುತಿ

ಸಿದ್ಧನ ಮನೆಯಲ್ಲಿ ಪ್ರತಿದಿನ ವೀರಭದ್ರ ಸ್ವಾಮಿಗಳು ವೇದಾಂತವನ್ನು ಹೇಳುತ್ತಿದ್ದರಷ್ಟೇ. ಆಗ ಸಿದ್ಧನು ರೂಢಿಯಂತೆ ತಾಯಿಯ ಬಳಿಯಲ್ಲಿ ಕುಳಿತು ಆದರಪೂರ್ವಕವಾಗಿ ಕೇಳುವನು.

ಒಂದು ದಿನ ಶ್ರವಣ ಸಾಗಿದಾಗ ಶ್ರೋತೃಗಳಿಗೆ ವೈರಾಗ್ಯವನ್ನು ಬಿಂಬಿಸುವುದಕ್ಕೆ ಸ್ವಾಮಿಗಳು ಹೇಳಿದರು.

'ಪ್ರಳಯ ಕಾಲದಲ್ಲಿ ಈ ಪೃಥ್ವಿಯು ಪ್ರಳಯ ಜಲದಲ್ಲಿ ಕರಗಿ ಹೋಗುವುದು. ಪೃಥ್ವಿಗಾಧಾರವಾದ ಮೇರು ಮೊದಲಾದ ಸಪ್ತ ಕುಲಪರ್ವತಗಳು ಕೂಡ ಆಗ ಉಳಿಯಲಾರವು. ಸ್ವರ್ಗವೇ ಮೊದಲಾದ ಲೋಕಗಳು ಇಲ್ಲದಂತಾಗುವವು. ಹೀಗಿರುವಾಗ ಮನುಷ್ಯನ ಮಾತೇನು? ದೇಹವೇ ನಾನೆಂದು ಭಾವಿಸಿ, ಭೂಮಿಯ ಭೋಗ ಪದಾರ್ಥಗಳೆಲ್ಲ ನಿಜವಾದವುಗಳೆಂದು ಭಾವಿಸಿ ಇಲ್ಲಿ ಬಹುಕಾಲದವರೆಗೆ ಇದ್ದು ಸುಖೋಪಭೋಗ ಪಡೆಯುವೆನು. ಎನ್ನುತ್ತಿರುವ ಭ್ರಾಂತ ಚಿತ್ತರಿಗೆ ಏನೆನ್ನಬೇಕೋ ತಿಳಿಯದು'

ಈ ಮಾತು ಕಿವಿಗೆ ಬೀಳುವುದೇ ತಡ. ತಟ್ಟನೆ ಸಿದ್ಧನು ಪ್ರಶ್ನೆ ಕೇಳಿದನು.

'ಸ್ವಾಮಿಗಳೇ ಆಕಾಶವು ಹೇಗೆ ಪ್ರಳಯ ಹೊಂದುತ್ತದೆ?'

ಚಕಿತರಾದ ಸ್ವಾಮಿಗಳು ನಸುನಕ್ಕು ಉತ್ತರ ಕೊಟ್ಟರು.

'ಮಗು ಈ ಮಾತನ್ನು ಅನುಭವಿಯಾದ ಗುರುವಿಗೆ ಕೇಳಿದರೆ ಉತ್ತರ ದೊರೆಯುವುದು' ಎಂದು ನುಡಿದು ಅಂದಿನ ಶ್ರವಣ ಮಂಗಳ ಮಾಡಿದರು.

ಕುಲಗುರುವಿನ ಮಾತು ಸಿದ್ಧನ ಮನದಲ್ಲಿ ಮಾರ್ನುಡಿಯುತ್ತಿತ್ತು. ಒಳ್ಳೇದು ಬ್ರಹ್ಮಜ್ಞನಾದ ಗುರುವನ್ನು ಹುಡುಕಿಕೊಳ್ಳದೇ ನಾನು ಇರಲಾರೆ. ಎಂದು ಮನದಲ್ಲಿ ನಿರ್ಧರಿಸಿಕೊಂಡು ಮಲಗಿದನು.

ಮರುದಿನ ಬೆಳಗು ಮುಂಜಾವ ಮೇಲಕ್ಕೆದ್ದ. ಸದ್ಗುರು ಶೋಧದ ಹಂಬಲ ಪರಾಕಾಷ್ಠೆ ಮುಟ್ಟಿತ್ತು. ಎಲ್ಲರಿಗೂ ವಂದಿಸಿ ಯಾರಿಗೂ ಹೇಳದೇ ಮನೆಬಿಟ್ಟನು. ದಾರಿಯಲ್ಲಿ ಯೋಗಾಯೋಗವೇನೋ ಎಂಬಂತೆ ಸೋಮ ಮತ್ತು ಭೀಮರೆಂಬ ಗೆಳೆಯರು ಕೂಡಿ ಪ್ರಶ್ನೆ ಮಾಡಿದರು.

'ಎಲ್ಲಿಗೆ ಹೊರಟೆ? ಸಿದ್ಧಾ'

'ನಮ್ಮ ಸ್ವಾಮಿಗಳು ನಿನ್ನೆ ಪ್ರವಚನದಲ್ಲಿ ಹೇಳಿದರು. ಎಲ್ಲ ಪ್ರಪಂಚವು ನಿಶ್ಶೇಷವಾಗಿ ಪ್ರಳಯ ಜಲದಲ್ಲಿ ಕರಗಿ ಹೋಗುವುದಂತೆ ಎಂದ ಮೇಲೆ ಹೀಗೇ ಇಲ್ಲಿದ್ದು ಮಾಡುವದೇನು? ಇನ್ನೂ ದೇಹವು ಗಟ್ಟಿಯಾಗಿರುವಾಗಲೇ ಅವಿನಾಶಿಯಾದ ಸತ್ಯವೊಂದನ್ನು ಕಾಣುವುದು ಒಳಿತು. ಅಂಥ

ಸತ್ಯವನ್ನು ಗುರುವು ಮಾತ್ರ ತೋರಿಸಿಕೊಡಬಲ್ಲನು. ಗುರುವಿಲ್ಲದೇ ಮಾಡುವ ನಮ್ಮ ಯತ್ನಗಳೆಲ್ಲ ವ್ಯರ್ಥ ದಣಿವು. ಅದಕ್ಕಾಗಿ ಸದ್ಗುರು ಶೋಧಕ್ಕೆ ಹೊರಟಿದ್ದೇನೆ.'

'ನಿಮ್ಮಲ್ಲಿ ಹೇಳುವ ಸ್ವಾಮಿಗಳು ಮುದುಕರು. ಅವರ ಮಾತು ನಮಗೇಕೆ? ನಾವೂ ಮುದುಕರಾದ ಮೇಲೆ ಬೇಕಾದರೆ ಅಂಥ ಮಾತಾಡೋಣ.'

'ಹಾಗಲ್ಲ ನಮಗೀಗ ಹುಡುಗ ಬುದ್ಧಿ. ಆಟ-ಊಟ-ನೋಟಗಳಲ್ಲಿ ಕಾಲ ಕಳೆಯುತ್ತದೆ. ಹರೆಯದಲ್ಲಿ ಹೆಂಡರು-ಮಕ್ಕಳು. ಆಶೆ-ಸಿಟ್ಟು; ಮೋಹ ಇವೆಲ್ಲ ಆಗ ಕಣ್ಣಿಗೆ ಮೋಹದ ಪರೆ ಮುಸುಕಿ ವಿವೇಕವೇ ಉಳಿಯುವುದಿಲ್ಲ. ಎಂದಮೇಲೆ ನಿಜವನ್ನರಿಯಬೇಕೆಂಬ ಪ್ರಸಂಗವೆಲ್ಲಿ? ಇನ್ನು ಮುಪ್ಪಿನಕಾಲ ಹಿಂದಿನ ತಮ್ಮ ಬದುಕಿನ ನೆನಪುಗಳೆಲ್ಲ ಮರುಕಳಿಸುತ್ತವೆ. ಆದರೆ ಶಕ್ತಿ ಇರುವುದಿಲ್ಲ. ಮಕ್ಕಳು-ಮರಿಗಳು ಮಾತು ಕೇಳುವುದಿಲ್ಲ. ಯಾವಾಗಲೂ ದುಃಖ-ಚಿಂತೆಗಳು ಮುತ್ತಿಕೊಳ್ಳುತ್ತವೆ. ಒಳ್ಳೆಯ ವಿಚಾರ ಸುಳಿವೆಲ್ಲಿ ಬರಬೇಕು. ಇಷ್ಟಾಗಿ ಸಾವು ಸಮೀಪಿಸಿತೆಂಬ ಭಯ ಬೇರೆ. ಹೀಗಿರುವಾಗ ಎಷ್ಟು ವೇದಾಂತ ಕೇಳಿದರೇನು? ಒಂದೂ ಮನಸ್ಸಿಗೆ ಹಿಡಿಯುವುದಿಲ್ಲ. ದೇಹ ಸ್ವಾಧೀನವಿರುವುದಿಲ್ಲ. ಮನಸ್ವಾಧೀನವಿರುವುದಿಲ್ಲ. ಒಟ್ಟು ತಳಮಳ ತಪ್ಪಿಸಿಕೊಳ್ಳದೇ ಮನುಷ್ಯ ಮರಣ ಹೊಂದುತ್ತಾನೆ. ಆದುದರಿಂದ ನಾವು ಹುಡುಗರಿರುವಾಗಲೇ ನಿಜವನ್ನರಿಯುವ ಹಂಬಲು ಹಚ್ಚಿಕೊಳ್ಳಬೇಕು. ಈಗ ನಮ್ಮ ಮನಸ್ಸು ಅಷ್ಟು ಹೊಲಸಾಗಿರುವುದಿಲ್ಲ. ಮೊದಲು ಸದ್ಗುರುವನ್ನು ಕಂಡು ಅವನನ್ನು ಸೇವೆ ಮಾಡುತ್ತ ಮೆಚ್ಚಿಸಿ ಉಪದೇಶವನ್ನು ಕೇಳಿ ಜ್ಞಾನವನ್ನು ಸಂಪಾದಿಸಬೇಕು.'

ಎಂದು ಬಾಲ ಸಿದ್ಧನು ಹೇಳಲು ಆ ಉಭಯ ಗೆಳೆಯರಿಗೆ ಅವನ ವಿಚಾರ ಸಮಂಜಸವೆನಿಸಿ ನುಡಿದರು. 'ನಿನ್ನ ಮಾತು ಸರಿ ಸಿದ್ಧಾ. ನಿನ್ನೊಡನೆ ನಾವೂ ಬರುತ್ತೇವೆ. ಎಲ್ಲರೂ ಕೂಡಿ ಸದ್ಗುರುವಿಗೆ ಶರಣಾಗತರಾಗೋಣ. ಅವನ ಅನುಗ್ರಹದಿಂದ ಉತ್ತಮವಾದ ಆತ್ಮಜ್ಞಾನವನ್ನು ಪಡೆಯೋಣ. ಆ ಮೇಲೆ ಇದ್ದೇ ಇರುವುದಲ್ಲ. ಮನೆಮಾರು."

ಹೀಗೆ ಸಿದ್ಧನನ್ನು ಒಪ್ಪಿಸಿ ಮೂವರೂ ಮಾರ್ಗವನ್ನು ಕ್ರಮಿಸತೊಡಗಿದರು. ಕೆಲದೂರ ಸಾಗುವಷ್ಟರಲ್ಲಿ ಮಧ್ಯಾಹ್ನವಾಯಿತು. ಅಷ್ಟರಲ್ಲಿ ಒಂದು

ಹಳ್ಳಿಯು ಕಾಣಲು ಒಂದು ಗುಡಿಯಲ್ಲಿ ಇಳಿದುಕೊಂಡರು. ಸೋಮ-ಭೀಮರಿಗೆ ಹಸಿವಿನ ಬಾಧೆ ಅತಿಶಯವಾಗಲು ಅವರೆಂದರು.

'ನಮಗೆ ಹಸಿವೆಯಂತೂ ಬಹಳವಾಯಿತು. ಇಲ್ಲಿ ಯಾರು ಬಂದು ನಮಗೆ ಅನ್ನ ನೀಡುವರು?' 'ಚಿಂತಿಸಬೇಡಿರಿ ಈಶ್ವರ ಸಮರ್ಥನಿದ್ದಾನೆ. ಅವನನ್ನು ಮನದಲ್ಲಿಟ್ಟುಕೊಂಡು ಅಖಂಡ ಧ್ಯಾನಿಸಿರಿ. ಅವನು ನಿಮಗೆ ಸುಧಾಮೃತವನ್ನೇ ಕೊಡಿಸಿ ಶಾಂತಗೊಳಿಸುತ್ತಾನೆ. ಆದರಿಂದ ಹಸಿವೆ ಇಲ್ಲದಂತಾಗುತ್ತದೆ. ಇಂಥ ತೃಪ್ತಿಯು ಅನ್ನದಿಂದ ಸಿಗುವುದಿಲ್ಲ. ತಿಳಿಯದ ಮೂಢರು ಸುಮ್ಮನೇ ಅನ್ನ-ಅನ್ನವೆಂದು ಹಲುಬುತ್ತಾರೆ. ದೇಹ ಕೊಟ್ಟವನಿಗಿದೆ ಅದನ್ನು ರಕ್ಷಿಸುವ ಭಾರ. ಆ ದೇಹ-ಆ ಹಸಿವೆ ಅವನಿಗೊಪ್ಪಿಸಿಬಿಡಿರಿ. ದೇಹ ನನ್ನದು ಎಂದು ನೀವು ಭಾವಿಸಿಬಿಟ್ಟರೆ ಅದಕ್ಕಾಗುವ ಪೀಡೆಗಳೆಲ್ಲ ನಿಮಗೂ."

"ಸಿದ್ಧಾ, ನೀನು ಹೇಳುವ ಮಾತೆಲ್ಲ ಶಾಸ್ತ್ರದವು. ಹಸಿವೆಯಿಂದ ನಮ್ಮ ಪ್ರಾಣ ಹಾರುವುದೇನೋ ಎನಿಸುತ್ತದೆ. ಅನ್ನ ದೊರೆಯದಿದ್ದರೆ ನಾವು ಬದುಕುವ ಬಗೆ ಹೇಗೆ?"

"ಹುಚ್ಚರಲ್ಲವೇ ನೀವು. ಜಗತ್ತನ್ನೆಲ್ಲ ಪೋಷಿಸುವ ಪರಮಾತ್ಮನಿರುವಾಗ ಅವನನ್ನು ಮರೆಯುವುದು ಸರಿಯಲ್ಲ. ಒಂದು ಗುಟ್ಟಿನ ಮಾತು ಹೇಳುತ್ತೇನೆ ಕೇಳಿರಿ. ಹಸಿವೆ ನಿಮ್ಮ ಸ್ವಭಾವದ ಧರ್ಮವಲ್ಲ. ಮನಸ್ಸು ಅಲ್ಲಿಗೆ ಮುಟ್ಟಿದಾಗ ಮಾತ್ರ ಹಸಿವೆಯು ಅನುಭವಕ್ಕೆ ಬರುತ್ತದೆ. ಕಾರಣ ಮನಸ್ಸನ್ನು ಹಸಿವೆಯಿಂದ ತಿರುಗಿಸಿ ಪರಮಾತ್ಮನ ಕಡೆಗೆ ಕಳಿಸಿರಿ. ಅಲ್ಲಿ ಅದು ಆನಂದಾಮೃತ ಲಾಭವನ್ನು ಪಡೆಯುವುದು. ಅಮೃತವನ್ನು ಕುಡಿದ ಮೇಲೆ ಪೀಡೆಗಳೆಲ್ಲಿ? ಬೇಗನೇ ಪರಮಾತ್ಮನನ್ನು ಧ್ಯಾನಿಸಿರಿ. ಅವರ ಧ್ಯಾನದಲ್ಲಿ ಪ್ರಾಣ ನೆಲೆಗೊಂಡಿತೆಂದರೆ, ಜಠರಾಗ್ನಿಯು ಪ್ರದೀಪ್ತವಾಗಲಾರದು. ಹೀಗಾದಲ್ಲಿ ಹಸಿವೆಯು ತಾನೇ ಶಾಂತವಾಗುವುದು. ಜೀವನಿಗೆ ಉಪದ್ರವವು ತಪ್ಪುವುದು."

ಎಂದು ಸಿದ್ಧನು ನುಡಿಯಲು ಅವನ ಉಪದೇಶಾಮೃತದಿಂದಲೇ ಅವರ ಹಸಿವೆಯಡಗಿ ಮುಂದಿನ ಪಣಯಕ್ಕೆ ಸಿದ್ಧರಾಗಿ ನಡೆದರು. ಕೆಲವು ದೂರ ಸಾಗಲು ಮತ್ತೊಂದು ಗ್ರಾಮವು ಕಾಣಿಸಿತು. ಮೂವರೂ ಅಲ್ಲಿಗೆ ಬಂದು

ಒಂದು ಗುಡಿಯಲ್ಲಿಳಿದುಕೊಂಡರು. ದಾರಿಯ ದಣಿವು-ಹಸಿವು ಇವುಗಳಿಂದ ಭೀಮ-ಸೋಮರು ಬಹಳ ಬಳಲಿದ್ದರು. ಆಸುವು ದೊರೆತುದೇ ತಡ. ಆ ಗುಡಿಯ ಒಂದು ಮೂಲೆಯಲ್ಲಿ ಮಲಗಿ ನಿದ್ರೆ ಹೋದರು.

ಸಿದ್ಧನು ಆಗೊಂದು ಕೌತುಕ ತೋರಿದನು.

ಆ ಗುಡಿಯಲ್ಲಿ ಸುಂದರವಾದುದೊಂದು ನಂದಿಯ ಮೂರ್ತಿ. ಏಳು ವರ್ಷ ತುಂಬಿದ ಮನೋಹರಕಾರನಾದ ಸಿದ್ಧನು ಅದರ ಬೆನ್ನ ಮೇಲೆ ಏರಿ ಕುಳಿತನು. ಅಕಸ್ಮಾತ್ತಾಗಿ ಅದೇ ವೇಳೆಗೆ ಅಲ್ಲಿ ಬಂದ ಪೂಜಾರಿಯು ಇದನ್ನು ಕಂಡು ಸಿಟ್ಟಿನಿಂದ 'ಎಲೇ, ಕೆಟ್ಟ ಹುಡುಗನೇ, ಯಾರು ನೀನು? ಮೊದಲು ದೇವರ ಮೇಲಿಂದ ಕೆಳಗಿಳಿ. ನಿನಗೆ ದೇವರೆಂಬ ಜ್ಞಾನವಿಲ್ಲವೇ? ನಿನ್ನ ಭಯ-ಭಕ್ತಿಯ ಭಕ್ತಿಗಳನ್ನು ಎಲ್ಲಿಟ್ಟಿರುವೇ?" ಎಂದು ನುಡಿಯಲು ಸಿದ್ಧನು 'ನಾನಂತೂ ಪರಮಾತ್ಮನಲ್ಲಿಟ್ಟಿರುತ್ತೇನೆ. ನೀನು ಮಾತ್ರ ಈ ಕಲ್ಲಿನಲ್ಲಿಟ್ಟಿರುವೆಯಲ್ಲ, ಎಂದನು.

ಆ ಮಾತಿನಿಂದ ಪೂಜಾರಿಗೆ ಚಾಟಿ ಏಟು ಕೊಟ್ಟಂತಾಯಿತು. ಇದು ನಿಜವಾಗಿ ವಿಚಾರಿಸತಕ್ಕ ಮಾತೆಂದು ಮನ ಹೇಳಿತು. ಆದರೆ ಒಬ್ಬ ಸಣ್ಣ ಹುಡುಗನಿಂದ ವಯೋವೃದ್ಧನ ಅಪಮಾನ. ಹೀಗೆ ಗೊಂದಲಗೆಟ್ಟ ಪೂಜಾರಿಯ ಮೊಗ ನೋಡಿ ಸಿದ್ಧ ನಗುತ್ತಿದ್ದನು. ಇದನ್ನು ಕಂಡ ಪೂಜಾರಿಯು ಇನ್ನೂ ಸಿಟ್ಟಾಗಿ 'ನಿಲ್ಲು, ನಿನಗೆ ಯೋಗ್ಯ ಪ್ರಾಯಶ್ಚಿತ್ತ ಮಾಡುತ್ತೇನೆ' ಎಂದು ನುಡಿದು ಊರೊಳಗೆ ತೆರಳಿ ಕೆಲವರನ್ನು ಜತೆ ಮಾಡಿಕೊಂಡು ಮರಳಿ ಬಂದನು. ಅವರೆಲ್ಲರು ಬಂದು ನೋಡುತ್ತಿರಲು ಪೂಜಾರಿ ಹೇಳಿದ ಮಾತು ನಿಜವಾಗಿತ್ತು. ಪುಂಡ ಹುಡುಗನ ನಡತೆಯನ್ನು ಕಂಡು ಅವರಿಗೂ ಸಿಟ್ಟು ಹೆಚ್ಚಿ 'ತಡೆ, ತಡೆ ಇದುವರೆಗೆ ದೇವರ ಬೆನ್ನ ಮೇಲೆ ಏರಿಯೇ ಕುಳಿತಿರುವೆಯಾ? ನಿನ್ನ ಮೈ ಮೆತ್ತಗೆ ಮಾಡಿ ಕೆಳಗೆ ಎಳೆದು ಹಾಕುತ್ತೇವೆ' ಎಂದು ನುಡಿದು ಸಮೀಪಕ್ಕೆ ಬಂದರು. ಸಿದ್ಧನು ನಗುತ್ತಲೇ ಕುಳಿತಿದ್ದನು. ಆಗ ಬಂದವರಲ್ಲೊಬ್ಬನು ಸಿಟ್ಟಿನಿಂದ ಕೈಎತ್ತಿ ಗುದ್ದು ಹಾಕುವುದಕ್ಕೆ ಯತ್ನಿಸಲು ಅವನ ಕೈಗೆ ಅಲ್ಲಿರುವುದೊಂದು ಮೊಳೆಯು ಚುಚ್ಚಿ ಒಳಬಳನೇ ರಕ್ತ ಸುರಿಯ ತೊಡಗಿತು. ವೇದನೆ ಹೆಚ್ಚಾಗಿ ಅವನು ರೋಧಿಸಲಾರಂಭಿಸಿದನು. ಅವನಿಗಾದ ಅವಸ್ಥೆಯನ್ನು ಕಂಡು ಉಳಿದವರು ಹಿಂದೆ ಸರಿದು ನಿಂತು—'ನೀನೆಲ್ಲಿ

ಯವನೋ ಪುಂಡಾ? ನಾಚಿಕೆ ಇಲ್ಲದೇ ದೇವರ ಮೇಲೆ ಕುಳಿತಿರುವೆಯಲ್ಲ? ಎನ್ನಲು ಸಿದ್ಧನು 'ಕೂತವ ದೊಡ್ಡವನೋ? ಹೊತ್ತವ ದೊಡ್ಡವನೋ? ಹೇಳಿರಿ ನೋಡುವ. ಭಕ್ತಿ ಇಲ್ಲದ ಜನರು ಈ ಮೂರ್ತಿಯನ್ನು ಭಜಿಸುತ್ತಿರುವುದರಿಂದ ಇದರಲ್ಲಿಯ ದೈವಿಕ ಸತ್ವವು ಇಲ್ಲದಂತಾಗಿದೆ. ಈಗ ಇದು ಬರಿ ಕಲ್ಲು ಮಾತ್ರ ಉಳಿದಿರುವುದನ್ನು ಕಂಡು ಪ್ರಾಣ ಪ್ರತಿಷ್ಠೆ ಮಾಡಬೇಕೆಂದು ಯತ್ನದಲ್ಲಿದ್ದೇನೆ." ಎಂದು ನುಡಿಯಲು ಅಮೃತ ಸಮಾನವಾದ ಜ್ಞಾನದಿಂದ ತುಂಬಿದ ಆ ಮಾತುಗಳನ್ನು ಕೇಳಿ ಅವರೆಲ್ಲ ಆಶ್ಚರ್ಯಪಡುತ್ತ ತಮ್ಮೊಳಗೆ ಮಾತಾಡಿಕೊಳ್ಳತೊಡಗಿದಳು.

'ಆಹಾ, ಇವು ಸಣ್ಣ ಮಾತಾಗಲಿಲ್ಲ. ಇವರು ಯಾರೋ ಜ್ಞಾನಸಿದ್ಧರಿರಬೇಕು.'

'ವಯಸ್ಸು ಮಾತ್ರ ಬಹಳ ಸಣ್ಣದು.'

'ಮಹಾಪುರುಷರ ವಯಸ್ಸನ್ನು ನೋಡಬೇಕಾಗಿಲ್ಲ.'

ಎಂದು ಭಕ್ತಿದುಂಬಿ ಮಾತಾಡಿಕೊಂಡು ಸಿದ್ಧನನ್ನು ವಂದಿಸಿದರು. ಸಿದ್ಧನಂದನು. 'ಜನಗಳಿರಾ, ನನ್ನ ಮಾತು ತುಸು ಕೇಳಿರಿ. ಮೂರ್ತಿ ಪೂಜೆ ಬಹಳ ಕನಿಷ್ಠವಾದುದು. ತಿಳಿವಳಿಕೆ ಇಲ್ಲದವರು ಮಾತ್ರ ಮೂರ್ತಿಗಳನ್ನು ಆರಾಧಿಸುತ್ತಾರೆ. ಪರಮಾತ್ಮಮಯರಾಗಿ ಲೋಕದಲ್ಲಿ ಸಂಚರಿಸುವ ಜ್ಞಾನಿಗಳು ಮಾತ್ರ ಪರಮಾತ್ಮನ ಸ್ಪಷ್ಟ ರೂಪರಾಗಿರುವರು. ಅಂಥವರನ್ನು ಆರಾಧಿಸುವುದು ಬಹಳ ಶ್ರೇಷ್ಠವೆಂದು ಶ್ರುತಿ-ಸ್ಮೃತಿಗಳು ಹೇಳುತ್ತವೆ. ಬಸಿರಿನಲ್ಲಿರುವ ಕೂಸಿಗೆ ತಾಯಿಯುಂಡ ಅನ್ನದಿಂದ ತೃಪ್ತಿಯಾಗುವಂತೆ ಜ್ಞಾನಿಗಳನ್ನು ಪೂಜಿಸುವುದರಿಂದ ಪರಮಾತ್ಮನು ಬೇಗ ಸಂತುಷ್ಟನಾಗುತ್ತಾನೆ."

ಅದ್ಭುತವಾದ ಈ ಮಾತುಗಳನ್ನು ಕೇಳಿ ಅವರೆಲ್ಲರು ಆಶ್ಚರ್ಯಪಡುತ್ತ 'ಇವನು ಬಾಲರೂಪದಿಂದ ಸಂಚರಿಸುವ ಯಾರೋ ಮಹಾತ್ಮರು. ಇವರನ್ನು ಸಂತೋಷಗೊಳಿಸುವುದು ನಮ್ಮ ಕರ್ತವ್ಯವಾಗಿದೆ.' ಎಂದುಕೊಂಡು ಮನೆಗೆ ತೆರಳಿದರು. ಅವರಿವರ ಬಾಯಿಂದ ಈ ಸುದ್ದಿ ಜನವೆಲ್ಲ ಕೇಳಿತು. ಭಕ್ತಿಯಿಂದ ಹಾಲು-ಹಣ್ಣು ತಂದರು.

ಇಷ್ಟಾದರೂ ಕೂಡ ಸಿದ್ಧನು ನಂದಿಯ ಬೆನ್ನು ಬಿಟ್ಟು ಇಳಿದಿರಲಿಲ್ಲ. ಕೂಡಿದ ಗಂಡು-ಹೆಣ್ಣು-ಹುಡುಗರೆಲ್ಲ ನೋಡಿದರು. ಎಲ್ಲರಿಗೂ ಆ ನೋಟ

ವೊಂದು ಆನಂದದಾಯಕ. ಅಲ್ಲದೇ ಚಂದ. ಹಾಲು–ಹಣ್ಣು–ಕಜ್ಜಾಯ ಗಳನ್ನು ಸಿದ್ಧನ ಮುಂದಿಟ್ಟು ವಂದಿಸಿದರು. ಅಷ್ಟರಲ್ಲಿ ನಿದ್ರೆ ತಿಳಿದು ಎದ್ದ ಸೋಮ–ಭೀಮರ ದೃಷ್ಟಿ ಇತ್ತ ಹರಿಯುವುದೇ ತಡ ಓಡುತ್ತ ಬಂದು ನಿಂತರು.

ಸಿದ್ಧನು ಅವರಿಗೆ ಹೇಳಿದನು.

'ಇದು ನೋಡಿರಿ. ನಮ್ಮ ಸಲುವಾಗಿ ಈಶ್ವರನು ಅನ್ನವನ್ನು ಕಳಿಸಿರು ವನು. ಇನ್ನು ಅವನನ್ನು ನೆನೆದು ಹಸಿವೆ ಹಿಂಗಿಸಿಕೊಳ್ಳಿರಿ.'

ಗೆಳೆಯರಿಬ್ಬರು ತಿಂದು ತೇಗಿದರು. ಬಾಲಸಿದ್ಧನು ತುಸು ಮಾತ್ರ ಸೇವಿಸಿ ವಿಚಾರಿಸಿಕೊಂಡುದೇನಂದರೆ–ಹೀಗೆ ಅಜ್ಞಾನಿಗಳಾದ ಜನರ ಸಹವಾಸ ದಲ್ಲಿರುವುದು ಈ ಸಮಯದಲ್ಲಿ ಒಳ್ಳೆಯದಲ್ಲ. ಎಂದುಕೊಂಡು ತನ್ನ ಗೆಳೆ ಯರಿಗೆ ಸನ್ನೆ ಮಾಡಿ ತಿಳಿಸಿ ಜನರ ಕಣ್ಣು ತಪ್ಪಿಸಿ ಲಗುಬಗೆಯಿಂದ ಆ ಸ್ಥಳ ಬಿಟ್ಟು ತೆರಳಿದರು. ಹಾಗೇ ದಾರಿ ಹಿಡಿದು ಸಾಗುತಿರಲು ಒಂದು ಗಹನ ವಾದ ಅರಣ್ಯವು ಕಂಡಿತು. ಅಲ್ಲಿ ಅತ್ತೊಂದು ಇತ್ತೊಂದು ಕಾಲು ದಾರಿ ಗಳು ಮಾತ್ರವಿದ್ದು ದಟ್ಟವಾದ ಗಿಡ—ಬಳ್ಳಿಗಳು ಬೆಳೆದಿರುವುದರಿಂದ ಕೆಲವು ಕಡೆಗೆ ಸೂರ್ಯ ಪ್ರಕಾಶವು ಕೂಡ ಬೀಳುತ್ತಿರಲಿಲ್ಲ. ಅಂಥ ಅರಣ್ಯದಲ್ಲಿ ಮೆಲ್ಲನೆ ಸಾಗಿರಲು ಭಯಗೊಂಡ ಸೋಮನು ಕೇಳಿದನು.

'ಸಿದ್ಧಾ, ನಮ್ಮನ್ನು ಎಲ್ಲಿ ಕರೆದೊಯ್ಯುವುದಪ್ಪ ಎತ್ತ ನೋಡಿದರೂ ಘೋರ ಕಾನನವೇ ಕಾಣುತ್ತದೆ. ದಾರಿ ಬಟ್ಟೆಗಳಂತೂ ತಿಳಿಯುವುದೇ ಇಲ್ಲ,

ಭೀಮನು ಅವನನ್ನು ಸಮಾಧಾನಗೊಳಿಸುವ ಧ್ವನಿಯಲ್ಲಿ ನುಡಿದನು. 'ಹೆದರಿಕೆ ಏನೂ ಬೇಡ ಸೋಮಾ. ಈಶ್ವರನು ಭಕ್ತರ ಸನಿಹದಲ್ಲಿರುತ್ತಾನೆ. ಸಂಕಟಗಳಿಂದ ಅವರನ್ನು ರಕ್ಷಿಸುತ್ತಾನೆ. ಅವರ ಮೇಲೆ ಭಾರ ಹಾಕಿ ಸುಮ್ಮನೆ ದಾರಿ ಹಿಡಿ. ಇಂಥ ಪ್ರಸಂಗದಲ್ಲಿ ದೇವರು ನಮಗೆ ಬಲಿಷ್ಠನಾದ ಒಬ್ಬ ಬಂಧು.' ಈ ಮಾತನ್ನು ಕೇಳಿ ಸೋಮನು ಸುಮ್ಮನಾಗಿ ಹೆದರುತ್ತಲೇ ಅವರೊಡನೆ ಸಾಗುತಿರಲು ಕಾಲಿಗೊಂದು ಮುಳ್ಳು ಚುಚ್ಚಿ ಬಹಳ ವೇದನೆ ಯಾಯಿತು. ಅಳುತ್ತ ಕುಳಿತು ಹೀಗೆ ಮನೆ ಬಿಟ್ಟು ಬಂದುದು ತಪ್ಪಾಯಿತು ಈಗೇನು ಮಾಡಲಿ? ಒಂದು ವೇಳೆ ಇದರಿಂದ ನಾನು ಬದುಕಿ ಉಳಿದರೆ ಎಂದಿಗೂ ಇಂಥವರ ಸಹವಾಸ ಮಾಡಲಿಕ್ಕಿಲ್ಲ. ಎಂದು ಮೊದಲಾಗಿ ಹಲುಬ ಲಾರಂಭಿಸಲು ಉಳಿದವರಿಬ್ಬರು ಕಸಿಕರಗೊಂಡು ಅವನ ಕೈ ಹಿಡಿದು ಎಬ್ಬಿಸಿ

ಮೆಲ್ಲನೆ ಘೋರಾರಣ್ಯದಲ್ಲಿ ಸಾಗಿದರು. ಆಗ ಅಡವಿಯ ಶ್ವಾಪದಗಳ ಘೋರ ಗರ್ಜನೆ ಸಮೀಪದಲ್ಲಿಯೇ ಕೇಳಬರತೊಡಗಿತು. ಅದನ್ನು ಕೇಳಿ ಭಯ ಗೊಂಡ ಭೀಮನು 'ಸಿದ್ಧಾ, ನನಗೆ ಬಲು ಹೆದರಿಕೆಯಾಗತೊಡಗಿದೆ. ಒಮ್ಮೆ ಇದರಿಂದ ಪಾರುಮಾಡಿ ಊರಿನ ದಾರಿ ತೋರಿಸು ಇಂಥ ದಾರಿಯಿಂದ ಸಾಗುವುದು ನನ್ನಿಂದ ಆಗಲಾರದು.' ಎಂದು ಅರ್ಧಮರ್ಧ ಅಳುತ್ತಲೇ ನುಡಿದನು. ಗೆಳೆಯರಿಬ್ಬರ ನಿರಾಶೆ ದುಃಖಗಳನ್ನು ಕಂಡು ಸಿದ್ಧನು ಅವ ರನ್ನು ಕುರಿತು—ಗುರುವನ್ನು ಶೋಧಿಸುವ ಕಾರ್ಯ ಬಹಳ ಕಠಿಣ. ಅಲ್ಲಿ ದೇಹಾಭಿಮಾನವು ಪ್ರಯೋಜನವಿಲ್ಲ. ಈ ದೇಹಕ್ಕಾಗುವ ದುಃಖವು ಎಷ್ಟ ರದು? ಜನನ-ಮರಣ ರೂಪವಾದ ಮಹಾ ದುಃಖವನ್ನು ಕಳೆದುಕೊಳ್ಳು ವುದು ಬೇಡವೇ. ಮೊದಲು ಗುರುವನ್ನು ಕಂಡು ಅವನಿಂದ ಸ್ವರೂಪ ಜ್ಞಾನ ವನ್ನು ಪಡೆಯಬೇಕು. ಆಗ ಎಲ್ಲ ದುಃಖಗಳೂ ಇಲ್ಲದಂತಾಗುವವು. ಗುರು ವಿನ ಉಪದೇಶ ಸಿಗಬೇಕಾದರೂ ಸುಲಭವಲ್ಲ. ತನ್ನ ದೇಹದ ಪರಿವೆ ಮಾಡದೇ ಗುರುವನ್ನು ಭಕ್ತಿಪೂರ್ವಕವಾಗಿ ಸೇವಿಸಬೇಕಾಗುವುದು. ಹೀಗಿರಲು ಎಂದೋ ಒಂದು ದಿನ ಗುರುಕೃಪೆಯು ಲಾಭವಾಗಿ ಉಪದೇಶ ದೊರೆಯು ವುದು. ಅದರಿಂದ ಸಂಸಾರ ದುಃಖಗಳೆಲ್ಲ ತಳಕಿತ್ತುವವು. ದೇಹಾಭಿಮಾನ ನಾಶವಾಗುವುದು. ಜನ್ಮ-ಮರಣಗಳು ತಪ್ಪುವವು. ಹಾಗೆ ಸೇವಿಸುತ್ತಿರು ವಾಗ ಕೆಲವು ಸಾರೆ ಗುರುವು ಮುಮುಕ್ಷುವಾದ ತನ್ನ ಶಿಷ್ಯನನ್ನು ಒಂದು ವೇಳೆ ತೋರಿಕೆಗೆ ಅಂಟಿಸಬಹುದು. ಕಠಿಣವಾದ ಸೇವೆಯನ್ನು ಮಾಡಲು ಹಚ್ಚಬಹುದು. ಹೀಗೆ ನಾನಾ ಬಗೆಯಿಂದ ಶಿಷ್ಯನನ್ನು ಪರೀಕ್ಷಿಸಿ ಗುರುವು ಅನುಗ್ರಹಿಸುತ್ತಾನೆ. ಆ ಪ್ರಸಂಗದಲ್ಲಿ ಅಲ್ಪವೆನಿಸುವ ದುಃಖಗಳಿಗೆ ಅಂಜಿ ಶಾಶ್ವತ ಸುಖವನ್ನು ಪಡೆಯಲು ಹಿಂಜರಿಯುವವರಾದರೆ ಅಂಥ ಅಂಜುಗುಳಿ ಗಳಿಗೆ ಎಂದಿಗೂ ಗುರುಕೃಪೆಯ ಲಾಭವು ದೊರಕಲಾರದು."

ಈ ಮಾತುಗಳನ್ನು ಕೇಳಿ ಗೆಳೆಯರು ನುಡಿದರು.

ಸಿದ್ಧಾ ನಿನ್ನ ಮಾತುಗಳೆಲ್ಲ ಬಹಳ ಸರಿ ನಾವು ಒಪ್ಪುತ್ತೇವೆ. ಆದರೆ ನಾವು ಇದರ ಸಾಧನೆ ಎಂದೂ ಮಾಡಿದವರಲ್ಲ. ಎಂದ ಮೇಲೆ ಗುರುವನ್ನು ಶೋಧಿಸುವ ಮಾರ್ಗವು ನಮಗೆ ಹೇಗೆ ಒಗ್ಗಬೇಕು? ನೀನು ಮಹಾಪುರುಷ ನೆಂದು ನಾವು ತಿಳಿಯುತ್ತೇವೆ. ನಮ್ಮ ನಂಬಿಗೆಗೆಡಿಸಬೇಡ. ಈಗ ನಮಗೆ

ಒಂದೂರು ಮುಟ್ಟುವ ಹಾದಿ ತೋರಿಸು. ಮುಂದೆ ನಡೆಯಲು ಬಹಳ ಹೆದರಿಕೆಯಾಗುತ್ತದೆ."

ಗೆಳೆಯರಾಡಿದ ಮಾತು ಕೇಳಿ ಸಿದ್ಧನು ಎಡಗಡೆಯ ಭಾಗದಲ್ಲಿ ಹೊಳೆಯುತ್ತ ಹಿಂಬಾಲಿಸಿರುವ ಒಂದು ಜ್ಯೋತಿಯನ್ನು ತೋರಿಸಿದನು. ಅದನ್ನು ಕಂಡಕೂಡಲೇ ಸೋಮ-ಭೀಮರು ಹರ್ಷಿತರಾಗಿ ದಾರಿ ನಡೆಯುತ್ತ ಒಂದು ಗ್ರಾಮವನ್ನು ಪ್ರವೇಶ ಮಾಡಿ ಅಲ್ಲಿಯ ಒಂದು ದೇವಾಲಯದಲ್ಲಿ ಪ್ರವೇಶಿಸಿ ಬಳಲಿಕೆಯಿಂದ ಅಡ್ಡಾದರು. ಪ್ರಾಚೀನವಾದ ಆ ಗುಡಿಯು ಬಹು ಜೀರ್ಣವಾಗಿತ್ತು. ಮೇಲೆ ಮಳೆ ಬೇರೆ ಆಗ ಸುರಿಯತೊಡಗಿತ್ತು. ನೆನೆದ ಒಂದು ಭಾಗದ ಗೋಡೆಯು ಧಡಾರನೇ ಬಿದ್ದು ಹೋಗಲು ಭೀಮ-ಸೋಮರು ಹೆದರಿ ಎದ್ದು ಕುಳಿತು ವಟಗುಡಹತ್ತಿದರು. ಅಯ್ಯೋ ದೇವರೆ ಇದೇನು ಕೆಟ್ಟ ಗತಿಯೊದಗಿಸಿದಪ್ಪ ಈ ಸಿದ್ಧನ ಸಹವಾಸದಿಂದ. ನಾವೇನು ಬದುಕುವೆವೋ ? ಸಾಯುವೆವೋ ? ಒಂದೂ ತಿಳಿಯದಾಗಿದೆ."

ಸಿದ್ಧ ನುಡಿದನು.

'ನಾವು ಸದ್ಗುರುವನ್ನು ಶೋಧಿಸುತ್ತಿದ್ದೇವೆ. ದೇಹದ ಚಿಂತೆ ನಮಗೇಕೆ ? ನೀವು ಯಾವುದಾದರೂ ಒಂದೂರು ಕಾಣಬೇಕೆಂದು ಇಚ್ಛಿಸಿದಿರಿ. ಊರು ಸಿಕ್ಕರೂ ನಿಮ್ಮ ದುಃಖ ತಪ್ಪಲಿಲ್ಲ. ಲೋಕದ ರೀತಿಯೇ ಹೀಗೆ. ಇಚ್ಛಿತ ವಿಷಯವು ದೊರೆತರೂ ಕೂಡ ದುಃಖ ಹಿಂಗುವದಿಲ್ಲ. ಯಾಕಂದರೆ ಒಂದು ವಿಷಯ ಕೈವಶವಾಯಿತೆಂದರೆ ಮನಸ್ಸು ಮತ್ತೊಂದನ್ನು ಅಪೇಕ್ಷಿಸುವುದು. ಅದಾದ ಮೇಲೆ ಇನ್ನೊಂದು. ಹೀಗಿರುವದರಿಂದ ತಿಳಿದವರು ಮನೋನಿಗ್ರಹವನ್ನೇ ಸಾಧಿಸಬೇಕು."

ಅಷ್ಟರಲ್ಲಿ ಮಳೆ ನಿಂತಿತು. ಭೀಮ-ಸೋಮರ ಹಸಿವೆ ಜಾಗ್ರತವಾಯಿತು. ಅವರು ಭಿಕ್ಷೆಯನ್ನಾದರೂ ಬೇಡಿಕೊಂಡು ಬರೋಣ. ಎಂದು ವಿಚಾರ ಮಾಡತೊಡಗಿದರು. ಸಿದ್ಧನು ನಿದ್ರಾವಶನಾಗಿದ್ದನು. ಮೆಲ್ಲನೆ ಎದ್ದು ಭೀಮ-ಸೋಮರು ಊರಲ್ಲಿ ಬರುತ್ತ ಭಿಕ್ಷೆ ಹಾಕಿರೆಂದು ಒಂದು ಮನೆಯ ಬಾಗಿಲದಲ್ಲಿ ನಿಂತರು. ಆಗ ಆ ಮನೆಯ ಯಜಮಾನನು ಹೊರಗೆ ಬಂದು ಇವರನ್ನು ನೋಡಿ ಕಳ್ಳರೆಂದು ತಿಳಿದು 'ಓಹೋ, ನಿನ್ನೆ ರಾತ್ರಿ ನಮ್ಮ ಎಮ್ಮೆಯನ್ನು ಕದ್ದುಕೊಂಡು ಹೋದವರು ನೀವೇ ಇರಬೇಕು. ಮತ್ತೆ ಪಾಳತಿ

ಗಾಗಿ ಬಂದಿರುವಿರಾ / ನಿಲ್ಲಿರಿ ಬಂದೆ' ಎಂದು ಒದರಲಾರಂಭಿಸಿದನು. 'ಇಲ್ಲ ಸಜ್ಜನರೇ, ಸ್ವಲ್ಪ ಹೊತ್ತಿಗೆ ಮೊದಲು ನಾವು ಇಲ್ಲಿ ಬಂದ ಪರಸ್ಥಳದವರು ಹಸಿವೆಯಾದುದರಿಂದ ಭಿಕ್ಷೆಗೆ ಬಂದಿದ್ದೇವೆ. ನಾವು ಕಳ್ಳರಲ್ಲ.' ಎಂದು ಭೀಮ-ಸೋಮರು ದೈನ್ಯದಿಂದ ಹೇಳಿಕೊಂಡರು. ಇದರಿಂದ ಆ ಯಜಮಾನನ ಸಿಟ್ಟು ಹೆಚ್ಚಾಯಿತು. ಅವನು ಅವಡುಗಚ್ಚಿ 'ನಿಮಗೆ ಭಿಕ್ಷೆ ಬೇಕಲ್ಲವೇ ಭಿಕ್ಷೆ ತಾಳಿರಿ. ಮೈ ಮೆತ್ತಗಾಗುವಷ್ಟು ಕೊಡುತ್ತೇನೆ.' ಎನ್ನಲು ಅವರಿಬ್ಬರು ಘಾಬರಿಗೊಂಡು ಓಡತೊಡಗಿದರು. ದಾರಿಯಲ್ಲಿ ಗಸ್ತಿಯವರು ಅವರನ್ನು ತಡೆದು ನಿಲ್ಲಿಸಿ ಎಲ್ಲವನ್ನು ವಿಚಾರಿಸಿಕೊಂಡು 'ರಾತ್ರಿಯಲ್ಲಿ ಹೀಗೆ ತಿರುಗಬೇಡಿರಿ. ಈಗಂತೂ ಆ ಮುರುಕ ಗುಡಿಗೆ ಹೋಗಿ ಮಲಗಿ ನಾಳೆಗೆ ಈ ಊರ ಬಿಟ್ಟು ಹೋಗಬೇಕು.' ಎಂದು ಹೇಳಲು ಅದರಿಂದ ಉಭಯತರುಗಳು ಬಹಳ ದುಃಖಗೊಂಡು ಮರಗುತ್ತ ಗುಡಿಗೆ ಮರಳಿದರು.

ಎದ್ದು ಕುಳಿತ ಆನಂದ ಮೂರ್ತಿಯಾದ ಸಿದ್ಧನು 'ನೀವು ಈಶ್ವರನಲ್ಲಿ ನಂಬಿಗೆ ಇಡದೇ ಪ್ರಯತ್ನದಿಂದ ಪಡೆಯಬೇಕೆಂದು ಊರೊಳಗೆ ಭಿಕ್ಷೆಗೆ ತೆರಳಿದಿರಿ. ನಾನು ಶಿವಧ್ಯಾನ ಮಾಡುತಿರಲು ಪೂಜಾರಿಯು ಬಂದು ದೇವರಿಗೆ ನೈವೇದ್ಯ ಕೊಟ್ಟು ಆ ಅನ್ನವನ್ನೆಲ್ಲ ನನ್ನ ಮುಂದಿರಿಸಿ ಹೊರಟು ಹೋದನು. ಪ್ರಯತ್ನ ಮಾಡಿದರೂ ನಿಮಗೆ ಭಿಕ್ಷೆ ಸಿಕ್ಕಿಲ್ಲ. ನೀವು ಬಹಳ ಹಸಿದಿದ್ದೀರಿ. ಎಂಬುದು ನನಗೆ ತಿಳಿದಿತ್ತು. ಇಗೋ ನಿಮ್ಮ ಸಲುವಾಗಿ ಅನ್ನವಿರಿಸಿದ್ದೇನೆ. ಊಟ ಮಾಡಿರಿ,' ಎನ್ನಲು ಅವರು ಅಚ್ಚರಿಪಟ್ಟು 'ದೇವರೇ ಕಾಪಾಡು, ಕಾಪಾಡು ತಂದೆ ಎನ್ನುತ್ತ ದಯಾಘನನಾದ ದೇವರಲ್ಲಿ ವಿಶ್ವಾಸವಿಲ್ಲದ ನಮ್ಮ ಬಾಳು ವ್ಯರ್ಥವೆಂದು ಮರುಗಿದರು. ಮೂವರು ಊಟ ಮಾಡಿ ಮಲಗಿಬಿಟ್ಟರು.

ಮರುದಿನ ಬೆಳಗಾಯಿತು ಆಗ ಭೀಮ-ಸೋಮರೆದ್ದು 'ಸಿದ್ಧನಾಥನೇ, ನಾವು ತಿಳಿಗೇಡಿಗಳು. ಮನದಲ್ಲಿ ದೃಢವಿಲ್ಲ. ಈ ಗುರು ಶೋಧದ ಮಾರ್ಗವು ಬಹಳ ಕಠಿಣ. ಇನ್ನು ಮುಂದೆ ನಿನ್ನ ಬೆನ್ನು ಹತ್ತುವುದು ನಮ್ಮಿಂದಾಗದು. ತಾಯ್ತಂದೆಗಳು ದಿನಾಲು ನಮಗಾಗಿ ನೆನೆಯುತ್ತ ಕಳವಳಿಸುತಿರಬಹುದು. ಅಲ್ಲಿ ಹೊತ್ತು ಹೊತ್ತಿಗೆ ನಮಗೆ ಅನ್ನ ನೀರು ದೊರೆಯುತ್ತವೆ.' ಎಂದು ಕಣ್ಣೀರಿಡಲು ಸಿದ್ಧನು ಅವರಿಗಂದನು.

'ಸರಿ. ಅಂಥ ಅಧಿಕಾರಿಗಳು ನೀವಲ್ಲವೆಂಬುದು ತಿಳಿದುಹೋಗಿದೆ. ಗುರುವನ್ನು ಶೋಧ ಮಾಡಬೇಕಾದರೆ ಅಪಾರ ಕಷ್ಟ-ನಷ್ಟಗಳನ್ನು ಸಹಿಸುವ ತಾಳ್ಮೆ ಇರಬೇಕು. ಅಹಾ ಏನು ಹೇಳಲಿ. ಗುರುವೆಂದರೆ ಸಾಕ್ಷಾತ್ ದೇವರು. ದಯಾಘನನು. ಆದರೆ ದೇಹಾಭಿಮಾನವುಳ್ಳವರಿಗೆ ಅತಿ ದೂರನು. ನೀವೀಗ ಊರಿಗೆ ಹೋಗಿ ಉತ್ತಮ ಸಂಸಾರಿಗಳಾಗಿ ಈಶ್ವರನನ್ನು ಭಜಿಸಿರಿ. ಅದರಿಂದ ಅಧಿಕಾರವು ಬರುವುದು.'

ಹೀಗೆ ಸಿದ್ಧ ನಾಡಿದ ಮಧುರ ನುಡಿಗಳನ್ನು ಕೇಳಿ ಭೀಮ–ಸೋಮರು ವಂದಿಸಿ ತಮ್ಮೂರಿಗೆ ತೆರಳಿದರು. ಸಿದ್ಧನು ಆಗ ಅವರನ್ನು ಬಾಯ್ತುಂಬ ಹರಸಿದನು. 'ಭಕ್ತಿಯಲ್ಲಿ ಹಿಂದಾಗಬೇಡಿರಿ. ಎಲ್ಲಿದ್ದರೂ ಈಶ್ವರನನ್ನು ಭಜಿಸುತ್ತ ಉತ್ತಮರೆನಿಸಿ ಸುಖಿಗಳಾಗಿರಿ.' ಎಂದು ಸಿರೋಪ ಪಡೆದುಕೊಂಡು ಭೀಮ–ಸೋಮರು ಊರಹಾದಿ ಹಿಡಿದರು.

ಸಿದ್ಧನು ತನಗೆ ಬೇಕಾದ ದಾರಿ ಹಿಡಿದನು.

೪

ಮಾರ್ಗೇ ಮಾರ್ಗೇ ಜಾಯತೇ ಸಾಧುಸಂಗಃ ।
ಸಂಗೇ ಸಂಗೇ ಶ್ರೂಯತೇ ಕೃಷ್ಣಕೀರ್ತಿಃ ॥
ಕೀರ್ತೌ ಕೀರ್ತೌ ನಸ್ತದಾಕಾರವೃತ್ತಿಃ ।
ವೃತ್ತೌ ವೃತ್ತೌ ಸಚ್ಚಿದಾನಂದ ಭಾಸಃ ॥

––ಶುಕಗೀತ

ಪ್ರತಿಯೊಂದು ದಾರಿಯಲ್ಲಿಯೂ ಸಾಧು–ಸಜ್ಜನರ ಸಹವಾಸ ಲಭಿಸುವುದು. ಆ ಸಹವಾಸದಲ್ಲಿ ತನ್ಮಯವಾಗುವುದು. ಹಾಗೆ ಆದ ಸರತಿಗೊಮ್ಮೆ ಸಚ್ಚಿದಾನಂದವು ತಾನೆ ಉಕ್ಕುವುದು.

ಗೆಳೆಯರನ್ನು ಊರಿಗೆ ಕಳಿಸಿದ ಮೇಲೆಯೇ ಸಿದ್ಧನು ಈಗ ಏಕಾಕಿ. ಯಾವ ತೊಂದರೆಯೂ ಇಲ್ಲದೆ ಅಲ್ಲಲ್ಲಿ ಸಾಧುಗಳಿರುವ ಸ್ಥಾನಗಳನ್ನು

ಕೇಳುತ್ತ ಕೆಲವು ಸಾಧುಗಳ ದರ್ಶನ ಪಡೆಯುತ್ತ ಮಾರ್ಗ ಕ್ರಮಿಸತೊಡಗಿದನು.

ಹೈದರಾಬಾದ, ಗೋವಳಕೊಂಡ ಪ್ರಾಂತಗಳನ್ನೆಲ್ಲ ಸುತ್ತಿದನು. ಏನಾದರೇನು ? ಸದ್ಗುರುನಾಥ ದೊರೆಯಲಿಲ್ಲ. ಕೊನೆಗೆ ತಿಪ್ಪಿರ ಲಂಕೆಯ ಗುಹೆಯಲ್ಲಿ ನಿಂತು ತಪಸ್ಸು ಮಾಡತೊಡಗಿದನು. ಅಲ್ಲಿ ಯಾವಾಗಲೂ ಧ್ಯಾನ ಮಾಡುವನು. ಹೀಗೆಯೇ ಬಹಳ ದಿನಗಳು ಕಳೆಯುತ್ತಿರಲು ಉತ್ಕಟವಾದ ಚಿತ್ತೈಕಾಗ್ರತೆಯಿಂದ ಗುರುವು ದೊರೆಯುವ ಸ್ಥಳವು ಹೊಳೆದಂತಾಯಿತು. ದಕ್ಷಿಣ ದೇಶದಲ್ಲಿ ದಕ್ಷಿಣಾಮೂರ್ತಿ (ಶಿವ) ಸಾಂಪ್ರದಾಯದ ಕೆಲವು ಆಚಾರ್ಯರು ಇರುತ್ತಾರೆ. ಅಲ್ಲಿಗೆ ನೀನು ತೆರಳಿದರೆ, ನಿನ್ನ ಕಾರ್ಯಭಾಗವಾಗುವುದು ಎಂದು ಮನಸ್ಸಿಗೆ ಬೋಧವಾದಂತಾಯಿತು. ಸಿದ್ಧನು ನೆಟ್ಟಗೆ ದಕ್ಷಿಣಕ್ಕಿಳಿದುದೇ ಶೈಲ ಸೂರ್ಯ ಸಿಂಹಾಸನದ ಪೀಠಾಧ್ಯಕ್ಷರನ್ನು ವಂದಿಸಿ ಜ್ಞಾನ ಸಾಧನಗಳನ್ನು ಕೇಳತೊಡಗಿದನು. ಮುಖ್ಯವಾಗಿ ಚಿತ್ತಶುದ್ಧಿಯು ಹೇಗಾಗುವುದು ? ಎಂದು ಆರಂಭಿಸಿ ಪ್ರಶ್ನೆ ಮಾಡತೊಡಗಲು ಸ್ವಾಮಿಗಳು ಮನದಲ್ಲಿ ವಿಚಾರಿಸಿಕೊಂಡುದೇನಂದರೆ-- ಈ ಬಾಲಕನು ಅನೇಕ ಜನ್ಮಗಳಿಂದ ಯೋಗಸಾಧನೆಯಲ್ಲಿ ತೊಡಗಿದವನಾಗಿರಬೇಕು. ಆ ಸಂಸ್ಕಾರ ಬಲವೇ ಇಂಥ ಸಣ್ಣ ವಯಸ್ಸಿನಲ್ಲಿ ಇವನನ್ನು ಜ್ಞಾನದ ಕಡೆಗೆ ಜಗ್ಗತೊಡಗಿದೆ. ಹೀಗಿಲ್ಲವಾದರೆ ಇವನು ಯಾರೋ ದೇವಾಂಶನಾಗಿರಬೇಕು.' ಎಂದು ಭಾವಿಸಿ ಸಿದ್ಧನನ್ನು ವಿಶೇಷವಾಗಿ ಆದರಿಸಿದರು. ಅಲ್ಲಿ ತನ್ನ ಕಾರ್ಯವಾಗದೆಂದುಕೊಂಡ ಸಿದ್ಧನು ಮುಂದೆ ಸಾಗುತ್ತ ಯೋಚಿಸುತ್ತಿದ್ದನು.

'ಗುರುವು ಬ್ರಹ್ಮಜ್ಞಾನಿಯಾಗಿರಬೇಕು. ವೇದ ವೇದಾಂತಗಳ ರಹಸ್ಯವನ್ನು ಅರಿತವನಿರಬೇಕು. ಅವನು ಮುಮುಕ್ಷುಗಳಿಗೆ ಉಪನಿಷತ್ತುಗಳ ಅರ್ಥವನ್ನು ಸ್ಪಷ್ಟವಾಗಿ ಬೋಧಿಸಬಲ್ಲವನಾಗಿರಬೇಕು.'

ಇಂಥ ಗುರುವನ್ನು ಕಾಣಬೇಕೆನ್ನುತ್ತ ಸಿದ್ಧನು 'ರಾಚೋಟಿ' ಕ್ಷೇತ್ರಕ್ಕೆ ಬಂದು ಅಲ್ಲಿ ವೀರಭದ್ರ ಮೊದಲಾಗಿ ನವನಂದಿಗಳ ದರ್ಶನ ಪಡೆದು ಇನ್ನೂ ದಕ್ಷಿಣಕ್ಕೆ ತೆರಳಿದನು. ಈ ಸಮಯದಲ್ಲಿ ಅವನು ಪಟ್ಟ ಕಷ್ಟ ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಯಾವ ಮಾತನ್ನು ಅವನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಅನ್ನವಿಲ್ಲದೇ ದೇಹವು ಒಣಗಿ ಕಾಷ್ಠವಾಗಿತ್ತು. ಮನದ ವಾಸನೆಗ

ಕಿಲ್ಲ ಅಳಿದು ಹೋಗಿದ್ದವು. ಆದರಿಂದ ಚಿತ್ತವು ಕನ್ನಡಿಯಂತೆ ನಿರ್ಮಲ ವಾಗಿತ್ತು. ಏನಾದರೂ ಸಿದ್ಧ ಮುಂದುವರಿಯುತ್ತಲೇ ಇದ್ದನು. ಮಾರ್ಗಮಧ್ಯ ದಲ್ಲಿ ಅನೇಕ ಕ್ಷೇತ್ರವನ್ನು ಕಾಣುವನು. ಆದರೆ ಅವನಿಗೆ ದೇವ-ದೇವತೆಗಳ ದರ್ಶನವು ಈಗ ಬೇಕಾಗಿರಲಿಲ್ಲ. ಮಾಯಾವರಣವನ್ನು ದೂರಸರಿಸಿ ಸಚ್ಚಿದಾನಂದ ರೂಪವನ್ನು ತೋರಿಸಬಲ್ಲ ಸದ್ಗುರು ದರ್ಶನವು ಅವನಿಗೆ ಬೇಕಾಗಿತ್ತು.

ಇದುವರೆಗೆ ಅವನ ದರ್ಶನವಿಲ್ಲ. ಅಂತಃಕರಣ ಕಳವಳಿಸಿತು. ಸಿದ್ಧನು ಕೂಗಿಕೊಂಡನು.

'ಸದ್ಗುರುನಾಥನೇ, ಎಲ್ಲಿರುವೆ ನೀನು ದಯಮಾಡಿ ಬಾಲಕನಾದ ನನ್ನ ಅವಸ್ಥೆಯನ್ನು ನೋಡಬಾರದೇ ? ತೋರು. ತೋರಿಸು. ಬೇಗನೇ ನಿನ್ನ ಚರಣಕಮಲಗಳನ್ನು ತೋರಿಸಪ್ಪ' ಎಂದು ಹಲಬುತ್ತ, ಕಣ್ಣೀರ್ಗರೆಯುತ್ತ ಬಾಲಸಿದ್ಧನು ಕುಸಿದು ಭೂಮಿಗುರುಳಿದನು. ತುಸು ಕಣ್ಣು ಮುಚ್ಚಿದವು. ಆಗ ಗುರುದೇವನು ಬಂದು ಸಿದ್ಧನನ್ನು ಹೊಟ್ಟೆಗಪ್ಪಿಕೊಂಡು 'ಬಾಲಕನೇ ಧೈರ್ಯಗೆಡಬೇಡ' ಎಂದು ಹೇಳಿದಂತಾಯಿತು. ಕೂಡಲೇ ಸಿದ್ಧ ಕಣ್ತೆರೆದು ಸುತ್ತ ನೋಡಿದನು. ಯಾರೂ ಕಾಣಿಸಲಿಲ್ಲ. ಆದರಿಂದ ನಿರಾಶೆಗೊಂಡು ಪುನಃ ಭೂಮಿಗುರುಳಿ 'ಗುರುನಾಥನೇ, ನೀನು ತಾಯಿಯ ಲ್ಲವೇ? ನಾನು ನಿನ್ನ ಸಣ್ಣ ಮಗು. ತಿರುತಿರುಗಿ ಪರೀಕ್ಷಿಸುವುದೇ? ನೀನು ಎಲ್ಲಿ ಅಡಗಿರುವೆಯಮ್ಮ ? ಬೇಗ ಬಂದು ಮೊಗದೋರು. ನಿನ್ನ ಚರಣ ಕಮಲಗಳನ್ನು ಕಾಣುವ ಆಸೆಯಿಂದ ಕ್ಲೇಶಗಳನ್ನನುಭವಿಸುತ್ತ ಹಗಲೆನ್ನದೇ, ರಾತ್ರಿ ಎನ್ನದೇ ದೇಶ-ದೇಶ ಸುತ್ತಿದೆನು. ಆದರೂ ನಿನ್ನನ್ನು ಕಾಣಲಿಲ್ಲ. ಬೇಗನೇ ಬಂದು ದರ್ಶನ ಕೊಟ್ಟು ಮಾಯೆಯು ಮಂಜನ್ನೊರೆಸಿ ನಿರ್ಮಲ ಬ್ರಹ್ಮಪಥವನ್ನು ತೋರಿಸು. ಈ ಮಾರ್ಗದಲ್ಲಿ ಗುರುದೇವನ ಹೊರತು ರಕ್ಷಕರು ಯಾರು ? ಹಾಗೆಂದು ನಿನಗೆ ಶರಣು ಬಂದೆ ಸ್ವಾಮಿ. ಒಂದು ವೇಳೆ ನೀನು ಕೈ ಬಿಟ್ಟರೆ ನನ್ನ ರಕ್ಷಕರು ಯಾರೂ ಉಳಿಯಲಿಲ್ಲ. ಇನ್ನು ನೀನು ಇಲ್ಲಿಗೆ ಬಂದು ನನಗೆ ದರ್ಶನ ಕೊಡದಿದ್ದರೆ ನಾನಂತೂ ಮುಂದೆ ಸಾಗುವವನಲ್ಲ. ನಿನ್ನ ಧ್ಯಾನ ಮಾಡುತ್ತ ಇಲ್ಲಿಯೇ ಬಿದ್ದು ಪ್ರಾಣ ಕೊಡು ವುದು ನಿಶ್ಚಯ.'

ಈ ರೀತಿ ಸಿದ್ಧನು ಮನದಳಲನ್ನು ತೋಡಿಕೊಂಡನು. ಕಣ್ಣೀರ ಕಾಲುವೆ ಹರಸಿದನು. ಬಹಳ ಬಳಲಿಕೆಯಾಯಿತು ಕಣ್ಣು ಮುಚ್ಚಿಕೊಂಡು ಸುಮ್ಮನೆ ಕುಳಿತನು.

ಅಷ್ಟರಲ್ಲಿ ಆ ದಯಾಮಯ ಧಾವಿಸಿದನು.

ವೃದ್ಧನಾದ ಒಬ್ಬ ಸಾಧುವು ಅವನ ಬಳಿಗೆ ಬಂದು ನಿಂತು ಮೆಲ್ಲನೆ ಸಿದ್ಧನ ಕೈ ಹಿಡಿದು ಮೇಲಕ್ಕೆಬ್ಬಿಸಿದನು. 'ಮಗು ನೀನು ಯಾರು?'

'ದೀನಬಂಧುವೇ, ನಾನು ಸದ್ಗುರುವನ್ನು ಹುಡುಕುತ್ತ ತಿರುಗುತ್ತಿರುವೆನು. ಇದುವರೆಗೆ ನನಗೆ ಸದ್ಗುರು ಸಿಕ್ಕಿಲ್ಲ. ನಿನಗೆ ಶರಣು ಬಂದೆ ತಂದೆ. ಬೇಗನೆ ನನಗೆ ಸದು ರುವನ್ನು ತೋರಿಸುತ್ತೀಯಾ? ಇಲ್ಲವೆಂದರೆ ನನ್ನ ಪ್ರಾಣ ಹಾರುವದು.'

ಹೀಗೆ ಸಿದ್ಧನಾಡಿದ ವಚನಗಳನ್ನು ಕೇಳಿ ಸಾಧು ಸದ್ಗಿತನಾಗಿ 'ಧನ್ಯ, ಧನ್ಯ. ಬಾಲಕನೇ, ಸದ್ಗುರುವನ್ನು ವಶಪಡಿಸಿಕೊಂಡೆ. ನಿನ್ನ ನಡತೆ ಆಶ್ಚರ್ಯಕರವಾಗಿದೆ. ಲೋಕರಲ್ಲಿ ಎಲ್ಲ ಜನ ವಿಷಯ ಪದಾರ್ಥಗಳನ್ನು ಬಯಸುತ್ತಿರುವಾಗ ನೀನೊಬ್ಬನು ಮಾತ್ರ ಸದ್ಗುರುವನ್ನು ಹುಡುಕುತ್ತಿರುವೆಯಲ್ಲ. ಚಿಂತೆ ಮಾಡಬೇಡ. ನಿನಗೆ ಸದ್ಗುರುವು ನಿಶ್ಚಯವಾಗಿ ಸಿಕ್ಕುವನು. ಅದೂ ತಡವಿಲ್ಲದೇ, ನೀನು ಗುಡಗುಂಟಿ ಅಮರಗೊಡಂಕ್ಕೆ ಹೋಗು. ಅಲ್ಲಿ ಗಜದಂಡ ಸ್ವಾಮಿಗಳೆಂಬವರು 'ಕಟ್ಟಿ'ಯ ಮಠಕ್ಕೆ ಅಧಿಕಾರಿಗಳಾಗಿದ್ದಾರೆ. ಅವರು ಮಹಾ ಜ್ಞಾನಿಗಳೆಂದು ಜನರಲ್ಲಿ ಪ್ರಸಿದ್ಧಿಯುಂಟು. ನೀನು ಅವರ ಸೇವೆಯಲ್ಲಿದ್ದುಕೊಂಡರೆ ಜ್ಞಾನವನ್ನು ಪಡೆಯುವೆ. ಆ ಸ್ಥಳ ಕೂಡ ದೂರವಲ್ಲ. ಅದೋ ಅತ್ತ' ಎಂದು ಬೊಟ್ಟು ಮಾಡಿ ತೋರಿಸಿ ಆ ಸಾಧುಗಳು ಅದೃಶ್ಯರಾದರು.

ಸಿದ್ಧನಿಗೆ ಇದೆಲ್ಲ ಕನಸಿನಂತೆ ತೋರಿತು. ಮರುಗಿದನು. ಅಹಾ ಅನಾಯಾಸವಾಗಿ ಸದ್ಗುರು ಭೆಟ್ಟಿಯಾದನು. ಆದರೆ ಮಾಯಾವಶನಾದ ನನಗೆ ಯಾವುದೂ ತಿಳಿಯಲಿಲ್ಲ. ವಂದನವನ್ನು ಮಾಡದಾದೆ. ಆಗಲಿ. ಗುರುವು ಆಜ್ಞೆ ಕೊಟ್ಟಂತೆ ಗಜದಂಡ ಸ್ವಾಮಿಗಳಿರುವಲ್ಲಿಗೆ ಹೋಗಿ ಅವರನ್ನು ಕಂಡು ಸೇವೆ ದೊರೆಯುವಂತೆ ಅನುಗ್ರಹಿಸಲು ಬೇಡಿಕೊಳ್ಳುವೆನು. ಎಂದು ವಿಚಾರ ಮಾಡಿಕೊಂಡು ಅಂದಿನ ದಿನವೇ ಗುಡುಗುಂಟಿಗೆ ಬಂದು ಆಗ ಗುರುಗಳಿದ್ದ

ದೇವಾಲಯದ ಬಾಗಿಲದಲ್ಲಿ ದೈನ್ಯಭಾವದಿಂದ ನಿಂತು ಗುರುಗಳ ಆಗಮನ ವನ್ನು ಹಾರೈಸುತ್ತಿದ್ದನು. ಪೂಜೆ ಮುಗಿದ ಮೇಲೆ ಗಜದಂಡ ಸ್ವಾಮಿಗಳು ಹೊರಗೆ ಬಂದರು. ಅವರನ್ನು ಕಂಡು ನಮ್ರತೆಯಿಂದ ಸಿದ್ಧನು ಸಾಷ್ಟಾಂಗ ನಮಸ್ಕಾರ ಮಾಡಿ ಮೇಲೆದ್ದು ಕೈಮುಗಿದು ಶುದ್ಧಾಂತರಂಗನಾಗಿ ನಯ-ವಿನಯದಿಂದ ಬೇಡಿಕೊಂಡನು.

'ಓ ಸದ್ಗುರುನಾಥನೇ, ನೀನು ಬ್ರಹ್ಮಾನಂದ ಮೂರ್ತಿಯು. ಎಲ್ಲರಿಗೂ ಸುಖದಾಯಕನೆಂದು ನಿನ್ನ ಕೀರ್ತಿ ಪಸರಿಸಿದೆ. ಅಖಂಡ ಜ್ಞಾನ ರೂಪವೇ ನಿನ್ನ ಸ್ಥಿತಿಯು. ನೀನು ದ್ವಂದ್ವಾತೀತನು. ಆಕಾಶದಂತೆ ನೀನು ಎಲ್ಲ ಕಡೆಗೆ ವ್ಯಾಪ್ತನು. ಪ್ರಳಯ ಕಾಲದಲ್ಲಿ ಪ್ರಪಂಚವೆಲ್ಲ ನಾಶ ಹೊಂದಿದರೂ ಸಚ್ಚಿದಾನಂದ ರೂಪನಾಗಿ ನೀನಿರುವೆ. ಮನ-ಬುದ್ಧಿಗಳು ನಿನ್ನನ್ನು ನಿಲುಕಿಸಿಕೊಳ್ಳಲಾರವು. ನೀನು ತ್ರಿಗುಣಾತೀತನು. ನಿಜವಾದ ನಿನ್ನ ಸ್ವರೂಪವು ಹೀಗಿರಲು ಜೀವನ ಉದ್ಧಾರ ಮಾಡಲು ಸಗುಣ ರೂಪವನ್ನು ಧರಿಸಿ ಬಂದು ಅರಿವನ್ನು ಮಾಡಿಸುವೆ. ಗುರುದೇವನೇ, ಮಾಯೆಯ ಕೈಯಲ್ಲಿ ಸಿಕ್ಕು ನಾನು ಬಹಳ ಬಳಲಿದ್ದೇನೆ. ಅದರಿಂದ ಬಿಡುಗಡೆಯಾಗಬೇಕೆಂದು ನಿನಗೀಗ ಶರಣಾಗತ. ಒಂದು ವೇಳೆ ನೀನೂ ತಿರಸ್ಕರಿಸಿದರೆ ನನ್ನ ಮನುಷ್ಯ ಜನ್ಮ ವ್ಯರ್ಥವಾದಂತೆ. ಕಾರಣ ಸ್ವಾಮಿ, ಪ್ರಪಂಚ ಭ್ರಾಂತಿಯು ಸಮೂಲ ನಾಶವಾಗುವಂತೆ ನನ್ನ ಉದ್ಧಾರಕ್ಕೆ ಉಪಾಯವನ್ನು ತೋರಿಸಬಾರದೇ!'

ಈ ದೈನ್ಯ ವಾಣಿಯನ್ನು ಕೇಳಿ ಸ್ವಾಮಿಗಳಿಗೆ ವೇದನೆಯಾದಂತೆ ತೋರಿತು. ಆದರೂ ಹೊರಗೆ ತೋರದೇ ಸಿದ್ಧನ ಭಕ್ತಿ-ವಿಶ್ವಾಸಾದಿಗಳನ್ನು ನೋಡಬೇಕೆಂದು ಉದಾಸೀನರಂತೆ 'ಸರಿ ಆಚೆಗೆ', ಎಂದು ನುಡಿದರು. ಅದರಿಂದೇನೂ ಸಿದ್ಧನು ನಿರಾಶೆ ಹೊಂದಲಿಲ್ಲ. ಅವರನ್ನು ಹಿಂಬಾಲಿಸಿ ಮಠಕ್ಕೆ ಬಂದು ನಿರಭಿಮಾನದಿಂದ ಗುರುಗಳ ಸೇವೆ ಮಾಡತೊಡಗಿದನು.

ನಿತ್ಯ ಬೆಳಗಿನಲ್ಲಿ ಬೇಗನೆ ಎದ್ದು ಕುದುರೆಯ ಚಾಕರಿ ಮಾಡುವುದು. ಅದರ ಲದ್ದಿ ಬಳಿಯುವುದು. ಕಸ ಬಳಿದು ಸ್ವಚ್ಛ ಮಾಡುವುದು. ಅನಂತರ ಮಠದ ಅಂಗಳವನ್ನು ಉಡುಗಿ ಕಸ ತೆಗೆದು ಹಾಕುವುದು. ಆಮೇಲೆ ಗುರುಗಳ ಸ್ನಾನಕ್ಕೆ ನೀರು ತುಂಬುವುದು. ಅಡಿಗೆಗೆ ಕಟ್ಟಿಗೆ ತಂದು ಒದಗಿಸುವುದು. ಮಧ್ಯಾಹ್ನ ಊಟವಾದ ತರುವಾಯ ಮುಸುರಿಯ ಪಾತ್ರೆ ತೊಳೆಯಲು ನಿತ್ಯ

ನದಿಗೆ ಕೊಂಡೊಯ್ಯುವುದು ಅದರಂತೆ ಗುರುಗಳ ಮನೆಯ ಬಟ್ಟೆಗಳನ್ನು ಮಡಿ ಮಾಡುವುದು.

ಈ ರೀತಿ ಗುರು ಸೇವೆಯನ್ನು ಮಾಡುವುದಲ್ಲದೇ ಮೊದಲೇ ಸೇವೆಗಿಷ್ಟ ಗುರು ಸೇವಕರನ್ನೂ ಬಾಲ ಸಿದ್ಧನು ಬಹಳ ಆದರದಿಂದ ಸೇವಿಸುವನು. ಗುರುಗಳು ಬೇಕಾದಲ್ಲಿ ಕಾಣಲಿ ಸಿದ್ಧನು ಸಾಷ್ಟಾಂಗ ನಮಿಸುವನು. ಗುರುಗಳ ಎದುರಿನಲ್ಲಿ ದಿಟ್ಟತನದಿಂದ ಎಂದೂ ನಡೆಯದೆ ಬಹು ನಮ್ರ ಭಾವದಿಂದ ನಡೆಯುವನು. ಅವನು ಗುರುಗಳ ಮನೆಯಲ್ಲಿ ಊಟ ಮಾಡಲಿಕ್ಕಿಲ್ಲವೆಂಬ ನೇಮವೊಂದನ್ನು ಇಟ್ಟುಕೊಂಡಿದ್ದನು. ಮಧ್ಯಾಹ್ನ ಕಾಲವಾಗಲು ಊರಿನಲ್ಲಿ ಹೋಗಿ ಐದು ಮನೆಯ ಭಿಕ್ಷೆಯನ್ನು ಬೇಡಿ ತಂದು ಗುರುಪ್ರಸಾದವೆಂದು ಉಣ್ಣುವನು. ದೇಹ ಸುಖವನ್ನಂತೂ ಎಂದೂ ಅಪೇಕ್ಷಿಸಲಿಲ್ಲ. ಅನ್ನ-ವಸ್ತ್ರಗಳ ಚಿಂತೆಯಂತೂ ಯಾವಾಗಲೋ ತಪ್ಪಿದ್ದವು. ಜನರು ಇವನ ವೇಷ ನೋಡಿ ದಯೆಯಿಂದ ಕೊಡುವ ಬಟ್ಟೆಗಳನ್ನು ಇವನು ಸ್ವೀಕರಿಸುತ್ತಿರಲಿಲ್ಲ. ಮೂಕನಂತೆ ಮಾತಿಲ್ಲದೇ ಮಠದಲ್ಲಿ ಒಂದು ಮೂಲೆ ಹಿಡಿದು ಕುಳಿತು ಶಾಸ್ತ್ರ ಶ್ರವಣವನ್ನು ಕೇಳುವುದಕ್ಕೆ ಸಿದ್ಧನು ಎಂದೂ ತಪ್ಪಲಿಲ್ಲ.

ಹೀಗಿರಲು ಒಂದು ದಿನ ಆಶ್ಚರ್ಯಕರ ಘಟನೆ ಜರುಗಿತು.

ಒಂದು ದಿನ ಗಜದಂಡ ಸ್ವಾಮಿಗಳ ಕಡೆ ಸುಬ್ಬಯ್ಯ ಶಾಸ್ತ್ರಿಗಳೆಂಬ ಘನ ವಿದ್ವಾಂಸರು ಬಂದರು. ಇವರು ಸಕಲ ಶಾಸ್ತ್ರ ತಿಳಿದವರು. ವೇದಾಂತ ವೇತ್ತರು. ಅಂಥವರ ಸನ್ಮಾನಕ್ಕಾಗಿ ಸಭೆ ನೆರೆದಾಗ ಶಾಸ್ತ್ರಿಗಳು 'ಮಹಾಜನರೇ, ಈಗಿನ ಕಾಲದಲ್ಲಿ 'ಉಪನಿಷತ್' ಎಂಬ ಶಬ್ದಕ್ಕೆ ಅರ್ಥ ಹೇಳುವವರು ಕೂಡ ಭೂಮಿಯ ಮೇಲೆ ಸಿಗದಂತಾಗಿದೆ. ಎಂದ ಮೇಲೆ ವೇದಾಂತ ವಿದ್ಯೆಯ ಅಧಿಕಾರಿಗಳು ಸಿಗುವುದೆಲ್ಲಿಂದ?' ಎಂದು ಮೊದಲಾಗಿ ಭಾಷಣ ಮಾಡಿದರು. ಆ ವಾಗ್ವೈಖರಿಗೆ ಚಕಿತರಾಗಿ ಸಭಾಸದರು ಸುಮ್ಮನೆ ಕುಳಿತರು. ಬಾಲ ಸಿದ್ಧನು ವಿದ್ಯಾ ಮದದಿಂದ ಕೂಡಿದ ಆ ಗರ್ವಿಷ್ಠ ಪಂಡಿತನ ಮಾತಿಗೆ ಮನದಲ್ಲಿಯೇ ನಕ್ಕು ಮೆಲ್ಲನೆ ಎದ್ದು ಬಂದು ಸದ್ಗುರುವಿಗೆ ವಿನಯದಿಂದ ಕೈ ಮುಗಿದು 'ಸ್ವಾಮಿ, ತಾವು ಆಜ್ಞೆ ಕೊಟ್ಟರೆ ಈ ಶಾಸ್ತ್ರಿಗಳ ಮಾತನ್ನು ನಾನು ಖಂಡಿಸಬಲ್ಲೆನು.' ಎಂದು ಪ್ರಾರ್ಥಿಸಲು ಸದ್ಗುರು ಆಗಲೆಂದನು. ಆಗ ಸಿದ್ಧನು ನುಡಿದನು.

'ಶಾಸ್ತ್ರಿಗಳೇ, 'ಉಪನಿಷತ್' ಎಂಬ ಶಬ್ದದಿಂದ ಬ್ರಹ್ಮ ಮತ್ತು ಆತ್ಮರ ಐಕ್ಯವನ್ನು ಹೇಳಿದೆ. ಆ ಕಾರಣದಿಂದಲೇ ಇದಕ್ಕೆ ಬ್ರಹ್ಮವಿದ್ಯೆ ಎಂದು ಹೇಳುವರು. ಉಪನಿಷತ್ತಿನ ವಾಕ್ಯಗಳಿಂದಲೇ ಜೀವನಿಗೆ ಬ್ರಹ್ಮಾತ್ಮೈಕ್ಯದ ಬೋಧವಾಗುವುದರಿಂದ ಇದಕ್ಕೆ ಬ್ರಹ್ಮವಿದ್ಯೆ ಎಂದು ಹೇಳುವುದು ತಪ್ಪಲ್ಲ.'

ಶಾಸ್ತ್ರಿಗಳೆಂದರು- 'ಉಪನಿಷತ್ತುಗಳು ವಿದ್ಯೆ ಎನಿಸುವುದು ಹೇಗೆ?'

'ಮೋಕ್ಷಕ್ಕೆ ಕಾರಣವಾಗಿರುವುದರಿಂದ ಶಮ-ದಮಾದಿ ಗುಣಗಳಿಂದ ಕೂಡಿದ ಶುದ್ಧಾಂತಃಕರಣಿಗಳಾದ ಮೋಕ್ಷಾಪೇಕ್ಷಿಗಳು ಗುರುಗಳು ಉಪದೇಶ ಮಾಡಿದ ಉಪನಿಷತ್ತಿನ ವಾಕ್ಯಗಳನ್ನು ಮನನಮಾಡುವುದರಿಂದಲೇ ಆತ್ಮಜ್ಞಾನವನ್ನು ಪಡೆಯುವರು. ಅದರಿಂದ ಜೀವನಿಗೆ ಗಂಟುಬಿದ್ದ ಅವಿದ್ಯೆಯು ನಾಶವಾಗಿ ಅವನ ಸಂಸಾರ ಬಂಧನವು ಕಳಚುವುದು. ಆದುದರಿಂದ ಉಪನಿಷತ್ತುಗಳು ವಿದ್ಯೆ ಎನಿಸುವವು. ಉಪನಿಷತ್ತು ಮತ್ತು ಜ್ಞಾನವೆಂಬ ಶಬ್ದಗಳು ಸಮಾನಾರ್ಥ ಕೊಡುವಂಥವು. ಅವುಗಳಿಂದಾಗುವ ಪರಿಣಾಮವೂ ಒಂದೇ. ಎಂದರೆ ಜೀವನ ಅವಿದ್ಯೆಯನ್ನು ನಾಶಗೊಳಿಸುವುದು. ಇನ್ನು ಬುದ್ಧಿಯುಳ್ಳ ಜೀವಿಗಳೆಲ್ಲ ಜ್ಞಾನಕ್ಕೆ ಅಧಿಕಾರಿಗಳೆಂದು ಬಲ್ಲವರು ಹೇಳಿರುವುದರಿಂದ ಆ ವಿಷಯದಲ್ಲಿ ನಾವು ಸಂಶಯ ತಾಳುವ ಕಾರಣವೇ ಇಲ್ಲ.'

ಪ್ರೌಢವೂ, ಸಮಂಜಸವೂ ಆದ ಬಾಲಸಿದ್ಧನ ಮಾತುಗಳನ್ನು ಕೇಳಿ 'ಆಹಾ, ಬಹುಜನ್ಮಗಳ ಸಾಧನೆಯ ಫಲವಾಗಿ ಇವನಲ್ಲಿ ಬ್ರಹ್ಮಕಲೆಯು ಬೆಳಗುತ್ತಿದೆ. ವಯೋಮಾನದಿಂದ ನೋಡಿದರೆ ಇಂಥ ವಿದ್ಯಾಶಕ್ತಿ ಇರುವುದು ದುರ್ಲಭವೇ ಸರಿ.' ಎಂದು ನುಡಿದು ಅತ್ಯಾನಂದಿತರಾಗಿ ಎದ್ದು ಹೋದರು. ಬಾಲಸಿದ್ಧನು ಮೊದಲಿನಂತೆ ನಿರಭಿಮಾನಿಯಾಗಿ ತನ್ನ ಮೂಲೆಗೆ ಸರಿದನು.

ಬಾಲಸಿದ್ಧನಿಗಿರುವ ಶಾಸ್ತ್ರಗಳ ಜ್ಞಾನ ಅದಕ್ಕೆ ಶೋಭೆ ಬರುವಂತಿದ್ದ ವಿನಯ-ನಿರಭಿಮಾನ ವೃತ್ತಿಗಳು ಅನನ್ಯ ಭಾವದಿಂದ ಸೇವೆ ಮಾಡುವುದರಲ್ಲಿ ಭಕ್ತಿ ಇವೆಲ್ಲವುಗಳನ್ನು ಕಂಡು ಸದ್ಗುರುನಾಥ ಸಂತೋಷಿಸಿದನು. ಅಂದಿನಿಂದ ಸಿದ್ಧನನ್ನು ಕರೆದು ಬಳಿಯಲ್ಲಿ ಕುಳ್ಳಿರಿಸಿಕೊಂಡು ವೇದಾಂತ ಚರ್ಚೆಗಳನ್ನು ಮಾಡತೊಡಗಿದರು. ಒಂದು ದಿನ ಉಭಯತರಲ್ಲಿ ಸಂವಾದ ಸಾಗಿರಲು ಸಿದ್ಧನು ಪ್ರಶ್ನೆ ಮಾಡಿದನು.

"ಗುರುಗಳೇ, ಷಟ್ ಶಾಸ್ತ್ರಗಳ ಅರ್ಥವು ನಿಶ್ಚಯವಾದವನ ಲಕ್ಷಣಗಳೇನು?"

"ಕೇಳು ಮಗು. ಷಟ್ ಶಾಸ್ತ್ರಗಳ ಅರ್ಥವನ್ನು ಸಾಧನೆಮಾಡಿ ನಿಶ್ಚಯ ಮಾಡಿಕೊಂಡಿರುವವನ ಲಕ್ಷಣ ಹೇಳುವೆನು. ಸಂಶಯ ಮತ್ತು ವಿಪರೀತ ಭಾವನೆಗಳಿಲ್ಲದ ಜ್ಞಾನವು ಅವನಲ್ಲಿ ನೆಲೆಗೊಂಡಿರುವುದು."

"ಜೀವ ಮತ್ತು ಬ್ರಹ್ಮ ಎಂಬ ದ್ವೈತ್ಯವು ಸ್ಪಷ್ಟವಿರಲು ಉಭಯತರ ಐಕ್ಯವು ಹೇಗೆ?"

"ಜೀವನಿಗೆ ದೇಹೋऽಹಂ (ದೇಹವೇ ನಾನು) ಎಂಬ ಬುದ್ಧಿಯು ಇರುವವರೆಗೆ ಮಾತ್ರ ದ್ವೈತ ಪ್ರಪಂಚವು ಇರತಕ್ಕದುದೇ. ಶ್ರವಣ ಮನನ ಮೊದಲಾದ ಸಾಧನಗಳಿಂದ ಆ ಬುದ್ಧಿಯು ನಷ್ಟವಾಗಿ ದೇಹಾಭಿಮಾನವಳಿದ ನಂತರ ಐಕ್ಯ ಜ್ಞಾನವು ಸಹಜವಾಗಿಯೇ ಆಗುವುದು."

"ಇದೆಲ್ಲ ಪ್ರಪಂಚವು ಪ್ರತ್ಯಕ್ಷವಾಗಿ ಕಾಣುತಿರಲು ಮಿಥ್ಯೆ ಎಂದು ಇದನ್ನು ಹೇಗೆ ತಿಳಿಯಬೇಕು?" "ಒಳ್ಳೇದು ಈ 'ಪ್ರತ್ಯಕ್ಷ'ವೆಂಬುದು ಇಂದ್ರಿಯಗಳಿಗೋ, ಬುದ್ಧಿವೃತ್ತಿಗಳಿಗೋ, ಚೈತನ್ಯಕ್ಕೋ ?

ಇಂದ್ರಿಯಗಳಿಗೆ ಎಂದರೆ ಸ್ವತಃ ಇಂದ್ರಿಯಗಳು ಜಡ. ಅವು ಜಡವಾದ ಭೂತವನ್ನು ವ್ಯಾಪಿಸಿ ಜ್ಞಾನ ಹೊಂದಲಾರವು. ಇನ್ನು ಬುದ್ಧಿ ವೃತ್ತಿಗಳಿಗೆ ಎಂದರೆ ಅವು ಕೂಡ ಜಡವೆನಿಸುವುದರಿಂದ ಜ್ಞಾನ ಪಡೆಯುವುದು ಅಸಂಭವ. ಜಡವಾದ ವೃತ್ತಿಗಳು ಒಂದು ಜಡವೆನಿಸುವ ಘಟವನ್ನು ವ್ಯಾಪಿಸಿದವೆಂದು ತಿಳಿ. ಇದರಿಂದ ಏನು ಜ್ಞಾನವಾದಂತಾಯಿತು? ಘಟದಂತೆ ಜಡವೆನಿಸುವ ಒಂದು ವಸ್ತ್ರವನ್ನು ಘಟದ ಮೇಲೆ ಹೊದಿಸಿದರೆ ಆ ವಸ್ತ್ರವು ಎಂದಾದರೂ ಘಟವನ್ನು ತಿಳಿಯಬಲ್ಲದೇ? ಕೊನೆಗೆ ಚೈತನ್ಯಕ್ಕೆ ಎಂದರೆ ಅದು ಸಹಜವಾಗಿಯೇ ಒಳ ಹೊರಗೆಲ್ಲ ವ್ಯಾಪಿಸಿಕೊಂಡಿರುವುದು. ವಿಷಯಗಳಲ್ಲಿ ಹಾಗೂ ವೃತ್ತಿಗಳಲ್ಲಿ ಇರುವ ಚೈತನ್ಯ ಒಂದೇ ಒಂದು ಎಂದ ಮೇಲೆ ಜಗತ್ತು ಪ್ರತ್ಯಕ್ಷವಾಗಿದೆ ಎಂದು ಹೇಳಲು ಬರುವುದಿಲ್ಲ."

ಹೀಗೆ ಸದ್ಗುರು ವಚನಾಮೃತವನ್ನು ಸವಿದ ಸಿದ್ಧನು ಒಮ್ಮೆಲೇ 'ಸದ್ಗುರುದೇವ' ಕರ್ಮಕಾಂಡಕ್ಕನುಸಾರವಾಗಿ ಲಿಂಗ ಧಾರಣೆಯಾಗಿತ್ತು. ಈಗ ಜ್ಞಾನಕಾಂಡದಲ್ಲಿ ಸಂಚಾರ ಪ್ರಾರಂಭವಾಯಿತು. ಇನ್ನು ಲಿಂಗವನ್ನು ಧರಿಸಿಕೊಂಡಿರುವುದು ವ್ಯರ್ಥವೇ ಸರಿ ಎಂದು ನುಡಿದು ಲಿಂಗವನ್ನು ತೆಗೆದು ಗುರು ಚರಣಗಳಿಗೊಪ್ಪಿಸಿದನು. ಆಗ ಗಂಭೀರನಾಗಿ ಗುರುವು 'ಇದು ಶಾಸ್ತ್ರ

ವಿರುದ್ಧ ಕೆಲಸವು' ಎನ್ನಲು ಸಿದ್ಧನು 'ಚೈತನ್ಯಮಯನಾದವನಿಗೆ ಕರ್ಮ ಲಾಂಛನಗಳಿಂದಾಗಬೇಕಾದುದೇನು? ಜ್ಞಾನ ಹೊಂದಿದವನು ಅಜ್ಞರ ಕರ್ಮಾಚರಣೆಗಳನ್ನು ಪಾಲಿಸುವ ಅವಶ್ಯಕತೆ ಇಲ್ಲ. ಅವನ ಕರ್ಮವೆಲ್ಲ ಮುಗಿದು ಹೋಯಿತೆಂದು ಐತರೇಯ ಮೊದಲಾದ ಶ್ರುತಿಗಳಲ್ಲಿ ಹೇಳಿದೆ. ಯಥಾರ್ಥವಾದ ಜ್ಞಾನವನ್ನು ಪಡೆದವನು. ಅನಾಶ್ರಮಿ, ಅಗೋತ್ರ, ಅನಾವರಣ, ಅಕರ್ಮರೂಪ, ಅದೇಹ ಎಂದು ಹೇಳುವದರಲ್ಲಿ ಕರ್ಮಾಚರಣೆ ನಡೆಯುವುದಾದರೂ ಹೇಗೆ? ಕರ್ಮವು ನಡೆಯಬೇಕಾದರೆ ದೇಹಾಭಿಮಾನವಿರಬೇಕು. ಕರ್ಮಫಲದ ಆಶೆ ಇರಬೇಕು. ಮತ್ತು ಕರ್ಮ ಬಿಟ್ಟರೆ ಏನಾಗುವುದೋ ಎಂಬ ಭಯವುಳ್ಳವನಾಗಿರಬೇಕು. ಜ್ಞಾನಿಯಾದವನಲ್ಲಿ ಮೂರೂ ಇರುವುದಿಲ್ಲ.' ಎಂದು ನುಡಿಯಲು ಸದ್ಗುರುವು ಪೂರ್ಣವಾಗಿ ಶಿಷ್ಯನು ನಿರ್ಗುಣಾರೂಢನಾದನೆಂದು ತಿಳಿದನು. ಮತ್ತು ಇವನಿಗೆ ಸಿದ್ಧಾರೂಢನೆಂಬ ಹೆಸರು ಶೋಭಿಸುವುದೆಂದು ಭಾವಿಸಿ ನುಡಿದನು.

'ಎಲೈ ಸಿದ್ಧಾರೂಢನೇ, ನೀನಿನ್ನು ನನಗೆ ಸಮಾನನಾದೆ. ನಿನಗೆ ದೊರೆತ ಜ್ಞಾನವು ಶ್ರೀ ಮಲ್ಲಿನನ ಪ್ರಸಾದರೂಪವಾಗಿ ಬಹುಕಾಲ ಮುಮುಕ್ಷುಗಳ ಉದ್ಧಾರಕ್ಕಾಗಿ ನಿನ್ನ ಹೃದಯದಲ್ಲಿ ಬೆಳಗುತಿರಲಿ, ಎಂದು ಗಜದಂಡ ಸ್ವಾಮಿಗಳು ಎದೆತುಂಬಿ ನುಡಿಯುತ್ತ ಬಾಲಸಿದ್ಧನನ್ನು ಅಪ್ಪಿಕೊಂಡು ಆನಂದ ಬಾಷ್ಪಗಳನ್ನು ಸುರಿದರು. ಸಿದ್ಧನಿಗೆ ಆಗ ಕೊರಳಸೆರೆ ಬಿಗಿದು ಬಂದವು. ಪ್ರಯಾಸದಿಂದ ಅಂದನು. 'ಸದ್ಗುರುನಾಥನೇ, ತಂದೆಯೇ, ನನ್ನನ್ನು ಕೃತಾರ್ಥಗೊಳಿಸಿದೆ. ನಿನ್ನ ಕೃಪೆಯಿಂದ ಉದ್ಧಾರ ಹೊಂದಿದೆ. ನಿನಗೋಸುಗ ಇಂದಿನವರೆಗೆ ನಾನು ಪಟ್ಟ ದುಃಖವು ಈಗ ಪರಿಹಾರವಾದಂತಾಯಿತು. ಆಹಾ, ಸದ್ಗುರು ಕೃಪೆಯ ಮಹತ್ವವೆಷ್ಟು?' ಎಂದು ಹರ್ಷಾಶ್ರುಗಳನ್ನುದುರಿಸುತ್ತ ಸಿದ್ಧನು ನುಡಿಯುತಿರಲು ಗುರುವು ಪ್ರೇಮ ಭರದಿಂದ ಪುನಃ ಅಪ್ಪಿದನು. ಆನಂದಾಮೃತ ಸಾಗರದಲ್ಲಿ ಗುರು-ಶಿಷ್ಯರು ಒಂದಾದರು.

೫

ತೀರ್ಥೇ ತೀರ್ಥೇ ನಿರ್ಮಲಂ ಬ್ರಹ್ಮವೃಂದಮ್ ।
ವೃಂದೇ ವೃಂದೇ ತತ್ವಚಿಂತಾನುವಾದಃ ॥
ವಾದೇ ವಾದೇ ಜಾಯತೇ ತತ್ವಬೋಧೋ ।
ಬೋಧೇ ಬೋಧೇ ಜಾಯತೇ ಚಂದ್ರಚೂಡಃ ॥

—ಶುಕಗೀತ

ತೀರ್ಥ ತೀರ್ಥಗಳಲ್ಲಿಯೂ ನಿರ್ಮಲರಾದ ಬ್ರಹ್ಮಜ್ಞಾನಿಗಳ ಸಮೂಹವು. ಆ ಸಮೂಹದಲ್ಲಿ ಬ್ರಹ್ಮ ಚಿಂತನೆಯ ಮಾತು ಕಥೆಗಳು. ವಾದ-ಪ್ರತಿವಾದದಲ್ಲಿ ತತ್ವಬೋಧವು ಉಂಟಾಗುವುದು. ಬೋಧದಲ್ಲಿ ಚಂದ್ರಚೂಡನೆನಿಸಿದ ಶಿವನು ಬೆಳಗುವನು.

ಗಜದಂಡ ಸ್ವಾಮಿಗಳು ಕೊನೆಗೆ ತಮ್ಮ ಶಿಷ್ಯನನ್ನು ಅನುಗ್ರಹಿಸಿ 'ಸಿದ್ಧಾರೂಢ'ನೆಂದು ಅಧಿಕಾರಕ್ಕೊಪ್ಪುವ ಹೆಸರಿಟ್ಟು ಹರಿಸಿ ಹೇಳಿದರು. 'ಶಿಷ್ಯೋತ್ತಮನೇ, ನೀನು ಜ್ಞಾನಿ. ಆ ಜ್ಞಾನಾನಂದವನ್ನು ನೀನೊಬ್ಬನೇ ಸವಿದರೆ ಸಾಲದು. ಮುಮುಕ್ಷುಗಳಾದವರಿಗೆ ಅದನ್ನು ಬೀರಬೇಕು. ಆಗ ಮಾತ್ರ ಜ್ಞಾನ ಪಡೆದುದು ಸಾರ್ಥಕ. ಇನ್ನು ನೀನು ತೀರ್ಥಾಟನೆಗೆ ತೆರಳು. ಅಲ್ಲಿ ನೆಲೆಸಿರುವ ಸಾಧು-ಸಜ್ಜನರನ್ನು ಕಂಡು ಆತ್ಮ ಚರ್ಚೆಯನ್ನು ಮಾಡು. ಅವರ ಸಂದೇಹಗಳನ್ನು ನಿವಾರಿಸು. ನೀನೂ ಆತ್ಮಜ್ಞಾನ ದೃಢಪಡಿಸಿಕೋ.' ಎನ್ನಲು ಸಿದ್ಧನು ಸಮ್ಮತಿಸಿ ಸ್ವಾಮಿಗಳ ಆಜ್ಞೆ ಪಡೆದುಕೊಂಡು ತೀರ್ಥಾಟನೆಗೆ ತೆರಳಿದನು.

ಮೊದಲು ಕಿಷ್ಕಿಂಧೆ, ತರುವಾಯ ಪಂಪಾ ವಿರೂಪಾಕ್ಷನ ದರ್ಶನ ಪಡೆದುಕೊಂಡು ಹೇಮಕೂಟ ಪರ್ವತವನ್ನೇರಿದನು. ಅಲ್ಲಿ ನಾಗಲಿಂಗನ ದೆಂದು ಹೆಸರಾದುದೊಂದು ಗುಹೆ. ಸಾಧನೆಗೆ ಅನುಕೂಲವಾಗಿತ್ತು. ಅದನ್ನು ಕಂಡು ಸಿದ್ಧನು ಬಹಳ ಸಂತಸಪಟ್ಟು ಆ ಏಕಾಂತ ಸ್ಥಳದಲ್ಲಿ ಸಮಾಧಿಯ ಅಭ್ಯಾಸ ಮಾಡತೊಡಗಿದನು. ಕ್ರಮವಾಗಿ ಒಂದೊಂದೇ ಭೂಮಿಕೆಯನ್ನು ಸಾಧಿಸುತ್ತ ಕೆಲ ದಿನಗಳಲ್ಲಿ ಸಪ್ತ ಭೂಮಿಕೆಗಳನ್ನು ಮುಟ್ಟಿ ಸಂಪೂರ್ಣ ಯೋಗವನ್ನು ವಶಮಾಡಿಕೊಂಡನು. ಪುನಃ ಪಂಪಾಕ್ಷೇತ್ರಕ್ಕೆ

ಬಂದು ವಿರೂಪಾಕ್ಷ ದರ್ಶನ ಪಡೆದು ವಸಿಷ್ಠಾಶ್ರಮಕ್ಕೆ ತೆರಳಿ ಅಲ್ಲಿ ಮೂರು ದಿನ ಆನಂದಮಗ್ನ ಸ್ಥಿತಿಯಲ್ಲಿ ಕಳೆದನು.

ತರುವಾಯ ಗಂಧಮಾದನ ಪರ್ವತವನ್ನು ಕಂಡು ಅಲ್ಲಿರುವ ಋಷಿಗಳ ಆಶ್ರಮಗಳ ದರ್ಶನ ಹೊಂದುತ್ತ ಸ್ಫಟಿಕ ಶಾಲೆಯನ್ನು ಕಾಣಬೇಕೆಂದು ಇಚ್ಛಿಸಿದನು. ಮತ್ತು ಇದು ನಿಜವಾಗಿಯೂ ತಪೋ ಭೂಮಿಯೇ? ನೋಡುವ ಎಂದುಕೊಂಡು ಅಲ್ಲಿ ಒಂಭತ್ತು ದಿನಗಳವರೆಗೆ ಉಳಿದನು. ಆ ಸಮಯದಲ್ಲಿ ಒಂದು ಅನ್ನದ ಅಗಳು ಮಾತ್ರವಾದರೂ ಅವನ ಹೊಟ್ಟೆ ಕಂಡಿರಲಿಲ್ಲ. ಅದರಂತೆ ಹಸಿವೆಯ ಬಾಧೆಯೂ ಅವನಿಗಾಗಲಿಲ್ಲ. ಸಂಶಯ ಮತ್ತು ವಿಪರೀತ ಭಾವನೆಗಳು, ಲಯ ಹಾಗು ವಿಕ್ಷೇಪಾದಿ ಯೋಗ ವಿಘ್ನಗಳು ಇವು ಯಾವವೂ ಉಳಿಯದ್ದರಿಂದ ಚಿತ್ತವೃತ್ತಿಗಳ ಪ್ರವಾಹವು ಬ್ರಹ್ಮಸಾಗರದ ಕಡೆಗೆ ನಿರಾತಂಕವಾಗಿ ಹರಿಯತೊಡಗಿತು. ಇವೆಲ್ಲ ತಪೋ ಭೂಮಿಯ ಲಕ್ಷಣಗಳೆಂದು ಭಾವಿಸಿ ಸಿದ್ಧನು ತಪೋ ಭೂಮಿ ಎಂದು ಬಗೆದನು.

ಹಾಗೇ ಸಂಚರಿಸುತ್ತ ಪಂಪಾ ಸರೋವರ ಅಲ್ಲಿ ಸ್ನಾನವನ್ನು ಮಾಡಿಕೊಂಡು ಶ್ರೀರಾಮನನ್ನು ವಂದಿಸಿ ಚಕ್ರತೀರ್ಥ ವಾಲಿಯ ಭಾಂಡಾರಗಳನ್ನು ಕಂಡನು. ಆ ಮೇಲೆ ಚಿಂತಾಮಣಿ ಆಶ್ರಮಕ್ಕೆ ಬರುತ್ತಿರಲು ಅಲ್ಲಿ ಅನೇಕ ಸತ್ಪುರುಷರು ಕಂಡರು. ಅವರೊಡನೆ ಆತ್ಮ ಚರ್ಚೆ ಮಾಡುತಿರಲು ಒಬ್ಬ ಸತ್ಪುರುಷರು ಸಿದ್ಧನನ್ನು ಪ್ರಶ್ನಿಸಿದರು. 'ಆತ್ಮನೆಂದರೆ ಯಾರು?' ಎಂದು ವಿಚಾರ ಮಾಡುತಿರಲು ಶಾಸ್ತ್ರ ಸಂಸ್ಕಾರವಿಲ್ಲದ ಮೂಢನೊಬ್ಬನು 'ಪ್ರತ್ಯಕ್ಷವಾಗಿ ಕಾಣುತಿರಲು ದೇಹವನ್ನು ಬಿಟ್ಟರೆ ಆತ್ಮನೆಲ್ಲಿ ಬರುತ್ತಾನೆ. ದೇಹವೇ ನಾನೆಂದು ಎಲ್ಲರೂ ತಿಳಿಯುತ್ತಾರೆ. ಆದುದರಿಂದ ದೇಹವೇ ಆತ್ಮ.' ಎಂದನು. ಆಗ ಬೇರೊಬ್ಬನು 'ನೀನು ದೇಹವನ್ನು ಕಂಡು ಅದಕ್ಕೆ ನಾನೆನ್ನುವೆಯಾ? ಅಥವಾ ಅಜ್ಞಪ್ತಿ ರೂಪವಾದ ದೇಹಕ್ಕೆ ನಾನು ಎನ್ನುವೆಯ ಹೇಳು ನೋಡುವ ದೇಹವನ್ನು ಕಂಡು ಆತ್ಮನೆನ್ನುವೆನು. ಎಂದರೆ ನೀನು ಬೇರೆ ದೇಹ ಬೇರೆ ಎಂದಂತಾಯಿತು. ಹೀಗಾದ ಮೇಲೆ ದೇಹವು ನೀನು ಹೇಗಾದೆ? ಅಜ್ಞಪ್ತಿ ರೂಪವಾದುದಕ್ಕೆ ಆತ್ಮನೆನ್ನುವಿಯಾ? ಸ್ನಾನ-ಭೋಜನವೇ ಮೊದಲಾದ ಕರ್ಮಗಳ ಸಂಬಂಧವೇ ಉಳಿಯಲಾರದು. ಎನ್ನಲು ಪ್ರಶ್ನೆ ಕೇಳಿದವನು ನಿರುತ್ತರನಾದನು.

ಹೀಗೆ ಅಲ್ಲಿರುವವರು ಆತ್ಮ ಚರ್ಚೆಯಲ್ಲಿ ತೊಡಗಿ ಮನಸ್ಸು-ಬುದ್ಧಿ-ಆನಂದ ಮೊದಲಾದವುಗಳತ ಆತ್ಮತ್ವವನ್ನಾರೋಪಿಸಿ ವಾದ-ವಿವಾದ ಮಾಡುತ್ತಿದ್ದರು. ಕೆಲವರು ಉತ್ತರವನ್ನು ಕೊಡುತ್ತಿದ್ದರು. ಕೊನೆಗೆ ಶೂನ್ಯವಾದಿಯೊಬ್ಬನು ಅಂದನು. ನಿಮ್ಮ ಮಾತು ನಿಲ್ಲಿಸಿರಿ. ನಿದ್ರೆಯಕಾಲದಲ್ಲಿ ನಮಗೆ ಏನೂ ತಿಳಿಯುವುದಿಲ್ಲ. ಆದುದರಿಂದ ಆತ್ಮನು ನಾಸ್ತಿ ರೂಪನೆನ್ನಬೇಕು.

ಇವನ ಮಾತು ಕೇಳಿ ಅದುವರೆಗೆ ಮೌನನಾಗಿದ್ದ ಸಿದ್ಧನು ಮುಂದೆ ಬಂದು ವಿಚಾರಿಸಿದನು. 'ಎಲೈ ವಾದಿಯೇ, ಆ ನಾಸ್ತಿತ್ವವನ್ನು ನೀನು ತಿಳಿದು ಹೇಳುವಿಯ ? ಅಥವಾ ತಿಳಿಯದೆ ಹೇಳುವಿಯ ? ತಿಳಿದು 'ನಾಸ್ತಿ' ಎಂದು ಹೇಳುವೆನು. ಎಂದರೆ ನಿನ್ನ 'ಆಸ್ತಿ' ರೂಪವು ಇರಲೇಬೇಕು. ಬುದ್ಧಿಗೆ ಸಾಕ್ಷಿಯಾದವನೇ ಆತ್ಮನೆಂದು-ಬ್ರಹ್ಮನೆಂದು ವೇದಗಳು ಹೇಳುತ್ತವೆ. ಆತ್ಮನ ವಿಷಯದಲ್ಲಿ ಇಲ್ಲವೆಂಬ ಮಾತೇ ಸಲ್ಲದು.

ಸಿದ್ಧನ ಮಾತು ಕೇಳಿ ಅವರೆಲ್ಲರು ಬಹಳ ಸಂತೋಷ ಹೊಂದಿದರು ಮತ್ತು ಅವನನ್ನು ಆ ದಿನ ಅಲ್ಲಿಯೇ ನಿಲ್ಲಿಸಿಕೊಂಡು ಬಹಳ ವಿಧವಾಗಿ ಗೌರವಿಸಿ ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ಮರುದಿನ ಆ ಸ್ಥಳದಿಂದ ಹೊರಟು ಸಿದ್ಧನು ತಿರುಪತಿ ಕ್ಷೇತ್ರಕ್ಕೆ ಬಂದು ಶ್ರೀ ವೆಂಕಟೇಶನ ದರ್ಶನ ಪಡೆದು ಬೇರೆ ಕಡೆಗೆ ನಡೆದನು.

ಹೀಗೆ ತೀರ್ಥಯಾತ್ರೆಯು ಸಾಗಿರಲು ಅನೇಕ ದೇಹ ಪೀಡೆಗಳು ಕಾಡತೊಡಗಿದವು. ಬ್ರಹ್ಮ ಚಿಂತನದಲ್ಲಿ ಮಗ್ನವಾದ ಸಿದ್ಧನು ಅವುಗಳಿಗೆ ಮಹತ್ವವನ್ನೇ ಕೊಡಲಿಲ್ಲ. ಮೈ ಮುಚ್ಚುವಷ್ಟು ಒಂದು ತುಂಡು ಬಟ್ಟೆ ಭಿಕ್ಷೆಗೆ ಕರತಲವೇ ಪಾತ್ರ. ಮಲಗಲು ಹಾಸಿಕೆ ಭೂಮಿ ಮಾತ್ರ. ಕತ್ತಲೆಯಲ್ಲಿ ವಸತಿ. ಇವನ ರೀತಿ ನಡತೆ ಕಂಡ ಜನ ಬೇಕಾದಂತೆ ಆಡಿಕೊಳ್ಳುವರು.

ಇವನು ಯಾರೋ ಉನ್ಮತ್ತ ರೋಗಿ ಇರಬೇಕು. ಎನ್ನುತ್ತ ಕೆಲವರು ಕಲ್ಲು ಬೀಸುವರು.

ಯಾವ ರೋಗವೋ ಏನೋ ಎಲುಬಿನ ಹಂದರವಾಗಿದ್ದಾನೆ. ಅವನ ಸಂಗತಿ ಏನು ? ಎಂದು ಸನಿಹಕ್ಕೆ ಬರಗೊಡರು.

ಯಾವ ಕುಲವೋ ಏನು ಕಥೆಯೋ? ಇವನ ಸಹವಾಸವೇ ಬೇಡ ಎಂದು ದೂರವಿಡುವರು.

ಇವನ ನಿರಿಚ್ಛ ವೃತ್ತಿಯನ್ನು ಕಂಡರೆ ಯಾರೋ ಜ್ಞಾನಿಯಂತೆ ಕಾಣುತ್ತಾನೆ. ಇಂಥವರ ಸತ್ಕಾರ ಮಾಡುವುದಕ್ಕೂ ಪುಣ್ಯಬೇಕು. ಎನ್ನುವವರು ಅನ್ನ-ನೀರು ಕೊಡುವರು.

ಆದರೆ ಸಿದ್ಧನು ಯಾವುದನ್ನೂ ಲಕ್ಷಿಸದೇ ಶಿವಕಾಂಚಿಗೆ ಬಂದು ತಲುಪಿ ಅಲ್ಲಿ ಪರಶಿವನ ದರ್ಶನ ಪಡೆದನು. ಅಲ್ಲಿಂದ ವಿಷ್ಣುಕಂಚಿಯನ್ನು ಕಂಡು ಅಲ್ಲಿ ವರದರಾಜನ ದರ್ಶನ ಪಡೆಯಬೇಕೆಂದು ಸಿದ್ಧನು ಸಾಗಿರಲು ಮಾರ್ಗದಲ್ಲಿ ಒಬ್ಬ ಬ್ರಾಹ್ಮಣನು ಇವನನು ನೋಡಿ, ಆಹಾ, ಇವನು ಯಾರೋ ಜ್ಞಾನಿಯಾಗಿರಬೇಕು. ಜಡಭರತನಂತಿದ್ದಾನೆ. ನಿಸ್ಪೃಹವಾದ ವೃತ್ತಿ ಏನು? ಉನ್ಮತ್ತವಾದ ಚರ್ಯೆ ಏನು? ಇವರನ್ನು ಸತ್ಕರಿಸದೇ ಬಿಡಬಾರದು.

ಎಂದುಕೊಂಡು ವಿನಯದಿಂದ ಕೈಹಿಡಿದು ಮನೆಗೆ ಕರೆ ತಂದನು. ಉಚಿತಾಸನವಿತ್ತು ಗಂಧ-ಮಾಲ್ಯಗಳಿಂದ ಪೂಜಿಸಿ ಹಾಲು-ಹಣ್ಣುಗಳನ್ನಿತ್ತು ಪೂಜಿಸಿ ಕೈಮುಗಿದು ಪ್ರಾರ್ಥಿಸಿದನು. 'ಮಹಾತ್ಮರೇ, ಬ್ರಹ್ಮಜ್ಞಾನಿಗಳ ಪೂಜೆ-ದರ್ಶನಗಳು ಶೀಘ್ರವಾಗಿ ಫಲ ಕೊಡುವವೆಂದು ಹೇಳುವವರಲ್ಲ.'

'ಅದು ನಿಜ. ಸತ್ಯವಾಗಿ ನೀನು ಯಾರೆಂದು ಈಗ ಹೇಳಬಲ್ಲೆಯ?'

'ಈ ಇದೇ ತಮ್ಮೆದುರಿಗಿರುವ ದೇಹವೇ ನಾನು.'

'ಪಂಚಭೂತಾತ್ಮಕವಾದ ದೇಹವನ್ನು ಆ ಮಹಾ ಭೂತಗಳಲ್ಲಿ ಹಂಚಿಬಿಟ್ಟರೆ ನೀನು ನಿತ್ಯ ನಿರ್ಮಲನಾಗಿ ಉಳಿಯುವೆ. ಈಗ ನೀನು ಯಾರು?'

'ನಾನು ಪ್ರಾಣ ಮನೋಬುದ್ಧಿಗಳಿಂದ ಕೂಡಿಕೊಂಡು ಅನೇಕ ಲೋಕಗಳಲ್ಲಿ ಸಂಚರಿಸುವವನು.'

'ಗಾಢ ನಿದ್ರೆಯಲ್ಲಿ ಬುದ್ಧಿಯು ಲಯವಾಗುವುದು. ಆಗ ನೀನು ಯಾರಾಗಿರುವೆ?'

'ನಾನು ತಿಳಿಯೆ.'

'ತಿಳಿಯನೆಂದು ತಿಳಿದು ಹೇಳುತಿರುವೆಯಲ್ಲ ಹುಚ್ಚನೇ. ಭಾವಾಭಾವಗಳ ಸಾಕ್ಷಿರೂಪ ನೀನು. ಆ ಸ್ವರೂಪ ಮಾತಿಗೆ ನಿಲುಕದು.'

ಎಂದು ಸಿದ್ಧನು ನುಡಿಯಲು ಆ ಜ್ಞಾನ ರೂಪವನ್ನು ಬ್ರಾಹ್ಮಣನು ಅನುಭವಕ್ಕೆ ತಂದುಕೊಂಡು ಮಹಾತ್ಮರ ದರ್ಶನವು ತತ್ಕಾಲಕ್ಕೆ ಫಲಿಸಿ,

ವುದು ಎಂಬುದನ್ನು ನಾನು ನಿದರ್ಶನ ಮಾಡಿಕೊಂಡೆನು, ಎನ್ನುತ್ತ ಸಿದ್ಧ ನನ್ನು ಪುನಃ ಪುನಃ ವಂದಿಸಿದನು.

ಆ ಸ್ಥಳದಿಂದ ಹೊರಟ ಸಿದ್ಧನು ವರದರಾಜನ ದರ್ಶನಮಾಡಿಕೊಂಡು ಚಿದಂಬರಕ್ಕೆ ಬರುತ್ತ ಅಲ್ಲಿಯ ರಹಸ್ಯ ಸ್ಥಾನಗಳನ್ನು ನೋಡಿಕೊಂಡನು. ತರುವಾಯ ಮುಂದೆ ಸಾಗಿರಲು ಸಿದ್ಧನಿಗೆ ಪರ್ಜನ್ಯನು ಸ್ನಾನ ಮಾಡಿಸು ವನು. ಸೂರ್ಯನು ಮೈಯೊಣಗಿಸುವನು. ಸ್ವತಃ ಸಿದ್ಧನು ಅದಕ್ಕಾಗಿ ಯಾವ ಪ್ರಯತ್ನಗಳನ್ನೂ ಮಾಡುತ್ತಿರಲಿಲ್ಲ. ದಯಾವಂತರಾದವರು ಯಾರಾದರೂ ತುಸು ಅನ್ನ ಕೊಡಬೇಕು. ಇವನಿಗೆ ದೇಹದ ಪರಿವೆಯೇ ಇರಲಿಲ್ಲ. ಪೂಜೆ ಏನು? ತಿರಸ್ಕಾರವೇನು? ಎಲ್ಲವೂ ಇವನಿಗೆ ಸಮ. ಹೀಗಿರಲು ಕುಂಭಕೋಣದಲ್ಲಿ ಕುಂಭೇಶ್ವರ, ತಂಜಾವರದಲ್ಲಿ ತಂಜೇಶ್ವರ ದರ್ಶನ ಮಾಡಿಕೊಂಡು ಶ್ರೀರಂಗ ಕ್ಷೇತ್ರಕ್ಕೆ ನಡೆದಿದ್ದನು. ಮಾರ್ಗದಲ್ಲಿ ಒಬ್ಬ ಒಕ್ಕಲಿಗನು ಪ್ರಶ್ನೆ ಮಾಡಿದನು.

'ಏನಯ್ಯ ನಿನ್ನನ್ನು ಕಂಡರೆ ಹೆಣದಂತೆ ತೋರುತಿರುವೆ. ನಡಿಗೆ ಮಾತ್ರ ಗಾಳಿಯಂತೆ. ಒಂದು ವೇಳೆ ತಿಂದುಂಡು ಪುಷ್ಟನಾಗಿದ್ದರೆ ಹೇಗೆ ನಡೆ ಯುತ್ತಿದ್ದೆಯೋ.'

ಸಿದ್ಧ ಉತ್ತರ ಕೊಟ್ಟನು.

'ಅನ್ನವನ್ನು ಹೆಚ್ಚು ತಿಂದರೆ ಶಕ್ತಿ ಬರುವುದಿಲ್ಲ. ಸರ್ವಾಧಿಕಾರವೆನಿ ಸಿದ ಬ್ರಹ್ಮನಲ್ಲಿ ಮನವಿಟ್ಟಾಗ ಮಾತ್ರ ಶಕ್ತಿ ಬರುತ್ತದೆ.'

ಮುಂದೆ ಶ್ರೀರಂಗ ಜಂಬುಕೇಶ್ವರರ ದರ್ಶನ ಮಾಡಿಕೊಂಡು ಮೀನಾಕ್ಷಿ ಯನ್ನು ಕಾಣಲೆಂದು ಮಧುರಾ ಪಟ್ಟಣಕ್ಕೆ ಸಿದ್ಧನು ಬಂದನು. ಅಲ್ಲಿ ದರ್ಶನ ಪಡೆಯಲಿಕ್ಕೆಗುಡಿಯಲ್ಲಿ ಪ್ರವೇಶ ಮಾಡುತ್ತಿರಲು ಒಬ್ಬ ಬ್ರಾಹ್ಮಣನು ಇವನನ್ನು ತಡೆದು 'ನೀನು ಪರಮ ಚಾಂಡಾಲ ಒಳಗೆ ಪ್ರವೇಶಿಸುವಂತಿಲ್ಲ' ಎಂದು ಪ್ರತಿ ಬಂಧ ನೀಡಲು ಸಿದ್ಧನು 'ಸರಿಯಾಯಿತು, ನಿನ್ನಲ್ಲಿ ಕ್ರೋಧರೂಪಿಯಾದ ಚಾಂಡಾಲನೊಬ್ಬ, ದ್ರವ್ಯದ ಆಶಾ ರೂಪಿಯಾದ ಚಂಡಾಲನೊಬ್ಬ, ನಿರಾಶಾ ರೂಪೀ ಚಾಂಡಾಲನೊಬ್ಬ ಹೀಗೆ ಮೂವರಿರುವರಲ್ಲ.' ಎನ್ನಲು ಬ್ರಾಹ್ಮ ಣನ ಬಾಯೊಣಗಿ ಮಾತಿಲ್ಲದೆ ಕ್ಷಣ ನಿಂತು ನಂತರ ಕಷ್ಟದಿಂದ ನುಡಿದನು.

'ನನಗೆ ಅನುಷ್ಠಾನ, ನಿನ್ನೊಡನೆ ಮಾತಾಡಬಾರದಿತ್ತು.'

'ಈಗ ಕರ್ಮಭ್ರಷ್ಟನಾದೆಯಲ್ಲ, ನಾಲ್ಕನೆಯ ಚಾಂಡಾಲನೊಬ್ಬನು ನಿನ್ನ ದೇಹದಲ್ಲಿ ಪ್ರವೇಶ ಮಾಡಿದಂತಾಯಿತು.'

ಸಿದ್ಧನ ಮಾತು ಕೇಳಿ ಬ್ರಾಹ್ಮಣನು ಗಡಗಡ ನಡುಗಿ ಅನುತಾಪದ ಧ್ವನಿಯಲ್ಲಿ 'ಕಾಪಾಡು, ಕಾಪಾಡು' ಎನ್ನುತ್ತ ಸಿದ್ಧನ ಪಾದಗಳಲ್ಲುರುಳಿದನು. ಸಿದ್ಧನು ಕರುಣೆಯಿಂದ ನೋಡಲು ಮೆಲ್ಲನೆ ಎದ್ದು ಮನೆಗೆ ನಡೆದನು. ನಿರಾತಂಕವಾಗಿ ಸಿದ್ಧನು ಮೀನಾಕ್ಷಿಯ ಪೂಜೆ ಮೊದಲಾದವನ್ನು ನೋಡಿಕೊಂಡು ಕಾವೇರಿ ತಟಾಕಕ್ಕೆ ಆಗಮಿಸಿದನು. ಸುಂದರವಾದ ಆ ಸ್ಥಳದಲ್ಲಿ ಆಸನ ಹಾಕಿಕೊಂಡು ಸಿದ್ಧನು ಮೌನದಿಂದ ಕುಳಿತುಬಿಟ್ಟನು.

ಇತ್ತ ಗುಡಿಯಲ್ಲಿ ಅವನನ್ನು ತಡೆದು ನಿಲ್ಲಿಸಿದ ಬ್ರಾಹ್ಮಣನು ಮನೆಗೆ ಹೋಗುವಾಗ ಈ ಸಿದ್ಧಾವಧೂತನನ್ನೇ ನೆನೆಯುತ್ತ 'ಆ ಮಹಾತ್ಮನನ್ನು ಮನೆಗೆ ಕರೆತಂದು ಹಾಲು-ಹಣ್ಣು ಕೊಡಬೇಕು.' ಎಂದುಕೊಂಡು ಹುಡುಕುತ್ತ ನದೀತೀರಕ್ಕೆ ಬರಲು ಅಲ್ಲಿ ಅವಧೂತನನ್ನು ಕಂಡು 'ಸಾಧುವರ್ಯ' ಇಂದು ನಮ್ಮ ಮನೆಗೆ ಭೋಜನಕ್ಕೆ ಬರಬೇಕು. ಎನ್ನಲು ಸಿದ್ಧನು 'ಅಯ್ಯಾ, ಅಷ್ಟು ದೂರ ನನ್ನನ್ನು ನಡೆಸುತ್ತ ಕರೆದುಕೊಂಡು ಹೋದರೆ ನಿನಗೆ ದೊರೆಯುವ ಪುಣ್ಯ ಕಡಿಮೆಯಾಗುವದು. ಇಲ್ಲಿಗೇ ಭೋಜನ ಪದಾರ್ಥ ತಂದರೆ ಹತ್ತುಪಟ್ಟು ಹೆಚ್ಚಿನ ಪುಣ್ಯ ಲಾಭ ನಿನಗೆ.' ನಗುತ್ತ ನುಡಿಯಲು ಹರ್ಷಗೊಂಡ ಬ್ರಾಹ್ಮಣನು ಲಗುಬಗೆಯಿಂದ ಮನೆಗೆ ತೆರಳಿ ಎಲ್ಲ ಪದಾರ್ಥಗಳನ್ನು ತಂದನು. ಸಿದ್ಧನು ರುಚಿಕರವಾದ ಆ ಭೋಜನ ಮುಗಿಸಿ ಬ್ರಾಹ್ಮಣನನ್ನು ಮನೆಗೆ ಮರಳಿ ಕಳಿಸಿ ಮರಳಿನಲ್ಲಿ ಬ್ರಹ್ಮಾನಂದದಿಂದ ಮಲಗಿದನು.

ಆ ನಂತರ ರಾಮೇಶ್ವರಕ್ಕೆ ಬಂದು ದರ್ಶನ ಹೊಂದಿ ಸೇತುಬಂಧದಲ್ಲಿ ಒಬ್ಬ ಯೋಗೀಶ್ವರನನ್ನು ಕಂಡನು. ಪರಸ್ಪರ ಸಂಭಾಷಣೆಯಲ್ಲಿ ಸಿದ್ಧನು 'ಯಾವ ಅಂಗವು ಸಿದ್ಧಿಸಿದೆ ?' ಎನ್ನಲು ಅವನು 'ಆಸನಾಂಗ'ವೆಂದು ಹೇಳಿ ತನಗೆ ಅದರಿಂದ ದೊರೆತ ಫಲಗಳನ್ನು ವಿವರಿಸಿದನು. 'ಈ ಸಿದ್ಧಿಯಿಂದ ದೇಹವು ಗಾಳಿಗಿಂತ ಹಗುರಾಗಿದೆ. ಪೂರ್ಣವಾಗಿ ನಿರೋಗಿಯಾಗಿದೆ.'

ಯೋಗಿಯ ಮಾತಿಗೆ ಸಿದ್ಧನು ಸಂತೋಷಪಟ್ಟು ಧನುಷ್ಕೋಟಿಗೆ ಬರಲು ಅಲ್ಲಿ ಒಬ್ಬನು ಸ್ನಾನ ಮಾಡುತ್ತಿದ್ದನು. ಅವನನ್ನು ಕಂಡು ಸಿದ್ಧನು

'ದೇಹವು ಸ್ವಚ್ಛವಾಗಿರುವದೆಂದು ತಿಳಿದೋ ? ಅಸ್ವಚ್ಛವಾಗಿರುವದೆಂದು ತಿಳಿದೋ ?' ಎನ್ನಲು ಅವನು ನುಡಿದನು. 'ಅಸ್ವಚ್ಛವಾಗಿರುವದೆಂದು ತಿಳಿದು.' ಒಳ್ಳೇದು ಅದನ್ನು ಹೇಗೆ ತಿಳಿದೆ ? ಜಾತಕರ್ಮ ಸಂಸ್ಕಾರ ಮಾಡುವರಲ್ಲ. ಗರ್ಭಾಂಬುಪಾನ ಜನಿತ ದೋಷ ಪರಿಹಾರಕ್ಕೆ ಆ ಸಂಸ್ಕಾರವಿದೆ.

ಇವನೊಬ್ಬ ಮೂರ್ಖನೆಂದುಕೊಂಡು ಸಿದ್ಧನು ಮುಂದೆ ಸಾಗಿದನು. ತಿರುವಣ್ಣಾಮಲೆಯಲ್ಲಿ ಸ್ವಾಮಿಗಳ ದರ್ಶನವನ್ನು ಹೊಂದಿ ಬರುತ್ತಿರಲು ಒಬ್ಬ ಧ್ಯಾನಯೋಗಿಯನ್ನು ಕಂಡು ಪ್ರಶ್ನೆ ಹಾಕಿದನು. 'ತಿಳಿದು ಮಾಡುವುದೋ ಈ ಧ್ಯಾನ ? ತಿಳಿಯದೆ ಮಾಡುವುದೋ ? ತಿಳಿದು ಮಾಡುವುದೆಂದರೆ ಅಲ್ಲಿ ಧ್ಯಾತಾ ಧ್ಯೇಯಗಳ ಐಕ್ಯವಿರುವುದರಿಂದ ಧ್ಯಾನ ಸಂಬಂಧವಿಲ್ಲ. ತಿಳಿಯದೇ ಮಾಡುವುದೆಂದರೆ ಧ್ಯೇಯ ನಿಶ್ಚಯವಿಲ್ಲದಲ್ಲಿ ಧ್ಯಾತಾ ಏನನ್ನು ಧ್ಯಾನಿಸುವನು! ಅಲ್ಲಿಯೂ ಧ್ಯಾನ ಸಂಬಂಧವಿಲ್ಲ. ಎಂದ ಮಾತಿಗೆ ಆ ಉಪಾಸಕನು ಹೇಳಿದುದೇನಂದರೆ 'ಶಾಸ್ತ್ರದಲ್ಲಿ ಹೇಳಿದಂತೆ ನಡೆಯುವದು ನನ್ನ ಕರ್ತವ್ಯವೆಂದು ಯಾವಾಗಾದರೊಮ್ಮೆ ಹೀಗೆ ಧ್ಯಾನಿಸುತ್ತೇನೆ.' ಎನ್ನಲು ಇವನೊಬ್ಬ ಸಾಂಪ್ರದಾಯವಾದಿ ಎಂದು ಸಿದ್ಧನು ಶೋಣಾದ್ರಿಗೆ ಬಂದು ಅಲ್ಲಿ ನಾರಾಯಣ ಮೂರ್ತಿಯ ದರ್ಶನ ಮಾಡಿಕೊಂಡು, ತಿರಕರಾನವೆಂಬಲ್ಲಿಗೆ ಬಂದು ಅಲ್ಲಿ ಲಂಚಿ ನಾರಾಯಣ ದೇವಾಲಯದಲ್ಲಿ ಒಂಭತ್ತು ದಿನಗಳ ವರೆಗೆ ವಸತಿ ಮಾಡಿದನು. ಅಲ್ಲಿ ಕೆಲವು ಶಾಸ್ತ್ರಿಗಳು ಬಂದು ಕೇಳಿದರು. 'ನೀನು ಸ್ನಾನಾದಿ ಕರ್ಮಗಳನ್ನೇಕೆ ಮಾಡುವುದಿಲ್ಲ? ಸಿದ್ಧನು ಉತ್ತರ ಕೊಟ್ಟನು. 'ಕರ್ಮ ಸಂಸ್ಕಾರದಿಂದ ಮೋಕ್ಷಕ್ಕೆ ಪ್ರತಿಬಂಧವಾಗುತ್ತದೆ' ಅದುದರಿಂದ,

'ಹೇಗೆ ?'

ವಿಧಿವತ್ತಾಗಿ ಆಚರಿಸಿದ ಕರ್ಮದಿಂದ ಪುಣ್ಯವು ಲಭಿಸಿ ಸ್ವರ್ಗವೇ ಮೊದಲಾದ ಲೋಕಗಳ ದೊರೆಯುವುದು ನಿಜ. ಆದರೆ ಅವೆಲ್ಲ ಪುಣ್ಯ ತೀರುವವರೆಗೆ ಮಾತ್ರ. ಪುಣ್ಯ ತೀರಿದ ಕೂಡಲೇ ಪುನಃ ಜನ್ಮ. ಈ ಜನನ-ಮರಣ ಚಕ್ರಕ್ಕೆ ಮಿತಿ ಇಲ್ಲ. ಆಗ ಜೀವನು ಇವಕ್ಕೆ ಬೇಸತ್ತು ಕರ್ಮ ನಿವೃತ್ತಿರೂಪವಾದ ವೈರಾಗ್ಯವನ್ನು ತಾಳಿ ಸಮಾಧಾನ ಪಡೆಯುವನು. ಕರ್ಮಗಳಿಗೆ ಕರ್ಮಫಲಗಳಿಗೆ ಬೇಸರಗೊಳ್ಳದವರು ಕರ್ಮ ಮಾಡಲೇಬೇಕೆಂದು ಶ್ರುತಿಯ ಆಜ್ಞೆ ಇರುವುದು. ಮುಮುಕ್ಷುಗಳಿಗೆ ಕರ್ಮತ್ಯಾಗ ಹೇಳಿಲ್ಲ.'

ಶಾಸ್ತ್ರ ರಹಸ್ಯವನ್ನು ಕೇಳಿಕೊಂಡ ಶಾಸ್ತ್ರಿಗಳು ಪುನಃಪೂರ್ವಕವಾಗಿ ವಂದಿಸಿದರು. ಹೀಗೆ ತಿರುಗಿದ ಸ್ಥಳಗಳಲ್ಲೆಲ್ಲ ಸಿದ್ಧನು ವೇದಾಂತ ಜ್ಞಾನವನ್ನು ಉಪದೇಶ ಮಾಡುತ್ತ ಅದರ ರಹಸ್ಯವನ್ನು ತಿಳಿಸುತ್ತಿದ್ದನು. ಅವನು ಸದ್ಗುರುವೆಂದು ಕಂಡವರೆಲ್ಲ ಕರ್ಮದ ಬೇಡಿಕೆಗಳನ್ನು ಕಳಚಿಕೊಂಡು ಬಂಧಮುಕ್ತರಾದರು. ಅವರವರ ಅಧಿಕಾರಕ್ಕೆ ತಕ್ಕಂತೆ ಮಾರ್ಗ ತೋರಿಸಿ ಸಿದ್ಧನು ಎಲ್ಲರನ್ನೂ ಸಚ್ಚಿದಾನಂದದ ಕಡೆಗೆ ತಿರುಗಿಸಿದನು.

ಮುಂದೆ ಚಿಂತಾಮಣಿ ಆಶ್ರಮದಲ್ಲಿ ಕೆಲ ದಿನ ನಿಂತುಕೊಳ್ಳಲು ಜಿಜ್ಞಾಸುಗಳಾದವರು ಕಮಲಕ್ಕೆ ಭೃಂಗಗಳು ಮುತ್ತುವಂತೆ ಸಿದ್ಧನ ಕಡೆಗೆ ಬರತೊಡಗಿದರು. ಒಬ್ಬ ಶಾಸ್ತ್ರಿಗಳು ಬಂದು ಕೇಳಿದರು. 'ಮುಮುಕ್ಷುತ್ವವು ಧರ್ಮವೋ, ಗುಣವೋ?' ಸಿದ್ಧನು ಹೇಳಿದನು.

'ಮುಮುಕ್ಷುತ್ವವು ಧರ್ಮವಾಗಿರುವುದು ಶಕ್ಯವಿಲ್ಲ. ಯಾಕಂದರೆ ಅದು ಜೀವನ ನಿತ್ಯ ಸ್ಥಿತಿಯಲ್ಲ. ಯಾವುದನ್ನು ಬಿಟ್ಟು ಇರಲಿಕ್ಕೆ ಬರುವುದಿಲ್ಲವೋ ಅದು ಧರ್ಮ. ಹೇಗೆಂದರೆ ಅಗ್ನಿಯಲ್ಲಿ ದಾಹಕತ್ವವು ಅಗ್ನಿಯ ಧರ್ಮವು. ಇನ್ನು ಮುಮುಕ್ಷುತ್ವವು ಗುಣವೆನ್ನಬೇಕೇ. ಹಾಗಿದ್ದಲ್ಲಿ ಸಾಧನ ಮಾಡಿಯೂ ಅದನ್ನು ಕಳೆಯುವುದು ಕಷ್ಟ. ಎಂದ ಮೇಲೆ ಅಭ್ಯಾಸ-ವಿವೇಕಾದಿಗಳಿಂದ ಹುಟ್ಟಿದ ಒಂದು ಭಾವನೆನ್ನುವುದು ನಿಹಿತ.'

'ಎಲ್ಲಿಯವರೆಗೆ ಈ ಭಾವವುಳಿಯುವುದು ?'

'ಗುರುವಿಗೆ ಶರಣಾಗತನಾಗಿ ಮಹಾವಾಕ್ಯೋಪದೇಶ ಪಡೆದುಕೊಂಡು ಅದರ ಅರ್ಥವನ್ನು ಮೈಗೂಡಿಸಿಕೊಳ್ಳುವತನಕ.'

ಸಿದ್ಧನ ಮಾತುಗಳನ್ನು ಶಾಸ್ತ್ರಿಗಳು ಸಮಾಧಾನ ಹೊಂದಿ ಹೊರಟು ಹೋದರು. ಕೆಲವರು ಸಿದ್ಧನೊಬ್ಬ ಜ್ಞಾನಿ. ಅವನ ಮುಖದಿಂದ ನಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂದು ಬರುವವರು ಕೆಲವರಾದರೆ ತಮ್ಮ ಪಾಂಡಿತ್ಯದ ಗರ್ವದಿಂದ ಕೆಣಕಲು ಬರುವವರೂ ಕೆಲವರು. ಆದರೆ ಸಿದ್ಧನಿಗೆ ಎಲ್ಲರೂ ಸಮ. ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟು ಸಮಾಧಾನಗೊಳಿಸುವುದು ಅವನ ಕ್ರಮ.

೬

ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ ।

ತ್ರಿಗುಣ ಸಂಬಂಧವಿಲ್ಲದ ದಾರಿಯಲ್ಲಿ ಸಂಚರಿಸುವವರಿಗೆ ಮಾಡಲೇಬೇಕಾದ ಕರ್ತವ್ಯವು ಯಾವುದು ? ಮಾಡಬಾರದುದು ಯಾವುದು ?

ಒಂದು ದಿನ ಪಿಚಂಡಯ್ಯನೆಂಬ ಶಾಸ್ತ್ರಿಯು ಬಂದು ಪ್ರಶ್ನಿಸಿದನು.

" ಎಲ್ಲ ವಸ್ತುಗಳಿಗೆ ಪೃಥ್ವಿ ಆಧಾರವಾಗಿದೆ. ಪೃಥ್ವಿಗೇನು ಆಧಾರ ?

"ಪೃಥ್ವಿಗೆ ಜಲವೇ ಆಧಾರ. ಜಲಕ್ಕೆ ಅಗ್ನಿ. ಅಗ್ನಿಗೆ ವಾಯು. ವಾಯುವಿಗೆ ಆಕಾಶ. ಆಕಾಶಕ್ಕೆ ಅಕ್ಷರ ನಾಮಕ ಪರಮಾತ್ಮ. ಎಂದು ನಾಕಷ್ಟು ಆಧಾರಗಳಿವೆ."

ಹೀಗೆ ತಾನು ಕೇಳಬೇಕೆಂದುದನ್ನೆಲ್ಲ ಸಿದ್ಧನು ತಿಳಿಸಲು ಆ ಶಾಸ್ತ್ರಿಯು ಬಹಳ ಸಂತೋಷ ಹೊಂದಿ ಮನೆಗೆ ಬಂದು ಉಪಹಾರಗಳನ್ನು ತಂದನು. ಸಿದ್ಧನು ಅದನ್ನು ಸ್ವೀಕರಿಸಿ ಸಂತೋಷಿಸಿ ಕುಳಿತಿರಲು ಒಬ್ಬನು ಬಂದು ವಿನಯದಿಂದ ವಂದಿಸಿ ವಿಚಾರಿಸಿದನು.

"ಮನಸ್ಸೇಕೆ ಇಷ್ಟು ಚಂಚಲವಾಗಿದೆ? ದಯಮಾಡಿ ಇದರ ಕಾರಣವನ್ನು ತಿಳಿಸಿರಿ."

"ಮನೋನಾಥಸ್ತು ಮಾರುತಃ, ಮನಸ್ಸಿನ ಸ್ವಾಮಿ ಎನಿಸಿದ ವಾಯುವೂ, ರಜೋಗುಣವೂ ಕೂಡುವುದರಿಂದ ಮನಸ್ಸು ಚಂಚಲವೆನಿಸುವುದು. ವಾಯುವಿನ ಅರ್ಧಭಾಗವನ್ನು ಗ್ರಹಿಸಿ ಮನಸ್ಸು ಉತ್ಪನ್ನವಾದುದರಿಂದ ವಾಯುವಿನ ಸ್ವಭಾವವೆನಿಸಿದ ಚಂಚಲತ್ವವು ಅದರಲ್ಲಿ ಕಂಡುಬರುತ್ತದೆ. ಅದು ಎಲ್ಲ ವಿಷಯಗಳಲ್ಲಿಯೂ ತಿರುಗುತ್ತ ಒಂದು ಕ್ಷಣ ಕೂಡ ಸ್ಥಿರತ್ವವನ್ನು ಪಡೆಯುವುದಿಲ್ಲ. ರಜೋಗುಣವು ಅನೇಕ ವಿಕಲ್ಪಗಳನ್ನು ಉಂಟು ಮಾಡುವುದು. ಪ್ರಾಣಾಯಾಮದಿಂದಲೂ, ಆತ್ಮಾನಾತ್ಮ ವಿಚಾರದಿಂದಲೂ ಮನಸ್ಸು ಶುದ್ಧವಾಗಿ ಸ್ಥಿರವಾಗುವುದು. ಆತ್ಮಾನಾತ್ಮ ವಿಚಾರವು ಸದ್ಗುರು ಬೋಧದಿಂದ ತಿಳಿಯುವುದು."

ಎಂದು ಸಿದ್ಧನು ನುಡಿಯಲು ಪ್ರಶ್ನೆ ಕೇಳಿದವನು ಥಟ್ಟನೆ ಸಿದ್ಧನ ಪಾದಗಳನ್ನು ಹಿಡಿದುಕೊಂಡು 'ಗುರುನಾಥನೇ ನಾನು ಇಷ್ಟು ದಿನಗಳ ವರೆಗೆ ನಿನ್ನನ್ನೇ ಹುಡುಕುತ್ತಿದ್ದೆನು. ಇಂದು ನನ್ನ ಪೂರ್ವ ಪುಣ್ಯದಿಂದ ನಿನ್ನ ದರ್ಶನವಾಯಿತು. ದರ್ಶನ ಮಾತ್ರದಿಂದ ನಾನು ಪಾವನನಾದೆನು. ನನ್ನ ಮಾತಾ-ಪಿತೃಗಳು ಧನ್ಯರೆನಿಸಿದರು. ನನ್ನನ್ನು ಉದ್ಧರಿಸು.' ಎಂದು ಬೇಡಿಕೊಳ್ಳಲು ಗುರುನಾಥನು ಕೃಪೆದೋರಿ ಆ ಮಲಯನಾಥನನ್ನು ಉದ್ಧರಿಸಿದನು.

ಒಮ್ಮೆ ರಾಮಭಟ್ಟನೆಂಬ ವಿದ್ವಾಂಸನು ಬಂದು ಈ ಪ್ರಪಂಚವನ್ನು ಬೆಳಗುವ ಪ್ರಕಾಶವು ಯಾವುದು ? ಎನ್ನಲು ಸಿದ್ಧನು ಹಗಲು ಸೂರ್ಯ ಪ್ರಕಾಶ, ರಾತ್ರಿಯಲ್ಲಿ ಚಂದ್ರಪ್ರಕಾಶ ಅಥವಾ ನಕ್ಷತ್ರಪ್ರಕಾಶ ಅಥವಾ ದೀಪ ಪ್ರಕಾಶ. ಎಂದು ಉತ್ತರ ಕೊಟ್ಟು 'ಒಳ್ಳೇದು ಇವೆಲ್ಲ ಯಾತರಿಂದ ಬೆಳಗುತ್ತವೆ?' ಎಂದು ಮರಳಿ ಪ್ರಶ್ನೆ ಹಾಕಿದನು. ಆಗ ರಾಮಭಟ್ಟನು 'ನೇತ್ರ ಪ್ರಕಾಶದಿಂದ' ಎಂದನು. ಪುನಃ ಪ್ರಶ್ನೋತ್ತರ ನಡೆದವು. 'ಕಣ್ಣು ಮುಚ್ಚಿದ ಮೇಲೆಯೂ ಪದಾರ್ಥಗಳ ಚಿಂತನೆ ನಡೆಯುವುದಲ್ಲ. ಆಗ ಆ ಪದಾರ್ಥಗಳನ್ನು ಬೆಳಗುವ ಪ್ರಕಾಶವು ಯಾವುದು ?"

'ಬುದ್ಧಿ ಪ್ರಕಾಶ' ಎಂದು ನುಡಿದು ರಾಮಭಟ್ಟನು ನನಗೆ ಇಷ್ಟೇ ತಿಳಿಯುತ್ತದೆ ಎನ್ನಲು ಸಿದ್ಧನು ನಸುನಕ್ಕು 'ಬುದ್ಧಿಯು ಅಹಂಕಾರ ಯುಕ್ತ ಚಿದಾಭಾಸನಿಂದ ಬೆಳಗುತ್ತದೆ. ಸಮಾಧಿಯ ಅಭ್ಯಾಸದಿಂದ ಆ ಚಿದಾಭಾಸ ಲಯವಾಗಲು ಸ್ವಯಂಪ್ರಕಾಶನಾದ ಆತ್ಮನೊಬ್ಬನು ಉಳಿದುಕೊಳ್ಳುವನು. ಅಯ್ಯ ಆ ಸಚ್ಚಿದಾನಂದ ಪರಿಪೂರ್ಣ ಬ್ರಹ್ಮನೇ ನೀನು ಇರುವೆ ಎಂದು ರಾಮಭಟ್ಟನು ಕೆಲಕಾಲ ಆ ಅನಿರ್ವಚನೀಯ ಸ್ಥಿತಿಯನ್ನು ಪಡೆದು ಮರಳಿ ಜಾಗೃತನಾಗಿ 'ಕೃತಕೃತ್ಯನಾದೆ' ಎಂದು ನುಡಿಯುತ್ತ ವಂದಿಸಿ ಹೊರಟು ಹೋದನು.

ಮತ್ತೊಮ್ಮೆ ಚಿದಂಬರ ದೀಕ್ಷಿತರೆಂಬ ಘನ ವಿದ್ವಾಂಸರು ಬರಲು 'ತತ್ವಮಸಿ' ಎಂಬ ವಾಕ್ಯಾರ್ಥ ನಡೆಯಿತು. ಅದು ಸ್ತುತಿ ಪರವಾಗಿದೆ ಎಂದು ಕರ್ಮಠರಾದ ದೀಕ್ಷಿತರು, ಹಾಗಲ್ಲ. ಅದು ಜ್ಞಾನಕಾಂಡದಲ್ಲಿರುವುದರಿಂದ ಸ್ತುತಿಪರವಾಕ್ಯವೆನ್ನುವುದು ಯೋಗ್ಯವಲ್ಲ. ಎಂದು ಸಿದ್ಧನು. ಬಹುಕಾ

ಲದವರೆಗೆ ವಾದವು ಸಾಗಿತು. ಸಿದ್ಧನು ನುಡಿದನು. 'ಯಾವುದೋ ವಸ್ತುವಿಗೆ ದ್ರವ್ಯ-ಗುಣ-ಕರ್ಮ ಸಂಬಂಧವಾಗಲೀ ಅಥವಾ ಜಾತಿ-ಧರ್ಮ-ವರ್ಣ ಆಶ್ರಮಗಳ ಸಂಬಂಧವಾಗಲೀ ಇರುವುದಾದರೆ ಅಲ್ಲಿ ಸ್ತುತಿಯ ಪ್ರಸಂಗ. ಆದರೆ ಈ ವಾಕ್ಯವು ಪೂರ್ಣ-ಶುದ್ಧ-ಬುದ್ಧ-ನಿರ್ವಿಶೇಷ ನಿರಾಲಂಬನಾದ ಆತ್ಮನನ್ನು ಉದ್ದೇಶಿಸಿದೆ. ಅದೆಂದಿಗೂ ಸ್ತುತಿಪರವಲ್ಲ. ಅದು ಮುಮುಕ್ಷು ಗಳಿಗೆ ಉಪದೇಶವಾಗಿದೆ.'

'ಹಾಗಾದರೆ ಉಪಾಸನಾಪರವಾಗಿರಬೇಕು.'

'ಅಲ್ಲ. ಉಪಾಸನೆ ಕೂಡ ಒಂದು ಅರ್ಥದಲ್ಲಿ ಕರ್ಮವೆನಿಸುತ್ತದೆ. ಜ್ಞಾನಿಗೆ ಎಲ್ಲ ಕರ್ಮಗಳೂ ವರ್ಜವಾಗಿವೆ. ಕೈವಲ್ಯವು ಕರ್ಮದಿಂದ ದೊರೆ ಯುವುದಿಲ್ಲ. ಉಪಾಸನೆಯಿಂದಲ್ಲ. ಏನೇನು ಮನುಷ್ಯನು ತಿಳಿದಿರುವನೋ ಅದೆಲ್ಲದರ ತ್ಯಾಗದಿಂದ ಮಾತ್ರ ದೊರೆಯುತ್ತದೆ. ಈ ಜ್ಞಾನದ ಹೊರತೂ ಕೈವಲ್ಯಕ್ಕೆ ಬೇರೆ ದಾರಿ ಇಲ್ಲ. ಅಂಥ ಜ್ಞಾನವನ್ನು ಈ ಮಹಾವಾಕ್ಯ ಬೋಧಿಸುತ್ತದೆ.

ಎಂದು ಅಧಿಕಾರ ವಾಣಿಯಿಂದ ಸಿದ್ಧನು ಬೋಧಿಸಲು ಕೇಳುತ್ತ ದೀಕ್ಷಿ ತರು ಹರ್ಷಿತರಾದರು.

ಒಮ್ಮೆ ಅಯಾಚಿತವಾಗಿ ಯಾರೋ ಆಹಾರ ತಂದು ಕೊಟ್ಟಿರಲು ಗುರುವು ಸ್ವೀಕರಿಸುತ್ತ ಕುಳಿತಿದ್ದನು. ಅನೇಕ ವಿದ್ವಾಂಸರೂ, ಜಿಜ್ಞಾಸುಗಳು ಪ್ರೇಕ್ಷಕರು ನೆರೆದಿದ್ದರು. ಆಗ ಗೋವಿಂದಭಟ್ಟರೆಂಬವರು 'ಸ್ವಾಮಿ-ದುಃಖ ವೃತ್ತಿಗಳೆನಿಸಿದ ಹಸಿವೆ-ನೀರಡಿಕೆ ಮುಂತಾದವುಗಳು ಜ್ಞಾನಿಗಳನ್ನೂ ಬಿಡು ವುದಿಲ್ಲ. ಅದರಂತೆ ಪ್ರಾರಬ್ಧ ಭೋಗಗಳನ್ನು ಅವರು ತಪ್ಪಿಸಿಕೊಳ್ಳಲಾರರು. ಹೀಗೇಕೆ ? ಎಂದು ಕೇಳಿದನು.

ಆಗ ಸಿದ್ಧನು ನುಡಿದನು.

'ಒಳ್ಳೇದು. ಈ ಪ್ರಶ್ನೆಯು ಆತ್ಮಚೈತನ್ಯವನ್ನು ಲಕ್ಷಿಸಿಯೋ? ಅಥವಾ ಜ್ಞಾನಿ ಎಂದರೆ ದೇಹ ಮಾತ್ರವೆಂದು ಭಾವಿಸಿಯೋ ? ಸಚ್ಚಿದಾನಂದ ಘನ ನಲ್ಲಿ ದುಃಖವೆಂಬುದಿಲ್ಲ. ಆತ್ಮನು ನಿತ್ಯ ನಿರ್ಮಲ ಮೂರು ದೇಹಗಳಿಂದಾಚೆ ಇರುವವ ದೇಹಧರ್ಮಗಳು ಅವನಿಗೆ ಸಂಬಂಧವಿಲ್ಲ. ಇನ್ನು ದೇಹವನ್ನು ಲಕ್ಷದಲ್ಲಿರಿಸಿ ನೀನು ಮಾತಾಡಿದ್ದರೆ ದೇಹವು ಯಾವಾಗಲೂ ಪ್ರಾರಬ್ಧಕ್ಕೆ ಆಧೀನ.'

'ಗುರುದೇವನೇ, ನಾನೊಬ್ಬ ಸಾಮಾನ್ಯನು. ನನಗೆ ವಿಚಾರ ಮಾಡುವ ಶಕ್ತಿಯಿಲ್ಲ. ಸಹಜವಾಗಿ ಅನಿಸಿದುದನ್ನು ಕೇಳಿದೆ. ಈಗ ಸಮಾಧಾನವಾಯಿತು. ನಿಮ್ಮಂಥವರ ದರ್ಶನದಿಂದಲೇ ನಾವು ಪಾರಗಾಣಬೇಕು.

ಎಂದು ನುಡಿದು ಗೋವಿಂದಭಟ್ಟರು ತೆರಳಿದರು. ಎಂಟು ದಿನಗಳ ಅಲ್ಲಿಯ ವಸತಿಯಿಂದ ಜನಗಳಿಗೆ ಗುರುವಿನ ಸಲಿಗೆ ಹೆಚ್ಚಿತು. ಪ್ರಾಪಂಚಿಕರು ತಮ್ಮ ಸುಖ-ದುಃಖ ತೋಡಿಕೊಂಡು ಸುಖದ ಮಾರ್ಗವನ್ನು ಕೇಳುವರು. ರೋಗಿಗಳು ರೋಗ ಮುಕ್ತಿಯ ಉಪಾಯವನ್ನು ಹೇಳಿರಿ. ಎನ್ನುವರು. ಗುರುವು ಎಲ್ಲರನ್ನೂ ಸಮಾಧಾನಗೊಳಿಸುವನು.

ಅಂದು ಒಬ್ಬ ಸ್ತ್ರೀಯು ಬಂದು ನನಗೆ ಸನ್ಮಾರ್ಗವನ್ನು ತೋರಬೇಕೆಂದು ಗುರುದೇವನ ಪಾದಕಮಲಗಳನ್ನು ಹಿಡಿದಳು. ಗುರು ನುಡಿದನು.

ಬೆಳಗಿನಲ್ಲಿ ಬೇಗನೇ ಎದ್ದು ಶುದ್ಧವಾಗಿ ಸ್ನಾನಮಾಡು. ಈಶ್ವರನ ಮಾನಸ ಪೂಜೆಯನ್ನು ಮಾಡು. ಯಾವಾಗಲೂ ರುದ್ರಾಕ್ಷ ಮಾಲೆಯಿಂದ ಪಂಚಾಕ್ಷರಿ ಮಂತ್ರ ಜಪಮಾಡು. ಮುಕ್ತಳಾಗುವೆ.

ವಂದಿಸಿ ಆ ಸ್ತ್ರೀ ಹೊರಟುಹೋದಳು. ಒಂಭತ್ತು ದಿನಗಳಾದವು. ಗುರುನಾಥ ಮುಂದೆ ಹೊರಡಬೇಕೆಂದನು. ಗ್ರಾಮವಾಸಿಗಳೆಲ್ಲ ನೆರೆದು ಕಳಿಸಿಕೊಟ್ಟರು. ಬರಬರುತ್ತ ಚಿಕ್ಕನಾರಾಯಣನ ಮಹಾದೇವ ಮುಂತಾದ ದೇವರ ದರ್ಶನ ಪಡೆದುಕೊಂಡು ಠಕ್ಕರ-ಮುಸ್ಕರ ಸ್ಥಳಗಳನ್ನು ಕಂಡನು. ತಿರವಟಾರಿನಲ್ಲಿ ಶ್ರೀ ಕೃಷ್ಣ ಮೂರ್ತಿಯನ್ನು ನೋಡಿದನು. ಪದ್ಮನಾಭಪುರಿಗೆ ಬಂದು ಅನಂತಶಯನನ್ನು ಪೂಜಿಸಿದನು.

ಒಂದು ಚಮತ್ಕಾರ ಘಟಿಸಿತು.

ಅಲ್ಲಿ ಬ್ರಾಹ್ಮಣರ ಭೋಜನವು ನಡೆದಿತ್ತು. ಸಿದ್ಧನಿಗೆ ಹಸಿವೆಯಾಗಿತ್ತು. ಹೋಗಿ ಪಂಕ್ತಿಯಲ್ಲಿ ಒಂದು ಸ್ಥಳಕ್ಕೆ ಕುಳಿತುಬಿಟ್ಟನು. ಅದನ್ನು ಕಂಡ ನಾಲ್ಕಾರು ಜನ ಬ್ರಾಹ್ಮಣರು ಸಿದ್ಧನ ಬಳಿಗೆ ಬಂದು ವಿಚಾರಿಸತೊಡಗಿದರು.

'ನಿನ್ನನ್ನು ನೋಡಿದರೆ ಶೂದ್ರ ಚಿಹ್ನಗಳು ಕಾಣುತ್ತಿವೆ. ಭಯವಿಲ್ಲದೇ ಬಂದು ಬ್ರಾಹ್ಮಣರ ಪಂಕ್ತಿಯಲ್ಲಿ ಕುಳಿತುಬಿಟ್ಟೆಯಲ್ಲ?'

ಸಿದ್ಧನು ನುಡಿದನು. 'ನಿಮಗಾದರೂ ಬ್ರಹ್ಮ ಚಿಹ್ನಗಳು ಕಾಣಿಸುವುದಿಲ್ಲ.'

'ಅದೇಕೆ ? ನಮಗೆ ಶಿಖಾ ಯಜ್ಞೋಪವೀತಗಳಿವೆ. ನಿನಗೆಲ್ಲಿ?'

'ಯತಿರ್ಯಾದೃಚ್ಛಿಕೋ ಭವೇತ್, ಯತಿಯಾದವನು ಹೇಗೆ ಬೇಕೋ ಹಾಗಿರಬಹುದು.'

'ಯತಿಯಾದರೆ ದಂಡಾದಿಗಳೆಲ್ಲಿವೆ ?'

'ಜ್ಞಾನವೇ ನಮ್ಮ ದಂಡ. ಸಮತೆಯೇ ನಮ್ಮ ಕಂಥಾ (ಜೋಳಿಗೆ) ವೈರಾಗ್ಯವೇ ಭಸ್ಮ. ತತ್ವ ವಿವೇಚನೆ ಕಮಂಡಲು.'

ಸಿದ್ಧನ ಮಾತಿಗೆ ಅವರು ಆವಾಕ್ಕಾಗಿ 'ಇವನು ಯಾರೋ ಯೋಗ್ಯತಾ ಶಾಲಿಯಾದ ಜ್ಞಾನಿಯು. ಇಂಥವರಿಗೆ ಅನ್ನ ಕೊಡುವುದು ಗೃಹಸ್ಥರ ಕರ್ತವ್ಯ. ಅಲ್ಲದೇ ಊಟದ ಸಮಯಕ್ಕೆ ವೈಶ್ವಾನರರೂಪನಾಗಿ ಬಂದಿದ್ದಾನೆ. ಇವನನ್ನು ತೃಪ್ತಿಗೊಳಿಸಿದರೆ ಸುಖ-ಸೌಭಾಗ್ಯಗಳು ದೊರೆಯುವವು. ಒಂದು ವೇಳೆ ಅಭಿಮಾನ ವಶರಾಗಿ ತಿರಸ್ಕಾರ ತೋರಿಸಿದರೆ ಸರ್ವ ನಾಶವಾದೀತು.' ಎಂದು ಕೊಂಡು ಹೊಟ್ಟೆತುಂಬ ಊಟಕ್ಕೆ ಹಾಕಿದರು.

ನಂತರ ಸಿದ್ಧನು ಜನಾರ್ದನ ಸ್ವಾಮಿಯ ಕ್ಷೇತ್ರಕ್ಕೆ ಬಂದು ಪರ್ವತದ ತುದಿಯಲ್ಲಿ ಆಚಮನ ಮುದ್ರೆ ಮಾಡಿಕೊಂಡು ನಿಂತಿರುವ ಸ್ವಾಮಿಯನ್ನು ಕಂಡು ನುಡಿದನು. 'ಜ್ಞಾನಿಗಳಿಗೆ ಭವಸಾಗರವು ಚುಲಕ ಪ್ರಾಯವೇ ಸರಿ.' ಎನ್ನುತ್ತ ಉಡುಪಿಗೆ ಬಂದು ಶ್ರೀ ಕೃಷ್ಣನನ್ನು ಕಾಣುತ್ತ 'ಇವನೀಗ ಬ್ರಹ್ಮ ರೂಪನಾದ ಕ್ಷೇತ್ರಜ್ಞ. ಎಲ್ಲರ ಮನಸ್ಸನ್ನು ಆಕರ್ಷಿಸುತ್ತಿರುವುದರಿಂದ ಕೃಷ್ಣ.' ಎಂದು ಚಿಂತನೆ ಮಾಡುತಿರಲು ಭಾವಾವೇಶವನ್ನು ಹೊಂದಿ ಕ್ಷಣ ಕಾಲ ತಡೆದು ಆ ನಿರಾಲಂಬ ಮೂರ್ತಿ ಮುನ್ನಡೆದನು.

————

೭

ಜಗಾಚ್ಯಾ ಕಲ್ಯಾಣಾ। ಸಂತಾಚ್ಯಾ ವಿಭೂತಿ। ದೇಹ ಕಷ್ಟ ವಿತಿ ಉಪಕಾರೇ॥ - ತುಕಾರಾಮ

ಸಾಧುಸಂತರ ಜೀವನವು ಜಗತ್ತಿನ ಕಲ್ಯಾಣಕ್ಕಾಗಿ ಇದ್ದು ಅವರು ಪರೋಪಕಾರಕ್ಕಾಗಿ ಅದನ್ನು ಸವಿಸುತ್ತಾರೆ.

ಅಂಥ ಆಶ್ಚರ್ಯಕರ ಸ್ಥಾನಗಳನ್ನು ಶೋಧಿಸಿ ಅಲ್ಲಿ ದೇವರನ್ನು ಸ್ಥಾಪಿಸಿದರು. ಅಲ್ಲಿರುವ ಮಹಿಮೆಯಿಂದ ಮನಸ್ಸು ಮೂಕವಾಗಿ ತನ್ನ ದುರ್ಗುಣಗಳನ್ನು ಕೆಲ ಹೊತ್ತಿನವರೆಗಾದರೂ ಬಿಟ್ಟು ಶುದ್ಧವಾಗಿ ಪರಮಾತ್ಮ ದರ್ಶನಕ್ಕೆ ಯೋಗ್ಯವಾಗುವುದು. ಅಂಥ ಶುದ್ಧ ಮನದಿಂದ ಪಡೆದ ದರ್ಶನವು ಈಶ್ವರನ ತುಷ್ಟಿಗೆ ಕಾರಣವೆನಿಸಿ ಮೋಕ್ಷಕ್ಕೆ ಸಹಾಯಕಾರಿ ಎನಿಸುವುದು. ಓಂಕಾರೇಶ್ವರನ ದರ್ಶನ ಮಾಡಿಕೊಂಡು ಈ ಸರೋವರಕ್ಕೆ ಬಂದು ಕೆಲವರು ಇಲ್ಲಿ ಮೀನುಗಳಿಗೆ ಆಹಾರವನ್ನು ಹಾಕುವರು. ಅದನ್ನು ಕಂಡು ಸಿದ್ಧನು ಎಂಥ ಚತುರ ಭಗವಂತ. ಎಲ್ಲ ಪ್ರಾಣಿಗಳಿಗೆ ಅಲ್ಲಲ್ಲಿ ಆಹಾರವನ್ನು ಕೊಡುತಿರುವನು. ಎಂದಮೇಲೆ ಅನ್ನ ಪಡೆಯುವುದಕ್ಕೆ ಯತ್ನಿಸುವುದು ವ್ಯರ್ಥವೇ ಸರಿ. ಎಂದು ಯೋಚಿಸುತ್ತ ಸಿದ್ಧನು ಕುಳಿತಿರಲು ಯಾವನೋ ಭಕ್ತನು ಬಗೆಬಗೆಯ ಫಲಾಹಾರ ಸಾಮಗ್ರಿಗಳನ್ನು ಹಿಡಿದುಕೊಂಡು ಆ ಸ್ಥಳಕ್ಕೆ ಬಂದು ಸಿದ್ಧನ ದಿವ್ಯ ತೇಜವನ್ನು ಕಂಡು 'ಆಹಾ, ಇವನು ಬ್ರಹ್ಮಸಾಗರದ ಮೀನ. ಎಂದಮೇಲೆ ಇವನಿಗೆ ಪದಾರ್ಥಗಳನ್ನೆಲ್ಲ ಅರ್ಪಿಸಬೇಕು.' ಎಂದು ಯೋಚಿಸಿ ಭಕ್ತಿ ಪೂರ್ವಕವಾಗಿ ಸಿದ್ಧನಿಗೆ ಅರ್ಪಿಸಿದನ . ನಿಸ್ಸಂಕೋಚವಾಗಿ ಸಿದ್ಧ ಸ್ವೀಕಾರ ಮಾಡಿದನು. ನಂತರ ಆ ಭಕ್ತನು ಶ್ರದ್ಧೆಯಿಂದ ವಂದಿಸಲು 'ಕಲ್ಯಾಣ ಮಸ್ತು' ಎಂದು ಹರಿಸಿ ಅಲ್ಲಿಯೇ ವಿಶ್ರಾಂತಿ ಪಡೆದು ಬೇರೆಕಡೆಗೆ ಸಾಗಿದನು.

ಶ್ರೀ ಕೃಷ್ಣನ ಲೀಲಾ ಭೂಮಿ ಎನಿಸಿದ ಮಥುರೆ-ಗೋಕುಲ-ವೃಂದಾವನಗಳಲ್ಲಿ ಶ್ರೀಕೃಷ್ಣನನ್ನು ಕಾಣುತ್ತ ಅವನು ರಾಸಕ್ರೀಡೆ ಮಾಡಿದ ಸ್ಥಳವನ್ನು ನೋಡಿದನು. ನಂತರ ಕಾಶ್ಮೀರ ಪ್ರದೇಶಕ್ಕೆ ತೆರಳಿ ಅಲ್ಲೊಬ್ಬ ಜ್ಯೋತಿಷಿಯೊಡನೆ ಸಂಭಾಷಣೆ ಮಾಡಿ ಪಂಜಾಬ ದೇಶಕ್ಕೆ ಪ್ರಯಾಣ ಮಾಡಿದನು. ಅಲ್ಲಿ ಚರಕ ಸಾಂಪ್ರದಾಯದ ಒಬ್ಬ ವೈದ್ಯನೊಡನೆ ಮಾತಿನ ಪ್ರಸಂಗವುಂಟಾಯಿತು. ಆಗ ಸಿದ್ಧನು ವೈದ್ಯನಿಗೆ 'ಈಶ್ವರ ಧ್ಯಾನದಿಂದ ರೋಗಗ್ರಸ್ತವಾದ ಒಳಗಿನ ಭಾಗಗಳು ರೋಗ ಮುಕ್ತವಾಗುವವು. ಇನ್ನು ಉಳಿಯುವುದು ದೇಹ. ಅದಕ್ಕೆ ಮಾತ್ರ ನೀವು ನಿಧಾನ ಮಾಡಿಕೊಂಡು ಔಷಧ ಯೋಜಿಸಬೇಕು. ಎನ್ನಲು ವೈದ್ಯನು ಸಮ್ಮತಿಸಿ ಸಂತೋಷ ತಾಳಿದನು. ಆ ಮೇಲೆ ಪುಷ್ಕರ ತೀರ್ಥಕ್ಕೆ ಸಮಾನವೆನಿಸಿದ ಅಮೃತಸರವನ್ನು ಕಂಡು ಗುರು ನಾನಕನ ಪೀಠವನ್ನು ಸಂದರ್ಶಿಸಿದನು.

ಮುಂದೆ ಕುರುಕ್ಷೇತ್ರ-ಹರಿದ್ವಾರಗಳನ್ನು ಕಾಣುತ್ತ ಬದರೀ ಕ್ಷೇತ್ರ. ಅಲ್ಲಿಯ ನಾರಾಯಣಾಶ್ರಮದಲ್ಲಿ ಕೆಲಕಾಲ ತಂಗಿ ಕೇದಾರೇಶ್ವರಕ್ಕೆ ಬಂದನು. ಅಲ್ಲಿಂದ ಹೊರಟು ಜ್ಞಾನವ್ಯಾಪಿ. ಅಲ್ಲಿ ಕೆಲಕಾಲ ವಿಶ್ರಾಂತಿಯನ್ನನುಭವಿಸಿ ಅಜಗರವು ಉರಳುವಂತೆ ಭೂಮಿಯಲ್ಲಿ ಶಯನ ಮಾಡಿರಲು ಶಿವಾನಂದರೆಂಬ ಒಬ್ಬ ಸನ್ಯಾಸಿಗಳು ಬಂದು ಸಿದ್ಧನನ್ನು ನೋಡುತ್ತ 'ಓ, ಇವನು ಯಾರೋ ಯೋಗಾಭ್ಯಾಸಿ. ಶಿವಾಸನ ಹಾಕಿದ್ದಾನೆ. ಪರೀಕ್ಷಿಸುವ ಒಂದು ವೇಳೆ ಬ್ರಹ್ಮನಿಷ್ಠನೂ ಆಗಿರುವ ಸಂಭವವಿದೆ.' ಎಂದುಕೊಂಡು ಮೆಲ್ಲನೆ ಸ್ಪರ್ಶ ಮಾಡಿದನು. ಸಿದ್ಧನು ಕಣ್ಣು ತೆರೆಯಲು ಸ್ವಾಮಿ ವಿಚಾರಿಸಿದರು. 'ನೀನು ಹಾಕಿದ ಆಸನವು ಯಾವುದು ?'

'ದೇಹವೇ ನಾನೆಂದು ತಿಳಿದವರಿಗೆ ಆಸನಾದಿಗಳು. ಅಖಂಡ ಬ್ರಹ್ಮಾನಂದದಲ್ಲಿರುವವನು ಎಲ್ಲಿ? ಯಾವುದಕ್ಕೆ ? ಆಸನ ಹಾಕಬೇಕು ?'

ಸನ್ಯಾಸಿಯು ಮಹಾಜ್ಞಾನಿಯಾದ ಸಿದ್ಧನನ್ನು ಕಂಡು ಸಂತಸಪಟ್ಟು ಜೋಳಿಗೆಯಿಂದ ಭಿಕ್ಷೆಯನ್ನು ತೆಗೆದು ಕೊಟ್ಟನು. ಇಬ್ಬರೂ ಬಕ್ಷಿಸಿದರು.

ಇನ್ನು ಮೇಲೆ ಸಿದ್ಧನು ದಂಡಪಾಣಿ ಭೈರವನ ದರ್ಶನಕ್ಕೆ ಹೋಗುವವನು. ಅಷ್ಟರಲ್ಲಿ ಜ್ವರದಿಂದ ನರಳುತಿರುವ ಒಬ್ಬ ಬ್ರಾಹ್ಮಣನನ್ನು ಕಂಡು 'ಏನು ?' ಎನ್ನಲು ಮೂರು ವರ್ಷಗಳಿಂದ ಇದೇ ರೀತಿ ಜ್ವರವನ್ನು ಅನುಭವಿಸುತ್ತಿರುವೆನು. ಎಂದು ನುಡಿದನು. ದುರ್ಲಭವಾದ ಮನುಷ್ಯ ಜನ್ಮ ವ್ಯರ್ಥವಾಗುವುದನ್ನು ಕಂಡು ಸಿದ್ಧನ ಅಂತಃಕರಣ ಕರಗಿತು. ಅದರ ಫಲವಾಗಿ ಬ್ರಾಹ್ಮಣನ ರೋಗ ಪರಿಹಾರವಾಯಿತು. ಶಿವಪಂಚಾಕ್ಷರಿ ಮಂತ್ರವನ್ನು ಉಪಾಸನೆ ಮಾಡುವಂತೆ ಹೇಳಿದನು.

ಹೀಗೆ ಪರೋಪಕಾರದಲ್ಲಿ ದೇಹವನ್ನು ಸವೆಯುತ್ತ ಲೋಕಕಲ್ಯಾಣವನ್ನು ಸಾಧಿಸುತ್ತ ಸಿದ್ಧನು ಮುಂದಿನ ಯಾತ್ರೆ ಕೈಕೊಂಡನು.

೮

ಚಿಂತಾಶೂನ್ಯ ಮದೈನ್ಯಭೈಕ್ಷ ಮಶನಂ ಪಾನಂ ಸರಿದ್ವಾರಿಷು ।
ಸ್ವಾತಂತ್ರ್ಯೇಣ ನಿರಂಕುಶಾ ಸ್ಥಿತಿರಭೀರ್ನಿದ್ರಾ ಶ್ಮಶಾನೇ ವನೇ ॥
ವಸ್ತ್ರಂ ಕ್ಷಾಲನಶೋಷಣಾದಿಹಿತಂ ದಿಗ್ವಾಸ್ತು ಶಯ್ಯಾ ಮಹೀ ।
ಸಂಚಾರೋ ನಿಗಮಾಂತವೀಥಿಷು ವಿದಾಂ ಕ್ರೀಡಾ ಪರೇ
ಬ್ರಹ್ಮಣಿ ॥ –ವಿವೇಕಚೂಡಾಮಣಿ

ಅಪೇಕ್ಷೆ ಇಲ್ಲದೇ, ಬಹಳ ಬೇಡಿಕೊಳ್ಳದೇ ತಾನಾಗಿ ದೊರೆತ ಭಿಕ್ಷೆಯೇ ಊಟ. ನದಿಗಳಲ್ಲಿ ಹರಿವ ನೀರು ಕುಡಿಯಲಿಕ್ಕೆ ಯಾರ ಅಂಕೆಗೂ ಒಳಪಡದೇ ಸ್ವಚ್ಛಂದವಾಗಿ ಇರುವಿಕೆ. ಯಾವಾಗಲೂ ನಿರ್ಭಯ ವೃತ್ತಿ. ನಿದ್ರೆಯು ಸ್ಮಶಾನದಲ್ಲಿ ಅಥವಾ ವನದಲ್ಲಿ ಒಗೆಯುದಂಥದೂ, ಒಣಗಿಸದಂಥದೂ ಆದವಸ್ತ್ರ (ದಿಗಂಬರತ್ವ) ಇರುವದಕ್ಕೇ ಮನೆ, ಭೂಮಿಹಾಸಿಗೆ ಉಪನಿಷತ್ತುಗಳ ಮಾರ್ಗಗಳಲ್ಲಿ ಅಡ್ಡಾಡುವಿಕೆ ಪರಬ್ರಹ್ಮನಲ್ಲಿ ಆಟ ಹೀಗೆ ವಿದ್ವಾಂಸರ ರೀತಿ

ಈ ಯಾತ್ರೆಯ ಕ್ಷೇತ್ರವೇ ಕಾಶಿ. ಕೇದಾರಘಾಟಿನಲ್ಲಿ ಕೇದಾರೇಶ್ವರನ ದರ್ಶನ. ತರುವಾಯ ಜಂಗಮವಾಡಿ. ಮಣಿಕರ್ಣಿಕಾ ಘಾಟಿನಲ್ಲಿ ಮೂರ್ತಿ ದರ್ಶನ. ಮುಂದೆ ಅನ್ನಪೂರ್ಣೆ ಸುಕಾಭಾಂಡ ಲಿಂಗವನ್ನು ನೋಡಿಕೊಂಡು ಬ್ರಹ್ಮಘಾಟಿನಲ್ಲಿಳಿದು ಶುದ್ಧಾಚಮನ ಮಾಡಿದ ಶಾಶ್ವ ಮೇಧ ಘಾಟಿಗೆ ಬರುತ್ತ ಅಲ್ಲಿರುವ ದೇವಾಲಯದಲ್ಲಿ ಕುಳಿತು ಸಿದ್ಧ ಚಿಂತಿಸಿದನು. ಈ ಸ್ಥಳದಲ್ಲಿ ಪ್ರಜಾಪತಿಯುದ ಶಾಶ್ವಮೇಧಗಳನ್ನು ಮಾಡಿದನೆಂದು ಆ ಹೆಸರಿನಿಂದಲೇ ಈ ಘಾಟು ಪ್ರಸಿದ್ಧವಾಗಿದೆ.

ಹೀಗೆ ಸಿದ್ಧನು ಯೋಜನಾಮಗ್ನನಾಗಿರಲು ಮಹಾದೇವ ಶಾಸ್ತ್ರಿಗಳೆಂಬ ಜರತ್ತಾರ್ಕಿಕರು ತಮ್ಮ ಐವತ್ತಾರು ಶಿಷ್ಯರಿಂದ ಕೂಡಿಕೊಂಡು ಆ ಸ್ಥಳಕ್ಕೆ ಬಂದರು. ಅಲ್ಲಿ ಇಲ್ಲಿ ಸಂಚಾರ ಮಾಡುತಿರುವಾಗ ಕೂಡ ಶಿಷ್ಯರಿಗೆ ಪಾಠ ಕೊಡುವುದು ಅವರ ಪದ್ಧತಿ. ಅದಕ್ಕನುಸಾರವಾಗಿ ಬೋಧಿಸುತಿರಲು ಜಗನ್ನಾಥ ಭಟ್ಟರೆಂಬ ಗೌತಮ ಪ್ರಣೀತ ನ್ಯಾಯ ಶಾಸ್ತ್ರಿಗಳು ತಮ್ಮ ಶಿಷ್ಯ ಸಮುದಾಯರೊಡನೆ ಅದೇ ಸ್ಥಳಕ್ಕೆ ಬಂದು 'ಅವೇಕೆ? ಹದಿನಾರು ಪದಾರ್ಥಗಳು.'

ಎಂದರು. ಅದನ್ನು ಕೇಳಿ ಮಹಾದೇವ ಶಾಸ್ತ್ರಿಗಳು 'ಸುಳ್ಳು ಏಳೇ ಪದಾರ್ಥಗಳು' ಎಂದರು. ಪರಸ್ಪರರಲ್ಲಿ ವಾದಕ್ಕಾರಂಭವಾಯಿತು. (ಕಾಣಾದ ಪಂಥೀಯ ತಾರ್ಕಿಕರಿಗೆ ಜರತ್ತಾರ್ಕಿಕರೆಂದು ಹೆಸರು. ಗೌತಮ ನ್ಯಾಯವಾದಿಗಳಿಗೆ ಕೇವಲ ತಾರ್ಕಿಕರೆಂದು ಹೆಸರು. ಜಗತ್ತಿನ ವಿಚಾರ ಮಾಡುವಾಗ ಕಾಣಾದ ಪಂಥದವರು 'ಏಳು ಪದಾರ್ಥಗಳೆನ್ನುವರು. ನ್ಯಾಯವಾದಿಗಳು 'ಹದಿನಾರು' ಎಂದು ವಾದಿಸುವರು.)

'ಒಂದು ವೇಳೆ ನಿನ್ನ ಅಭಿಪ್ರಾಯದಂತೆ ಪದಾರ್ಥಗಳು ಹದಿನಾರು ಎಂದು ಸಿದ್ಧವಾದರೂ, ನಾವು ಹೇಳುವ ಏಳು ಪದಾರ್ಥಗಳಲ್ಲಿ ಅವೆಲ್ಲ ಒಳಗೊಳ್ಳುತ್ತವೆ' 'ಹಾಗೆಂದಿಗಾದೀತು? ತತ್ವವು ನಿಸ್ಸಂದಿಗ್ಧವಾಗಿರಬೇಕು.'

ಈ ರೀತಿಯಾಗಿ ಆ ಉಭಯ ಪಂಡಿತರು ಅನಿತ್ಯ ಪದಾರ್ಥಗಳ ಸಲುವಾಗಿ ವಾದ ಮಾಡುತ್ತಿರುವದನ್ನು ಕೇಳಿ ಸಿದ್ಧನು ಇವರ ವಾದಕ್ಕೆ ಕೊನೆಯಾಗಬೇಕಾದರೆ ಏನು ಮಾಡಬೇಕು? ಎಂದು ಸಿದ್ಧ ಯೋಚಿಸುತ್ತಿದ್ದನು. ಏನಾದರೂ ನಿತ್ಯ ವಸ್ತುವಿನ ಕಡೆಗೆ ಇವರನ್ನು ತಿರುಗಿಸಬೇಕೆಂದು ನಿರ್ಣಯಕ್ಕೆ ಬಂದು ಕೊನೆಗೆ 'ಪಂಡಿತೋತ್ತಮರೇ, ಮನುಷ್ಯನು ಯಾವ ವಸ್ತುವನ್ನು ನಿತ್ಯ ಚಿಂತನ ಮಾಡುವನೋ ಸಾಯುವಾಗ ಅದೇ ವಸ್ತು ಧ್ಯಾನದಲ್ಲಿ ಬಂದು ಅವನು ತದಾಕಾರನಾಗುವನೆಂದು ತತ್ವವನ್ನು ತಿಳಿದವರು ಹೇಳುತ್ತಾರೆ. ನೀವು ಘನ ಪಂಡಿತರೆನಿಸಿ ಯಾವಾಗಲೂ ದ್ರವ್ಯ ಗುಣಾದಿಗಳನ್ನು ಚಿಂತಿಸುತ್ತೀರಿ. ಎಂದಮೇಲೆ ಜಡ ಪದಾರ್ಥಗಳೆನಿಸುವ ದ್ರವ್ಯ-ಗುಣಾದಿಗಳಾಗುತ್ತೀರಾ? ಅಥವಾ ಚೈತನ್ಯವನ್ನು ಚಿಂತಿಸಿ ಚೈತನ್ಯರೂಪರೆನಿಸುತ್ತೀರಾ? ವಿಚಾರಿಸಿರಿ. ನೀವು ಜಡ ಪದಾರ್ಥಗಳನ್ನು ಕುರಿತು ವಿಚಾರಿಸುವುದು ಶ್ರುತಿ ವಿರುದ್ಧವೆನಿಸುವುದು.

ಎಂದು ಅಧಿಕಾರವಾಣಿಯಿಂದ ಸಿದ್ಧನು ಹೇಳಲು ಆ ಪಂಡಿತರಿಬ್ಬರು 'ಇವರು ಯಾರೋ ಬ್ರಹ್ಮನಿಷ್ಠರಾದ ಜ್ಞಾನಿಗಳು ಎಂದು ಭಾವಿಸಿ 'ಮಹಾತ್ಮರೇ, ನೀವು ಹೇಳುವುದು ನಿಜ. ನಾವು ಮಾಡುತ್ತಿರುವ ತಪ್ಪು ನಿಮ್ಮಿಂದ ತಿಳಿದಂತಾಯಿತು. ವ್ಯರ್ಥವಾಗಿ ಶಬ್ದಗಳ ಅರಣ್ಯದಲ್ಲಿ ತೊಳಲಿದೆವು. ನಮಗೆ ಜ್ಞಾನೋಪದೇಶ ಕೊಟ್ಟು ಉದ್ಧರಿಸಬೇಕು ಎಂದು ಕೈಮುಗಿಯಲು ಸಿದ್ಧನು 'ಪಂಡಿತರೇ, ಇದು ತಾರಕೋಪದೇಶದ ಸ್ಥಾನವು. ಜನರ ಉದ್ಧಾರ ಕಾರ್ಯವನ್ನು ವೇದಕರ್ತನಾದ ಸ್ವತಃ ಶಿವನು ವಹಿಸಿಕೊಂಡಿದ್ದಾನೆ. ಶಿವನು

ಉಡುಪಿಯ ಕ್ಷೇತ್ರದಲ್ಲಿ ಸಿದ್ಧನು ಶ್ರೀಕೃಷ್ಣ ದರ್ಶನದಿಂದ ಕ್ಷಣಕಾಲ ಸಮಾಧಿಯನ್ನನುಭವಿಸಿ ಬೇಗನೇ ಜಾಗ್ರತನಾಗಿ ಬೇರೊಂದು ಕಡೆಗೆ ತೆರಳಿದನು. ಧರ್ಮಸ್ಥಳವನ್ನು ಮೊದಲು ನೋಡಿಕೊಂಡು ಗೋಕರ್ಣಕ್ಕೆ ಬಂದು ಕೋಟಿ ತೀರ್ಥದಲ್ಲಿ ಕೈಕಾಲು ತೊಳೆದು ಮಹಾಬಳೇಶ್ವರನನ್ನು ಕಂಡನು. ಆಗ ಮನದಲ್ಲಿ ಅವನು ಚಿಂತಿಸಿದುದೇನಂದರೆ ಗೋ ಎಂದರೆ ಇಂದ್ರಿಯ ಅಥವಾ ಇಂದ್ರಿಯಗಳು. ಅವುಗಳಲ್ಲಿ ಜ್ಞಾನಸಾಧನೆಗೆ ಶ್ರೇಷ್ಠವಾದುದು ಕರ್ಣ. ಅಲ್ಲಿ ಮಹಾವಾಕ್ಯ ಶ್ರವಣ ಮಾಡಿಸಿ ಮಹಾಬಲನು ಮುಮುಕ್ಷಗಳನ್ನು ಉದ್ಧರಿಸುವನು. ಎಂದುಕೊಳ್ಳುತ್ತ ಗುಡಿಬಿಟ್ಟು ಹೊರಗೆ ಬರುತ್ತಿರಲು ಅಲ್ಲೊಬ್ಬ ಜಟಾಧಾರಿಯಾದ ಸಾಧುವನ್ನು ಕಂಡು ಪ್ರೇಮದಿಂದ ಕೈಹಿಡಿದು ಸಮುದ್ರದ ಕಡೆಗೆ ಕರೆದೊಯ್ಯುತಿರಲು ಜಟಾಧಾರಿಯು ನನಗೆ ಬಹಳ ಚಳಿ. ತಡೆಯದಂತಾಯಿತು. ಎನ್ನಲು ಸಿದ್ಧನು ಒಂದು ಹರಕು ಅರಿವೆಯನ್ನು ಅವನ ಕೊರಳಿಗೆ ಸುತ್ತಿ 'ನಡೆ ಇನ್ನು ಶಾಲು ಹೊದೆದಂತಾಯಿತು.' ಎನ್ನುತ್ತ ಇಬ್ಬರೂ ಸಮುದ್ರ ತೀರಕ್ಕೆ ಬಂದರು. ಅಲ್ಲಿಯ ಬಣ್ಣ ಬಣ್ಣದ ಸಿಂಪುಗಳನ್ನಾರಿಸಿ ಸಿದ್ಧನು ಅವುಗಳಿಂದ ಒಂದು ಮಾಲೆಯನ್ನು ಮಾಡಿ ಜಟಾಧಾರಿಯ ಕೊರಳಿಗೆ ಹಾಕಿದನು. ತರುವಾಯ ಪೇಟೆಗೆ ಬರುತ್ತ ಕುಂಕುಮವನ್ನು ಬೇಡಿಕೊಂಡು ಅವನ ಮುಖದ ತುಂಬ ಲೇಪನ ಮಾಡಿದನು. ಒಂದು ಕೈಯಲ್ಲಿ ಒಡೆದ ಗಡಿಗೆ ಮತ್ತೊಂದರಲ್ಲಿ ಕಸಬರಿಗೆ ಕೊಡುತ್ತ 'ಆಹಾ ಭೈರವ ವೇಷ (ಇದೊಂದು ಶಿವನ ಸಾಂಪ್ರದಾಯ)ವಂತೂ ಸಿದ್ಧವಾಯಿತು. ತಮ್ಮಟೆ ಬಡೆಯುವನೊಬ್ಬ ಸಿಕ್ಕರಾಯಿತು.' ಎನ್ನುತಿರಲು ಅದೇ ಮಾರ್ಗವಾಗಿ ತಮ್ಮಟೆಗಾರನೂ ಬಂದನು. ಅವನನ್ನು ತಮ್ಮಟೆ ಬಡಿಸಲು ಗೊತ್ತು ಮಾಡಿದನು. ಹೀಗೆ ಮೂವರೂ ಜತೆಯಾಗಿ ಸಾಗುತ್ತ ಅಂಗಡಿಗಳ ಮುಂದೆ ವಿಚಿತ್ರ ಆಟಗಳನ್ನು ತೋರಿಸುತ್ತ ಬಹಳಷ್ಟು ಹಣವನ್ನು ಸಂಗ್ರಹಿಸಿಕೊಂಡು ಒಂದು ಶಿವಾಲಯಕ್ಕೆ ಬಂದರು.

ಅಲ್ಲಿ ಯಾರೋ ಸಜ್ಜನರೊಬ್ಬರು ಜ್ಞಾನೇಶ್ವರಿಯ ಅನುವಾದ ಮಾಡುತ್ತಿದ್ದರು. ಕೇಳುವುದಕ್ಕೆಂದು ಅನೇಕ ಜನಗಳೂ ನೆರೆದಿದ್ದರು. ಆಗ ಸಿದ್ಧನು ಪುರಾಣಿಕರ ಬಳಿಗೆ ಹೋಗಿ 'ಏನಯ್ಯ, ನಿತ್ಯದಲ್ಲಿ ನೀನು ಪುರಾಣ ಹೇಳುವೆ. ಜನರು ಕೇಳುವರು. ಈ ದಿನ ನೀನು ಹೇಳಬೇಕಾದ 'ಊರ್ಧ್ವಮೂಲ

ಮರ್ಥಶಾಖಂ' ಎಂಬ ಗೀತೆಯ ಶ್ಲೋಕವನ್ನು ನಾನು ಅನುವಾದ ಮಾಡುತ್ತೇನೆ. ಜನ ನನ್ನ ವಾಣಿಯನ್ನು ಕೇಳಲಿ, ಸಂತೋಷಪಡಲಿ. ಎಂದನು. ಆ ಪುರಾಣಿಕನು ಅವಶ್ಯ ಆಗಲೆಂದನು.

ಪುರಾಣ ಪೀಠವೇರಿ ಸಿದ್ಧ ಗುರುವು ಅನೇಕ ಪೂರ್ವ ಪಕ್ಷಗಳನ್ನು ಮಾಡಿ ಕೊನೆಗೆ ತನ್ನ ಸಿದ್ಧಾಂತವನ್ನು ಹೇಳುತ್ತಿದ್ದನು. ಹೇಳುತ್ತಿರುವಾಗ ಅನೇಕ ಹೊಸ ಅರ್ಥಗಳನ್ನೂ ಶ್ರೋತೃಗಳು ಕೇಳುತ್ತ ಆ ವಾಗ್ವೈಖರಿಗೆ ಬೆರಳು ಕಚ್ಚಿದರು. ಎಲ್ಲರೂ ತಲೆದೂಗುತಿರಲು ಪುರಾಣಕ್ಕೆ ಮಂಗಳಾರತಿ ಯಾಯಿತು. ಜನ ಧನ್ಯರಾದೆವೆಂದು ಭಾವಿಸುತ್ತ ರೊಕ್ಕ ಹಾಕಿದರು. ಆ ದಿನ ಎಂದಿಗಿಂತ ನಾಲ್ಕು ಪಟ್ಟು ಹೆಚ್ಚು ದ್ರವ್ಯವು ದೊರೆತುದನ್ನು ನೋಡಿ ಪುರಾಣಿಕನು ಹರ್ಷಗೊಂಡು ಬಳಿದುಕೊಳ್ಳಬೇಕೆನ್ನುತಿರಲು ಜಟಾಧಾರಿ ಆ ದ್ರವ್ಯವನ್ನು ಕಿತ್ತಿಕೊಳ್ಳಲೆತ್ನಿಸಲು ಜನರು 'ಈ ದಿನ ಪುರಾಣ ಹೇಳಿದವರಿಗೆ ಅರ್ಧ, ನಿನಗೆ ಅರ್ಧ ಎನ್ನಲು ಅವನು ಸಮ್ಮತಿಸಿ ಎರಡು ಭಾಗ ಮಾಡಿಕೊಟ್ಟನು. ಆಗ ಸಿದ್ಧನು ಅಯ್ಯ, ಹಣದಾಸೆಗಾಗಿ ಪುರಾಣ ಹೇಳುತಿರುವೆಯ? ಹಾಗಾದರೆ ತೆಗೆದುಕೋ. ಎಂದು ನುಡಿದು ಜೋಳಿಗೆಯಿಂದ ತೆಗೆದು ಏಳು ಭಂಗಾರದ ಮೊಹರುಗಳನ್ನು ಪುರಾಣಿಕನಿಗಿತ್ತನು. ಅದರಿಂದ ಪಶ್ಚಾತ್ತಾಪ ಪಟ್ಟು ಪುರಾಣ ಹೇಳುವವನು ಸಿದ್ಧನ ಕಾಲಿಗೆರಗಿ 'ಉದ್ಧರಿಸಬೇಕು' ಎಂದು ಬೇಡಿಕೊಂಡನು. ಭಿಕ್ಷುಕನಾದ ಸಾಧುವಿನಲ್ಲಿ ಮತ್ತೊಬ್ಬರಿಗೆ ಕೊಡುವಷ್ಟು ಭಂಗಾರದ ಮೊಹರುಗಳಿರುವದನ್ನು ಕಂಡು ಜನ ಚಕಿತರಾಗಿ 'ಇವನು ಯಾರೋ ಮಹಾಪುರುಷನಾಗಿರಬೇಕು. ಇಂಥವರನ್ನು ಸೇವಿಸುವವರು ಧನ್ಯರು, ಎಂದುಕೊಳ್ಳುತ್ತ ತೆರಳಿದರು.

ಸಿದ್ಧನು ಜಟಾಧಾರಿಯೊಡನೆ ಸಂಚರಿಸುತ ನಾಗರದಲ್ಲಿ ಬರುತ್ತಿದ್ದನು. ಅಷ್ಟರಲ್ಲಿ ಬ್ರಾಹ್ಮಣನೊಬ್ಬನು ನೈವೇದ್ಯ ತೆಗೆದುಕೊಂಡು ದೇವಾಲಯಕ್ಕೆ ಹೊರಟಿರಲು ಸಿದ್ಧನು ಅವನಿಗೆ 'ನೈವೇದ್ಯವೆಲ್ಲಿಗೆ?' ಎಂದು ಪ್ರಶ್ನೆ ಮಾಡಲು, ಮಹಾಬಳೇಶ್ವರನಿಗೆ ಅರ್ಪಿಸಬೇಕು.' ಎಂದು ಹೇಳಿದನು.

'ನಾನೇ ಮಹಾಬಳೇಶ್ವರನು. ಅಲ್ಲವೆಂದು ಸಿದ್ಧ ಮಾಡಿಕೊಟ್ಟು ಆಮೇಲೆ ಬೇಕಾದರೆ ಕಲ್ಲುಮೂರ್ತಿಗೆ ನೈವೇದ್ಯವನ್ನರ್ಪಿಸು.'

'ಛೀ, ನೀನು ಯಾರೋ ಆಶಾಬದ್ಧನಾದ ಮನುಷ್ಯ. ದೇವರಿಂದು ನಿನಗೆ ಯಾರು ಅನ್ನಬೇಕು ?'

ಎಂದು ಬ್ರಾಹ್ಮಣನು ಸಿದ್ಧನನ್ನು ತಿರಸ್ಕಾರ ಮಾಡಲು ಜಟಾಧಾರಿಯು ಅವನ ಕೈಯ್ಯ ನೈವೇದ್ಯವನ್ನು ಕಿತ್ತಿಕೊಳ್ಳಬೇಕೆಂದು ಕೈಚಾಚಿದನು. ಆಗ ಬ್ರಾಹ್ಮಣನು ಶಂಖಕುಟ್ಟಲು ಅನೇಕರು ನೆರೆದು ಆ ಜಟಾಧಾರಿಯನ್ನು ಹೊಡೆಯಬೇಕೆಂದು ಸಿದ್ಧರಾದರು. ಆಗ ಸಿದ್ಧನು ನಡುವೆ ಬಂದು 'ವಿಚಾರವಿಲ್ಲದೇ ಆ ಜಟಾಧಾರಿಯನ್ನು ಹೊಡೆಯಲೆತ್ನಿಸುವುದು ತಪ್ಪು. ಎಲ್ಲ ಕಡೆಗೂ ತುಂಬಿಕೊಂಡಿರುವ ಮಹಾಬಳೇಶ್ವರನು ಇವನಲ್ಲಿ ಇರಲಾರನೇ? ನಿಜ ವಿಚಾರವೆಂದರೆ ಈಶ್ವರನು ಶಿಲಾಮುಖದಿಂದ ತೃಪ್ತನಾಗುವುದಿಲ್ಲ. ಸಾಧುಮುಖದಿಂದ ಮಾತ್ರ ತೃಪ್ತಿ ಹೊಂದುವನು. ಹಸಿದವರಿಗೆ ಅನ್ನವಿಕ್ಕುವುದರಿಂದ ಭಗವಂತನು ಸಂತೋಷಗೊಳ್ಳುತ್ತಾನೆ. 'ನಾನು ವೈಶ್ವಾನರ(ಅಗ್ನಿ) ರೂಪದಿಂದ ಎಲ್ಲ ಪ್ರಾಣಿಗಳ ದೇಹದಲ್ಲಿರುವೆನು.' ಎಂದು ಗೀತೆಯಲ್ಲಿ ಕೃಷ್ಣನು ಹೇಳಿಲ್ಲವೇ?' ಎನ್ನಲು ಆ ಬ್ರಾಹ್ಮಣನು ನಿರುತ್ತರನಾಗಿ ತಂದ ನೈವೇದ್ಯವನ್ನೆಲ್ಲ ಸಾಧುಗಳಿಗರ್ಪಿಸಿ ನುಡಿದನು. 'ನಾವು ನಿಜವಾಗಿಯೂ ಅಜ್ಞಾನಿಗಳು ನಿಮ್ಮಂಥವರಿಂದಲೇ ಉದ್ಧಾರ ಹೊಂದಬೇಕು. ಸಾಧುಗಳು ಉಂಡು ಸಂತೋಷಿತರಾದರು. ಆಗ ದಯಾ ಮೂರ್ತಿಯಾದ ಸಿದ್ದನು ತನ್ಮಟೆ ಬಾರಿಸುವವನಿಗೆ ಹಣ ಕೊಟ್ಟು ಕಳಿಸಿದನು.

ನಂತರ ಸಿದ್ಧ ಮತ್ತು ಸಾಧು ಇಬ್ಬರೂ ಕೂಡಿ ನಾಗತೀರ್ಥಕ್ಕೆ ಬಂದು ಅಲ್ಲಿ ಸ್ನಾನ ಮಾಡಿಕೊಂಡು ನಾಲ್ಕು ದಿನಗಳವರೆಗೆ ಅಲ್ಲಿದ್ದರು. ಅಲ್ಲಿರುವಾಗ ಪ್ರತಿದಿನ ಸಾಯಂಕಾಲದಲ್ಲಿ ಅನೇಕರು ಬಂದು ವೇದಾಂತ ವಿಷಯದ ಪ್ರಶ್ನೆಗಳನ್ನು ಕೇಳಿ ಸಿದ್ಧನಿಂದ ಸಮಾಧಾನ ಹೊಂದುವರು. ವಂದಿಸಿ ತಮ್ಮ ಸ್ಥಳಗಳಿಗೆ ತೆರಳುವರು. ಮತ್ತೆ ಸಿದ್ಧನ ಯಾತ್ರೆ ಸಾಗಿ ಶ್ರೀ ಬಸವೇಶ್ವರನ ಸ್ಥಾನಪವೆನಿಸಿದ ಉಳುವಿಗೆ ಬಂದು ಸಂತೋಷಿಸಿದನು. ಅಲ್ಲಿಂದ ಹುಬ್ಬಳ್ಳಿಯ ಮೇಲಿಂದ ಹಾಯ್ದು ಪಂಢರಪುರಕ್ಕೆ ನಡೆದನು. ಆಗ ನಡುದಾರಿಯಲ್ಲಿ ಕಾಣಸಿಗುವ ಕಲ್ಯಾಣವೇ ಮೊದಲಾದ ಪಟ್ಟಣಗಳನ್ನು ನೋಡಲು ಮರೆಯಲಿಲ್ಲ, ಪಂಢರಿಯಲ್ಲಿ ವಿಠ್ಠಲ ದರ್ಶನ ಪಡೆದು ಮುಂದೆ ನಾಸಿಕ ಕ್ಷೇತ್ರದಲ್ಲಿ ಗೋದಾವರಿ ಸ್ನಾನ. ಪಂಚವಟಿ ದರ್ಶನ. ತ್ರ್ಯಂಬಕೇಶ್ವರನ ದರ್ಶನ, ತರು

ವಾಯು ಠಾಕುರಜಿಯನ್ನು ಕಂಡು ದ್ವಾರಕಾನಾಥ ಶ್ರೀ ಕೃಷ್ಣನನ್ನು ನೋಡಿ ಹೊರಗೆ ಬರುತ್ತಿರಲು ಒಬ್ಬ ವೈಷ್ಣವನು ಭೆಟ್ಟಿಯಾದನು. ಅವನು ಸಿದ್ಧನನ್ನು ಕಂಡು 'ನೀವು ಮಾಯಾವಾದಿಗಳೆಂದು ಕಾಣುತ್ತದೆ ಹೌದೇ?' ಎನ್ನಲು ಸಿದ್ಧನು 'ಹೌದು ಎಂದು ತಲೆ ಹಾಕಿದನು.' ಆಗ ವೈಷ್ಣವನು ಮಾಯಾವಾದಿಗಳಾದ ನೀವು ಜಗತ್ತು ಮಿಥ್ಯೆ (ಸುಳ್ಳು) ಎನ್ನುತ್ತೀರಿ. ಆದರೆ ವ್ಯವಹಾರವನ್ನು ಹೇಗೆ ಮಾಡುತ್ತೀರಿ?'

'ರೂಢಿಯ ಬಲದಿಂದ'

'ಅಂದರೆ?'

'ವ್ಯಾವಹಾರಿಕವಾಗಿ ನೀನು ತಿಳಿದಂತೆ ಜಗತ್ತು ಸತ್ಯ. ಪಾರಮಾರ್ಥಿಕವಾಗಿ ಮಿಥ್ಯೆ. ಎಂದು ನಾವು ತಿಳಿಯುತ್ತೇವೆ.'

'ಒಂದೇ ಜಗತ್ತು ಹೀಗೆ ಭಿನ್ನ-ಭಿನ್ನವಾಗಿ ಅನುಭವಕ್ಕೆ ಬರುವುದು ಹೇಗೆ?'

'ಅದೇ ಮಾಯೆ'

'ಅದು ಸ್ವತಂತ್ರ ಶಕ್ತಿಯೋ?'

'ಅಲ್ಲ. ಅದು ಪರಬ್ರಹ್ಮನಲ್ಲಿ ಕಲ್ಪಿತ ಮತ್ತು ನಾಶವಾಗತಕ್ಕಂಥದು.'

'ನಾಶವಾದ ಮೇಲೆ?'

'ಪರಬ್ರಹ್ಮನ ಅನುಭವ.'

ಸಿದ್ಧನ ಮುಖದಿಂದ ಸುಲಲಿತವೂ, ಸುಬೋಧವೂ ಆದ ವಿವೇಚನೆ ಕೇಳಿ ಆನಂದಿತನಾದ ಆ ಭಕ್ತನು ಅವನನ್ನು ಮನೆಗೆ ಕರೆದೊಯ್ದು ಮಧುರಾನ್ನವಿತ್ತು ಉಪಚರಿಸಿದನು. ತರುವಾಯ ಸಿದ್ಧನು ಉಜ್ಜಯನಿಯಲ್ಲಿ ಮಹಾಕಾಲನ ದರ್ಶನ ಹೊಂದಿ ಓಂಕಾರೇಶ್ವರಕ್ಕೆ ಬಂದು ಅಲ್ಲಿಯ ಸರೋವರವನ್ನು ಕಂಡನು. ಆದರ ತೀರದಲ್ಲಿ ಹಿಂದಿನ ಕಲ್ಪ ಕಾಲದಲ್ಲಿ ಕೋಟಿಲಿಂಗಗಳು ಉದ್ಭವವಾಗಿದ್ದವೆಂದು ಹೇಳುತ್ತಿದ್ದರು. ಹೀಗಾಗಿ ಭಾವಿಕರು ಆ ಸ್ಥಾನವನ್ನು ಬಹಳ ಶ್ರದ್ಧೆಯಿಂದ ಕಾಣುವರು. ಆದರಂತೆ ಪಕ್ಷಿ ತೀರ್ಥವೆಂಬಲ್ಲಿ ನಿತ್ಯ ಪಕ್ಷಿಗಳು ಸ್ನಾನಕ್ಕೆಂದು ಬರುತ್ತಿದ್ದವು. ಅದನ್ನು ಕಂಡು ಜನರು ಆಶ್ಚರ್ಯ ಪಡುವರು. ಚಮತ್ಕಾರವೇನಾದರೂ ತೋರದಿದ್ದರೆ ಅದು ಪುಣ್ಯ ಸ್ಥಳವೆಂದು ಜನ ನಂಬಲಾರರು. ಲೋಕ ಸ್ವಭಾವವನ್ನು ಬಲ್ಲ ಮಹಾತ್ಮರು

ಉಭಯತರ ಮಾತುಗಳನ್ನು ಕೇಳಿದ ಸಾವುಕಾರನು ಹೊರಬರುತ್ತ 'ಏನಯ್ಯ ಇದು ಒಬ್ಬ ಗೃಹಸ್ಥರ ಮನೆ ಎಂದು ಕಾವಲುಗಾರ ಹೇಳಿದರೂ ಇದು ಧರ್ಮಶಾಲೆ ಎಂದೇ ಜಡಿದಾಡುವಿಯಲ್ಲ. ಹೀಗೇಕೆ ?' ಎಂದು ಕೇಳಿದನು.

ಸಿದ್ಧ ನುಡಿದದನು.

'ಇಲ್ಲಿ ಯಾರು ಇರುವರೆಂದಿರಿ ?'

'ನಿಜವಾಗಿಯೂ ನಾನಿದ್ದೇನೆ.

'ನೀವು ಹುಟ್ಟುವದಕ್ಕಿಂತ ಮೊದಲು.'

'ತಂದೆ-ತಾಯಿ.'

'ಅದಕ್ಕೂ ಮೊದಲು ?'

'ನಮ್ಮ ಅಜ್ಜ.'

'ಅದಕ್ಕಾಗಿಯೇ ನಾನು ಅಂದದ್ದು. ಒಬ್ಬರು ಹೋಗುತ್ತಾರೆ. ಮತ್ತೊಬ್ಬರು ಬರುತ್ತಾರೆ. ಯಾರೂ ಸ್ಥಿರವಾಗಿ ಇಲ್ಲಿ ಇರುವುದಿಲ್ಲ. ತಮ್ಮ ವೇಳೆ ಮುಗಿಯುವವರೆಗೆ ಇದ್ದು ಎಲ್ಲರೂ ಬಿಟ್ಟು ಹೊರಡತಕ್ಕವರು. ಅಂದ ಮೇಲೆ ಧರ್ಮಶಾಲೆಗೂ ಇದಕ್ಕೂ ಭೇದವೇನು ? ಹೇಳಿರಿ.'

ಎಂದು ಸಿದ್ಧ ನುಡಿಯಲು ಸಾವುಕಾರನು ವಿಚಾರ ಗೊಂದಲದಲ್ಲಿ ಸಿಲುಕಿ ಆಶ್ಚರ್ಯ ಹೊಂದಿದನು. 'ಓ, ಇವರು ಯಾರೋ ಮಹಾತ್ಮರಿರಬೇಕು. ಹಾಗೆಂದು ಖಂಡಿತವಾದಿಗಳಾಗಿದ್ದಾರೆ. ಇಂಥವರನ್ನು ಸೇವಿಸಿ ಧನ್ಯರಾಗಬೇಕು.' ಎನ್ನುತ್ತ ಸಿದ್ಧಾರೂಢನ ಚರಣಗಳಿಗೆರಗಿ ಕೈ ಹಿಡಿದು 'ಸ್ವಾಮಿ, ಮನೆಯೊಳಗೆ ಬಂದು ಮನೆಯನ್ನು ಪಾವನಗೊಳಿಸಬೇಕು.' ಎಂದು ಕರೆದೊಯ್ದು ಉಚಿತಾಸನವಿತ್ತು ಕುಳ್ಳಿರಿಸಿದನು. ಭಕ್ತಿಯಿಂದ ಪೂಜಿಸಿ ಕುಟುಂಬ ಸಹಿತವಾಗಿ ವಂದಿಸಿದನು.

ಆ ಸಾವುಕಾರನ ತಾಯಿಗೆ ಭಯಂಕರವಾದ ಹೊಟ್ಟೆಶೂಲೆ ಇತ್ತು. ಯಾವ ಔಷಧೋಪಚಾರಕ್ಕೂ ಕಡಿಮೆಯಾಗಿರಲಿಲ್ಲ. ಮೂರು ತಿಂಗಳಿಂದ ವಿಪರೀತಕ್ಕಿಟ್ಟು ಆ ಸ್ತ್ರೀಯು ಅತಿಶಯ ವ್ಯಥೆಯನ್ನು ಅನುಭವಿಸುತ್ತಿದ್ದಳು. ಸಾವುಕಾರನು ಕೈ ಮುಗಿದು 'ನನ್ನ ತಾಯಿಯ ವ್ಯಥೆಯನ್ನು ಕಡಿಮೆ ಮಾಡಬೇಕು.' ಎಂದು ಪ್ರಾರ್ಥಿಸಲು ಸಿದ್ಧನು ' ಮೊದಲು ನಾನು ಅವಳನ್ನು

ನೋಡಬೇಕು ಎಂದನು. ಕೂಡಲೇ ಸಾವುಕಾರನು ತನ್ನ ತಾಯಿ ಮಲಗಿದ ಸ್ಥಳಕ್ಕೆ ಸಿದ್ಧನನ್ನು ಕರೆದೊಯ್ದು ತೋರಿಸಲು ನೋಡಿ ಸಿದ್ಧನು 'ಅಹಾ, ಇದು ಪೂರ್ವಜನ್ಮದ ಕರ್ಮದೋಷ. ಶಿವಧ್ಯಾನ ಪೂಜೆಗಳಿಂದ ಕಡಿಮೆಯಾಗುತ್ತದೆ. ಅಥವಾ ಮಹಾತ್ಮರ ಚರಣ ತೀರ್ಥವನ್ನು ತಕ್ಕೊಂಡರೂ ಗುಣವಾಗುತ್ತದೆ.' ಎಂದು ಹೇಳಿದನು. ಅದರಿಂದ ಸಾವುಕಾರನಿಗೆ ಸಂತೋಷವಾಗಿ 'ಸ್ವಾಮೀ, ನೀವೇ ಮಹಾತ್ಮರು. ನಿಮ್ಮ ಚರಣ ತೀರ್ಥವನ್ನು ತಾಯಿಗೆ ಕೊಟ್ಟು ಅವಳ ವ್ಯಥೆ ತಪ್ಪಿಸುತ್ತೇನೆ.' ಎಂದು ಸದ್ಗುರುವಿನ ಚರಣತೀರ್ಥವನ್ನು ತಾಯಿಗೆ ಕೊಡಲು ಆ ಕ್ಷಣದಲ್ಲಿ ಅವಳ ವ್ಯಥೆ ಶಾಂತವಾಗಿ ಆ ವೃದ್ಧಳು ಎದ್ದು ಕುಳಿತಳು. ನಂತರ ಸಿದ್ಧನನ್ನು ವಂದಿಸುತ್ತ 'ಮಹಾತ್ಮನೇ, ನಿನ್ನ ಅನುಗ್ರಹದಿಂದ ನಾನೊಬ್ಬ ಮನುಷ್ಯಳಂತಾದೆನು. ಇದೇ ರೀತಿ ಕೃಪೆ ಇರಲಿ.' ಎಂದು ಪ್ರಾರ್ಥಿಸಿದಳು.

ಮಧ್ಯಾಹ್ನಕ್ಕೆ ಸಾವುಕಾರನು ಪಕ್ವಾನ್ನದ ಊಟ ಹಾಕಿದನು. ಆದರೆ ಸಿದ್ಧನು ಮಿತವಾಗಿಯೇ ಸೇವನ ಮಾಡಿ ಊಟ ತೀರಿಸಿ ಕೈ ತೊಳೆದನು. ರಾತ್ರಿಯಲ್ಲಿ ಮೃದುಶಯ್ಯೆಯಲ್ಲಿ ಮಲಗಿದಾಗ ಸಿದ್ಧನು 'ಇಂಥ ಭೋಗವನ್ನು ಪಡೆಯುವುದರಿಂದ ಮೋಹವು ಬೆಳೆಯುತ್ತದೆ. ಭಿಕ್ಷಾನ್ನ, ಭೂಶಯನ, ಪಾದಸಂಚಾರ ಇವೇ ನಮಗೆ ಯೋಗ್ಯ. ಎನ್ನುತ್ತ ರಾತ್ರಿಯನ್ನು ಕಳೆದು ಬೆಳಗು ಮೂಡುತಿರಲು ಬೇರೊಂದು ಕಡೆಗೆ ಯಾರಿಗೂ ಹೇಳದೇ ತೆರಳಿದನು.

———

೬

ನ ಹ್ಯಮ್ಮಯಾನಿತೀರ್ಥಾನಿ ನ ದೇವಾ ಮೃತ್ ಶಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥

—ಸುಭಾಷಿತ

ಸ್ನಾನಮಾತ್ರದಿಂದ ತೀರ್ಥಗಳು, ದರ್ಶನ ಮಾತ್ರದಿಂದ ಕಲ್ಲು-ಮಣ್ಣಿನಿಂದ ನಿರ್ಮಾಣಗೊಂಡ ಮೂರ್ತಿಗಳು ಪಾವನಗೊಳಿಸಲಾರವು. ಬಹುಕಾಲ

ಅವುಗಳನ್ನು ಸೇವಿಸಬೇಕು. ಸಾಧುಗಳು ಮಾತ್ರ ದರ್ಶನದಿಂದಲೇ ಪಾವನಗೊಳಿಸುವರು.

ಆಗ ಅಲ್ಲಿ ಒಂದು ಶಿವಾಲಯ. ದೇವರಿಗೆ ವಾದ್ಯೋಪಚಾರ ಸೇವೆ ನಡೆದಿತ್ತು. ಆ ವೇಳೆಗೆ ಸಿದ್ಧನು ಒಳಗೆ ಪ್ರವೇಶಿಸಿದನು. ಗಾಯಕನು ಭೈರವಿಯ ಆಲಾಪವನ್ನು ಪ್ರಾರಂಭಿಸಿರಲು ಸಿದ್ಧನು ' ಇದು ಶಂಕರನ ಪೂಜಾ ಸಮಯ. ಶಂಕರಾಭರಣ ರಾಗವನ್ನು ಆರಂಭ ಮಾಡು.' ಎನ್ನಲು ಗಾಯಕನು ಅದರಲ್ಲೇನು ವಿಶೇಷ? ಎಂದು ಕೇಳಿದನು. ಆಗ ಅವನಿಗೆ ಸಿದ್ಧನು 'ಶಂಕರಾಭರಣ ರಾಗವೆಂದರೆ ಮನುಷ್ಯನಲ್ಲಿ ಮಲಗಿರುವ ಕುಂಡಲಿನೀ ಶಕ್ತಿಯು. ಶಂಕರಾಭರಣ ರಾಗದಿಂದ ಆ ಶಕ್ತಿ ಜಾಗ್ರತವಾಗಿ ಊರ್ಧ್ವಮುಖವಾಗುವುದು.' ಈ ಮಾತು ಕೇಳಿ ಗಾಯಕನು 'ಇವನೊಬ್ಬ ಬ್ರಹ್ಮಜ್ಞಾನಿ ಎಂದು ಕಾಣುತ್ತದೆ' ಎಂಬುದಾಗಿ ತರ್ಕಿಸಿ ಸಿದ್ಧನನ್ನು ವಂದಿಸುತ್ತ 'ಸ್ವಾಮಿ ರಾಗದ ಉತ್ಪತ್ತಿ ಸ್ಥಾನಗಳನ್ನು ಹೇಳಬೇಕು.' ಎಂದು ಪ್ರಾರ್ಥಿಸಲು ಸಿದ್ಧನು ಸಂತೋಷಗೊಂಡು 'ಅಯ್ಯ, ಈಶ್ವರನಿಗೆ. ಈಶ್ವರ–ಸದ್ಯೋಜಾತ-ವಾಮದೇವ-ಅಘೋರ-ತತ್ಪುರುಷ-ಈಶಾನ್ಯ-ನಿರಂಗ ಹೀಗೆ ಸಪ್ತಮುಖಗಳು. ಈ ಮುಖಗಳಿಂದ ಷಡ್ಜ-ಋಷಭ-ಗಾಂಧಾರ-ಮಧ್ಯಮ-ಪಂಚಮ–ಧೈವತ-ನಿಷಾದಗಳೆಂಬ ಸಪ್ತಸ್ವರಗಳು ಹೊರಟವು. ಅವೇ ಮನುಷ್ಯ ದೇಹದಲ್ಲಿ ಕಂಠ-ಶಿರ-ನಾಸಿಕ-ಹೃದಯ-ಮುಖ-ತಾಲು-ಪೂರ್ವಾಂಗ ಈ ಸ್ಥಾನಗಳಲ್ಲಿ ಹುಟ್ಟುವವು. ಆಯಾ ರಾಗಗಳನ್ನು ಕಾಲಾನುಕ್ರಮವಾಗಿ ಹಾಡಿದರೆ ರಂಜಿಸಬಲ್ಲವು. ಸಪ್ತ ಸ್ವರಗಳನ್ನು ಯಥಾರ್ಥ ಜ್ಞಾನ ಮಾಡಿಕೊಂಡು ಉದ್ಭವ ಸ್ಥಾನಗಳಿಗೆ ಮುಟ್ಟಿಸಿ ಹಾಡಬಲ್ಲ ಗಾಯಕನು ಜ್ಞಾನಿಯಾಗಬಲ್ಲ. ನರರಿಗಾಗಿ ಸ್ವರದಂಡನೆ ಮಾಡಿದರೆ ವ್ಯರ್ಥ. ಈಶ್ವರನ ಪ್ರೀತಿಗಾಗಿ ಸ್ವರದಂಡಿಸುವುದು ಯೋಗ್ಯ. ಎಂದು ಹೇಳಲು ಗಾಯಕನು ಹರ್ಷಿತನಾದನು.

ಅಲ್ಲಿಂದ ಹೊರಟ ಸಿದ್ಧನು ವಿಷ್ಣುಪಾದ ದರ್ಶನ ಪಡೆದು ವೈಜನಾಥ ಕ್ಷೇತ್ರಕ್ಕೆ ಬಂದನು. ಅಲ್ಲಿ ಪೂಜಾರಿಗಳು ಈಶ್ವರನಿಗೆ ಅಭಿಷೇಕ ಮಾಡುತ್ತಿದ್ದರು. ಅದನ್ನು ಕಂಡು ಸಿದ್ಧನು 'ಸೂರ್ಯನು ನಮಸ್ಕಾರ ಪ್ರಿಯ. ವಾಯುವು ಗಂಧಪ್ರಿಯ. ಗಣಪತಿ ದೂರ್ವಾ ಪ್ರಿಯ. ಅದರಂತೆ ಈಶ್ವರನು ಅಭಿಷೇಕ ಪ್ರಿಯನು. ಸಾಮಾನ್ಯ ಜನಗಳ ಉನ್ನತಿಗೆ ಇಂಥ ಉಪಾಸನೆ

ಒಳ್ಳೆಯದೇ. ಯಾಕಂದರೆ ಅವರು ಪೂಜಿಸುವುದು ಜಡವಾದ ಶಿಲೆಯಿಂದ ನಿರ್ಮಿತವಾದ ಮೂರ್ತಿಯನ್ನು ನಿಜ. ಆದರೆ ಅಲ್ಲಿ ಶಿಲಾ ಬುದ್ಧಿ ಇರುವುದಿಲ್ಲ. ಸರ್ವಶಕ್ತನಾದ ಪರಮಾತ್ಮನೆಂಬ ಭಾವವಿರುತ್ತದೆ. ಅದರಂತೆ ದೇಹವೇ ನಾನೆಂಬ ಬುದ್ಧಿಯನ್ನು ತೆಗೆದುಹಾಕಲಿಕ್ಕೆ ಸಾಧ್ಯವಾದರೆ ಆತ್ಮ ಬುದ್ಧಿ ತಾನೇ ತಾನಾಗಿ ಉಳಿಯುತ್ತದೆ. ಇದೇ ವಿಚಾರದಿಂದ ನಮ್ಮ ಪ್ರಾಚೀನರಾದ ಶಾಸ್ತ್ರಕಾರರು ಇಂಥ ಉಪಾಸನಾದಿಗಳನ್ನು ಯೋಚಿಸಿದ್ದಾರೆ. ಎಂದುಕೊಂಡು ಮುಂದೆ ಸಾಗಿದನು.

ಅರುಣಾಚಲ ಕ್ಷೇತ್ರಕ್ಕೆ ಬಂದು ಧ್ಯಾನಪ್ರಿಯನಾದ ಆ ದೇವರನ್ನು ಕಾಣುತ್ತ ನನ್ನ ಆತ್ಮನೆನಿಸಿದ ಚಿತ್ಪ್ರಕಾಶನೇ ಇವನೆಂದು ಕೆಲಕಾಲ ಧ್ಯಾನಿಸಿ ಮಾನಸಿಕ ವಿಶೇಷ ಪೂಜೆ ಮಾಡಿದನು. ಸ್ಮರಣ ಮಾತ್ರದಿಂದಲೇ ಪರಮಾತ್ಮ ಮೋಕ್ಷವನ್ನು ಕೊಡಬಲ್ಲ ಎಂಬ ಶಾಸ್ತ್ರಾನುಸಾರವಾಗಿ ಧ್ಯೇಯ ವಸ್ತುವಿನಲ್ಲಿ ತನ್ಮಯನಾಗಿ ಸಿದ್ಧನು ಕುಳಿತು ಪರ್ವತದಿಂದ ಕೆಳಗಿಳಿದು ಗಂಗೆಯು ಶತಮುಖದಿಂದ ಸಮುದ್ರವನ್ನು ಸೇರುವ ಸ್ಥಳಕ್ಕೆ ಬಂದನು. 'ಆಹಾ, ಭಕ್ತಿ ರಸಮಯಳೆನಿಸಿದ ಈ ಗಂಗೆಯು ಭಗೀರಥನ ತಪಸ್ಸಿಗೆ ಮೆಚ್ಚಿ ಶಿವನ ಜಟಾಜೂಟದಿಂದಿಳಿದು ಮೂರು ಲೋಕ ಪಾವನ ಮಾಡಲು ಧಾವಿಸಿದಳು. ಎಂದು ಬಗೆಯುತ್ತ ಕಲಕತ್ತೆಗೆ ಬಂದು ಅಲ್ಲಿ ಮಹಾಕಾಲಿಯನ್ನು ನೋಡಿಕೊಂಡು ಜಗನ್ನಾಥಪುರಿಗೆ ಆಗಮಿಸಿದನು. ಅಲ್ಲಿ ದೇವದರ್ಶನ ಪಡೆದು ಏಳು ಪಾತ್ರೆಗಳನ್ನು ಒಂದರ ಮೇಲೊಂದರಂತೆ ಏರಿಸಿ ಅನ್ನ ಬೇಯಿಸುವುದನ್ನು ಕಂಡನು. ಹೀಗೆ ಸಿದ್ಧಗೊಳಿಸಿದ ಅನ್ನವೇ ದೇವರಿಗೆ ನೈವೇದ್ಯವಾಗಿ ಅದನ್ನೆಲ್ಲ ಅತಿಥಿಗಳಿಗೆ ಹಂಚುವರು. ಸಾಲು ಹಿಡಿದು ನಿಂತ ಸಿದ್ಧನಿಗೂ ಪೂಜಾರಿ ಪ್ರಸಾದವನ್ನು ಕೊಟ್ಟನು. ಇದು ಅನ್ನಬ್ರಹ್ಮನ ಸ್ಥಾನವೆಂದು ಹೇಳುವರು. ಇಷ್ಟರಲ್ಲಿ ಅಲ್ಲಿಗೆ ಬಂದ ಬ್ರಾಹ್ಮಣನೊಬ್ಬನು ಅಡಿಗೆಮಾಡಿಕೊಂಡು ದೇವರಿಗರ್ಪಿಸಿ ಸಿದ್ಧನಿಗೆ ಕೂಡ ಸಾಕಾಗುವಂತೆ ಅನ್ನವನ್ನು ಕೊಟ್ಟನು. ಅದನ್ನು ಆನಂದದಿಂದ ಸ್ವೀಕರಿಸಿ ಸಿದ್ಧನು ಬೇರೆ ಕಡೆಗೆ ತೆರಳಿದನು.

ತರುವಾಯ ಸಮುದ್ರ ತೀರಕ್ಕೆ ಬರುತ್ತ ಕಬೀರದಾಸನ ಮಂದಿರದಲ್ಲಿಯ ಸಂತರನ್ನು ಕಂಡನು- ಅವರೆಲ್ಲರು ರಾಮನಾಮವನ್ನು ಜಪಿಸುತ್ತಿದ್ದರು. ಕ್ಷಣಮಾತ್ರ ಅಲ್ಲಿದ್ದು ಸಿದ್ಧನು ಅವರಿಗೆ ನಾಮ ಮಹಿಮೆಯನ್ನು

ಕೊಡುವ ತಾರಕೋಪದೇಶ ಮತ್ತು ಜ್ಞಾನೋಪದೇಶಗಳು ಪರಸ್ಪರ ಭಿನ್ನ ವೆಂದು ತಿಳಿಯಬಾರದು. ಎರಡೂ ಒಂದೇ ಎಂದು ಸಮನ್ವಯ ಮಾಡಿ ಕೊಂಡು ನೋಡಬೇಕು. ಅದರಿಂದ ಕಲ್ಯಾಣವಿದೆ.' ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಪಂಡಿತರು ಆನಂದ ಹೊಂದಿ ತೆರಳಿದರು.

ತರುವಾಯ ಸಿದ್ಧ ವಿಶ್ರಾಂತಿ ಹೊಂದುತ್ತ ಕುಳಿತಿರಲು ಆ ಪಂಡಿತರು ಮೂವರು ಓಡುತ್ತ ಬಂದು ಸಿದ್ಧನನ್ನು ವಿಚಾರಿಸಿದರು.

ನೀವು ಹೇಳಿದ ಉಪದೇಶದ ಮಾತು ನಮಗೆ ಎಳ್ಳಷ್ಟೂ ಉಪಯುಕ್ತ ವೆನಿಸಲಿಲ್ಲ. ಯಾಕಂದರೆ ಅಪ್ರತ್ಯಕ್ಷವೂ, ಅಶ್ರುತವೂ ಆದ ವಾಕ್ಯವನ್ನು ಕೇಳುವುದರಿಂದ ಮನಸ್ಸಿಗೆ ಅಭಾವ ಮಾತ್ರ ಉಂಟಾಗುತ್ತದೆ. ಸದ್ಭಾವವೂ ಹುಟ್ಟಲಿಲ್ಲ. ಇತ್ತ ಜ್ಞಾನವಂತೂ ಇಲ್ಲವೇ ಇಲ್ಲ. ನೀವು ಸದ್ಗುರುಗಳು ಎಲ್ಲ ವನ್ನು ತಿಳಿದವರು. ಹೀಗಾಗುವ ಕಾರಣವನ್ನು ದಯಮಾಡಿ ಹೇಳಬೇಕು.'

'ಅಯ್ಯ, ಜ್ಞಾನವು ಎಂದಿಗೂ ಲಯವಾಗುವಂಥದಲ್ಲ. ಈಗ ನೋಡಿರಿ. ಮನಸ್ಸು ಲಯವಾಗುವುದೆಂಬುದನ್ನು ನೀವು ತಿಳಿದು ಹೇಳುವಿರಲ್ಲವೇ ? ಹೀಗೆ ಹೇಳುವ ಶೂನ್ಯವಾದದಲ್ಲಿ ಜ್ಞಾನವು ಇದ್ದೇ ಇರುವುದೆಂಬ ಭಾವವು (ಸದ್ಭಾವವು) ಚನ್ನಾಗಿ ಹೇಳಿದಂತಾಯಿತು.

'ನಿಮ್ಮ ಮಾತಿನ ರೀತಿ ಚಮತ್ಕಾರವೇ ಸರಿ. ತಾನು ನೋಡಿದರೆ ರಂಕನಾಗಿದ್ದು ರಾಜನೆಂದುಕೊಂಡಸಂತೆ.'

'ನಿಮ್ಮ ಮಾತಿನ ರೀತಿಯೂ ಹಾಗೇ ಸರಿ. ಭ್ರಾಂತರಾಗಿ ಏನಾದರೂ ಬಡಬಡಿಸುತ್ತೀರಿ.'

'ನಮ್ಮದೂ ಒಂದು ಬಗೆ. ನಿಮ್ಮದೂ ಒಂದು ಬಗೆ. ಎಂದು ಬಿಟ್ಟರೆ ತತ್ವ ನಿರ್ಣಯವೇನು ?'

'ತತ್ವ ನಿರ್ಣಯವೇ? ಕತ್ತಲೆ ಇರಲಿ. ಬೆಳಕಿರಲಿ. ಎರಡನ್ನೂ ಅಂಟಿ ಸಿಕೊಳ್ಳದೇ ಆಕಾಶವಿರುವಂತೆ ಆತ್ಮನು ನಿರ್ಮಲನಾಗಿದ್ದಾನೆ.'

'ಆ ನಿತ್ಯ ನಿರ್ಮಲನ ಅನುಭವ ನಮಗೇಕೆ ಬರಬಾರದು ?'

'ನಿಮ್ಮ ಪಾಂಡಿತ್ಯದ ಅಭಿಮಾನದಿಂದ ನಿತ್ಯ ವಸ್ತುವು ಕಾಣದಂತಾ ಗಿದೆ. ಪಾಂಡಿತ್ಯವೆಂಬುದು ನಿಜವಾದ ಬುದ್ಧಿ ಧರ್ಮ. ಅದು ನನ್ನದೆಂದು

ತಿಳಿಯುವುದು ಅಭಿಮಾನ. ಈ ಜನ್ಮದಲ್ಲಿ ನೀವು ಅಂಥ ಅಭಿಮಾನವುಳ್ಳವರಾಗಿ ನಡೆಯುವುದರಿಂದ ಮುಂದಿನ ಜನ್ಮದಲ್ಲಿ ಬ್ರಹ್ಮರಾಕ್ಷಸರಾಗುತ್ತೀರಿ.'

ಸಿದ್ಧನ ಈ ಮಾತನ್ನು ಕೇಳಿ ಆ ಪಾಂಡಿತ್ಯಾಭಿಮಾನಿಗಳು ಭಯಗೊಂಡು 'ಮಹಾತ್ಮನೇ ಹಾಗಾಗುವುದು ಬೇಡ. ನಾವಿನ್ನು ನ್ಯಾಯಶಾಸ್ತ್ರದ ಅಭ್ಯಾಸ ಬಿಟ್ಟೆವು. ಶರಣಾಗತರಾದ ನಮಗೆ ಜ್ಞಾನವನ್ನು ನೀಡಿ ಉದ್ಧರಿಸು. ಎಂದು ಬೇಡಿಕೊಳ್ಳತೊಡಗಿದರು. ಸಿದ್ಧನು ' ಒಳ್ಳೇದು ನೀವು ನಿಜವಾಗಿ ಶುದ್ಧ ಭಾವನೆಯುಳ್ಳವರಾಗಿದ್ದರೆ ನಿಮಗೆ ಈಶ್ವರ ಕೃಪೆಯಿಂದ ಜ್ಞಾನವು ಸಿದ್ಧಿಸಲಿ' ಎಂದು ಹೇಳಿದನು. ಅವರು ಹರ್ಷಿತರಾಗಿ ತೆರಳಿದರು. ಆ ನಂತರ ಸಿದ್ಧನು ಅಹಲ್ಯಾಘಾಟ, ನಾರದಘಾಟ, ಚೌಸತ್ತಿಘಾಟ, ಪಾಂಡೇಶ್ವರಘಾಟ, ಮಹಾ ಸ್ಮಶಾನಘಾಟ, ಯಕ್ಷರಾಜ ಘಾಟಗಳನ್ನು ಅಡ್ಡಾಡುತ್ತ ನಂಗಾ ಘಾಟಿಗೆ ಬಂದನು.

ಅಲ್ಲಿಯ ಒಬ್ಬ ನಂಗಾ (ಬತ್ತಲೆ)ಬೈರಾಗಿಯು ಸಿದ್ಧನಿಗಂದನು. 'ವಸ್ತ್ರವನ್ನು ಧರಿಸುವವರಿಗೆ ಚಿಂತೆ ಬಹಳ. ಸುಖವಂತೂ ಇಲ್ಲವೇ ಇಲ್ಲ. ನೀವು ನಿಜವಾಗಿಯೂ ಸಾಧುಗಳಾಗಿದ್ದರೆ ವಸ್ತ್ರ ಧರಿಸುವ ಲಂಪಟತನವೇಕೆ ?

'ನಮ್ಮದಿರಲಿ. ನೀವಂತೂ ವಸ್ತ್ರವಿಲ್ಲದವರು ಹೇಳಿ. ಇಂದ್ರಿಯಗಳು ಮತ್ತು ವಿಷಯಗಳು ಇವುಗಳ ಸಂಯೋಗವಾಗಲು ನಿಮಗೆ ಸುಖ-ದುಃಖವಾಗುವದಿಲ್ಲವೇ ?'

'ನನ್ನ ಮಾತನ್ನಷ್ಟು ಪೂರ್ಣವಾಗಿ ಕೇಳಿಕೊಳ್ಳಿರಿ. ನಾವು ಸಹನೆಯಿಂದ ಸುಖ ದುಃಖಗಳನ್ನು ನುಂಗಿಕೊಳ್ಳುತ್ತೇವೆ.'

'ಅದು ಸಹನೆಯ ಮಾತಾಯಿತು. ವಸ್ತ್ರ ಬಿಡುವುದಕ್ಕೂ, ತೊಡುವುದಕ್ಕೂ ಅದರ ಸಂಬಂಧವೇನು ?'

ಸಿದ್ಧನ ಈ ಮಾತಿನಿಂದ ಚಕಿತನಾದ ಬೈರಾಗಿ ' ಓ, ನೋಡಲಿಕ್ಕೆ ಇವನು ಹುಚ್ಚನಂತೆ ಕಾಣುತ್ತಾನೆ. ಆದರೆ ಅಂತರಂಗದಲ್ಲಿ ಪೂರ್ಣಜ್ಞಾನಿ.' ಎಂದುಕೊಂಡು ಹೊರಟು ಹೋದನು. ಸಿದ್ಧನು ವ್ಯಾಸಕಾಶಿಯನ್ನು ಕಂಡು ರಾಮನಗರಕ್ಕೆ ಬಂದು ಅಲ್ಲಿಯ ಸರೋವರದ ದಂಡೆಯಲ್ಲಿ ತುಸು ವಿಶ್ರಮಿಸಿ ಗಿರಿಜಾದೇವಿಯ ಮಂದಿರಕ್ಕೆ ಬಂದು ಶಾಂತವಾಗಿ ಕುಳಿತನು. ಅಷ್ಟರಲ್ಲಿ ಬಂದ ಆ ದೇವಿಯ ಪೂಜಾರಿ ಸಿದ್ಧಾರೂಢನನ್ನು ನೋಡಿ 'ಆಹಾ, ಇವನು

ಯಾರೋ ಶ್ರೇಷ್ಠ ಅತಿಥಿಯಂತೆ ಕಾಣುತ್ತಾನೆ. ಆದರೆ ಬಹಳ ದಿನಗಳಿಂದ ಇವನಿಗೆ ಊಟವು ಸಿಕ್ಕಿಲ್ಲವೆಂಬುದನ್ನು ಬೆನ್ನಿಗೆ ಹತ್ತಿದ ಹೊಟ್ಟೆಯೇ ಸಾರುತ್ತದೆ.' ಎಂದು ವಟಗುಡುತ್ತಿರಲು ಅದನ್ನು ಕೇಳಿಕೊಂಡ ಸಿದ್ಧನು ಯೋಚಿಸಿದನು. 'ಹಿಂದೆ ಮೂರು ದಿನಗಳವರೆಗೆ ಕಾಶಿಯಲ್ಲಿ ವ್ಯಾಸಮುನಿಗೆ ಊಟ ದೊರೆಯದಂತಾಗಲು ಅವನು ಕಾಶಿಯನ್ನು ತುಚ್ಛ ಮಾಡಿದನಂತೆ. ಆಗ ವಿಶ್ವನಾಥನು ಕೋಪಗೊಂಡು 'ನೀನು ಕಾಶಿಯನ್ನು ಬಿಟ್ಟು ತೊಲಗು.' ಎಂದು ಹೇಳಿದನಂತೆ. ನನಗೂ ಅಂಥ ಸ್ಥಿತಿಯೇ ಬಂದಿರಬಹುದೇ ?' ನನಗೂ ಕಾಶಿಯಲ್ಲಿ ಮೂರು ದಿನ ಉಪವಾಸವಾಯಿತು. ಇನ್ನು ಕಾಶಿಯನ್ನು ಬಿಟ್ಟು ಎಲ್ಲಿಯಾದರೂ ಹೊರಗೆ ಪಾರಣೆಯಾಗುವದೇನೋ ನೋಡಬೇಕು. ಪ್ರಾರಬ್ಧ ಸೇವಕನು ಯಾವ ಯಾವ ಎಡೆ ಬಡಿಸುವನೋ ತಿಳಿಯದು.' ಎಂದುಕೊಳ್ಳುತ್ತ ಸಮಾಧಾನದಿಂದ ಕುಳಿತಿರಲು ಇವನ ಪ್ರಸನ್ನ ಮುಖವನ್ನು ನೋಡಿ ಪೂಜಾರಿಯು ಮಾತಾಡಿಸಿದನು. 'ಎಲೈ ಅತಿಥಿಯೇ ನೀನು ಯಾರು?'

'ನೀನೇ ನಾನು. ನಿತ್ಯ ಪರಿಪೂರ್ಣ.'

'ಊಟ ಮಾಡುವ ಇಚ್ಛೆಯುಂಟೇ ?'

'ನೀನು ಅನ್ನವಿಕ್ಕಿದರೆ ಮಾತ್ರ.'

'ಬಾ ಮನೆಗೆ.'

'ಅಯ್ಯ, ಅತಿಥಿಯನ್ನು ಮನೆಗೆ ಕರೆದೊಯ್ದು ಅನ್ನವಿಕ್ಕಿದರೆ ಪುಣ್ಯ ತುಸು ಕಡಿಮೆಯಾಗುವುದು. ಅತಿಥಿ ಇರುವಲ್ಲಿಗೆ ಅನ್ನ ತಂದು ಹಾಕಿದರೆ ಹೆಚ್ಚು ಪುಣ್ಯ ದೊರೆಯುವುದು ನೋಡು.'

ಪೂಜಾರಿ ಲಗುಬಗೆಯಿಂದ ಮನೆಗೆ ಬಂದು ಮಿಷ್ಟಾನ್ನವನ್ನು ಬಡಿಸಿ ತಂದನು. ಸಿದ್ಧನಿಗೆ ಹೊಟ್ಟೆ ತುಂಬ ಸುಗ್ರಾಸ ಭೋಜನವಾಯಿತು. ಆಮೇಲೆ ಸಿದ್ಧನು ಪಂಚಕ್ರೋಶಿ ಯಾತ್ರೆ ಮುಗಿಸಬೇಕೆಂದನು.

ಜನಕರಾಜನು ಸ್ಥಾಪಿಸಿದ ಕರ್ದಮೇಶ. ಭೀಮಚಂಡಿಯ ದರ್ಶನ. ಗಂಧರ್ವಸೇನ-ಪಶ್ಚಿಮೇಶ ಲಿಂಗದರ್ಶನ. ಮುಂದೆ ಆಯೋಧ್ಯಾಧೀಶ ರಾಮ ಪಡಾಪತನ. ಪಾಂಡವರ ಮೂರ್ತಿಗಳನ್ನು ನೋಡಿಕೊಂಡು ಕೊನೆಯ ಕಪಿಲ ಧಾರಾ ತೀರ್ಥದಲ್ಲಿ ಸ್ನಾನ ತೀರಿಸಿ, ಸಿದ್ಧಕರಿ ಮೊದಲಾದ ಲಿಂಗಗಳನ್ನು ನೋಡಿಕೊಂಡು ಸ್ವರ್ಗ ಫಲದಾಯಿನಿಯನ್ನು ಕಂಡನು. ಅರಣ್ಯ

ಲಿಂಗ ದರ್ಶನ ಪಡೆದನು. ನಂತರ ಸಿರ್ವಶ್ಯಾ–ಸರ್ವಸುಂದರಿಬುದ್ಧಿ–ಸ್ವಾಹಾ-ಮಹಾಸಿದ್ರೆ ಮೊದಲಾದ ಶಕ್ತಿಗಣವನ್ನು ಅವಲೋಕಿಸಿದನು.

ಹೀಗೆ ಸಿದ್ಧನು ಪಂಚಕ್ರೋಶಿಯಾತ್ರೆಯನ್ನು ಪೂರೈಸಿ ಒಂದು ಸ್ಥಳದಲ್ಲಿ ಸ್ವಸ್ಥವಾಗಿ ಕುಳಿತಿರಲು ಒಬ್ಬ ಗೃಹಸ್ಥನು 'ಸಕ್ತು' (ಹುರಿದ ಧಾನ್ಯದ ಹಿಟ್ಟು) ವನ್ನು ಒಯ್ಯುತ್ತಿದ್ದನು. ಅವನು ಸಿದ್ಧನಿಗೆ ಬೊಗಸೆ ತುಂಬ ಹಿಟ್ಟು ಕೊಡಲು ಅದನ್ನು ಮುಕ್ಕುತ್ತ ಸಿದ್ಧ ಕುಳಿತಿದ್ದನು. ದೈವವಶಾತ್ತಾಗಿ ಆ ಮಾರ್ಗವಾಗಿ ಮೊಸರು ಒಯ್ಯುವವರೊಬ್ಬರು ಮೊಸರು ಕೊಟ್ಟರು. ಅದರಲ್ಲಿ ಹಿಟ್ಟು ಕಲಿಸಿ ಅಮೃತಾನ್ನದಂತೆ ಅದನ್ನು ಸಿದ್ಧ ಭಕ್ಷಿಸಿದನು. ಆ ಸಮಯದಲ್ಲಿ ಯೋಚನೆ ಮಾಡಿದುದೇನಂದರೆ ತೀರ್ಥ-ಕ್ಷೇತ್ರಗಳ ಯಾತ್ರೆ ಮಾಡಲು ಶಕ್ತಿ ಸಾಲದವರು ಕೊನೆಯ ಪಕ್ಷ ಎಲ್ಲ ತೀರ್ಥ-ಕ್ಷೇತ್ರಗಳ ಹೆಸರುಗಳನ್ನಾದರೂ ಪಠಿಸುತ್ತಿರಬೇಕು. ಅವೆಲ್ಲ ಪರಮಾತ್ಮ ವಾಚಕಗಳಾದುದರಿಂದ ಪರಮಾತ್ಮ ರೂಪ ಹೊಂದುವರು.

ನಂತರ ಸಿದ್ಧನು ಪ್ರಯಾಗಕ್ಕೆ ಬಂದನು. ಭಾವಿಕರು ದಕ್ಷಿಣ ರಾಮೇಶ್ವರದಿಂದ ಸೇತುವಿನ ಮಣ್ಣನ್ನು ತಂದು ತ್ರಿವೇಣಿ ಸಂಗಮದಲ್ಲಿ ಅದನ್ನು ಹಾಕುತ್ತಿದ್ದರು. ಅದನ್ನು ಕಾಣುತ್ತ ಸಿದ್ಧನು 'ಅಹಾ, ಇವೆಲ್ಲ ಭಗವಂತನ ಸೇವೆಗಳೇ. ಭಕ್ತಿಪೂರ್ವಕವಾಗಿ ಇವುಗಳನ್ನಾಚರಿಸುವುದರಿಂದ ಪಾಪನಾಶವಾಗಿ ಶುದ್ಧರಾದವರು ಜ್ಞಾನಕ್ಕೆ ಅಧಿಕಾರಿಗಳಾಗುವರು.' ಎಂದುಕೊಳ್ಳುತ್ತ ಸಂಗಮನಾಥ ಅಕ್ಷಯ ವಟಗಳ ದರ್ಶನ ಮಾಡಿಕೊಂಡು ಮೊಗಲ ಸರಾಯಿ ಎಂಬ ನಗರ ಪ್ರವೇಶ ಮಾಡಿದನು. ಅಷ್ಟರಲ್ಲಿ ನೋಡನೋಡುವದು ಮಳೆ ಬರಲಾರಂಭಿಸಿತು. ಸಿದ್ಧನು ಅಲ್ಲಿಯ ಒಬ್ಬ ಸಾವುಕಾರನ ಮನೆ ಪ್ರವೇಶಿಸಿ ಶಾಂತನಾಗಿ ಕುಳಿತುಬಿಟ್ಟನು. ಆಗ ಕಾವಲುಗಾರನು ಅವನನ್ನು ಕಂಡು 'ಎಲೈ ಯಾರು ನೀನು ? ಇಲ್ಲಿಗೇಕೆ ಬಂದು ಕುಳಿತೆ?' ಎಂದು ಕೇಳಲು ಸಿದ್ಧನು 'ಇದು ಧರ್ಮಶಾಲೆಯಾದುದರಿಂದ ಬಂದು ಕುಳಿತಿದ್ದೇನೆ' ಎಂದು ಹೇಳಿದನು.

ಆಗ ಕಾವಲುಗಾರ ನುಡಿದನು. 'ಹುಚ್ಚರಂತೆ ಮಾತಾಡಬೇಡ. ಇದು ದೊಡ್ಡ ಸಾವುಕಾರರ ಮನೆ. ಒಳಗೆ ಸಾವುಕಾರರಿದ್ದಾರೆ.'

' ಆದರೇನೂ ಇದು ಧರ್ಮಶಾಲೆ ಎಂಬುದು ಸುಳ್ಳಲ್ಲ.'

ಹೇಳಬೇಕೆಂದು ಭಕ್ತರೇ ಹೇಳಿರಿ. ವಾಲ್ಮೀಕಿ ಋಷಿಯು ಮೊದಲು ರಾಮಾಯಣವನ್ನು ರಚಿಸಲು ಈಶ್ವರನು ಅವನ್ನು ಮೂರು ಭಾಗ ಮಾಡಿ ಮೂರು ಲೋಕಗಳಲ್ಲಿ ಹಂಚಿಕೊಟ್ಟನು. 'ರಾಮ'ವೆಂಬ ಎರಡು ಅಕ್ಷರಗಳು ಉಳಿದವು. ಆ ನಾಮವನ್ನು ಒಂದು ಸಾರೆ ಉಚ್ಚರಿಸಿದರೆ ಸಾಕು. ಭುಕ್ತಿ-ಮುಕ್ತಿಗಳೆರಡೂ ದೊರೆಯುವವು. ಎರಡು ಸಾರೆ ಉಚ್ಚರಿಸಿದರೆ ನಾಮದಲ್ಲಿ ವಿಶ್ವಾಸವು ಉಚ್ಚರಿಸುವವರಿಗೆ ಇಲ್ಲವೆನ್ನಬೇಕಾಗುವುದು. ಆದುದರಿಂದ ಒಂದು ಸಾರೆ ಮಾತ್ರ ನಾಮವನ್ನು ಉಚ್ಚರಿಸಬೇಕು. ಉಚ್ಚರಿಸುವಾಗ ತದಾಕಾರ ವೃತ್ತಿಯನ್ನು ಮಾಡಿ ತುಸುಕೂಡ ವಿಚಲಿತವಾಗದೇ ಜಪಿಸಿದಲ್ಲಿ ಆತ್ಮಸಾಕ್ಷಾರ ಸಿದ್ಧ. ನಾಮ ಮಹಿಮೆಯು ಹೀಗಿರುವುದರಿಂದ ಪುನಃ ನಾಮವನ್ನು ಉಚ್ಚರಿಸಿದರೆ ದೇಹ ಭಾವಕ್ಕೆ ಬರಬೇಕಾಗುವುದು.' ಹೀಗೆ ಹೇಳಲು ಸಂತರೆಲ್ಲ ಆನಂದವನ್ನು ಹೊಂದಿದರು.

ಸಿದ್ಧನು ಅಲ್ಲಿಂದ ಹೊರಟು ಬರುತ್ತಿರಲು ಮುಂದೆ ನದೀಪ್ರವಾಹವು ಕಾಣಲು ಅದನ್ನು ದಾಟಬೇಕೆಂದು ಅಂಬಿಗನನ್ನು ಕೂಗಬೇಕಾಯಿತು. ಅಂಬಿಗ ಬಂದು ಹೇಳಿದನು. 'ಸ್ವಾಮಿ, ನೀವು ಯಾರೆಂಬುದು ನನಗೆ ತಿಳಿಯಿತು. ಭವನದಿಯಿಂದ ಜನ ದಾಟಿಸಬೇಕಾದರೆ ಮುಂಗಡವಾಗಿ ಭಕ್ತಿ ನಾಣ್ಯ ಪಡೆಯುತ್ತೀರಿ. ನಾಣ್ಯ ಪಡೆಯದೇ ದಾಟಿಸುವ ಮಾತಿಲ್ಲ. ಅದರಂತೆ ನಾನೂ ಬೇಡುತ್ತೇನೆ. ನಾಣ್ಯ ಕೊಟ್ಟರೆ ದಾಟಿಸುವೆ ಇಲ್ಲವಾದರೆ ಇಲ್ಲ.'

'ಓ, ಚತುರನೇ ಉಪಾಧಿಗಳ ಭಾರವಿಲ್ಲದೇ ಶುದ್ಧತೆಯಿಂದ ಬಂದವರನ್ನು ದಾಟಿಸಲು ನಾನು ಏನೂ ತೆಗೆದುಕೊಳ್ಳುವದಿಲ್ಲ. ಅದರಂತೆ ನೀನೂ ಮಾಡಬೇಕು. ನೋಡು ನನಗೆ ಉಪಾಧಿಯ ಯಾವ ಭಾರವಿದೆ. ನನ್ನಲ್ಲಿ ಕೌಪೀನವೊಂದು ನಿನಗೆ ಕಾಣುತಿರಬಹುದು. ಬೇಕೆಂದರೆ ಅದನ್ನೂ ತ್ಯಾಗ ಮಾಡಬಲ್ಲೆನು ನನ್ನನ್ನು ದಾಟಿಸಿಬಿಡು.'

ಅದೇಕೋ ಇಂಥ ವೈರಾಗ್ಯ ಮೂರ್ತಿಯಲ್ಲಿ ಹಣ ಯಾಚಿಸುವುದು ಅಂಬಿಗನಿಗೆ ನಾಚಿಕೆ ಎನಿಸಿ ಏನೂ ಬೇಡದೇ ಅವನು ನದಿ ದಾಟಿಸಿದನು. ಅದರ ಲಾಭ ಬೇರೆ ವಿಧದಿಂದ ಅವನಿಗೆ ದೊರಕಿತೆಂಬ ಮಾತು ಬೇರೆ. ಅಂದು ದಿನಕ್ಕಿಂತ ನಾಲ್ಕು ಪಟ್ಟು ಹೆಚ್ಚು ಲಾಭವಾಗಲು ಈ ಮಹಾತ್ಮನನ್ನು ದಾಟಿಸಿದುದಕ್ಕೆ ನನಗೆ ಲಾಭವಾಯಿತೆಂದು ಅವನು ಸಂತೋಷಿತನಾದನು. ಆಗ

ಮಹಾತ್ಮನಾದ ಸಿದ್ಧನ ಬಳಿಗೆ ಬಂದು ಒಂದು ದೊಡ್ಡ ಚಾದರವನ್ನು ಅರ್ಪಿಸಲು ಸಿದ್ಧನು ಬೇಡವೆಂದು ಹೇಳಿ ಅತ್ಯಾಗ್ರಹಪಡಿಸಿದ್ದರಿಂದ ಒಂದು ಕೌಪೀನವನ್ನು ಮಾತ್ರ ಸ್ವೀಕಾರ ಮಾಡಿದನು. ಸಿದ್ಧನ ಈ ಆಚರಣೆಯು ಎಲ್ಲರಲ್ಲಿಯೂ ಆಶ್ಚರ್ಯವನ್ನು ಹುಟ್ಟಿಸದೆ ಹೋಗಲಿಲ್ಲ.

ಸಿದ್ಧನು ಆ ಸ್ಥಳದಿಂದ ಬಡತನ ದೇಶವಾದ ಓಡಿಸಾಕ್ಕೆ ಬಂದನು. ಬಡತನವು ಮನುಷ್ಯರ ತಾಳ್ಮೆಯನ್ನು ಕಳೆಯುವುದೋ ಏನೋ? ಭಿಕ್ಷೆಗೆಂದು ಯಾರ ಬಾಗಿಲಿಗೆ ಹೋದರೂ 'ಓಹೋ ಯಾವನೋ ಕಳ್ಳ. ಪಾಳತಿಗೆ ಬಂದಿದ್ದಾನೆ ನಡೆಯಾಚೆ' ಎಂದು ಗದರಿಸುವರು. ಈ ಸ್ಥಿತಿಯನ್ನು ಕಂಡ ಸಿದ್ಧನು ಊರಲ್ಲಿ ಸೇರದೆ ಅರಣ್ಯ ಮಾರ್ಗವನ್ನು ಹಿಡಿದು ನಡೆಯತೊಡಗಿದನು. ಮಾರ್ಗದಲ್ಲಿ ಒಂದುವೇಳೆ ಯಾರಾದರೂ ದಾರಿಕಾರರು ಭೆಟ್ಟಿಯಾಗಿ ಅನ್ನವಿತ್ತರೆ ಉಂಟು. ಇಲ್ಲವಾದರೆ ಉಪವಾಸ. ಈ ದಾರಿಯಲ್ಲಿ ಅನ್ನ ನೀರುಗಳಿಲ್ಲದ ಉಪವಾಸ ದಿನಗಳೇ ಬಹಳವಾದವು. ಹಗಲಿನಲ್ಲಿ ಬಿಸಿಲು, ರಾತ್ರಿ ಥಂಡಿ. ಇಂಥ ವೇಳೆಯಲ್ಲಿ ಹೊದೆಯಲಿಕ್ಕೆಂದರೆ ಪರಮಾವಧಿಯ ಸಹನೆ.

ಹೀಗೆ ಸಾಗಿರಲು ಒಬ್ಬ ಬೈರಾಗಿಯು ಭೆಟ್ಟಿಯಾದನು. ಅವನು ಹೇಳಿದುದೇನಂದರೆ—ನೀವೀಗ ಛತ್ತೀಸಗಡಕ್ಕೆ ಸಾಗಿದಂತೆ ತೋರುತ್ತದೆ. ಮಾರ್ಗದಲ್ಲಿ ಮಂಗಗಳ ಉಪದ್ರವ ಬಹಳ. ಎಚ್ಚರಿಕೆ ಎಂದು.

ಕೇಳಿ ಸಿದ್ಧ ನುಡಿದನು.

'ಅಯ್ಯ, ಮಂಗಗಳು ಕಸಿದುಕೊಳ್ಳುವ ಪದಾರ್ಥ ನನ್ನಲ್ಲಿ ಇರುವುದಾದರೂ ಏನು ? ಇನ್ನು ತಿರುತಿರುಗಿ ದೇಹದ ಚಿಂತೆ. ಹೇಗಿದ್ದರೂ ಇದು ನಾಶವಾಗತಕ್ಕುದು. ಅದು ತಾನು ಮಾಡಲು ಬಂದ ಕರ್ತವ್ಯ ಮುಗಿಯುವವರೆಗೆ ಬಿದ್ದು ಹೋಗಲಾರದು. ಹೀಗಾಗಿ ನನಗೆ ಅದರ ಚಿಂತೆ ಇಲ್ಲ. ಇದರಲ್ಲಿ ವಾಸಮಾಡಿರುವ ಆತ್ಮನನ್ನು ತಿಳಿದರೆ ಆಗ ಎಲ್ಲ ದುಃಖ ನಾಶವಾಗುವವು. ಜ್ಞಾನಿಗೆ ಯಮನ ಭೀತಿ ಕೂಡ ಇಲ್ಲ. ಎಂದಮೇಲೆ ಕ್ಷುದ್ರ ಕಪಿಗಳ ಅಂಜಿಕೆ ಏನು ?'

ಎನ್ನುತ್ತ ಸಿದ್ಧನು ಹೊರಡಲು ಆ ಬೈರಾಗಿ ಹೇಳಿದಂತೆ ಅಸಂಖ್ಯ ಮಂಗಗಳು ಅಲ್ಲಿ ಕಂಡವು. ಸಿದ್ಧನು ಬಂದುದನ್ನು ನೋಡಿ ಅವು ಗಿಡದಿಂದ

ಹಾರಿ ಕೆಳಗೆ ಸಿದ್ಧನ ಬಳಿಗೆ ಬಂದು ಶೋಧ ಮಾಡತೊಡಗಿದವು. ತಿನ್ನುವ ಪದಾರ್ಥಗಳೇನೂ ಕಾಣದಾಗಲು ಮರಳಿ ಸುಮ್ಮನೆ ಮರವೇರಿದವು.

ಮುಂದಿನದೇ ಸಿಂಹಾಚಲ. ಅಲ್ಲಿಯ ನರಸಿಂಹ ಮೂರ್ತಿಯನ್ನು ಸಿದ್ಧ ನೋಡಿದನು. ಆಗ ಪೂಜಾರಿಯು ದೇವರಿಗೆ ಗಂಧವನ್ನರ್ಪಿಸುತಿರಲು, ಅದನ್ನು ಕಂಡು ಸಿದ್ಧನು, 'ನಿಜ. ನಿಜ. ಸದ್ವಾಸನಾಯುಕ್ತ ಮನವು ದೇವ ರನ್ನು ಸಂತೋಷಗೊಳಿಸಬಲ್ಲದು. ವಿಷಯ ವಾಸನೆ ತುಂಬಿದ ಮನಸ್ಸಿಗೆ ದೇವರು ಕಾಣುವುದಿಲ್ಲ. ಇವೆಲ್ಲವುಗಳನ್ನು ನಮ್ಮ ಪೂರ್ವ ಜನರು ಪೂಜೆಯ ವಿಧಾನದಲ್ಲಿ ಎಷ್ಟು ಕುಶಲತೆಯಿಂದ ಜೋಡಿಸಿದ್ದಾರೆ?' ಎಂದುಕೊಳ್ಳುತ್ತ ಸಿದ್ಧನು ಗುಡಿಯಿಂದ ಹೊರಗೆ ಬಂದು ಮುಖತೀರ್ಥದ ಬಳಿಯಲ್ಲಿ ವಿಶ್ರಾಂತಿ ಗೋಸ್ಕರ ಕುಳಿತುಕೊಂಡನು. ಆಗ ಒಮ್ಮೆಲೆ ಬಹಳ ಕೋಲಾಹಲ ನಡೆ ದಂತೆ ಕೇಳಿಸಿತು. ಜನರು ಗಡಿಬಿಡಿಯಿಂದ ಅತ್ತಿತ್ತ ಓಡಾಡ ತೊಡಗಿದ್ದರು. ಅದನ್ನು ಕಂಡು ಸಿದ್ಧನು ಒಬ್ಬನಿಗೆ 'ಇದೇನು ಗದ್ದಲ?' ಎಂದು ಕೇಳಿದನು. ಆಗ ಅವನು 'ಮಹಾತ್ಮರೇ, ಬಹಳ ದಿನಗಳಿಂದ ಅಸಾಧ್ಯ ರೋಗ ಪೀಡಿತ ನಾದ ಮಾರವಾಡಿಯೊಬ್ಬನು ಯಾವ ಉಪಾಯದಿಂದಲೂ ಕಡಿಮೆಯಾಗದ ರೋಗದ ಬಾಧೆಯನ್ನು ತಾಳಲಾರದೇ ಪರ್ವತದ ತುದಿಯಿಂದೆ ಧುಮುಕಿ ದೇಹತ್ಯಾಗ ಮಾಡಬೇಕೆಂದು ಸಿದ್ಧನಾಗಿದ್ದಾನೆ. ಈ ಜನರೆಲ್ಲ ಅವನ ಮನ ಸ್ಸನ್ನು ತಿರುಗಿಸಲು ಯತ್ನಿಸುತ್ತಿದ್ದಾರೆ. ಎಂದು ಹೇಳಲು ಸಿದ್ಧನು ಇಲ್ಲಿಯ ವರೆಗೆ ಅವನನ್ನು ಕರೆದುಕೊಂಡು ಬನ್ನಿ. ಇವನ ಭ್ರಾಂತಿ ಬಿಡಿಸುತ್ತೇನೆ. ಎಂದು ಹೇಳಿದನು. ಆಗ ಅವನು ಓಡುತ್ತ ಹೋಗಿ ಮಾರವಾಡಿಯನ್ನು ಕರೆತ' ರಲು ಸಿದ್ಧನು ಅವನನ್ನು ನೋಡಿ, ಅಯ್ಯ, ಮಾರವಾಡಿಯೇ ನಿನಗೆ ಗೊತ್ತಿ ಲ್ಲವೇ? ಇದು ಗೋಮುಖತೀರ್ಥ ಬಹಳ ಪವಿತ್ರವಾದುದು. ಇಲ್ಲಿ ಸ್ನಾನ ಮಾಡಿ ದವರ ಪೀಡೆಗಳೆಲ್ಲ ತೊಲಗುತ್ತವೆ. ಬಾ.' ಎನ್ನುತ್ತ ಅವನ ಕೈ ಹಿಡಿದು ಕರೆ ದೊಯ್ದು ಗೋಮುಖದಿಂದ ನೀರು ಬೀಳುವಲ್ಲಿ ಕುಳ್ಳಿರಿಸಿ ತನ್ನ ಕೈಯಿಂದ ನೀರು ಹಿಡಿದು ಅವನ ಮೇಲೆ ಹಾಕುತ್ತ 'ಶ್ರೀ ನರಸಿಂಹ' ಎಂದು ಭಗವನ್ನಾ ಮವನ್ನು ಸಿದ್ಧನು ಉಚ್ಚರಿಸಲು ಮಾರವಾಡಿಗೆ ಒಮ್ಮೆಲೆ ಹಾಯೆನಿಸಿ ಅವನೂ ಭಕ್ತಿಯಿಂದ 'ಶ್ರೀ ನರಸಿಂಹ' ಎಂದು ಉಚ್ಚರಿಸಿದನು. ಅದೊಂದು ಅದ್ಭುತ ಪರಿಣಾಮವೇ ಸರಿ. ಮಾರವಾಡಿ ರೋಗಮುಕ್ತನಾಗಿ ಹರ್ಷಿತನಾದನು.

ಹೀಗೆ ಆಶ್ಚರ್ಯಕರ ರೀತಿಯಿಂದ ತನ್ನ ರೋಗ ನಾಶವಾಗಲು ಸಿದ್ಧನು ಕಾರಣನೆನಿಸಿದರೂ ಇವನೊಬ್ಬ ನರನೆಂದು ಅವನು ಕಾಣಲಿಲ್ಲ. ನರಸಿಂಹನೇ ಈ ರೂಪವಾಗಿ ಬಂದು ನನ್ನನ್ನು ಉದ್ಧರಿಸಿನೆಂದು ಬಗೆದು ಸಿದ್ಧನಲ್ಲಿ ಅತಿಶಯ ಭಕ್ತಿಯನ್ನು ತಾಳಿದನು. ಮತ್ತು ಸಂತೋಷದಿಂದ ಕೈಹಿಡಿದು ಮನೆಗೆ ಕರೆತಂದನು.

ಮನೆಯಲ್ಲಿ ಯಾವುದಕ್ಕೂ ಕೊರತೆ ಎಂಬುದೇ ಇರಲಿಲ್ಲ. ಉಚಿತಾಸನದಲ್ಲಿ ಕುಳ್ಳಿರಿಸಿ ಪ್ರೇಮದಿಂದ ಯಥಾಯೋಗ್ಯವಾಗಿ ಪೂಜೆ ಮಾಡಿ ಕೈಮುಗಿದು 'ಪ್ರಭೋ, ನನ್ನ ಮನೆ-ಮಾರು-ಧನ-ಕನಕ ಬಹಳವೇನು ? ನನ್ನ ದೇಹವನ್ನು ಕೂಡ ತಮ್ಮ ಚರಣ ಸನ್ನಿಧಿಯಲ್ಲಿ ಅರ್ಪಿಸಿದ್ದೇನೆ. ಸ್ವೀಕರಿಸಬೇಕು. ಇಂದಿನವರೆಗೆ ಪ್ರಪಂಚದಲ್ಲಿ ಆಸಕ್ತಿ ತಾಳಿ ವ್ಯರ್ಥವಾಗಿ ಆಯುಷ್ಯ ಕಳೆದೆನು. ಇನ್ನು ಮೇಲೆ ಹಾಗೆ ಕಳೆಯಲು ಮನವಿಲ್ಲ. ಎಡೆಬಿಡದೆ ನಿಮ್ಮ ಸ್ಮರಣವಿರುವಂತೆ ಅನುಗ್ರಹ ಮಾಡಿರಿ. ಇನ್ನೂ ನಾನು ಮೈಮರೆಯುವುದಾದರೆ ಈಗ ದೂರವಾದ ರೋಗ ಮತ್ತೆ ಮರುಕಳಿಸೀತು. ಎಂಬ ಭಯ ನನಗುಂಟಾಗಿದೆ.' ಎನ್ನಲು ಸಿದ್ಧನು 'ನಾನು ಹೇಳಿದಂತೆ ನಡೆಯುವುದಾದರೆ ನೀನು ನಿರ್ಭಯವಾಗಿ ಮನೆಯಲ್ಲಿರಬಹುದು. ಈಗಲೇ ನಿನ್ನ ದ್ರವ್ಯವನ್ನು ಎರಡು ಭಾಗ ಮಾಡು. ಅದರೊಳಗಿನ ಒಂದು ಭಾಗವನ್ನು ಬಡ-ಬಗ್ಗರಿಗೆ ಹಂಚಿಬಿಡು. ಉಳಿದ ಭಾಗವನ್ನು ನಿನ್ನ ಮಗನಿಗಿಡು. ಹೇಗೂ ನಿನ್ನ ಆಸ್ತಿ ಎಲ್ಲ ನನಗೊಪ್ಪಿಸಿರುವೆಯಷ್ಟೇ! ಅದನ್ನು ನಾನು ಸ್ವೀಕರಿಸಿದ್ದೇನೆ. ಇದೆಲ್ಲ ನನ್ನದೆಂದು ಭಾವಿಸಿ ನೀನೇ ವಿಚಾರಣೆ ಮಾಡಿಕೊಂಡಿರಬೇಕು. ಮನಸ್ಸನ್ನು ಯಾವಾಗಲೂ ಪರಮಾತ್ಮನಲ್ಲಿರಬೇಕು ಎಂದು ಹೇಳಲು ಮಾರವಾಡಿಯು ಒಪ್ಪಿಕೊಂಡು ವಂದಿಸಿದನು.

ಮತ್ತೆ ಸಿದ್ಧನ ಯಾತ್ರೆ ಸಾಗಿತು. ವಿಜಯನಗರವೆಂಬ ದುರ್ಗಸ್ಥಳಕ್ಕೆ ಬಂದು ಅಲ್ಲಿ ಪ್ರತಾಪಸಿಂಹನ ಸಿಂಹಾಸನ ನೋಡಿಕೊಂಡು ಸಮುದ್ರ ತಟಾಕದಲ್ಲಿರುವ ಒಂದು ತೋಟಕ್ಕೆ ಬಂದು ವಿಶ್ರಾಂತಿ ಪಡೆಯತೊಡಗಿದನು. ಅಷ್ಟರಲ್ಲಿ ಅನೇಕ ಬೈರಾಗಿಗಳು ಆ ಸ್ಥಳಕ್ಕೆ ಬಂದು ಅಡಿಗೆ ಮಾಡಿಕೊಂಡು ಊಟ ಮಾಡಬೇಕೆಂದು ಸಿದ್ಧತೆ ನಡೆಸಿದರು. ಕೆಲ ವೇಳೆಯ ನಂತರ ಅಡಿಗೆ

ಸಿದ್ಧವಾಗಲು ಈ ಸಿದ್ಧಾವಧೂತನನ್ನೂ ಊಟಕ್ಕೆ ಕರೆದರು. ಊಟ ನಡೆದಾಗ ಚರ್ಚೆ ಸಾಗಿತು.

ಬೈರಾಗಿಗಳು ವಿಚಾರಿಸಿದರು.

'ಉಂಡ ಅನ್ನವೆಲ್ಲ ಹೊಟ್ಟೆ ಸೇರಿದ ಮೇಲೆ ಅಲ್ಲಿ ಏನಾಗುತ್ತದೆ.'

ಒಬ್ಬರೆಂದರು 'ಮೈಗೆ ಪುಷ್ಟಿಯಾಗುವಂತೆ ಸಪ್ತಧಾತುಗಳು ಸಿದ್ಧವಾತ್ತವೆ.'

ಸಿದ್ಧ ನುಡಿದನು 'ಅದಂತೂ ಸರಿಯೇ. ಇದಕ್ಕೂ ಮಹತ್ವದ ಮಾತೊಂದುಂಟು. ಏನೆಂದರೆ ಮನುಷ್ಯನು ಉಂಡ ಅನ್ನ ಮೂರು ಭಾಗವಾಗಿ ಮಾರ್ಪಡುವುದೆನ್ನುತ್ತಾರೆ. ಮೊದಲನೆಯ ಭಾಗವು ಮಲ. ಎರಡನೆಯ ಭಾಗ ಧಾತು. ಮೂರನೆಯ ಭಾಗವೇ ಸಾಧಕರಿಗೆ ಮುಖ್ಯವಾದ ಮನಸ್ಸು. ಆ ಮನಸ್ಸು ಆತ್ಮಾಭಿಮುಖವಾದರೆ ಸಚ್ಚಿದಾನಂದ ಬ್ರಹ್ಮನಾಗುತ್ತಾನೆ. ಹೀಗೆ ಮನಸ್ಸನ್ನು ಆತ್ಮಾನುಸಂಧಾನದಲ್ಲಿಡುವ ಸಾಧಕನು ಅನ್ನದಾತನನ್ನು ಉದ್ಧರಿಸುತ್ತಾನೆ. ಯಾವ ತಿಳಿವಳಿಕೆಯೂ ಇಲ್ಲದೇ ಉಂಡ ಅನ್ನದಿಂದ ಭ್ರಷ್ಟತೆಯೇ ಸರಿ. ಇದರಿಂದ ಅನ್ನದಾತನಿಗೂ ಅಧೋಗತಿ.'

ಆ ಮಾತುಗಳಿಲ್ಲ ಮರ್ಮಕ್ಕೆ ತಾಗಲು ಬೈರಾಗಿಗಳು ಹಾಳು ಮಾತುಗಳನ್ನು ಬಿಟ್ಟು ನಾಮಸ್ಮರಣೆ ಮಾಡುತ್ತ ಊಟ ತೀರಿಸಿ ಒಂದೆಡೆಯಲ್ಲಿ ಕಲೆತು ಆತ್ಮಚರ್ಚೆ ಮಾಡತೊಡಗಿದರು. ಅಲ್ಲಿಂದ ಹೊರಟ ಸಿದ್ಧನು ಭದ್ರಾಚಲಕ್ಕೆ ಬಂದನು. ಅಲ್ಲಿಯ ದೇವಾಲಯದ ಜೀರ್ಣೋದ್ಧಾರವನ್ನು ಭದ್ರಾಚಲ ರಾಮದಾಸರು ಮಾಡಿದರೆಂದು ಹೇಳುವರು. 'ಪರಮಾತ್ಮನ ಸಹಾಯ ದೊರೆತರೆ ಮಾತ್ರ ಸತ್ಪುರುಷರು ಮಹಿಮೆಯನ್ನು ತೋರಿಸುವರು.' ಎಂದು ಕೊಳ್ಳುತ್ತ ಸಿದ್ಧನು ಗೋದಾವರಿ ತಟಾಕಕ್ಕೆ ಬಂದರು. ಇದರೀಗೇ 'ವೃದ್ಧಗಂಗೆ' ಎಂದು ಹೆಸರು. ಅಲ್ಲಿರುವ ರಾಮದಾಸರ ಕಟ್ಟೆಯ ಮೇಲೆ ಸಿದ್ಧನು ನಿರ್ವಿಕಾರ ಮನದಿಂದ ಕುಳಿತುಕೊಂಡಿದ್ದನು. ಆಗ ಐದು ಮಂದಿ ಬ್ರಾಹ್ಮಣರು ಬಂದು ಸಿದ್ಧನನ್ನು ಕೇಳಿದರು.

'ಸ್ವಾಮಿ, ನಿಮ್ಮ ದೇಶವು ಯಾವುದು? ನೀವು ಯಾರು? ಯಾಕೆ ಸಂಚಾರ ಮಾಡುತಿರುವಿರಿ? ಎಲ್ಲವನ್ನು ವಿಸ್ತಾರವಾಗಿ ಹೇಳಿರಿ.'

ಸಿದ್ಧ ನುಡಿದನು. 'ನಮ್ಮದು ಅಪರಿಚ್ಛಿನ್ನದೇಶ ಎಲ್ಲಕ್ಕೂ ಅಧಿಷ್ಠಾನವೇ ನಮ್ಮ ಸ್ಥಿತಿ.' ನಿರ್ಗತಿಯೇ ನಮ್ಮ ಗತಿ.'

'ಎಂದರೆ ನಮಗೆ ಏನೂ ತಿಳಿಯಲಿಲ್ಲ.'

'ದೇಶ-ಕಾಲ-ವಸ್ತುಗಳಿಂದ ಅಪರಿಚ್ಛಿನ್ನವಾದ ಆತ್ಮನ ದೇಶ ಯಾವುದೆನ್ನಬೇಕು ? ಜಗತ್ತಿನ ಅಧಿಷ್ಠಾನ (ಆಶ್ರಯ)ವೇ ಅವನ ಸ್ಥಿತಿ. ಅವನ ಅವಕಾಶದಲ್ಲಿಯೇ ನಮ್ಮ ಹೋಗುವಿಕೆ-ಬರುವಿಕೆಗಳು ಎನ್ನುವಾಗ ಅವನ ವಿಷಯವಾಗಿ ಏನೆಂದು ಹೇಳಬಹುದು? ಹೇಳಲು ಸಾಧ್ಯವೇ ಇಲ್ಲ.'

ಈ ಮಾತುಗಳನ್ನು ಕೇಳಿ ಬ್ರಾಹ್ಮಣರು ಶಾಂತರಾಗಿ ತಲೆದೂಗಿದರು. ಪುನಃ ಸಿದ್ಧನಂದನು. 'ನೀವು ಸ್ವಭಾವತಃ ನಿರ್ಮಲ ಮನಸ್ಸುಳ್ಳವರಾದುದರಿಂದ ನಾನು ಹೇಳಿದ ಮಾತುಗಳನ್ನು ಅರ್ಥ ಮಾಡಿಕೊಂಡು ತಲೆದೂಗಿದಿರಿ. ನಿರ್ಮಲವಾದ ಮನವಿಲ್ಲದವರಿಗೆ ಭಕ್ತಿಯಾಗಲೀ ವೇದಾಂತ ವಿಚಾರವಾಗಲೀ ಯಾವುದೂ ಒಗ್ಗುವುದಿಲ್ಲ. ಕೆಲವರಂತೂ ಪಾತ್ರತೆಯನ್ನು ಪಡೆದುಕೊಳ್ಳಲು ಅನೇಕ ಜನ್ಮಗಳನ್ನು ಕಳೆಯಬೇಕಾಗುತ್ತದೆ.'

ಆ ಸ್ಥಳವನ್ನು ಬಿಟ್ಟು ಸಿದ್ಧನು ಅನೇಕ ತೀರ್ಥಸ್ಥಳಗಳನ್ನು ನೋಡುತ್ತ ಕರ್ನಾಟಕ ದೇಶವನ್ನು ಪ್ರವೇಶ ಮಾಡಿ ಬಿಝುವಾಡಾದ ಸನಿಹಕ್ಕೆ ಬಂದು ತಲುಪಿದನು.

ಕೃಷ್ಣಾ ತಟಾಕದಲ್ಲಿ ಕುಳಿತು ಅಲ್ಲಿ ಸಿದ್ಧನು ವಿಶ್ರಾಂತಿ ಪಡೆಯುತ್ತಿರಲು ಒಬ್ಬ ಸ್ತ್ರೀ ಬಂದು ವಿನಯಪೂರ್ವಕವಾಗಿ ವಂದಿಸಿ ನಿಂತಳು. ಆಗ ಅವಳು ನುಡಿದುದೇನೆಂದರೆ-ಮಹಾತ್ಮನೇ ಯಾರಲ್ಲಿಯೂ ಕಾಣಸಿಗದ ದಿವ್ಯ ಲಕ್ಷಣಗಳು ನಿನ್ನಲ್ಲಿ ತೋರುವವು. ನೀನು ಯಾರೋ ಒಬ್ಬ ಮಹಾಪುರುಷನಿರಬೇಕು. ನನಗಂತೂ ಸಂಸಾರದಲ್ಲಿ ಸುಖವಿಲ್ಲದಾಗಿದೆ. ಸುಖವಾಗುವಂತೆ ಅನುಗ್ರಹಿಸು.'

'ಸಂಸಾರದಲ್ಲಿ ಸುಖವಿರುವದೆಂದು ನಿನಗೆ ಯಾರು ಹೇಳಿದರು.'

'ನಮ್ಮ ಹಿರಿಯರು, ನೆರೆಹೊರೆಯವರು, ನಾನು ಕಂಡವರು ಎಲ್ಲರೂ ಸಂಸಾರಿಗಳೇ. ಆದುದರಿಂದ ನಾನು ಅವರಂತೆ ಸಂಸಾರಿಕಳಾದೆನು.'

'ಅವರಂತೆ ಇದ್ದುಬಿಟ್ಟರಾಯಿತು.'

'ಅವರವರ ಮನಸ್ಸೇನೋ ನಾನೇನು ಬಲ್ಲೆ ? ನನಗಂತೂ ಸಂಸಾರ ದಲ್ಲಿ ತೃಪ್ತಿ ಸಿಗುವದಿಲ್ಲ. ಅದಕ್ಕಾಗಿ ನಿಮ್ಮಂಥ ಮಹಾತ್ಮರ ಬಳಿಗೆ ಬಂದಿದ್ದೇನೆ.'

'ಇರಲಿ. ಯಾತರ ವಿಷಯಕ್ಕೆ ನಿನಗೆ ತೃಪ್ತಿ ಇಲ್ಲ ಹೇಳು.'

'ಗುರುನಾಥನೇ, ನನ್ನದು ಬಡತನದ ಬಾಳುವೆ. ಮಕ್ಕಳಿಲ್ಲ. ಗಂಡ-ಹೆಂಡಿರು ಇಬ್ಬರೇ ಏನು ತೃಪ್ತಿ ದೊರೆಯಬೇಕು?'

'ಆಗಲಿ. ನೀನು ಸ್ತ್ರೀ. ಅಶುದ್ಧಚಿತ್ತಳು. ಜ್ಞಾನಕ್ಕಂತೂ ಅನಧಿಕಾರಿ. ಈಶ್ವರನಾಮವನ್ನು ಜಪಿಸು ಭಗವಂತ ಕಲ್ಯಾಣ ಮಾಡುತ್ತಾನೆ.'

ಎಂದು ಸಿದ್ಧನು ಉಪದೇಶ ಮಾಡಲು ಆ ಭಾವಿಕಳು ತನ್ನ ಮನಸ್ಸಿನ ಆಶೆ ಈಡೇರಿತೆಂದು ಬಗೆದು ವಂದಿಸಿ ಆನಂದದಿಂದ ಹೊರಟು ಹೋದಳು. ಆ ಸ್ಥಳವು ಬಹು ರಮಣೀಯವಾಗಿತ್ತು. ನದಿಯ ದಂಡೆಯಲ್ಲಿಯ ವನ ಪ್ರಾಂತವು ಬಗೆಬಗೆಯ ಗಿಡಗಳಿಂದ ತುಂಬಿಹೋಗಿತ್ತು. ಕೆಲವು ಕಡೆಗೆ ಕಣ್ಣು ಹರಿಯುವಷ್ಟು ದೂರ ವಿಸ್ತೀರ್ಣವಾದ ಬಯಲು. ಅಲ್ಲೊಂದು ಇಲ್ಲೊಂದು ಸಣ್ಣ ಮರಡಿಗಳು. ಪ್ರಶಸ್ತವಾದ ಕೃಷ್ಣೆಯ ತೀರ. ಸಿದ್ಧನು ಕೆಲವು ವರ್ಷಗಳ ವರೆಗೆ ಅಲ್ಲಿ ನಿಂತು ಬಿಟ್ಟನು. ನಿತ್ಯ ಅನ್ನವಂತೂ ಹೊಟ್ಟೆಗೆ ಸಿಗುತ್ತಿರಲಿಲ್ಲ. ಆ ಸ್ಥಳಕ್ಕೆ ಕುರಿಗಳನ್ನು ಮೇಯಿಸಲು ಬಂದ ಕುರುಬರು ಮಧ್ಯಾಹ್ನದ ಹೊತ್ತಿಗೆ ತುಸು ಕುರಿಯ ಹಾಲು ತಂದು ಕೊಡುವರು. ಅದೇ ಸಿದ್ಧನಿಗೆ ಆಹಾರ. ಒಂದೊಂದು ದಿನ ಅದೂ ದೊರೆಯುತ್ತಿರಲಿಲ್ಲ. ಆಗ ಮೆತ್ತನ್ನ ಮಣ್ಣು ಮುದ್ದೆಯೇ ಹೊಟ್ಟೆಗೆ ಗತಿಯಾಗುತ್ತಿತ್ತು. ಶೀತೋಷ್ಣ ಗಳನ್ನು ಸಹನ ಮಾಡುವುದಂತೂ ಅಭ್ಯಾಸವಾಗಿ ಹೋಗಿತ್ತು.

ಆ ಸ್ಥಳದಿಂದ ಮಂಗಳಗಿರಿಗೆ ಬಂದ ಮೇಲೆ ಸಿದ್ಧನಿಗೆ ನಿತ್ಯದೇವರ ಪ್ರಸಾದ ದೊರೆಯತೊಡಗಿತು. ಅಲ್ಲಿ ಒಂದು ದಿನ ದೇವರ ಪೂಜೆ ನಡೆದಿತ್ತು. ಆಗ ಸಿದ್ಧನು 'ಜಯ ಜಯ ಮಹಾದೇವ' ಎಂದು ಜಯಘೋಷ ಮಾಡಿ ದನು. ಪೂಜಾರಿ ಕೇಳಿದನು. 'ಏನಯ್ಯ, ನೀನು ದೇವರಿಗೆ ಆಶೀರ್ವಾದ ಮಾಡುವೆಯಲ್ಲ.'

'ಅದರಲ್ಲೇನು ತಪ್ಪು? ಸಗುಣ ಮೂರ್ತಿ ಎಂಬುದು ನಿರ್ಗುಣ ಬ್ರಹ್ಮನ ಕಳಾಂಶವೇ ಹೊರತು ಪೂರ್ಣವಲ್ಲ. ಜ್ಞಾನಿಯು ತತ್ವತಃ ನಿರ್ಗುಣ ಬ್ರಹ್ಮನೇ

ಆಗಿರುತ್ತಾನೆ. ಪೂರ್ಣ ಬ್ರಹ್ಮನಾದ ಜ್ಞಾನಿ ಕಲಾಂಶನಾದ ಸಗುಣ ಮೂರ್ತಿಗೆ ಆಶೀರ್ವದಿಸುವುದು ತಪ್ಪಲ್ಲ. ಆದರಿಂದ ಸಗುಣ ಮೂರ್ತಿ ಪ್ರಭಾವವುಳ್ಳದುದಾಗುವುದು. ಎಂದಮೇಲೆ ಆಶೀರ್ವದಿಸುವುದೇನು ತಪ್ಪು? ಸಗುಣನಾದರೂ ಜ್ಞಾನಿಯ ಹರಕೆಯನ್ನು ಅಪೇಕ್ಷೆ ಮಾಡುತ್ತಾನೆ. ಅದ ರಂತೆ ಪುಣ್ಯತೀರ್ಥ-ಪುಣ್ಯ ನದಿಗಳು ಮನುಷ್ಯರ ಪಾಪವನ್ನು ಪರಿಹರಿಸಿ ತಾವು ಮಲಿನವಾಗುತ್ತವೆ. ಹೀಗಿರಲು ಜ್ಞಾನಿಗಳ ಚರಣ ಧೂಳಿಯನ್ನು ಅವು ಅಪೇಕ್ಷಿಸುತ್ತವೆ. ಆ ಧೂಳಿಯಿಂದ ತಾವು ಸಂಗ್ರಹಿಸಿಕೊಂಡ ಜನರ ಪಾಪದಿಂದ ಮುಕ್ತವಾಗಿ ಅವು ಪುನಃ ಪವಿತ್ರವಾಗುತ್ತವೆ.'

೧೦

ಆನಂದರೂಪೋ ನಿಜಬೋಧರೂಪೋ ।
ದಿವ್ಯಸ್ವರೂಪೋ ಬಹುನಾಮರೂಪಃ ॥
ತಪಃಸಮಾಧೌ ಕಲಿತೋ ನ ಏವ ।
ವೃಥಾಗತಂ ತಸ್ಯ ನರಸ್ಯ ಜೀವಿತಮ್ ॥

—ಶುಕಗೀತ

ತನ್ನ ಅರಿವಿನ ಸ್ವರೂಪವಾಗಿ, ಹೆಚ್ಚಿನದು ಮತ್ತೊಂದಿಲ್ಲದ ರೂಪ ನಾಗಿ, ಅನೇಕ ಹೆಸರು ಆಕಾರಗಳನ್ನು ತಳೆದಿರುವ ಆನಂದರೂಪವನ್ನು, ತಪಸ್ಸು-ಸಮಾಧಿ ಮುಂತಾದವುಗಳಿಂದ ಹೃದಯದಲ್ಲಿ ಕಂಡುಕೊಳ್ಳದವನ ಜೀವನವು ವ್ಯರ್ಥವಾಯಿತೆನ್ನಬೇಕು.

ಪರ್ವತದಿಂದ ಸಿದ್ಧನು ಇಳಿದು ಬಂದಾಗ ಆವನಿಗೊಳ್ಳೆ ಹಸಿವೆಯಾ ಗಿತ್ತು. ಒಂದು ಮನೆ ಬಾಗಿಲದಲ್ಲಿ ಹೋಗಿ ನಿಂತನು. ಆ ಮನೆಯಲ್ಲಿ ಸಾತ್ವಿಕ ರಾದ ಗಂಡ-ಹೆಂಡಿರು ಇಬ್ಬರೇ. ತಮ್ಮ ದುಡಿತದಿಂದ ದೊರೆತಷ್ಟರಲ್ಲಿ ಜೀವನ ಮಾಡಿಕೊಂಡಿದ್ದರು. ಆದರೆ ಬಂದ ಅತಿಥಿ-ಅಭ್ಯಾಗತರಿಗೆ ಅವರ ಮನೆ ತೆರೆದ ಬಾಗಿಲು. ಬಂದವರಿಗೆ ತಮ್ಮ ಮನೆಯಲ್ಲಿರುವುದನ್ನೇ ಪ್ರೇಮದಿಂದ ಕೊಟ್ಟು ಸಂತೋಷಪಡಿಸುವರು. ಆ ಊರಿನಲ್ಲಿ ಇದೊಂದು ಆಶ್ಚರ್ಯ ವಿಷಯವಾ

ಗಿತ್ತು. ಬಂದವರಿಗೆಲ್ಲ ಬಾಗಿಲು ತೆರೆದಿಡುವಷ್ಟು ಅವರು ಶ್ರೀಮಂತರಲ್ಲ. ಆದರೂ ಬಂದವರು ಅನ್ನ-ನೀರು ಕಾಣದೇ ತಿರುಗಿ ಹೋಗುವುದಿಲ್ಲ. ಅವರ ಈ ಧಾರ್ಮಿಕ ವೃತ್ತಿಗೆ ಕುಹಕಿಗಳು ಬಡಿವಾರವೆಂದು ಹೆಸರು ಕೊಟ್ಟು ಅಕಸ್ಮಾತ್ ಬರುವ ಅತಿಥಿ-ಅಭ್ಯಾಗತರನ್ನು ಅವರ ಮನೆಗೆ ಬೇಕೆಂದು ಕಳಿಸುವರು. ಕಾಲಾಂತರದಲ್ಲಿ ಆ ಗಂಡ-ಹೆಂಡತಿಗೆ ಕುಹಕಿಗಳು ಈ ಕೃತಿ ತಿಳಿದು ಬಂದರೂ ಅವರು ತುಟಿಬಿಚ್ಚದೇ ತಮಗೆ ಸರಿಕಂಡ ಮಾರ್ಗ ಹಿಡಿದು ಸಾಗಿದ್ದರು- ಒಂದು ಓಣಿ ಹಿಡಿದು ಸಿದ್ಧ ಬರುತಿರಲು ಇವನೊಬ್ಬ ಅತಿಥಿ. ಅನ್ನಕ್ಕಾಗಿ ಅಲೆಯುತ್ತಾನೆ. ಎಂದು ಊಹಿಸಿಕೊಂಡ ಅವರು ಈ ಬಡ ದಂಪತಿಗಳ ಮನೆಗೆ ಹೋಗುವಂತೆ ಕಳಿಸಿದ್ದರು.

ಯಾತಕ್ಕೋ ಹೊರಗೆ ಬಂದ ಯಜಮಾನಿ ಬಾಗಿಲದಲ್ಲಿ ಬಂದು ನಿಂತ ಸಿದ್ಧನನ್ನು ಕಂಡು ವಂದಿಸಿ 'ಒಳಗೆ ಬನ್ನಿ. ಯಜಮಾನರು ಈಗ ಊಟಕ್ಕೆ ಕೂಡುವ ಸಿದ್ಧತೆಯಲ್ಲಿದ್ದಾರೆ. ನೀವೂ ಬಂದು ಊಟ ಮಾಡಿದರೆ ನಮಗೆ ಸಂತೋಷ.' ಎಂದು ನುಡಿಯುತ್ತ ಬಿಸಿನೀರು ತಂದು ಕಾಲಿಗಿತ್ತು ಒಳಗೆ ಹೋದಳು. ಒಂದೆರಡು ಕ್ಷಣ ದಾರಿ ಕಾಯ್ದರೂ ಅತಿಥಿ ಒಳಗೆ ಬರದಾಗಲು ಹೊರಗೆ ಬಂದು ನೋಡುತ್ತಾಳೆ. ನೀರು ತುಂಬಿದ ತಂಬಿಗೆ ಹಾಗೇ ಇದೆ. ಸಿದ್ಧ ಶಿಲಾಮೂರ್ತಿಯಂತೆ ನಿಂತುಬಿಟ್ಟಿದ್ದಾನೆ. ಅದನ್ನು ಕಂಡು ಆ ಸಾಧ್ವಿ 'ಇವರು ಮಹಾತ್ಮರಿರಬೇಕು. ಇಂಥವರ ಸೇವೆ ದೊರೆಯಬೇಕಾದರೆ ಪುಣ್ಯವೇ ಸರಿ.' ಎಂದು ಕಾಲು ತೊಳೆದು ಒರೆಸಿ ಮತ್ತೊಮ್ಮೆ 'ಒಳಗೆ ಬರಬೇಕು.' ಎಂದು ಬಿನ್ನವಿಸಲು ಸಿದ್ಧನು ಅವಳನ್ನು ಹಿಂಬಾಲಿಸಿ ಬಂದು ನಡುಮನೆಯಲ್ಲಿ ತನಗಾಗಿ ಹಾಕಿದ ಬಾಳೆ ಎಲೆಯ ಮುಂದೆ ಕುಳಿತನು. ಜೋಳದ ಅಂಬಲಿಯಾಗಿತ್ತು. ಉಪ್ಪಿನಕಾಯಿ ಬಡಿಸಿದ್ದರು. ಮನೆಯಲ್ಲೊಂದು ಹಿಂಡುವ ಎಮ್ಮೆ ಇದ್ದುದರಿಂದ ಮಂದಗಾದ ಮಜ್ಜಿಗೆ, ಕಾಸಿದ ಹಾಲು ಪ್ರೀತಿಯಿಂದ ಹೆಚ್ಚಿಚ್ಚು ಹಾಕಿದರು. ಸಿದ್ಧ ಉಂಡು ತೇಗಿದನು.

ಕಂಬಳಿ ಹಾಸಿ ಕುಳ್ಳಿರಿಸಿದರು. ಆಗ ಅವರ ಸ್ಥಿತಿಗತಿಯನ್ನು ಸಿದ್ಧ ವಿಚಾರಿಸಿ ಥಟ್ಟನೆ ಎದ್ದು ಆ ದಂಪತಿಗಳಿಗೆ ಸನ್ನೆ ಮಾಡಿ ದೇವರ ಜಗುಲಿಯಲ್ಲಿ ಬಂದು 'ಇಲ್ಲಿ ಅಗಿಯಿರೆಂದನು. ಆ ಮಾತಿನಂತೆ ಅಗಿದು ನೋಡಲು ಭಂಗಾರದ ವರಹಗಳಿಂದ ತುಂಬಿದ ಕೊಡ ಕಾಣಿಸಿತು. ಆಗ ಸಿದ್ಧ ಹೇಳಿದನು.

'ಇದು ನಿಮ್ಮದು. ನಿಮ್ಮ ಗುಣಕ್ಕೆ ಮೆಚ್ಚಿ ದೇವರು ಐಶ್ವರ್ಯ ಕೊಟ್ಟಿದ್ದಾನೆ. ನೀವಿದನ್ನು ಅತಿಥಿ-ಅಭ್ಯಾಗತರ ಸೇವೆಯಲ್ಲಿ ವೆಚ್ಚ ಮಾಡಬೇಕು. ನೀವು ಇನ್ನು ದುಡಿಯುವುದು ಬೇಡ. ಆ ಅತಿಥಿಗಳ ಸೇವೆಯೇ ನಿಮ್ಮ ದುಡಿತ. ಅದರಿಂದ ಭಗವಂತ ಮೆಚ್ಚಿ ಸದ್ಗತಿ ಕೊಡುತ್ತಾನೆ. ಆದರೆ ಐಶ್ವರ್ಯದ ಸಹವಾಸ ಕೆಟ್ಟದ್ದು. ಅದರಿಂದ ಗರ್ವ ಬರುತ್ತದೆ. ಸ್ವಂತ ಸುಖದ ಆಶೆ ಹೆಚ್ಚುತ್ತದೆ. ಬಡಬಗ್ಗರನ್ನು ಕಂಡರೆ ತಿರಸ್ಕಾರ ಮೂಡುತ್ತದೆ. ನೀವು ಯಾವುದಕ್ಕೂ ವಶರಾಗದೇ ಬಹಳ ಕಾಲದವರೆಗೆ ಅತಿಥಿ ಸೇವೆ ಮಾಡಿರಿ. ಅನ್ನದಾನಕ್ಕಿಂತ ಇನ್ನು ದಾನಗಳಿಲ್ಲ. ಇತರ ದಾನ ಎಷ್ಟು ಕೊಟ್ಟರೂ ತೃಪ್ತಿ ಇಲ್ಲ. ಅನ್ನದಿಂದ ತೃಪ್ತಿಯುಂಟು. ಸರಿ. ನಾನಿನ್ನು ಹೊರಟೆ ಮತ್ತೇನಾದರೂ ನಿಮಗೆ ಆಶೆಯುಂಟೇ?'

ಯಜಮಾನಿಯಲ್ಲಿ ಮಕ್ಕಳಾಗಬೇಕೆಂಬ ಆಶೆ ತುಂಬಿತ್ತು. ಅನಾಯಾಸ ದೇವರಂತೆ ಮಹಾತ್ಮ ಮನೆಗೆ ಬಂದಿದ್ದಾನೆ. ಕೇಳಿಕೊಂಡು ಬಿಡಬೇಕು ಎಂದು ಹಾತೊರೆಯಲು, ಯಜಮಾನನು ಬೇಡವೆಂದು ಸೂಚಿಸಿ ಅವಳನ್ನು ಶಾಂತಗೊಳಿಸಿದನು. ಸಿದ್ಧನು ಹೊರಗೆ ಹೊರಟು ಮಾಯವಾದನು. ಅಳುತ್ತ ಯಜಮಾನಿ ಗಂಡನನ್ನು ವಿಚಾರಿಸಿದಳು.

'ಇನ್ನೊಮ್ಮೆ ನಮಗೆ ದೇವರು ಕಾಣುತ್ತಾನೆಯೇ!'

'ಒಮ್ಮೆ ಕಂಡದ್ದೇ ಹೆಚ್ಚು. ಯಾವ ಪುಣ್ಯ ಒದಗಿತೋ ದರ್ಶನಕೊಟ್ಟು ಉದ್ಧಾರದ ಮಾರ್ಗ ತೋರಿಸಿದ.'

'ಒಂದಾದರೂ ಮಗುವನ್ನು ಕೇಳಬೇಕೆಂಬ ಆಶೆ ಬಹಳವಿತ್ತು. ನೀವು ಬೇಡವೆಂದಿರಿ.'

'ಯಾಕೆ ನಾನು ಬೇಡವೆಂದೆ ಎಂಬ ವಿಚಾರವನ್ನೇನಾದರೂ ಮಾಡುವೆಯ? ಬಂದವರು ದೇವರೋ, ಮಹಾತ್ಮರೋ ತಿಳಿಯದು. ಬೇಡಿದ್ದರೆ ನಿನಗೆ ಮಕ್ಕಳಾಗುವಂತೆ ಅನುಗ್ರಹ ಮಾಡುವುದೇನೂ ಅವರಿಗೆ ದೊಡ್ಡದಿರಲಿಲ್ಲ. ನಿನಗೊಂದು ಮಗುವಾಯಿತೆನ್ನೋಣ. ಆದರಿಂದ ನಿನ್ನ ಆಸ್ಥೆ-ಅಕ್ಕರತೆಗಳೆಲ್ಲ ಮಗುವಿಗೆ ಮೀಸಲಾಗಿ ಆ ಮಹಾತ್ಮ ಹೇಳಿದ ಅತಿಥಿ ಸತ್ಕಾರದ ಸೇವೆಗೆ ಆತಂಕವಾಗುತ್ತಿರಲಿಲ್ಲವೇ?'

'ಹೌದು, ನನಗಿದು ಲಕ್ಷದಲ್ಲಿಯೇ ಬಂದಿರಲಿಲ್ಲ.'

ಮುಂದೆ ಆ ಮನೆ ವಿಸ್ತಾರವಾಯಿತು. ಬಂದ ಅತಿಥಿಗಳಿಗೆ ಅನ್ನಛತ್ರವೆನಿಸಿತು.

ಆ ಬಡ ದಂಪತಿಗಳ ಮನೆಯಿಂದ ಹೊರಟ ಸಿದ್ಧನು ಊರ ಹೊರಗೆ ಬಂದು ರಾತ್ರಿ ಮಲಗಲಿಕ್ಕೆ ಏಕಾಂತ ಸ್ಥಳವೊಂದನ್ನು ಶೋಧಿಸತೊಡಗಿದನು. ಗುಡ್ಡದಂಚಿನಲ್ಲಿ ಒಂದು ಗುಹೆ ಕಾಣಲು ಒಳಹೊಕ್ಕನು. ಬಹು ದಿನಗಳಿಂದ ಆ ಗುಹೆ ಒಬ್ಬ ಬ್ರಾಹ್ಮಣನ ವಾಸಭೂಮಿಯಾಗಿತ್ತು. ಅವನು ವಶೀಕರಣ-ಅಭಿಚಾರ ಮುಂತಾದವುಗಳ ಸಿದ್ಧಿಗಾಗಿ ಅನುಷ್ಠಾನ ಮಾಡತಕ್ಕವನು. ಅದಲ್ಲದೆ ರಸಸಿದ್ಧಿ (ಭಂಗಾರ ಮಾಡುವ ವಿದ್ಯೆ) ಗಾಗಿಯೂ ಪರಿಶ್ರಮಿಸುತ್ತಿದ್ದನು. ಅವನ ಸಾಧನ-ಸಾಮಗ್ರಿಗಳನ್ನು ಕಾಣುತ್ತಲೇ ಸಿದ್ಧನಿಗೆ ಆ ಬ್ರಾಹ್ಮಣನ ಕಾರ್ಯವೆಲ್ಲ ತಿಳಿದು ಹೋಯಿತು. ಮೋಕ್ಷ ಸಾಧನವೆನಿಸುವ ಮನುಷ್ಯ ಜನ್ಮವನ್ನು ಪಡೆದು ದರಾಶೆಗೊಳಗಾಗಿ ದುಷ್ಟ ವಿದ್ಯೆಗಳಲ್ಲಿ ಆಸಕ್ತನಾಗಿರುವ ಈ ಗೃಹಸ್ಥನನ್ನು ಕಂಡು ಸಿದ್ಧನಿಗೆ ಅವನ ಮೇಲೆ ದಯೆ ಹುಟ್ಟಿತು. 'ಅಯ್ಯ ಬ್ರಾಹ್ಮಣನೇ, ಇಲ್ಲಿ ಇದೇನು ಕಾರ್ಯ ಮಾಡುತ್ತಿರುವೆ? ಅಲ್ಪವೆನಿಸುವ ಈ ವಿದ್ಯೆಗಳನ್ನು ನೀನು ಅಭ್ಯಾಸ ಮಾಡುತ್ತಿರುವುದು ಕೇವಲ ಧನದಾಶೆಯಿಂದ ಅಲ್ಲವೇ? ಒಂದು ವೇಳೆ ಇವೆಲ್ಲ ವಿದ್ಯೆಗಳು ಸಿದ್ಧಿಸಿ ನಿನಗೆ ಧನ ದೊರೆಯಬಹುದು. ಅದಕ್ಕೆ ನ್ಯಾಯಾರ್ಜಿತವೆನ್ನಬಹುದೇ? ನಿನ್ನ ವಿದ್ಯೆಯ ಪ್ರಯೋಗದಿಂದ ಎಷ್ಟು ಜನ ದುಃಖ ಪಡಬೇಕಾಗುವುದೋ, ಏನೋ ಯಾರು ಕಂಡವರು. ಬಹುಶಃ ಇಂಥ ವಿದ್ಯೆಗಳ ಉಪಯೋಗ ಲೋಕದ ಕಲ್ಯಾಣಕ್ಕೆ ಆಗುವುದಿಲ್ಲ.'

'ಅದೇಕೆ ಲೋಕ ಕಲ್ಯಾಣದ ಸಲುವಾಗಿಯೇ ನಾನು ಇವುಗಳ ಅಭ್ಯಾಸ ಮಾಡತೊಡಗಿದ್ದೇನೆ.'

'ನಿನ್ನ ತಿಳಿವಳಿಕೆ ತಪ್ಪಾಗಿದೆ. ಲೋಕ ಕಲ್ಯಾಣ ಸಾಧಿಸುವುದಕ್ಕೆ ಬಹಳ ವಿದ್ಯೆ, ಬಹಳ ಶ್ರಮ ಇವು ಯಾವವೂ ಬೇಕಾಗಿಲ್ಲ. ನಿಷ್ಠೆಯಿಂದ ತನ್ನ ಧರ್ಮವನ್ನು ತಾನು ಪಾಲಿಸಿಕೊಂಡಿದ್ದರೆ, ಅದರಿಂದಲೇ ಲೋಕ ಕಲ್ಯಾಣ ಸಾಧಿಸಿದಂತಾಗುವುದು.'

'ಆದರೆ ಧರ್ಮದ ವೇಗ ಬಹು ಮಂದ.'

'ಆ ಮಾತು ನಿಜವಾದರೂ ಶಾಶ್ವತ ಸುಖ ಕೊಡುವಂಥದು. ಅಲ್ಲದೆ ಯಾವ ಜೀವಿಯನ್ನೂ ಹಿಂಸಿಸದಂಥದು. ಈಗ ನೀನು ಸಾಧಿಸಬೇಕೆಂದಿರುವ ಅಲ್ಪ ವಿದ್ಯೆಗಳ ಗತಿ ತೀವ್ರವಾಗಿರುವುದರಿಂದ ಫಲ ಕೂಡ ಬೇಗ ಸಿಕ್ಕಂತೆ ತೋರುತ್ತದೆ. ಆದರೆ ಅದರಿಂದ ಶಾಶ್ವತ ಲಾಭ ಮಾತ್ರ ಆಗಲಾರದು. ಕಲಾಯಿ ಮಾಡಿದ ಪಾತ್ರೆಯು ಕೆಲವು ದಿನ ಬೆಳ್ಳಗೆ ಉಳಿದರೂ ದಿನಗಳೆದಂತೆ ಹೊಳಪು ಕಳೆದುಕೊಳ್ಳುವುದು. ಅದರಂತೆಯೇ ನಿನ್ನ ವಿದ್ಯೆಗಳ ಫಲ. ತಿಳಿದವರು ಇಂಥವುಗಳನ್ನು ನಿಂದ್ಯವೆಂದು ಎಣಿಸುವರು.'

'ಇವುಗಳಿಂದ ಮನುಷ್ಯನಿಗೆ ದುರ್ಗತಿಯೊದಗುವುದೆನ್ನುವಿರಾ?'

'ಸಂಶಯವೇ ಇಲ್ಲ. ಯಾವ ಕರ್ಮಗಳೂ ಮನುಷ್ಯನ ಶಾಶ್ವತ ಕಲ್ಯಾಣವನ್ನು ಸಾಧಿಸಲಾರವು. ಒಳ್ಳೆಯ ಕಾರ್ಯಗಳಿಂದ ಪುಣ್ಯವು ದೊರೆತು ಸ್ವರ್ಗ ಮೊದಲಾದ ಲೋಕಗಳು ದೊರೆಯುವುದು ನಿಜ. ಆದರೆ ಆ ಪುಣ್ಯ ಕ್ಷೀಣವಾಗಲು ಮರಳಿ ಹುಟ್ಟಿ ಬರುವುದು ತಪ್ಪಿದುದಲ್ಲ. ಪುಣ್ಯ ಕರ್ಮಗಳ ಆಚರಣೆ ಕೂಡ ದುಃಖವನ್ನು ತಪ್ಪಿಸಲಾರದೆನ್ನುವಾಗ ಇಂಥ ನಿಂದ್ಯ ಕರ್ಮಗಳನ್ನು ಅವಲಂಬಿಸಿರುವ ನಿನಗೆ ಯಾವ ಗತಿಯಾಗಬಹುದೆಂಬುದನ್ನು ಚಿಂತಿಸು.'

'ಇದನ್ನೆಲ್ಲ ನಾನು ವಿಚಾರ ಮಾಡಿರಲಿಲ್ಲ. ಇನ್ನು ನಾನೇನು ಮಾಡಬೇಕು ಹೇಳಿರಿ.'

'ಏನೂ ಬೇಡ ಸ್ವಧರ್ಮವನ್ನು ಅವಲಂಬಿಸು. ನಿತ್ಯದಲ್ಲಿ ಇಪ್ಪತ್ತು ನಾಲ್ಕು ಸಾವಿರ ಗಾಯತ್ರಿಯ ಜಪ ಮಾಡು. ಅದರಿಂದ ನಿನ್ನ ಪಾಪವೆಲ್ಲ ತೊಳೆದು ಜ್ಞಾನವನ್ನು ಪಡೆಯುವೆ.'

ಸಿದ್ಧನ ಮಾತಿನಿಂದ ಪರಿಣಾಮ ಹೊಂದಿದ ಬ್ರಾಹ್ಮಣನು ಆ ಅಭಿಚಾರ ವಿದ್ಯೆಯ ಹವ್ಯಾಸ ಬಿಟ್ಟು ಸ್ವಧರ್ಮದ ಮಹತ್ವವನ್ನರಿತು ಹೊರಟು ಹೋದನು.

ಸಂಚಾರ ಮಾಡುತ್ತ ಸಿದ್ಧನು ಅದವಾನಿಗೆ ಬಂದನು. ಅಲ್ಲಿ ಒಂದು ಪರ್ವತ. ಅದರಲ್ಲಿ ಬಾಳೇಕೊಂಬವೆಂಬ ಪ್ರಶಾಂತ ರಮಣೀಯ ಸ್ಥಳ. ಸಾಧನೆಗೆ ಅನುಕೂಲವೆಂದು ಅನೇಕ ಸತ್ಪುರುಷರು ಅಲ್ಲಿ ನೆಲೆಸಿದ್ದರು. ಆ ಪೇಟ

ದಲ್ಲಿ ಕೂಡಿಕೊಂಡು ಅವರ ಸಂದೇಹಗಳನ್ನು ನಾನಾ ಬಗೆಯಿಂದ ಪರಿಹರಿಸು ವನು. ಅವರಲ್ಲೊಬ್ಬ ಕೇಳುತ್ತಾನೆ.

'ನೀವು ಸ್ಥೂಲವಾದ ದೇಹವನ್ನು ನಿಂದಿಸಿ ಕಣ್ಣಿಗೆ ಕಾಣುವುದನು ತಿರಸ್ಕಾರ ಮಾಡಿ ಕಾಣದಿರುವುದನ್ನು ಆತ್ಮನೆಂದು ಹೇಳುತ್ತೀರಿ. ಇದು ಸರಿಯೋ? ನಾನಾದರೆ ದೇಹಕ್ಕೇ ಆತ್ಮನೆನ್ನುತ್ತೇನೆ.'

ಸಿದ್ಧ ಹೇಳುತ್ತಾನೆ.

'ದೇಹಕ್ಕೆ ಆತ್ಮನೆನ್ನುವುದು ಸರಿಯಲ್ಲ. ಯಾಕಂದರೆ ಅದು ಅನ್ನ ದಿಂದ ನಿರ್ಮಾಣವಾದುದು. ಪ್ರತಿದಿನ ಅದಕ್ಕೆ ಅನ್ನವನ್ನು ಹಾಕುತ್ತಿದ್ದರೆ ಅದು ಪುಷ್ಟವಾಗಿದ್ದು ಕೆಲಸಕ್ಕೆ ಬರುತ್ತದೆ. ಅನ್ನವಿಲ್ಲದಾದರೆ ಸೊರಗಿ ಬಡ ಕಲಾಗಿ ಒಂದು ದಿನ ಬಿದ್ದು ಹೋಗುತ್ತದೆ. ಈ ದೇಹವು ಅಸ್ಥಿ-ಮಜ್ಜಾ-ಮೇದ ಮೊದಲಾದ ಏಳು ಧಾತುಗಳಿಂದ ನಿರ್ಮಾಣವಾಗಿರುತ್ತದೆ. ಮರಣ ಸಂಭವಿಸಲು ಇದು ಇಲ್ಲಿಯೇ ಬಿದ್ದುಕೊಳ್ಳುವಂಥದು. ಆದುದರಿಂದ ಇದನ್ನು ನಾವು ನಿಂದಿಸುತ್ತೇವೆ. ಪರಮಾತ್ಮನು ಮೊದಲು ಜಡದೇಹಗಳನ್ನು ನಿರ್ಮಾಣ ಮಾಡಿ ಅವು ಕಾರ್ಯಕ್ಷಮವಾಗಬೇಕೆಂದು ತಾನೇ ಒಳಗೆ ಜೀವನಾಗಿ ಪ್ರವೇಶ ಮಾಡಿದನೆಂದು ಶಾಸ್ತ್ರಗಳು ಹೇಳುತ್ತವೆ. ಆದಕಾರಣ ಆತ್ಮನೆಂಬುವನು ಬೇರೆಯಾಗಿದ್ದಾನೆ. ಅವನು ಜಡನಲ್ಲ. ಚೇತನ.'

'ಅವನು ಇರುವನೆಂದು ನಾವು ಅರಿಯುವ ಬಗೆ?'

'ಅವನಿಂದಲೇ ನಮ್ಮ ಕಾರ್ಯಗಳೆಲ್ಲ ಜರುಗುವವು. ಎಚ್ಚರದಲ್ಲಿ ಭೋಗ ಭೋಗಿಸುವವನು ಅವನೇ. ಕನಸಿನಲ್ಲಿ ಸೂಕ್ಷ್ಮ ಭೋಗ ಭೋಗಿ ಸುವವನೂ ಅವನೇ. ಗಾಢ ನಿದ್ರೆಯಲ್ಲಿ ಸುಖವಾಗಿತ್ತು. ಎಂಬ ಅನುಭವ ಪ್ರಕಟಪಡಿಸುವವನೂ ಅವನೇ. ಪ್ರಕಾಶಮಾನವಾದ ದೀಪದ ಬೆಳಕಿನಲ್ಲಿ ನಾವು ಅನೇಕ ಕಾರ್ಯ ಮಾಡುವೆವಲ್ಲವೇ? ಅದರಂತೆ ಆತ್ಮನ ಬೆಳಕಿನಲ್ಲಿ ನಮ್ಮ ವ್ಯವಹಾರಗಳೆಲ್ಲ ಜರಗುತ್ತವೆ. ಎಲ್ಲಕ್ಕೂ ಸಾಕ್ಷಿಭೂತನಾಗಿ ಆತ್ಮನಿ ರುತ್ತಾನೆ.'

ಕೇಳಿದವನು ಕೃತಕೃತ್ಯನಾದನು.

ಕುಷ್ಠರೋಗಿಯೊಬ್ಬನು ಸಿದ್ಧನಿಗೆ ವಂದಿಸುತ್ತ ನುಡಿದನು.

ಮಹಾತ್ಮರೇ, 'ನೀವು ಮನೋರೋಗಗಳನ್ನು ಗುಣಪಡಿಸಬಲ್ಲಿರಿ. ಅದರಂತೆ ದೇಹಕ್ಕೆ ರೋಗವಾದವರನ್ನೇಕೆ ಗುಣಪಡಿಸಬಾರದು?'

'ಅದು ನಮ್ಮ ಕಾರ್ಯವಲ್ಲ. ರೋಗಗಳನ್ನು ಗುಣಪಡಿಸಲು ವೈದ್ಯರಿದ್ದಾರೆ.'

'ಎಲ್ಲಕಡೆಗೆ ನಿರಾಶೆ ಹೊಂದಿ ನಿಮ್ಮ ಬಳಿಗೆ ಬಂದಿದ್ದೇನೆ. ನನ್ನನ್ನು ಉಪೇಕ್ಷಿಸಬಾರದು. ಜನರಿಂದ ಬಹಿಷ್ಕೃತನಾದವನು ಗುರುವಿನಿಂದಲೂ ಬಹಿಷ್ಕೃತನಾಗಬೇಕೇ?'

ಸಿದ್ಧನು ಅವನಿಗೆ ಪಂಚಾಕ್ಷರಿ ಮಂತ್ರವನ್ನು ಉಪದೇಶಮಾಡಿ ತನ್ನ ಪಾದೋದಕದಿಂದ ಸ್ನಾನ ಮಾಡುವಂತೆ ಹೇಳಿದನು. ಅದರಂತೆ ಅವನು ಮಾಡಲು ಆಶ್ಚರ್ಯವೇ ಸರಿ. ಅವನ ರೋಗವೆಲ್ಲ ನಾಶವಾಗಿ ಮೈಬಣ್ಣ ಸ್ವಾಭಾವಿಕವಾಯಿತು. ಅವನು ಗುರುವನ್ನು ಬಹು ಪರಿಯಾಗಿ ಕೊಂಡಾಡಿದನು.

ಹೀಗೆ ರೋಗವನ್ನು ಗುಣಪಡಿಸಿದ ಸುದ್ದಿಯು ಮೆಲ್ಲನೆ ಹಬ್ಬಲು ಪ್ರಾರಬ್ಧ ಕರ್ಮ ವಶದಿಂದ ರೋಗ-ರುಜಿನ, ಕಷ್ಟನಷ್ಟಗಳಿಗೆ ಗುರಿಯಾದ ಜನರು ಹಿಂಡು ಹಿಂಡಾಗಿ ಬಂದರು. ಆಗ ಸಿದ್ಧನು ಅವರಾರಿಗೂ ತಿಳಿಯದಂತೆ ಒಮ್ಮೆಲೆ ಆ ಸ್ಥಳಬಿಟ್ಟು ಬೇರೆ ಕಡೆಗೆ ತೆರಳಿದನು.

ಸಿದ್ಧಪುರುಷರು ಇಂಥ ಪವಾಡವನ್ನು ಮಾಡಿ ನಮ್ಮ ಕಷ್ಟಗಳನ್ನು ದೂರ ಮಾಡಲೆಂದು ಮಾತ್ರ ಅಪೇಕ್ಷಿಸುತ್ತಾರೆ. ಪಾಪಕರ್ಮಗಳಿಂದ ದುಃಖ ಪ್ರೊದಗುತ್ತದೆ. ಆದಕಾರಣ ನಾವು ಪಾಪವನ್ನು ಆಚರಿಸಬಾರದು. ಎಂದು ಎಚ್ಚರಿಕೆ ವಹಿಸಿ ಪುಣ್ಯ ಮಾರ್ಗದಲ್ಲಿ ನಡೆಯಲು ಮನಸ್ಸು ಮಾಡರು. ಯಾವ ಕಾರಣಕ್ಕಾಗಿ ಸಿದ್ಧರು ಪವಾಡವೆನಿಸುವಂತೆ ಅಲ್ಲೊಂದು ಕಡೆಗೆ ಜನರ ದುಃಖವನ್ನು ನಿಪಾರಿಸಿದರು? ಎಂಬುದನ್ನೇನೂ ಅವರು ವಿಚಾರಿಸರು. ಹಾಗೆ ಸಿದ್ಧರು ದುಃಖ ನಿವಾರಣೆಗೆ ಕಾರಣರಾಗಲು ಅವರವರ ಪ್ರಾರಬ್ಧ ಗತಿ ಕಾರಣವಿರಬಹುದು. ಅಥವಾ ದುಃಖಗಳನ್ನು ಕಂಡು ಸಿದ್ಧರ ಮನಸ್ಸು ಕರಗಿಸಬಹುದು. ಅಥವಾ ದುಃಖ ನಿವಾರಣೆಯಾದವರ ಪುಣ್ಯ ಫಲಿಸಿರಬಹುದು. ಇವು ಏನೇ ಇರಲಿ. ಆ ವಿಚಾರ ನಮಗೇಕೆ? ನಮ್ಮ ದುಃಖ ಮಾತ್ರ ನಿವಾರಣೆಯಾದರೆ ಸಾಕು. ಎನ್ನುವುದು ಸಾಮಾನ್ಯ ಜನರ ಅಭಿಲಾಷೆ. ಪುಣ್ಯ

ವಿಲ್ಲದೇ ಪುಣ್ಯದ ಫಲ ಪಡೆಯಬೇಕೆಂಬ ಯತ್ನ ಬಲವಾದಲ್ಲಿ ಸಿದ್ಧರು ಇರಲು ಅಪೇಕ್ಷಿಸುವುದಿಲ್ಲ.

ಕಾಲುಗಳು ಮಾರ್ಗವನ್ನು ಸವೆಸುತ್ತಿದ್ದವು. ಮನದಲ್ಲಿ ಮೇಲಿನಂತೆ ವಿಚಾರ ಸಾಗಿದ್ದವು.

ಒಂದು ಗ್ರಾಮ ಬಂದಿತು. ಯಾರದೋ ಮನೆಯ ಮುಂದೆ ಸಿದ್ಧ ಹೋಗಿ ನಿಂತನು. ಇವನು ಕೂಳು ಕಾಣದೇ ಭಿಕ್ಷೆಗೆ ಬಂದಿದ್ದಾನೆ. ತುಸು ಕೂಳು ಹಾಕಿದರೆ ಮನೆಯಲ್ಲಿ ದುಡಿಯಲಿಕ್ಕೆ ಒಂದು ಆಳಾಗುವುದೇನೋ ನೋಡಬೇಕು. ಎಂದು ವಿಚಾರಿಸಿ ತುಸು ರೊಟ್ಟಿಯನ್ನು ಕೊಟ್ಟು, 'ಎಲೋ ಆಮೇಲೆ ನಿನಗೆ ಊಟ ಹಾಕಿಸುತ್ತೇನೆ. ಈ ಶಗಣಿಯನ್ನೆಲ್ಲ ಹೊತ್ತು ಬೇಗ ಬೇಗ ತಿಪ್ಪೆಗೆ ಹಾಕಿಬಿಡು. ಎಂದು ಹೇಳಲು ಸಿದ್ಧನು ಮನದಲ್ಲಿ ನಕ್ಕು ಶಗಣಿಯನ್ನು ಹೊತ್ತು ಹಾಕತೊಡಗಿದನು. ಕಾರ್ಯವು ಸಮರ್ಪಕವಾಗಿ ಸಾಗಿರುವುದನ್ನು ಕಂಡು ಆ ಗೃಹಸ್ಥನು ಬೇರೆ ಕಡೆಗೆ ಹೋಗಲು ಸಿದ್ಧನು ತಾನೂ ಆ ಕಾರ್ಯವನ್ನು ಬಿಟ್ಟು ಮತ್ತೊಂದು ಮನೆಗೆ ಭಿಕ್ಷೆಗೆ ತೆರಳಿದನು. ಆ ಮನೆಯ ಯಜಮಾನನೂ ಸ್ವಾರ್ಥಿ. 'ಓ, ಕೆಲಸಕ್ಕೆ ಒಳ್ಳೆಯ ಆಳು ದೊರೆತಂತಾಯಿತು. ಆಳು ದೊರೆಯದ್ದರಿಂದ ಈ ಮಣ್ಣು ಇಲ್ಲಿಯೇ ಬಿದ್ದಿರುವುದು.' ಎಂದು ಮನದಲ್ಲಿ ವಿಚಾರಿಸಿಕೊಂಡು ಸಿದ್ಧನಿಗೆ ಕೇಳಿದನು. 'ಎಲೋ ಊಟ ಬೇಕಲ್ಲವೇ? ಸಿದ್ಧ ತಲೆ ಹಾಕಿದನು. ಯಜಮಾನ ಮನೆಯೊಳಗೆ ಹೋಗಿ ಅರ್ಧ ಭಕ್ಕರಿತಂದು ಸಿದ್ಧನಕಡೆಗೆಸೆದು ಹಿಂದಿನಿಂದ ನೋಡೋಣ ಇದಷ್ಟು ಮಣ್ಣು ತೆಗೆದುಹಾಕು ಎಂದು ಹೇಳಿದನು. ಸಿದ್ಧನು ಆ ಕಾರ್ಯದಲ್ಲಿ ತೊಡಗಿರಲು ಯಜಮಾನ ಯಾತಕ್ಕೋ ಮನೆಯೊಳಗೆ ತೆರಳಿದನು. ಲಗುಬಗೆಯಿಂದ ಆ ಕೆಲಸ ಪೂರೈಸಿತು.

ಆ ಸ್ಥಳವನ್ನು ಬಿಟ್ಟು ಸಿದ್ಧನು ಒಂದು ಬಾವಿಗೆ ಬಂದು ತಣ್ಣಗೆ ಕುಳಿತನು. ಕತ್ತಲೆ ಯಾವರಿಸತೊಡಗಿತು. ಅದರ ಪರಿವೆ ಯಾರಿಗೆ? ಹೊಟ್ಟೆ ಹಸಿದಿತ್ತು. ಅದರ ಗೊಡವೆ ಯಾರಿಗೆ? ಹೊಟ್ಟೆ ಹಚ್ಚಿದವನಿಗೆ. ಅನಂತ ಜೀವರಾಶಿಗಳು ಭೂಮಿಯಲ್ಲಿ. ಯಾರಾದರೂ ಅವುಗಳ ಹೊಟ್ಟೆಯ ವಿಚಾರ ಚಿಂತಿಸುವರೇ? ಅಥವಾ ಚಿಂತಿಸಬೇಕೆಂದರೂ ಅಷ್ಟು ಶಕ್ತಿ ಯಾರಿಗಿದೆ? ಇದ್ದಾನೆ ಅಂಥ ಶಕ್ತಿಶಾಲಿ ಒಬ್ಬನೇ ಒಬ್ಬ. ಅವನೇ ಪರಮಾತ್ಮ.

ಆಗಲೇ ಕತ್ತಲೆ ಬಹಳವಾಗಿತ್ತು. ಯಾರೋ ಒಬ್ಬರು ಬಂದು ಸಿದ್ಧ ವಿಚಾರಿಸಿದರು. 'ಊಟವಾಗಿದೆಯೋ? ಇಲ್ಲವೋ? ಮಾತಾಡದೇ ಇಲ್ಲ ವೆಂಬಂತೆ ಸಿದ್ಧ ತಲೆ ಹಾಕಿದನು. ಕೈಹಿಡಿದು ಅವನು ಮೇಲಕ್ಕೆಬ್ಬಿಸಿ 'ಮನೆಗೆ ಬಾ. ಎಂದು ಕರೆತಂದು ತಂಗುಳನ್ನ ಹಾಕಿ 'ನಡೆ, ಮಸೀದೆಗೆ. ಅಲ್ಲಿ ಕುಣಿತ ವಿದೆ.' ಎಂದು ಹೇಳಿ ಅಲ್ಲಿಗೆ ಕರೆತಂದು ಕೈಯಲ್ಲೊಂದು ಹಿಲಾಲು ಹಚ್ಚಿ ಕೊಟ್ಟು 'ಹಿಡಿದುಕೊಂಡು ಮುಗಿಯುವವರೆಗೆ ಸುಮ್ಮನೆ ಕೂಡು.' ಎಂದು ಆಜ್ಞೆ ಮಾಡಲು ಒಪ್ಪಿಕೊಂಡು ಸಿದ್ಧನು ಕುಳಿತನು.

ಅತ್ತ ಗ್ರಾಮ್ಯ ಕುಣಿತ. ಜನರ ಉತ್ಸಾಹದ ಕೂಗುಗಳು. ಗದ್ದಲವೋ ಗದ್ದಲ. ಆಗ ಸಿದ್ಧ ವಿಚಾರಿಸುತ್ತಿದ್ದನು. 'ಆತ್ಮಪ್ರಕಾಶದಿಂದಲೇ ಜಗತ್ತು ಸಾಗಿದೆ. ಆ ಆತ್ಮನೇ ನಾನು. ನಾನು ಒಳ್ಳೆಯದನ್ನು, ಕೆಟ್ಟದ್ದನ್ನು ಎಣಿಸದೇ ಬೆಳಗಬೇಕು.' ಎನ್ನುವಾಗಲೇ ಬಹಳ ನಿದ್ದೆ ಬಂದು ಸಿದ್ಧ ಮುಗ್ಗರಿಸಿದನು. ಹಿಡಿದ ಹಿಲಾಲು ಆರಿಹೋಯಿತು. ಆಗ ಮೊದಲಿನವನು ಬಂದು ಒಂದು ಸಲ ಕಪಾಳ ಮೋಕ್ಷ ಮಾಡಿ ಕೈಯಲ್ಲಿ ಮಹಮ್ಮದೀಯರ ಒಂದು ದೇವರನ್ನು ಕೊಟ್ಟು ಸುಮ್ಮನೆ ಕೂಡೆಂದನು.

'ಓ, ನಾನು ತಮೋ ಗುಣದಲ್ಲಿ ಮುಳುಗಿ ನಿದ್ರಾವಶನಾಗಿದ್ದೆನು. ಇವನೆಂಥ ಸಜ್ಜನ ಕಪಾಳಕ್ಕೆ ಏಟು ಹಾಕಿ ನಿಚ್ಚಳ ಕಣ್ಣು ತೆರೆಸಿದನು. ಇವನ ಉಪಕಾರ ಮರೆಯಲಾರೆ.' ಎಂದುಕೊಳ್ಳುತ್ತ ಕುಳಿತಿರಲು ಆ ಕುಣಿತ ಮುಗಿಯಿತು. ಜನ ಮನೆಗೆ ತೆರಳಿದರು. ಮಸೀದೆ ನಿರ್ಜನವಾಯಿತು. ಆರಾಮವಾಗಿದೆ ಎನ್ನುತ್ತ ಸಿದ್ಧ ಮಲಗಿಬಿಟ್ಟನು.

ಆ ಊರಲ್ಲಿಯೇ ಕೆಲ ದಿನಗಳವರೆಗೆ ಸಿದ್ಧನು ಆದೇಕೋ ನಿಲ್ಲುವ ಮನಸ್ಸು ಮಾಡಿದನು. ಆದರೆ ಅಲ್ಲಿ ಒಂದಗಳೂ ಭಿಕ್ಷೆ ದೊರೆಯದು. ಕೆಲ ದಿನ ಉಪವಾಸವಾಯಿತು. ಹಸಿವೆಯ ಬಾಧೆ ಮಿತಿದಪ್ಪಿತು. ಗಿಡ-ಗಮಟೆಗಳನ್ನು ಅಲೆಯುವನು. ಅಕಸ್ಮಾತ್ ಕಸುಗಾಯಿ-ಪಾಡು ಮುಂತಾದ ಸೀತಾಪೇರಲ ಪೇರಲ ಹಣ್ಣು ದೊರಕಿದರೆ ತಿನ್ನುವನು. ನೀರು ಕುಡಿದು ಭೂಮಿಯಲ್ಲಿ ಮಲಗುವನು.

ಈ ರೀತಿ ಸಿದ್ಧನ ಕಾಲಕ್ರಮಣವು ಸಾಗಿರಲು ಜನಗಳು ತಮ ತಮಗೆ ತಿಳಿದಂತೆ ಆಡಿಕೊಳ್ಳುತ್ತಿದ್ದರು. ಹೀಗೆ ನಡೆಯುವುದೇ ಜಗತ್ತಿನ ರೀತಿಯೋ

ಏನೋ? ಚಿಗರೆಗಳು ಹುಲ್ಲುತಿಂದು ಜೀವನ ಸಾಗಿಸುತ್ತ ನಿರುಪದ್ರವಿಯಾಗಿ ಬದಕುತ್ತವೆ. ಮೀನಗಳು ನೀರಿನಲ್ಲಿ ತಮ್ಮಷ್ಟಕ್ಕೆ ತಾವು ಬಾಳುತ್ತವೆ. ಸಜ್ಜನರು ಪರೋಪದ್ರವ ಮಾಡದೇ ತಮ್ಮಷ್ಟಕ್ಕೆ ತಾವು ಜೀವಿಸುತ್ತಾರೆ. ಏನಾದರೂ ದ್ವೇಷ ಮಾಡುವವರು ತಪ್ಪಲಿಲ್ಲ. ಚಿಗರೆಗೆ ಬೇಡರು. ಮೀನಗಳಿಗೆ ಜಾಲಗಾರರು. ಸಜ್ಜನರಿಗೆ ನಿಂದಕರು. ಕಾರಣವಿಲ್ಲದೇ ವೈರಿಗಳಾಗಿ ವರ್ತಿಸುತ್ತಾರೆ. ಸತ್ವ-ರಜತಮೋಗುಣಗಳಿಂದ ಜಗತ್ತಾಗಿರುವುದೆಂದು ಹೇಳುವರು. ಎಂದಮೇಲೆ ಜಗತ್ತಿನಲ್ಲಿರುವ ಜನರು ಕೂಡ ಹಾಗೇ ಇರಬೇಕೆಂದಾಯಿತು. ಆದರೆ ಒಬ್ಬೊಬ್ಬರಲ್ಲಿ ಒಂದೊಂದು ಗುಣ ಮುಖ್ಯ.

ಕೆಲವರು ಸಿದ್ಧನನ್ನು ಕಂಡು ಇವನು ಯಾರೋ ಹೊಲೆಯನಾಗಿರಬೇಕೆಂದರು. ಕೆಲವರು ಹುಚ್ಚನೆಂದು ಬಿರುದು ಕೊಟ್ಟರು. ದೈವವಾದಿಗಳು ಪಾಪ, ಕೆಟ್ಟ ಹಣೇಬರಹವೆಂದರು. ಇವೆಲ್ಲ ಬೈಗಳನ್ನೂ ಸಿದ್ಧ ಕೇಳುವನು. ಆದರೆ ಯಾವುದರಿಂದಲೂ ಪರಿಣಾಮವಾಗುವಂತಿಲ್ಲ. ಒಮ್ಮೆ ಯಾರೋ ಇವನಿಗೆ ಕೆಟ್ಟ ಹಣೇಬರಹವೆಂದು ಅನ್ನಲು ಸಿದ್ಧನಿಗೊಂದು ಸಂಗತಿ ನೆನಪಾಯಿತು. ಶ್ರೀಶೈಲದ ಬಳಿಯಲ್ಲಿ ಬದವೇಲಿ ಎಂಬ ಊರು. ಒಮ್ಮೆ ಅಲ್ಲಿ ಒಂದು ದೇವಾಲಯದೊಳಗೆ ಸಿದ್ಧ ಕುಳಿತಿರಲು ತಳವಾರ ಬಂದು ಕೇಳಿದನು. 'ನೀನು ಯಾರು? ಎಲ್ಲಿಯವನು?' ಉತ್ತರ ಕೊಡದೇ ಸಿದ್ಧ ಮೌನವಾಗಿರುವುದನ್ನು ಕಂಡು ತಳವಾರ ತಪ್ತನಾಗಿ ಮತ್ತೊಮ್ಮೆ ವಿಚಾರ ಮಾಡಿದರೂ ಉತ್ತರ ಸಿಗದಂತಾಗಲು ಭರಭರ ನಾಲ್ಕೆಂಟು ಏಟು ಹಾಕಿ ಚಾವಡಿಗೆ ಎಳೆತಂದನು. ಅಲ್ಲಿ ಕೊತವಾಲ ಎಲ್ಲ ಸಂಗತಿಯನ್ನು ವಿಚಾರಿಸಿ ಕತ್ತಲೆಕೋಣೆಯಲ್ಲಿ ಸಿದ್ಧನನ್ನಿಡಿಸಿ ತನ್ನ ಕಾರ್ಯಕ್ಕಾಗಿ ತೆರಳಿದನು. ಅದು ಮತ್ತೊಂದು ಊರಿನ ಕಾರ್ಯ ಮುಗಿಸಿ ಮರಳಲು ೩-೪ ದಿನ ಬೇಕಾದವು. ಬಂದಮೇಲೆ ತಳವಾರ ಅವನಿಗೆ ಸಿದ್ಧನ ನೆನಪು ಕೊಡಲು ಅವನೂ ಅನೇಕ ಬಗೆಯಿಂದ ಸಿದ್ಧನನ್ನು 'ನೀನು ಯಾರು ಹೇಳು ಎಂದು ಪ್ರಶ್ನಿಸಿದನು.' ಏನಾದರೂ ಸಿದ್ಧ ಮಾತನಾಡಲಿಲ್ಲ. ಕೊತವಾಲನಿಗೆ ಪಿತ್ತ ನೆತ್ತಿಗೇರಿತು.

'ಎಲೋ, ಬಾರಿಸಿರಿ ಇವನ ಬೆನ್ನಮೇಲೆ ಇವನಿಗೆಲ್ಲಿಯೋ ಮೈ ಮರಗಟ್ಟಿದೆ.'

ಎಂದು ಹೇಳುವುದೇ ತಡ ತಳವಾರರು ಸಿದ್ಧನಿಗೆ ಹತ್ತಾರು ಪೆಟ್ಟು ಹಾಕಿದರು. 'ಶಿವನೇ ಇದೆಲ್ಲ ನಿನಗೆ ಅರಿಕೆ ಇರಲಿ.' ಎನ್ನುತ್ತ ಸಿದ್ಧ ಶಾಂತವಾಗಿಯೇ ಇದ್ದನು. ಅಷ್ಟರಲ್ಲಿ ಅಲ್ಲಿಗೆ ಬಂದ ಬ್ರಾಹ್ಮಣನೊಬ್ಬನು ಸಿದ್ಧನ ಪರಿಸ್ಥಿತಿಯನ್ನೂ, ಅವನ ಮುಖಶ್ರೀಯನ್ನೂ ಕಂಡು 'ಛೀ, ನೀವು ತಪ್ಪು ಮಾಡುತ್ತಿದ್ದೀರಿ–ಇವನೊಬ್ಬ ಮಹಾಪುರುಷ. ಅವನನ್ನು ಪೀಡಿಸುವುದು ಧರ್ಮವಲ್ಲ. ಬಿಟ್ಟುಬಿಡಿರಿ. ನಾನು ಕರೆದುಕೊಂಡು ಹೋಗುತ್ತೇನೆ.' ಎಂದು ಹೇಳಿಕೊಂಡು ಸಿದ್ಧನ ಗೋಳು ತಪ್ಪಿಸಿ ಮನೆಗೆ ಕರೆತಂದನು. ಆಗ ಅವನು ಮಾಡಿದ ಮೊದಲ ಕಾರ್ಯವೆಂದರೆ ಸಿದ್ಧನಿಗೆ ಮೈತುಂಬ ಎಣ್ಣೆ ಹಚ್ಚಿ ಎರೆದನು. ಸುಗ್ರಾಸವನ್ನು ದಿನಾಲು ಊಟ ಹಾಕಿದನು.

ಒಬ್ಬರು ಹೀಗೆ ಸಿದ್ಧನಿಗೆ ಸತ್ಕಾರ ಮಾಡುತ್ತಿರುವುದನ್ನು ಕಂಡು ಜನರು ಕುತೂಹಲವಶರಾಗಿ ಮೆಲ್ಲನೆ ದರ್ಶನಕ್ಕೆ ಬರತೊಡಗಿದರು. ತಮ್ಮ ಸುಖ-ದುಃಖ ಹೇಳಿಕೊಳ್ಳತೊಡಗಿದರು. ಅವರಲ್ಲಿ ಒಬ್ಬ ಹೆಣ್ಣು ಮಗಳು ನಿತ್ಯ ಬಂದು ತದೇಕಚಿತ್ತದಿಂದ ಸಿದ್ಧನನ್ನವಲೋಕಿಸುತ್ತ ಕೂಡುತ್ತಿದ್ದಳು. ಮನೆಯಲ್ಲಿ ಅವಳಿಗೊಬ್ಬ ಮಗ. ಅವನಿಗೆ ಜಡ್ಡಾಗಿತ್ತು. ಒಂದೊಂದು ದಿನ ಮಗನನ್ನು ಮರೆತು ಸಿದ್ಧನ ಸಭೆಯಲ್ಲಿ ಕೂಡುವಳು. ಅದರಂತೆ ಇಲ್ಲಿಯ ಸಭೆ ಮುಗಿಸಿ ಮನೆಗೆ ಹೋಗಲು ಯಾವಾಗಲೋ ಏನೋ ಮಗನ ಕಥೆ ಮುಗಿದು ಹೋಗಿತ್ತು. ಕಣ್ಣೀರಿಡುತ್ತ ಹಾಗೇ ತಿರುಗಿ ಬಂದು ಸಿದ್ಧನನ್ನು ಕಾಣಲು 'ತಾಯೀ, ನೀನು ಪ್ರತಿದಿನ ತನ್ನನ್ನು ಬಿಟ್ಟು ಇಲ್ಲಿಗೆ ಬಂದು ಹೋಗುತ್ತಿರುವುದಕ್ಕೆ ನಿನ್ನ ಮಗ ಸಿಟ್ಟಾಗಿ ಹಾಗೆ ಮಲಗಿದ್ದಾನೆ. ಅವನಿಗೇನೂ ಆಗಿಲ್ಲ. ಬೇಕಾದರೆ ಮನೆಗೆ ಹೋಗಿ ನೋಡು.' ಎಂದು ನುಡಿದು ಬಿಟ್ಟನು. ಅವಳು ಬೇಗ ಬೇಗ ಹೆಜ್ಜೆ ಹಾಕಿ ಮನೆಗೆ ಬಂದು ನೋಡುತ್ತಾಳೆ ಮಗ ಎದ್ದು ಕುಳಿತುಕೊಂಡಿದ್ದಾನೆ. ತಾಯಿ ಬಂದಳೆಂಬುದನ್ನು ಅವನು ಕಂಡು 'ಅವ್ವ ನೀನು ನಿತ್ಯ ಮಹಾಪುರುಷರ ದರ್ಶನಕ್ಕೆ ಹೋಗಿಬರುವೆ. ನಾನು ಸುಮ್ಮನೇ ಮನೆಯಲ್ಲಿ ಬಿದ್ದುಕೊಂಡಿರುತ್ತೇನೆ. ಒಂದು ದಿನವಾದರೂ ನನ್ನನ್ನು ಕರೆದೊಯ್ಯಬೇಕೆಂದು ನೀನು ವಿಚಾರಿಸಬಾರದೇ?' ಎಂದನು. ತಾಯಿಗಾಶ್ಚರ್ಯವಾಯಿತು. ಆಗ ಅವಳು 'ಇಲ್ಲಪ್ಪ, ನೀನು ಜಡ್ಡಿನವನೆಂದು

ನಾನು ಒಬ್ಬಳೇ ಹೋಗುತ್ತಿದ್ದೆ. ಇನ್ನು ಮೇಲೆ ನೀನೂ ಬಾ' ಎಂದು ಸಂತೋಷದಿಂದ ನುಡಿಯುವಷ್ಟರಲ್ಲಿ ಸಿದ್ಧನು ಒಳಗೆ ಬರುತ್ತ ಅಂದನು.

'ಇದೋ ನಾನೇ ಬಂದೆ ನೋಡು. ಕರೆಯದವರ ಮನೆಗೆ ಬರುವದು ನಮ್ಮ ನಡತೆ.'

ತಾಯಿ-ಮಗ ಸಿದ್ಧನನ್ನು ಪೂಜಿಸಿ ನಲಿದರು.

೧೧

ನಿದ್ರಾಯಾ ಲೋಕವಾರ್ತಾಯಾಃ ಶಬ್ದಾದೇರಪಿ ವಿಸ್ಮೃತೇಃ ।
ಕ್ವಚಿನ್ನಾವಸರಂ ದತ್ವಾ ಚಿಂತಯಾತ್ಮಾನಮಾತ್ಮನಿ ॥

—ವಿ. ಚೂಡಾಮಣಿ

ನಿದ್ರೆಗೆ, ಅವರಿವರ ಹಾಳು ಹರಟೆಗೆ, ಶಬ್ದ-ಸ್ಪರ್ಶ ಮೊದಲಾದ ವಿಷಯಗಳಿಗೆ, ಆತ್ಮವನ್ನು ಮರೆಸುವ ಮನೋವೃತ್ತಿಗೆ ಎಂದಿಗೂ ಆಸ್ಪದವನ್ನು ಕೊಡದೇ ನಿನ್ನ ಚಿತ್ತದಲ್ಲಿ ಆತ್ಮನನ್ನು ಧ್ಯಾನಿಸು.

ಮೇಲಿನ ಶ್ಲೋಕದಲ್ಲಿ ಹೇಳಿದಂತೆ ಸಿದ್ಧನು ಕಾಲಕಳೆಯುತ್ತಿದ್ದರೂ ಜನರಿಗೆ ಸಹನೆಯಾಗಲಿಲ್ಲ. ಇವನು ಏನು ತಿನ್ನುವನು? ಎಲ್ಲಿರುವನು? ಏನು ಮಾಡುವನು? ಎಂದು ಮೊದಲಾಗಿ ಶೋಧಕ್ಕೆ ತೊಡಗುವರು. ಆದರೆ ಯಾವುದೊಂದು ನಿರ್ಣಯಕ್ಕೂ ಅವರು ಬರದಂತಾದರು. ಉಣ್ಣು-ತಿನ್ನುವ ವಿಷಯವೇ! ಅದರ ಬಗೆಗೆ ಸಿದ್ಧನಲ್ಲಿ ಚಿಂತೆಯೇ ಇಲ್ಲ. ದೇಹ ಕೊಟ್ಟವನು ಬೇಕಾದರೆ ಅದರ ಚಿಂತೆ ವಹಿಸಲಿ. ಇಲ್ಲವಾದರೆ ಬಿಡಲಿ. ಎಂಬುದು ದೃಢನಿಶ್ಚಯ. ಮೇಲಿನ ಶ್ಲೋಕದಂತೆ ನಡೆಯುವುದೇ ಅವನು ಮಾಡುವ ಕಾರ್ಯ. ಆದರೆ ಈ ಕಾರ್ಯವೆಂಬುದೆಲ್ಲ ಕೇವಲ ಮಾನಸಿಕ. ಇದನ್ನು ಜನರು ತಿಳಿವ ಬಗೆ ಹೇಗೆ? ಒಟ್ಟಿನಲ್ಲೇನು? ಸಿದ್ಧನ ವಿಷಯಕ್ಕೆ ಅವರಲ್ಲಿ ಸಂಪೂರ್ಣ ಅಜ್ಞಾನ. ತಮ ತಮಗೆ ಬೇಕಾದಂತೆ ಅವನನ್ನು ಕಂಡಲ್ಲಿ ಆಶ್ಚರ್ಯವಲ್ಲ.

ಈ ರೀತಿಯಲ್ಲಿ ವಿಜಾಪುರದಲ್ಲಿ ಕೆಲವು ದಿವಸಗಳನ್ನು ಸಿದ್ಧನು ಕಳೆಯುತಿರಲು ಮೊಹರಮ್ಮದ ಹಬ್ಬವು ಬಂದಿತು. ಇಂಥ ಹಬ್ಬಗಳ ಉದ್ದೇಶ-

ಪಾವಿತ್ರ್ಯಗಳನ್ನು ತಿಳಿದವರೆಷ್ಟು ಜನ? ಹುಚ್ಚಿದ್ದು ಕುಣಿಯಲು ನೆವ ಸಿಕ್ಕಂತಾಯಿತು. ಕಿಡಿಗೇಡಿಗಳು ಕೆಲವರು ಸಿದ್ಧನ ಬಳಿಗೆ ಬಂದು ಒಂದು ಗಳ ಹಾಕಿ ಅವನನ್ನು ಹೊತ್ತುಕೊಂಡು ಮನೆಮನೆಗೆ ತಿರಳುತ್ತ, ಅಂಗಡಿ ಬೀದಿಗಳಲ್ಲಿ ಮೆರೆಸುತ್ತ ರೊಕ್ಕ ಕೂಡಿಸತೊಡಗಿದರು. ಕೆಲವೇಳೆ ಅವರ ಆಟಕ್ಕೆ ಅನುಕೂಲನಾಗಿದ್ದು ಸಿದ್ಧನು ಒಂದು ಸಾರೆ ಟಣ್ಣನೆ ಕೆಳಗೆ ಹಾರಿಕೊಂಡನು. ಆಗ ಆ ಕಿಡಿಗೇಡಿಗಳು ಅವನನ್ನು ಗುದ್ದಿ ಮನಬಂದಂತೆ ಹೊಡೆದು ಬಡೆದು ಪುನಃ ತಮ್ಮ ಆಟವನ್ನು ಆರಂಭಿಸಿದರು. ತಮಗೆ ತಾವು ಮಾಡುವ ಆಟ ಸಾಕೆನಿಸಲು ಸಿದ್ಧ ಕುಳಿತಿದ್ದ ಗಳವನ್ನು ಒತ್ತಟ್ಟಿಗೆ ಕೆಳಗೆ ಚಲ್ಲಿ ಹೊರಟು ಹೋದರು. ಸಿದ್ಧನ ಕೈ-ಮೈ-ಕಾಲುಗಳು ಕೆತ್ತಿ ಹೋಗಿದ್ದವು. ಅಲ್ಲಲ್ಲಿ ಘಾಯಗಳಾಗಿ ರಕ್ತ ಸೋರುತ್ತಿದ್ದಿತು. ಹೆಜ್ಜೆ ಕಿತ್ತಿಡಲೂ ವ್ಯಥೆಯಾಗಬೇಕು. ಅಂಥದರಲ್ಲಿಯೇ ಸಿದ್ಧನು ಹೇಗೋ ಕಾಲುಕಳೆಯುತ್ತ ಕುಂಟುತ್ತ ಒಂದು ಹಾಳು ಮಸೀದಿಗೆ ಬಂದು ಬಿದ್ದನು. ಆಗ ತನಗಿಂಥ ಗತಿಯನ್ನು ತಂದ ಆ ಕೇಡಿಗಳಿಗೆ ಸಿದ್ಧನು ಶಾಪವಿತ್ತು ದಂಡಿಸುವ ಗೊಡವೆ ಮಾಡದೇ ದೇವರ ಉಪಕಾರ ಸ್ಮರಣೆ ಮಾಡಲಾರಂಭಿಸಿದನು. ಯಾಕೆಂದರೆ ಶರೀರವು ಸುಸ್ಥಿತಿಯಲ್ಲಿದ್ದು ಮನುಷ್ಯ ಅತ್ತಿತ್ತ ತಿರಗುವಾಗ ವಿಷಯಗಳ ದರ್ಶನದಿಂದ ಮನಸ್ಸು ವ್ಯಗ್ರವಾಗುತ್ತದೆ. ನೋವಿನಿಂದ ನರಳುತ್ತ ಒಂದೇ ಕಡೆಗೆ ಬಿದ್ದುಕೊಂಡಿದ್ದರೆ ಯಾವ ಚಾಂಚಲ್ಯವೂ ಇಲ್ಲ. ಈಗ ಒದಗಿದ ಸ್ಥಿತಿ ಒಳ್ಳೆಯದೇ ಸರಿ.' ಎಂದುಕೊಂಡು ನರಳುತ್ತ ಅಲ್ಲಿಯೇ ಕೆಲ ದಿನಗಳನ್ನು ಕಳೆದನು.

ಆ ಸ್ಥಳಕ್ಕೆ ಊರೊಳಗಿನ ಬಾಲಕರು ಗುಂಡು-ಗಜಗ-ಬೊಗರೆಗಳನ್ನು ಆಡಲು ಬರುತ್ತಿದ್ದರು. ಅವರೊಡನೆ ಸಿದ್ಧನ ಆಟ ನಡೆಯಬೇಕು. ಪ್ರತಿಯೊಂದು ಆಟದಲ್ಲಿ ಸೋಲು ಸಿದ್ಧನ ಪಾಲಿಗೆ ಕಟ್ಟಿಟ್ಟಂತೆಯೇ. ಆಗ ಬಾಲಕರೆಲ್ಲ ಕುಣಿದು ಕೇಕೆ ಹಾಕಿ ನಗತೊಡಗಲು ಅದೇ ಸಿದ್ಧನಿಗೆ ಸಂತೋಷ. ತಿಳಿಮನದ ಬಾಲಕರು ಸಿದ್ಧನಿಗೊಲಿದರು. ಏನಾದರೂ ತಿನಿಸು ತಂದು ಆದರದಿಂದ ಕೊಡುವರು. ಅದು ಸಿದ್ಧನಿಗಾಹಾರ.

ಮೆಲ್ಲನೆ ಈ ಮಹಾತ್ಮನ ವಾರ್ತೆ ಸಾತ್ವಿಕನಾದ ತುಳಜಪ್ಪನೆಂಬವನ ಕಿವಿಗೆ ತಲುಪಿತು. ಆವನು ಲಗುಬಗೆಯಿಂದ ದರ್ಶನಕ್ಕೆ ಬಂದು ಕಣ್ತುಂಬ ಸಿದ್ಧ ಮೂರ್ತಿಯನ್ನು ನೋಡಿ ಮನೆಗೆ ಹೋಗುವನು. ಮನೆಯಲ್ಲಿ ಸದಾ

ಒಂದೇ ಸ್ಥಳ. ಥಂಡಿ-ಗಾಳಿ ಆ ಮಹಾತ್ಮನಿಗೆಷ್ಟು ಕಷ್ಟವೋ! ಮನೆಗೆ ಕರೆ ತಂದು ಅವನ ಸೇವೆ ಮಾಡಿ ಸಂತೋಷಗೊಳಿಸಬೇಕು. ಅವನ ಸಹವಾಸ ಆಗ ಸಹಜ ದೊರೆತು ನಾನು ಧನ್ಯನಾಗಬೇಕು. ಇದೆಲ್ಲ ಸರಿ. ಆ ಅವಧೂತ ಮನೆಗೆ ಬರುವ ಬಗೆ? ಕಡೆಗೆ ಒಂದು ಉಪಾಯ ಹೊಳೆಯಿತು. ಹುಡುಗ ರನ್ನು ಕರೆದು ಹೇಳಿದನು. 'ನೀವು ಆಟದಲ್ಲಿ ಅವನನ್ನು ರಮಿಸುತ್ತ ನಮ್ಮ ಮನೆಗೆ ಕರೆದುಕೊಂಡು ಬನ್ನಿ. ಅಂದರೆ ನಾನು ನಿಮಗೆ ಕಡಲೆ-ಬೆಲ್ಲ ಕೊಡು ತ್ತೇನೆ.' ಹತ್ತೆಂಟು ಜನ ಬಾಲಕರು ಸೇರಿ ಚಂಡಿನಾಟ ಆರಂಭಿಸಿದರು. ಸಿದ್ಧನೂ ಆಟದಲ್ಲಿ ಬೆರೆತನು. ಆಡುತ್ತಾಡುತ್ತ ಮನೆಯ ಬಳಿಗೆ ಅವರು ಬರಲು ತುಳಜಪ್ಪನು ಅತ್ಯಾನಂದಿತನಾಗಿ ಆದರದಿಂದ ಸಿದ್ಧನ ಕೈಹಿಡಿದು ಮನೆಯೊಳಗೆ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿದನು. ಆಮೇಲೆ ಹೊರಗೆ ನೆರೆದ ಬಾಲಕರಿಗೆ ಯಥೇಷ್ಟ ಕಡಲೆ-ಬೆಲ್ಲ ಕೊಟ್ಟು ಸಂತೋಷಗೊ ಳಿಸಿದನು.

ಮುತ್ತು ದೊರೆತರಲ್ಲ. ರತ್ನ ದೊರೆತರಲ್ಲ. ಕೊಪ್ಪರಿಗೆ ಧನ ದೊರೆತರೂ ಅಲ್ಲ ಜಿಜ್ಞಾಸುವಿಗೆ ಸತ್ಪುರುಷರ ಸಂಗ ದೊರೆತರೆ ಅದೇ ಸಂತೋಷ. ಅದೇ ಹಬ್ಬ. ತುಳಜಪ್ಪನ ಆನಂದಕ್ಕೆ ಪಾರವಿಲ್ಲ. ನೆರೆಹೊರೆಯವರ ಮನೆಗೆ ಹೋಗಿ ತನ್ನ ಮನೆಗೆ ಸತ್ಪುರುಷರು ಬಂದ ಸುದ್ದಿಯನ್ನು ತಿಳಿಸಿ ಬಂದನು. ಮನೆಗೆ ಬಂದು ಸಿದ್ಧನ ಕ್ಷೌರಾದಿಗಳನ್ನು ಮಾಡಿಸಿ ಶುದ್ಧವಾಗಿ ಸ್ನಾನ ಮಾಡಿಸಿದನು. ತರುವಾಯ ಮೃಷ್ಟಾನ್ನದ ಅಡಿಗೆಯಾಗಿರಲು ಸುಖವಾದ ಊಟ. ಮಲಗಲು ಮೆತ್ತನೆಯ ಹಾಸಿಕೆ.

ಅನೇಕ ಜನ ಭಕ್ತರು ಬರಲಾರಂಭಿಸಿದರು. ಅವರವರ ಯೋಗ್ಯತೆಗೆ ತಕ್ಕ ಹಾಗೆ ಸಿದ್ಧ ಉತ್ತರಿಸುವನು. ಯಾರಿಗೂ ತಿಳಿಯದೆಂಬ ಮಾತೇ ಇಲ್ಲ. ಎಲ್ಲರಿಗೂ ಸಮಾಧಾನ. ಈ ಸತ್ಪುರುಷ ಬ್ರಹ್ಮಜ್ಞಾನಿ ಎಂಬ ಸುದ್ದಿ ಎಲ್ಲ ಕಡೆಗೆ ಹರಡಿತು. ನೋಡಲು ಬರುವವರು ಕೆಲವರು. ಸಂದೇಹಗಳನ್ನು ಪರಿ ಹರಿಸಿಕೊಳ್ಳಲು ಬರುವವರು ಕೆಲವರು. ಒಂದು ಬಗೆಯ ಧರ್ಮಭಾವನೆ ಯಿಂದ ಬರುವವರು ಕೆಲವರು. ಯಾವಾಗಲೂ ಜನಸಂದಣಿ ಸಿದ್ಧನು ತುಳ ಜಪ್ಪನಿಗಂದನು.

'ಹಾರುವ ಹಕ್ಕಿಯನ್ನು ಬಂಧಿಸಿಟ್ಟಂತೆ, ಹರಿಯುವ ನೀರನ್ನು ಅಡ್ಡಗಟ್ಟಿದಂತೆ ಇಲ್ಲಿ ನನ್ನನ್ನು ಬಂಧನಕ್ಕೀಡು ಮಾಡಿಬಿಟ್ಟೆ. ನನಗೆ ಯಾಕೋ ಮನದಲ್ಲಿ ಸಮಾಧಾನವಿಲ್ಲದಾಗಿದೆ.'

ಎಂದು ಬಹುವಿಧವಾಗಿ ಸಿದ್ಧನು ಹೇಳುತ್ತಿರಲು ತುಳಜಪ್ಪನು ತಾನು ಕರೆತಂದ ಮುನೀದೆಯ ಬಳಿಯಲ್ಲಿ ಕಳಿಸಿಬಂದನು. ಈಗ ಸಿದ್ಧ ಪರೆ ಕಳಚಿದ ಹಾವು. ಸುಖ-ದುಃಖ, ಉಪವಾಸ-ವನವಾಸ, ಹಗಲ-ರಾತ್ರಿ ಎಲ್ಲ ಅವನವೇ. ಯಾರೂ ಕೇಳುವವರಿಲ್ಲ. ಆದರೆ ಜನ ಕೇಳುವರೇ? ಕಮಲವೇನು ತನ್ನಲ್ಲಿ ಮಧುವುಂಟು. ಸುವಾಸನೆಯುಂಟು. ಬನ್ನಿರೆಂದು ಭ್ರಮರಗಳನ್ನು ಕರೆಯಬೇಕೇ? ಅಲ್ಲಿಯೂ ಜನ ಮುಕ್ಕುರಿದರು. ಚಾತುರ್ವರ್ಣಿಕರೂ ಅವನ ಭಕ್ತರು. ಓದುಬರಹ ಬಂದವ, ಬಾರದವ, ಅಧಿಕಾರಿ, ಅನಧಿಕಾರಿ ಎಲ್ಲರೂ ಬರುವವರೇ. ಎಲ್ಲರಿಗೂ ಸಿದ್ಧ ದರ್ಶನದಿಂದಲೇ ಸಮಾಧಾನ. ಮೊದಲು ಅವನನ್ನು ಕಾಡಿ-ಪೀಡಿಸಿದ ಕಿಡಿಗೇಡಿಗಳು ಕೂಡ ಪಶ್ಚಾತ್ತಾಪದಿಂದ ಬಂದೆರಗಿದರು. ಸಿದ್ಧನೆಂದರೆ ಒಂದು ಕಲ್ಪವೃಕ್ಷವೆಂದು ಜನ ಭಾವಿಸಿದರು. ಬೇನೆ-ಬೇಸರ, ಮಂಗಳ ಅಮಂಗಳ ಎಲ್ಲ ಪ್ರಸಂಗಗಳಲ್ಲಿ ಅವನ ನೆರವು ಬೇಕೇ ಬೇಕು. ಹಾಗೆ ಮಾಡುವುದರಿಂದ ಜನ ಮನಸ್ಸಮಾಧಾನವನ್ನೂ ಪಡೆಯಬೇಕು. ಕೃತಜ್ಞತೆಯಿಂದ ಸಿದ್ಧನಿಗೆ ಹೂವು-ಹಣ್ಣು-ವಸ್ತ್ರ-ಹಣಗಳನ್ನು ಅರ್ಪಿಸಬೇಕು. ಅದನ್ನೆಲ್ಲ ಕಂಡು ಸಿದ್ಧನಿಗೆ ನಗೆ. ಪಾಪ ಜನ ಅಲ್ಪಾಯುಷಿಗಳು ಅಲ್ಪ ಸಂತೋಷಿಗಳು. ಶಾಶ್ವತವಾದ ಸುಖವನ್ನು ಇವರು ಅಪೇಕ್ಷಿಸರು.

ಒಮ್ಮೆ ಯಾವ ಕಾರಣಕ್ಕಾಗಿಯೋ ಅಲ್ಲಿ ದೈವ ಸಭೆಯು ನೆರೆದಿತ್ತು. ಅದರಲ್ಲಿ ಎಲ್ಲ ಜಾತಿ-ಮತ-ಪಂಥದ ಜನರೂ ಇದ್ದರು. ಆ ಸಭೆಯಲ್ಲಿ ಒಂದು ನಿರ್ಣಯವಾಗಬೇಕಿತ್ತು. ಆ ವಿಷಯ ಒತ್ತಟ್ಟಿಗುಳಿದು ಮಾತು ಬೆಳೆಯಿತು. ನೀನೇ ಹೆಚ್ಚು. ನಾನೇನು ಕಡಿಮೆ. ಎಂದು ವಾದ-ವಿವಾದ ನಡೆದು ಕೊನೆಗೆ ನಿರ್ಣಯವಾಗದೇ ಸಿದ್ಧನ ಬಳಿಗೆ ಬಂದು ತಮ್ಮ ವಿಷಯವನ್ನು ತಿಳಿಸಿದರು.

ಸಿದ್ಧಾರೂಢ ಹೇಳಿದನು.

'ಯಾರೂ ಹೆಚ್ಚಲ್ಲ. ಯಾರೂ ಕಡಿಮೆಯಲ್ಲ. ಮಾನವರೆಂಬ ದೃಷ್ಟಿಯಿಂದ ಎಲ್ಲರೂ ಒಂದೇ. ಇನ್ನು ಜಾತಿ-ಮತ-ಪಂಥಗಳು. ಅವು ಪರಮೇಶ್ವ

ರನ ಕಡೆಗೆ ಹೋಗುವ ಮಾರ್ಗಗಳು. ಒಂದೂರಿಗೆ ಹೋಗಲು ಬೇರೆ ಬೇರೆ ಮಾರ್ಗಗಳಿರುವಂತೆ ಒಬ್ಬನೇ ಒಬ್ಬನಾದ ಪರಮೇಶ್ವರನ ಕಡೆಗೆ ಹೋಗಲು ಜಾತಿ-ಮತ-ಪಂಥ ಪ್ರಾಚೀನರು ನಡೆದ ಮಾರ್ಗಗಳು. ಸಾವಿರಾರು ನದಿಗಳ ಬೇರೆ ಬೇರೆ ಹೆಸರು ತಾಳಿ ಹರಿದರೂ ಸಮುದ್ರಕ್ಕೇ ಅಲ್ಲವೇ ಕೂಡಿಕೊಳ್ಳುವುದು. ಅದರಂತೆಯೇ ಇಲ್ಲಿ ತಿಳಿಸಬೇಕು. ದೇವರು ದಯಾಸಾಗರ. ಅವನನ್ನು ಪಡೆಯುವುದು ಎಲ್ಲರಿಗೂ ಸಾಧ್ಯ. ಹಾಗೆ ಪಡೆಯುವ ಯತ್ನ ಮಾಡಿರಿ. ಬಡಿದಾಟಕ್ಕೇನು ಫಲ?'

ಜಗಳ ಶಾಂತವಾಗಿ ಮೊದಲಿನಂತೆ ಬಂಧು ಭಾವ ತೋರಿತು.

ಅಗ್ನಿ ಅವನು ಸ್ವತಃ ಬೆಳಗುವ ರೂಪವುಳ್ಳವನಾಗಿ ತನ್ನ ಸುತ್ತಮುತ್ತಲಿನದೆಲ್ಲವನ್ನು ಬೆಳಗುವಂತೆ ಸತ್ಪುರುಷರ ನಡತೆ. ಧನಕೊಟ್ಟರೆ ಹಾಳು ಮಾಡಿಕೊಳ್ಳಬಹುದು. ವಸ್ತ್ರ ಕೊಟ್ಟರೆ ಹರಿಯಬಹುದು. ಮುತ್ತು-ಮಾಣಿಕ ಕೊಟ್ಟರೆ ಬೆಲೆ ತಿಳಿಯದೇ ಹೋಗಬಹುದು. ಜ್ಞಾನವನ್ನು ಕೊಟ್ಟರೆ? ಅದು ನಂದಲಾರದ ದೀಪ. ಅದರ ಬೆಳಕಿನಲ್ಲಿ ಯಾತರದೂ ಭಯವಿಲ್ಲ. ಸಾಮರ್ಥ್ಯವಂತರು ಆ ಬೆಳಕನ್ನು ಹಿಡಿದುಕೊಂಡು ಪರಮೇಶ್ವರನ ವರೆಗೆ ಸಾಗಬಹುದು ಸತ್ಪುರುಷರು ಜನರಿಗೆ ಕೊಡುವುದು ಬಹುಶಃ ಇದನ್ನೇ. ಅವರು ಮಲಯಾನಿಲ. ಮಲಯ ಪರ್ವತದಲ್ಲಿ ಚಂದನ ವೃಕ್ಷಗಳು ಸಾಕಷ್ಟು. ಸ್ವಚ್ಛಂದವಾಗಿ ಬೆಳೆದ ಆ ವೃಕ್ಷಗಳಿಂದ ಪರಿಮಳ ಸೂಸುತ್ತದೆ. ಅದನ್ನು ಹೊತ್ತು ದಿಕ್ಕು-ದಿಕ್ಕುಗಳಿಗೆ ಬೀರುವ ಕಾರ್ಯ ಮಾರುತನದು.

ಸಿದ್ಧ ವಿಜಾಪುರವನ್ನು ಬಿಡಲು ಸಿದ್ಧನಾದುದನ್ನು ಕೇಳಿ ದೈನ್ಯತೆಯಿಂದ ಜನ ಬಂದು ಮಹಾತ್ಮರೇ, ಇನ್ನು ನಮ್ಮ ಗತಿ ಏನು? ನೀವು ದಿನಾಲು ಮಾಡಿದ ಉಪದೇಶ ನಮಗೆ ತಿಳಿಯಲಿ ತಿಳಿಯದಿರಲಿ. ನಿಮ್ಮ ದರ್ಶನವೇ ನಮಗೊಂದು ಸಂಜೀವಿನಿಯಾಗಿತ್ತು. ಅದರ ಬಲದಿಂದ ನಾವು ಇಷ್ಟು ದಿನ ಹಾಯಾಗಿದ್ದೆವು. ನೀವು ಹೋಗಿಬಿಟ್ಟರೆ ನಾವೇನು ಮಾಡೋಣ? ಎಂದು ಮೊರೆ ಇಡಲು ಸಿದ್ಧನು 'ನಿಜ. ಕೆಲವು ದಿನ ಹಾಗೆನಿಸುವುದು ಸಹಜ. ನಾನು ಹದವರಿತು ಜ್ಞಾನ ಬೀಜವೂರಿದ್ದೇನೆ. ಅದು ಮೊಳಕೆಯೊಡೆದು ಫಲ ಕೊಡುವುದೆಂಬ ವಿಶ್ವಾಸವಿರಲಿ. ಆದರೆ ಕಣ್ಣಿಟ್ಟು ಪ್ರತಿದಿನ ಆ ಸಸಿಯನ್ನು ಜೋಪಾನಮಾಡಿರಿ. ಇಲ್ಲಿ ನಿಮ್ಮ ಧರ್ಮ ನಿಮಗೆ ನೆರವಾಗುವುದು. ನಾನಿನ್ನು

ಇಲ್ಲಿಂದ ತೆರಳುತ್ತೇನೆ. ನೀವಷ್ಟು ಉಂಡು ನಲಿದರೆ ಸಾಕೇ? ಬೇರೆ ಕಡೆಗೂ ಜ್ಞಾನಾನ್ನವನ್ನು ಬಡಿಸಬೇಕು. ನಾನು ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟು ಶಕ್ಯವಾದ ಮಟ್ಟಿಗೆ ಅದರಂತೆ ನಡೆಯಲು ಯತ್ನ ಮಾಡಿರಿ. ಹೀಗೆ ಸಾಧನೆ ಮಾಡುತ್ತ ಹೋದರೆ ಆ ಶಾಶ್ವತ ಸುಖ ನಿಮ್ಮದೇ.' ಎಂದು ಅಂತಃಕರಣ ತುಂಬಿಬಂದು ನುಡಿಯಲು ನೆರೆದವರು ಆನಂದ ಬಾಷ್ಪಗಳನ್ನುದುರಿಸಿದರು. ಮನ ತಲ್ಲೀನವಾಗಿ ಮಾತು ನಿಂತವು.

ಅಲ್ಲಿಂದ ಹೊರಟ ಸಿದ್ಧನು ನೆಟ್ಟಗೆ ದಕ್ಷಿಣಕ್ಕೆ ಸಾಗಿದನು. ಭಿಕ್ಷೆಗಾಗಿ ಮಾತ್ರ ಯಾವುದೊಂದು ಊರಲ್ಲಿ ಪ್ರವೇಶ ಮಾಡುವುದು ಬೇಡವೆನಿಸಿದರೆ ಕಾಡಿನಲ್ಲಿ ಸಂಚಾರ. ಆ ಆನಂದಮಯ ಚಿನ್ಮಯನಿಗೆ ಎತ್ತೇನು? ಯಾವುದೇನು? ಮನಸ್ಸು ಬಂದರೆ ಜನಸಾಗರದಲ್ಲಿ ಬೆರೆತು ಕಲಕುವುದು. ಬಾರದಿದ್ದರೆ ತರು-ಲತೆಗಳನ್ನು ಕಂಡು ಹಿಗ್ಗುವುದು. ಹೀಗೆ ತಿರುಗುತ್ತಿದ್ದ ಸಿದ್ಧನು ಸಿದ್ಧಾಪೂರವೆಂಬ ಗ್ರಾಮವನ್ನು ತಲುಪಿದನು. ಅಲ್ಲಿ ವಿಲಕ್ಷಣವಾದುದೊಂದು ವಾರ್ತೆ ಕಿವಿಗೆ ಬಿದ್ದಿತು.

ಜಂಗಮನೊಬ್ಬನು ಹಠಯೋಗ ಸಾಧನೆ ಮಾಡಿಕೊಂಡು ಜನರನ್ನು ಅಂಜಿಸುವ ಕಾರ್ಯ ಮಾಡುತ್ತಿದ್ದನು. ಈಗ ಸಿದ್ಧಾಪುರದಲ್ಲಿ ಅವನು ಭೂಮಿಯಮೇಲೆ ಕೈಗಳನ್ನೂರಿ ಕಾಲು ಮೇಲೆ ಮಾಡಿ ಒಡನುಡಿಯುತ್ತಿದ್ದನು. 'ಈ ಊರ ಜನರೆಲ್ಲ ಕೂಡಿಕೊಂಡು, ಅಥವಾ ಅವರಲ್ಲಿ ಒಬ್ಬರು ಸಹಸ್ರ ಜಂಗಮಾರ್ಚನೆ ಮಾಡುತ್ತೇವೆಂದರೆ ನಾನು ಇದನ್ನು ನಿಲ್ಲಿಸುವೆನು. ಇಲ್ಲವೆಂದರೆ ಹೀಗೇ ನಿಂತು ದೇವರ ಪಾದ ಸೇರುವೆನು. ಇದು ನನ್ನ ಪ್ರತಿಜ್ಞೆ ಎಂದು ತಿಳಿಯಿರಿ.' ಆ ಊರಿನ ಜನರಿಗೆ ನಿಜವಾಗಿ ಸಹಸ್ರ ಜಂಗಮಾರ್ಚನೆ ಮಾಡುವ ಸಾಮರ್ಥ್ಯವಿರಲಿಲ್ಲ. ಅಂಥ ಶ್ರೀಮಂತ ವ್ಯಕ್ತಿಗಳೂ ಇರಲಿಲ್ಲ. ಹೀಗಾಗಿ ಈ ಯೋಗಿಯನ್ನು ಸಮಾಧಾನಗೊಳಿಸುವ ದಾರಿಗಾಣದೇ ಅವರು ತಳಮಳಿಸುತ್ತಿದ್ದರು. ಅಲ್ಲದೆ ಒಬ್ಬ ಯೋಗಿ ಒಂದು ಒಳ್ಳೆಯ ಕಾರ್ಯಕ್ಕೆ ಹಟತೊಟ್ಟು ಉಪವಾಸ ಕಷ್ಟಪಡುವಾಗ ನಾವು ಊಟ ಮಾಡುವುದು ಹೇಗೆ? ಎಂದುಕೊಂಡು ಎಷ್ಟೋ ಜನ ಉಪವಾಸ ಮಾಡಿದ್ದರು. ಇವನ್ನೆಲ್ಲ ತಿಳಿದುಕೊಂಡ ಸಿದ್ಧನು ಆ ಜನರನ್ನು ಕುರಿತು 'ನಾವು ಸಹಸ್ರ ಜಂಗಮಾರ್ಚನೆ ಮಾಡುತ್ತೇವೆ. ನೀವು ಶಾಂತರಾಗಬೇಕು.' ಎಂದು ಆ ಯೋಗಿಗೆ ವಚನ

ಕೊಡಿರಿ. ಮುಂದೆ ನಾನು ಅವನನ್ನು ಸಮಾಧಾನ ಪಡಿಸುತ್ತೇನೆ. ಎಂದು ಹೇಳಲು ಅವರು ಅತ್ಯಾನಂದಿತರಾಗಿ ಅದರಂತೆ ಆ ಯೋಗಿಗೆ ಹೇಳಲು ಅವನು ತನ್ನ ಹಟ ಬಿಟ್ಟು ಎಲ್ಲರಂತೆ ಕುಳಿತನು. ಆಗ ಸಿದ್ಧನು ಅವನ ಸಮೀಪಕ್ಕೆ ಹೋಗಿ "ಅಯ್ಯಾ ಉಣಿಸಬೇಕೆಂದ ಜಂಗಮರು ಯಾರು ?" ಎಂದು ಕೇಳಲು ಅವನಂದನು.

'ಏನು ಕೊರತೆ ಬೇಕಾದಷ್ಟು ಜನ ಸಿಗುತ್ತಾರೆ. ಒಂದೇ ಕಡೆಗೆ ಅಷ್ಟು ಜನ ದೊರೆಯುವುದು ಅಸಾಧ್ಯವೆಂದರೆ ಬೇರೆ ಬೇರೆ ಕಡೆಗಳಿಂದ ಕರೆಸಬೇಕು.'

'ಬೇರೆ ಬೇರೆ ಕಡೆಯಿಂದ ಎಂದರೆ ಎಲ್ಲಿಂದ ? ಜಗತ್ತೇ ಜಂಗಮಾತ್ಮಕ ಜಂಗಮಾತ್ಮಕವಾಗಿದೆಯಲ್ಲ. ಕೆಲವು ಸ್ಥಾವರ ಕೆಲವು ಜಂಗಮ.'

'ಹಾಗೆಂದರೇನು ? ಜಂಗಮನೆನಿಸುವವರು ಕೆಲವೇ ಜನರು ಇರುತ್ತಾರೆ.'

'ಎಂದರೆ ಅವರು ಕಾಮ-ಕ್ರೋಧಾದಿಗಳನ್ನು ಗೆದ್ದವರೇ ?'

'ಆದೆಲ್ಲ ವಿಚಾರವೇತಕ್ಕೆ ? ಒಂದು ವೇಳೆ ಅವರು ಗೆದ್ದವರಾಗಿರಲಿಕ್ಕಿಲ್ಲ.'

'ಅಂಥವರನ್ನು ಪೂಜಿಸಬಾರದು. ಅವರು ಪಶುಗಳು. ಅವರ ಕೊರಳಿಗೆ ಪಾಶಗಳಿರುತ್ತವೆ. ಅವರು ಬದ್ಧರೆನಿಸುವರು.'

'ಗೆದ್ದವರಾದರೆ ?'

'ಅವರು ನಿತ್ಯತೃಪ್ತರು. ಅವರಿಗೆ ನಿಮ್ಮ ಗಂಧ-ಮೂಲ್ಯ-ಮೃಷ್ಟಾನ್ನಗಳು ಬೇಡವೇ ಬೇಡ. ಎಂದ ಮೇಲೆ ಯಾರನ್ನು ಪೂಜಿಸಬೇಕೆಂಬುದನ್ನು ಹೇಳಬೇಕು.'

ತರ್ಕಬದ್ಧವಾದ ಸಿದ್ಧನ ಮಾತಿಗೆ ಆ ಜಂಗಮ ಹಠಯೋಗಿಯ ಮಾತುಗಳಡಗಿ ನಡುಗುತ್ತ ನಿಂತನು. ಆಗ ಸಿದ್ಧನು ಅವನನ್ನು ಏಕಾಂತಕ್ಕೆ ಕರೆದೊಯ್ದು 'ಅಯ್ಯಾ, ಇಂಥ ಹಾಳು ಮಾತುಗಳಿಗೆ ಹಟ ಹಿಡಿಯಬೇಡ. ಹೃದಯ ಗುಹೆಯಲ್ಲಡಗಿದ ಈಶ್ವರನನ್ನು ಕಾಣುವೆನೆಂದು ಹಟ ಹಿಡಿ. ಪಾಪ ನಿನ್ನ ಹಟ ಪೂರೈಸಲಾರದ ಬಡವರು ಈ ಜನ. ಆದರೆ ಭಾವಿಕರು. ನಿನ್ನ ಕೃತಿಯಿಂದ ಅಂಜಿ ಇದುವರೆಗೆ ಉಪವಾಸ ಕುಳಿತಿದ್ದಾರೆ. ಮಕ್ಕಳು-ಮರಿ

ಮುದುಕರನ್ನು ಗೋಳಿಗೆ ಹಾಕಿದ ಪಾಪ ನಿನಗಲ್ಲದೇ ಯಾರಿಗೆ ? ಹೇಳು. ಜನಗಳು ಅಂಜಿಕೊಂಡಿರುವವರೆಗೆ ನಿನ್ನದೆಲ್ಲ ಚಂದ. ಅವರೊಮ್ಮೆ ತಲೆ ತೆಗೆದು ನಿಂತರೆ ನಿನ್ನ ಮಾನ ಉಳಿದೀತೇ? ವಿಚಾರ ಮಾಡು; ಎಂದು ಹೇಳಲು ಅವನು ಗದಗದ ನಡುಗಿ ಪಾದಗಳಿಗೆರಗಿ ಹಾಲು-ಸಕ್ಕರೆಯನ್ನು ಕುಡಿದು ಪಾರಣಿ ಮಾಡಿದನು. ಜನರೆಲ್ಲ ಸಿದ್ಧನನ್ನು ಕೊಂಡಾಡುತಿರಲು ಅವನು 'ತನ್ನ ಸಾಮರ್ಥ್ಯವಿರುವಷ್ಟು ಜನಗಳನ್ನು ಸಂತೋಷಪಡಿಸುವುದೇ ಜಂಗಮಾರ್ಚನೆ ಎಂದು ತಿಳಿಯಿರಿ.' ಎಂದು ಹೇಳಿ ಯಾದವಾಡಕ್ಕೆ ಬಂದನು.

ಅಲ್ಲಿ ಒಂದು ಮನೆಗೆ ಹೋಗಿ 'ಭಿಕ್ಷೆ' ಎಂದು ಕೂಗಲು ಮನೆಯಾಕೆ ಒಂದು ಭಕ್ಕರಿಗೆ ತುಸು ಪಲ್ಲೆ ಹಾಕಿ ಕೊಡಲು ಬಂದಳು. ಆಗ ಸಿದ್ಧನು 'ಒಣ ರೊಟ್ಟಿ ಬೇಡ, ಎನ್ನಲು ಆ ಹೆಣ್ಣು ಮಗಳು 'ಒಣದಲ್ಲ ನೋಡು' ಎನ್ನಲು ಪಲ್ಲೆಯನ್ನು ಭಕ್ಕರಿ ತುಂಬ ಸವರಿ ಕೊಡಲು ಸಿದ್ಧನು 'ಹೀಗೆ ಎಲ್ಲ ಕಡೆಗೆ ಪಲ್ಲೆ ಹಚ್ಚಿಬಿಟ್ಟರೆ ಎಲ್ಲಿ ಮುರಿದು ತಿನ್ನಬೇಕು ?' ಎಂದು ಕೇಳಲು ಅವಳು ನಗುತ್ತ 'ಹುಚ್ಚ-ಹುಚ್ಚ, ಎನ್ನುತ್ತ ಮನೆಯೊಳಗೆ ನಡೆದಳು. ಭಕ್ಕರಿ ತಿನ್ನದೇ ಕೈಯಲ್ಲಿ ಹಿಡಿದುಕೊಂಡು ಸಿದ್ಧ ಮತ್ತೊಂದು ಮನೆಗೆ ಬಂದನು. ಅಲ್ಲಿ ದೋಸೆ ಮಾಡಿದ್ದರು. ಅವರು ದೋಸೆ ಕೊಡಲು ಸಿದ್ಧನು 'ಇದೇನು ತಪ್ಪು ಮಾಡಿರುವುದೆಂದು ಮೈತುಂಬ ತೂತಾಗುವಂತೆ ಚುಚ್ಚಿದ್ದೀರಿ? ಎಂದು ಹೇಳಿ ಎಲ್ಲರನ್ನು ನಗಿಸಿದನು. ಜ್ಞಾನಿಗಳಿಗೊಂದು ಚರ್ಯೆ ಏನೋ? ಬಹು ತರವಾಗಿ ಪ್ರಾಪಂಚಿಕರು ತಮ್ಮನ್ನು ಗುರುತಿಸಬಾರದೆಂದು ಅವರ ಅಪೇಕ್ಷೆಯೋ ? ಅಥವಾ ಅದೊಂದು ಚೈತನ್ಯ ಸಮುದ್ರದಲಹರಿಯೋ ? ಅವರೇ ಬಲ್ಲರು. ಸಿದ್ಧನು ದೋಸೆ ತಿನ್ನುತ್ತ ಸಾಗಿರಲು ಮಾರ್ಗದಲ್ಲಿ ಅಲ್ಲಮಯ್ಯ ಪುರಾಣಿಕರ ಮನೆ. ಅಲ್ಲಿ ಚನ್ನಬಸವ ಪುರಾಣ ನಡೆದಿತ್ತು. ಹಾಗೇ ಒಳಗೆ ಸೇರಿದನು. ಆಗ ಈಶ್ವರನ ಇಪ್ಪತ್ತೈದು ಲೀಲೆಗಳೊಳಗಿನ ಅಂಧಕಾಸುರ ಸಂಹಾರ ಲೀಲೆಯನ್ನು ಹೇಳುತಿರಲು ಪುರಾಣಿಕರು ಸಿದ್ಧನನ್ನು ಕಂಡು 'ಓ ಈ ಭವಿಯನ್ನು ಹೊರಗೆ ದಬ್ಬಿರಿ, ಎಂದು ಕೂಗಿದರು. ಬಲುಮೆಯಿಂದ ಸಿದ್ಧನು ಕುಳಿತುಬಿಟ್ಟನು. ಮತ್ತೆ ಶಾಂತವಾಗಿ ಪುರಾಣ ಮುಂದುವರಿಯಿತು.

ಪುರಾಣಿಕರು ಹೇಳಿದರು.

'ಆನೆಯಂಥ ಮಾವಿನ ಮರವೊಂದಿತ್ತು. ಅದರ ಬುಡದಲ್ಲಿ ಶಂಕರನು ತಪಸ್ಸು ಮಾಡುತ್ತಿದ್ದನು. ಮರದ ಮೇಲೆರಡು ಪಕ್ಷಿಗಳು ಕುಳಿತು ಮಾತಾಡುತಿರಲು ಕೋಲ್ಮಿಂಚು ಹೊಡೆದು ಖಟ್-ಖಡಲ್ಲೆಂದು ಶಬ್ದ ಕೇಳಿಸಿತು.'

ಥಟ್ಟನೆ ಸಿದ್ಧ ವಿಚಾರಿಸಿದನು.

'ಯಾವುದಕ್ಕೆ ? ಮರಕ್ಕೋ ? ಆನೆಗೋ ?

ಪುರಾಣಿಕರಿಗೆ ಹೇಳಲಾಗಲಿಲ್ಲ. ಮಾತಿಲ್ಲದೇ ಕುಳಿತರು

ಮತ್ತೆ ಸಿದ್ಧ ನುಡಿದನು.

'ಮರಕ್ಕೆ ಎಂದರೆ ಅದು ಸ್ಥಾವರ ಎಂದರೆ ಒಂದು ರೀತಿ ಜಡ. ಅದಕ್ಕೇನೂ ಸಂಬಂಧ ಬಾರದೆ ಮಾತು ವಿರುದ್ಧವೆನಿಸುವುದು. ಇನ್ನು ಆನೆಗೆ ಎನ್ನುವುದಾದರೆ ಅದು ಉಪಮಾನವನಾಗಿ ಬಂದ ಪ್ರಾಣಿ. ಅದಕ್ಕೆ ಇದರ ಸಂಬಂಧವಿಲ್ಲ.'

ಎಂದು ಸಿದ್ಧ ಹೇಳುತ್ತಿರಲು ಪುರಾಣಿಕರು ತಲೆದೂಗುತ್ತ 'ಆಹಾ, ಇವನು ಭವಿಯಲ್ಲ. ಅನುಭಾವಿ ಆಶ್ಚರ್ಯಕರವಾಗಿದೆ.' ಎಂದುಕೊಂಡು 'ಮಹಾತ್ಮರೇ, ಆ ಕೋಲ್ಮಿಂಚಿನ ಸಂಬಂಧವನ್ನು ಹೇಗೆ ಮಾಡಬೇಕೆಂಬುದನ್ನು ನೀವೇ ಹೇಳಬೇಕು.' ಎಂದ ಪ್ರಾರ್ಥಿಸಲು ಸಿದ್ಧ ನುಡಿದನು.

'ಇರುವೆಯಿಂದ ಆರಂಭ ಮಾಡಿ ಆನೆಯವರೆಗಿರುವ ಪ್ರಾಣಿಗಳ ಬುದ್ಧಿ ವೃತ್ತಿಯಲ್ಲಿ ಆತ್ಮ ಪ್ರತಿಬಿಂಬ ಮಾಡಿ ಚಿದಾಭಾಸ (ಜೀವ) ನೆನಿಸುತ್ತದೆ. ಅದಕ್ಕೆ ಈ ಕೋಲ್ಮಿಂಚು ಸಂಬಂಧ ಹಚ್ಚುವುದು ಯೋಗ್ಯ. ಯಾಕಂದರೆ ಮೋಡಗಳಿಂದ ಕೋಲ್ಮಿಂಚು ಹೊಡೆದು ಒಂದು ಕ್ಷಣದಲ್ಲಿ ಎಲ್ಲ ವಸ್ತುಗಳನ್ನು ಬೆಳಗಿ ಮೇಘದಲ್ಲಿ ಮರೆಯಾಗಿ ಹೋಗುವುದು. ಅದರಂತೆಯೇ ಕೂಟಸ್ಥನ ಆಶ್ರಯದಲ್ಲಿ ಕಲ್ಪಿತವಾದ ಬುದ್ಧಿವೃತ್ತಿಯಲ್ಲಿ ಪ್ರತಿಬಿಂಬಿಸಿ ಸಚಿದಾಭಾಸನು ಎಲ್ಲವನ್ನು ಬೆಳಗಿ ಸ್ವರೂಪದಲ್ಲಿ ಲೀನವಾಗುವನು. ಎಂದಮೇಲೆ ಕೋಲ್ಮಿಂಚಿನ ಉಪಮೇಯ ಚಿದಾಭಾಸನೆನಬೇಕು.' ಎಂದು ನುಡಿದು ಸಿದ್ಧನು ಪುರಾಣ ಗ್ರಂಥದ ಮೇಲೆ ಕೈಯಲ್ಲಿ ಹಿಡಿದ ಭಕ್ಕರಿಯನ್ನಿಟ್ಟು ಕುಳಿತನು. ಅದನ್ನು ಪುರಾಣಿಕನು ಮಹಾ ಪ್ರಸಾದವೆಂದು ಸ್ವೀಕರಿಸಿ ವಂದನ ಮಾಡಿ, 'ಪಾಪಿಯನ್ನು ಉದ್ಧರಿಸಬೇಕು.' ಎಂದು ಕೈಮುಗಿದು 'ಮಹಾತ್ಮರೇ, ನೀವು ಬ್ರಹ್ಮನಿಷ್ಠರಾದ ಸದ್ಗುರುಗಳೆಂದು ವಿಶ್ವಾಸವಾಯಿತು. ನಾನು ಕಾಶಿಗೆ

ಹೋಗಬೇಕೆನ್ನುತ್ತೇನೆ. ಅಪ್ಪಣೆ ಕೊಡಬೇಕು.' ಎಂದರು. ಆ ಮಾತಿಗೆ ಸಿದ್ಧನು 'ಅಯ್ಯಾ, ಕಾಶಿಗೆ ಹೋದವರು ಮರಳಿ ಬರುವದಿಲ್ಲವಂತೆ. ಅಂದ ಮೇಲೆ ನೀನು ಯಾಕೆ ಹೋಗುವೆ ?' ಎನ್ನಲು ಪುರಾಣಿಕರು ಹೋಗಬೇಕೆಂದು ನಿಶ್ಚಯವಾಗಿದೆ. ಮರಳಿ ಬರುವದೇನು ? ನಿಮ್ಮ ಕೃಪೆ ಇದ್ದರೆ ಬಂದರೂ ಬರಬಹುದು ' ಎಂದು ನಿರ್ಧಾರದ ಮಾತುಗಳನ್ನಾಡಲು ಸಿದ್ಧನು ಒಳ್ಳೇದು ಹೋಗು. ಆ ಪುಣ್ಯ ಭೂಮಿಯಲ್ಲಿಯೇ ನಿನಗೆ ಮೋಕ್ಷವಾಗಬೇಕೆಂದು ಬರೆದಿದೆ.' ಎನ್ನಲು ಹೀಗೆ ಆಶೀರ್ವಾದ ಸ್ವೀಕರಿಸಿ ಕಾಶಿಗೆ ತೆರಳಿದ ಪುರಾಣಿಕರು ಯೋಗಾಯೋಗವೆಂಬಂತೆ ಅಲ್ಲಿಯೇ ದೇಹತ್ಯಾಗ ಮಾಡಿದರು.

ಮಲಗುವದಕ್ಕೆಂದು ಸ್ಥಳ ಹುಡುಕಲು ಸಿದ್ಧನು ಕೋಟೆಯ ಕಡೆಗೆ ಸಾಗಿರಲು ಆಗಲೇ ಮಲಗುವ ಹೊತ್ತಾಗಿತು. ಅಕಸ್ಮಾತ್ತಾಗಿ ಕೆಲವು ಸಿಪಾಯರು ಹಾಗೂ ಜಮಾದಾರರು ಸಿದ್ಧನ ಹುಚ್ಚು ವೇಷ ಕಂಡು ಸಂದೇಹತಾಳಿ ವಿಚಾರಿಸತೊಡಗಿದರು. ಸಿದ್ಧನು ಮಾತಾಡದಾದನು. ಆಗ ಜಮಾದಾರರು ಸಿಪಾಯರಿಂದ ಸಿದ್ಧನನ್ನು ಮೈಮುರಿ ಹೊಡೆಸಿ ಊರುಬಿಟ್ಟು ಹೊರಗೆ ಹಾಕಿಸಿದರು. ಕಾರಣವಿಲ್ಲದೇ ಕ್ಲೇಶ ಹೊಂದಿದ ಸಿದ್ಧ ಒಂದು ದೇವಾಲಯವನ್ನು ಸೇರಿ ಸ್ವಸ್ಥವಾಗಿ ಮಲಗಿಬಿಟ್ಟನು. ಹೇಗೋ ಈ ಸುದ್ದಿಯು ಪುರಾಣಿಕರಿಗೆ ತಿಳಿಯಲು ಭಯ ಭಕ್ತಿಯಿಂದ ಆ ಗೃಹಸ್ಥರು ಹುಡುಕುತ್ತ ಬಂದು 'ಮಹಾತ್ಮರೇ, ನೀವು ಊರಿಗೆ ಬಂದು ನಾಲ್ಕಾರು ದಿನ ವಿಶ್ರಾಂತಿ ಪಡೆಯಬೇಕು. ಎಂದು ಬಹಳ ಪರಿ ಬೇಡಿಕೊಂಡರೂ ಸಿದ್ಧ ಊರಿಗೆ ಮರಳಲು ಒಪ್ಪದೇ ದೇವಾಲಯದಲ್ಲಿಯೇ ನಿಂತನು. ಇದರಿಂದ ಪುರಾಣಿಕರು ಮರುಗಿ ಊಟ-ಉಪಚಾರಗಳನ್ನು ಮಾತ್ರ ಚನ್ನಾಗಿ ಮಾಡತೊಡಗಿ ಒಂದು ದಿನ 'ಸದ್ಗುರುನಾಥನೇ, ಇದೆಂಥ ಕಠೋರ ಕರ್ಮ. ತಪ್ಪು ಮಾಡದಿದ್ದರೂ ಶಿಕ್ಷೆ ಅನುಭವಿಸಬೇಕೇ? ಪೆಟ್ಟು ತಿಂದು ನಿಮ್ಮ ದೇಹ ಎಷ್ಟು ಕಷ್ಟಪಡಬೇಕು? ಇದೇನು ಅನ್ಯಾಯ ? ನನಗೆ ನೋಡದಂತಾಗುತ್ತದೆ.' ಎಂದು ನುಡಿಯಲು ಸಿದ್ಧನು 'ನಿಜ ನಮಗರಿಯದೇ ಆದ ತಪ್ಪಿನ ಫಲ ನಾವು ಈ ರೀತಿ ಅನುಭವಿಸಲೇಬೇಕಾಗುತ್ತದೆ. ಆದರೂ ಈಗಾದ ಶಿಕ್ಷೆ ಬೇಕು. ಒಂದೂರಲ್ಲಿ ಭಿಕ್ಷೆ ಬೇಡಲು ನಾನು ಒಂದು ಮನೆಬಾಗಿಲದಲ್ಲಿ ಹೋಗಿ ನಿಂತುಕೊಂಡೆನು. ಆ ಮನೆ ಶ್ರೀಮಂತರದಾಗಿರಬೇಕು. ಒಳ್ಳೇ ಭವ್ಯವಾಗಿತ್ತು. ಬಾಗಿಲ ಕಾಯುವವರೂ

ಇದ್ದರು. ಹೀಗಿರಲು ನಾನು ಹೋಗಿ ನಿಲ್ಲುವುದೇ ತಡ ಆ ಕಾವಲುಗಾರ 'ಥೂ ನಿಮ್ಮಂಥವರೇ ಕೂಡಿ ನಿನ್ನೆ ಸಾವುಕಾರನ ಮನೆಗೆ ದರೋಡೆ ಹಾಕಿ ಉಡುಗಿ ಹೋದಿರಿ. ಇವತ್ತು ಮತ್ತೇನು ನೋಡಲಿಕ್ಕೆ ಬಂದಿರುವೆ? ನಡೆ ಜುತ್ತ' ಎಂದು ನುಡಿದು ದೂಡಿಕೊಂಡು ನಾನೊಂದು ಕಲ್ಲಿಗೆ ಹೋಗಿ ಬಿದ್ದೆನು. ಬಹಳ ಕಡೆಗೆ ಕಲ್ಲಿನ ಪೆಟ್ಟು ಹಾಕಿ ಘಾಯಗಳಾಗಿ ರಕ್ತ ಸುರಿಯಿತು. ಇದೋ ಬೇಕಾದರೆ ಘಾಯದ ಕಲೆ ಬಿದ್ದಿರುವವು ನೋಡು.' ಎಂದು ಹೇಳಿ ಗಂಭೀರನಾಗಿ ಸಿದ್ಧ ಹೇಳಿದನು.

'ನೊಣವು ಯಾವಾಗಲೂ ಹೊಲಸನ್ನೇ ಹುಡುಕುವಂತೆ ಜನರು ಯಾವಾಗಲೂ ದೋಷಗಳನ್ನೇ ಹುಡುಕುತ್ತಾರೆ. ಅವು ಒಂದು ವೇಳೆ ನಿಜವಾದವು ಇರಬಹುದು. ಒಂದು ವೇಳೆ ಕಾಲ್ಪನಿಕವಾಗಿರಬಹುದು. ಅಂಥವರ ಸಂಪರ್ಕ ಮಾಡಿದರೆ ನಮಗೆ ಯಾಕೆ ಕಷ್ಟವಾಗಬಾರದು ? ನಿಸ್ಸಂಗದಲ್ಲಿ ಅಪಾರ ಸುಖವಿದೆ. ಮರುಳೇ ಎನ್ನುತ್ತ ಸಿದ್ಧ ಭಾವಾವಿಷ್ಟನಾಗಿ ಸುಮ್ಮನೆ ಕುಳಿತನು.

ಅದೊಂದು ರಾತ್ರಿ ಈ ಮಹಾತ್ಮನ ಸಾನ್ನಿಧ್ಯವಿರಲೆಂದು ಪುರಾಣಿಕರು ಅಲ್ಲಿಯೇ ಉಳಿದರು. ಬೆಳಗಾದ ಕೂಡಲೇ ಹೊರಟು ನಿಂತ ಸಿದ್ಧನಿಗೆ ವಂದಿಸಿ ತಮ್ಮ ಸ್ಥಳಕ್ಕೆ ಮರಳಿದರು.

೧೨

ಕ್ವಚಿದ್ ಭೂಮೌ ಶಾಯೀ ಕ್ವಚಿದಪಿ ಚ ಪರ್ಯಂಕಶಯನಃ ।
ಕ್ವಚಿತ್ ಶಾಕಾಹಾರೀ ಕ್ವಚಿದಪಿ ಚ ಶಾಲ್ಯೋದನರುಚಿಃ ॥
ಕ್ವಚಿತ್ ಕಂಥಾಧಾರೀ ಕ್ವಚಿದಪಿ ಚ ದಿವ್ಯಾಂಬರಧರೋ ।
ಮನಸ್ವೀ ಕಾರ್ಯಾರ್ಥೀ ನ ಗಣಯತಿ ದುಃಖಂ ನ ಚ ಸುಖಮ್ ॥ –ಸುಭಾಷಿತ

ಸನ್ಯಾಸಿಯೊಬ್ಬನು ಮತ್ತು ಕಾರ್ಯ ಸಾಧಿಸಿಕೊಳ್ಳಬೇಕೆನುವವನೊಬ್ಬನು ಇವರಿಬ್ಬರೂ ಸುಖ ದುಃಖಗಳನ್ನು ಲಕ್ಷಿಸುವುದಿಲ್ಲ. ಇವರು ಒಮ್ಮೆ

ಭೂಮಿಯಲ್ಲಿ ಮಲಗುವುದಾದರೂ ಸರಿ. ಮತ್ತೊಮ್ಮೆ ಮಲಗುವುದಾದರೂ ಸರಿ. ಒಮ್ಮೆ ಕಾಯಿಪಲ್ಲೆಗಳನ್ನು ತಿನ್ನಬಹುದು. ಇನ್ನೊಮ್ಮೆ ಅಕ್ಕಿಯು ನ್ನುಣ್ಣಬಹುದು. ಒಂದು ಸಲ ಹರಕು ಬಟ್ಟೆ ಹೊರುವುದಕ್ಕೂ ಹಿಂದಾಗುವು ದಿಲ್ಲ. ಮತ್ತೊಂದು ಸಲ ಪಟ್ಟೆ-ಪೀತಾಂಬರವುಡಲೂ ಬೇಡವೆನ್ನುವುದಿಲ್ಲ.

ಬೆಳಗಾವಿ ಜಿಲ್ಲೆಯ ಗೋಕಾವಿಯ ಬಳಿಯಲ್ಲಿರುವ ಘಟಪ್ರಭಾ ತಟಾಕಕ್ಕೆ ಸಿದ್ಧನು ಬಂದು ಸೂಸಿ ಹರಿಯುವ ನದಿಯ ಸೊಬಗನ್ನು ನೋಡುತ್ತ ಸ್ವಸ್ಥವಾಗಿ ನಿಂತಿರಲು ಅಂಬಿಗನು ಇದಾವುದೋ ಒಂದು ಹುಚ್ಚ ವ್ಯಕ್ತಿ ಕಾಣುತ್ತದೆ. ನಾವನ್ನಾದರೂ ಎಳೆಸಿಕೊಳ್ಳೋಣ. ಎಂದು ವಿಚಾರಿಸಿ 'ಈ ಹಗ್ಗವನ್ನು ಹಿಡಿದು ಆ ನಾವನ್ನಾದರೂ ಎಳೆದುಕೊಡು ನೋಡೋಣ. ಎಂದನು. ನಿಜವಾಗಿ ಅದನ್ನೆಳೆಯುವುದು ಒಬ್ಬರಿಗೆ ಕಷ್ಟಕರವಾದ ಕೆಲಸವಾಗಿತ್ತು. ಆದರೆ ನಿರಾಯಾಸವಾಗಿ ಸಿದ್ದನು ಎಳೆದನು. ಅದನ್ನು ಕಂಡು ಅಂಬಿಗನು 'ಓಹೋ, ಈ ವ್ಯಕ್ತಿ ಸಾಮಾನ್ಯನಲ್ಲ. ಯಾರೋ ಸಿದ್ಧಪುರುಷನಾಗಿರಬೇಕು.' ಎಂದುಕೊಂಡು ಪ್ರೇಮದಿಂದ ನಾವಿಯಲ್ಲಿ ಕುಳ್ಳಿರಿಸಿ ಈಚೆಯ ದಡಕ್ಕೆ ಮುಟ್ಟಿಸಿದನು.

ಅನಂತರ ಅಲ್ಲಲ್ಲಿ ವಸತಿ ಮಾಡುತ್ತ ಸಿದ್ಧನು ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪಿದನು. ಅಲ್ಲಿ ಬಂದಮೇಲೆ ಇದೇ ಪಟ್ಟಣ ನನ್ನ ಲೀಲಾ ಭೂಮಿಯಾಗುವುದೆಂದೋ, ಇಲ್ಲಿಯ ಸಜ್ಜನರನ್ನು ಉದ್ಧಾರ ಮಾಡಬೇಕಾಗಿರುವುದೆಂದೋ ಏನು ಕಾರಣವೋ ಅಲ್ಲಿ ನೆಲೆಸುವ ಮನಸ್ಸಾಯಿತು. ನೆಟ್ಟಗೆ ತೊರವಿಯವರ ಭಾವಿಗೆ ಬಂದನು. ನೋಡುವವರಿಲ್ಲದುದರಿಂದ ಆ ಸ್ಥಳದಲ್ಲಿ ಕಸ-ಕಡ್ಡಿಗಳು ಬೆಳೆದು ಬಹಳ ಹೊಲಸು ತುಂಬಿಹೋಗಿತ್ತು. ಆ ಸ್ಥಳವು ಸಿದ್ಧನಿಗೆ ಒಳ್ಳೇ ಅನುಕೂಲವೆನಿಸಿತು. ಕಾರಣವೇನಂದರೆ ಅಲ್ಲಿಗೆ ಬರುವುದೇ ತಡ. ಗುಂಗಾಡಿಗಳು ಅಲ್ಲದೇ ಅನೇಕ ಬಗೆಯ ಕ್ರಿಮಿ-ಕೀಟಗಳು ಮೈಗೆ ಮುತ್ತಿಕೊಂಡವು. ಆದುದರಿಂದ ಇಂಥ ಸ್ಥಳವು ಚಿತ್ತವನ್ನು ಎಚ್ಚರವಾಗಿಟ್ಟುಕೊಳ್ಳಲು ಬಹಳ ಯೋಗ್ಯವೆಂದು ಅವನ ಭಾವನೆಯಾಯಿತು. ಅಲ್ಲಿ ಕೆಲವು ಹುಡುಗರು ದನ ಕಾಯುತ್ತಿದ್ದರು. ಅವರು ವಿಚಿತ್ರ ಪುರುಷನಾದ ಸಿದ್ಧನ ಸುದ್ದಿಯನ್ನು ಧನಿಕನಾದ ವೈಶ್ಯನೊಬ್ಬನಿಗೆ ತಿಳಿಸಲು ಅವನು ಬಂದು ಸಿದ್ಧನನ್ನು ಕಂಡನು. ದೈವೀ ತೇಜದಿಂದೊಪ್ಪುವ ಈ ದಿವ್ಯ ಮೂರ್ತಿಯನ್ನು

ಕಂಡು ವೈಶ್ಯನಿಗೆ ಭಕ್ತಿಯಿಕ್ಕಿತು. ಪ್ರೇಮವು ವೈದೋರಿತು. ಇಂಥ ಹೊಲಸು ಸ್ಥಳದಲ್ಲಿ ಕುಳಿತ ಸದ್ಗುರುನಾಥನ ಸ್ಥಿತಿಯನ್ನು ನೆನೆದು ಕನಿಕರವೆನಿಸಿತು. 'ಗುರುನಾಥನೇ. ನಿನಗೀ ಸ್ಥಾನವು ಸಲ್ಲದು !' ಎಂದು ನುಡಿದು ಕೈಹಿಡಿದು ಕರೆಯುತ್ತ ಮನೆಗೆ ಕರೆತಂದನು.. ಎಣ್ಣೆ ಹಚ್ಚಿ ಸ್ನಾನವಾಯಿತು. ಮಡಿಬಟ್ಟೆಗಳನ್ನುಡಲು ಕೊಟ್ಟನು. ಸುಗ್ರಾಸ ಭೋಜನ ಮಾಡಿ ಮೃದುಶಯ್ಯೆಯಲ್ಲಿ ಮಲಗಿದನು. ಇನ್ನೇನು ಸದ್ಗುರು ಮಲಗುತ್ತಾನೆ. ಎನ್ನುತ್ತ ವೈಶ್ಯನು ತನ್ನ ಕೆಲಸಕ್ಕೆ ತೆರಳಲು ಅವನು ಕಣ್ಮರೆಯಾಗುವುದೇ ತಡ. ' ಈ ಸ್ಥಳವೂ ನನಗೆ ಸಲ್ಲದು.' ಎಂದುಕೊಂಡು ಸಿದ್ಧನು ಆ ವಸ್ತ್ರಗಳನ್ನು ಕಳೆದಿಟ್ಟು ಯಾರಿಗೂ ಹೇಳದೇ ಮರಳಿ ಆ ಭಾವಿಯ ದಂಡೆಗೆ ಬಂದು ಕುಳಿತನು. ಇತ್ತ ವೈಶ್ಯನು ಘಾಬರಿಯಾಗಿ 'ಸದ್ಗುರುನಾಥನೆಲ್ಲಿ? ಎಂದು ಎಲ್ಲಕಡೆಗೂ ಹುಡುಕಿ ದಣಿದು 'ಓ. ತಪ್ಪಿದವ ನಾನು ಅವರು ಸಂಸಾರವನ್ನು ನೀಗಿದವರು. ನಾವು ಸಾಂಸಾರಿಕರು. ನಮ್ಮ ತಿಳುವಳಿಕೆಯಂತೆ ಆ ವೈರಾಗ್ಯಶೀಲರಿಗೆ ಉಪಚಾರ ಮಾಡಿದುದು ತಪ್ಪಾಯಿತು. ಇವೆಲ್ಲ ಅವರಿಗೆ ಸೇರಲಾರವು. ಅದಕ್ಕಾಗಿಯೇ ಅವರು ಮನೆ ಬಿಟ್ಟು ಹೋಗಿರಬೇಕು' ಎಂದು ತಿಳಿದು ಸುಮ್ಮನಾದರು.

ಆ ಪಟ್ಟಣದಲ್ಲಿ ಗುರುಲಿಂಗ ಶಾಸ್ತ್ರಿಗಳೆಂಬ ಪಂಡಿತರು. ಅವರ ಭಕ್ತ ಪರಿವಾರವೂ ದೊಡ್ಡದು. ಅವರು ಸಿದ್ಧನ ಸುದ್ದಿಯನ್ನು ಕೇಳಿ ತಮ್ಮ ಪರಿವಾರದೊಡನೆ ಬಂದು ವೇದಾಂತಶಾಸ್ತ್ರದ ಅನೇಕ ಪ್ರಶ್ನೆಗಳನ್ನು ಕೇಳಿ ಸಂದೇಹಗಳನ್ನು ಪರಿಹರಿಸಿಕೊಂಡರು. ವೇದಾಂತ ಸಾಧಕರು ಶಾಸ್ತ್ರಗಳನ್ನು ದರ್ಪಣ (ಕನ್ನಡ)ದಂತೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಮರೆತು ಶಬ್ದರೂಪೀ ಮಹಾರಣ್ಯದಲ್ಲಿ ಪ್ರವೇಶಿಸಿ ಗೊಂದಲಗೆಡುತ್ತಾರೆ.

ಸಿದ್ಧನು ಸಚ್ಚಿದಾನಂದರೂಪೀ ಮಕರಂದವನ್ನು ತುಂಬಿಕೊಂಡ ಹೊಂಗೊಡ. ಮೆಲ್ಲನೆ ಬಂದ ಭಕ್ತರಿಗೆಲ್ಲ ಅದನ್ನು ಹಂಚುವ ಕಾರ್ಯ ಪ್ರಾರಂಭಿಸಿದನು. ಒಮ್ಮೆ ಬಸವಣ್ಣನೆಂಬ ಭಕ್ತನು ಬಂದು ಪ್ರಾರ್ಥಿಸಿಕೊಂಡನು. 'ಸದ್ಗುರುವೆ, ನಿಮ್ಮ ಮುಖದಿಂದ ಭಕ್ತಜನರೆಲ್ಲ 'ಯೋಗವಾಸಿಷ್ಠ' ಪುರಾಣವನ್ನು ಕೇಳಬೇಕೆನ್ನುತ್ತಾರೆ. ದಯಮಾಡಿ ನೀವು ಶ್ರವಣ ಮಾಡಿಸಬೇಕು.' ಎನ್ನಲು ಸಿದ್ಧನು ತನ್ನ ಮನದಲ್ಲಿ ಸರಿಯೇ ಸಚ್ಚಿದಾನಂದಾಮೃತ ವಿವರಣೆಗೆ ಇದು ಯೋಗ್ಯ ಸಂಧಿ. ನನ್ನ ಸಾಧನದಾಶೆಯಂತೂ ಎಂದೋ

ಮುಗಿದು ಹೋಗಿದೆ. ಇನ್ನು ಪ್ರಾರಬ್ಧವಿರುವಂತೆ ನಡೆಯುವುದು ಕರ್ತವ್ಯ. ಎಂದು ಭಾವಿಸಿ ಪುರಾಣವನ್ನು ಹೇಳಲು ಪ್ರತಿದಿನ ಅವನ ಮನೆಗೆ ಹೋಗ ಲಾರಂಭಿಸಿದನು.

ದಿನಾಲು ಎರಡು ಮೂರು ತಾಸು ಪುರಾಣವು ಸಾಗಬೇಕು. ಭಕ್ತರು ಕೇಳಿ ನಲಿಯುತ್ತಿದ್ದರು. ಒಂದು ದಿನ ಗುರುಲಿಂಗಶಾಸ್ತ್ರಿ ಬಂದು ಪ್ರಶ್ನಿಸಿದರು. 'ಆತ್ಮನು ದೇಹದಲ್ಲಿರುವನೆಂದು ಹೇಳುವಿರಿ. ಆದರೆ ಅವನು ನಮಗೇಕೆ ಕಾಣುವುದಿಲ್ಲ ?'

ಸಿದ್ಧ ಹೇಳಿದನು. ಆತ್ಮನು ಕಣ್ಣಿನ ಕಣ್ಣು. ಕಿವಿಗೆಕಿವಿ. ಹೀಗೆ ಎಲ್ಲವೂ ಅವನೇ ಆದುದರಿಂದ ಅವನನ್ನು ನೋಡಬಲ್ಲ ವಸ್ತು ಯಾವುದು ? ನಮ್ಮಲ್ಲಿ ರುವ ಒಂದೊಂದು ಇಂದ್ರಿಯದ ಅನುಭವಕ್ಕೆ ಬರುವುದಿಲ್ಲ. ಹಾಗೆ ಜ್ಞಾನಕ್ಕೆ ಮಾತ್ರ ಗೋಚರನಾದ ಆತ್ಮನು ಅಜ್ಞಾನಕ್ಕೆ ಅನುಭವ ವಿಷಯವಾಗುವುದು ಶಕ್ಯವಿಲ್ಲ. ಮನುಷ್ಯನ ವ್ಯಾಪಾರವೆಲ್ಲ ಬಹುಶಃ ಮನೋವೃತ್ತಿಗಳಲ್ಲಿಯೇ ಮುಗಿದು ಹೋಗುವುದರಿಂದ ಆದರಾಚೆ ಏನಾದರೂ ಇರುವುದೋ, ಇಲ್ಲವೋ ಎಂಬ ಗೊಡವೆಯೇ ಎಲ್ಲರಿಗೂ ಬೇಡ. ಇದಕ್ಕೇನು ಮನುಷ್ಯನಿಗೆ ಗಂಟು ಬಿದ್ದ ಮಾಯೆ ಎಂದು ಹೇಳುವರು. ಮಾಯೆಯಲ್ಲಿ ಎರಡು ಶಕ್ತಿಗಳುಂಟು. ಆವರಣ ಮತ್ತು ವಿಕ್ಷೇಪಗಳೆಂದು, ಆವರಣವೆಂದರೆ ಮುಸುಕು. ಮುಸುಕಿನಿಂದ ಆತ್ಮ ಕಾಣಿಸುವುದಿಲ್ಲ. ವಿಕ್ಷೇಪವೆಂದರೆ ತಪ್ಪು ತಿಳುವಳಿಕೆಯಾಗಿ ಕಾರ್ಯ ಪ್ರವೃತ್ತಿಯಾಗುವುದು. ಈಶ್ವರಾನುಗ್ರಹದಿಂದ ಇವೆರಡು ಕಳಚಿದಾಗ ಆತ್ಮ ದರ್ಶನವಾಗುವುದು.

ಗುರುಲಿಂಗಶಾಸ್ತ್ರಿಗಳು ಸರಳವಾದ ಆ ಉಪದೇಶವನ್ನು ಕೇಳಿ ತಲೆದೂಗುತ್ತ ವಂದಿಸಿ ಹೊರಟು ಹೋದರು. ಇಷ್ಟಾದ ಮೇಲೆ ಸಿದ್ಧನು ಚಿಂತಿಸಿದನು. ಇಲ್ಲಿ ಕೂಡ ಜನಸಂದಣಿಯಿಂದ ತ್ರಾಸವಾಗುತ್ತದೆ. ಇದನ್ನು ತಪ್ಪಿಸಿಕೊಳ್ಳ ಬೇಕು. ಎಂದುಕೊಂಡು 'ಡುಮಗೆಶಿ' ಎಂಬ ಹೆಸರಿರುವ ಸಣ್ಣ ಕೆರೆ ಇರುವ ಸ್ಥಳಕ್ಕೆ ಬಂದು ಕುಳಿತನು. ಅಲ್ಲಿ ದಿನಾಲು ದನ ಕಾಯುವ ಬಾಲಕರು ಬರ ಬೇಕು. ಸಿದ್ಧ ಅವರ ಗೆಳೆತನ ಮಾಡಿಕೊಂಡು ಹಣ್ಣು-ಹಂಪಲಗಳನ್ನು ತಂದು ಕೊಡುವನು. ಅವರೊಡನೆ ಆಟವಾಡುವನು. ಒಂದೊಂದು ಸಾರೆ ತಂದು ಕೊಡುವ ಹಣ್ಣುಗಳು ಕಸುವಿನವೂ ಇರುತ್ತಿದ್ದವು. ಒಮ್ಮೆ ಸಿದ್ಧನು ಕಳವಿನ

ದೊಂದು ಹಲಸಿನ ಹಣ್ಣು ತೆಗೆದುಕೊಂಡು ನಡೆದಿರಲು ಆ ಹಣ್ಣಿನ ಒಡೆಯನು ಬಂದು ಹಿಡಿದು ಕೇಳಿದನು. ‘ ಇದನೆಲ್ಲಿಗೆ ಒಯ್ಯುತ್ತಿರುವೆ? ’ ತಿನ್ನಲಿಕ್ಕೆ ’ ಯಾರಿಗೆ? ನಮ್ಮೆಲ್ಲರಿಗೆ, ಹೀಗೆ ಸಿದ್ಧನು ಚಕಚಕ ಉತ್ತರ ಕೊಡಲು ಆ ಗೃಹಸ್ಥನು ಕೋಪಗೊಂಡು ಒಂದೆರಡು ಏಟು ಹಾಕಿ ಹೇಳಿದನು. ಇನ್ನೊಮ್ಮೆ ಇಂಥ ಕೆಲಸ ಮಾಡಬೇಡ.

ಸಿದ್ಧನು ವಿಚಾರಿಸಿಕೊಂಡನು. ‘ದ್ವಾರಕೆಯಲ್ಲಿ ದೇವಾಧಿದೇವ ಶ್ರೀಕೃಷ್ಣ ಅಂಥವನಿಗೆ ಕೂಡ ಕಳ್ಳನೆಂದು ಹೆಸರಿಡಲು ಲೋಕ ಹೇಸಲಿಲ್ಲ. ಒಮ್ಮೆಯಂತೂ ನಿಷ್ಕಾರಣವಾಗಿ ಸ್ಯಮಂತಕಮಣಿ ಕದ್ದನೆಂದು ಆರೋಪ ಬರಲು ಅವನು ಬಹಳ ಕಷ್ಟಪಡಬೇಕಾಯಿತು. ಆ ಕಷ್ಟದಲ್ಲಿಯೇ ಸುಖವೆಂದರೆ ಕೃಷ್ಣನಿಗೆ ಜಾಂಬುವತಿಯ ಲಗ್ನವಾಯಿತು. ಮುಂದೆ ಸತ್ಯಭಾಮೆಯೂ ಲಭಿಸಿದಳು. ನಮಗೆ ಅಂಥ ಸಾಂಸಾರಿಕ ಉಪದ್ರವಗಳೇನೂ ತಟ್ಟದೇ ಮೈಮೇಲಿ ಎರಡು ಬಾಸುಂಡೆ ಮೂಡಿಕೊಂಡವು. ಇದೇ ದೊಡ್ಡ ಪುಣ್ಯ.

ಹೀಗಿರುವಾಗ ಆ ಹಣ್ಣಿನ ಒಡೆಯನ ಕೈ ಸಡಿಲಾಗುವುದೇ ತಡ. ಸಿದ್ಧ ತಡಮಾಡದೇ ಓಡಿ ಒಂದು ನಿರ್ಜನ ಸ್ಥಾನಕ್ಕೆ ಬಂದು ಕುಳಿತು ಸಮಾಧಿ ಸುಖದಲ್ಲಿ ನಿಮಗ್ನನಾದನು.

ಕಸ್ತೂರಿಗೆ ಸುವಾಸನೆಯುಂಟೆಂದು ಯಾರಾದರೂ ಪ್ರಮಾಣ ಮಾಡಿ ಹೇಳಬೇಕಾದ ಪ್ರಸಂಗವಿರುವುದೇ? ಹಾಗೇನು ಇಲ್ಲ. ಅಜ್ಞಾನಿಗಳ ಕಣ್ಣಿಗೆ ಸಿದ್ಧನು ಹುಚ್ಚನಂತೆಯೇ ತೋರುವನು. ಅದರೆ ತಿಳಿದವರಿಗೆ ಭಾವಿಕರಿಗೆ? ಅವನು ಸದ್ಗುರು ಸಿದ್ಧಾರೂಢಸ್ವಾಮಿ. ತಿಳಿವಳಿಕೆಯುಳ್ಳ ಕೆಲವು ಲಿಂಗಾಯತರು ಈ ವೇಳೆಗೆ ಪ್ರತಿದಿನ ಬಂದು ಸಿದ್ಧನನ್ನು ಪೂಜಿಸಿ ಬಗೆಬಗೆಯಿಂದ ಸ್ತುತಿಸಿ ವಂದಿಸಿ ಹೋಗತೊಡಗಿದರು. ಇದನ್ನು ಕಂಡು ಅನೇಕ ಭಾವಿಕರೂ ಇವರನ್ನು ಅನುಸರಿಸಿದರು. ಈ ರೀತಿ ಬಂದು ದರ್ಶನಾದಿಗಳನ್ನು ಪಡೆದ ಭಕ್ತರಿಗೆ ಒಂದಿಲ್ಲೊಂದು ಅನುಭವ ಬಂದೇಬರಬೇಕು. ಅವುಗಳನ್ನು ಅವರು ಜನರ ಮುಂದೆ ಹೇಳುವುದು ಸಹಜ, ದಿನದಿನಕ್ಕೆ ಸಿದ್ಧನ ಮಹತ್ವ ಬೆಳೆದು ಜನರಿಗೆ ಅವನು ಸದ್ಗುರು-ಸಿದ್ಧಾರೂಢಸ್ವಾಮಿ ಮಹಾತ್ಮನು. ಜನರಲ್ಲಿ ಪೊಳ್ಳು ಪ್ರತಿಷ್ಠೆಯನ್ನು ಬೆಳೆಸಿಕೊಂಡು ಜನರ ಅಜ್ಞಾನದ ಲಾಭ ಪಡೆಯುತಿರುವ ಕೆಲವು ಸ್ವಾರ್ಥಿಗಳು ಸಿದ್ಧಾರೂಢನ ಮಹತ್ವ ಬೆಳೆಯುತಿರುವುದನ್ನು

ಕಂಡು ನಮ್ಮ ಪ್ರತಿಷ್ಠೆಗೆ ಬಾಧೆ ಬರುವದೋ ಎಂದು ಬೆದರಿದರು. ಅವರೆಲ್ಲ ಕೂಡಿಕೊಂಡು ಸಿದ್ಧಾರೂಢನನ್ನು ಹೊಡೆಯಬೇಕೆಂದು ಸಂಚು ಮಾಡಿದರು. ಆದರೆ ಹೊಡೆಯುವವರು ಯಾರು? ಒಬ್ಬ ದಾಂಡಿಗನು ಸಿದ್ಧನಾದನು. ಮತಾಂಧನಾದ ಅವನು ಒಂದು ದಿನ ರಾತ್ರಿ ಬಂದು ಒಂದು ತಂಬದ ಮೇಲೆ ಕುಳಿತ ಸಿದ್ಧಾರೂಢನನ್ನು ಮೇಲಕ್ಕೆತ್ತಿ ಕೆಳಕ್ಕೆ ಹಾಕಿದನು. ಆದರಿಂದ ಕಲ್ಲು ತಾಕಿ ಸಿದ್ಧನು ಬಹಳ ವೇದನೆಪಡುವಂತಾಯಿತು. ಅಷ್ಟರಲ್ಲಿ ಇನ್ನೂ ಹೊಡೆಯಬೇಕೆಂದು ಆ ದಾಂಡಿಗನು ಮುಂದೆ ಬಂದು 'ಎಲೋ' ನಿನಗೆ ಲಿಂಗವಿಲ್ಲ. ನೀನು ಭವಿ ಹೀಗಿರಲು ಮರುಳುಗೊಳಿಸಿ ತಿಳಿವಳಿಕೆ ಇಲ್ಲದವರಿಂದ ಪೂಜೆ ಮಾಡಿಸಿಕೊಳ್ಳುತ್ತಿರುವೆ. ನೀನು ಶ್ರೇಷ್ಠವಾದ ಲಿಂಗಾಯತ ಧರ್ಮವನ್ನು ನಾಶ ಮಾಡಬೇಕೆಂದು ಬಂದಂತೆ ಕಾಣುತ್ತದೆ. ಇವತ್ತು ನಿನ್ನ ಕಥೆ ಮುಗಿಯಿತೆಂದು ತಿಳಿ. ಎನ್ನುತ್ತ ಹೊಡೆಯಬರುತ್ತಿರಲು ಆದೇನೋ ಭಯಗೊಳಿಸುವಂಥ ಶಬ್ದ ಕೇಳಿಸಿತು. ಆ ಧರ್ಮಾಭಿಮಾನಿ ಪಲಾಯನ ಮಾಡಿದನು.

ಸಿದ್ಧನ ಮೈಕೈಗೆ ಬಹಳ ಪೆಟ್ಟಾಗಿ ನೋವುಂಟಾಗಿತ್ತು. ಅಲ್ಲಲ್ಲಿ ಕೈ ಕಾಲು ಕಿತ್ತಿ ರಕ್ತ ಸೋರುತ್ತಿತ್ತು. ಬಹಳವೇನು? ಆದೊಂದು ರಕ್ತಸ್ನಾನವೇ ಆದಂತೆ. ಸಿದ್ಧ ಮೈಗೆ ಹತ್ತಿದ ರಕ್ತವನ್ನೆಲ್ಲ ಒರೆಸಿಕೊಂಡು ದೇವಾಲಯದಲ್ಲಿ ಸ್ವಸ್ಥಚಿತ್ತನಾಗಿ ಕುಳಿತನು. ಆಗ ಅವನನ್ನು ಕಂಡರೆ ಪೆಟ್ಟಾದುದು ಯಾರಿಗೋ ಎನಿಸುವಂತಿತ್ತು. ದುಃಖವಾದರೂ ಎಲ್ಲಿದೆ ಜಗತ್ತಿನಲ್ಲಿ? ಅಳುವುದಾಗಲೀ, ನರಳುವುದಾಗಲೀ ಯಾಕೆ? ಸಮಾಧಾನ ಹೊಂದುವುದಕ್ಕೆ ಅರ್ಥಾತ್ ಆನಂದಪಡೆಯುವುದಕ್ಕೆ ಜನಸಾಮಾನ್ಯರು ಈ ರೀತಿ ಅನಂದಾನುಸಂಧಾನ ಮಾಡಿದರೆ, ಜ್ಞಾನಿ ಸಚ್ಚಿದಾನಂದಮಯನೇ ಆಗಿರುತ್ತಾನೆ. ಅವನಿಗೆಲ್ಲಿ ದುಃಖ? ಕೇವಲಾನಂದಾನುಭೂತಿ.

ಮರುದಿನ ಬೆಳಗು ನಿತ್ಯದಂತೆ ಹನ್ನೆರಡುಮಠದ ಸ್ವಾಮಿಗಳು ಬಂದರು, ಸಿದ್ಧನ ಮೈತುಂಬ ಘಾಯಗಳು. 'ಇದೇನು ಎಂದು ವಿಚಾರಿಸಲು ಸಿದ್ಧನು ಮನುಷ್ಯನಿಗೆ ಪ್ರಾರಬ್ಧವೆಂಬುದು ಇರುವುದಷ್ಟೇ. ನನ್ನಲ್ಲಿ ಅದರ ಗತಿ ತೀವ್ರವಾಗಿದೆ. ಅದನ್ನು ಭೋಗಿಸಿಯೇ ತೀರಬೇಕಾಗಿರುವದರಿಂದ ಹೀಗಿದ್ದೇನೆ.' ಎನ್ನಲು ಸ್ವಾಮಿಗಳು ಮಮ್ಮಲಮರುಗಿ ತಮ್ಮ ಮಠಕ್ಕೆ ಕರೆದೊಯ್ದು ಬಹಳ ಪರಿಪರಿಯಿಂದ ಉಪಚಾರ ಮಾಡಿಸಿದರು. ಎಷ್ಟೋ ದಿನಗಳ

ನಂತರ ಸಿದ್ಧನು ಮೊದಲಿನಂತಾದನು. ಅಷ್ಟಾದಮೇಲೆ ಒಂದುದಿನವೂ ಅಲ್ಲಿ ನಿಲ್ಲದೇ ಸಿದ್ಧ ತನ್ನ ಪೂರ್ವದ ಸ್ಥಳಕ್ಕೆ ಬಂದುಬಿಟ್ಟನು. ಮತ್ತೆ ಹಗಲು ಹೊತ್ತಿನಲ್ಲಿ ದನಗಾಹಿಗಳ ಜೊತೆಗೆ ಆಟ. ರಾತ್ರಿಯಲ್ಲಿ ಸಮಾಧಿ. ಹೀಗಿದ್ದರೂ ದರ್ಶನಾಪೇಕ್ಷಿಗಳಾಗಿ ಒರುವ ಭಕ್ತರೇನೂ ಕಡಿಮೆಯಾಗಲಿಲ್ಲ. ದಿನದಿನಕ್ಕೆ ಸಂಖ್ಯೆ ಹೆಚ್ಚತೊಡಗಿತು. ಜನರು ಅರ್ಪಿಸುವ ಹಣ್ಣು-ಕಾಯಿ ಹೂಗಳು ಮತ್ಸರಿಗಳ ಕಣ್ಣನ್ನು ಕುಕ್ಕಿದವು. ಅವರು ಸಿದ್ಧನನ್ನು ಕೊಂದು ಬಿಡುವ ಹಂಚಿಕೆ ಹಾಕಿದರು. ಅದರಂತೆ ಒಂದು ದಿನ ಸಿದ್ಧನನ್ನು ಬಲುಮೆಯಿಂದ ಎತ್ತಿ ಕೊಂಡೊಯ್ದು ಒಂದು ಹಾಳು ಭಾವಿಯಲ್ಲಿ ಹಾಕಿದರು. ಅಲ್ಲಿಯ ಕಲ್ಲು, ಮುಳ್ಳು ಚುಚ್ಚಿ ಸಿದ್ಧನ ಮೈಗೆ ಘಾಯಗಳಾದವು. ಆದರೆ ಸಾಯಲಿಲ್ಲ. ಇದನ್ನು ತಿಳಿದ ಆ ಬಲರು ನಿರಾಶರಾಗದೇ ಮತ್ತೊಂದುಸಾರೆ ಸಿದ್ಧನನ್ನು ಎಳೆದೊಯ್ದು ಒಂದು ದೆವ್ವನ ಮನೆಯಲ್ಲಿ ಒಳಗೆ ಹಾಕಿ ಬಾಗಿಲು ಭದ್ರಪಡಿಸಿದರು. ಜನ ಹೆದರಿಕೆಯಿಂದ ಕಣ್ಣೆತ್ತಿ ಕೂಡ ನೋಡದಂಥ ಮನೆ ಅದು. ಯಾವ ಕಾಲದ ಸುಣ್ಣವೋ ಯಾವ ಕಾಲದ ಸಾರಣೆಯೋ ಗುಂಗಾಡು-ಚಿಕ್ಕಾಡು-ಚೇಳು ಮೈತುಂಬ ಕಡಿಯತೊಡಗಿದವು. ಸಿದ್ಧನು ಸಮಾಧಿಯಲ್ಲಿ ಕುಳಿತುಬಿಟ್ಟನು. ಮೂರುದಿನ ಕಳೆದವು. ಕೊನೆಯದಿನ ಬೆಳಗು ಮುಂಜಾವದಲ್ಲಿ ಧ್ವನಿ ಕೇಳಿಸಿತು. 'ವತ್ಸ, ಮೇಲಕ್ಕೇಳು ನಿನ್ನ ಸಂಕಟವನ್ನು ನೋಡಲಾರದೇ ನಾನೇ ಧಾವಿಸಿದೆ. ನಿನಗೀಗ ದೇವವ್ಯಥೆಯೂ ಇಲ್ಲಿ. ಸಿದ್ಧ ಬಹಿರ್ಮುಖನಾಗಿ ನೋಡುತ್ತಾನೆ ಯಾರೂ ಇಲ್ಲ. ಮೈಗೆಲ್ಲ ಶ್ರೀಗಂಧ ತೊಡೆದಂತೆ ತಂಪಾಗಿದೆ. ಅದೇ ತಾನೆ ಅರಳಿದ ಪಾರಿಜಾತ ಪುಷ್ಪಗಳ ಪರಿಮಳ ಪಸರಿಸಿದೆ. ಆ ಕತ್ತಲೆ ಮನೆಯಲ್ಲಿ ಬೆಳಕು ತೋರಿದೆ. ಕಮಲ-ವಜ್ರ ಮೊದಲಾದ ಚಿಹ್ನಗಳಿಂದ ಕೂಡಿದ ಹೆಜ್ಜೆ ಮೂಡಿದಂತೆ ಕಾಣುತ್ತದೆ. ಸಿದ್ಧ ಮೆಲ್ಲನೆ ನುಡಿದುಕೊಂಡನು' ಯಾರಿಗೆ ಬೇಕಾಗಿದೆ ಈ ರಕ್ಷಣೆ ನಾನು ಕರೆಯದಿದ್ದರೂ ಬಂದು ಕಾಯುತ್ತಾನೆ.

ಅಷ್ಟರಲ್ಲಿ ಬಾಗಿಲ ಚಿಲಕ ಬಿದ್ದ ಸಪ್ಪಳ ಕೇಳಿ ಬಾಗಿಲು ತೆರೆದವು. ನಿರಾತಂಕವಾಗಿ ಹೊರಬಿದ್ದ ಸಿದ್ಧ ತನ್ನ ನೆಲೆಗೆ ಬಂದನು. ಮೊದಲಿನಂತೆ ಭಕ್ತ ಸಮುದಾಯ ಬರಲಾರಂಭಿಸಿತು. ಲಿಂಗಾಯಯತ ಮತಾಭಿಮಾನಿಗಳು ಇದನ್ನು ಸಹಿಸದಾದರು. ಸಿದ್ದನು ತಮ್ಮ ಧರ್ಮನಾಶಗೊಳಿಸುವುದಕ್ಕೇ

ಬಂದನೆಂದು ಅವರ ಭಾವನೆಯಾಗಿತ್ತು. ದೊಡ್ಡದೊಂದು ಸಭೆ ಕರೆದು 'ಧರ್ಮಾಧರ್ಮದ ಎಚ್ಚರವಿಲ್ಲದವನೂ, ಭವಿಯೂ ಆದ ಸಿದ್ಧನಿಗೆ ಯಾರೂ ವಂದಿಸಬಾರದು. ವಂದಿಸಿದವರು ಬಹಿಷ್ಕಾರಕ್ಕೆ ಪಾತ್ರರು.' ಎಂದು ಸಮಾಜಕ್ಕೆ ಎಚ್ಚರಿಕೆ ಕೊಟ್ಟರು. ಯಾರು ಕೇಳಬೇಕು?

ಮನುಷ್ಯ ಆಶಾಪಾಶದಿಂದ ಘಾಶಿಯಾಗುತ್ತಾನೆ. ತ್ರಿತಾಪಗಳಿಂದ ವ್ಯಥೆಗೊಳ್ಳುತ್ತಾನೆ. ಪಂಚಕ್ಲೇಶಗಳಿಂದ ಬಾಯಿಬಿಡುತ್ತಾನೆ. ಆಗ ಯಾವ ಮತಾಭಿಮಾನಿಗಳಿಂದ ಸಹಾಯವಾಗಬಲ್ಲದು? ಜಿಜ್ಞಾಸುವಾದವನು ವಿಚಾರ ಮಾಡಿ-ಮಾಡಿ ಕಂಗೆಟ್ಟು ಮತಿಮಂಕಾಗಿ ಘೋರಕತ್ತಲೆಯಲ್ಲಿ ಮುಳುಗಿಡುತ್ತಾನೆ. ಆಗ ಯಾವ ಪಂಡಿತರು ಅವನಿಗೆ ಬೆಳಕನ್ನು ತೋರಬಲ್ಲರು? ಯಾರೂ ಇಲ್ಲ. ಅಂದಮೇಲೆ ನೊಂದ-ಬೆಂದ-ಕಂಗೆಟ್ಟ ಜೀವಿಗಳು ಎಲ್ಲಿ ಹೋಗಬೇಕು? ಎಲ್ಲಿ ಶಾಂತಿಝರಿ ಹರಿಯುವುದೋ, ಎಲ್ಲಿ ಚಂದ್ರಮನ ತಂಬೆಳಕು ತೋರುವುದೋ ಅಲ್ಲಿ ಹೋಗುವಲ್ಲಿ ತಪ್ಪೇನು? ಮನುಷ್ಯನಿಗೆ ಸುಖದ ಆಶೆ ಜನ್ಮಸಿದ್ಧವಾದುದು. ಅದಕ್ಕಾಗಿ ಮಾಡುವ ಯತ್ನ ಅವಿರತವಾದುದು. ಎಲ್ಲರೂ ಸಿದ್ಧನೆಡೆಗೆ ತೆರಳುವರು.

ಹಂದರಯ್ಯನೆಂಬವನಿಗೆ ಇದು ತಡೆಯಲಿಲ್ಲ. ಒಂದು ದಿನ ಬೆಳಗು ಮುಂಜಾನೆ ಬಂದು ಸಿದ್ಧನನ್ನು ಎಬ್ಬಿಸಿ ತಲೆಯಮೇಲೆ ಮೊಟ್ಟೆಗಳನ್ನಿಟ್ಟು 'ಇವು ಕೆಳಗೆ ಬೀಳದಂತೆ ನಿಲ್ಲು. ಬಿದ್ದರೆ ಸಾಯಲಾಗುವಂತೆ ನಿನ್ನನ್ನು ಹೊಡೆಯುತ್ತೇನೆ. ಎಚ್ಚರ.' ಎಂದು ಹೇಳಿ ನಿಲ್ಲಿಸಿದನು. ಸದ್ಗುರು ತಾಸಿನವರೆಗೆ ಜಾಗ್ರತೆಯಿಂದಲೇ ನಿಂತನು. ನಂತರ ಅದೇಕೋ ತುಸು ಅಲುಗಿ ಮೊಟ್ಟೆಗಳು ಕೆಳಗೆ ಬಿದ್ದವು. ಅಷ್ಟರಲ್ಲಿ ಮದ್ಯ ಕುಡಿದು ಉನ್ಮತ್ತನಾಗಿದ್ದ ಹಂದರಯ್ಯ ಸಿದ್ಧನನ್ನು ಥಳಿಸಲಾರಂಭಿಸಿದನು. ಬಡಿಗೆ ಮುರಿಯುವವರೆಗೆ ಥಳಿಸಿ 'ಎಲೋ, ಆರೂಢನೆಂದು ನೀನು ಹೇಳಿಕೊಳ್ಳುತ್ತೀ. ನಿನಗೆ ವಿಧಿನಿಷೇಧಗಳೇಕೆ? ಈ ಮದ್ಯಕುಡಿದರೆ ಎಲ್ಲ ಭೇದವಳಿದು ಏಕರಸವಾಗುವುದು. ನೀನು ಕುಡಿಯುವುದಿಲ್ಲ. ಆದಕಾರಣ ನಿನಗೆ ಆರೂಢನೆಂದು ನಾನು ಕರೆಯುವುದಿಲ್ಲ.' ಎಂದು ನುಡಿದು ಗುದ್ದಿ-ಚಿವುಟಿ-ತಿವಿದು ಬಹು ಬಗೆಯಾಗಿ ಬಾಧೆಪಡಿಸುತಿರಲು ಸಿದ್ಧ ನುಡಿದನು.

'ಅಯ್ಯ, ಇದುವರೆಗೆ ನಿನಗೆ ಒಳ್ಳೆಯ ವೇಳೆ ಇತ್ತು. ಇನ್ನು ಬೆಳಗಾಗುವುದು ಭಕ್ತಜನ ಬಂದು ನೀನು ಮಾಡಿದ ಕೃತಿ ತಿಳಿದರೆ ನಿನ್ನಗತಿ ನೆಟ್ಟಗಿಲ್ಲ. ಬೇಗನೆ ಇಲ್ಲಿಂದ ಜಾರು. ನಿನ್ನ ಭಕ್ತಿ ಇದ್ದಂತೆ ನೀನು ಪೂಜೆ ಮಾಡಿದೆ.' ಆದರಿಂದ ನಾನು ಸಂತುಷ್ಟನಾಗಿದ್ದೇನೆ.'

ಎಂದು ಹೇಳುವಷ್ಟರಲ್ಲಿ ಭಕ್ತವೃಂದದ ಕಲಕಲ ಧ್ವನಿ ಕೇಳಿತು. ಬೆಳಗಾಗಲು ಹಕ್ಕಿಯ ಚಿಲಿ-ಪಿಲಿ ಧ್ವನಿ ಕೇಳಿ ಗೂಗೆಯು ಕಣ್ಮರೆಯಾಗುವಂತೆ ಹಂದರಯ್ಯ ಓಡಿ ಮರೆಯಾದನು. ಭಕ್ತರು ನುಡಿದರು. ಸದ್ಗುರುವಿನ ದೇಹವನ್ನು ನೋಡಿದರು. ಮೈಹಸುರೇಳುವಂತೆ ಹೊಡೆತಗಳು. ಸಾತ್ವಿಕ ಸಂತಾಪ ಉಕ್ಕಿ ಅವರು ಕೇಳಿದರು.

'ಸದ್ಗುರುವೆ, ಯಾರು ನಿನ್ನ ಗತಿ ಹೀಗೆ ಮಾಡಿದರು? ಹೇಳು ಅವರಿಗೆ ಜನ್ಮ ಜನ್ಮಾಂತರಕ್ಕೂ ನೆನಪಿರುವಂತೆ ಶಿಕ್ಷೆ ಮಾಡುತ್ತೇವೆ ಅವರ ಹೆಸರು ಹೇಳು.'

ಸಿದ್ಧ ನುಡಿದನು.

'ಏನಾಗಬೇಕೋ ಅದು ಆಗಿಯೇತೀರುವುದು ಅದರ ಬಗೆಗೆ ಸಿಟ್ಟಿಗೆದ್ದೇನು ಲಾಭ? ಪ್ರಾರಬ್ಧವಶದಿಂದ ಬರುವ ಸುಖ-ದುಃಖಗಳನ್ನು ನಾವು ಸಹಿಸುತ್ತ ಹೋದರೆ ಅದರಿಂದ ನಮ್ಮ ಕರ್ಮಕ್ಷಯವಾಗುವುದು. ಇದರಿಂದ ನಮಗೆ ಸಂತೋಷವಲ್ಲವೇ? ಒಂದು ವೇಳೆ ಪ್ರಾರಬ್ಧ ಕರ್ಮದ ನಿವಾರಣೆಗೆ ನಾವು ಪ್ರಯತ್ನಮಾಡಿದರೆ ಕರ್ಮಶೇಷವು ಉಳಿದು ಅದೇ ಸಂಚಿತವೆನಿಸಿ ಪುನರ್ಜನ್ಮಕ್ಕೆ ಕಾರಣವೆನಿಸುವುದು. ಆದುದರಿಂದ ಮೋಕ್ಷಾಪೇಕ್ಷಿಗಳು ಬರುವ ಸುಖ-ದುಃಖಗಳಿಂದ ಹಿಗ್ಗದೇ ಕುಗ್ಗದೇ ಶಾಂತಭಾವದಿಂದ ಎಲ್ಲವನ್ನು ಸಹಿಸಬೇಕು.'

ಎಂಬ ಮಾತನ್ನು ಕೇಳಿ ಜನರು ಕಣ್ಣೀರಿಡುತ್ತ 'ಗುರುನಾಥನೇ' ನೀನು ಪರಮಾತ್ಮ, ನಿನ್ನ ಯೋಗ್ಯತೆ ನಮಗೆ ತಿಳಿಯದು.' ಎಂದು ನುಡಿದು ಭಗವದ್ಭಜನೆಯನ್ನು ಮಾಡಿ ತಮ್ಮ ಮನೆಗೆ ತೆರಳಿದರು. ಹೀಗೆ ಭಜನೆ ಸೇವೆಗಳಿಗೆ ಬರುವವರು ಹಣ್ಣು-ಹಂಪಲ ತಂದಿಡುವ ಪದ್ಧತಿ. ಕೆಲವರು ಹಾಲು ಕೂಡ ತಂದು ಅರ್ಪಿಸುತ್ತಿದ್ದರು. ಬಹುತರವಾಗಿ ಸಿದ್ಧನು ಅವುಗಳನ್ನು ಕೈಮುಟ್ಟಿ ತಂದವರಿಗೇ ತಿರುಗಿ ಕೊಡುತ್ತಿದ್ದನು. ಒಂದೊಂದು ಸಲ ಕೆಲವು

ಹಾಗೇ ಉಳಿಯುತ್ತಿದ್ದವು. ಸಿದ್ಧನು ಎದ್ದು ಬಿಡಬೇಕು. ಅವೆಲ್ಲ ಅವುಗಳಿಗಾಗಿಯೇ ಸುಳಿದಾಡುತ್ತಿರುವ ಹೊಟ್ಟೆಬಾಕರ ಪಾಲಾಗಬೇಕು. ಸಿದ್ಧನೇನೋ ಥಂಡಿ-ಮಳೆ-ಗಾಳಿ-ಬಿಸಿಲುಗಳನ್ನು ಸಹಿಸುತ್ತ ಸಮಾಧಾನದಿಂದ ಇರುವನು. ಭಕ್ತಜನ ತಮ್ಮಂತೆಯೇ ಗುರುನಾಥನಿಗೂ ಕೂಡ ಋತುಮಾನಗಳ ಬಾಧೆಯಾಗುತಿರಬೇಕೆಂದು ಯೋಚಿಸುವರು. ಥಂಡಿಯ ದಿನ ಒಬ್ಬರಲ್ಲ ಯಾರಾದರೊಬ್ಬರೂ ಮೈಮೇಲೆ ಹೊದೆಯಲು ಒಂದು ಧೋತರ ತಂದು ಕೊಡುವರು. ಅದು ಸಿದ್ಧನ ಮೈಮೇಲಿರುವುದು ಒಂದೆರಡುದಿನ ಮಾತ್ರ. ರಾತ್ರಿ ಹೊದೆಯಲೆಂದು ಕೊಟ್ಟ ಕಂಬಳಿಯ ಗತಿಯೂ ಅಷ್ಟೇ. ಪಾಪಿಗಳು ಅವುಗಳನ್ನು ಅಪಹರಿಸಿಕೊಂಡು ಹೋಗಿ ಬಿಡುತ್ತಿದ್ದರು. ಮತ್ತೆ ಕೌಪಿನವೊಂದುಳಿದು ಅವಧೂತಮೂರ್ತಿ. ಬರಬರುತ್ತ ಸಿದ್ಧನ ಈ ಸ್ವಭಾವದ ಪರಿಚಯ ಪಡೆದ ಪಾಪಿಗಳು ಸಿದ್ಧನ ಮೈಮೇಲಿರುವುದನ್ನೇ ಅಪಹರಿಸಿದರೂ ಅದಕ್ಕೆ ಪ್ರತೀಕಾರವಿಲ್ಲದೇ ಹೋಯಿತು. ಇದನ್ನು ತಿಳಿದ ಭಕ್ತರು ಮರಗಬೇಕು. ಅವರಿಗೆ ಸಿದ್ಧ ಹೇಳುವನು: "ನನ್ನ ದೇಹ ಥಂಡಿ-ಗಾಳಿಯಾಗುತ್ತದೆಂದು ಚಾಡಿ ಹೇಳುವುದನ್ನೇ ನಿಲ್ಲಿಸಿಬಿಟ್ಟದೆ. ಪಾಪ ಅವರೇನು ಮಾಡಬೇಕು. ಯಾವುದನ್ನೂ ತಡೆದುಕೊಳ್ಳುವ ಸಾಮರ್ಥ್ಯವಿಲ್ಲ. ವಿಹಯೋಗ ಜೀವಿಗಳು, ಪರಾವಲಂಬಿಗಳು. ಸಿಕ್ಕಲ್ಲಿಂದ ವಿಷಯಗಳನ್ನು ಸಂಗ್ರಹಮಾಡಿಕೊಳ್ಳುತ್ತಾರೆ ಆಯಿತು."

"ಅಂಥವರಿಗೆ ಶಾಸನವಾಗಬಾರದೇ?"

"ಆಗುವದಲ್ಲ. ನಿಮಗದು ತಿಳಿದಿಲ್ಲವೆಂಬಂತೆ ಕಾಣುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಪಾಪದಿಂದ ಈ ಜನ್ಮದಲ್ಲಿ ದರಿದ್ರತ್ವ. ಈಗ ಪುಣ್ಯ ಮಾಡದೇ ಪಾಪ ಮಾಡುವದರಿಂದ ಮುಂದಿನ ಜನ್ಮವೂ ಶ್ರೇಷ್ಠವಾಗುವಂತಿಲ್ಲ. ಬರಬರುತ್ತ ಅಧೋಗತಿ. ಇದೇ ದೇವರ ತಂತ್ರ, ಇದೇ ದೇವರು ಮಾಡುವ ಶಾಸನ."

ಈ ವಿಚಾರಸರಣಿ ಜನಸಾಮಾನ್ಯರಿಗೆ ಹೊಸದು. ಕೇಳಿ ಕೌತುಕ ಪಡುವರು.

ಒಂದು ದಿನ ಸಿದ್ಧನು ಹೆಗ್ಗೆರೆಯ ಗಚ್ಚಿನ ಕಟ್ಟೆಯ ಮೇಲೆ ಕುಳಿತಿರಲು ಆ ಮಾರ್ಗವಾಗಿ ಒಬ್ಬ ಲಿಂಗವಂತ ರೈತನು ರೊಟ್ಟಿ-ಬುತ್ತಿಯನ್ನು ಕಟ್ಟಿಕೊಂಡು ಬುಟ್ಟಿಯಲ್ಲಿಟ್ಟು ತಲೆಯ ಮೇಲಿಟ್ಟುಕೊಂಡು ಹೊಲಕ್ಕೆ ಹೊರಟ

ಪ್ಪನು ಕೈಯಲ್ಲಿ ಹೊತ್ತಿಸಿದ ಕುಳ್ಳಿನ ಕೆಂಡವಿತ್ತು. ಅದೇಕೋ ಸಿದ್ಧನು ಕುಳಿತಿರುವುದನ್ನು ಕಂಡು, 'ಓ ಇವನು ಸದ್ಗುರು ಎಂದು ಒಳ್ಳೇ ಪ್ರಸಿದ್ಧಿ ಪಡೆದಿದ್ದಾನೆ. ಮಾತಿಲ್ಲ, ಕಥೆಯಿಲ್ಲ. ಜನ ಹೇಗೆ ಮರುಳಾಗುವರೋ ತಿಳಿಯದು. ಅನಾಯಾಸ ಸಂಧಿಸಿಕ್ಕಿದೆ. ಇವನನ್ನು ಪರೀಕ್ಷಿಸಬಾರದೇಕೆ?" ಎನ್ನುತ್ತ ಆ ಘಾತಕಿ ಕೈಯಲ್ಲಿ ಹೊತ್ತಿಕೊಂಡು ಕೆಂಡವಾಗ ಬಂದ ಕುಳ್ಳನ್ನು ಸಿದ್ಧನ ತಲೆಯ ಮೇಲಿಟ್ಟು ನೋಡುತ್ತ ನಿಂತನು. ಹೊಗೆಯಾಡುತ್ತ ಕುಳ್ಳು ತಲೆಯ ಮೇಲೆ ಪೂರ ಹೊತ್ತಿಕೊಂಡು ಗಾಳಿಗೆ ಉರಿಯುವುದು ಕಂಡಿತು. ಇಷ್ಟಾದರೂ ಶಾಂತತೆಯಿಂದಿದ್ದ ಸಿದ್ಧನು ಆಗ ವಿಚಾರ ಮಾಡಿದುದೇನಂದರೆ: "ನಾನು ಸಣ್ಣವನಿರುವಾಗ ಒಂದು ಘಟಸರ್ಪವು ತಲೆಯ ವರೆಗೆ ಏರಿದ್ದಿತಂತೆ. ಹೇಗೂ ಅದು ಶಂಕರನ ಮಸ್ತಕಾಭರಣ. ಆಗಿನ ಕಾಲದಲ್ಲಿ ಭಗವಂತ ಅದನ್ನು ಕೊಟ್ಟಿದ್ದನು. ಈಗ ಶಂಕರ ತನ್ನ ಅಗ್ನಿ ನೇತ್ರದಿಂದ ನನ್ನನ್ನು ಅನುಗ್ರಹಿಸಬೇಕೆಂದಿರುವನೋ ಏನೋ ?" ಎಂದುಕೊಂಡು ಶಾಂತನಾದನು.

ಇಷ್ಟರಲ್ಲಿ ಸಿದ್ಧನ ತಲೆಯ ಮೇಲೆ ಬೆಂಕಿ ಇಟ್ಟ ಮನುಷ್ಯನಲ್ಲಿ ನಡುಗು ಉಂಟಾಗಿತ್ತು. ಅದೇ ಮಾರ್ಗದಿಂದ ಬರುತ್ತಿದ್ದ ಮತ್ತೊಬ್ಬನು ಸಿದ್ಧನ ಈ ಅವಸ್ಥೆ ಕಂಡು ಬಾಯಿಗೆ ಬಂದಂತೆ ಅವನಿಗೆ ಬೈದು ಒಂದು ಕಟ್ಟಿಗೆಯಿಂದ ಆ ಕೆಂಡವನ್ನು ದೂರಕ್ಕೆಸೆದನು.

ಮಹಾವೃಕ್ಷವೊಂದು ತನ್ನನ್ನು ಕಡಿಯಲೆಂದು ಬಂದವನಿಗೆ ಕೂಡ ನೆರಳನ್ನು ಕೊಟ್ಟು ತಂಪು ಕೊಡುವಂತೆ ಮಹಾತ್ಮರು ಬೇಕಾದವರು ಬೇಕಾದಂತೆ ಅವರೊಡನೆ ವರ್ತಿಸಿದರೂ ಅವರು ಪ್ರತೀಕಾರವನ್ನೇ ಮಾಡರು. ವೈರವೆಂಬುದನ್ನೇ ಅರಿಯದವರು. ಇಂಥ ಕರುಣಾಮಯನನ್ನು ಛಲಿಸುವವರಿಗೆ ಕುಂಭೀಪಾಕಾದಿ ನರಕಗಳು ಯಮಲೋಕದಲ್ಲಿ ಸೃಷ್ಟಿಯಾಗಿವೆ. ಕಲ್ಪಾಂತರದ ವರೆಗೆ ಅವರು ಅಲ್ಲಿ ಹೋಗುತ್ತ ಅನೇಕ ಯಾತನೆಗಳನ್ನು ಭೋಗಿಸಿ ಪಶ್ಚಾತ್ತಾಪಾಗ್ನಿಯಲ್ಲಿ ಬೆಂದು ಶುದ್ಧರಾಗುವರು.

ಅದೇ ಪಟ್ಟಣದಲ್ಲಿ ಉಜ್ಜಣ್ಣನವರ ಭೀಮಪ್ಪನೆಂಬ ಗೃಹಸ್ಥ. ಮಕ್ಕಳಾಗಬೇಕೆಂದು ವ್ರತ-ಉಪವಾಸ-ಸೇವೆ ದಾನಧರ್ಮಗಳನ್ನು ಮಾಡುತ್ತ ಫಲ ಕಾಣದೇ ಪರಿತಪಿಸುತ್ತಿದ್ದನು. ಕೊನೆಗೆ ಸಿದ್ಧನಲ್ಲಿ ಶ್ರದ್ಧೆಯುಂಟಾಗಲು ಬಹುಕಾಲದ ವರೆಗೆ ಸೇವಿಸುತ್ತ ಬಂದನು. ಒಂದು ದಿನ ಸದ್ಗುರು ಪ್ರಸನ್ನ

ನಾಗಿರುವದನ್ನು ಕಂಡು– "ಸದ್ಗುರುನಾಥನೇ, ನೀನು ಮಹಾಮಹಿಮನೆಂಬ ದನ್ನು ನಾನು ಬಲ್ಲೆ. ಮಕ್ಕಳಿಗಾಗಿ ನಾನು ಬಹಳ ಕಷ್ಟಪಟ್ಟಿದ್ದೇನೆ ನನಗೊಂದು ಮಗುವಾಗುವಂತೆ ಕರುಣಿಸಬಾರದೇ? ಎಂದು ಕೈಮುಗಿದನು

ಆ ಮಾತಿಗೆ ಸಿದ್ಧ ನುಡಿದನು :

"ಒಳ್ಳೇದು. ನಿನಗೆ ಮಕ್ಕಳೇಕೆ ಬೇಕು? ಹೇಳಬಾರದೇ."

"ನೀನು ಹೀಗೆ ಕೇಳಿದರೇನು ಗುರುವೇ. ಒಂದಾದರೂ ಮಗುವಿನ ಮುಖ ಕಂಡರೆ ಪ್ರಪಂಚ ಮಾಡಿದುದಕ್ಕೆ ಸಾರ್ಥಕ. ಇಲ್ಲವಾದರೆ ತಾಯ್ತಂದೆ ಗಳ ಹೆಸರು ಉಳಿಸುವವರು ಯಾರು? ಕಷ್ಟಪಟ್ಟು ಬದುಕು-ಬಾಳ್ವೆಯನ್ನು ಉಣ್ಣುವವರು ಯಾರು? ಮನೆಯಲ್ಲಿ ದೀಪ ಹಚ್ಚಿ ಮನೆಬೆಳಗುವವರು ಯಾರು? ಮಕ್ಕಳಿಲ್ಲದವರಿಗೆ ಬದುಕಿನಲ್ಲಿ ಏನಾದರೂ ರುಚಿಯುಂಟೆ?

'ಮಕ್ಕಳಿಂದ ಸುಖವುಂಟೆಂದು ಭಾವಿಸುವೆಯೇ?'

'ನಾನು ಪ್ರಪಂಚ ಗೆದ್ದವನಲ್ಲ, ಎಲ್ಲರಂತೆ ನಾನೂ ಮಕ್ಕಳಿದ್ದರೆ ಸುಖ ವೆಂದು ಭಾವಿಸಿದ್ದೇನೆ.'

'ಆ ಸುಖ ಮುಂದಿನದು. ಈಗ ಪಟ್ಟ ಕಷ್ಟ ಸಾಮಾನ್ಯವಾಯಿತೇ? ಇನ್ನೂ ಹುಟ್ಟದ ಮಗನನ್ನು ಕಲ್ಪಿಸಿಕೊಂಡು ತಳಮಳಿಸಿದೆಯಲ್ಲ? ಇರಲಿ. ನೋಡು ನಿನ್ನ ಅಪೇಕ್ಷೆಯಂತೆ ಮಗ ಹುಟ್ಟಿದ. ಉಣಿಸಿ ತಿನಿಸಿ ಬೆಳೆಸಿದೆ. ಅವನು ಮೂರ್ಖನಾಗಿ ಬಿಟ್ಟರೆ ನಿನಗೆ ಸುಖವಾದೀತೇ?'

'ನಿನ್ನ ಅನುಗ್ರಹದಿಂದ ಹುಟ್ಟುವ ಮಗನು ಮೂರ್ಖನಾಗಲಾರನೆಂದು ನಂಬಿದ್ದೇನೆ.'

'ಹಾಗಿದ್ದರೆ ನಿನಗೆ ಒಳ್ಳೇ ಜ್ಞಾನಿ ಎನಿಸುವ ಮಗನನ್ನು ಕೊಡುತ್ತೇನೆ ಒಪ್ಪಿಗೆಯೇ? ಸಾಮಾನ್ಯನೆನಿಸುವ ಮಗನಾದರೆ ಏನಾದಹಾಗಾಯಿತು? ಅವನಿಂದ ಕಷ್ಟವೆನಿಸೀತೇ ಹೊರತು ಸುಖವಾಗಲಾರದು ಅಲ್ಲವೇ?'

'ನಿನ್ನ ಅನುಗ್ರಹವೇ ನನಗೆ ಮಹಾ ಪ್ರಸಾದ.'

'ಹಾಗಾದರೆ ನನ್ನನ್ನೇ ಮಗನೆಂದು ತಿಳಿದು ಕಕ್ಕುಲತೆಯಿಂದ ಲಾಲನ ಪಾಲನ ಮಾಡು.'

ಎಂದು ಹೇಳಿ ಸಿದ್ಧನು ಅವರ ಮನೆಗೆ ಬಂದು ನೆಲೆಸಿದನು. ಅವನನ್ನು ಮಗನಂತೆಯೇ ಆ ದಂಪತಿಗಳು ಕಂಡು ಅನುಗ್ರಹ ಪಡೆದರು. ಮತಾಂಧರು

ಭೀಮಪ್ಪನ ಸಂತೃಪ್ತಿಯನ್ನು ಕಂಡು ಮತ್ಸರ ತಾಳಿದರು. ಬಹುಬಗೆಯಾಗಿ ನಿಂದಿಸಿದರು. ಬಹಿಷ್ಕಾರ ಹಾಕಿದರು. ಅವನ ಮನೆಯಲ್ಲಿ ಅನ್ನ ನೀರು ಯಾರೂ ಸ್ವೀಕರಿಸುತ್ತಿರಲಿಲ್ಲ. ಇವನನ್ನೂ ಕರೆಯಲಿಲ್ಲ. ಅದರಿಂದೇನೂ ಭೀಮಪ್ಪ ಬೆದರಲಿಲ್ಲ. ಶಾಂತಭಾವದಿಂದ ಸದ್ಗುರು ಸೇವೆಯಲ್ಲಿ ನಿಮಗ್ನನಾಗಿದ್ದನು.

——————

೧೩

ಯಸ್ಯ ಚಿತ್ತಂ ದ್ರವೀಭೂತಂ ಕೃಪಯಾ ಸರ್ವಜಂತುಷು ।
ತಸ್ಯ ಜ್ಞಾನೇನ ಮೋಕ್ಷೇಣ ಕಿಂಜಟಾ-ಭಸ್ಮಲೇಪನೈಃ ॥

—ಸುಭಾಷಿತ

ಸರ್ವ ಪ್ರಾಣಿಗಳ ವಿಷಯಕ್ಕೆ ಯಾರ ಮನಸ್ಸು ಕರಗಿ ಕಾರುಣ್ಯದಿಂದ ತುಂಬಿರುವದೋ, ಅವರಿಗೆ ಜ್ಞಾನದಿಂದೇನು ? ಅಥವಾ ಬಹಿರಂಗ ಲಾಂಛನಗಳೆನಿಸುವ ಜಟೆ-ಭಸ್ಮಲೇಪಾದಿಗಳಿಂದೇನು ?

ಸಿದ್ಧನು ಇದೇ ರೀತಿಯಾಗಿ ಕಾಲಕಳೆಯುತ್ತಿದ್ದನು. ನಿಂದಕರನ್ನು ಕಂಡು ಕನಿಕರಪಡುವನು. ಹೊಡೆಯಲು ಬಂದಿರಲು ಮೌನವಾಗಿ ಪೆಟ್ಟು ಸಹಿಸುವನು. ತಿರಸ್ಕಾರದ ಪ್ರಸಂಗವಿರಲು ಉದಾಸೀನನಂತಿರುವನು. ಯಾರಾದರೂ ಪೂಜೆ ಮಾಡಲು ದೇಹ ಪ್ರಾರಬ್ಧವೆನ್ನುವನು. ಅನ್ನವು ಸಿಗಲಿ ಸಿಗದಿರಲಿ. ತಿರಸ್ಕಾರದ ಪ್ರಸಂಗವಿರಲು ಉದಾಸೀನನಂತಿರುವನು. ಯಾರಾದರೂ ಪೂಜೆ ಮಾಡಲು ದೇಹ ಪ್ರಾರಬ್ಧವೆನ್ನುವನು. ಅನ್ನವು ಸಿಗಲಿ ಸಿಗದಿರಲಿ. ಸಮಾಧಾನ ವೃತ್ತಿಯಿಂದಿರುವನು. ಈಗಂತೂ ಉಜ್ಜಣ್ಣವರ ಮನೆ ಮಗನಂತೆ ಆನಂದದಿಂದ ಕಾಲಕಳೆಯುತ್ತಿದ್ದನು.

ಎಂದಿನಿಂದ ಕಾರ್ತೀಕ ಶುದ್ಧ ಗೌರೀ ಹುಣ್ಣಿಮೆಗೆ ಹುಬ್ಬಳ್ಳಿಯಲ್ಲಿ ಗೌರೀದೇವಿಯ ರಥೋತ್ಸವ ನಡೆದು ಬಂದಿತ್ತು. ಪೇಟೆಯಲ್ಲಿ ಒಂಭತ್ತು ನೆಲೆಯುಳ ರಥ ಸಿದ್ಧಗೊಳಿಸಿದ್ದರು. ಇನ್ನೇನು ರಥೋತ್ಸವದ ಸಮಯ. ದೇವರನ್ನು ರಥದಲ್ಲಿ ಕುಳ್ಳಿರಿಸಿ ಎಳೆಯುವುದು ಎನ್ನುವಷ್ಟರಲ್ಲಿ ಏನು ಕಾರಣವೋ ಜನರಲ್ಲಿ ಇಬ್ಬಣಗಳಾದವು. ಬಾಯಿಗೆ ಬಾಯಿ ಹತ್ತಿತು. ಕೈಗೆ ಕೈಕೂಡಿ

ದವು. ಅಷ್ಟರಲ್ಲಿ ಜಗಳ ಬೇಡವೆಂದುಕೊಂಡು ಒಂದು ಬಣದವರು ಆ ಸ್ಥಳ ಬಿಟ್ಟು ಹೋಗಿಬಿಟ್ಟರು. ಉಳಿದವರು ಏನಾದರಾಗಲಿ ರಥೋತ್ಸವ ಬಿಡಬೇಕೆನ್ನುವವರು. ಆದರೆ ದೇವರಿಲ್ಲದೇ ರಥ ಎಳೆಯುವುದು ಹೇಗೆ?

ಆಗ ಕೆಲವರು ಡುಮ್ಮಗೆರೆಯ ಕಟ್ಟೆಯ ಮೇಲೆ ಕುಳಿತುಕೊಂಡಿದ್ದ ಸಿದ್ಧನ ಬಳಿಗೆ ಬಂದರು. ವಂದಿಸಿ ಕೈಮುಗಿದು ನಿಂತು 'ಮಹಾತ್ಮರೇ, ನಮ್ಮ ಮಾತನ್ನು ಲಾಲಿಸಬೇಕು. ನಾವೊಂದು ರಥೋತ್ಸವ ಸಿದ್ಧತೆ ಮಾಡಿದ್ದೆವು. ಜಗಳವಾಗಿ ಒಂದು ಬಣದವರು ದೇವರನ್ನು ತೆಗೆದುಕೊಂಡು ಹೋದರು. ರಥೋತ್ಸವ ಮಾಡಿಯೇ ಬಿಡಬೇಕೆಂದು ನಮ್ಮ ಮನಸ್ಸು ದೇವರಿಲ್ಲದಂತಾಗಿದೆ. ನೀವು ಮಹಾತ್ಮರು. ಗುರುಗಳು. ಗುರುವಿನಲ್ಲಿ ತ್ರಿಮೂರ್ತಿಗಳೂ ಕೂಡಿಕೊಂಡಿರುವರೆಂದು ಹೇಳುವರು. ಗುರುವಿಗಿಂತಲೂ ಅಧಿಕವಾದ ದೈವವಿಲ್ಲ. ಆದಕಾರಣ ತಮ್ಮನ್ನು ಕೂಡಿಸಿ ರಥೋತ್ಸವ ಮಾಡಿಬಿಡಬೇಕೆಂದು ಆಲೋಚಿಸಿದ್ದೇವೆ. ಆದಕಾರಣ ತಾವು ಬಂದು ರಥಾರೋಹಣ ಮಾಡಬೇಕು. ಅಂದರೆ ಉತ್ಸವ ಕೆಲಸ ನಡೆದು ನಮಗೆಲ್ಲರಿಗೂ ಸಂತೋಷವಾಗುತ್ತದೆ. ನೀವು ರಥದಲ್ಲಿ ಕುಳಿತರೆ ಎಲ್ಲರೂ ಒಪ್ಪುತ್ತಾರೆ.' ಎಂದು ಪ್ರಾರ್ಥಿಸಲು ಸಿದ್ಧನು ಯೋಚನೆಗೊಳಗಾದನು.

'ದೇಹವೇ ಒಂದು ರಥ. ಇಂದ್ರಿಯಗಳು ಅದಕ್ಕೆ ಹೂಡಿದ ಕುದುರೆಗಳು. ಬುದ್ಧಿಯು ಅವರ ಸಾರಥಿ. ಹೇಗಿದ್ದರೂ ಈ ರಥದಲ್ಲಿ ನಾನು ಕುಳಿತಿದ್ದೇನೆ. ಪ್ರಾರಬ್ಧ ಭೋಗಕ್ಕನುಸಾರವಾಗಿ ದೇಹವು ರಥದಲ್ಲಿ ಕುಳ್ಳಿರಬಾರದೇಕೆ?' ಎಂದುಕೊಂಡು ಆಗಲೆಂದನು.

ಅಮೌಲ್ಯ ವಸ್ತ್ರಾಭರಣಗಳಿಂದ ಅಲಂಕರಿಸಿ ಸಿದ್ಧನನ್ನು ರಥದಲ್ಲಿ ಕುಳ್ಳಿರಿಸಿ 'ಸಿದ್ಧಾರೂಢ ಮಹಾರಾಜ ಕೀ ಜಯ' ಎಂದು ಉಚ್ಚ ಕಂಠದಿಂದ ಕೂಗುತ್ತ ಜನ ಗರ್ಜಿಸಿದರು. 'ನಮಃ ಶಿವಾಯ' ಎಂಬ ನಾಮ ಘೋಷವು ಆಕಾಶವನ್ನೆಲ್ಲ ವ್ಯಾಪಿಸಿದ ಹಾಗಿತ್ತು. ಒಟ್ಟು ಅಂದಿನ ಉತ್ಸವವು ಅಪೂರ್ವ ತಮ್ಮ ಪ್ರಾರ್ಥನೆಯನ್ನು ಮನ್ನಿಸಿ ಸಿದ್ಧನು ರಥಾರೂಢ ನಾದುದಕ್ಕೆ ಜನರ ಹರ್ಷ ಮೇರೆದಪ್ಪಿತ್ತು. ಸಿದ್ಧನ ಪಾಲಕನಾದ ಭೀಮಪ್ಪನಂತೂ ಮೂಕನಾಗಿ ಕಣ್ಣಿನಿಂದ ಆನಂದ ಬಾಷ್ಪಗಳನ್ನು ಕರೆಯುತ್ತಿದ್ದನು. ದೈವೀ ತೇಜದಿಂದೊಪ್ಪುವ ಸಿದ್ಧ ಮೂರ್ತಿಯನ್ನು ಕಂಡು ಸಕಲರೂ ನಲಿದರು. ಅವನೆಲ್ಲ

ಕಂಡು ಭೀಮಪ್ಪನಿಗೆ ಜನ್ಮ ಸಾರ್ಥಕವಾದಂತೆನಿಸಿತು. ಮನೆಯಲ್ಲಿ ಇದ್ದು ಬಿದ್ದ ಭಂಗಾರ ಮಾರಿ ದೊಡ್ಡದೊಂದು ಅನ್ನಸಂತರ್ಪಣೆಯ ಸಿದ್ಧತೆ ಮಾಡಿದನು. ಅವನ ಮಧುರ ಮಾತುಗಳಿಂದ ಜನ ತಮ್ಮ ದ್ವೇಷಾದಿಗಳನ್ನು ಮರೆತು ಊಟಕ್ಕೆ ಬಂದು ಉಂಡು ತೇಗಿದರು.

ಸಿದ್ಧನ ರಥೋತ್ಸವದಲ್ಲಿ ಜನ ಏನು ಕಂಡರೋ, ಅದೇನಾಯಿತೋ ಮನಃ ಕಷಾಯವೆಲ್ಲ ಕಳೆದು ಎಲ್ಲರೂ ನಿರ್ಮಲ ಮನಸ್ಕರಾದರು. ಮೇಲಿಂದ ಮೇಲೆ ಸಿದ್ಧನ ಪೂಜೆ ಪ್ರಾರಂಭವಾಯಿತು. ಧನಿಕರು ಅನ್ನಸಂತರ್ಪಣೆ ಮಾಡತೊಡಗಿದರು. ಸಿದ್ಧ ಬೇಕಾದಲ್ಲಿರಲಿ. ಬೇಕಾದಲ್ಲಿ ಕುಳಿತಿರಲಿ. ಅಲ್ಲಿಯೇ ಭಕ್ತರು ಬಂದು ಪೂಜಿಸುವರು. ಕೆಲವರು ತಮ್ಮ ಮನೆಗಳಲ್ಲಿ ಭಕ್ಷ್ಯ ಭೋಜ್ಯಗಳನ್ನು ಮಾಡಿಕೊಂಡು ಮಡಿಯಿಂದ ಬಂದು ಸಿದ್ಧಗರ್ಪಿಸಿ ಅವನ ಬಳಿಯಲ್ಲಿಯೇ ಕುಳಿತು ಊಟ ಮಾಡುವರು. ಹೀಗೆ ದರ್ಶನಕ್ಕೆ ಬರುವ ಭಕ್ತರ ಸಂದಣಿ ಹೆಚ್ಚುತ್ತ ಬರಲು ಅಲ್ಲಿ ಶಾಶ್ವತ ಕಟ್ಟಡಗಳ ಅವಶ್ಯಕತೆ ಎನಿಸತೊಡಗಿತು. ಕಾರಡಗಿ ಮಲ್ಲಪ್ಪ, ಶಿರಗುಪ್ಪಿಯ ಹೊಂಬಣ್ಣ ಎಂಬ ಧನಿಮುಂದಾಗಿ ಎರಡು ಬೇರೆ ಬೇರೆ ಧರ್ಮಶಾಲೆಗಳನ್ನು ಕಟ್ಟಿಸಿದರು. ನೀರಿನ ಸಲುವಾಗಿ ಒಂದು ಭಾವಿಯನ್ನು ತೋಡಿಸಿಕೊಟ್ಟರು. ಆ ಕಾಡು ನೆಲದಲ್ಲಿ ಅಪೂರ್ವವಾದ ಸಿದ್ಧಾಶ್ರಮವು ಕಂಗೊಳಿಸಿತು. ಸದ್ಗುರು ಸೇವೆ ಮಾಡುವ ಭಾವಿಕರಿಗೆ ಶಾಶ್ವತ ನೆಲೆಗಳಾದವು.

ಇಷ್ಟರಲ್ಲಿ ಭಯಾನಕ ಬರಗಾಲವೊದಗಿ ಜನರು ಅನ್ನಕ್ಕಾಗಿ ಬಾಯ್ಬಿಡಲಾರಂಭಿಸಿದರು. ಸದ್ಗುರು ತನ್ನ ಶ್ರೀಮಂತ ಶಿಷ್ಯರಿಗಂದನು. 'ಇದು ಅನ್ನದಾನಕ್ಕೆ ಯೋಗ್ಯಕಾಲ. ಶಕ್ತಿ ಇದ್ದವರು ಅನ್ನದಾನ ಮಾಡಿ ಪುಣ್ಯಭಾಗಿಗಳಾಗಿರಿ.' ಹೀಗೆ ಸದ್ಗುರುವಿನ ಅಪ್ಪಣೆಯಾಗುವುದೇ ತಡ. ನಿತ್ಯ ಬಡಬಗ್ಗರಿಗೆ ಅನ್ನಸಂತರ್ಪಣೆ ಆಶ್ರಮದಲ್ಲಿ ನಡೆಯಿತು. ಧನಿಕರು ತಮ್ಮ ಧನವನ್ನು ಸತ್ಕಾರ್ಯದಲ್ಲಿ ವೆಚ್ಚ ಮಾಡಿ ಸಾರ್ಥಕತೆ ಪಡೆದರು. ಈ ನಿಮಿತ್ತದಿಂದ ಸದ್ಗುರು, ಆನಂದ ತ್ಯಾಗದಲ್ಲಿಯೋ? ಭೋಗದಲ್ಲಿಯೋ? ಎಂದು ತನ್ನ ಧನಿಕ ಶಿಷ್ಯರನ್ನು ವಿಚಾರ ಮಾಡುವಂತಿತ್ತು. ತಮ್ಮ ಕಷ್ಟಾರ್ಜಿತವಾದ ಧನ ವೆಚ್ಚಮಾಡಿ ಅನ್ನದಾನದಿಂದ ಜನರನ್ನು ತಣಿಸಿದವರಿಗೆ ಸದ್ಗುರು ಹೇಳುವ ಮಾತಿದು.

'ಹಸಿದವರು ಉಂಡು ಹಾಡಿಹರಿಸುತ್ತಾರೆ. ಎಲ್ಲ ಪ್ರಾಣಿಗಳ ಹೃದಯದಲ್ಲಿಯ ಈಶ್ವರಸಿದ್ಧಾನೆ. ಅನ್ನದಾನದಿಂದ ಅವನನ್ನು ಸಂತೋಷಗೊಳಿಸಿದುದು ವ್ಯರ್ಥವಲ್ಲ. ಅವನ ಕೃಪೆಯಿಂದ ನೀವು ಸದ್ಗತಿಗೆ ಪಾತ್ರರು.'

ಅಂದಿನಿಂದ ಪರಿಣಾಮವಾಗಿ ಹೊಂಬಣ್ಣ ಸಾವುಕಾರರ ಕಾರ್ತಿಕಶುದ್ಧ ಹುಣ್ಣಿವೆದಿನ ಬಡಬಗ್ಗರಿಗೆ ಅನ್ನ ಸಂತರ್ಪಣೆ ಮಾಡತೊಡಗಿದರು. ಕ್ರಮೇಣ ಎಲ್ಲ ಧನಿಕರ ಮನಸ್ಸಿನ ಮೇಲೆಯೂ ಪರಿಣಾಮವಾಗಿ ಪ್ರತಿವರ್ಷ ಹೀಗೆಯೇ ಮಾಡಬೇಕೆಂದು ನಿರ್ಧಾರ ಮಾಡಿಕೊಂಡರು. ಅಂದು ಎಲ್ಲರಿಗೂ ಅನ್ನಸಂತರ್ಪಣೆ. ಸದ್ಗುರುವಿಗೆ ವಿಶೇಷ ಪೂಜೆ. ಮತ್ತು ರಥೋತ್ಸವ. ಹಲವು ವರ್ಷಗಳವರೆಗೆ ಇದೇ ಕ್ರಮವು ಸಾಗಿತು.

ಮುಂದೆ ಈ ಉತ್ಸವವನ್ನು ಶಿವರಾತ್ರಿಗೆ ಮಾಡಬೇಕೆನಿಸಿತು. ಯಾಕಂದರೆ ಬಹುತರವಾಗಿ ಅಲ್ಲಿ ಶಿವನಾಮ ಸಂಕೀರ್ತನೆ-ಶಿವರಾಧನೆಗಳು ನಡೆಯುತ್ತಿದ್ದವು. ಶಿವಭಕ್ತರಿಗೆಲ್ಲ ಶಿವರಾತ್ರಿ ಬಹು ಪವಿತ್ರವೂ ಪುಣ್ಯಕರವೂ ಆದ ದಿನ. ಆದಿನ ಅಂದು ಶಿವನಾಮವನ್ನುಚ್ಚರಿಸಿದರೂ ಶಿವಲೋಕ ಪ್ರಾಪ್ತಿ. ಇದೊಳ್ಳೆ ಸಮಂಜಸ ವಿಚಾರವೆನಿಸಿ ಶಿವರಾತ್ರಿಗೆ ಏಳುದಿನ ಪರ್ಯಂತರ ಉತ್ಸವ ಜರುಗಲಾರಂಭಿಸಿತು. ಆಗ ದೂರ–ದೂರದ ಭಕ್ತರು ಕೂಡಿ ಸದ್ಗುರುವಿನ ಪೂಜಾ ವೈಭವವನ್ನು ಕಂಡು ಧನ್ಯರೆನಿಸುವರು. ಪಂಚಾಕ್ಷರ ನಾಮಘೋಷದಲ್ಲಿ ಮಿಳಿತರಾದ ಪಾವನರಾಗುವರು. ಬೆಳಗಿನ ಸಮಯದಲ್ಲಿ ಸ್ವತಃ ಸದ್ಗುರುನಾಥನು ಮಂಟಪಕ್ಕೆ ಬಂದು ಉಚ್ಚಾಸನದಲ್ಲಿ ಕುಳಿತು ಮುಮುಕ್ಷುಗಳಿಗೆ ವೇದಾಂತ ಶ್ರವಣ ಮಾಡಿಸುವನು. ಆ ಅಮೃತ ವಾಣಿಯನ್ನು ಸವಿದು ಭಕ್ತರು ತೃಪ್ತರಾಗುವರು.

ಮಧ್ಯಾಹ್ನದಲ್ಲಿ ಎಲ್ಲರಿಗೂ ಮುಕ್ತದ್ವಾರ ಅನ್ನಸಂತರ್ಪಣೆ ಸದ್ಗುರು ಸದ್ಗುರುವಿನ ಸಾನಿಧ್ಯ. ಶಿವಾನುಘೋಷ. ಅಲ್ಲಿಯ ವಾತಾವರಣವೇ ಪುನೀತವಾಗಿತ್ತು. ಆ ಪ್ರಸಾದವನ್ನು ಸ್ವೀಕರಿಸಿ ಜನ ತೃಪ್ತಿ ಪಡುವರು. ಕುರುಡ ಕುಂಟರಂತೂ ಹೊಟ್ಟೆತುಂಬ ಉಂಡು ತೇಗಿ ಸದ್ಗುರುವಿನ ಜಯಘೋಷ ಮಾಡುವರು. ಎಷ್ಟೋ ಹೊತ್ತಿನವರೆಗೆ ಹೀಗೆ ಅನ್ನದಾನ ಸಾಗಿ ಇಳಿಹೊತ್ತಾಗಲು ಯಾರಾದರೂ ಒಬ್ಬರು ಕೀರ್ತನ ಹೇಳುವರು. ಗಾನ ಕಲಾವಿದರು

ಯಾರಾದರೂ ಇದ್ದರೆ ಗಾಯನ ನಡೆಯುವುದು. ಬಂದ ಪಂಡಿತರು ಭಕ್ತಿ-ಜ್ಞಾನ-ವೈರಾಗ್ಯಗಳ ವಿಷಯಕ್ಕೆ ವ್ಯಾಖ್ಯಾನ ಕೊಡುವರು.

ಸಂಧ್ಯಾಕಾಲವಾಗಲು ಸದ್ಗುರುನಾಥನ ಪೂಜಾ ಸಮಾರಂಭ. ಮನೋಹರವಾದ ಮಂಟಪದಲ್ಲಿ ಸದ್ಗುರುವನ್ನು ಕುಳ್ಳಿರಿಸಿ ಗಂಧ-ಮಾಲ್ಯ-ಧೂಪ-ದೀಪಾದಿಗಳಿಂದ ಪೂಜೆ ನಡೆಯುತ್ತಿತ್ತು. ಬಜಂತ್ರಿ-ವಾದ್ಯ ಮೇಳದವರು ಅಹಮ್ಮಾಮಿಕೆಯಿಂದ ಆಗ ವಾದ್ಯ ನುಡಿಸುವರು. ನಾದ ಘೋಷವಂತೂ ಇದ್ದುದೇ. ಆ ವೈಭವಪೂರ್ಣವಾದ ಪೂಜೆಯನ್ನು ಕಣ್ಣಾರೆ ಕಾಣುವವರು ಧನ್ಯರು. ಕವಿಗಳಾದವರು ಅದನ್ನು ಕಂಡರಂತೂ ಇದೇನು ಕೈಲಾಸವೋ? ಭೂಲೋಕವೋ? ಎಂದು ನಿರ್ಣಯಿಸಲು ಗೊಂದಲಕ್ಕೀಡಾಗುತ್ತಿದ್ದರು.

ಹೀಗೆ ಏಳುದಿನಗಳವರೆಗೆ ಒಂದೇಸವನೆ ಉತ್ಸವ ಸಾಗಿ ಕೊನೆಯದಿನ ರಥೋತ್ಸವ. ಸದ್ಗುರುವನ್ನು ಅಲಂಕರಿಸಿದ ರಥದಲ್ಲಿ ಕುಳ್ಳಿರಿಸಿ ಎಳೆಯುತ್ತಿದ್ದರು. ಆ ದಿನವಂತೂ ಜನಸಂದಣಿ ವಿಪರೀತ ನೂಕುನುಗ್ಗಲು. ಎಲ್ಲರಿಗೂ ರಥದಲ್ಲಿ ಸದ್ಗುರುವಿರಾಜಮಾನನಾಗಿರುವುದನ್ನು ಕಾಣುವತನಕ ಎಲ್ಲಿ ನೋಡಿದಲ್ಲಿ ಶಿವಾನುಘೋಷ. ಎಲ್ಲಿ ನೋಡಿದಲ್ಲಿ ವಾದ್ಯ ಮೇಳ. ಸ್ವಯಂಸ್ಫೂರ್ತಿಯಿಂದ ಎಲ್ಲರೂ ಸೇವೆ ಮಾಡತಕ್ಕವರು.

ನಿಷ್ಕಾಮ ಕರ್ಮವೆಂದರೇನು? ಎಂದು ತಿಳಿಯುವುದು ಜನಸಾಮಾನ್ಯರಿಗೆ ಬಹು ಜಡವೆನಿಸುತ್ತದೆ. ಅವರ ಕರ್ಮಗಳೆಲ್ಲ ಒಂದಿಲ್ಲೊಂದು ಆಶೆಯಿಂದ ಕೂಡಿದವುಗಳೇ ಹೊರತು ನಿರುದ್ದೇಶವಾಗಿರುವುದಿಲ್ಲ. ಸದ್ಗುರು ಸೇವೆಯಲ್ಲಿ ಅವರಿಗೆ ಯಾವ ಸ್ವಾರ್ಥದ ಉದ್ದೇಶವೂ ಇಲ್ಲ. ಪ್ರಪಂಚದಲ್ಲಿ ಸ್ವಾರ್ಥಪೂರಿತವಾದ ಕರ್ಮಗಳನ್ನು ಮಾಡುತ್ತ ಆಶೆ ನಿರಾಶೆಯ ಹೊಯ್ದಾಟವನ್ನನುಭವಿಸಿ, ದುಃಖಾಗ್ನಿಯ ದಳ್ಳುರಿಗೆ ಹುಪಳಿಸಿದ ಜೀವರಿಗೆಲ್ಲ ಸದ್ಗುರು ಸಾನಿಧ್ಯದಲ್ಲಿ ಶಾಂತಿ ದೊರೆಯುವುದು. ಅವರು ಇಲ್ಲಿಗೆ ಬಂದು ಬರಿ ದರ್ಶನ ಪಡೆದರೂ ಸಾಕು. ಸೇವೆ ಮಾಡದಿದ್ದರೂ ಸರಿ. ದೊರೆಯುವ ಸಮಾಧಾನ ಆನಂದ ವರ್ಷದ ಬುತ್ತಿ. ಮರುವರ್ಷ ಮತ್ತೆ ಉತ್ಸವ ಯಾವಾಗ ಬರುವದೋ ಎಂದು ಎಣಿಕೆ ಹಾಕುತ್ತ ದಿನಗಳೆಯುವಂತಾಗಬೇಕು. ಸಿದ್ಧನೀಗ ಭಕ್ತಪರಾಧೀನ. ಭಕ್ತರು ಸೇವೆ ಮಾಡಿದಂತೆ ಅವನು ಸ್ವೀಕರಿಸುವನು. ಅವನಿಗೆ ಬೇಕೆಂಬುದೂ ಇಲ್ಲ. ಬೇಡವೆಂಬುದೂ ಇಲ್ಲ. ಸ್ವತಃ ಅಖಂಡ ಸಚ್ಚಿದಾ

ನಂದ ಮೂರ್ತಿ. ಆದರೆ ಭಕ್ತರ ವಶವರ್ತಿ. ಆನಂದದ ಮಹಾಪ್ರವಾಹ. ಬೇಕಾದವರು ಬೇಕಾದಂತೆ ಅದರ ಉಪಯೋಗ ಪಡೆಯಲಿ. ತುಂಬುವಂತಿಲ್ಲ ತುಳುಕುವಂತಿಲ್ಲ. ಯಾವಾಗಲೂ ನಿರ್ವಿಕಾರ. ಆದರೂ ಪರಿಪೂರ್ಣ.

ಸಿದ್ಧನಿಂದ ಹೀಗೆ ಲೋಕೋದ್ಧಾರ ಕಾರ್ಯ ಬಹುಮುಖವಾಗಿ ಸಾಗುತ್ತಿತ್ತು. ನಿತ್ಯ ಆಶ್ರಮದಲ್ಲಿ ಬಹುತರವಾಗಿ ಭಾಗವತ ಪುರಾಣ ಸಾಗಬೇಕು. ನಾಮ ಘೋಷ ನಡೆಯಬೇಕು. ದೂರದಿಂದ ದರ್ಶನಾಪೇಕ್ಷಿಗಳಾಗಿ ಬಂದವರ ಸತ್ಕಾರ ಸಾಗಬೇಕು. ಹೀಗಿರಲು ಒಂದು ಸಾರೆ ಒಬ್ಬ ಬಾಲಕ. ಪೂರ್ವ ಜನ್ಮದ ಯಾವ ಸುಕೃತವೋ. ಶಾಶ್ವತವಾದ ಸುಖದ ಹಂಬಲು ಮನದಲ್ಲಿ ತೋರಿ ಸಂಸಾರಕ್ಕೆ ಬೇಸತ್ತು ಹೋದನು. ಆದರೆ ಸುಖದ ಮಾರ್ಗ ತಿಳಿಯು ಹಾಯಿತು. ಸದ್ಗುರುವಿನ ಹೊರತೂ ತಿಳಿಯದೆಂದು ಮನಗಂಡು ಶೋಧಿಸ ತೊಡಗಿದನು. ಊರೂರು, ದೇಶ-ದೇಶ ಸುತ್ತಿದನು ಸದ್ಗುರು ಸಿಕ್ಕಲಿಲ್ಲ. ಗುರು ಮತ್ತು ಶಿಷ್ಯರ ಸಂಬಂಧವು ಕೂಡಿ ಬರಲು ಪ್ರಾಚೀನ ಋಣಾನುಬಂಧವೂ ಇರಬೇಕೆಂದು ಬಲ್ಲವರು ಹೇಳುವರು. ಯಾರದೋ ಮುಖದಿಂದ ಸಿದ್ಧಾರೂಢ ಸ್ವಾಮಿಯ ಮಹಿಮೆಯನ್ನು ಕೇಳಿದನು. ಅಲ್ಲಿಯೇ ಶಾಂತಿ ದೊರೆಯುವುದೆಂದು ಮನಸ್ಸು ಹೇಳಿತು. ಹುಬ್ಬಳ್ಳಿಗೆ ಬಂದು ಸದ್ಗುರುವನ್ನು ಕಂಡನು. ದೂರ ದರ್ಶನದಿಂದಲೇ ಮನಸ್ಸು ಅರಳಿತು. ನಮಸ್ಕರಿಸಿಸ್ತುತಿಸಿದನು. 'ಸದ್ಗುರುನಾಥನೇ, ಸಂಸಾರದಲ್ಲಿ ನಾನು ಬಹಳ ಬಳಲಿದ್ದೇನೆ. ಇದರಲ್ಲಿ ಸುಖ ದೊರೆಯಲಾರದೆಂದು ಮನಗಂಡು ನಿನ್ನ ಸನ್ನಿಧಿಗೆ ಬಂದಿದ್ದೇನೆ. ಉದ್ಧರಿಸಬೇಕು; ಎನ್ನುತ್ತ ಕೈಮುಗಿದು ನಿಲ್ಲಲು ಸಿದ್ಧನು 'ಇವನಂತೂ ಅಧಿಕಾರಿಯಂತೆ ಕಾಣುತ್ತಾನೆ. ಆದರೂ ಪರೀಕ್ಷಿಸಿ ನೋಡಬೇಕು' ಎಂದುಕೊಂಡು ಯಾವ ಭಾವವನ್ನು ತೋರದಾದನು. ಅದರಿಂದ ಆ ಬಾಲಕನು 'ಅಯ್ಯೋ, ನಾನು ಎಷ್ಟು ಆಶೆಯಿಂದ ಇಲ್ಲಿಗೆ ಬಂದೆ. ಸದ್ಗುರು ನನ್ನ ವಿಷಯದಲ್ಲಿ ಉದಾಸೀನನಾದನು. ಯಾಕೆ ನಾನು ಸದ್ಗುರು ಕೃಪೆಗೆ ಇದುವರೆಗೆ ಪಾತ್ರನಾಗಿರಲಿಕ್ಕಿಲ್ಲವೇ? ಯಾರು ಬಲ್ಲರು? ಹಾಗೂ ಇರಬಹುದು. ಗುರುಸೇವೆಯನ್ನು ಮಾಡಿ ಮೊದಲು ಪಾತ್ರನಾಗುತ್ತೇನೆ.' ಎಂದು ನಿರ್ಧಾರ ಮಾಡಿಕೊಂಡು ಸೇವೆಯಲ್ಲಿ ನಿಮಗ್ನನಾದನು. ಅವನಿಗೆ ಸೇವೆ ಸಿಕ್ಕರಾಯಿತು. ತನ್ನ ದೇಹದ ಪರಿವೆಯೂ ಉಳಿಯುತ್ತಿರಲಿಲ್ಲ. ನಡು ನಡುವೆ

ಸದ್ಗುರು ತೆಗೆದುಕೊಳ್ಳುವ ಪರೀಕ್ಷೆ ಬೇರೆ. ಆಗೊಮ್ಮೆ ಈಗೊಮ್ಮೆ ಹೊಟ್ಟೆಗೆ ಅನ್ನವೂ ಆಶ್ರಮದಲ್ಲಿ ದೊರಕಲಿಕ್ಕಿಲ್ಲ. ಹಾಗಾದರೇನು? ಸಿಟ್ಟೂ ಇಲ್ಲ. ದುಃಖವೂ ಇಲ್ಲ. ಭಕ್ತಿಯಿಂದ ಸೇವಿಸುವುದೇ ಮನೋಭಾವ. ಕೆಲವು ದಿನ ಪರೀಕ್ಷಿಸಿ ಕೊನೆಗೆ ಸದ್ಗುರುನಾಥನು ಮೆಚ್ಚಿ ಕಬೀರನೆಂದು ಅವನಿಗೆ ನಾಮಕರಣ ಮಾಡಿದನು. ಸದ್ಗುರುವಿನ ಕೃಪಾದೃಷ್ಟಿ ತಿರುಗಿದ ಮೇಲೇನು? ಕಬೀರನನ್ನು ಒಂದು ದಿನ ಬಳಿಯಲ್ಲಿ ಕರೆದು ಕುಳಿತುಕೋ ಎಂದು ಹೇಳಲು ಕಬೀರ ಕುಳಿತುಕೊಳ್ಳದೇ ಗುರುಪಾದಗಳಲ್ಲಿ ಹಣೆಯಿಟ್ಟು ಆನಂದ ಬಾಷ್ಪಗಳಿಂದ ತೊಳೆದು ಕೈಮುಗಿದು ನಿಂತು ದೂರ ಸರಿದನು. ಗುರು-ಶಿಷ್ಯರಲ್ಲಿ ಪ್ರಶ್ನೋತ್ತರ ಸಾಗಿದವು.

'ಜ್ಞಾನದಿಂದ ಮೋಕ್ಷವಾಗುವುದು. ನಿತ್ಯಾನಂದ ವಸ್ತು ವಿವೇಕದಿಂದ ಜ್ಞಾನವಾಗುವುದು. ಎಂದಮೇಲೆ ಮೋಕ್ಷಾಪೇಕ್ಷಿಯು ಇತರ ಸಾಧನಗಳನ್ನೇಕೆ ಅಳವಡಿಸಿಕೊಳ್ಳಬೇಕು?

'ತೀವ್ರ ವೈರಾಗ್ಯವಿಲ್ಲದಿದರೆ ವಿವೇಕವು ಬರಿ ವಿಚಾರ ಮಾತ್ರವಾಗುವುದು.'

'ಒಳ್ಳೇದು ವಿವೇಕ ಮತ್ತು ವೈರಾಗ್ಯಗಳೆರಡಾದರೆ ಸಾಕಲ್ಲವೇ?'

'ಅವೆರಡೂ ಬರಿ ಮನೋಧರ್ಮಗಳೆನಿಸದೇ ಚನ್ನಾಗಿ ಮೈಗೂಡಬೇಕು. ಅಂದರೆ ಕ್ಷಮೆ-ದಯೆ-ತಿತಿಕ್ಷಾದಿ ಸಾಧನಗಳನ್ನು ಅವಶ್ಯವಾಗಿ ಆಚರಿಬೇಕಾಗುವುದು.'

'ಆಗ ಮಾತ್ರ ಆನಂದಾನುಭವ. ಎಂದು ನಿನ್ನ ಅಭಿಪ್ರಾಯವೇ? ಹುಚ್ಚ, ಒಂದು ಊರಿಗೆ ಅನೇಕ ಮಾರ್ಗಗಳಿರುವಂತೆ ಪ್ರಪಂಚದಲ್ಲಿ ಆನಂದಾನುಭವಕ್ಕೆ ಅನೇಕ ಮಾರ್ಗಗಳುಂಟು. ಲೋಕಕ್ಕೆ ಆನಂದಾನುಭವ ದೊರೆಯಲೆಂದೇ ಎಲ್ಲ ಶಾಸ್ತ್ರಗಳು ಹುಟ್ಟಿರುವವೆಂದು ಶಾಸ್ತ್ರಕಾರರು ಪ್ರತಿಜ್ಞೆ ಮಾಡಿ ಹೇಳುತ್ತಾರೆ. ಅಂದಮೇಲೆ ವೇದಾಂತ ಶಾಸ್ತ್ರವನ್ನು ಅನುಸರಿಸಿಯೇ ಸುಖ ಪಡೆಯಬೇಕೆಂದು ಅರ್ಥವಾಗುವುದಿಲ್ಲ. ಅಲ್ಲದೇ ವೇದಾಂತ ಶಾಸ್ತ್ರದ ಮಾರ್ಗ ಬಹಳ ಕಠಿಣ. ಮನುಷ್ಯನ ಸ್ವಾಭಾವಿಕ ಆಶೆ ಮೋಹಗಳನ್ನು ಹತ್ತಿಕ್ಕುವಂಥದು.'

'ಹಾಗಾದರೆ ನಾನೇನು ಮಾಡಲಿ?'

'ನಿನಗೆ ಸುಖವಾಗುವ ಸುಲಭ ಸಾಧನವನ್ನು ಹೇಳುತ್ತೇನೆ. ನೀನು ತಂತ್ರಶಾಸ್ತ್ರವನ್ನು ಅಭ್ಯಾಸ ಮಾಡು. ಅದರಲ್ಲಿ ಆಕರ್ಷಣ-ಜಾರಣ-ಮರಣ ಅನೇಕ ಸಿದ್ಧಿಗಳಿವೆ. ಅವುಗಳನ್ನು ನೀನು ಸಾಧಿಸಿಕೊಂಡರೆ ಜನರಿಗೆ ಅನೇಕ ಬಗೆಯಿಂದ ಉಪಯೋಗವಾಗುವುದು. ನಿನಗೆ ಮಾನ-ಸನ್ಮಾನ ದೊರೆಯುವುದು. ಧನವೂ ದೊರೆಯುವುದು. ಧನಕೊಟ್ಟರೆ ದೊರೆಯಲಾರದಂಥ ಸುಖ ಲೋಕದಲ್ಲಿ ಯಾವುದೂ ಇಲ್ಲ. ನೀನು ನನ್ನ ಸೇವೆ ಮಾಡಿ ಕೃಪಾಪಾತ್ರನಾದ ಕಾರಣ ಈ ರಹಸ್ಯವನ್ನು ಹೇಳುತ್ತೇನೆ.'

'ಕ್ಷಣಮಾತ್ರ ತೃಪ್ತಿಯನ್ನು ಕೊಡುವ ಇಂದ್ರಿಯಗಳ ಲಾಲನೆಯೂ, ಎಂದಾದರೊಂದು ದಿನ ನಾಶವಾಗುವಂಥ ದೇಹದ ಪೋಷಣೆಯೂ, ಅಹಂಕಾರವನ್ನು ಬೆಳೆಸುವ ಮಾನ-ಸನ್ಮಾನವೂ ನನಗೆ ಬೇಡ. ಇದು ಶಾಶ್ವತ ಸುಖದ ಮಾರ್ಗವಲ್ಲವೆಂದು ನಾನು ತಿಳಿದಿದ್ದೇನೆ.'

'ಹಾಗಾದರೆ ಸಗುಣೋಪಾಸನೆ ಮಾಡಿ ಪುಣ್ಯ ಲೋಕಗಳನ್ನು ಪಡೆ. ಅಂದರೆ ಆ ಲೋಕದಲ್ಲಿ ದೊರೆಯುವ ಸುಖಕ್ಕೆ ನೀನು ಭಾಗಿಯಾಗಿರುವೆ.'

'ಆದರೆ ಗುರುದೇವಾ, ಪುಣ್ಯವು ತೀರಿದ ನಂತರ ಮತ್ತೆ ಪುನರ್ಜನ್ಮ ಹೊಂದಬೇಕಾಗುವುದೆಂದು ಶಾಸ್ತ್ರಗಳು ಹೇಳುವವಲ್ಲ. ನಿನ್ನ ಅನುಗ್ರಹದಿಂದ ಜನನ-ಮರಣ ರಹಿತನಾಗಿ ಶಾಶ್ವತ ಸುಖ ಪಡೆಯಬೇಕೆಂದು ನಾನು ಬಂದವನು. ನಿನ್ನ ಮಾತುಗಳ ಮೇಲಿಂದ ನಾನಿನ್ನೂ ಆ ಸುಖ ಪಡೆಯುವಷ್ಟು ಪಾತ್ರತೆಯನ್ನು ಹೊಂದಿಲ್ಲವೆಂದು ತಿಳಿಯುವುದು. ಆಗಲಿ. ನನಗೆ ಯಾವ ಸುಖವೂ ಬೇಡ. ಯಾವ ಲೋಕವೂ ಬೇಡ. ದೊರೆಯುವುದಾದರೆ ಶಾಶ್ವತ ಸುಖ ದೊರೆಯಲಿ. ಅದನ್ನು ಪಡೆಯುವ ಪಾತ್ರತೆ ಹೇಗೆ ದೊರಕುವುದೆಂಬುದನ್ನು ನನಗೆ ತಿಳಿಸು. ಇಷ್ಟೇ ನನ್ನ ಪ್ರಾರ್ಥನೆ.'

ಎಂದು ನುಡಿದು ಕಬೀರನು ಕಣ್ಣೀರ್ಗರೆಯುತ್ತ ನಿಂತುಕೊಳ್ಳಲು ಸಿದ್ಧನ ಮನಸ್ಸು ಕರಗಿತು. ಇಂಥ ಉತ್ತಮಾಧಿಕಾರಿಯನ್ನು ಇನ್ನೂ ಪರೀಕ್ಷಿಸುವುದು ಉಚಿತವಲ್ಲವೆನಿಸಿತು. ಆಗ ಸಿದ್ಧನು ಪ್ರೇಮದಿಂದ 'ಕಬೀರಾ, ನಿನ್ನ ಅಪೇಕ್ಷೆಯಾದರೂ ಏನು? ಸ್ಪಷ್ಟವಾಗಿ ಹೇಳು.' ಎಂದನು. ಕಬೀರನು ನಮ್ರತೆಯಿಂದ 'ಗುರುನಾಥನೇ, ಮೋಕ್ಷವು ಕರ್ಮದಿಂದ ದೊರೆಯುವುದು ಎಂದು ಕೆಲವರು. ಜ್ಞಾನ ಮತ್ತು ಕರ್ಮಗಳು ಕೂಡಿ ದೊರೆಯುವುದೆಂದು

ಮತ್ತೊಬ್ಬರು. ಕೇವಲ ಜ್ಞಾನದಿಂದ ಮಾತ್ರ ಮೋಕ್ಷ ದೊರೆಯುವುದೆಂದು ಇತರರು ಹೇಳುತ್ತಾರೆ. ಈ ಮೂರು ಪಕ್ಷಗಳಲ್ಲಿ ಯಾವುದು ನಿಜವೆಂಬುದನ್ನು ತಿಳಿಸಬೇಕು.' ಎಂದು ನುಡಿಯಲು ಸದ್ಗುರುವು 'ಕರ್ಮದಿಂದ ಮೋಕ್ಷ ದೊರೆಯುವುದೆನ್ನುವರು ಒಂದು ಮಾತನ್ನು ಮರೆಯುತ್ತಾರೆ. ಮೋಕ್ಷವೆಂದರೆ ಪ್ರಪಂಚದಿಂದ ಬಿಡುಗಡೆ. ಎಂದರೆ ಅಖಂಡ ಸಚ್ಚಿದಾನಂದ ಲಾಭ. ಇದು ಕರ್ಮದಿಂದ ದೊರೆಯುವುದೆಂದರೆ ಕರ್ಮ ನಾಶವಾಗಲು ಮೋಕ್ಷವೂ ನಾಶವಾದಂತೆ. ಈ ಪಕ್ಷವಂತೂ ಪೂರ್ಣ ತ್ಯಜ್ಯವಾಗಿದೆ. ಇನ್ನು ಜ್ಞಾನ–ಕರ್ಮಗಳನ್ನು ಕೂಡಿಸುವ ಪಕ್ಷವು ಅರ್ಧ ಸತ್ಯವಾದ ಕಾರಣ ಅದೂ ತ್ಯಾಜ್ಯವೆನಿಸುವುದು. ಜ್ಞಾನದಿಂದಲೇ ಮೋಕ್ಷವೆಂದು ಎಲ್ಲ ಶ್ರುತಿ–ಸ್ಮೃತಿಗಳು ಸಾರಿ ಹೇಳುತ್ತವೆ. ಅದು ಅನುಭವಕ್ಕು ಹೊಂದುತ್ತದೆ.' ಎಂದು ನುಡಿದನು.

ಇದರಿಂದ ತನಗಿರುವ ಸಂದೇಹ ಪರಿಹಾರವಾಯಿತೆಂದು ಕಬೀರನು ಆನಂದಿತನಾಗಿ 'ಸದ್ಗುರುವೇ. ಇಂದು ನಾನು ಧನ್ಯನಾದೆನು. ನನ್ನ ಸಂಚಿತ ಪುಣ್ಯವಿದ್ದಿತೆಂದು ನಿನ್ನಂಥ ಜ್ಞಾನನಿಧಿಯ ದರ್ಶನವಾಯಿತು. ನನಗೆ ಒಂದು ಅಪೇಕ್ಷೆಯುಂಟು. ಅದನ್ನೂ ಪೂರ್ಣ ಮಾಡಬೇಕು.' ಎನ್ನಲು ಗುರುನಾಥನು ಅದೇನು ? ಎಂದು ಕೇಳಿದನು.

ನಾನು ಶ್ರೀ ಸದ್ಗುರು ಮಹಿಮೆಯನ್ನು ಕನ್ನಡ ಭಾಷೆಯಲ್ಲಿ ಬರೆದು ಒಂದು ಗ್ರಂಥ ರಚಿಸಬೇಕೆಂದು ಯೋಚಿಸಿರುವೆನು. ಅದನ್ನು ಓದಿದವರು ಕೇಳಿದವರು ಪಾವನರಾಗುವರು. ಆದಕಾರಣ ಗ್ರಂಥರಚನೆ ಮಾಡಲು ನನಗೆ ಅಪ್ಪಣೆ ಕೊಡಬೇಕು.

ಎಂದು ಕಬೀರ ಬೇಡಿಕೊಳ್ಳಲು ಸದ್ಗುರುನಾಥನು ಪ್ರೇಮಪೂರ್ವಕವಾಗಿ ಆಶೀರ್ವದಿಸಿ ಶಿಷ್ಯನ ಮೈದಡವಿದನು. ಗುರುವಿನ ಸ್ಪರ್ಶವು ಕಬೀರನಿಗೆ ರೋಮಾಂಚವನ್ನುಂಟು ಮಾಡಿತು. ಕಂಗಳಲ್ಲಿ ಆನಂದ ಬಾಷ್ಪಗಳು ತೋರಿದವು.

ಮುಂದೆ ಕಬೀರನು ರಸಭರಿತನಾಗಿ ಸದ್ಗುರು ಮಹಿಮೆಯನ್ನು ವರ್ಣಿಸುವ ಶ್ರೇಷ್ಠ ಗ್ರಂಥವನ್ನು ರಚಿಸಿ ಗುರುಕೃಪೆಗೆ ಪಾತ್ರನಾದನು.

————

೧೪

ಉರಿಯುದಕ ಮಾರುತವು। ಉರಗಹರಿನಾಗವು।
ಗುರುವಾಜ್ಞೆಗಂಜಿ ನಿಲುವವು। ಇದನು ನರ।
ರರಿಯದಲೆ ಕೆಡುಗು- —ಸರ್ವಜ್ಞ

ಅಗ್ನಿಸ್ತಂಭನ-ಜಲಸ್ತಂಭನ-ವಾಯುಸ್ತಂಭನ ಇದೇನು ಜ್ಞಾನಿಗಳಿಗೆ ಪಂಚಮಹಾಭೂತಗಳ ಮೇಲೆ ಪ್ರಭುತ್ವವೇ? ಯಾಕೆ ಇರಬಾರದು? ಜ್ಞಾನಿಗಳಿಗೆ ಈಶ್ವರ ತನಗಿರುವ ಶಕ್ತಿಗಳನ್ನೆಲ್ಲ ಕೊಡುವೆನೆಂದು ಶಾಸ್ತ್ರ ಹೇಳುತ್ತವೆ. ಯಾಕಂದರೆ ಜ್ಞಾನಿ ಭಗವಂತನ ಆತ್ಮ. ಅದರಂತೆ ದುಷ್ಟ ಜೀವಿಗಳೆನಿಸುವ ಹಾವು-ಹುಲಿ-ಸಿಂಹ ಘಟಸರ್ಪಗಳನ್ನು ಜ್ಞಾನಿ ತಡೆದು ನಿಲ್ಲಿಸಬಲ್ಲನು. ಯಾಕಂದರೆ ಅವನು ಎಲ್ಲ ಜೀವಿಗಳಿಗೆ ಅಭಯ ದಾನ ಮಾಡಿ ಜ್ಞಾನ ಪಡೆದಿರುತ್ತಾನೆ. ಅವನ ಅಹಿಂಸಾಬಲವೇ ಅಂಥದು.

ಕಾರವಾರ ಜಿಲ್ಹೆಯ ಕುಮಟಾ ನಗರದಲ್ಲಿ ಹರಿಹರನೆಂಬ ದರಿದ್ರ ಬ್ರಾಹ್ಮಣ. ಅವನ ಹೆಂಡತಿ ಸರಸ್ವತಿ. ದಟ್ಟದರಿದ್ರರಾದರೂ ಕೃಷ್ಣನ ಉಪಾಸನೆ ಮಾಡುತ್ತ ಯಾವಾಗಲೂ ಅವನ ನಾಮವನ್ನು ನೆನೆಯುತ್ತಿದ್ದರು. ಹುಟ್ಟಾ ಸಾತ್ವಿಕರಾದ ಅವರಿಗೆ ಭಗವದುಪಾಸನೆಯಿಂದ ಚಿತ್ತಶುದ್ಧವಾಗಿ ಪ್ರಪಂಚ ವಿಷಯದಲ್ಲಿ ತೀವ್ರ ವೈರಾಗ್ಯವುಂಟಾಯಿತು. ಸನ್ಯಾಸ ತೆಗೆದುಕೊಳ್ಳಬೇಕೆಂಬ ವಿಚಾರ ಬಂದು ಹೋಯಿತು. ಗುರುಬೋಧವಿಲ್ಲದೇ ಸನ್ಯಾಸ ತೆಗೆದುಕೊಂಡರೂ ಲಾಭವಿಲ್ಲ. ಕೇವಲ ಹೊರಗಿನ ವೈರಾಗ್ಯ ಚಿಹ್ನಗಳಿಂದ ಮನಸ್ಸಿನ ವ್ಯಾಮೋಹ ಕಳೆಯಲಾರದೆಂದು ಹರಿಹರನು ಭಾವಿಸಿದನು. ಈಗ ಪ್ರಪಂಚವಂತೂ ಬೇಡಾಗಿದೆ. ಸನ್ಯಾಸ ತೆಗೆದುಕೊಂಡರೂ ಲಾಭವಿಲ್ಲ. ಹಾಗಾದರೆ ಗತಿ ಏನು? 'ಜಗದ್ಗುರುವಾದ ಶ್ರೀಕೃಷ್ಣನೇ ನೀನೇ ಮಾರ್ಗ ತೋರು.' ಎಂದು ಪ್ರತಿದಿನ ದೇವರನ್ನು ಪ್ರಾರ್ಥಿಸತೊಡಗಿದನು.

ಒಂದು ದಿನ ಯಾರ ಮುಖದಿಂದಲೋ ಹುಬ್ಬಳ್ಳಿಯ ಸಿದ್ಧಾರೂಢ ಸದ್ಗುರುವಿನ ಮಹಿಮೆಯನ್ನು ಕೇಳಿದನು. ಪ್ರತ್ಯಕ್ಷ ಶಿವವತಾರವೆಂದೇ ಭಕ್ತರು ಗುರುವನ್ನು ತಿಳಿಯುವರು. ಅದನ್ನು ಕೇಳಿ ಹರಿಹರ ತನ್ನ ಪೂರ್ವ ಪುಣ್ಯ ಫಲಿಸಿತೆಂದುಕೊಂಡು ಹುಬ್ಬಳ್ಳಿಗೆ ಹೊರೆಡುವ ಸಿದ್ಧತೆ ಮಾಡಿಕೊಳ್ಳ

ತೊಡಗಿದನು. ಆಗಿನ ಸಮಯದಲ್ಲಿ ಹಾಗೆ ಒಮ್ಮೆಲೇ ಬಿಟ್ಟು ಬಂದರೆ ಪ್ರಪಂಚ ವಿಷಯದಲ್ಲಿ ಕೆಲವು ಹಾನಿಗಳೂ ಸಂಭವಿಸುತ್ತಿದ್ದವು. ಮನಸ್ಸಿನಲ್ಲಿ ಮೋಹವಿರುವವರೆಗೆ ಲಾಭ-ಹಾನಿಯ ಲೆಕ್ಕವಿರತಕ್ಕುದೇ. ಇದಕ್ಕೆ ಮುಗಿತಾಯವೆಂಬುದಿಲ್ಲ. ಶ್ರೀಕೃಷ್ಣ ಮಾಡಿಸಿದಂತಾಗಲಿ. ಎಂದುಕೊಂಡು ಎಲ್ಲವನ್ನು ಅಲ್ಲಿಂದಲ್ಲಿಯೇ ಬಿಟ್ಟು ಹೆಂಡತಿಯೊಡನೆ ಹುಬ್ಬಳ್ಳಿಗೆ ಬಂದು ಗುರುವು ಇರುವ ಸ್ಥಾನವನ್ನು ವಿಚಾರಿಸುತ್ತ ಸಿದ್ಧಾಶ್ರಮಕ್ಕೆ ಬಂದನು. ಅಲ್ಲಿಯ ಸೊಬಗು, ಆ ಪವಿತ್ರ ವಾತಾವರಣ ಇವುಗಳಿಂದ ಅವನಿಗಾದ ಶ್ರಮವು ಪರಿಹಾರವಾದಂತಾಯಿತು.

ಸೂರ್ಯನ ಆರಾಧನೆಯಿಂದ ಆರೋಗ್ಯವನ್ನಿಚ್ಛಿಸಬೇಕು. ಇಲ್ಲಿ ಸದ್ಗುರುವಿನ ಬಳಿಯಲ್ಲಿ ಅವನನ್ನು ಆರಾಧಿಸುವುದು ಮುಂದಿನ ಮಾತು. ದರ್ಶನ ಮಾತ್ರದಿಂದ ಶಾಂತಿ ಪಡೆಯಬೇಕು. ಅವನ ಜ್ಞಾನ ತೇಜದಿಂದ ದರ್ಶನ ಹೊಂದಿದವರ ಮನಸ್ಸಿನ ಕತ್ತಲೆ ಕಳೆಯುವುದು. ಪ್ರಸನ್ನ ಮುಖ ಮಂಡಲ ಕಂಡು ಹೃದಯವು ಅರಳುವುದು. ಪಾಪ ನಾಶವಾಗುವುದು. ಇಂಥ ಸದ್ಗುರುವನ್ನು ಕಂಡು ಆ ದಂಪತಿಗಳು ಅವರ ಪಾದ ಕಮಲಗಳಲ್ಲಿ ಹಣೆ ಇಟ್ಟು ಪ್ರೇಮಾಶ್ರುಗಳನ್ನು ಕಳೆದರು. ಅವರ ನಿರ್ಮಲ ಭಕ್ತಿಯನ್ನು ಕಂಡು ಸದ್ಗುರುವಿಗೆ ಸಂತೋಷವೆನಿಸಿ ಅವರನ್ನು ಹಿಡಿದೆತ್ತಿ ಸಮಾಚಾರವನ್ನು ವಿಚಾರಿಸಿದನು.

'ಅಯ್ಯ, ನೀವು ಎಲ್ಲಿಯವರು? ಇಲ್ಲಿಗೆ ಬಂದ ಉದ್ದೇಶವೇನು?'

ಹರಿಹರ ನುಡಿದನು.

'ಸದ್ಗುರುನಾಥನೇ, ನಾವು ಕುಮಟೆಯವರು. ಸಂಸಾರದಲ್ಲಿ ನೊಂದು ಬೆಂದು ಸಂತಪ್ತರಾಗಿ ದಯಾಘನನಾದ ನಿನಗೆ ಶರಣು ಬಂದೆವು. ನಮ್ಮನ್ನು ಉದ್ಧಾರ ಮಾಡು.'

'ಅಂಜಬೇಡ. ಭಾವಕ್ಕೆ ತಕ್ಕ ಫಲ ದೊರೆತೇ ತೀರುವುದು.'

ಎಂದು ಅಂತಃಕರಣ ಪೂರ್ವಕವಾಗಿ ಗುರುನಾಥನು ಆಶ್ವಾಸನ ಕೊಡಲು ಅವರು ಹರ್ಷಿತರಾಗಿ ಅಲ್ಲಿಯೇ ವಸತಿಯನ್ನು ಮಾಡಿದರು. ದೇಹಾಭಿಮಾನವಂತೂ ಅವರಿಗೆ ಇರಲೇ ಇಲ್ಲ. ಅದರಿಂದ ಗುರು ಸೇವಾ ಕಾರ್ಯವು ನಿರ್ವಂಚನೆಯಿಂದ ಸಾಗಿತು. ಗುರುಗಳ ಅಪ್ಪಣೆಯಂತೆ ಪ್ರತಿದಿನ ವೇದಾಂತ

ಶ್ರವಣಕ್ಕೂ ಅವರು ಬರುತ್ತಿದ್ದರು. ನಾಮಸ್ಮರಣೆಯಂತೂ ಇದ್ದೇಇತ್ತು. ಹೀಗೆ ಅವರು ಸಾಧನೆ ಮಾಡತೊಡಗಲು ಮೈಮಾತು-ಮನಗಳು ಶುದ್ಧವಾಗಿ ಅಪೂರ್ವವಾದ ಶಾಂತಿಯುಂಟಾಯಿತು. ಹೊಟ್ಟೆ ತುಂಬಿಕೊಳ್ಳುವುದಕ್ಕೆ ಭಿಕ್ಷೆ ಬೇಡಬೇಕು. ಪ್ರತಿದಿನ ಈ ರೀತಿ ಸಾಧನೆ ಮಾಡಬೇಕು. ಅವರ ತತ್ಪರತೆ ನಿಷ್ಠೆ-ಗುರುಪ್ರೇಮಗಳನ್ನು ಕಂಡವರು ಧನ್ಯರೆನ್ನಬೇಕು. ಸಹೃದಯರ ಸ್ತುತಿಯ ಕಡೆಗೂ ಅವರ ಲಕ್ಷವಿಲ್ಲ. ಕುಹಕಿಗಳ ನಿಂದೆಯ ಕಡೆಗೂ ಅವರ ಲಕ್ಷವಿಲ್ಲ. ಹೀಗೆ ಒಂದು ವರ್ಷವು ಪೂರ್ಣವಾಗಿ ಕಳೆಯಿತು. ಆಗ ಯಾವುದೋ ಒಂದು ಮಹತ್ವದ ಕಾರ್ಯ ನಿಮಿತ್ತವಾಗಿ ಕುಮಠೆಗೆ ಹೋಗ ಬೇಕಾದ ಪ್ರಸಂಗವು ಹರಿಹರನಿಗೊದಗಿತು.

ಸದ್ಗುರುನಾಥನನ್ನು ಅಗಲಿ ಹೋಗಬೇಕಾಗುವುದೆಂದು ಕಣ್ಣೀರ್ಗರೆದರು. ಪ್ರಯಾಣ ಕಾಲವೊದಗಲು ಗುರುಸನ್ನಿಧಿಗೆ ಬಂದು ಕೈಮುಗಿದು ಪ್ರಾರ್ಥಿಸಿದರು. 'ಗುರುದೇವನೇ, ಪ್ರಪಂಚವು ಸಾಕೆಂದು ಉದ್ಧಾರಕರಾದ ನಿನ್ನ ಸನ್ನಿಧಿಗೆ ಬಂದು ಸೇರಿದರೂ ಪ್ರಪಂಚಪಾಶವು ಇಲ್ಲಿಗೂ ಬಂದು ಸುತ್ತು ಹಾಕಿತಲ್ಲ. ದುರ್ದೈವಿಗಳಾದ ನಮ್ಮ ಕರ್ಮವು ಇನ್ನೂ ತೀರಿದಂತಿಲ್ಲ. ಊರಿಗೆ ಹೋಗುತ್ತೇವೆ. ಆದರೆ ಎಲ್ಲಿದ್ದರೂ ನಿನ್ನ ಕೃಪಾದೃಷ್ಟಿ ನಮ್ಮ ಮೇಲಿರಬೇಕು. ನಮ್ಮನ್ನು ಮರೆಯಬೇಡ. ಬೇಗನೇ ನಿನ್ನ ಸನ್ನಿಧಿಗೆ ಬರುವಂತೆ ಅನುಗ್ರಹ ಮಾಡು.'

ಅವರ ಪ್ರಾರ್ಥನೆಯನ್ನು ಮನ್ನಿಸಿ ಸದ್ಗುರುವು ಚಿಂತಿಸಬೇಡಿರಿ. ನಿಮ್ಮ ಸಾಧನೆಯು ಈಶ್ವರನಿಗೆ ಮೆಚ್ಚಿಗೆಯಾಗಿದೆ. ಗುರುಚಿಂತನೆ ಮಾಡುತ್ತ ನಿರ್ಭಯರಾಗಿ ಊರಿಗೆ ಹೋಗಿಬನ್ನಿರಿ. ನನ್ನ ದೃಷ್ಟಿ ಯಾವಾಗಲೂ ನಿಮ್ಮ ಮೇಲಿರುತ್ತದೆ.' ಎಂದು ನುಡಿಯಲು ಅವರು ಸಂತೋಷದಿಂದ ಗುರುವಿಗೆ ವಂದಿಸಿ ತಮ್ಮೂರಿಗೆ ನಡೆದರು.

ಮಾರ್ಗದಲ್ಲಿ ಅಖಂಡವಾಗಿ ನಾಮಸ್ಮರಣೆ ಮಾಡುತ್ತ ಸಾಗುತ್ತಿದ್ದರು. ನಡುನಡುವೆ ಮಾತಾಡುವುದೇ ಆದರೆ ಸಿದ್ಧನ ಮಹಿಮೆಯನ್ನು ಕೊಂಡಾಡುತ್ತ ರೋಮಾಂಚವನ್ನು ತಾಳುವರು. ಹೀಗೆ ಸಾಗಿರಲು ಒಂದು ದಟ್ಟವಾದ ಅರಣ್ಯವು ಬಂದಿತು. ಅಲ್ಲಿಯ ವೃಕ್ಷಗಳು ಮುಗಿಲು ಮುದ್ದಿಡುವಂತೆ ತೋರುತ್ತಿದ್ದವು. ವೃಕ್ಷಗಳ ಮಗ್ಗಲಿಗೆ ಕುರಚಲು ಕಂಟಿಗಳೂ, ಬಳ್ಳಿಗಳೂ

ಬೆಳೆದಿರುವುದರಿಂದ ಅರಣ್ಯದ ನಿಬಿಡತೆಯು ಹೆಚ್ಚಿತ್ತು. ಸೂರ್ಯ ಕಿರಣಗಳಿಗೂ ಅಲ್ಲಿ ಪ್ರವೇಶವಾಗದ್ದರಿಂದ ಹಗಲಿನಲ್ಲಿ ಕೂಡ ಅಲ್ಲಿ ಭಯವೆನಿಸುತ್ತಿತ್ತು ಅಲ್ಲದೇ ಜವುಳು ಪ್ರದೇಶವಾದುದರಿಂದ ಕ್ರಿಮಿಕೀಟಗಳು ಹುಲುಸಾಗಿ ಬೆಳೆದು ಕಿರ್ರೆಂದು ಕಿರಿಚುತ್ತಿದ್ದವು. ದೂರ-ದೂರ ಆಗೊಮ್ಮೆ ಈಗೊಮ್ಮೆ ವನ್ಯಮೃಗಗಳ ಗರ್ಜನೆ ಬೇರೆ. ನಡುವೆ ಬಲ್ಲವರಿಗೆ ಮಾತ್ರ ಸಾಧ್ಯವಾದ ಸೀಳುದಾರಿ. ಎಡಬಲಕ್ಕೆ ಆಳೆತ್ತರ ಬೆಳೆದ ಹುಲ್ಲು.

ಇಂಥ ಘೋರಾರಣ್ಯದ ದಾರಿಯಲ್ಲಿ ಅವರು ನಾಮಸ್ಮರಣೆ ಮಾಡುತ್ತ ಮೈಮರೆತು ಸಾಗುತ್ತಿದ್ದರು. ದಾರಿಕಾಣುವಷ್ಟು ಬೆಳಕು ವೃಕ್ಷಗಳ ದಟ್ಟ ಛಾಯೆಯನ್ನು ತೂರಿಕೊಂಡು ಬಂದಹಾಗಿತ್ತು. ನಿಜವಾಗಿಯೂ ಅದು ಭಯಂಕರ ಅರಣ್ಯ. ಆದರೂ ದೇವ-ಗುರು ಭಕ್ತರಾದ ಇವರ ಮನಸ್ಸು ನಿರ್ಭಯವಾಗಿತ್ತು. ಹೀಗಿರಲು ಒಮ್ಮೆ ಕಾರಣಾಂತರದಿಂದ ಗಂಡ ಹಿಂದುಳಿದಿದ್ದರೂ ಆ ಸ್ತ್ರೀಯು ನಾಮಸ್ಮರಣೆ ಮಾಡುತ್ತ ಮುಂದೆ ಸಾಗಿದಳು. ಅಷ್ಟರಲ್ಲಿ ಮಗ್ಗುಲಿನ ಪೊದೆಯಿಂದ ಘೋರಾಕಾರವಾದ ಒಂದು ಹುಲಿಯು ಹೊರಬಂದು ಸರಸ್ವತಿಯ ಮುಂದೆ ನಿಂತು ಕಣ್ಣು ಕೆಕ್ಕರಿಸಿ ನೋಡತೊಡಗಿತ್ತು. ನಾಮಸ್ಮರಣೆಯಲ್ಲಿ ಮೈಮರೆತ ಸರಸ್ವತಿಗೆ ಆ ವೇಳೆಯಲ್ಲಿ ಎಚ್ಚರವಿರಲಿಲ್ಲ. ಯಾಕೋ ಕಣ್ಣು ತೆರೆದಳು. ಎದುರಿನಲ್ಲಿ ಭಯಂಕರವಾದುದೊಂದು ಹುಲಿ. ಕ್ಷಣಮಾತ್ರ ಏನು ಮಾಡಬೇಕೆಂಬುದು ತಿಳಿಯದಾಯಿತು. ಅಷ್ಟರಲ್ಲಿ ಅರಣ್ಯ ನಡುಗುವಂತೆ ಹುಲಿ ಗರ್ಜಿಸಿತು, ಈಗ ಮಾತ್ರ ಸರಸ್ವತಿ ನಡುಗಿದಳು. ಥಟ್ಟನೆ ತಾವಿತ್ತ ಹೊರಟಾಗ ಗುರುದೇವನು ಆಶ್ವಾಸನ ಕೊಟ್ಟದ್ದು ನೆನಪಿಗೆ ಬಂದು 'ಓ ಸದ್ಗುರುನಾಥನೇ, ದಯಾವಂತನೇ, ಬೇಗನೆ ಬಂದು ನನ್ನನ್ನು ಕಾಪಾಡು.' ಎಂದು ಮೊರೆಯಿಡಲು ಸದ್ಗುರುವು ತತ್ಕಾಲಕ್ಕೆ ಅಲ್ಲಿ ಪ್ರಕಟನಾಗಿ ಅವಳ ಮೈಮೇಲೆ ಕೈಯಾಡಿಸಿ 'ಮಗಳೇ ನಾನು ಬಂದಿದ್ದೇನೆ. ಇನ್ನು ಹೆದರಬೇಡ' ಎಂದು ನುಡಿದು ಜಿಗಿಯುತ್ತ ಎದುರಿಗೆ ಬರುತ್ತಿರುವ ಹುಲಿಗೆ ತಡೆಯುವಂತೆ ಸಂಜ್ಞೆಮಾಡಿದನು. ಕೂಡಲೇ ಹುಲಿ ನಮ್ರತೆಯನ್ನು ತಾಳಿ ಕಾಲುಚಾಚಿ ವಂದಿಸುವುದೆನೋ ಎನ್ನುವಂತೆ ಕುಳಿತುಕೊಂಡಿತು. ಇಷ್ಟರಲ್ಲಿ ಅಲ್ಲಿಗೆ ಬಂದ ಸರಸ್ವತಿಯ ಪತಿಯು ನಡೆದ ಪ್ರಕಾರವನ್ನು ತಿಳಿದು 'ಭಕ್ತ ಕೈವಾರಿಯಾದ ಸದ್ಗುರುವೇ ನೀನು ವಚನ ಕೊಟ್ಟಂತೆ ನಮ್ಮನ್ನು ಸಂಕಟ

ದಿಂದ ಕಾಪಾಡಿದೆ. ದೇವರ ಕೋಪಗೊಂಡರೂ ಗುರುವು ಕಾಪಾಡುವನೆಂಬ ಮಾತಿನ ಸತ್ಯತೆ ಮನಗಂಡಾಯಿತು.' ಎನ್ನುತ್ತ ಬಗೆಬಗೆಯಾಗಿ ಸ್ತುತಿಸ ತೊಡಗಿದನು. ಸರಸ್ವತಿಗಂತೂ ಮೂರ್ಛೆಯಿಂದ ಎಚ್ಚರವೇ ಇರಲಿಲ್ಲ. ಸಿದ್ಧನ್ನು ಅವಳನ್ನು ಆಸರೆಕೊಟ್ಟು ಹಿಡಿದಿದ್ದನು. ತುಸು ವೇಳೆಯ ನಂತರ ಎಚ್ಚರಗೊಂಡ ಸರಸ್ವತಿಗೆ ನಡೆದ ವೃತ್ತಾಂತವೆಲ್ಲ ತಿಳಿದುಬರಲು ತಿರುತಿರುಗಿ ಗುರುವರನನ್ನು ವಂದಿಸಿದಳು. ಕುತ್ತಿಗೆ ಸೆರೆಗಳು ಬಿಗಿದು ಬಂದುದರಿಂದ ಕೆಲಹೊತ್ತು ಮಾತೇ ಹೊರಡಲಿಲ್ಲ.

ಹಿಂದಿನಿಂದ ಕೇಳಿದಳು 'ಸದ್ಗುರುನಾಥನೇ, ಇಲ್ಲಿಗೆ ನೀನು ಹೇಗೆ ಬಂದೆ?'

'ಮಗಳೇ, ನಿಮಗೆ ಮಾತು ಕೊಟ್ಟಂತೆ ಯಾವಾಗಲೂ ನಾನು ನಿಮ್ಮನ್ನು ರಕ್ಷಿಸುವುದು ನನ್ನ ಕಾರ್ಯ. ಈಗ ನನಗೆ ಮೋಕ್ಷದ ಚಿಂತೆಯಿಲ್ಲ. ಪುಣ್ಯ ಲೋಕಗಳನ್ನು ಪಡೆಯುವ ಬಯಕೆಯೂ ಇಲ್ಲ. ನನ್ನ ಭಕ್ತರು ಹೇಗೆ ಸುಖಿಗಳಾದಾರೆಂದು ನಾನು ಯಾವಾಗಲೂ ಚಿಂತಿಸುತಿರುವೆನು. ನೀವಿನ್ನು ಯಾವುದಕ್ಕೂ ಅಂಜುವ ಕಾರಣವಿಲ್ಲ.'

ಎಂದು ಸದ್ಗುರುನಾಥ ಅಭಯವನ್ನು ನೀಡುತಿರಲು ಆ ಹುಲಿಯು ಮೆಲ್ಲನೆದ್ದು ಅವರ ಬಳಿಯಲ್ಲಿ ಬಂದಿತು. ಅದನ್ನು ಕಂಡು ಆ ದಂಪತಿಗಳು ಗುರುವಿನ ಹಿಂದೆ ನಿಂತುಕೊಂಡರು. ಗುರುವು ಹುಲಿಯ ಬೆನ್ನು ಚಪ್ಪರಿಸಿ 'ಹುಲಿರಾಯನೇ, ಇನ್ನು ಮೇಲೆ ನೀನು ವ್ಯರ್ಥ ಹಿಂಸೆಯನ್ನು ಬಿಡಬೇಕು.' ಎಂದು ಹೇಳಿದನು ಹುಲಿಯು ನಮ್ರತೆಯನ್ನು ತಾಳಿ ಗುರುಪಾದ ಕಮಲ ಗಳಿಗೆ ವಂದಿಸಿ ಒಮ್ಮೆ ಗುಡುಗಿ ಅರಣ್ಯದಲ್ಲಿ ಹೊರಟು ಹೋಯಿತು. ಇದೆಲ್ಲ ನಿಜವಾಗಿ ಕೌತುಕವೇ ಆದರೆ ಜ್ಞಾನಿಗಳ ದೃಷ್ಟಿಯಲ್ಲಿ ಏನೂ ಅಲ್ಲ. ಅವರ ಹೊರಗೆ-ಒಳಗೆ ಅಹಿಂಸೆಯು ದೃಢವಾಗಿರುವದರಿಂದ ಜಾತಿ ವೈರವುಳ್ಳ ಪ್ರಾಣಿ ಗಳು ಕೂಡ ತಮ್ಮ ವೈರಭಾವವನ್ನು ಬಿಡುವವೆಂದು ಯೋಗ ಶಾಸ್ತ್ರದಲ್ಲಿ ಹೇಳಿದೆ.

ಆಗ ಸಿದ್ಧನು ಆ ದಂಪತಿಗಳಿಗೆ 'ನೀವಿನ್ನು ನಿರ್ಭಯವಾಗಿ ಊರಿಗೆ ಹೊರಡಬಹುದು' ಎಂದು ನುಡಿದು ನಾಲ್ಕಾರು ಹೆಜ್ಜೆ ಅವರೊಡನೆ ನಡೆದನೆ ನುವಷ್ಟರಲ್ಲಿ ಅಡಗಿ ಹೋದನು. ಭಕ್ತಿರಸದಲ್ಲಿ ಮಿಂದು ಪಾವನರಾದ ಆ

ದಂಪತಿಗಳು ಆನಂದದಿಂದ ಗುರುವನ್ನು ನೆನೆಯುತ್ತ ತಮ್ಮ ನಗರವನ್ನು ಮುಟ್ಟಿದರು.

ಅಲ್ಲಿಯ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸಿಕೊಂಡರು. ಮನವು ಗುರುದರ್ಶನಕ್ಕಾಗಿ ಹಾತೊರೆಯುತ್ತಿತ್ತು. ತಿರುಗಿ ಹುಬ್ಬಳ್ಳಿಗೆ ಹೊರಟರು. ಹೋಗುವಾಗ ಹುಲಿ ಕಂಡ ಸ್ಥಳದಲ್ಲಿಯೇ ಪುನಃ ಹುಲಿ ಕಾಣಿಸಿತು. ಆದರೆ ಈಗ ಅದರ ಮೊದಲಿನ ಸ್ವಭಾವವು ಉಳಿದಿರಲಿಲ್ಲ. ಅದೊಂದು ಸಾಧು ಪ್ರಾಣಿಯಂತಾಗಿತ್ತು. ಹೇಗಿದ್ದರೂ ಅದನ್ನು ಕಂಡು ಭಯವಾಗದೇ ಹೋಗಲಿಲ್ಲ. ಜನ್ಮತಃ ದುಷ್ಟಪ್ರಾಣಿ. ಯಾವವೇಳೆಗೇನೋ? ಯಾರಿಗೆ ತಿಳಿಯುಬೇಕು? ಅಂಜುತ್ತ ಅಂಜುತ್ತ ಇವರು ಬರಲು ಹುಲಿಯು ಇವರ ಕಾಲಿಗೆರಗಿದಂತೆ ಮಾಡಿ ಒಬ್ಬ ಶೂರ ಭಟನಂತೆ ಇವರ ಮುಂದೆ ನಡೆದು ದಾರಿ ತೋರಲಾರಂಭಿಸಿತು. ಹೀಗೆ ಕೆಲಹೊತ್ತು ಅವರೊಡನೆ ನಡೆದು ಪುನಃ ವಂದಿಸಿದಂತೆ ಮಾಡಿ ಅರಣ್ಯದಲ್ಲಿ ತೆರಳಿತು. ಸದ್ಗುರು ಮಹಿಮೆಯನ್ನು ತಿಳಿಯುವವರು ಯಾರು?

ಕೆಲದಿನಗಳ ನಂತರ ಆ ದಂಪತಿಗಳು ಹುಬ್ಬಳ್ಳಿಗೆ ಬಂದು ಸದ್ಗುರುವನ್ನು ಕಂಡರು. ಗುರುರಾಜನು ವ್ಯಾಖ್ಯಾಸನದಲ್ಲಿ ವಿರಾಜಮಾನನಾಗಿದ್ದನು. ಅವನಿಗೆ ವಂದಿಸಿ ಗುರುವನ್ನು ಆಶ್ಚರ್ಯದಿಂದ ಹರಿಹರ ನೋಡತೊಡಗಲು ಗುರುವು 'ಹರಿಹರ ಊರಿಗೆ ಹೋದ ಕೆಲಸವಾಯಿತೇ? ಮತ್ತೇನು ವಿಶೇಷ? ಎಂದು ಕೇಳಲು ಹರಿಹರನು ಮಾರ್ಗದಲ್ಲಿ ವರ್ತಿಸಿದ ಎಲ್ಲ ವೃತ್ತಾಂತವನ್ನು ನಿವೇದಿಸಿದನು. ಅದನ್ನು ಕೇಳಿದವರೆಲ್ಲ ಆಶ್ಚರ್ಯದಿಂದ ರೋಮಾಂಚವನ್ನು ಹೊಂದಿದರು.

ಹರಿಹರ ದಂಪತಿಗಳು ನಿರ್ಮಲ ಭಕ್ತಿಯಿಂದ ಸದ್ಗುರು ಸೇವೆಯಲ್ಲಿ ದೇಹವನ್ನು ಸವೆಸುತ್ತ ಆನಂದದಿಂದ ಕಾಲಕ್ರಮಣ ಮಾಡತೊಡಗಿದರು.

೧೫

ಸೊಕ್ಕವಿಲ್ಲದ ಬಾಳ್ವೆ । ಮಕ್ಕಳಿಲ್ಲದ ಮನೆಯು ।
ಅಕ್ಕರಿಲ್ಲದ ತವರೂರು । ಇವು ಮೂರು ।
ದುಕ್ಕ ಕಾಣಯ್ಯ. —ಸರ್ವಜ್ಞ

ಅವಿನೀತಃ ಸುತೋ ಜಾತಃ ಕಥಂ ನ ದಹನಾತ್ಮಕಃ ।
ವಿನೀತಸ್ತು ಸುತೋ ಜಾತಃ ಕಥಂ ನ ಪುರುಷೋತ್ತಮಃ ॥
—ಸುಭಾಷಿತ

ಉದ್ಧಟನಾದ ಅಥವಾ ಕುರಿಯನ್ನೇರುವಂಥ ಎಂದರೆ ಬೆಂಕಿಯಂಥ ಮಗನಾದರೆ ಅವನು ತಾಯ್ತಂದೆಗಳಿಗೆ ಬೇಯಿಸನೇ ಹೇಗೆ ? ವಿನಯಾದಿ ಸದ್ಗುಣದಿಂದ ಕೂಡಿದ ಮಗನಾದರೆ ಅವನು ಪುರುಷಶ್ರೇಷ್ಠನೆನಿಸಲಾರನೇ ?

ರೇಲುವೇ ಖಾತೆಯಲ್ಲಿ ರೂಪಕೃಷ್ಣನೆಂಬವನು ನೌಕರ. ಅವನಿಗೆ ಸುಂದರಿಯಾದ ಭಾಗ್ಯವತಿ ಎಂಬುವಳು ಹೆಂಡತಿ. ಸಂಸಾರಕ್ಕೆ ಸಾಲುವಷ್ಟು ಸಂಬಳ. ರೂಪವತಿಯಾದ ಹೆಂಡತಿ ಆದರೆ ಮಕ್ಕಳಿಲ್ಲ. ಆದುದರಿಂದ ಮನ-ಮನೆ ಎರಡೂ ಬಣ-ಬಣವೆನಿಸುತ್ತಿತ್ತು. ವ್ರತ-ನೇಮ-ಯಂತ್ರ-ಮಂತ್ರ ಮುಗಿದವು. ಫಲ ಕಾಣಲಿಲ್ಲ. ಸಂಸಾರದಲ್ಲಿ ಸವಿಯುಳಿಯಲಿಲ್ಲ.. ಸದ್ಗುರು ನಾಥನನ್ನು ಭಜಿಸತೊಡಗಿದರು. ಅದರಿಂದ ಮನಕ್ಕೆ ಸಮಾಧಾನವೆನಿಸ ತೊಡಗಲು ದಿನದಿನಕ್ಕೆ ಶ್ರದ್ಧೆ ಹೆಚ್ಚಿತು.

ಗುರುವಿನಲ್ಲಾಗಲೀ, ದೇವರಲ್ಲಾಗಲೀ ಭಕ್ತಿ ಹುಟ್ಟಲು ಮನುಷ್ಯನಿಗೆ ಪ್ರಪಂಚದಲ್ಲಿ ಬರುವ ದುಃಖಗಳೇ ಕಾರಣವಾಗುವವೋ ಏನೋ ಇರಬೇಕು. ಪಾಂಡವರ ತಾಯಿಯಾದ ಕುಂತಿಗೆ ನಿನಗೇನು ಬೇಕೆಂದು ಕೇಳಲು ' ವಿಪದಃ ಸಂತು ನಃ ಶಶ್ವತ್ ' ನಮಗೆ ಯಾವಾಗಲೂ ವಿಪತ್ತುಗಳೇ ಇರಲಿ. ಅದರಿಂದ ಭಗವಂತನ ಮರೆವಾಗುವದಿಲ್ಲ. ಎಂದು ಹೇಳಿದಳೆಂದು ಭಾರತದಲ್ಲಿದೆ. ಆದರೆ ಇಲ್ಲಿ ಒಂದು ವಿಶೇಷ. ಭಗವಂತನ ಮರೆವಾಗಬಾರದೆಂಬುದಕ್ಕೆ ಕುಂತಿ ವಿಪತ್ತುಗಳನ್ನು ಸ್ವಾಗತಿಸಿದಳು. ಪ್ರಾಪಂಚಿಕರು ಬಂದ ವಿಪತ್ತಿನ ನಿವಾರಣೆ ಯಾಗಬೇಕೆಂದು ಭಗವಂತನ ಕಡೆಗೆ ತಿರುಗುತ್ತಾರೆ. ಇರಲಿ-

ಆ ದಂಪತಿಗಳಲ್ಲಿ ದಿನದಿನಕ್ಕೆ ಸದ್ಗುರು ಭಕ್ತಿ ಬೆಳೆದು ಬಹುಬಗೆಯಿಂದ ಅವರು ಗುರುದೇವನನ್ನು ಸೇವಿಸಲಾರಂಭಿಸಿದರು. ಭಾಗ್ಯವತಿಯಂತೂ ನಮಸ್ಕರಿಸುವ ಪ್ರಸಂಗದಲ್ಲೊಮ್ಮೆ 'ಸದ್ಗುರುನಾಥನೇ ನನಗೊಂದು ಮಗುವಾಗುವಂತೆ ಅನುಗ್ರಹಿಸಿ ಮೊರೆ ಕೇಳಬಾರದೇ? ದಿನಾಲು ನನಗಾಗುವ ಕಷ್ಟ ನಿನಗರಿಕೆಯಾಗಿಲ್ಲವೇ? ಸ್ವಾಮಿ ನಾನು ಮಗುವನ್ನೆತ್ತಿಕೊಂಡು ಬಂದು ನಿನಗೆ ವಂದಿಸುವಂಥ ದಿನವು ಬೇಗ ಬರುವಂತೆ ಮಾಡು.' ಎಂದು ಮನದಲ್ಲಂದುಕೊಂಡೇ ನಮಸ್ಕರಿಸುವಳು. ಗುರುನಾಥ ಯಾವಾದಲೋ ಅವಳ ಮನದಳಲನ್ನರಿತಿದ್ದನು. ಒಂದು ದಿನ ಅವಳು ಸಮುಸ್ಕರಿಸುವಾಗ ಗುರುವು 'ಭಾಗ್ಯವತಿ, ನಿನಗೆ ಯಾವ ಕೊರಗು? ಸ್ವಚ್ಛವಾಗಿ ಹೇಳಿಬಿಡು' ಎನ್ನಲು ಅವಳು 'ಸ್ವಾಮಿ, ಮಕ್ಕಳಿಲ್ಲದ ಸ್ತ್ರೀ ಇಟ್ಟರೇನು? ತೊಟ್ಟರೇನು? ಅವಳ ಜನ್ಮ ಬಾಡಿಗೆಯ ಎತ್ತು ದುಡಿದಂತಲ್ಲವೇ?' ಎಂದು ನುಡಿದು ಕಣ್ಣೀರ ಕೋಡಿಯನ್ನೇ ಹರಿಸಿದಳು. ಸಿದ್ಧ ಕೇಳಿದನು.

'ನಿನಗೆ ಮಕ್ಕಳಿಲ್ಲವೆಂಬುದಷ್ಟೇ. ಉಳಿದ ಅನುಕೂಲತೆಗಳೆಲ್ಲ ಇರುವವಲ್ಲ. ಸುಖವಾಗಿರಬಾರದೇಕೆ?'

'ಏನಿದ್ದರೂ ಅದರಲ್ಲಿ ವಿಶೇಷವಾಗಿ ಹೆಂಗಸಾದವಳಿಗೆ ಮಕ್ಕಳಿಲ್ಲದೇ ಯಾತರಿಂದಲೂ ಸುಖವಾಗದೆನಿಸುತ್ತದೆ.'

'ಮನುಷ್ಯನಿಗೆ ಹೀಗೆ ವಾಸನೆಯುಳಿಸಿಕೊಂಡರೆ ಮುಂದಿನ ಪರಿಣಾಮವೇನು ಗೊತ್ತೇ? ಮತ್ತೆ ಮತ್ತೆ ಹುಟ್ಟುವುದು.'

'ಹಾಗೆ ನಾನು ಹುಟ್ಟಿ ಬಂದು ಯಾವಳೋ ಒಬ್ಬ ತಾಯಿಗೆ ಸಂತೋಷ ಕೊಡುವವಳಾಗಲಿ, ಆದರೆ ಸದ್ಗುರುನಾಥನೇ, ನನ್ನನ್ನು ಮಾತ್ರ ಬಂಜೆ ಎನಿಸಬೇಡ.'

ಎಂದು ಭಾಗ್ಯವತಿ ಮುಚ್ಚುಮರೆ ಮಾಡದೇ ಮನಬಿಚ್ಚಿ ಮಾತಾಡಲು ಗುರುನಾಥ ಅವಳ ಮಾತು ಕೇಳಿ ಇವಳಿಗೆ ಮಕ್ಕಳವಾಸನೆ ಅತಿ ಪ್ರಬಲವಾಗಿರುವುದೆಂದು ತಿಳಿದು ನಗುತ್ತ 'ಆದರೆ ಮಾಡುವುದೇನಮ್ಮ. ನಿನ್ನ ಹಣೆಯಲ್ಲಿ ಭಗವಂತ ಮಕ್ಕಳಾಗುವಂತೆ ಬರೆದಿಲ್ಲ. ಆದರೂ ಚಿಂತೆಬೇಡ, ಗುರುಸ್ಮರಣೆ ಮರೆಯದೇ ಮಾಡುತಿರು. ಬೇಗನೇ ಫಲ ಕಾಣುವೆ.' ಎಂದು ಸಮಾಧಾನಪಡಿಸಿದನು.

ಹೌದು. ಮರೆಯದೇ ಸ್ಮರಣೆ ಮಾಡಬೇಕು. ಮರೆವೆಂಬುದು ಮನುಷ್ಯನಿಗೆ ಬಹಳ ಹಾನಿಯನ್ನುಂಟು ಮಾಡಿದೆ. ನಾನು ಯಾರು? ಬಂದುದೆಲ್ಲಿಂದ? ಹೋಗುವುದೆಲ್ಲಿಗೆ? ಇತ್ಯಾದಿ ವಿಚಾರಗಳನ್ನು ಮರೆತುದರಿಂದಲೇ ನಮ್ಮಲ್ಲಿ ದೈನ್ಯತೆಯುಂಟಾಗಿದೆ. ಮರಣ ಭೀತಿ ಮೈದೋರಿದೆ. ಈಗ ಸದ್ಗುರುವಿಗೆ ಶರಣಾಗತರಾಗಿ ಅವನಿಂದ ಅರಿತುಕೊಂಡು ಸ್ಮರಣೆ ಮಾಡುತ್ತ ಹೋದರೆ ಸುಖಕ್ಕೆ ಕೊರತೆಯೇ ಆಗಲಾರದು. ಯಾಕಂದರೆ ಆಗ ಮನದಾಶೆಗಳೆಲ್ಲ ಪೂರ್ಣವಾಗುವವು.

ಭಾಗ್ಯವತಿಯು ಸಿದ್ಧನಿಂದ ಪ್ರಸಾದವನ್ನು ಸ್ವೀಕರಿಸಿ ಆನಂದಿತಳಾಗಿ ಮನೆಗೆ ಬಂದಳು. ಕ್ಷಣಮಾತ್ರವೂ ಬಿಡದೆ ಸದ್ಗುರು ಸ್ಮರಣೆಯಲ್ಲಿ ಕಾಲ ಕಳೆದಳು. ಒಂದುವೇಳೆ ಮರೆತರೆ ಫಲದಲ್ಲೇನು ವ್ಯತ್ಯಾಸವೋ ಎಂಬ ಭಯ. ಹೀಗೆ ಸವಿದು ನೋಡಲಿ. ಸಕ್ಕರೆ ಸಿಹಿಯಲ್ಲಿ ಬದಲಾವಣೆಯಾಗುವುದುಂಟೇ? ಫಲದ ಚಿಹ್ನ ತೋರಿತು. ಭಾಗ್ಯವತಿ ಗರ್ಭವತಿಯಾದಳು. ಕ್ರಮೇಣ ದಿನ ತುಂಬಿದವು. ಗರ್ಭಕಾಲದ ಸುಖದುಃಖಗಳನ್ನು ಅವಳು ಆನಂದದಿಂದಲೇ ಸಹಿಸುವಳು. ಗಂಡನು ಅವಳ ಆಯಾಸವನ್ನು ಲಕ್ಷಿಸಿ ಕದಾಚಿತ್ ಕೇಳಿದರೆ 'ಆರಾಮವಾಗಿದ್ದೇನೆ' ಎಂದು ನಗುತ್ತಲೇ ಉತ್ತರ ಕೊಡುವಳು. ಇದರಿಂದ ಅವಳ ಕಷ್ಟವೇನೂ ತಪ್ಪುತ್ತಿರಲಿಲ್ಲ. ಗಂಡುಮಗು ಹುಟ್ಟಿತು. ಆನಂದಕ್ಕೆ ಪಾರವಿಲ್ಲ. ವೀಳ್ಯ-ಸಕ್ಕರೆ ಹಂಚಿದರು. ವಿಶೇಷವಾಗಿ ಗುರುವಿನ ಆರಾಧನೆ ಮಾಡಿದರು. ಪ್ರತಿಪದೆಯ ಚಂದ್ರಮನಂತೆ ಮಗು ಬೆಳೆಯತೊಡಗಿತು.

ಮಗುವಿನ ಲಾಲನೆ-ಪಾಲನೆಯಲ್ಲಿ, ಪತಿಸೇವಾ ಶುಶ್ರೂಷೆಯಲ್ಲಿ ಪ್ರಪಂಚದ ಕಾರ್ಯ ನಿರ್ವಹಣೆಯಲ್ಲಿ ಭಾಗ್ಯವತಿಗೆ ಸಾಕುಬೇಕೆನಿಸಿತು. ಒಂದುದಿನ ಮಗುವನ್ನೆತ್ತಿಕೊಂಡು ಹೋಗಿ ಗುರುವಿನಡಿದಾವರೆಗಳಿಗೆರಗಿದಳು. ನಗುತ್ತ ಗುರು ಕೇಳಿದನು.

'ಭಾಗ್ಯವತಿ' ಸುಖವಾಗಿರುವೆಯ'

'ಸ್ವಾಮಿ, ಮಗುವಾದಾಗಿನಿಂದ ನನಗೆ ಸಾಕುಬೇಕಾಗಿದೆ. ಯಾಕಾದರೂ ನಿಮ್ಮಲ್ಲಿ ಬೇಡಿಕೊಂಡೆನೋ ಎಂದು ಎಷ್ಟೋ ಸಲ ಅಂದುಕೊಳ್ಳುತ್ತೇನೆ.'

'ಸಾಕು ಸಾಕೆನಿಸಿದ ಮಾತನ್ನು ನಗುತ್ತ ಹೇಳುತಿರುವೆಯಲ್ಲ.'

'ಪ್ರಪಂಚವೇ ಹೀಗೇನೋ ಎನ್ನುತ್ತೇನೆ.'

'ಹೌದು. ಮಗಳೇ ಸತ್ಯದ ಸಮೀಪಕ್ಕೆ ಬರುತಿರುವೆ. ಪ್ರಪಂಚದಲ್ಲಿ ಅನುಭವಕ್ಕೆ ಬರುತಿರುವುದು ಸುಖವಲ್ಲ. ಸುಖದ ಭ್ರಾಂತಿ. ಮೊದಲು ದುಡ್ಡು–ದುಗ್ಗಾಣಿ–ಮಕ್ಕಳು–ಮರಿಗಳನ್ನು ಅಪೇಕ್ಷಿಸಿ ಅನೇಕ ಬಗೆಯಿಂದ ದುಃಖಪಡಬೇಕು. ತರುವಾಯ ಅವು ದೊರೆತಕೂಡಲೇ ಆಶೆ ಪೂರ್ಣವಾಯಿತಲ್ಲ ಎಂದು ಸಂತೋಷಪಡಬೇಕು. ಇದರಲ್ಲಿ ಯಾವುದು ನಿಜ. ನೀನೇ ತಿಳಿದು ನೋಡು.'

'ಗುರುದೇವನೇ ನನಗಿನ್ನು ಮಕ್ಕಳು ಸಾಕು.'

'ಹಾಗೇ ಆಗಲಿ, ಎಂದು ದಯಾಪೂರ್ಣನಾದ ಗುರುವು ಆಶ್ವಾಸನೆ ಕೊಟ್ಟನು. ಆದರಂತೆ ಅವಳಿಗೆ ಮಕ್ಕಳೂ ಆಗಲಿಲ್ಲ. ಇರಲಿ–

ಹೀಗಿರಲು ರೂಪಕೃಷ್ಣನಿಗೆ ಮದ್ರಾಸಕ್ಕೆ ವರ್ಗವಾಯಿತು. ಒಮ್ಮೆಲೇ ಗುರುಸಾನ್ನಿಧ್ಯವನ್ನಗಲಿ ಹೋಗಬೇಕಾಗಿ ಬಂದುದರಿಂದ ಅವರು ಬಹು ದುಃಖಪಟ್ಟರು. ಆದರೆ ನೌಕರಿಯ ಸಲುವಾಗಿ ಹೋಗಲೇಬೇಕಾಯಿತು. ನಿರೋಪ ಪಡೆಯಲೆಂದು ಗುರುವಿನ ಬಳಿಗೆ ಬಂದು ವಂದಿಸಿ ಅಗಲಿ ಹೋಗಬೇಕಾಗುವುದಲ್ಲ ಎಂದು ಬಹುಪರಿಯಾಗಿ ತಪಿಸಿದರು. ಆಗ ಸಿದ್ಧನು ದಯಾರ್ದ್ರಹೃದಯನಾಗಿ 'ಅಯ್ಯ, ಪ್ರಪಂಚ ವಿಷಯವೇ ಹಾಗೆ. ಇಲ್ಲಿ ಎಲ್ಲ ಒಂದೇಸವನೇ ಇರಬೇಕೆಂದು ಅಪೇಕ್ಷಿಸಬಾರದು. ಆ ಅಪೇಕ್ಷೆ ಇರುವುದರಿಂದಲೇ ದುಃಖಪಡಬೇಕಾಗುವದು. ನದಿಯ ಪ್ರವಾಹ ಬಂದಾಗ ಬೇರೆ ಬೇರೆ ಕಡೆಯ ಕಟ್ಟಿಗೆಗಳು ಒಂದುಕಡೆಗೆ ತೆಪ್ಪಗಟ್ಟಿ ಕೆಲಕಾಲ ನಿಲ್ಲುತ್ತವೇ. ಮುಂದೆ ಪ್ರವಾಹದ ಹೆಚ್ಚುಕಡಿಮೆಯಿಂದ ಅವೆಲ್ಲ ದಿಕ್ಕುದಿಕ್ಕಿಗೆ ಚದುರಿ ಹೋಗುತ್ತವೆ. ಹಾಗಿದೆ. ಇದೆಲ್ಲ ಸಮಾಗಮ. ಎಂದು ನುಡಿಯಲು ಅವರು 'ನಿನ್ನ ದರ್ಶನವಿಲ್ಲದೇ ನಾವಿರಬಲ್ಲವೇ? ನೀರು ಬಿಟ್ಟು ಮೀನವು ಹೇಗೆ ಬದುಕುವುದು? ಸ್ವಾಮಿ.' ಎಂದರು.

ಸಿದ್ಧನೆಂದನು.

'ಮನಸ್ಸಿದ್ದರೆ ಎಷ್ಟು ದೂರವಾದರೇನು? ಅದು ಸಮೀಪವೇ. ಇನ್ನು ಮನಸ್ಸಿಲ್ಲದಿದ್ದರೆ ಎಷ್ಟು ಸಮೀಪವಾದರೇನು? ದೂರವೇ ಆಗುವುದು. ನೀವು

ಮರೆಯದೇ ನಾಮಸ್ಮರಣೆ ಮಾಡಿರಿ. ಸದ್ಗುರುವನ್ನು ಭಜಿಸಿರಿ. ನಾನು ಎಲ್ಲಿಯೇ ಇರಲಿ ನಿತ್ಯ ನಿಮ್ಮ ಬಳಿಯಲ್ಲಿ.'

ಸಂಜೀವಿನಿಯಂತಿರುವ ಸದ್ಗುರು ವಚನವನ್ನು ಕೇಳಿ ಅವರು ಸಂತೋಷಿತರಾಗಿ ನಿರೋಪ ಪಡೆದು ಮದ್ರಾಸಕ್ಕೆ ತೆರಳಿದರು. ಅಲ್ಲಿ ಕೆಲವು ದಿನಗಳ ವರೆಗೆ ಸುಖವಾಗಿದ್ದರು. ರೂಪಕೃಷ್ಣ ತಿಂಗಳದಲ್ಲಿ ಕೆಲದಿನ ಪ್ರವಾಸದಲ್ಲಿರಬೇಕಾಗುವುದು. ಆ ನೌಕರಿಯೇ ಅಂಥದು. ಅದರಿಂದ ಭಾಗ್ಯವತಿಗೆ ಭಣ-ಭಣವೆನಿಸಿ ಒಂದು ತರದ ವ್ಯಥೆ ಏನೋ ಆಗುತ್ತಿತ್ತು. ಆದರೂ ಮಗುವಿನ ಬಾಲಲೀಲೆಗಳನ್ನು ಕಂಡು ವ್ಯಥೆಯನ್ನು ಮರೆಯುವಳು.

ಹೀಗಿರಲು ಮದ್ರಾಸದಲ್ಲಿ ಪ್ಲೇಗು ರೋಗವು ಪ್ರಾರಂಭವಾಯಿತು. ಆ ರೋಗದಿಂದ ಜನರು ಪಟ-ಪಟ ಸಾಯತೊಡಗಿದರು. ಬಹುತರವಾಗಿ ಈ ರೋಗದವರು ಬದುಕುವದಿಲ್ಲ ಎಂದು ಜನರಿಗೆ ಮನವರಿಕೆಯಾಗಲು ಕೆಲವರು ಆ ಊರು ಬಿಟ್ಟು ಸುರಕ್ಷಿತ ಸ್ಥಳಗಳಿಗೆ ತೆರಳಿದರು. ನೌಕರದಾರರು ಹಾಗೆ ಮಾಡಲು ಸಾಧ್ಯವಿಲ್ಲದ್ದರಿಂದ ರೂಪಕೃಷ್ಣನು ಅಲ್ಲಿಯೇ ನಿಲ್ಲಬೇಕಾಯಿತು. ಅವನಂತೂ ನಾಲ್ಕು ದಿನ ಊರಲ್ಲಿದ್ದರೆ ನಾಲ್ಕು ದಿನ ಹೊರಗಿರತಕ್ಕವನು. ಮನೆಯಲ್ಲಿ ಭಾಗ್ಯವತಿ ಹಾಗೂ ಐದು ವರ್ಷದ ಮಗ. ಅವಳು ಮನೆಬಿಟ್ಟು ಹೊರಗೆ ತಿರುಗುವವಳಲ್ಲವಾದರೂ ಕುಳಿತಲ್ಲಿಯೇ ಬೇನೆಯ ಭೀಕರ ವಾರ್ತೆಗಳು ಕಿವಿಗೆ ಬೀಳುತ್ತಿದ್ದವು. ಒಂದುದಿನ ಅವಳ ಮಗನಿಗೇ ಜ್ವರ ಬಂದವು. ಸಣ್ಣ ಹುಡುಗ ಒಂದುದಿನಕ್ಕೇ ಹಣ್ಣಾಗಿ ಹೋಯಿತು. ಮರುದಿನವಂತೂ ಮೈಮೇಲೆ ಎಚ್ಚರವೇ ಉಳಿಯಲಿಲ್ಲ. ಭಾಗ್ಯವತಿ ಬೆದರಿದಳು. ಇದು ಪ್ಲೇಗು ರೋಗವೆಂದು ಅವಳಿಗೆ ನಿಶ್ಚಿತವಾಯಿತು. ಮಧ್ಯರಾತ್ರಿ ಮೀರಿದೆ. ಆ ತಾಯಿ ಮಗನ ಬಳಿಯಲ್ಲಿ ಕುಳಿತು ಕಣ್ಣೀರ್ಗರೆಯುತ್ತಿದ್ದಾಳೆ. ಹಾಗೆ ಕೆಲವೇಳೆ ಹುಡುಗನ ತಳಮಳವನ್ನು ನೋಡುತ್ತ ಕುಳಿತಿರಲು ಇನ್ನು ಮಗ ಉಳಿಯಲಾರನೆಂದು ಅವಳಿಗನಿಸಿತು. ಗಂಡನಂತೂ ಊರಲ್ಲಿರಲಿಲ್ಲ. ಸಮೀಪದಲ್ಲಿ ಆಪ್ತೇಷ್ಟರೂ ಇಲ್ಲ. ಧೈರ್ಯ ಕೊಡುವವರಾರು? ಸಮಾಧಾನ ಹೇಳುವರಾರು? ಭಾಗ್ಯವತಿಗೆ ದಿಕ್ಕು ತೋಚದಂತಾಗಿ ಅನಾಥನಾಥನೂ, ದಯಾಸಮುದ್ರನೂ ಆದ ಸದ್ಗುರುವನ್ನು ಕೂಗತೊಡಗಿದಳು.

'ಸದ್ಗುರುನಾಥನೇ, ನಾವಿತ್ತ ಬರುವ ಸಮಯದಲ್ಲಿ ನಾನು ನೆನೆದವರ ಬಳಿಯಲ್ಲಿಯೇ ಇರುತ್ತೇನೆಂದು ಹೇಳಿಲ್ಲವೇ? ಹೇಳು ನಿನ್ನನ್ನು ನೆನೆಯುವು ದನ್ನು ನಾನು ಎಂದು ಮರೆತಿದ್ದೇನೆ? ಆದರೆ ನೀನು ಎಲ್ಲಿರುವೆ? ಸ್ವಾಮಿ. ನನಗೆ ಈ ಮಗು ನಿನ್ನ ಅನುಗ್ರಹದಿಂದಲ್ಲವೇ? ನಿನ್ನ ಅನುಗ್ರಹ ಶಾಶ್ವತ ಸುಖಕಾರಿ ಎಂದು ನಾನು ನಂಬಿಕೊಂಡಿದ್ದೇನೆ. ಆದರೆ ಈಗ ಮಗು ಸಾಯು ತ್ತದೆ. ನನ್ನ ನಂಬಿಗೆ ವ್ಯರ್ಥವಾಯಿತು. ನಿನ್ನ ಅನುಗ್ರಹ ವ್ಯರ್ಥವೆನಿಸಿತು. ಸ್ವಾಮೀ, ಇದು ನಿನಗೆ ಭೂಷಣವೇ? ಭಕ್ತರಾದ ನಮ್ಮ ಕೈಬಿಟ್ಟೆಯಾ? ಅಯ್ಯೋ ಗುರುದೇವಾ, ನೆನೆದವರ ಬಳಿಯಲ್ಲಿ ಎಂಬ ನಿನ್ನ ಮಾತನ್ನಾದರೂ ನೀನು ಉಳಿಸಿಕೊಳ್ಳಬೇಡವೇ? ಬಾ ಬೇಗಬಾ. ಬಂದು ನನ್ನ ಮಗುವನ್ನು ಬದುಕಿಸು. ಮಗು ಹೋದಮೇಲೆ ನಾನು ಉಳಿಯಲಾರೆ. ನಾವಿಬ್ಬರನ್ನೂ ಕಳೆದುಕೊಂಡು ಅವರೂ ಉಳಿಯಲಾರರು. ಹೀಗೆ ನಿನ್ನ ಭಕ್ತರ ನಾಶವನ್ನು ಮಾಡುವುದಾದರೆ ನಿನ್ನನ್ನು ಯಾರು ಭಜಿಸುತ್ತಾರೆ!' ಎಂದು ಹಲವು ಪರಿ ಯಾಗಿ ಹಂಬಲಿಸಿ ನಿಶ್ಚೇಷ್ಟಿತನಾಗಿ ಬಾಯ್ಬಿಡುತ್ತಿರುವ ಮಗನನ್ನು ತೊಡೆಯಮೇಲೆ ಹಾಕಿಕೊಂಡು ಭಾಗ್ಯವತಿ ದೊಡ್ಡ ಧ್ವನಿಯಿಂದ ಅಳತೊಡಗಿ ದಳು. ಮುಂದವಾಗಿ ದೀಪವೊಂದು ಉರಿಯುತಿರಲು ಪಕ್ಕನೆ ಚಂದ್ರ ಮೂಡಿ ದಂತಾಯಿತು. ನಡುವಿನ ಬಾಗಿಲು ತೆರೆದು ಸಿದ್ಧನು ಒಳಗೆ ಬರುತ್ತಿದ್ದನು.

ತಲೆಗೊಂದು ಕೆಂಪುವಸ್ತ್ರ ಸುತ್ತಿ ಮೈಮೇಲೊಂದು ಧೋತರ ಹೊತ್ತಿ ದ್ದಾನೆ. ಧಾವಿಸಿ ಬಂದ ಕಾರಣವೋ ಏನೋ ಬರಿಗಾಲಿನಿಂದ ಬಂದಿದ್ದಾನೆ. ಕಂಗಳಲ್ಲಿ ಅಪಾರ ಕಾರುಣ್ಯ ತುಂಬಿದಂತಿದೆ. ಹಣೆಯಲ್ಲಿ ಥಾಳಾಗಿ ವಿಭೂತಿ ಶೋಭಿಸುತ್ತದೆ. ಇಂಥ ಅಜಾನುಬಾಹು ಸದ್ಗುರು ಮೂರ್ತಿಯನ್ನು ಕಂಡು ಭಾಗ್ಯವತಿಗೆ ಸಾನಂದಾಶ್ಚರ್ಯವಾಗಿ ಕೂಗಿದಳು. 'ಗುರುವೇ, ಕೇಳಿಸಿತೇ? ನನ್ನ ಮೊರೆ.'

ಸಿದ್ಧನಂದನು. 'ಕೇಳಿಸಿಯೇ ಬಂದಿದ್ದೇನೆ. ಈ ಅಪರಾತ್ರಿಯಲ್ಲಿ ನನ್ನನ್ನು ಕರೆದ ಕಾರಣವೇನು? ಎಂದು ಕೇಳಲು ಭಾಗ್ಯವತಿಗೆ ಮಗನ ನೆನ ಪಾಗಿ ಅಳುತ್ತ 'ನಿನ್ನ ವರಪುತ್ರನ ಗತಿನೋಡು' ಎಂದು ಬಹಳ ಕಷ್ಟದಿಂದ ನುಡಿದಳು. ತಡಮಾಡದೇ ಸಿದ್ಧನು ತನ್ನ ಅಮೃತ ಹಸ್ತದಿಂದ ಮಗುವಿನ ಮೈಮೇಲೆ ಕೈಯಾಡಿಸಲು ಆ ಹುಡುಗ ಜಾಗ್ರತನಾಗಿ 'ಅವ್ವಾ, ಎನ್ನುತ್ತ

ಎದ್ದು ಕುಳಿತನು. ಅದನ್ನು ಕಂಡು ಭಾಗ್ಯವತಿಗಾದ ಸಂತೋಷಕ್ಕೆ ಪಾರ ಉಳಿಯಲಿಲ್ಲ. ಥಟ್ಟನೆ ಮೇಲಕ್ಕೆದ್ದು ಮಗುವನ್ನಪ್ಪಿಕೊಂಡು ಸದ್ಗುರುನಾಥನ ಪಾದಗಳ ಮೇಲೆ ಹಾಕಿ ನೋಡುತ್ತಾಳೆ. ಸದ್ಗುರು ಅಂತರ್ಧಾನ ಹೊಂದಿದ್ದಾನೆ. ಇದರಿಂದ ಅವಳಿಗೆ ಬಹಳ ತಳಮಳವಾಯಿತು.

'ಅಯ್ಯೋ, ನಾನೆಂಥ ಸ್ವಾರ್ಥಪರಳು. ನನ್ನ ವಂಶೋದ್ಧಾರಕನನ್ನು ಬದುಕಿಸಲು ಬಹು ದೂರದಿಂದ ಧಾವಿಸಿ ಬಂದ ಗುರುವನ್ನು ಕರೆಯಲಿಲ್ಲ. ಕುಳ್ಳಿರಸಲಿಲ್ಲ. ನಮಸ್ಕಾರವನ್ನೂ ಮಾಡಲಿಲ್ಲ. ನಾನೆಂಥ ಪಾಪಿ. ಆಪದ್ಬಾಂಧವನೇ, ಸ್ವಾರ್ಥಿಯಾದ ನನ್ನನ್ನು ಕ್ಷಮಿಸು.' ಎನ್ನುತ್ತ ಮರುಗಿ ಕೈಮುಗಿಯುತಿರಲು ಅದೇವೇಳೆಗೆ ಬೆಳಗಿನ ಗಾಡಿಯಿಂದ ರೂಪಕೃಷ್ಣ ಮನೆಗೆ ಬಂದನು. ಅವನಿಗೆ ಭಾಗ್ಯವತಿಯು ನಡೆದ ಸಂಗತಿಯನ್ನೆಲ್ಲ ಹೇಳಲು ಅವನು ಗುರುನಾಥ ಬಂದು ನಿಂತ ಸ್ಥಳಕ್ಕೆ ಪುನಃ ಪುನಃ ವಂದಿಸುತ್ತ ನುಡಿವನು. 'ಭಾಗ್ಯವತಿ. ಗುರುದರ್ಶನ ಪಡೆಯದೇ ನನಗೆ ಸಮಾಧಾನವಾಗದಂತಾಗಿದೆ. ರಜಕ್ಕೆ ಬರೆಯುತ್ತೇನೆ ಹೋಗಿ ಬರೋಣ. ಹುಡುಗನೂ ಆರಾಮವಾಗಿದ್ದಾನೆ.'

ಮರುದಿನವೇ ಹೊರಟು ಆ ದಂಪತಿಗಳು ಸದ್ಗುರು ಸನ್ನಿಧಿಗೆ ಬಂದು ದರ್ಶನ ಪಡೆದು ಆ ದಂಪತಿಗಳು ಬಹು ಪರಿಯಾಗಿ ಗುರುನಾಥನನ್ನು ಸ್ತುತಿಸಿದರು. ಅವಸರವಾಗಿ ಬಂದ ಕಾರಣವನ್ನು ಸಿದ್ಧ ವಿಚಾರಿಸಲು ಮದ್ರಾಸದಲ್ಲಿ ನಡೆದ ಸಂಗತಿಯನ್ನು ಹೇಳಿದರು. ಕೇಳಿ ಸಿದ್ಧ ನುಡಿದನು.

'ಭಾವಕ್ಕೆ ತಕ್ಕ ಫಲ. ನಿಮಗೆ ಸಿಕ್ಕಿತು. ಇದರಲ್ಲೇನೂ ಆಶ್ಚರ್ಯವಿಲ್ಲ.'

ಹೀಗೆ ಸದ್ಗುರುವಿನ ಅಮೃತವಾಣಿಯನ್ನು ಆಗ ನೆರೆದ ಭಕ್ತರೆಲ್ಲ ಕೇಳಿ ಆನಂದದಿಂದ ಜಯಘೋಷ ಮಾಡಿದರು. ಸಿದ್ಧನು ಹಸನ್ಮುಖನಾಗಿ ಕುಳಿತು ಭಕ್ತರನ್ನು ನೋಡುತ್ತಿದ್ದನು.

———

೧೬

ಸ್ವಾರ್ಥಯುಕ್ತ ಪ್ರೀತಿ। ಆಪ್ತರೊಳ್ ಪ್ರತೀತಿ।
ಸ್ವಾರ್ಥಹೀನ ಪ್ರೀತಿ। ನಿನ್ನ ರೀತಿ.

—ರಘು

ಬರಬರುತ್ತ ಸಿದ್ಧಾಶ್ರಮವು ಶಾಂತಿಯ ನೆಲೆವೀಡಾಗಿ ಜನರನ್ನಾಕರ್ಷಿಸತೊಡಗಿತು. ಧನ-ಜನ-ಮನೆ-ಮಕ್ಕಳು ಏನಿದ್ದರೂ ನಿರ್ಮಲ ಶಾಂತಿ ಸಂಸಾರದಲ್ಲಿ ದೊರೆಯಬಹುದೇ? ಹಾಗೆ ಮಾಡಿದರೆ ಸುಖ. ಎಂದು ಹಲವು ಹಂಬಲಿಸಿ ಹರಿದಾಟಕ್ಕೆ ಸಿಕ್ಕು ಬೆಂದು ಬೇಗುದಿಗೊಳ್ಳುವ ಜೀವರಿಗೆಲ್ಲಿ ಶಾಂತಿ? ಬೇಕಾದುದು ಶಾಂತಿ-ಸಮಾಧಾನ ಸುಖ. ಅದು ದೊರೆಯುವುದು ಒಂದು ಕಡೆಗಾದರೆ ಹುಡುಕುವುದು ಅನೇಕ ಕಡೆ. ಕೊನೆಗೂ ಶಾಂತಿಯು ನೆಲೆ ಬಹಳ ಜನರಿಗೆ ತಿಳಿಯದೇ ಹೋಗುವುದು. ಆದರೂ ಅವರು ಪುಣ್ಯಕರ್ಮ ಮಾಡುತ್ತಾರೆ. ಅದು ಮತ್ತೊಬ್ಬರ ಅನುಕರಣವೋ? ಅಥವಾ ಸಾಂಪ್ರದಾಯಿಕ ನಿರ್ಬಂಧವೋ? ಏನೇ ಇರಲಿ. ಎಲ್ಲಿ ಆರಾಮವಾದ ಪ್ರಶಾಂತ ಸ್ಥಳವಿರುವುದೆಂದು ತಿಳಿಯುವುದೋ ಅಲ್ಲೆಲ್ಲ ಜನ ನೆರೆಯುವುದು ಸಹಜ. ಅದರಂತೆ ಸಿದ್ಧಾಶ್ರಮಕ್ಕೂ ಬರುವರು. ಕೆಲವರು ರುಚಿಕರವಾದ ಅಡಿಗೆ ಕಟ್ಟಿಕೊಂಡು ಬಂದರೆ ಇನ್ನು ಕೆಲವರು ಪದಾರ್ಥ ತಂದು ಇಲ್ಲಿಯೇ ಅಡಿಗೆ ಮಾಡುವರು. ಸಿದ್ಧವಾದ ಅಡಿಗೆಯನ್ನು ಸದ್ಗುರುನಾಥನಿಗರ್ಪಿಸಿ ನಂತರ ಆನಂದದಿಂದ ಊಟ ಮಾಡುವರು. ಹೀಗೆ ಅನ್ನದ ಹೊಟ್ಟೆ ತುಂಬಿದರೂ ಜ್ಞಾನದ ಹೊಟ್ಟೆ ಉಪವಾಸವೇ. ಇಲ್ಲಿ ಬಂದು ಅದನ್ನು ತುಂಬಿಕೊಳ್ಳಬೇಕೆನ್ನುವವರು ವಿರಳ. ಆದರೆ ಇದು ಪುಣ್ಯಸ್ಥಳ ಇಲ್ಲಿ ಮಹಾಜ್ಞಾನಿ ಸಿದ್ಧನಿದ್ದಾನೆ. ಇಲ್ಲಿ ಹೊಲಸುತನ ಮಾಡದೇ ಶುಚಿಯಾಗಿರಬೇಕು. ಕೆಟ್ಟ ಕೃತಿಗಳನ್ನು ಮಾಡಬಾರದು. ಎಂದು ಮೊದಲಾದ ಶುಭ ಸಂಸ್ಕಾರಗಳು ಮಾತ್ರ ಹೆಚ್ಚು ಕಡಿಮೆ ಪ್ರಮಾಣದಂತೆ ಪ್ರಾಪಂಚಿಕರಿಗೆ ಬೀಳದೆ ಹೋಗುತ್ತಿರಲಿಲ್ಲ. ಆಗೀಗ ಬೀಳುವ ಇಂಥ ಸಂಸ್ಕಾರಗಳು ಕೂಡ ಮುಂಗಾರಿನಲ್ಲಿ ಕೋಲ್ಮಿಂಚು ಮಾಡಿದಂತೆ ತುಸುವೇ ಆಗಲಿ ಬೆಳಕು ಕೊಡದೇ ಇರಲಾರವು.

ಪ್ರತಿದಿನ ಕೆಲ ಜನರಾದರೂ ಭಕ್ತರು ಈ ರೀತಿ ಬಂದೇ ಇರಬೇಕು. ವಾರ-ತಿಥಿ ಹಬ್ಬ ಮುಂತಾದ ಪ್ರಸಂಗಗಳಲ್ಲಿ ಬಹಳ ಜನ ನೆರೆಯುತ್ತಿದ್ದರು. ಒಂದು ಸಾರೆ ಅದೇನೋ ಹಬ್ಬವಾಗಿತ್ತು. ಅನೇಕ ಭಕ್ತರು ಅಡಿಗೆ ಕಟ್ಟಿಕೊಂಡು ಆಶ್ರಮಕ್ಕೆ ಬಂದರು. ಸಿದ್ಧನು ಅವರಿಗೆಲ್ಲ ದರ್ಶನವಿತ್ತು ಊಟ ಮಾಡುವಂತೆ ಅಪ್ಪಣೆ ಕೊಟ್ಟನು. ಆನಂದದಿಂದ ಜನರೆಲ್ಲ ಉಂಡರು. ಅನಂತರ ತುಸುವೇಳೆ ನಾಮ ಸಂಕೀರ್ತನೆ ಮಾಡುತ್ತ ಕುಳಿತಿರಲು ಗುರುನಾಥನು ವಿಶ್ರಾಂತಿ ಪಡೆಯಲೆಂದು ಒಳಗೆ ತೆರಳಿದನು. ಜನರು ಸಂಕೀರ್ತನೆ ನಿಲ್ಲಿಸಿ ಅಲ್ಲಿರುವ ಕೆರೆದಂಡೆಯ ವೃಕ್ಷಗಳ ನೆರಳಿನಲ್ಲಿ ತಾವೂ ಅಡ್ಡಾದರು. ಕೆಲವರು ಮಾತನಾಡುತ್ತ ಕುಳಿತರು. ಅವರ ಕೆಲವು ಹುಡುಗರು ಕೆರೆಯಲ್ಲಿ ಹಲಪಿತೂರುತ್ತ-ತೂರುತ್ತ ದಂಡೆಗುಂಟ ಸಾಗಿದರು. ಆಗ ಅವರೊಳಗಿನ ಒಬ್ಬ ಕಿಡಿಗೇಡಿಯ ಕಣ್ಣಿಗೆ ಕೆರೆದಂಡೆಯ ಮೇಲೆ ಬಿಸಿಲಿಗೆ ಮೈಚಲ್ಲಿ ಮಲಗಿದ ನಾಗರ ಹಾವೊಂದು ಕಂಡಿತು. ಬಿಸಿಲಿಗೆ ಅದರ ಮೈ ಮಿಂಚುತ್ತಿದ್ದುದರಿಂದ ಆ ಹುಡುಗನಿಗೆ ಕೌತುಕವೆನಿಸಿ ಅದನ್ನು ತನ್ನ ಸಂಗಡಿಗರೆಲ್ಲ ತೋರಿಸಿ ತಾನೊಂದು ಕಲ್ಲು ಬೀಸಿದನು. ತನ್ನೆಡೆಗೆ ಕಲ್ಲು ಬಂದುದರಿಂದ ಆ ಚಪಲ ನಾಗರ ಹಾವು ಕೆರಳಿ ಹೆಡೆಬಿಚ್ಚಿ ಹುಡುಗರ ಕಡೆಗೆ ನೋಡಿ, ಸಳ್ಳನೆ ಹರಿದು ಬಂದು ಆ ಕಲ್ಲು ಹೊಡೆದ ಹುಡುಗನ ಕಾಲಿಗೆ ಸುತ್ತು ಹಾಕಿತು. ಅದರಿಂದ ಘಾಬರಿಯಾದ ಹುಡುಗನು ಅದರ ಬಿಗಿತ ತಪ್ಪಿಸಿಕೊಳ್ಳಲೆಂದು ಯತ್ನ ಮಾಡ ಹತ್ತಲು ಆ ಕೆರಳಿದ ಹಾವು ಮನಬಂದಂತೆ ಅವನನ್ನು ಕಚ್ಚತೊಡಗಿತು. ಕೊನೆಗೂ ಬಂಧನದಿಂದ ಬಿಡಿಸಿಕೊಳ್ಳುವುದು ಹುಡುಗನಿಂದಾಗಲಿಲ್ಲ. ಮುಖ ಚಾಚಿ ಸರ್ಪ ಮೈತುಂಬ ಕಚ್ಚಿತು. ನಿರುಪಾಯನಾಗಿ ಹುಡುಗ ಅಳಲಾರಂಭಿಸಲು ಉಳಿದ ಹುಡುಗರು ಭಯದಿಂದ ತಮ್ಮ ಜನರಿದ್ದ ಸ್ಥಳಕ್ಕೆ ಓಡಿಬಂದು ಎಲ್ಲ ಸುದ್ದಿಯನ್ನು ತಿಳಿಸಿದರು.

ತಮ್ಮ ಮಗನ ಅವಸ್ಥೆಯನ್ನು ಕಂಡ ತಾಯ್ತಂದೆಗಳ ಶೋಕವನ್ನಂತೂ ಹೇಳಲಾಸಲ್ಲ. 'ಅಪ್ಪ ಬಿಡಿಸಿರೋ' 'ಅವ್ವ ಬಿಡಿಸಿರೇ' ಎಂದು ಒಂದೇ ಸವನೆ ಚೀರುತ್ತಿದ್ದರು. ತಾಯಿಯಂತೂ 'ಮಗನೇ, ಆ ಹಾವು ಹಿಡಿದು ದೂರ ಬಿಸುಟು. ಹೊತ್ತು ಮಾಡಬೇಡ' ಎಂದು ಅತ್ತು ಅತ್ತು ನೆಲಕ್ಕೆ ಕುಸಿದಳು. ಆ ಅದ್ಭುತ ಸರ್ಪವನ್ನು ಕಂಡು ಭೀತಿಗೊಂಡ ತಂದೆಯು ಕೂಡ

ಮುಂದೆ ಹೆಜ್ಜೆ ಇಡದಾದನು. ಈ ಪ್ರಸಂಗದಲ್ಲಿ ಆ ಹುಡುಗನ ಅವಸ್ಥೆ ಕಂಡು ಎಲ್ಲರಿಗೆ ಮರುಕವೆನಿಸುತ್ತಿದ್ದರೂ ಉಪಾಯಗಾಣದಾಗಿದ್ದರು. ಯಾಕಂದರೆ ಪ್ರತಿಯೊಬ್ಬರಿಗೆ ತಮ್ಮ ಜೀವ ಹೆಚ್ಚಿನದು. ಕೆಲವರು ಆಸ್ತೀಕನನ್ನು ಸ್ಮರಿಸುವರು. ಕೆಲವರು ಕಾಲಭೈರವನನ್ನು ನೆನೆಯುವರು. ಇತರರು ಉದ್ದವಾದ ಕೋಲು ಸಂಪಾದಿಸಿ ದೂರದಿಂದ ಹಾವು ಹೊಡೆದು ಹುಡುಗನನ್ನು ಬಿಡಿಸಬೇಕೆಂದು ಅತ್ತಿತ್ತ ಅಲೆದಾಡುವರು. ಆ ಹುಡುಗ ಕೂಡ ತನ್ನ ಜೀವ ಉಳಿಸಿಕೊಳ್ಳಬೇಕೆಂದು ಸರ್ಪ ಬಂಧನದಿಂದ ಬಿಡುಗಡೆಯಾಗಬೇಕೆಂದು ನಾನಾ ಬಗೆಯಿಂದ ಪ್ರಯತ್ನ ಮಾಡುವನು. ಆದರೆ ಸರ್ಪವೇನು ತನ್ನ ಸುತ್ತು ಸಡಲಿಸಲಿಲ್ಲ. ಎಲ್ಲರೂ ಕಣ್ಣೀರುದುರಿಸುತ್ತ ಆ ಪ್ರಸಂಗವನ್ನು ನೋಡುತ್ತಿದ್ದರು. ಆ ಹುಡುಗನ ತಂದೆ ತಾನೇ ಹೋಗಿ ಮಗನನ್ನು ಬಿಡಿಸಿಕೊಳ್ಳಬೇಕೆಂದು ಎಷ್ಟೋ ಸಾರೆ ಹವಣಿಸಿದನು. ಆದರೆ ಜನ ಮುಂದೆ ಬಿಡಲಿಲ್ಲ. ಸದ್ಗುರುನಾಥದ ಇಚ್ಚೆ ಇದ್ದಂತಾಗಲಿ ಎಂದು ಅವನು ನಿರಾಶನಾದನು.

ಇಷ್ಟೆಲ್ಲ ಗೊಂದಲದಲ್ಲಿ ಯಾರೋ ಒಬ್ಬರು ಸಿದ್ಧನ ಬಳಿಗೆ ಹೋಗಿ ನಡೆದ ಸಂಗತಿಯನ್ನರುಹಲು ಅವನು ಲಗುಬಗೆಯಿಂದ ಆ ಸ್ಥಳಕ್ಕೆ ಬಂದು ಗರುಡನಂತೆ ಆ ಸ್ಥಳಕ್ಕೆ ಧಾವಿಸಿದನು. ಅಷ್ಟರಲ್ಲಿ ಆ ಹುಡುಗನಿಗೆ ಎಚ್ಚರ ತಪ್ಪತೊಡಗಿತ್ತು. ಮೊದಲು ಸಿದ್ಧನು ಸರ್ಪದ ಮುಖವನ್ನು ಹಿಡಿಯಲು ಅದು ಆ ಹುಡುಗನ ಕಾಲಿನ ಸುತ್ತು ಸಡಲಿಸಿತು. ಹುಡುಗ ಕೆಳಗುಳಿದನು. ಆಗ ಗುರುನಾಥನು ಸರ್ಪವನ್ನು ದೂರಕ್ಕೆ ಬಿಸುಟಿ ಮೈತುಂಬ ಹಾವು ಕಡಿದು ಮರಣೋನ್ಮುಖನಾದ ಹುಡುಗನ ಮೈಮೇಲೆ ತನ್ನ ಅಮೃತ ಹಸ್ತವನ್ನು ಸವರಿದನು. ಅದರಿಂದ ವಿಷಬಾಧೆ ನೀಗಿ ಹುಡುಗನು ಎದ್ದು ಕುಳಿತು ಅತ್ತಿತ್ತ ನೋಡಲಾರಂಭಿಸಲು ಆಗ ತಾಯ್ತಂದೆಗಳು ಓಡಿ ಬಂದು ಮಗನ ಮೈದಡವತೊಡಗಿದರು. ಅದನ್ನು ಕಂಡು ಸಿದ್ಧ ನಸುನಗುತ್ತ 'ಇವರು ತಂದೆತಾಯಿಗಳು. ಮಕ್ಕಳಲ್ಲಿ ಎಣೆಯಿಲ್ಲದ ಪ್ರೀತಿ- ಆದರೆ ಸಂಕಟ ಕಾಲದಲ್ಲಿ? ಯಾರಿಗೆ ಯಾರು ? ತನ್ನ ಜೀ ತನಗೆ ಹೆಚ್ಚಿನದು. ಇವರ ಪ್ರೀತಿ ಸ್ವಾರ್ಥಮಯ' ಎಂದುಕೊಂಡು ಆ ಹುಡುಗನನ್ನು ಮಠಕ್ಕೆ ಕರೆದೊಯ್ದು ಹಣೆಗೆ ವಿಭೂತಿಯನ್ನು ಹಚ್ಚಿ ನುಡಿದನು. 'ಮಗು, ಇನ್ನು ಮೇಲೆ ನಿನಗೆ ಮರಣ ಭಯ

ವಿಲ್ಲ. ಆರಾಮವಾಗಿ ಹೋಗು' ಎನ್ನಲು ಆ ಹುಡುಗ ತಾಯ್ತಂದೆಗಳ ಬಳಿಗೆ ಬಂದು ಅವರೊಡನೆ ಸುಖರೂಪವಾಗಿ ಮನೆಗೆ ಮುಟ್ಟಿದನು.

ತಿಳಿದ ಜನ ಮಾತಾಡಿಕೊಂಡರು.

'ಇದೇ ರೀತಿ ಆಡಾಡುತ್ತ ಕಾಲಸರ್ಪವು ಮನುಷ್ಯನನ್ನು ಸುತ್ತುಗಟ್ಟಿ ಕ್ಷಣ ಕ್ಷಣಕ್ಕೆ ಕಚ್ಚುತ್ತ ಅವನ ಆಯುಷ್ಯ ನಾಶ ಮಾಡುತ್ತದೆ. ಇದನ್ನು ತಪ್ಪಿಸಲು ತಾಯಿ-ತಂದೆ-ಬಂಧು-ಬಳಗ ಯಾರಿಗೂ ಸಾಮರ್ಥ್ಯವಿಲ್ಲ. ಈ ವಿಷಯದಲ್ಲಿ ಎಲ್ಲರೂ ಅಸಹಾಯರು. ಶೋಕವನ್ನು ಮಾತ್ರ ಸಾಕಷ್ಟು ಪ್ರದರ್ಶಿಸಬಲ್ಲರು. ಸದ್ಗುರು ಭಕ್ತಿ-ದೇವಭಕ್ತಿಯುಳ್ಳವರಿಗೆ ಮಾತ್ರ ಕಾಲಸರ್ಪದ ಭಯವಿಲ್ಲ.'

ಯಾಕಂದರೆ ಸದ್ಗುರು- ದೇಶ - ಕಾಲಾದಿಗಳನ್ನು ಮೀರಿದ ಚೈತನ್ಯ ಸ್ವರೂಪನು. ದೇವನೆನಿಸಿದ ಶ್ರೀ ಹರಿಯು ಸರ್ಪವನ್ನು ಹಾಸಿಗೆ ಮಾಡಿಕೊಂಡವನು ಶ್ರೀ ಶಂಕರನು ಸರ್ಪವನ್ನು ಆಭರಣ ಮಾಡಿಕೊಂಡವನು.

೧೭

ಸುಖಂ ವಾ ಯದಿ ವಾ ದುಃಖಂ। ಯತ್ಕಿಂಚಿತ್ ಕ್ರಿಯತೇ ಪರೇ।
ತತಸ್ತತ್ತು ಪುನಃ ಪಶ್ಚಾತ್ ಸರ್ವಮಾತ್ಮನಿ ಜಾಯತೇ ॥

—ಸುಭಾಷಿತ

ಮತ್ತೊಬ್ಬರಿಗೆ ನಾವು ಅಲ್ಪ-ಸ್ವಲ್ಪ ಸುಖವಾಗುವಂತೆ ಮಾಡಲಿ. ಅಥವಾ ದುಃಖವಾಗುವಂತೆ ಮಾಡಲಿ ಮುಂದೆ ಅದು ನಮ್ಮ ಅನುಭವಕ್ಕೆ ಬಂದೇ ಬರುತ್ತದೆ.

ಈಗ ಸಿದ್ಧಾರೂಢ ಸ್ವಾಮಿಯ ಶಿವರಾತ್ರಿ ಉತ್ಸವವು ಬಹಳ ಸಡಗರದಿಂದ ನಡೆಯುತೊಡಗಿತ್ತು. ಪಂಡಿತ-ಪಾಮರ, ಸುಜನ-ದುರ್ಜನ, ಆಸ್ತಿಕ-ನಾಸ್ತಿಕ, ಕಲಾವಂತ-ಮೂಢ ಇತ್ಯಾದಿಯಾಗಿ ಎಲ್ಲ ಜನರು ಕೂಡುವರು. ಆದುದರಿಂದಲೇ ಅದು ಮಹೋತ್ಸವವೆನಿಸಿತ್ತು.

ಬೇರೆ ಬೇರೆ ಸರಕು ಮಾರುವ ವ್ಯಾಪಾರಿಗಳು ಉತ್ಸವಕ್ಕೆ ಎಷ್ಟೋ ಮೊದಲು ತಮ್ಮ ಅಂಗಡಿಗೆ ಸ್ಥಳ ಗೊತ್ತು ಮಾಡಿಕೊಂಡು ಚಪ್ಪರ ಹಾಕಿಸುವರು. ಆಟಗಾರರು ನೆರೆಯುವರು. ವಾದ್ಯ ಮೇಳದವರು ಬರುವರು. ಒಟ್ಟು ಇದೊಂದು ಪ್ರದರ್ಶನ. ಭಿನ್ನ-ಭಿನ್ನ ರುಚಿಯ ಜನಗಳು ದಿಗ್ದೇಶಗಳಿಂದ ನೋಡುವುದಕ್ಕೆ ಕಲೆತು ತಮ್ಮ ರುಚಿಗೊಪ್ಪುವ ಸರಕನ್ನು ಕೊಂಡೊಯ್ಯುವರು. ಕೆಲವರು ಕಂಗಳನ್ನು ತೃಪ್ತಿಗೊಳಿಸಿ ಸುಮ್ಮನೆ ನಡೆಯುವರು.

ಆ ದಿನ ಆಶ್ರಮದ ಮುಂದಿರುವ ಕೆರೆ ದಂಡೆಗಿರುವ ಮಾವಿನ ಮರದಡಿಯಲ್ಲಿ ನಾಲ್ವರು ಪ್ರತಿಷ್ಠಿತ ಜಂಗಮರು ಕುಳಿತು ಮಾತಾಡುತ್ತಿದ್ದರು. ಅವರೆಲ್ಲ ತಮ್ಮ ಧರ್ಮಲಾಂಛನಗಳೆನಿಸುವ ಲಿಂಗ ಸಂಪುಟಗಳನ್ನು ಧರಿಸಿಕೊಂಡು ಹಣೆಗೆ ಭವ್ಯವಾಗಿ ವಿಭೂತಿಯನ್ನು ಹಚ್ಚಿಕೊಂಡವರು. ಅವರಿಗೆ ಭಾವಿಕರು ಮಾಡುತ್ತಿರುವ ನಾಮ ಘೋಷವು ಕೇಳಿರಲಿಲ್ಲ. ಉತ್ಸವ ಕಾಲದಲ್ಲಿ ಉಲ್ಲಾಸದಿಂದ ಓಡಾಡುತ್ತಿರುವ ನರ-ನಾರಿಯರು ಕಾಣುತ್ತಿರಲಿಲ್ಲ. ಅಲಂಕೃತವಾದ ರಥವು ಮನಸೆಳೆದಿರಲಿಲ್ಲ. 'ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡಲಿಲ್ಲ.' ಎಂಬ ಗಾದೆಯಂತೆ ತಮ್ಮ ಹುಳಿತ-ಕೊಳೆತ ಮನವನ್ನು ಕಟ್ಟಿಕೊಂಡು ಬಂದು ಅದರ ದುರ್ಗಂಧವನ್ನು ಇಲ್ಲಿ ಹಬ್ಬಿಸತೊಡಗಿದ್ದರು. ಅವರಲ್ಲೊಬ್ಬನು ಮಾತಿಗೆ ಮೊದಲು ನುಡಿದನು.

'ಇವನು ಆರೂಢನಂತೆ. ಆರೂಢ ಶುದ್ಧ ಮೂಢ. ಬುದ್ಧಿಗೇಡಿಗಳನ್ನು ಮಾಚಿಸುತ್ತ ಮೆರೆಯುತೊಡಗಿದ್ದಾನೆ. ಇವನ ಉರವಣಿಗೆ ಯಾವಾಗ ಅಡಗುವುದೋ ಎನ್ನುವಂತಾಗಿದೆ.'

ಇನ್ನೊಬ್ಬ ನುಡಿದನು. 'ನಾನೂ ಅದೇ ಅನ್ನುತ್ತೇನೆ. ಇವನಿಗೆ ಜಾತಿ-ಮತ ಯಾವುದೂ ಇಲ್ಲ. ಮೇಲೆ ತಾನು ಲಿಂಗವಂತನೆಂದು ಹೇಳಿಕೊಳ್ಳುತ್ತಾನಂತೆ. ಲಿಂಗವಿಲ್ಲದವನು ಲಿಂಗವಂತ ಹೇಗಾಗುವನು ? ಇವನು ಭವಿ. ಧರ್ಮಾಭಿಮಾನಿಗಳು ಇವನ ಮುಖ ನೋಡಬಾರದು. ಆದರೆ ಕಲಿಕಾಲ ನೋಡಿದಿರಾ. ಬುದ್ಧಿಗೇಡಿಗಳಾದ ಜನರು ಇವನ ಪಾದಗಳಿಗೆರಗುತ್ತಾರೆ. ಜನರ ಮಾತಿರಲಿ. ತಿಳಿದವನೆನಿಸುವ ಆರೂಢನಾದರೂ ಹಾಗೆ ಮಾಡಬೇಡಿರೆಂದು ಜನರಿಗೆ ಹೇಳಿ ಧರ್ಮವನ್ನು ತಿಳಿಸಬಾರದೇ ? ಲಿಂಗವಂತ ಧರ್ಮದಲ್ಲಿ ಜಂಗಮಸ್ಥಾನ ಬಹಳ ಹೆಚ್ಚಿನದು. ಎಲ್ಲರೂ ಅವರಿಗೆ ಮಾತ್ರ ಕಾಲಿಗೆ

ರಗಬೇಕು. ಉಳಿದವರು ವಂದ್ಯರಲ್ಲ. ಎಂದರಾದರೂ ನಾನು ಒಪ್ಪುತ್ತಿದ್ದೆ ಆದರೆ ಇಲ್ಲಿ ನಡೆಯುವುದೇನು. ಆರೂಢನಂತೂ ಧರ್ಮಹೀನ. ಜನರನ್ನೂ ಅದೇ ದಾರಿಗೆಳೆಯುತ್ತಾನೆ. ತೀರಿತು.

ಮತ್ತೊಬ್ಬನಂದನು. 'ಜನರು ಇವನಿಗೆ ಸಿದ್ಧಪುರುಷನೆನ್ನುತ್ತಾರೆ. ನಿನ್ನೆ ಇವನ ಸಿದ್ಧಿ ತಿಳಿದುಹೋಯಿತು. ನಾಲ್ಕು ಜನ ಮಹಮ್ಮದೀಯರು ಬಂದು ಮೈಮುರಿ ಥಳಿಸಬಾರದೇಕೆ? ಇವನು ಆಗ ಏನಾದರೂ ಮಾತಾಡಿದ್ದು? ಮಾತುಬೇಡ ತನ್ನ ಸಿದ್ಧಿಯಿಂದ ಅವರಿಗೇನಾದರೂ ದಂಡನೆ ಮಾಡಿದ್ದು. ಕೇಳಬೇಡ. ಹೊಡೆತ ತಿಂದು ನರಳುತ್ತ ಕುಳಿತ ಛೀ ಈ ಸಿದ್ಧಾರೂಢ ಶುದ್ಧ ನಾಚಿಕೆಗೇಡಿ ಈಗ ನೋಡುವಿರಂತೆ ವೇಷ ಕಟ್ಟಿಕೊಂಡು ಹೇಗೆ ರಥದಲ್ಲಿ ಕೂಡುತ್ತಾನೆ. ಥೂ. ನಮ್ಮಂಥವರು ಅವನ ಮುಖ ನೋಡಬಾರದು!'

ನಾಲ್ಕನೆಯವನು ಹೇಳಿದನು.

'ಇದೆಲ್ಲ ಇರಲಿ. ಈಗ ನಾಲ್ಕು ತಿಂಗಳ ಹಿಂದೆ ನಾನು ಒಂದು ದಿನ ರಾತ್ರಿ ಚಿದ್ಘನಾನಂದರ ಸಮಾಧಿಯ ಕಡೆಗೆ ಹೋಗಿದ್ದೆ. ಸಿದ್ಧ ಅಲ್ಲಿರುವ ಕಟ್ಟೆಯ ಮೇಲೆ ಕುಳಿತಿದ್ದನು. ಮೆಲ್ಲನೆ ನಾನು ಅವನ ಹಿಂದೆ ಹೋಗಿ ಕೈಹಾಕಿ ತಲೆಮುಟ್ಟಿ ನೆಗವಿ ಕಸುವಿನಿಂದ ಅಪ್ಪಳಿಸಿಬಿಟ್ಟೆನು. ಅದೇ ಈ ದುರಾಚಾರಿಗೆ ಯೋಗ್ಯ ಯೋಗ್ಯ ಶಿಕ್ಷೆಯಲ್ಲವೇ?'

ಈ ಮಾತು ಕೇಳಿ ಒಂದನೆಯವ ಅಂದನು 'ನೀನು ಹೀಗೆ ಮಾಡಿದ್ದೇನೂ ಒಳಿತಾಗಲಿಲ್ಲ. ಬೇಕಾದರೆ ಅವನೊಡನೆ ವಾದಮಾಡಿ, ಅಥವಾ ಬೋಧಮಾಡಿ ಹಾದಿಗೆ ತರುವ ವಿಚಾರ ಮಾಡಬೇಕಿತ್ತು. ಇದೆಲ್ಲ ನಿನ್ನ ಕಥೆ ನಮಗೇನು ಗೊತ್ತು. ತಿಂಗಳೆರಡು ತಿಂಗಳಲ್ಲಿ ಹೆಂಡತಿ-ಮಕ್ಕಳನ್ನು ನೀಗಿ ಉಂಡಾಡಿಯಾಗಿ ತಿರುಗುತಿರುವೆ.' ಈಗ ಸರಿಯಾಯಿತು.

ನಾಲ್ಕನೆಯವ ನುಡಿದನು. 'ಅವನಿಗೆ ಶಿಕ್ಷೆ ಮಾಡಿದ್ದರ ಫಲವೆಂದು ನನಗೆ ಹೀಗಾಯಿತೆನ್ನುವೆಯ? ಇವನೇನು ದೊಡ್ಡ ಸಿದ್ಧಪುರುಷ ಬಿಡು. ಸುಮ್ಮನೆ ಎಲ್ಲ ಥಳಕು-ಬೆಳಕು ಒಳಗೆಲ್ಲ ಟೊಳ್ಳು. ನನ್ನ ಹೆಂಡತಿ ಮಕ್ಕಳು ಇವನ ಶಾಪದಿಂದೇನೂ ಸತ್ತಿಲ್ಲ. ಸಾವು ಬಂದರೆ ಯಾರು ಉಳಿಯುತ್ತಾರೆ?'

ಎರಡನೆಯವ ಹೇಳಿದನು. ಹೋಗಲಿ ಬಿಡಿರಿ ಹಾಳುಮಾತು. ಈಗ ಸಿದ್ಧಗೆ ಕಿರೀಟ ಹಾಕಿ ರಥದಲ್ಲಿ ಕುಳ್ಳಿರಿಸುತ್ತಾರೆ. ಅವನು ಹೇಗಾದರೂ ಇರಲಿ. ಅವನ ವೈಭವವನ್ನಾದರೂ ನೋಡೋಣ ನಡೆಯಿರಿ.'

ಎಲ್ಲರೂ ಮಾತು ಮುಗಿಸಿ ಅತ್ತ ನೋಡುವುದಕ್ಕೆ ನಡೆದಿರಲು ಮಾರ್ಗದಲ್ಲಿ ಹಿರೇಮಠದ ಪಟದಪ್ಪನವರು ಕೂಡಿ ಮಾತನಾಡುತ್ತ ಸಾಗಿದರು. ಪಟದಪ್ಪನವರ ಲಕ್ಷವು ಹೊರಳಿ 'ರುದ್ರಯ್ಯ, ಲಿಂಗವನ್ನೆಲ್ಲಿ ಬಿಟ್ಟಿರುವೆಯೋ?' ಎಂದು ಕೇಳಿದರು. ಅವನು ಎದೆಯಮೇಲೆ ಕೈಯಾಡಿಸಿಕೊಳ್ಳುತ್ತ 'ಯಾಕೆ? ಯಾಕೆ? ಇಲ್ಲಿಯೇ ಇದೆ.' ಎಂದು ನುಡಿದನು. ಉಳಿದ ಮೂವರೂ ಇದರಿಂದ ಜಾಗ್ರತರಾಗಿ ತಂತಮ್ಮ ಲಿಂಗಗಳನ್ನು ನೋಡಿಕೊಳ್ಳಲಾರಂಭಿಸಿದರು. ಯಾರಿಗೂ ಲಿಂಗ ಸಂಪುಟಗಳಿರಲಿಲ್ಲ. ಎಲ್ಲರಿಗೂ ಆಶ್ಚರ್ಯವಾಯಿತು. ಬಂದ ದಾರಿಯಿಂದ ಹುಡುಕುತ್ತ ಹೋದರು. ದೊರೆಯದೇ ನಿರಾಶೆಯಾಯಿತು.

ಪಟದಪ್ಪನವರು 'ಪಾಪಿಗಳಿರ ಇಷ್ಟಲಿಂಗವನ್ನು ಕಳೆದುಕೊಂಡ ನೀವು ದೇಹಾಂತ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅದರ ಹೊರತೂ ನಿಮಗೆ ಗತಿ ಇಲ್ಲ.'

ಒಬ್ಬರ ಮಾರಿಯನ್ನೊಬ್ಬರು ಮಿಕಿ-ಮಿಕಿ ನೋಡತೊಡಗಿದರು. ರುದ್ರಯ್ಯ ನುಡಿದನು. 'ಇದೊಳ್ಳೇ ಆಶ್ಚರ್ಯ ಆಗಲೇ ನೋಡಿಕೊಂಡಾಗ ಇದ್ದಿತು. ಇಷ್ಟರಲ್ಲಿ ಹೇಗೆ ಹೋಗಬೇಕು?

ಅವನ ಮಾತು ಕೇಳಿ ಪಟದಪ್ಪನವರು ಗುರುನಿಂದ್ಯೆಯನ್ನೇನಾದರೂ ನೀವು ಮಾಡಿರಬೇಕು. ಅದರಿಂದ ನಿಮಗೆ ಇಂಥ ಗತಿಯೊದಗಿದೆ.' ಎಂದರು.

ರುದ್ರಯ್ಯ ಹೌದೆಂದು ಒಪ್ಪಿಕೊಂಡನು.

ಪುನಃ ಪಟದಪ್ಪನವರು ಹೇಳಿದರು 'ನಿಜವಾದ ಸಂಗತಿಯನ್ನು ಒಪ್ಪಿಕೊಳ್ಳಿರಿ ಮುಚ್ಚಿಡುವುದು ಮಹಾ ಪಾಪ.'

ನಡೆದ ಸಂಗತಿಯನ್ನೆಲ್ಲ ರುದ್ರಯ್ಯ ಸಾದ್ಯಂತವಾಗಿ ಹೇಳಲು ಪಟದಪ್ಪನವರು ಅದರ ಫಲವೇ ಇದು. ಈ ನೀವು ಅನುಭವಿಸುತ್ತಿರುವುದು ಬರಿಯ ದುರ್ಗತಿ. ಈಗಲೇ ನೀವು ಸದ್ಗುರುವಿನ ಬಳಿಗೆ ಹೋಗಿ ಅವನಲ್ಲಿ ಕ್ಷಮೆ ಬೇಡಿ

ಕೊಂಡರೆ ನಿಮ್ಮ ಕಲ್ಯಾಣ. ಇಲ್ಲವಾದರೆ ಇನ್ನೂ ಏನೇನು ವಿಪತ್ತುಗಳು ಒದಗುವವೋ ಹೇಳಲಾಗುವುದಿಲ್ಲ.

ಹೀಗೆ ಹೇಳಿ ಪಡದಪ್ಪನವರ ಮಾತಿಗೆ ಸಮ್ಮತಿಸಿ ಮೂವರೂ ಅವರನ್ನು ಹಿಂಬಾಲಿಸಿದರು. ನಾಲ್ಕನೆಯವನು 'ನಾನಂತೂ ಮೋಟುಮರ.' ನನಗೆ ಇನ್ನೇನು ವಿಪತ್ತುಗಳು ಬರಬೇಕಾಗಿದೆ. ಈ ಲಿಂಗ ಹೋದರೆ ಇನ್ನೊಂದು ಕಟ್ಟಿಕೊಳ್ಳುತ್ತೇನೆ. ಅದೂ ಹೋದರೆ ಮತ್ತೊಂದು ಕಟ್ಟಿಕೊಂಡರಾಯಿತು. ಅಷ್ಟು ಜನರ ಮಧ್ಯದಲ್ಲಿ ಹೋಗಿ ಆ ಭವಿಯ ಪಾದಕ್ಕೆ ಮಣಿಯುವುದಕ್ಕೆ ನಾನು ಸಿದ್ಧನಿಲ್ಲ.' ಎಂದುಕೊಂಡು ಅಪಮಾನದಿಂದ ಕುದಿಯುತ್ತ ಕೋಪಾಗ್ನಿಯಿಂದ ಸುಡುತ್ತ ಅಲ್ಲಿಯೇ ಉಳಿದನು.

ಪಟದಪ್ಪರೊಡನೆ ಬಂದ ಆ ಮೂವರು ಸಿದ್ಧನ ಪ್ರಶಾಂತ ಮನೋಹರ ಮೂರ್ತಿಯನ್ನು ಕಂಡರು. ತಲೆಗಳು ತಂತಾವೇ ಮಣಿದವು. ಮಠದ ಮುಂಭಾಗದಲ್ಲಿ ಸುಂದರವಾದ ಹಂದರ. ಅಲ್ಲಿ ಅಲಂಕೃತವಾದುದೊಂದು ಪೀಠ. ಅದರ ಮೇಲೆ ಸದ್ಗುರುಮೂರ್ತಿ ವಿರಾಜಮಾನ. ದಿವ್ಯ ಪೀತಾಂಬರವನ್ನು ಹೊತ್ತಿದ್ದಾನೆ. ಮನೋಹರವಾದ ಪುಷ್ಪಮಾಲಿಕೆ ಕೊರಳಲ್ಲಿ ಶೋಭಿಸುತಿದೆ. ಜ್ಞಾನತೇಜದಿಂದ ಮುಖಮಂಡಲ ಪ್ರಕಾಶಮಾನವಾಗಿದೆ. ಶಾಂತಿ ಅದರ ಬಳಿಯಲ್ಲಾಡುತಿದೆ. ಪಾವನತೆ ಪವನವಾಗಿ ಸುಳಿಯುತಿದೆ.

ಆ ಮೂರ್ತಿಯನ್ನು ಕಂಡು ದೇವರಿಲ್ಲವೆಂದು ವಾದಿಸುವವರೂ ಇರುವನೆಂದು ತಿಳಿಯುವಂತಾಗಬೇಕು. ಆ ಜ್ಞಾನ ಸೂರ್ಯದರ್ಶನದಿಂದ ಎಲ್ಲರ ಹೃತ್ಕಮಲಗಳರಳಬೇಕು. ಕವಿಚಾರರೂಪಿ ಘೂಕಸಂತತಿಯು ಸದ್ದಡಗಬೇಕು. ಸಾತ್ವಿಕತೆಯ ಸುಳಿಗಾಳಿ ಸೂಸಬೇಕು. ಶುಭವಿಚಾರರೂಪಿ ಹಕ್ಕಿ-ಪಕ್ಕಿಗಳ ಕಿಲ-ಬಿಲಧ್ವನಿ ಶ್ರವಣ ಮಂಗಲವೆನಿಸಬೇಕು. ಆತ್ಮಧನವನ್ನು ಕದ್ದುಕೊಳ್ಳಲೆತ್ನಿಸುವ ಕಾಮ-ಕ್ರೋಧಾದಿ ರೂಪದ ಚೋರರ ಉಪದ್ರವ ಇಲ್ಲದಂತಾಗಬೇಕು.

ಇದು ಬೆಳಗು. ಅಜ್ಞಾನದ ಕತ್ತಲೆಯನ್ನು ನಾಶಮಾಡುವ ಬೆಳಗು.

ಆ ಜಂಗಮತ್ರಯರಿಗೆ ಸದ್ಗುರು ಮೂರ್ತಿಯನ್ನು ಕಂಡು ಅನಿಸಿದುದು ಹೀಗೆ. ಅವರೆಲ್ಲ ಅಷ್ಟರಲ್ಲಿ ಪಶ್ಚಾತ್ತಾಪದಗ್ಧರಾಗಿ ಗುರುನಿಂದೆಯ ಪಾಪದಿಂದ

ಪುಲಕಿತರಾಗಿದ್ದರು. ಕಂಗಳು ನೀರು ತುಂಬಿದ್ದವು. ಕರಗಳು ಅಂಜಲಿಬದ್ಧವಾಗಿದ್ದವು. ಮನವು ಸದ್ಗುರು ಪದತಲದಲ್ಲಿ ಲೀನವಾಗಿತ್ತು.

ಅವರನ್ನು ಹಿಂದಿಟ್ಟುಕೊಂಡು ಪಟದಪ್ಪನವರೇ ಮುಂದಾದರು. ಸಿದ್ಧನು ಕುಳಿತುಕೊಳ್ಳುವಂತೆ ಅವರಿಗೆ ಸೂಚಿಸಲು ಆ ಮೂವರೂ ಸದ್ಗುರು ಚರಣಗಳಿಗೆ ವಂದಿಸಿ ಕೈಮುಗಿದು ತಲೆ ಬಗ್ಗಿಸಿ ನಿಂತುಕೊಂಡರು. ಆಗ ಪಟದಪ್ಪನವರು ಹೇಳಿದರು. 'ಸದ್ಗುರುನಾಥನೇ, ಈ ಮೂವರೂ ತಮಗೆ ಶರಣು ಬಂದಿದ್ದಾರೆ. ಅವರನ್ನು ದಯಾದೃಷ್ಟಿಯಿಂದ ನೋಡಬೇಕು. ಮತ್ತು ನಿನ್ನನ್ನು ನಿಂದಿಸಿ ಮಾಡಿದ ತಪ್ಪನ್ನು ಕ್ಷಮಿಸಬೇಕು.' ಎನ್ನಲು ಸದ್ಗುರು ನುಡಿದನು. 'ಅವರು ನಿಮ್ಮ ಮುಂದೆ ತಪ್ಪನ್ನು ಒಪ್ಪಿಕೊಂಡಾಗಲೇ ಕ್ಷಮಿಸಿದ್ದೇನೆ,'ಎಂದು ತನ್ನ ಹಿಂದೆ ಕೈಹಾಕಿ ಕಳೆದುಹೋದ ಅವರ ಲಿಂಗ ಸಂಪುಟಗಳನ್ನು ತೆಗೆದು ಕೊಟ್ಟನು. ಈ ಅಘಟಿತ ಘಟನೆ ಅವರಿಗೆ ಆಶ್ಚರ್ಯವನ್ನುಂಟುಮಾಡಲು ಸಿದ್ಧನು 'ಹೌದೇನೋ ನೋಡಿಕೊಳ್ಳಿ. ಹಾದಿಯಲ್ಲಿ ಹುಡುಗನೊಬ್ಬನಿಗೆ ಸಿಕ್ಕಿದ್ದವಂತೆ. ಅವನು ತಂದು ಇಲ್ಲಿ ಕೊಟ್ಟಿದ್ದ.' ಎಂದು ಹೇಳಿದನು. ಆ ಮೂವರೂ ಮೌನದಿಂದ ತಮ್ಮದನ್ನು ಆರಿಸಿಕೊಂಡು ಕೊರಳಿಗಿಟ್ಟುಕೊಳ್ಳುತ್ತ ಗುರುವಿಗೆ ವಂದಿಸಲು ಗುರುವು ನಸುನಗುತ್ತ 'ಇನ್ನೊಮ್ಮೆ ಆ ಶಿವನು ನಿಮ್ಮನ್ನು ಬಿಟ್ಟು ಹೋಗದಂತೆ ಜಾಗ್ರತೆ ವಹಿಸಿರಿ. ತಿಳಿಯಿತೇ?' ಎಂದು ನುಡಿದನು.

ನಾಲ್ಕನೆಯ ಸಂಪುಟವೊಂದು ಕೈಯಲ್ಲುಳಿದ ಪಟದಪ್ಪನವರು ಅವನಿದ್ದಲ್ಲಿಗೆ ಹೋಗಿ ಅದನ್ನು ಕೊಟ್ಟು ತಿಳಿಹೇಳಿ ಕರತರಬೇಕೆಂದು ಹೊರಟರು. ಇತ್ತ ಹಿಂದೆ ಉಳಿದ ನಾಲ್ಕನೆಯ ಜಂಗಮನು ಸಿದ್ಧನ ಸಮ್ಮುಖದಲ್ಲಿ ಬಾರದಿರುವ ಮುಖ್ಯ ಕಾರಣ ಬೇರೆಯೇ ಆಗಿತ್ತು. ಅವನೇ ಕೆಲವು ದಿನಗಳ ಹಿಂದೆ ಸಿದ್ಧನನ್ನು ಎತ್ತಿ ಅಪ್ಪಳಿಸಿದವನು. ಯಾವನನ್ನು ಕಂಡರೆ ತನಗಾಗುತ್ತಿರಲಿಲ್ಲವೋ ಯಾವನಿಗೆ ತಾನು ಕೇಡನ್ನೆಸಗಿದ್ದನೋ ಅಂಥವನ ಎದುರಿಗೆ ಹೋಗಿ ಕ್ಷಮೆ ಯಾಚಿಸುವುದು ಆ ಅಹಂಕಾರ ಗರ್ವಿತನಿಗೆ ನಾಚಿಕೆ ಹುಟ್ಟಿಸಿತ್ತು. ಹೀಗಾಗಿ ಅವನು ದರ್ಶನಕ್ಕೆ ಹೋಗಲು ಮುಂದಾಗಲಿಲ್ಲ. ದರ್ಶನಕ್ಕೂ ಹೋಗದಿರುವ ಈ ಅವಿವೇಕಿಯನ್ನು ಕಂಡು ಕೆಲ ಜನರು ಅವನನ್ನು ನಿಂದಿಸತೊಡಗಲು ಸಿಟ್ಟಿನಿಂದ ಅವನು ಒಬ್ಬನನ್ನು ಹೊಡೆದುಬಿಟ್ಟನು. ಜನರೆಲ್ಲ

ಕೂಡಿ ಇಂಥ ಉನ್ಮತ್ತನ ಶಾಸನ ಮಾಡಬೇಕೆಂದು ಮನಬಂದಂತೆ ಥಳಿಸ ತೊಡಗಿದರು. ಕೈಸಾಲದೇ ಕೆಲವರು ಕಾಲನ್ನೂ ಉಪಯೋಗ ಮಾಡಿದರು. ಆ ಜಂಗಮನು ಪೆಟ್ಟು ತಾಳಲಾರದೇ ಭೂಮಿಗೆ ಬಿದ್ದು ನರಳಲಾರಂಭಿಸಿದನು. ಆಗಲೇ ಪಟದಪ್ಪನವರು ಅವನನ್ನು ಹುಡುಕುತ್ತ ಬಂದರು. ಅವರನ್ನು ದೂರದಿಂದ ಜಂಗಮನು 'ಪಟದಪ್ಪನವರೇ ನಾನು ಸಾಯುತ್ತಿದ್ದೇನೆ. ಉಳಿಸಿರಿ.' ಎಂದು ಕೂಗಿಕೊಂಡನು. ಲಗುಬಗೆಯಿಂದ ಪಟದಪ್ಪ ಅಲ್ಲಿಗೆ ಬಂದು ಜನರನ್ನೆಲ್ಲ ದೂರ ಮಾಡಿ ನಡೆದ ಸಂಗತಿಯನ್ನೆಲ್ಲ ವಿಚಾರಿಸಿದರು. ಕೇಳಿ ಕನಿಕರವೆನಿಸಿತು. ಮೆಲ್ಲನೆ ಜಂಗಮನನ್ನು ಮೇಲಕ್ಕೆಬ್ಬಿಸಿ ನಿಲ್ಲಿಸಿದರು. ಆ ಅಯ್ಯನ ಅಭಿಮಾನವೆಲ್ಲ ಕರಗಿ ಕಣ್ಣೀರಾಗಿತ್ತು. ಅವನು ಕೇಳಿದನು. 'ಪಟದಪ್ಪನವರೇ, ನನ್ನಂಥ ಮಹಾ ಪಾಪಿಯನ್ನೂ ಗುರುನಾಥ ಕ್ಷಮಿಸುವನೇ?'

'ಅಯ್ಯ, ನೀನು ಬೇಡಿಕೊಂಡರೆ ಕ್ಷಮಿಸುವನು ಬಾ ಹೋಗೋಣ' ಎಂದು ನುಡಿದು ಪಟದಪ್ಪನವರು ಕೈಹಿಡಿದು ನಡಿಸತೊಡಗಿದರು. ಪೆಟ್ಟು ತಿಂದು ಆ ಅಯ್ಯನ ಎಲವು ಪುಡಿಪುಡಿಯಾದಂತಿದ್ದವು. ಬಹು ಕಷ್ಟದಿಂದ ಅವನು ಸಿದ್ಧನ ಬಳಿಗೆ ಬಂದನು. ಪಟದಪ್ಪನವರೇ ಸಿದ್ಧನ ಕಾಲುಗಳ ಮೇಲೆ ಹಾಕಿದರು. ಮತ್ತು ಅವನ ಕಥೆಯನ್ನೆಲ್ಲ ಹೇಳಿದರು. ಸಿದ್ಧನ ಹೃದಯ ಬೆಣ್ಣೆಯಂತೆ ಕರಗಿ ಹೋಯಿತು.

ಸಾಧು-ಸಜ್ಜನರ ಹೃದಯಕ್ಕೆ ಬೆಣ್ಣೆಯ ಉಪಮೆಯನ್ನು ಕೊಡುವುದು ರೂಢಿ. ಆದರೆ ಅದು ಸರಿಯಲ್ಲವೆನ್ನಬೇಕಾಗುತ್ತದೆ. ಯಾಕಂದರೆ ಅನ್ಯ ಜೀವಿಗಳು ಪಡುವ ಕಷ್ಟವನ್ನು ಕಂಡು ಸಾಧು-ಸಜ್ಜನರ ಹೃದಯ ಕರಗುತ್ತದೆ. ಬೇರೆ ಕಡೆಗೆ ಉರಿ ಮಾಡಿದರೆ ಬೆಣ್ಣೆ ಕರಗುವದಿಲ್ಲ. ಅದಕ್ಕೆ ನೇರಾಗಿಯೇ ಉರಿ ತಾಗಬೇಕು. ಅಂದ ಮೇಲೆ ಸಜ್ಜನ ಹೃದಯ ಬೆಣ್ಣೆಗಿಂತ ಬೇರೊಂದು ಪ್ರಕಾರವಲ್ಲವೇ ?

ಸಿದ್ಧನು ಆ ಅಯ್ಯನನ್ನು ತನ್ನ ಅಮೃತ ಕರದಿಂದ ಸ್ಪರ್ಶಮಾಡಿ ಬಳಿಯಲ್ಲಿ ಕರೆದು ಕುಳ್ಳಿರಿಸಿಕೊಂಡು ಅಂದನು. 'ಪಟ್ಟದಪ್ಪನವರೇ ಇವನು ಕಾಮ-ಕ್ರೋಧಾಧಿ ಆರು ರೋಗಗಳಿಂದ ಪೀಡಿತ. ಇಂಥವರ ಶುಶ್ರೂಷೆಯ ವಿಷಯದಲ್ಲಿ ಜಾಗ್ರತೆ ಇರಬೇಕಲ್ಲವೇ? ನಾನು ವಿಶೇಷೋಪಚಾರದಿಂದ ಇವನನ್ನು

ರೋಗಮುಕ್ತ ಮಾಡಿದ್ದೇನೆ ಇನ್ನೇನೂ ಭಯವಿಲ್ಲ.' ಎಂದು ನುಡಿದ್ದು ಅವನ ಲಿಂಗಸಂಪುಟವನ್ನು ತನ್ನ ಕೈಗಳಿಂದಲೇ ಅವನ ಕೊರಳಿಗೆ ಹಾಕಿ ಸುಖಿಯಾಗು ಎಂದು ಆಶೀರ್ವದಿಸಿದನು.

ಸದ್ಗುರುನಾಥ ಶಿಲಾಮೂರ್ತಿಯಲ್ಲಿ ದೇವತ್ವವನ್ನು ತುಂಬಿ ಆ ಮೂರ್ತಿ ಜಗದ್ವಂದ್ಯವೆನಿಸುವಂತೆ ಮಾಡುವುದು ಒಂದು ಪವಾಡವೆನ್ನಬಹುದೇ?

ಸ್ಪರ್ಶಮಣಿ ಲೋಹಕ್ಕೆ ತಾಗಿ ಅದನ್ನು ಭಂಗಾರ ಮಾಡಬಲ್ಲದು. ಹೊರತು ತಾನು ಎಂದಾದರೂ ಲೋಹಗುಣ ತಾಳುವುದೇ? ಎಂದಿಗೂ ಇಲ್ಲ ಸ್ಪರ್ಶಮಣಿಯ ಶಕ್ತಿ ಅಗಾಧ.

೧೮

ಪರಿಚರಿತವ್ಯಾಃ ಸಂತೋ ಯದ್ಯಪಿ ಕಥಯಂತಿ ನೋ ಸದುಪದೇಶಮ್ ।
ಯಾಃ ಸ್ತೇಷಾಂ ಸ್ವೈರಕಥಾಸ್ತಾ ಏವ ಭವಂತಿ ಶಾಸ್ತ್ರಾಣಿ ॥

—ಸುಭಾಷಿತ

ಒಂದು ವೇಳೆ ಅವರು ನಮಗೆ ಸದುಪದೇಶ ಕೊಡದಿರಬಹುದು. ಆದರೂ ಸಾಧುಗಳ ಸೇವೆ ಮಾಡುತಿರಬೇಕು. ಅವರ ಸ್ವಚ್ಛಂದ ಮಾತುಗಳೇ ಶಾಸ್ತ್ರ ವಾಕ್ಯಗಳಾಗುವವು.

ಹಿಂದಿನ ಕಥೆಯೊಂದರಲ್ಲಿ ಸಿದ್ಧನು ಭೀಮಪ್ಪನ ಮನೆಗೆ ಪ್ರತಿದಿನ ಹೋಗುತ್ತಿದ್ದನೆಂದು ಹೇಳಿದೆಯಷ್ಟೇ. ರಾತ್ರಿಯನ್ನು ಅವರ ಮನೆಯಲ್ಲಿ ಕಳೆದು ಬೆಳಗಾದ ನಂತರ ಮಠಕ್ಕೆ ಬರುವುದು ಕ್ರಮವಾಯಿತು.

ಇಷ್ಟರಲ್ಲಿ ಮಕ್ಕಳಿಲ್ಲದ ಭೀಮಪ್ಪನು ಸಿದ್ಧನ ಆಜ್ಞೆಪಡೆದು ಸಿದ್ಧಪ್ಪನೆಂಬವನನ್ನು ದತ್ತಕಮಾಡಿಕೊಂಡಿದ್ದನು. ಕಾಲಕ್ರಮದಲ್ಲಿ ಸಿದ್ಧಪ್ಪನ ಹೊಟ್ಟೆಯಿಂದ ಗುರಪ್ಪನೆಂಬ ಮಗನು ಹುಟ್ಟಿದನು. ಈ ಮಗುವಿಗೆ ತಾಯಿಯ ಸುಖವು ಬಹಳ ದಿನ ದೊರೆಯಲಿಲ್ಲ. ಕೂಸು ಸಣ್ಣದಿರುವಾಗಲೇ ತಾಯಿಯ

ತೀರಿದಳು. ಬಂದ ವೇಳೆಯಲ್ಲೆಲ್ಲ ಸಿದ್ಧನು ಆ ಮಗುವನ್ನು ತೊಡೆಯಲ್ಲಿ ಮಲಗಿಸಿಕೊಳ್ಳುವನು. ಆಡಿಸುವನು. ಸಿದ್ಧನನ್ನು ಕಂಡಕೂಡಲೆ ಮಗು ಹರಿದಾಡುತ್ತ ಬಂದು ತೊಡೆಯ ಮೇಲೇರುವುದು. ಬೇಕಾದರೆ ಮಲಗುವುದು ಕೂಡುವುದು ಕೊರಳಿಗೆ ಕೈಯಿಕ್ಕಿ ಕುಣಿಯುವುದು. ಸಿದ್ಧನು ಹೀಗಾದರೂ ಬೇಸರಸುತ್ತಿರಲಿಲ್ಲ. ಸುಮ್ಮನೆ ಅವನ್ನೆಲ್ಲ ಸಹಿಸುವನು. ಒಂದು ಕೆಲ ಭಕ್ತರು ನುಡಿದರು. 'ಗುರುನಾಥನೇ, ಗುರಪ್ಪನು ನೀವು ಬಂದಕೂಡಲೇ ಒಂದು ಕ್ಷಣ ಕೂಡ ವಿಶ್ರಾಂತಿ ಕೊಡುವುದಿಲ್ಲ. ಬಹಳ ಕಾಡುತ್ತಾನೆ. ಒಳಗೆ ಕಳಿಸಿ ಬಂದರೆ ಸರಿಯಲ್ಲವೇ?'

ಅವರ ಮಾತು ಕೇಳಿ ಗುರು ಹೇಳಿದನು. 'ಪ್ರೀತಿ ಮಾಡುವವರ ಬಳಿಯಲ್ಲಿ ಮಕ್ಕಳು ಬರುವುದು ಸಹಜವಾಗಿದೆ. ನಾನಂತೂ ಇವನ ಕಾಟವನ್ನು ಸಹನ ಮಾಡಲೇಬೇಕಾಗಿದೆ.'

ಭಕ್ತರಂದರು 'ನಮಗೆ ತಿಳಿಯಲಿಲ್ಲ.'

'ಇವನು ಹಿಂದೆ ಹುಲಿಯ ಜನ್ಮದಲ್ಲಿದ್ದಾಗಿನದೊಂದು ಕಥೆ ಹೇಳಿದರೆ ನಾನು ಇವನ ಕಾಟ ಸಹನ ಮಾಡುವುದೇಕೆ ಎಂದು ನಿಮಗೆ ತಿಳಿಯುತ್ತದೆ. ಈ ಕೈಯಿಂದ ಮಾಡಿ ಈ ಕೈಯಿಂದ ಉಣ್ಣಬೇಕೆಂಬುದು ಕರ್ಮದ ನಿಯಮ.

'ಆ ಹಿಂದಿನ ಕಥೆಯನ್ನು ನಮಗೆ ಹೇಳಬೇಕು.'

'ಕೇಳುವುದೇ ಇಚ್ಛೆಯಾಗಿದ್ದರೆ ಅಲ್ಲಿ ಬೀದಿಯೊಳಗೆ ಆಡುತಿರುವ ಆ ಹುಡುಗನನ್ನು ಕರೆತನ್ನಿರಿ.'

ಕೆಲವರು ಆ ಹುಡುಗನನ್ನು ಕರೆತರಲು ಹೋದರು. ಬೀದಿಯಲ್ಲಿ ಐದಾರು ವರ್ಷದ ಹುಡುಗನೊಬ್ಬನು ಆಟದಲ್ಲಿ ತೊಡಗಿರಲು ಅವನನ್ನು ಕರೆತಂದು ಜನರು ಸಿದ್ಧನ ಪಾದಗಳಿಗೆ ಹಾಕಿದರು. ಆಗ ಸಿದ್ಧನು ಹುಡುಗನನ್ನು ಸ್ಪರ್ಶ ಮಾಡಿ ಒಂದು ಬಾಳೇಹಣ್ಣು ಕೊಡುತ್ತ 'ಇದನ್ನು ಇಲ್ಲಿಯೇ ಕುಳಿತುಕೊಂಡು ತಿನ್ನು' ಎಂದು ಹೇಳಿದನು.

'ಸಿದ್ಧಾರೂಢ ಯೋಗಿವರನು ಈಗ ಮೂವತ್ತು ವರ್ಷಗಳ ಹಿಂದೆ ತೀರ್ಥಯಾತ್ರೆ ಮಾಡುತ್ತ ಕಾವೇರಿ ತಟಾಕಕ್ಕೆ ಬಂದನು. ಅದು ಗಹನಾರಣ್ಯ ಪ್ರದೇಶವಾಗಿತ್ತು. ಆದರೂ ಹಚ್ಚ ಹಸಿರು ಹುಲ್ಲು ಬೆಳೆದು ನಿಂತ ಬಯಲು ಪ್ರದೇಶಕ್ಕೂ ಕೊರತೆ ಇರಲಿಲ್ಲ. ನೀರು-ಹುಲ್ಲು ಮತ್ತು ಸಣ್ಣ ಕಂಟಿಗಳು

ಇವೆಲ್ಲ ಅನುಕೂಲತೆಗಳು ಸಾಕಷ್ಟು ಅಲ್ಲಿರುವುದರಿಂದ ದನಗಾಹಿಗಳು, ಕುರಿ ಮೇಯಿಸುವವರು ಆ ಸ್ಥಳಕ್ಕೆ ಬರುವರು. ಸಿದ್ಧನು ಅಲ್ಲಿಗೆ ಬಂದಾಗ ಕುರಿ ಮೇಯಿಸುತ್ತಿರುವ ಕೆಲವು ಹುಡುಗರು ತಮ್ಮ ಕುರಿಗಳನ್ನು ಮೇಯಬಿಟ್ಟು ಆಟವಾಡುತ್ತಿದ್ದರು. ಅವರ ಬಳಿಯಲ್ಲಿ ಸಿದ್ಧ ನಿಂತುಕೊಳ್ಳಲು ಅವರು ಆಟಕ್ಕೆ ಬಾ ಎಂದು ಕರೆದರು. ಕೆಲಹೊತ್ತು ಆಟವಾಡಿದ ಮೇಲೆ ಹುಡುಗರು ಊಟ ಮಾಡಬೇಕೆಂದು ತಮ್ಮ ಬುತ್ತಿಯ ಕಲ್ಲಗಳನ್ನು ಉಚ್ಚಿ ಊಟದ ಸಿದ್ಧತೆಯಲ್ಲಿ ತೊಡಗಿದರು. ಸಿದ್ಧನನ್ನೂ ಊಟದಲ್ಲಿ ಜತೆ ಮಾಡಿಕೊಂಡು ಊಟ ಮಾಡತೊಡಗಿದರು. ಇತ್ತ ಇವರ ಊಟ ನಡೆದಿರಲು ನಿಧಾನವಾಗಿ ಮೇಯುತ್ತಿದ್ದ ಕುರಿಗಳು ಒಮ್ಮಿಂದೊಮ್ಮೆ 'ಬ್ಯಾs' ಎಂದು ಕೀಸರಿಟ್ಟು ದಿಕ್ಕು ದಿಕ್ಕಿಗೆ ಚದುರಿ ಓಡತೊಡಗಿದವು. ಕುರಿ ಕಾಯುವ ಹುಡುಗರು ಅದನ್ನು ಕಂಡು ಘಾಬರಿಯಾಗಿ ಊಟ ಮಾಡುವುದನ್ನು ಬಿಟ್ಟು ತಾವೂ ಕುರಿಗಳ ಹಿಂದೆ ಕುರಿಗಳಂತೆ ಓಡಿದರು. ಓಡಾಡಬೇಕಾದರೆ ಕಾರಣವೇನು ? ಎಂದೂ ಯಾರೂ ವಿಚಾರಿಸಲಿಲ್ಲ. ಆ ಸ್ಥಳದಲ್ಲಿ ಉಳಿದವನು ಸಿದ್ಧನೊಬ್ಬನೇ. ಅವನೂ ಮೇಲೆದ್ದು ಅತ್ತಿತ್ತ ನೋಡುತಿರಲು ಕುರಿಗಳು ಬೆದರಿ ಓಡಿಹೋದ ಕಾರಣವು ತಿಳಿಯಿತು. ನದಿಯ ದಂಡೆಗಿರುವ ಪೊದೆಯಲ್ಲಿ ಒಂದು ಭಯಂಕರವಾದ ಹುಲಿಯು ಬಂದು ಕುಳಿತಿತ್ತು. ಅದು ಕುರಿಗಳನ್ನು ಹಿಡಿದು ತಿನ್ನಬೇಕೆಂದು ಜಪ್ಪಿಸುತ್ತಿರುವಾಗ ಹೇಗೋ ಅದರ ವಾಸನೆ ತಿಳಿದು ಕುರಿಗಳೆಲ್ಲ ಓಡಿಹೋಗಿದ್ದವು. ಸಿದ್ಧನು ಹುಲಿಯ ಹಿಂಭಾಗಕ್ಕೆ ಬಂದು ಒಮ್ಮೆಲೇ ಅದರ ಬೆನ್ನು ಚಪ್ಪರಿಸತೊಡಗಿದನು. ಅದರಿಂದ ಗಾಬರಿಗೊಂಡ ಹುಲಿಯು ಮುಂದಕ್ಕೆ ಜಿಗಿದು ಹೊರಳಿ ತಿಂತಿತು. ಅದೆಷ್ಟು ವೇಗವಾಗಿ ಜಿಗಿದಿತ್ತೋ ಅಷ್ಟೇ ವೇಗವಾಗಿ ಸಿದ್ಧ ಅದರ ಬಳಿಯಲ್ಲಿ ಹೋಗಿ ಕಿವಿಹಿಡಿದು ಹಿಂಡಲು ಹುಲಿಯ ಬಲವೆಲ್ಲ ಉಡುಗಿ ಹೋಗಿ ಅದು ಸಾಧುವಾಯಿತು.

ಅದರ ಬೆನ್ನ ಮೇಲೆ ಕುಳಿತುಕೊಂಡು ಸಿದ್ಧ ಸವಾರಿ ನಡೆಸಿದನು. ದೂರದಿಂದ ಈ ಅದ್ಭುತವನ್ನು ಕಂಡ ಕುರಿಗಾರರ ಮಕ್ಕಳು ಬೆರಗಾಗಿ ಬೊಟ್ಟು ಕಚ್ಚಿದರು. ಅಷ್ಟರಲ್ಲಿ ಸಿದ್ಧ ಅವರನ್ನು ಕೂಗಿದನು. 'ಗೆಳೆಯರೇ, ಓಡಿಹೋಗಬೇಡಿರಿ. ಇಲ್ಲಿ ಬನ್ನಿ. ನಿಮಗೆ ಆಟ ತೋರಿಸುತ್ತೇನೆ.' ಎನ್ನುತ್ತ ಹುಲಿಯನ್ನು ಮುಂದಕ್ಕೆ ನಡೆಸಿದನು. ಇಷ್ಟಾದರೂ ಆ ಕುರಿಕಾಯುವ ಹುಡುಗರು ಓಡುವ

ಹವಣಿಕೆಯಲ್ಲಿಯೇ ಇದ್ದರು. ಸಿದ್ಧನು ಒಹುಪರಿಯಿಂದ ಅವರಿಗೆ ನಂಬಿಗೆ ಹುಟ್ಟುವಂತೆ ಮಾಡಿ ಹುಲಿಯನ್ನಟ್ಟಿಕೊಂಡು ಹುಡುಗರ ಬಳಿಗೇ ಬಂದು ಬಿಟ್ಟನು.

'ಗೆಳೆಯರೇ, ಇದೊಂದು ಬಣ್ಣದ ದೊಡ್ಡ ಕುರಿ. ಅಂಜುವ ಕಾರಣ ವಿಲ್ಲ.'

'ನೀನು ಯಾರೋ ಯಂತ್ರ-ಮಂತ್ರ ಬಲ್ಲ ಮಹಾತ್ಮನಿರಬೇಕು. ನಿನ್ನ ಮಟ್ಟಿಗೆ ಹುಲಿ ಒಳ್ಳೆಯದಾಗಿದ್ದೀತು. ನಾವು ಏನೂ ತಿಳಿಯದವರು. ನಮ್ಮ ವಿಷಯದಲ್ಲಿ ಅದು ಹೇಗೆ ಒಳ್ಳೆಯದಾದೀತು? ನಮಗಂತೂ ಅಂಜಿಕೆ ಬರುತ್ತದೆ. ನಿನ್ನ ಆಟ ಸಾಕು ನಾವು ಮನೆಗೆ ಹೋಗುತ್ತೇವೆ.'

ಎಂದು ಹುಡುಗರು ಪುನಃ ಓಡುವುದಕ್ಕೆ ತೊಡಗಲು ಸಿದ್ಧನು ಮುನ್ನುಗ್ಗಿ ಅವರಲ್ಲೊಬ್ಬನನ್ನು ಬಲಾತ್ಕಾರದಿಂದ ಹಿಡಿದು ತಂದು ಹುಲಿಯ ಬೆನ್ನಮೇಲೆ ಕೂಡಿಸಿ ಓಡಾಡಿಸತೊಡಗಿದನು. ಹುಲಿಯು ಕುರಿಯಂತೆ ತಲೆ ಕೆಳಗೆಹಾಕಿ ಹೇಳಿದಂತೆ ಕೇಳುತ್ತಿತ್ತು. ಅದರ ಉಗ್ರತೆ ಎಲ್ಲ ಮಾಯವಾಗಿತ್ತು. ಕೆಲ ಹೊತ್ತು ಈ ಕೌತುಕವನ್ನು ಕಂಡು ಹುಡುಗರಲ್ಲಿ ತುಸು ಧೈರ್ಯವುಂಟಾಗಿ ಅಂಜುತ್ತ ಹುಲಿಯ ಬಳಿಗೆ ಬರತೊಡಗಿದರು. ಸಿದ್ಧನಂತೂ ಹೆದರಬೇಡಿರೆಂದು ಹೇಳುತ್ತ ನಿಂತುಬಿಟ್ಟಿದ್ದನು. ಎಲ್ಲರೂ ಕೊನೆಗೆ ಬಂದರು. ಹುಲಿ, ಬಣ್ಣದ ಕುರಿಯಾಗಿರುವುದು ನಿಜವಾಗಿತ್ತು. ಅದರ ಬಾಲ ಹಿಡಿದು ಜಗ್ಗಿದರು. ಕಿವಿ ಹಿಡಿದರು. ಕೆಲವರು ಬೆನ್ನ ಮೇಲೆ ಕುಳಿತು ಸವಾರಿ ಸಹ ಮಾಡಿ ನೋಡಿದರು. ಭಯವೇ ಇಲ್ಲ.

ಪ್ರತಿದಿನ ಇದೊಂದು ಆಟವಾಯಿತು. ಹುಡುಗರೆಲ್ಲ ಕುರಿಗಳನಟ್ಟಿಕೊಂಡು ಆ ಬೈಲಿಗೆ ಬರುವುದೇ ತಡ. ಹುಲಿಯು ಬಂದು ನಿಲ್ಲಬೇಕು. ಹುಡುಗರು ಅದರ ಸಂಗಡ ಆಡಬೇಕು. ಸಿದ್ಧ ಸುಖಾಸೀನನಾಗಿ ಆಟನೋಡಬೇಕು. ತಮಗೆ ಸಾಕಾಗುವವರೆಗೆ ಹುಡುಗರೆಲ್ಲ ಹುಲಿಯೊಡನೆ ಆಡಿ ಸಿದ್ಧನನ್ನು ಅದರ ಮೇಲೆ ಕುಳ್ಳಿರಿಸುವರು. ತಾವೆಲ್ಲರೂ ಅರಣ್ಯ ಮಾರ್ದನಿಗೊಡುವಂತೆ ಕೇಕೆ ಹಾಕುವರು.

ಎಷ್ಟೋ ದಿನ ಹೀಗೆಯೇ ಸಾಗಿತು. ಹುಡುಗರು ತಮ್ಮ ಹಿರಿಯರೊಡನೆ ಸಿದ್ಧನ ಕಥೆಯನ್ನೂ, ಹುಲಿಯ ಕಥೆಯನ್ನೂ ಹೇಳಿದರು. ಮಹಾತ್ಮ

ರಿಗೆ ಇದೇನೂ ಅಸಾಧ್ಯವಲ್ಲ. ಎಂದು ಅವರು ಭಾವಿಸಿ ಆ ಆಟವನ್ನು ಕಂಡು ಬೆರಗಾದರು. ಹೀಗೆ ಸಾಧುವಾದ ಹುಲಿಯ ಸುದ್ದಿ ಒಬ್ಬ ಬೇಟೆಗಾರನಿಗೆ ತಿಳಿಯಿತು. ಅವನು ಆ ಹುಲಿಯನ್ನು ಹೊಡೆದು ಕೊಲ್ಲಬೇಕೆಂದು ಯೋಚಿಸತೊಡಗಿದನು. ಅದನ್ನು ಹೊಡೆಯಲು ಘೋರಾರಣ್ಯಕ್ಕೇನೂ ಹೋಗುವ ಅವಶ್ಯವಿಲ್ಲ. ಸಹಜ ರೀತಿಯಿಂದ ಹುಲಿಯು ಕಣ್ಣಿಗೆ ಬೀಳುವುದು ಅದರ ಚರ್ಮವನ್ನು ಯಾರಿಗಾದರೂ ಮಾರಿಕೊಂಡರೆ ಹಣವು ದೊರೆಯುವುದು. ಹೀಗೆಲ್ಲ ವಿಚಾರಿಸಿಕೊಂಡು ಆ ಬೇಟೆಗಾರ ಒಂದು ಬಂದೂಕವನ್ನು ಹಿಡಿದು ಹುಲಿಯು ಓಡಾಡುವ ಮಾರ್ಗದಲ್ಲಿ ಕಂಟಿಗಳ ಪೊದೆಯ ಮರೆಗೆ ಅವಿತು ಕುಳಿತುಕೊಂಡನು. ನಿತ್ಯದಂತೆ ಕುರುಬರ ಹುಡುಗರು ಕುರಿ ಮೇಯಿಸಲು ತಮ್ಮ ಕುರಿಗಳೊಡನೆ ಬಂದರು. ಅವರೊಡನೆ ಸಿದ್ಧನೂ ಬಂದನು.

ಕುರಿಗಳೆಲ್ಲ ಹಸಿರು ಮೇಯತೊಡಗಲು ಹುಡುಗರು ಬಯಲಿನಲ್ಲಿ ಆಟ ಹೂಡಿ ಆಟದಲ್ಲಿ ತೊಡಗಿದರು. ಹುಡುಗರು ಹೀಗೆ ಆಡುತ್ತಿರಲು ಹುಲಿಯು ಕೂಡ ಅಲ್ಲಿಗೆ ನಿರ್ಭಯವಾಗಿ ಬಂದು ಸಿದ್ಧನ ದರ್ಶನ ಹೊಂದಿತು. ಗುಂಡಿನ ಆತೆಯಲ್ಲಿ ಹುಲಿ ಬರಲು ಬೇಟೆಗಾರನು ಗುರಿಇಟ್ಟು ಅದರ ಮರ್ಮಸ್ಥಾನಕ್ಕೆ ಬೀಳುವಂತೆ ಗುಂಡು ಹೊಡೆದನು. ಆ ಪೆಟ್ಟಿನಿಂದ ವ್ಯಥೆಗೊಂಡ ಹುಲಿಯು ಅಡವಿ ನಡಗುವಂತೆ ಗುಡುಗಿ ಬೇಟೆಗಾರನ ಮೈಮೇಲೆ ಹಾರಿ ಅವನ ಹೊಟ್ಟೆಯನ್ನು ಹರಿಯಿತು. ಹುಲಿ ಮತ್ತು ಬೇಟೆಗಾರರಿಬ್ಬರೂ ನೆಲಕ್ಕುರುಳಿದರು. ಅಷ್ಟರಲ್ಲಿ ಸಿದ್ಧ ಹಾಗೂ ಹುಡುಗರು ಆ ಸ್ಥಳಕ್ಕೆ ಬಂದು ನಡೆದ ಅನರ್ಥವನ್ನು ಕಂಡು ಮರಗುತ್ತ ನಿಂತಿರಲು ಆಯಾಸದಿಂದ ಹುಲಿಯು ತಲೆಯೆತ್ತಿ ಸಿದ್ಧನ ಪಾದಗಳ ಮೇಲಿಟ್ಟು ಕಣ್ಣೀರಿನಿಂದ ಪಾದ ತೊಳೆಯಲಾರಂಭಿಸಿತು. ಅದರ ನೋಟವೆಲ್ಲ ಸಿದ್ಧನಲ್ಲಿ ನಟ್ಟುಹೋಗಿತ್ತು. ಮನಮರುಗಿ ಸಿದ್ಧನು ಅದರ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡು ಪ್ರೇಮದಿಂದ ಕೈಸವರಿ ದುಃಖಿನಾಗಿ ಅಂದನು. 'ಹುಲಿರಾಯನೇ, ಮನುಷ್ಯನ ವಿಚಾರವೊಂದು. ದೈವದ ವಿಚಾರವೊಂದು ಆಗಲ್ಲಿ ದೈವಸಂಕಲ್ಪಕ್ಕೆ ಎಲ್ಲರೂ ತಲೆ ಬಾಗಲೇಬೇಕು. ನೀನು ಈ ದೇಹವನ್ನು ಬಿಟ್ಟು ಇನ್ನು ಮನುಷ್ಯ ಜನ್ಮವನ್ನು ಪಡೆಯುವೆ. ಆಗ ಕೂಡ ನನ್ನ ನಿನ್ನ ಬಿಡುಗಡೆ ಇಲ್ಲ. ನೀನು ಯಾವಾಗಲೂ ನನ್ನೊಡನೆ ಆಟವಾಡುವೆ. ಸಮಾಧಾನದಿಂದ ಪ್ರಾಣಬಿಡು.' ಎಂದು ಅದರ ತಲೆಯಲ್ಲಿ

ಕೈಯಿಡಲು ಕೂಡಲೇ ಹುಲಿಯ 'ಪ್ರಾಣೋತ್ಕ್ರಮಣವಾಯಿತು. ಹುಲಿಯು ನಿಜವಾಗಿ ಒಂದು ಹಿಂಸಾಪ್ರಾಣಿ. ಹಿಂಸೆಯಿಂದಲೇ ಅದರ ನಿತ್ಯ ಜೀವನ. ಹೀಗಿದ್ದು ಸಿದ್ಧನ ಕೃಪೆಗೆ ಪಾತ್ರನಾಗಿ ಸಾಧು ಪ್ರಾಣಿಯಾಗಿತ್ತು. ಮೆಲ್ಲನೇ ದೈವೀಗುಣಗಳೆನಿಸಿದ ಪ್ರೇಮ-ಉಪಕಾರಸ್ಮರಣೆ-ನಿರ್ಭಯವೃತ್ತಿ ಮೊದಲಾದವುಗಳು ಅದರಲ್ಲಿಯೂ ಕಂಡು ಬರತೊಡಗಿದ್ದವು. ಇದು ಸಿದ್ಧನ ಪ್ರಭಾವವೇ ಸರಿ. ಸಿದ್ಧನು ಪಶುಪತಿಯ ಅವತಾರವೇ ಸರಿ. ಎಂದು ಬಗೆದು ಅಲ್ಲಿದ್ದವರೆಲ್ಲರೂ ಸಿದ್ಧನಿಗೆರಗಿದರು.

ಬವಳಿ ಬಂದು ಭೂಮಿಗೆರಗಿದ ಬೇಟೆಗಾರ ಕೆಲ ವೇಳೆಯ ನಂತರ ಎಚ್ಚರಗೊಂಡನು. ಹೊಟ್ಟೆಗಾದ ಘಾಯದಿಂದ ರಕ್ತಸ್ರಾವ ಬಹಳವಾದುದರಿಂದ ಅಶಕ್ತತೆಯುಂಟಾಗಿ ಏಳಲು ಬಾರದಂತಾದುದರಿಂದ ಅವನು ಪಿಳಿ ಪಿಳಿ ಕಣ್ಣು ಬಿಡುತ್ತ ಹಾಗೇ ಬಿದ್ದುಕೊಂಡಿದ್ದನು. ಅದನ್ನು ತಿಳಿದ ಸಿದ್ಧನು ಅವನ ಬಳಿಗೆ ಹೋಗಿ ತನ್ನ ಮೈಮೇಲಿನ ವಸ್ತ್ರವನ್ನು ಹರಿದು ಹೊಟ್ಟೆಗೆಕಟ್ಟಿ ಕುರಿಕಾಯುವ ಹುಡುಗರಿಗೆ ಊರಲ್ಲಿ ಹೋಗಿ ಜನರನ್ನು ಕರೆತರುವಂತೆ ಹೇಳಲು ಅವರು ಜನರೊಡನೆ ಬಂದರು. ಅವರು ನಡೆದ ಪ್ರಸಂಗವನ್ನೆಲ್ಲ ಅರಿತುಕೊಂಡ ನಂತರ ಮುಂದೇನು ಮಾಡಬೇಕೆನ್ನಲು ಸಿದ್ಧನು 'ಇವನನ್ನು ಕರೆದುಕೊಂಡು ಊರಿಗೆ ಹೋಗಿ ಉಪಚಾರ ಮಾಡಿರಿ. ಇವನ ಜೀವಕ್ಕೇನೂ ಭಯವಿಲ್ಲ. ಇನ್ನು ಆರು ತಿಂಗಳವರೆಗೆ ಮಾತ್ರ ಘಾಯದ ನೋವಿನಿಂದ ಬಳಲಬೇಕಾಗುವದು.' ಎನ್ನಲು ಜನರು ಮಹಾತ್ಮರ ಆಜ್ಞೆ ಎಂದು ಬೇಟೆಗಾರನನ್ನು ಊರಿಗೆ ಕರೆದುಕೊಂಡು ಹೋದರು. ಆ ಸ್ಥಳ ಬಿಟ್ಟು ಸಿದ್ಧನು ಮುಂದೆ ಸಾಗಿದನು. ಇದೇ ಆ ಕಥೆಯು.

ಸ್ಪರ್ಶಮಣಿಯ ತಾಗುವಿಕೆಯಿಂದ ಕಬ್ಬಿಣವು ಹೊನ್ನಾಗುವಂತೆ ಮಹಾತ್ಮನ ಸ್ಪರ್ಶ ಸಹವಾಸ-ಕೃಪಾವಲೋಕನಗಳಿಂದ ಹುಲಿಯು ಕೂಡ ಮನುಷ್ಯ ಜನ್ಮವನ್ನು ಹೊಂದಿತು. 'ಮನುಷ್ಯ ಜನ್ಮವೆಂದರೇ ಈ ಗುರಪ್ಪ. ಆಗ ಸಿದ್ಧ ಭಾಷೆ ಕೊಟ್ಟಂತೆ ಈಗ ಪ್ರತಿದಿನ ಆಡುತ್ತ ಇವನನ್ನು ತಿಕ್ಕಿಮುಕ್ಕುತ್ತಿರುವನು. ನೀವು ಹಿಂದಿನ ಕಥೆ ಕೇಳಿದ್ದಿರಲ್ಲ. ಇಷ್ಟೇ ಆ ಕಥೆ.' ಎಂದು ಹೇಳಿ ಆ ಹುಡುಗನು ಸುಮ್ಮನಾಗಲು ಭಕ್ತರು 'ಒಳ್ಳೇದು ಮಗು. ಈ ಹಳೆಯ ಕಥೆ ನಿನಗೆ ತಿಳಿದ ಬಗೆ ಹೀಗೆ? ಎಂಬುದನ್ನು ನೀನು ಹೇಳಲೇಬೇಕು' ಎನ್ನಲು ಆ

ಹುಡುಗನು ಸಿದ್ಧಾರೂಢ ಸ್ವಾಮಿಯ ಕೃಪೆಯಿಂದ ಆ ಕಥೆಯ ಸಂಗತಿ ಎಲ್ಲ ಕಣ್ಣಿಗೆ ಕಟ್ಟಿದಂತೆ ಸ್ಪಷ್ಟವಾಗಿತ್ತು. ಅದರಿಂದಲೇ ನಾನು ನಿಮಗೆ ಹೇಳಲು ಶಕ್ತನಾದೆನು.' ಎಂದು ನುಡಿದು ಪುನಃ ಆ ಹುಡುಗನು ಮೌನ ತಾಳಿದನು. ಅಷ್ಟಾದ ಮೇಲೆ ಸಿದ್ಧ ಅವನಿಗಿತ್ತ ಹಣ್ಣು ತಿನ್ನಲು ಅವನ ದರ್ಶನ ದೃಷ್ಟಿ ಯಡಗಿ ಬಾಲಭಾವವು ಆವರಿಸಿತು.' ಎಲ್ಲವೂ ಮರೆತು ಹೋಯಿತು. ಪುನಃ ಆ ಹುಡುಗ ಬೀದಿಗಿಳಿದು ಆಟದಲ್ಲಿ ತೊಡಗಿದನು. ಇಂಥ ಪುಣ್ಯಕರವಾದ ಚರಿತ್ರ ಕೇಳಿ ಜನರು ಭಕ್ತಿ ಪರವಶವಾಗಿ ಸಿದ್ಧನಿಗೆ ವಂದಿಸುತ್ತ ಗುರಪ್ಪನಿಗೂ ನಮಸ್ಕಾರ ಮಾಡಿದರು.

———

೧೯

ನಿರುಪಾದಾನ ಸಂಭಾರಮಭಿತ್ತಾವೇವ ತನ್ವತೇ ।
ಜಗಚ್ಚಿತ್ರಂ ನಮಸ್ತಸ್ಮೈ ಕಲಾಶ್ಲಾಘ್ಯಾಯ ಶೂಲಿನೇ ॥

—ಈಶಸ್ತುತಿ

(ಗೋಡೆ ಇಲ್ಲದಲ್ಲಿ ಬಣ್ಣ-ಕುಂಚ ಮೊದಲಾದ ಸಾಧನ ಸಾಮುಗ್ರಿ ಇಲ್ಲ ಜಗತ್ತಿನ ರೂಪ ಚಿತ್ರವನ್ನು ಬರೆಯುವ ಕಲಾವಂತರಲ್ಲಿ ಹೊಗಳಿಕೆಗೆ ಪಾತ್ರ ನಾದ ಈಶ್ವರನಿಗೆ ನಮಸ್ಕಾರ)

ಶಿವರಾತ್ರಿ ಉತ್ಸವ ಸಮಯ. ಭಕ್ತರು ಮಠವನ್ನು ಅಲಂಕರಿಸತೊಡ ಗಿದ್ದರು. ಮಠದ ಗೋಡೆಗಳ ಮೇಲೆ ಚಿತ್ರ ಬರೆಯುವ ಬೆನಕಪ್ಪ ತನ್ನ ಸಹ ಕಾರಿಯೊಡನೆ ಮಾತಾಡುತ್ತಿದ್ದನು. 'ಈ ವರ್ಷವಂತೂ ಸೇವೆ ಸಾಗಿತು. ಮುಂದಿನ ಉತ್ಸವದ ಹೊತ್ತಿಗೆ ಜನ ಬಾಯಲ್ಲಿ ಬೆರಳಿಡುವಂಥ ಚಿತ್ರ ಬರೆ ಯುತ್ತೇನೆ. ನೋಡುತ್ತಿರು.' ಈ ಮಾತು ನಡೆದಾಗ ಹಿಂದೆ ಸಿದ್ಧ ಬಂದು ನಿಂತಿರುವುದನ್ನು ಯಾರೂ ನೋಡಿರಲಿಲ್ಲ. ಬೆನಕಪ್ಪನ ಮಾತು ಕೇಳಿ ಮುಂದೆ ಬಂದು ಸಿದ್ಧ ನುಡಿದನು. 'ಮುಂದಿನ ವರ್ಷದ ನಿನ್ನ ಆಶೆಯನ್ನು ಗೆಳೆಯ ರೊಡನೆ ಹೇಳಿದುದು ಸರಿಯೇ. ಆದರೆ ಈಶ್ವರನು ಜಗಚ್ಚಿತ್ರವನ್ನು ಬೇರೆ

ಯಾಗಿ ಬರೆಯಬೇಕೆಂದು ಯೋಚನೆ ಮಾಡಿದ್ದಾನೆ. ಪಟ್ಟಣಗಳೆಲ್ಲ ಅಡವಿಯಂತಾಗುವವು. ಜನರೆಲ್ಲ ಅಡವಿ ಸೇರುವರು. ಕಾಡು ಮೃಗಗಳೆಲ್ಲ ಊರೊಳಗೆ ಬಂದು ನಿರ್ಭಯವಾಗಿ ವಾಸಮಾಡುವವು. ಮೃತ್ಯುವು ಪಟ್ಟಣದಲ್ಲಿ ಚಾಚಿದ ನಾಲಿಗೆ ಏನೋ ಎನಿಸುವಂತೆ ಬೀದಿಗಳು ಭಯಂಕರವೆನಿಸುವವು. ಹಾದಿ-ಬೀದಿಗಳಲ್ಲೆಲ್ಲ ಹೆಣಗಳುರುಳಿ ಹದ್ದು-ಕಾಗೆ ಅವುಗಳನ್ನು ತಿಂದು ನಲಿಯುವವು.

ಇದರರ್ಥ ತಿಳಿಯದೇ ಚಿತ್ರಗಾರರಿಬ್ಬರು ಬಹುಬಗೆಯಿಂದ ಯೋಚಿಸಿದರೂ ಬಗೆಹರಿಯಲಿಲ್ಲ. ಭಯಂಕರವೆನಿಸುವ ಆ ವರ್ಣನೆಯನ್ನು ಸಿದ್ಧನಂಥ ಮಹಾಪುರುಷನ ಮುಖದಿಂದ ಕೇಳಿ ಘಾಬರಿಯಾದರು. ಯಾಕಂದರೆ ಸಿದ್ಧ ಸುಳ್ಳು ಮಾತುಗಳನ್ನಾಡುವವನಲ್ಲ. ಮುಂದೆ ಆರು ತಿಂಗಳು ಕಳೆದಿರಬಹುದು. ಮುಂಬಯಿ ನಗರದಲ್ಲಿ ಪ್ಲೇಗು ರೋಗವು ತಲೆದೋರಿ ಜನರನ್ನಾಹುತಿ ತೆಗೆದುಕೊಳ್ಳಲಾರಂಭಿಸಿತು. ಕ್ರಮೇಣ ಅದು ಎಲ್ಲ ಕಡೆಗೂ ವ್ಯಾಪಿಸುತ್ತ ಹುಬ್ಬಳ್ಳಿಗೂ ಬಂದಿತು. ಜನ ಅಳ್ಳು ಹುರಿದಂತೆ ಪಟ-ಪಟ ಸಾಯತೊಡಗಿದರು. ಎಲ್ಲರಿಗೂ ಮರಣದ ಭೀತಿಯಾವರಿಸಿ ಉಳಿಯುವ ಯೋಚನೆ ಮಾಡಿದರು. ರೋಗದೂಷಿತವಾದ ಊರು-ಮನೆ ಬಿಟ್ಟು ಅಡವಿಗೋಡಿ ಗುಡಿಸಲಿನಲ್ಲಿ ವಾಸಿಸಲಾರಂಭಿಸಿದರು. ಮನೆಯಲ್ಲಿ ಯಾರಿಗಾದರೂ ಒಬ್ಬರಿಗೆ ರೋಗವಾದರೆ ತೀರಿತು. ಸರಕಾರಿ ಅಧಿಕಾರಿಗಳು ನಿರ್ದಯತೆಯಿಂದ ಎಲ್ಲರನ್ನು ಹೊರಗಟ್ಟುವರು. ಅವರ ದರ್ಪಕ್ಕೂ ಜೀವ ಭಯಕ್ಕೂ ಈಡಾದ ಜನ ಆಸ್ತಿ-ಪಾಸ್ತಿಗಳ ಮೋಹ ಬಿಟ್ಟು ಕಾಡು ಸೇರುವರು. ರೋಗಿಗಳನ್ನು ಎಳೆದೊಯ್ದು ಯಾವುದೋ ಹಾಳು ಮನೆಗೋ ಮುರುಕ ಗುಡಿಸಲಿಗೋ ಹಾಕುವರು. ಅಲ್ಲಿ ನೋಡುವವರು ಬಂದರೆ ಬಂದರು. ಇಲ್ಲವಾದರೆ ಇಲ್ಲ. ಹಾಗೆ ಮನೆ ಬಿಡಿಸಿದ ರೋಗಿಗಳು ಅನ್ನ-ನೀರಿಲ್ಲದೆಯೋ, ರೋಗದ ಉಲ್ಬಣಾವಸ್ಥೆಯಿಂದಲೋ ಸತ್ತು ಹೋಗಬೇಕು. ರೋಗವು ನಮಗೆ ಬಂದಿರುವುದು ಎಂದು ಹೇಳದೇ ಎಷ್ಟೋ ಜನ ಮನೆಯಲ್ಲುಳಿದು ಮರಣವನ್ನಪ್ಪಿದರು. ಬದುಕು-ಬಾಳ್ವೆಯ ಮೋಹದಿಂದ ಮನೆಯಲ್ಲಿ ಉಳಿದುಕೊಂಡವರು ರೋಗ ಪಾರಾಗಲಿಲ್ಲ. ಹಾದಿ-ಬೀದಿಗೊಂದರಂತೆ ಹೆಣಗಳಾದವು. ಅವುಗಳನ್ನು ತೆಗೆಯುವರಾರು? ಅವುಗಳಿಗೆ ಯೋಗ್ಯ ಸಂಸ್ಕಾರ ಮಾಡುವವರಾರು?

ಆಕಾಶದ ಹದ್ದು ಭೂಮಿಗಿಳಿದವು' ಕಾಗೆಗಳು ತಮ್ಮ ಬಳಗ ಕರೆದವು. ಈ ರೀತಿ ಸಿದ್ಧನ ಭವಿಷ್ಯವಾಣಿ ನಿಜವಾಯಿತು.

ಚಿತ್ರಕಾರ ಬೆನಕಪ್ಪ ಇದನ್ನೆಲ್ಲ ನೋಡುತ್ತಿದ್ದನು. ಎಷ್ಟೋ ಮನೆಗಳು ಜನ ಶೂನ್ಯವಾದವು. ಕೆಲವು ಕಡೆಗೆ ತರುಣರೆಲ್ಲ ಸತ್ತು ವೃದ್ಧರುಳಿದರು. ಮತ್ತೆ ಕೆಲವೆಡೆಗಳಲ್ಲಿ ತಾಯ್ತಂದೆ ಸತ್ತು ಚಿಕ್ಕ-ಚಿಕ್ಕ ಮಕ್ಕಳಷ್ಟೇ ಉಳಿದುಕೊಂಡವು. ಯಾರದೋ ಬದುಕು ಬಾಳ್ವೆ, ಯಾರೋ ಒಯ್ದು ತುಂಬಿಕೊಂಡರು. ಎಲ್ಲಿ ನೋಡಿದಲ್ಲಿ ಅಕ್ರೋಶ-ಚೀತ್ಕಾರ-ನೋವು-ನರಳಿಕೆ, ಭಯ-ದೈನ್ಯ ಇದನ್ನೆಲ್ಲ ಕಂಡು ಚಿತ್ರಗಾರ ನೊಂದನು. ಇಂಥ ಭಯಂಕರ ಚಿತ್ರವನ್ನು ಕರುಣಾಘನನಾದ ಭಗವಂತ ಹೇಗೆ ಬರೆಯುವನೋ ಎಂದುಕೊಂಡು ನೆರೆ-ಹೊರೆಯವರಿಗೆ ತನ್ನಿಂದಾದ ಸಹಾಯ ಮಾಡತೊಡಗಿದನು. ಒಂದು ದಿನ ಅವನಿಗೇ ಪ್ಲೇಗು ರೋಗ ತಗಲಿತು. ಸರಕಾರದ ಅಧಿಕಾರಿಗಳು ಬಂದು ಅವನು ರೋಗಗ್ರಸ್ತನಾದ ವರ್ತಮಾನವನ್ನು ತಿಳಿದರು. ಅವರಿನ್ನು ತಮ್ಮ ಮೇಲಾಧಿಕಾರಿಯ ಅಪ್ಪಣೆ ಪಡೆದು ಬಂದು ಬೆನಕಪ್ಪನನ್ನು ಊರುಬಿಡಿಸಿ ಹೊರಗೆ ಸಿದ್ಧವಾದ ರೋಗಿಗಳ ಗುಡಿಸಲಿಗೆ ಬಲಾತ್ಕಾರದಿಂದಲಾದರೂ ಎಳೆದೊಯ್ಯುವರು. ಹಾಗೆ ಊರು-ಮನೆ ಬಿಟ್ಟು ಹೋದವರು ಯಾರೂ ಬದುಕಿ ಬರಲಾರರೆಂದು ಜನರ ಭಾವನೆಯಾಗಿತ್ತು. ಬೆನಕಪ್ಪನ ಮಡದಿ ಭಯದಿಂದ ಕಂಗೆಟ್ಟು ಸಿದ್ಧನ ಬಳಿಗೆ ಬಂದು 'ರಕ್ಷಿಸಬೇಕೆಂದು ಬೇಡಿಕೊಳ್ಳಲಾರಂಭಿಸಿದಳು.' ಸಿದ್ಧ ಕೇಳಿದನು ಏನಾಗಿದೆ?

'ನನ್ನ ಗಂಡನಿಗೆ ಪ್ಲೇಗು ಬಂದಿರುತ್ತದೆ. ತುಸುವೇಳೆಯ ಮೊದಲು ಸರಕಾರದ ಜನ ಒಂದು ಹೆಸರು ಬರೆದುಕೊಂಡು ಹೋದರು. ಇನ್ನು ಮೇಲೆ ಬಂದು ಅವನನ್ನು ಎಳೆದುಕೊಂಡು ಊರಹೊರಗಿನ ಗುಡಿಸಲಿಗೆ ಒಯ್ಯುತ್ತಾರೆ. ಅಲ್ಲಿ ಹೋದವರಿಗೆ ಯಮಯಾತನೆಯಂತೆ. ಅದರಿಂದ ಬದುಕಿ ಬರುವ ಜನ ವಿರಳ. ನನಗೆ ಬಹಳ ಘಾಬರಿಯಾಗಿದೆ ಸ್ವಾಮೀ, ನನ್ನ ಸೌಭಾಗ್ಯವನ್ನುಳಿಸು. ನಿನ್ನ ಹೊರತು ಕಾಪಾಡುವವರು ಯಾರೂ ಇಲ್ಲ.'

ಎಂದು ಬೆನಕಪ್ಪನ ಹೆಂಡತಿ ಗೋಗರೆದು ಹೇಳಿಕೊಳ್ಳಲು ಸಿದ್ಧನು ಕರುಣಾಮಯನಾಗಿ 'ಚಿಂತಿಸಬೇಡ, ನಾಮಸ್ಮರಣೆಮಾಡುತ್ತ ಸ್ವಸ್ಥವಾಗಿರು. ನಿನ್ನ ಗಂಡನನ್ನು ಯಾರೂ ಎಳೆದೊಯ್ಯಲು ಬರಲಾರರು. ಹೋಗು' ಎಂದು

ಅಭಯವನ್ನು ನೀಡಲು ಆ ಸ್ತ್ರೀ ಮನೆಗೆ ತೆರಳಿದಳು. ಏನು ? ಎಂತು ? ಎಂದು ಕೂಡ ಯಾರೂ ವಿಚಾರಿಸಲು ಬರಲಿಲ್ಲ. ಬೆನಕಪ್ಪನು ಕೆಲದಿನಗಳ ನಂತರ ಆರೋಗ್ಯ ಹೊಂದಿದನು. ಹೀಗೆ ಅವನು ರೋಗ ಮುಕ್ತನಾದನೆನ್ನು ವಷ್ಟರಲ್ಲಿ ಅವನ ಹೆಂಡತಿಗೆ ಪ್ಲೇಗು ಬರಲು ಮತ್ತೆ ಸರಕಾರೀ ಅಧಿಕಾರಿಗಳು ರೋಗಿಗಳನ್ನು ಶೋಧಿಸುತ್ತ ಬಂದರು. ಬೆನಕಪ್ಪನ ಹೆಂಡತಿ ಮನೆಯಲ್ಲಿ ಎದುರಿಗೇ ಮಲಗಿದ್ದಳು. ಆಗ ಅಧಿಕಾರಿಯು ಈ ಮನೆಯಲ್ಲಿ ರೋಗಿಗಳು ಯಾರೂ ಇಲ್ಲವೆಂದು ಬರೆದುಕೊಂಡು ಹೊರಟು ಹೋದನು. ನಡೆದ ಘಟನೆ ಯಿಂದ ಬೆನಕಪ್ಪನ ಹೃದಯ ತುಂಬಿಬಂದಿತು. ಸದ್ಗುರುನಾಥನ ದಯೆ ಎಂಥದು ? ಎಂಬುದರ ಅನುಭವ ಪಡೆದು ಭಕ್ತಿಯಿಂದ ತಲೆಬಾಗಿದನು.

ಈ ಭಕ್ತರು ನನ್ನವರೆಂದು ಒಮ್ಮೆ ಅಂಗೀಕರಿಸಿದನೆಂದರೆ ತೀರಿತು. ಆ ಭಕ್ತರಿಗೊಂದು ಭದ್ರ ಕವಚ ದೊರಕಿದಂತೆ. ಪ್ರಪಂಚದಲ್ಲಿ ಅವರಿಗೊದಗುವ ರೋಗ-ರುಜಿನ-ದುಃಖ-ದುರ್ಮ್ಮಾನ-ಹಾನಿ-ಅಪಜಯ ಎಲ್ಲವುಗಳಿಂದ ಸದ್ಗುರು ಅವರನ್ನು ಪಾರುಗೊಳಿಸುವನು.

ಹಳೇಹುಬ್ಬಳ್ಳಿಯಲ್ಲಿ ಜೀವಪ್ಪನೆಂಬ ಬಡನೇಕಾರ. ಹೆಂಡತಿ-ಮಕ್ಕಳು ಹೇಗೋ ಹೊಟ್ಟೆ ತುಂಬಿಕೊಂಡಿದ್ದನು. ಅವನಿಗೆ ಸದ್ಗುರುನಾಥನಲ್ಲಿ ವಿಶೇಷ ವಾದ ಭಕ್ತಿ. ನಿತ್ಯ ಹೆಂಡತಿ ಮಕ್ಕಳನ್ನು ಕೂಡಿಕೊಂಡು ಮಠಕ್ಕೆ ಬಂದು ಭಜನೆ ಮಾಡಿ ಆರತಿ ಮುಗಿದೊಡನೆ ಮನೆಗೆ ತೆರಳುವುದು ವಾಡಿಕೆ. ಹೀಗಿ ರಲು ಅವನನ್ನೂ ಪ್ಲೇಗು ಆವರಿಸಿಕೊಂಡಿತು. ಇದಕ್ಕೆ ಸದ್ಗುರುನಾಥನಿಗೆ ಶರಣು ಹೋಗುವುದೊಂದೇ ತಕ್ಕ ಉಪಾಯವೆಂದು ಅವನಿಗನಿಸಿ ಕೂಡಲೇ ಹೆಂಡತಿ-ಮಕ್ಕಳನ್ನು ಮಠಕ್ಕೆ ಕಳಿಸಿದನು. ಅವನ ಹೆಂಡತಿ ಸಿದ್ಧನ ಮುಂದೆ ಬಹು ದುಃಖದಿಂದ ತಮಗೆ ಬಂದೊದಗಿದ ಸಂಕಟವನ್ನು ನಿವೇದಿಸಿ 'ಗುರು ನಾಥನೇ, ಇನ್ನು ನಮ್ಮ ಗತಿ ಏನು ? ದುಡಿಯುವ ಗಂಡನು ಬೇನೆಯಿಂದ ಮಲಗಿಬಿಟ್ಟನು. ಸಣ್ಣ-ಸಣ್ಣ ಮಕ್ಕಳು ಇವುಗಳನ್ನು ಕಟ್ಟಿಕೊಂಡು ನಾನು ಹೇಗೆ ಸಾಗಿಸಬೇಕು. ನೀನೇ ಮಾರ್ಗ ತೋರಿಸು.' ಎಂದು ಕಣ್ಣೀರಿಟ್ಟಳು. ಕರುಣಾ ಸಮುದ್ರನಾದ ಸಿದ್ಧ ನುಡಿದನು.

'ಯಾವುದಕ್ಕೂ ಚಿಂತೆ ಮಾಡಬೇಡ ಈಶ್ವರನಲ್ಲಿ ವಿಶ್ವಾಸವಿಡು. ನಾಮ ಸ್ಮರಣೆ ಬಿಡಬೇಡ. ಈ ಭಸ್ಮವನ್ನು ಒಯ್ದು ನಿನ್ನ ಗಂಡನಿಗೆ ಹಚ್ಚು. ಆರಾಮವಾಗುವುದು.

ಭಕ್ತಿಯಿಂದ ಆ ಸ್ತ್ರೀಯು ಅದರಂತೆ ಮಾಡಲು ಜೀವಪ್ಪ ರೋಗಮುಕ್ತನಾದನು. ಆದರೆ ಕಣ್ಣುಗಳು ಮಾತ್ರ ಹೋಗಿಬಿಟ್ಟಿದ್ದವು. ಇದೇ ಸ್ಥಿತಿಯುಳಿದರೆ ಅವನ ಕಸಹು ನಡೆಯುವುದು ಸಾಧ್ಯವಿಲ್ಲ. ಗಂಡ-ಹೆಂಡತಿ ಬಹಳ ವಿಚಾರ ಮಾಡಿ ಪುನಃ ಸದ್ಗುರುನಾಥನ ಬಳಿಗೆ ಬಂದು ತಮ್ಮ ದುಃಖವನ್ನು ತೋಡಿಕೊಂಡರು.

'ಸದ್ಗುರುವೇ, ಇನ್ನು ನಮ್ಮ ಗತಿ ಏನು? ಹೊಟ್ಟೆತುಂಬಿಕೊಳ್ಳುವ ಕಸುಬಾದ ನೇಕಾರಿಕೆ ಕಣ್ಣಿಲ್ಲದೆ ನಡೆಯಲಾರದು. ಕಸಬು ನಡೆಯದಿದ್ದರೆ ಹೊಟ್ಟೆಗಿಲ್ಲ. ನಿನಗೆ ಶರಣು ಬಂದಿದ್ದೇವೆ. ಹಾಲಿನಲ್ಲಾದರೂ ಎದ್ದು ನೀರಿನಲ್ಲಾದರೂ ಎದ್ದು' ಎನ್ನುತ್ತ ಪಾದತಲದಲ್ಲಿ ಬಿದ್ದು ಹೊರಳಾಡತೊಡಗಲು ಕನಿಕರ ಪಟ್ಟ ಸಿದ್ಧನು ಜೀವಪ್ಪನನ್ನು ಬಳಿಗೆ ಕರೆದು ತನ್ನ ಅಮೃತ ಕರಗಳಿಂದ ಅವನ ಸ್ಪರ್ಶಮಾಡಿ ತಾನೇ ಒಂದು ಅರಿವೆಯ ತುಂಡಿನಿಂದ ಕಣ್ಣುಗಳನ್ನು ಕಟ್ಟಿ ಮನೆಗೆ ಹೋದಮೇಲೆ ಅರಿವೆ ಬಿಚ್ಚಿರಿ.' ಎಂದು ಹೇಳಿ ಹೋಗಲಪ್ಪಣೆ ಮಾಡಿದನು. ಗಂಡ-ಹೆಂಡತಿ ಮನೆಗೆ ಮರಳಿದರು. ಗುರುವಿನ ಮಹಿಮೆ ಇನ್ನೇನುಂಟೋ? ಎಂದು ಕುತೂಹಲ ಅವರಿಗೆ. ಕೂಡಲೇ ಜೀವಪ್ಪನ ಹೆಂಡತಿ ಕಣ್ಣಿನ ಅರಿವೆ ಬಿಚ್ಚಿದಳು. ಎಲ್ಲರಿಗೂ ಆಶ್ಚರ್ಯ. ಕಣ್ಣು ಮೊದಲಿನಂತಾಗಿವೆ. ಇದೆಲ್ಲ ಸದ್ಗುರು ಮಹಿಮೆ ಎಂದು ಕೊಂಡಾಡುತ್ತ ಭಕ್ತಿಯಿಂದ ಸದ್ಗುರುವನ್ನು ಸ್ತುತಿಸಿದರು.

———

೨೦

ಮಾತಾ ಚ ಪಾರ್ವತೀದೇವೀ ಪಿತಾ ದೇವೋ ಮಹೇಶ್ವರಃ ।
ಬಾಂಧವಾ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

--ಶಿವಸ್ತುತಿ

ಸತ್ಪುರುಷರ ದರ್ಶನ-ಸಹವಾಸ-ಭಾಷಣಗಳು ಎಂದಿಗೂ ವ್ಯರ್ಥವಲ್ಲ. ಮಂದ ವಿಚಾರಿಗಳೂ, ಸಂಸಾರ ಸಕ್ತರೂ ಆದವರಲ್ಲಿ ಗುಣ ಪರಿವರ್ತನವಾಗಿ ಸದ್ಗುಣಗಳು ತೀವ್ರಗತಿಯಲ್ಲಿ ತೋರಲಿಕ್ಕಿಲ್ಲ. ಕ್ರಮೇಣ ಸದ್ಗುಣ-ಸದಾಚಾರ ಣೆಗಳ ಬೀಜಗಳು ಮೊಳೆಯುತ್ತವೆಂಬಲ್ಲಿ ಮಾತ್ರ ಸಂದೇಹವಿಲ್ಲ.

ಹುಬ್ಬಳ್ಳಿಯ ಎಡಬಲದ ಹಳ್ಳಿ-ಪಳ್ಳಿಗಳಲ್ಲಿ ಕೂಡ ಸಿದ್ಧಾರೂಢ ಸದ್ಗುರುವಿನ ಮಹತಿ ಹರಡಿತ್ತು. ಕಾರ್ಮುಗಿಲ ಕೋಲ್ಮಿಂಚಿನಂತೆನಿಸಿದರೂ ಜನರಲ್ಲಿ ಸತ್ಪ್ರವೃತ್ತಿಗಳು ಕಾಣುತ್ತಿದ್ದವು. ಹುಬ್ಬಳ್ಳಿಯ ಸಮೀಪದಲ್ಲಿ 'ಮಾವನೂರು ಎಂಬದೊಂದು ಹಳ್ಳಿ. ಅಲ್ಲಿರುವವರೆಲ್ಲ ಬಹು ರೈತ ವರ್ಗದವರು ಅವರೆಲ್ಲ ಕೂಡಿ ಒಮ್ಮೆ ಅನ್ನಸಂತರ್ಪಣೆ ಮಾಡಬೇಕೆಂದು ಯೋಚಿಸಿ ಆ ವೇಳೆಯಲ್ಲಿ ಸದ್ಗುರುವನ್ನಾಮಂತ್ರಿಸಿ ಪೂಜಿಸಬೇಕೆಂದು ಇಚ್ಛಿಸಿದರು. ಅವರಿಗೆಲ್ಲ ಸಾತಪ್ಪನೆಂಬವನು ಮುಂದಾಳು. ಎಲ್ಲರೂ ಕೂಡಿಕೊಂಡು ಸದ್ಗುರುನಾಥನಿಗೆ ತಮ್ಮ ಇಚ್ಛೆಯನ್ನು ತಿಳಿಸಿದರು. ಲೀಲಾನಿಧಿಯಾದ ಸದ್ಗುರು ಒಪ್ಪಿಕೊಂಡು ಗೊತ್ತಾದ ದಿನ ಪಲ್ಲಕ್ಕಿಯಲ್ಲಿ ಕುಳಿತು ಆ ಊರಿಗೆ ನಡೆದನು. ಒಂದು ಕಡೆ ವಾದ್ಯಗಳು ಮೊಳಗುತ್ತಿದ್ದರೆ ಮತ್ತೊಂದೆಡೆಗೆ ಹರ್ಷಭರಿತರಾದ ಭಕ್ತರ ಭಜನೆ ಸಾಗಿತ್ತು. ಉಚ್ಚ ಕಂಠದಿಂದ ಸ್ತುತಿಪರವಾದ ಪದಗಳನ್ನು ಹಾಡುತ್ತ ಕೆಲವರು ನಡೆದಿದ್ದರು. ಹಳ್ಳಿಯಲ್ಲಿ ಸಕಲ ಸಿದ್ಧತೆಯೂ ಆಗಿತ್ತು. ದೊಡ್ಡದೊಂದು ಹಂದರ ಹಾಕಿ ತಳಿರು ತೋರಣಗಳಿಂದ ಅದನ್ನು ಶೃಂಗರಿಸಿದ್ದರು. ಮಧ್ಯದಲ್ಲೊಂದು ಕಡೆ ಉನ್ನತ ಪೀಠ. ಅದರ ಸುತ್ತಲೂ ಮಂಟಪ ಹೂಗಿಡ-ಬಾಳೆಯ ಗಿಡ. ಬಣ್ಣ-ಬಣ್ಣದ ಹಾಳೆ ಇವುಗಳಿಂದ ಅಲಂಕರಿಸಿದ್ದರು.

ಸಿದ್ಧನು ಬರಲು ಭಯ-ಭಕ್ತಿಯಿಂದ ಅವನನ್ನು ಕರೆದೊಯ್ದು ಆ ಉನ್ನತ ಪೀಠದಲ್ಲಿ ಕುಳ್ಳಿರಿಸಿ ಅತ್ಯಾದರದಿಂದ ಮೊದಲು ಪೂಜಿಸಿದರು. ಸುವಾಸನೆಯ ಧೂಪ ಹಾಕಿದರು. ಹಣ್ಣು-ಕಾಯಿ ಅರ್ಪಿಸಿ ಆನಂದ ಬಾಷ್ಪಗಳ

ನ್ನುದುರಿಸುತ್ತ ಆರತಿ ಬೆಳಗಿದರು. ಜಯ-ಜಯಕಾರ ಮಾಡುತ್ತ 'ಕಾಪಾಡು ಎಂದು ವಂದಿಸಿದರು. ಎಲ್ಲರ ಕಣ್ಣಿಗೂ ಅದೊಂದು ಹಬ್ಬ. ಅಂದಿನ ಮಟ್ಟಿಗೆ ತಮ್ಮ ದುಃಖ-ದುಮ್ಮಾನ ದ್ವೇಷಗಳನ್ನು ಮರೆತು ಅವರೆಲ್ಲ ಒಂದುಗೂಡಿದ್ದರು. ಅಂದಿನ ದಿನ ಕ್ಷುದ್ರ-ಸ್ವಾರ್ಥಪೂರಿತರಾದ ಜನರದಾಗಿರಲಿಲ್ಲ. ಅದು ಸಚ್ಚಿದಾನಂದ ಮೂರ್ತಿ ಸದ್ಗುರುವಿನ ಅನುಗ್ರಹದಿನ. ಪ್ರಾಚೀನ ಕಾಲದಿಂದಲೂ ಹೀಗೆಯೇ. ಧರ್ಮ ಕಾರ್ಯಗಳೆಲ್ಲ ಜನರಲ್ಲಿ ಭಾವೈಕ್ಯವನ್ನುಂಟು ಮಾಡುವವು.

ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾಗಬೇಕಿತ್ತು. ಪಾಕಶಾಲೆಯಲ್ಲಿ ತಮ್ಮ ಪಾಲಿಗೆ ಬಂದ ಕಾರ್ಯಗಳನ್ನು ಜನ ನಿರ್ವಹಿಸುತ್ತಿದ್ದರು. ತುಪ್ಪ ಕಾಯಿಸುವ ಕಾರ್ಯ ಸಾತಪ್ಪನದಾಗಿತ್ತು. ದೊಡ್ಡದೊಂದು ಡಬರಿಯಲ್ಲಿ ಬೆಣ್ಣೆ ಹಾಕಿ ಕಾಯಲಿಟ್ಟನು. ಉಳಿದ ಅಡಿಗೆ ಎಲ್ಲ ಸಿದ್ಧವಾದಂತಾಗಿತ್ತು.

ಗಂಧದಕಟ್ಟಿಗೆಯನ್ನು ಎಷ್ಟೇ ತೇಯುತ್ತ ಹೋದರೂ ಅದರಿಂದ ಸುವಾಸನೆಯಿಂದ ಕೂಡಿದ ಗಂಧವು ದೊರಡುವದು. ಗುಗ್ಗಳವನ್ನು ಬೆಂಕಿಯಲ್ಲಿ ಹಾಕಿ ಸುಟ್ಟರೂ ಪರಿಮಳಭರಿತವಾದ ವಾಸನೆ ಇಡಗುವದು. ಅದರಂತೆ ಬೆಣ್ಣೆ ಮರಳುವಂತೆ ಕಾಸಿದರೆ ಕಸ್ತೂರಿಯಂಥ ತುಪ್ಪ ಹೊರಡುವುದು.

ತುಪ್ಪದ ವಾಸನೆ ಬರಲು ಅದನ್ನಿಳಿಸಬೇಕೆಂದು ಸಾತಪ್ಪನು ಒಂದು ಅರಿವೆಯನ್ನು ಹಿಡಿದು ಡಬರಿಯನ್ನು ಕೆಳಗಿಳಿಸಹೋದನು. ಆದರೆ ಅದರಲ್ಲಿ ತುಪ್ಪವು ಬಹಳವಿತ್ತು. ಅರಿವೆ ಹಿಡಿದು ಒಲೆಯ ಮೇಲಿಂದ ತುಪ್ಪದ ಡಬರಿಯನ್ನು ಕೆಳಗೆ ತೆಗೆದುಕೊಂಡಿದ್ದೇನೋ ನಿಜ ಕೈಗೆ ಜಳತಾಕಿ ಡಬರಿ ಕೆಳಗೆ ಬಿದ್ದು ಬಿಸಿ-ಬಿಸಿ ತುಪ್ಪ ಚಲ್ಲಿ ಹೋಯಿತು. ಆ ಗಡಿಬಿಡಿಯಲ್ಲಿ ಕೆಲವು ಭಾಗ ಸಾತಪ್ಪನ ಮೈಮೇಲೆ ಬೀಳಲು ಅವನು ಚಟ್ಟನೆ ಚೀರಿ ನೆಲಕ್ಕೆ ಕುಸಿದು ಬಿದ್ದನು. ಕ್ಷಣ ಮಾತ್ರದಲ್ಲಿ ಮೈತುಂಬ ದೊಡ್ಡ ದೊಡ್ಡ ಗುರುಳೆಗಳೆದ್ದವು. ಮೈಯೆಲ್ಲ ಉರಿಯಲಾರಂಭಿಸಿತು. ವ್ಯಥೆ ತಾಳದಂತಾಗಿ 'ಸದ್ಗುರುನಾಥನೇ, ನೀನೇ ಕಾಪಾಡು' ಎನ್ನುತ್ತ ಬವಳಿ ಬಂದು ಮಲಗಿಬಿಟ್ಟನು.

ಅಡಿಗೆಯ ಮನೆಯಲ್ಲಿ ಹಾಹಾಕಾರವಾರಂಭವಾಯಿತು. ಹುಚ್ಚರಂತೆ ಜನ ಅತ್ತಿತ್ತ ಧಾವಿಸತೊಡಗಿದರು. ಕೆಲವರು ಔಷಧ ತರಿಸಬೇಕೆಂದರು. ಕೆಲವರು ನೆಲದ ರಾಡಿ ಬಡಿಯಬೇಕೆಂದು ಯತ್ನಿಸತೊಡಗಿದರು. ಈ ಸುದ್ದಿ

ಭಕ್ತಬಂಧುವೆನಿಸಿದ ಸಿದ್ಧನಿಗೆ ತಿಳಿಯಲು ತನ್ನ ಸಚ್ಚಿದಾನಂದ ಸಿಂಹಾಸನದಿಂ ದಿಳಿದು ಸಾತಪ್ಪನಿರುವಲ್ಲಿಗೆ ಧಾವಿಸಿದನು.

ಸಾಧು-ಸಜ್ಜನರ ಮನಸ್ಸು ಬೆಣ್ಣೆಯಂತಿರುವುದೆಂದು ಹೇಳುವರು. ಆದರೆ ಬೆಣ್ಣೆಯ ಉಪಮಾನವು ಸರಿಯಾಗಿ ಹೊಂದುವುದಿಲ್ಲ. ಯಾಕಂದರೆ ಪ್ರತ್ಯಕ್ಷವಾಗಿ ಬೆಂಕಿಯ ಮೇಲಿಡದ ವಿನಃ ಬೆಣ್ಣೆ ಕರಗುವುದಿಲ್ಲ. ಆದರೆ ಸಾಧುಗಳು ಬೇರೆಯವರಿಗಾದ ತಾಪಕಂಡ ಮಾತ್ರಕ್ಕೆ ಕರಗಿ ಹೋಗುತ್ತಾರೆ.

ಸಿದ್ಧನ ಅಡಿಗೆಯ ಮನೆಯಲ್ಲಿ ಬಂದಾಗ ಸಾತಪ್ಪನ ಹೆಂಡತಿ-ಮಕ್ಕಳು ದೊಡ್ಡ ಧ್ವನಿಯಿಂದ ಅಳತೊಡಗಿದ್ದರು. ಉಳಿದವರು ಮುಂದೇನು ಗತಿ? ಎಂದು ಚಿಂತೆ-ವಿಷಾದಗಳಿಂದ ಬಾಡಿಹೋಗಿದ್ದರು. ಮೊದಲು ಸಿದ್ಧನು ಅವ ರನ್ನೆಲ್ಲ ಶಾಂತಗೊಳಿಸಿದನು. 'ಧರ್ಮಾಚರಣೆಯನ್ನು ಸ್ವಲ್ಪ ಮಾಡಿದರೂ ಮಹಾಭಯವನ್ನು ಕಳೆಯುವುದೆಂದು ಈಶ್ವರ ಹೇಳಿದ್ದಾನೆ. ಹೀಗಿರು ವಾಗ ಧರ್ಮವಂತನಾದ ಸಾತಪ್ಪನನ್ನು ದೇವ ರಕ್ಷಿಸಲಾರನೇ?' ಎಂದು ನುಡಿದು ಸಾತಪ್ಪನನ್ನು ಸ್ಪರ್ಶಿಸಿ 'ಅಯ್ಯ, ಹುಚ್ಚಪ್ಪಗಳಿರಾ ಸಾತಪ್ಪನ ಮೈಮೇಲೆ ಬಿದ್ದಿರುವುದು ಬಿಸಿ ತುಪ್ಪವಲ್ಲ. ಅದು ಆರಿದ ತುಪ್ಪ ನೋಡಿದಿರಾ ಹೆತ್ತುಹೋಗಿದೆ. ಹು, ಸಾತಪ್ಪ ನಿನ್ನ ರೀತಿ ಕಾಡು ಜನರೆಲ್ಲ ಘಾಬರಿಗೊಂಡಿ ದ್ದಾರೆ. ಬೇಗನೆ ಏಳು ಸುಮ್ಮನೆ ತಡವೇಕೆ? ಎಂದು ಹೇಳಲು ಸಾತಪ್ಪ ನಿದ್ದೆ ತಿಳಿದು ಏಳುವವರಂತೆ ಎದ್ದು ಕುಳಿತನು. ಅದನ್ನು ಕಂಡು ಆಶ್ಚರ್ಯ ಚಕಿತರಾದ ಜನ ಸದ್ಗುರುನಾಥನ ಜಯ ಜಯಕಾರವನ್ನು ಮಾಡಿದರು. ಪೂರ ಎಚ್ಚತ್ತು ಸಾತಪ್ಪ 'ಇದೇನು? ನನ್ನ ಮೈಗೆಲ್ಲ ತುಪ್ಪವೇಕೆ ಮೆತ್ತಿದೆ?' ಎನ್ನಲು ಸದ್ಗುರು ನಗುತ್ತ ಎಣ್ಣೆ ಹಚ್ಚಿಕೊಂಡು ಎರೆದುಕೊಳ್ಳುವುದು ಇದ್ದೇ ಇದೆ. ತುಪ್ಪ ಹಚ್ಚಿಕೊಂಡು ಎರೆದುಕೊಳ್ಳೋಣ ಎಂದು ನೀನೇ ಹಚ್ಚಿಕೊಂಡಿ ರುವೆಯಪ್ಪ ಎಂದು ನಗೆಯಾಡಿದನು. ಆಶ್ಚರ್ಯಗೊಂಡ ಸಾತಪ್ಪ ಆ ಚೀಟಿ ನೋಡಲು ತುಸುವೇಳೆಯ ಮೊದಲು ನಡೆದ ಸಂಗತಿ ಎಲ್ಲ ನೆನಪಿಗೆ ಬಂದಿತು. ನಿಜವಾಗಿಯೂ ಅದು ಪ್ರಾಣಾಂತಕರ ಸಂಗತಿ. ಸುಖಾಂತವಾಗಿ ಮುಗಿದುದು ಸದ್ಗುರು ಮಹಿಮೆಯೇ ಸರಿ. ಎಂದು ಭಾವಿಸಿ 'ಸದ್ಗುರುನಾಥನೇ, ಹರಮು ನಿದರೆ ಗುರು ಕಾಯುವನೆಂಬ ಮಾತು ಸುಳ್ಳಲ್ಲ. ನಿನ್ನ ಕೃಪೆಯಿಂದಲೇ

ನಾನು ಉಳಿದೆನು.' ಎಂದು ಮೊದಲಾಗಿ ಬಹಳ ಬಗೆಯಿಂದ ಸ್ತುತಿಸಿ ಸಿದ್ಧನ ಪಾದಕಮಲಗಳಿಗೆ ವಂದಿಸಿದನು.

'ಇನ್ನು ಊಟದ ಕೆಲಸವನ್ನಾರಂಭಿಸಬಹುದು.' ಎಂದು ಸಿದ್ಧ ಅಪ್ಪಣೆ ಕೊಡಲು ಜನರು ಗಡಿಬಿಡಿ ಮಾಡುತ್ತ ಎಲೆ ಹಾಕುವುದು, ಬಡಿಸುವುದು ಮುಂತಾದ ಸಿದ್ಧತೆಗಳಲ್ಲಿ ತೊಡಗಿದರು. ಅಷ್ಟರಲ್ಲಿ ಸಾತಪ್ಪನು ಸ್ನಾನ ತೀರಿಸಿ ಕೊಂಡು ಬಂದು ಎಲ್ಲರಂತೆ ತಾನೂ ಊಟದ ಸಿದ್ಧತೆಯಲ್ಲಿ ತೊಡಗಿದನು. ಅವನಿಗೇನು ಆಗಿಲ್ಲವೆನ್ನುವಂತೆಯೇ ಉತ್ಸಾಹದಿಂದ ಓಡಾಡಿದನು. ಸತ್ಕಾರ್ಯಕ್ಕೆ ಬಂದ ವಿಘ್ನವು ಸದ್ಗುರು ಕೃಪೆಯಿಂದ ಸಹಜವಾಗಿ ನಿವಾರಣೆಯಾಯಿತು.

ಆ ಮೇಲೆ ಸದ್ಗುರು ಪೂಜೆ ಮುಗಿಯಲು ಎಲೆ ಹಾಕಿದರು. ಸ್ವತಃ ಸದ್ಗುರು ಪದಾರ್ಥ ಬಡಿಸುವುದರಲ್ಲಿ ಭಾಗವಹಿಸಿದನು. ಅವನ ಕೈಮುಟ್ಟಿ ಎಲ್ಲರಿಗೂ ಪದಾರ್ಥ ಪ್ರಸಾದವೆಂದು ಜನರು ಉಂಡರು. ಊಟ ನಡೆದಾಗ ಜನರ ಸಾಲಿನಲ್ಲಿ ಸದ್ಗುರುನಾಥ ಓಡಾಡುತ್ತ 'ಇನ್ನಿಷ್ಟು ಹಾಕಿರಿ ಇನ್ನಿಷ್ಟು ಹಾಕಿರಿ' ಎಂದು ನುಡಿಯುತ್ತ ವಿನೋದ ಮಾಡುತ್ತ ತಾನೇ ತಂದು ಬಡಿಸುತ್ತ ಜನರನ್ನು ಸಂತೋಷಗೊಳಿಸಿದನು.

ಅಲ್ಲಿ ಅಂದು ಉಂಡವರಿಗೆ ಸದ್ಗುರುನಾಥನ ಲೀಲೆ ಕಂಡು ಗುರುದೆಂದರೆ ತಾಯಿ-ತಂದೆ-ಬಂಧು-ಬಳಗ ಎಲ್ಲವೂ ಸದ್ಗುರುದೇವ. ಎನಿಸಿದರೇನೂ ಆಶ್ಚರ್ಯವಿಲ್ಲ. ಊಟ ಮಾಡುವುದರಿಂದಲೇ ಮನುಷ್ಯನಿಗೆ ಎಷ್ಟೋ ಆನಂದವಾಗುವದು. ಇಂದು ಸದ್ಗುರುನಾಥನ ಕರುಣಾಮೃತದ ವಿಶೇಷ ಪೇಯ ಕುಡಿದು ಜನ ಅತ್ಯಾನಂದದಿಂದ ತೇಗಿದರು. ಎಲ್ಲರಿಗೂ ಆನಂದವಾಗುವಂತೆ ವರ್ತಿಸುವುದೇ ಈಶ್ವರ ಪೂಜೆ. ತನ್ನ ಸಹಸ್ರಾರು ಮುಖಗಳಿಂದ ಉಂಡ ಈಶ್ವರನನ್ನು ಕಂಡು ಸಿದ್ಧ ನಲಿದು ತಾನೂ ಊಟ ಮಾಡಿದನು.

ಹೀಗೆ ಭಕ್ತರ ಪಾಪ-ತಾಪಗಳನ್ನು ಅವರಿಗರಿವಾಗದಂತೆ ನಿವಾರಿಸಿ ಹೊರಡುವ ವೇಳೆಯಾಗಲು ಪುನಃ ಪಲ್ಲಕ್ಕಿಯಲ್ಲಿ ಕುಳಿತು ಹುಬ್ಬಳ್ಳಿಯ ಸಿದ್ಧಾಶ್ರಮಕ್ಕೆ ಬಂದಿಳಿದನು. ಆಗ ಬಂದ ಭಕ್ತರು ಜಯಜಯಕಾರಮಾಡಿ ಸಿದ್ಧನ ಅಪ್ಪಣೆ ಪಡೆದು ತಮ್ಮ ಊರಿಗೆ ಮರಳಿದರು.

————

೨೧

ಮಂತ್ರೇ ತೀರ್ಥೇ ದ್ವಿಜೇ ದೈವೇ ಪ್ರತಿಮಾಯಾಂ ಚ ಶ್ರೀಗುರೌ ।
ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ ॥

--ಸುಭಾಷಿತ.

ಮಂತ್ರ-ತೀರ್ಥ-ಬ್ರಾಹ್ಮಣ-ದೇವರು-ಮೂರ್ತಿ ಹಾಗೂ ಗುರುವಿನಲ್ಲಿ ಯಾರ ಭಾವನೆ ಹೇಗೋ ಅದರಂತೆ ಅವರಿಗೆ ಫಲ.

ತನ್ನ ಶ್ರದ್ಧೆಯಿಂದ ಮನುಷ್ಯನಾಗುತ್ತಾನೆಂದು ಹೇಳುವರು. ಶ್ರದ್ಧೆ ಎಂದರೆ ಒಂದು ರೀತಿ ನಂಬಿಕೆ. ಅದು ಎಡೆಬಿಡದ ಅಭ್ಯಾಸದಿಂದಾಗಲೀ, ಅಥವಾ ಪೂರ್ವಪುಣ್ಯದಿಂದಾಗಲಿ ಬಲಗೊಂಡು ಮನುಷ್ಯ ಬಾಳಿಗೆ ಸಹಾಯಕವೆನಿಸುವುದು.

ಹೆಂಡತಿ ಮಕ್ಕಳಿಂದೊಡಗೂಡಿ ರಮಾನಾಥರಾಯರು ಹುಬ್ಬಳ್ಳಿಯಲ್ಲಿ ವಾಸವಾಗಿದ್ದನು. ಮಗನು ದೊಡ್ಡವನಾದುದರಿಂದ ಅವನ ಮುಂಜಿವೆ ಮಾಡಬೇಕೆಂದು ದಂಪತಿಗಳು ಯೋಚಿಸಿದರು. ಒಂದೊಂದಾಗಿ ಸಾಮಗ್ರಿ ಕೂಡಿಸತೊಡಗಿದರು. ಬಂಧುಬಳಗಕ್ಕೆ ಆಮಂತ್ರಣ ಪತ್ರಿಕೆಗಳು ಹೋದವು. ಆಗ ರಮಾನಾಥರಾಯನ ಹೆಂಡತಿ ಕೃಷ್ಣಾ ಬಾಯಿ ಪತಿಗೆ ಅಂದಳು.

'ನನ್ನದೊಂದು ಇಚ್ಛೆಯುಂಟು. ಅದನ್ನು ಪೂರ್ಣ ಮಾಡುವಿರಾ ?'

'ಅದೇನು ? ಹೇಳಿಯಾದರೂ ಹೇಳು. ನೋಡೋಣ ಸಾಧ್ಯವಾಗುವಂತಿದ್ದರೆ ಅವಶ್ಯ ನಿನ್ನ ಇಚ್ಛೆ ನೆರವೇರಲಿ. ಆದರೆ ನಮ್ಮ ಪರಿಸ್ಥಿತಿ ನಿನಗೆ ಅರಿಯದೇನೂ ಅಲ್ಲ. ನನಗಾಗುವ ಸುಖ-ದುಃಖಗಳಲ್ಲಿ ನೀನೂ ಅರ್ಧಪಾಲು ಬಂದೇ ಬರುತ್ತದೆ. ವಿಚಾರಮಾಡಿ ಹೇಳು ಆಯಿತು.

'ನನ್ನ ಇಚ್ಛೆ ಎಂದಕೂಡಲೇ ಯಾವುದೋ ಆಭರಣವನ್ನೊ, ಅಥವಾ ಬೆಲೆಯುಳ್ಳ ಸೀರೆಯನ್ನೋ ಬೇಡುತ್ತಿರುವಳೆಂದು ನೀವು ತರ್ಕಿಸಿದಂತೆ ಕಾಣುತ್ತದೆ. ಆದರೆ ನಾನು ಅದಾವುದನ್ನೂ ಇಚ್ಛಿಸಿಲ್ಲ.'

'ಹಾಗಾದರೆ ? ಮತ್ತೇನು ?'

'ಮುಂಜಿವೆ ಕಾಲದಲ್ಲಿ ಶ್ರೀ ಸಿದ್ಧಾರೂಢನಾಥನನ್ನು ಕರೆಸಿಕೊಂಡು ಅವನನ್ನು ಪೂಜಿಸಿ ವಟುವಿಗೆ ಅವನಿಂದ ಆಶೀರ್ವಾದ ಪಡೆಯಬೇಕೆಂದು ಇಚ್ಛೆ. ಮತ್ತೇನೂ ಅಲ್ಲ.'

'ಒಳ್ಳೇದು, ನಿನಗೆ ಈ ಇಚ್ಛೆ ಹುಟ್ಟಲು ಕಾರಣವೇನು?'

'ಈ ಹುಡುಗನಿಗಿಂತ ಮೊದಲು ನನ್ನ ಮಕ್ಕಳು ಬದುಕಲಿಲ್ಲವೆಂಬುದನ್ನು ನೀವು ಬಲ್ಲಿರಿ. ನೀವು ಪುರುಷರು ನಿಮಗಷ್ಟು ಗೊತ್ತಾಗಲಿಲ್ಲ. ಮಕ್ಕಳನ್ನು ಕಳೆದುಕೊಂಡೆನೆಂದು ನಾನು ಪಟ್ಟ ಕಷ್ಟ ಸ್ವಲ್ಪವಲ್ಲ. ನೀವು ಕಣ್ಮರೆಯಾದ ಕೂಡಲೇ ಕಣ್ಣೀರು ಹಾಕುತ್ತ ಹುಚ್ಚಳಾಗುತ್ತಿದ್ದೆನು. ಆಗ ನೆರೆಹೊರೆಯವರು ನೀವು ಸಿದ್ಧಾರೂಢ ಸ್ವಾಮಿಗೆ ಹೋಗಿ ಬೇಡಿಕೊಳ್ಳಿರಿ. ಅವರ ಅನುಗ್ರಹದಿಂದ ಆಯುಷ್ಯವಂತನಾದ ಮಗ ಹುಟ್ಟುವನು. ಎಂದು ಹೇಳಿದರು. ಅದು ನನ್ನ ಮನಸ್ಸಿನಲ್ಲಿ ಇದ್ದೇ ಇತ್ತು. ಈ ಹುಡುಗ ಹೊಟ್ಟೆಯಲ್ಲಿ ಮೂಡಿದ ಕೂಡಲೇ ನಾನು ಮಠಕ್ಕೆ ಹೋಗಿ 'ಸದ್ಗುರುನಾಥನೇ, ಆಯುಷ್ಯವಂತನಾದ ಮಗನನ್ನು ದಯಪಾಲಿಸೆಂದು ಬೇಡಿಕೊಂಡೆನು. ಅದರ ಫಲವಾಗಿ ನಿಮ್ಮ ಮಗ ಚಿರಂಜೀವಿ ಎನಿಸಿದ್ದಾನೆ. ಈಗ ನಾವು ಸದ್ಗುರುವಿಗೆ ಸಲ್ಲಿಸುವ ಹರಿಕೆ ಇನ್ನೇನೂ ಅಲ್ಲ. ಮಗನ ಮುಂಜಿವೆಯ ವೇಳೆಗೆ ಅವನನ್ನು ಕರೆದು ಪೂಜೆ ಮಾಡಿ ಆಶೀರ್ವಾದ ಪಡೆದರಾಯಿತು. ಹಾಗೆ ನಾನು ಬೇಡಿಕೊಂಡಿದ್ದೇನೆ. ದಯಮಾಡಿ ನೀವು ನನ್ನ ಇಚ್ಛೆಯನ್ನು ಪೂರ್ಣಗೊಳಿಸಬೇಕು. ನಿಮಗೆ ಶಕ್ತಿ ಇದ್ದರೆ ಸದ್ಗುರುನಾಥನಿಗೆ ಕಾಣಿಕೆ ಮುಟ್ಟಿಸಿರಿ. ಇಲ್ಲವೆಂದರೆ ಭಕ್ತಿಯಿಂದ ವಂದಿಸಿದರೂ ಸಾಕು. ಅವನು ತೃಪ್ತನಾಗುವನು. ನೀವೂ ತಿಳಿದವರು ಹೆಚ್ಚು ಹೇಳುವದೇನು? 'ನೀನು ಮೂರ್ಖಳು. ಬೇಡಿಕೊಳ್ಳಲಿಕ್ಕೆ ಮನೆಯ ದೇವರೇನು ಕಡಿಮೆಯಾಗಿದ್ದವೇ? ನಾವು ನೋಡಿದರೆ ಬ್ರಾಹ್ಮಣರು. ಆ ಶೂದ್ರ ಸ್ವಾಮಿಯನ್ನು ಮನೆಗೆ ತಂದು ಪೂಜೆ ಮಾಡುತ್ತೇನೆಂದರೆ ಬಹಿಷ್ಕಾರ ಹಾಕದೇ ಬಿಡಬಹುದೇ? ಸಾಕು ನಿನ್ನ ಹುಚ್ಚುತನ. ಒಮ್ಮೆ ಬಿಟ್ಟು ಇನ್ನೊಮ್ಮೆ ಇಲ್ಲಿಯ ದೇವರನ್ನೇ ಪೂಜೆ ಮಾಡೋಣ.'

ಎಂದು ಸಿಟ್ಟಿನಿಂದ ಪತಿಯು ಮಾತಾಡಲು ಆ ಸಾಧ್ವಿ 'ಈ ಪ್ರಸಂಗದಲ್ಲಿ ಆಗ್ರಹಕ್ಕೆ ಬೀಳಬೇಡಿರಿ. ದೊಡ್ಡವರ ಜಾತಿ-ಕುಲ-ಗೋತ್ರ ನೋಡಬಾರದು.' ಎನ್ನುತ್ತ ಬಹುಪರಿಯಾಗಿ ಹೇಳಿದರೂ ರಮಾನಾಥ ಒಪ್ಪದಾದನು.

ಆದರಿಂದ ಕೃಷ್ಣಾಬಾಯಿ ಬಹು ದುಃಖಿತಳಾಗಿ ಕಣ್ಣೀರಿಟ್ಟಳು. ಯಾರಿಗೂ ಗೊತ್ತಾಗದಂತೆ ಸದ್ಗುರುವಿಗೆ ಪ್ರಾರ್ಥಿಸಿದಳು. 'ಸದ್ಗುರುವೇ, ನಾನಂತೂ ಪರಾಧೀನೆಯಾದ ಹೆಂಗಸು. ಪತಿ ಒಪ್ಪುತ್ತಾರೆ. ನಿನ್ನನ್ನು ಮನೆಗೆ ಕರೆದು ಪೂಜಿಸಬೇಕೆಂದು ಮಾಡಿದ್ದೆನು. ಸಾಧ್ಯವಾಗದಂತಾಯಿತು. ನಮ್ಮೆಲ್ಲರನ್ನು ಕ್ಷಮಿಸು.'

ಹೀಗೆ ಪ್ರಾರ್ಥಿಸುವಾಗಲೇ ಕೃಷ್ಣಾಬಾಯಿಗೆ ಅದೇಕೋ ಔದಾಸೀನ್ಯ ವೆನಿಸಿ ತುಸು ಕಣ್ಣು ಮುಚ್ಚುವಂತಾಯಿತು. ಆಗ ಭಕ್ತಬಂಧುವೆನಿಸಿದ ಸದ್ಗುರು ಸಮ್ಮುಖದಲ್ಲಿ ಅಲ್ಲಿಯೇ ಅವಳಿಗೆ ಅಭಯ ಕೊಟ್ಟ ಹಾಗೆನಿಸಿತು. ಆನಂದದಿಂದ ಎಚ್ಚರಗೊಂಡು ಮನೆಗೆಲಸಗಳನ್ನು ಮಾಡತೊಡಗಿದಳು. ಮುಂಜಿವೆಯ ಸಲುವಾಗಿ ಬಂಧು-ಬಳಗವೆಲ್ಲ ಕೂಡಿತು.

ಅಂದು ದೇವರ ಕಾರ್ಯ. ರಮಾನಾಥರಾಯರು ದೇವರ ಪೂಜೆಗೆಂದು ಬರಲು ಕೃಷ್ಣಮೂರ್ತಿಯನ್ನು ಕುಳ್ಳಿರಿಸಿದ ಸ್ಥಳದಲ್ಲಿ ಸಿದ್ಧಾರೂಢರ ಮೂರ್ತಿ ಕಾಣಿಸಿತು. ಇದೇನೋ ಭ್ರಮೆಯಾಗಿರಬೇಕೆಂದು ಕಣ್ಣು ತಿಕ್ಕಿಕೊಂಡು ನೋಡಲು ಅದು ಸಿದ್ಧಾರೂಢರ ಮೂರ್ತಿಯೇ ಎಂದು ನಿಶ್ಚಯವಾದ ಕೂಡಲೇ ಹಾಗಾದರೆ ಇಲ್ಲಿಯ ಕೃಷ್ಣನ ಪ್ರತಿಮೆಯನ್ನು ತೆಗೆದು ಹೆಂಡತಿಯು ಹೀಗೆ ಮಾಡಿರಬಹುದೇ? ಎಂಬ ಸಂದೇಹವು ತಲೆದೋರಿತು. ಯಾಕಂದರೆ ಮನೆಗೆ ಕರೆತಂದು ಪ್ರತ್ಯಕ್ಷ ಸಿದ್ಧಾರೂಢನನ್ನು ಪೂಜಿಸಲು ನಾನು ಒಪ್ಪಲಿಲ್ಲ. ಈ ಪ್ರತಿಮೆಯ ನೆವದಿಂದಾದರೂ ಅವರ ಪೂಜೆ ಜರುಗಲಿ. ಎಂದು ಅವಳ ಇಚ್ಛೆಯಾಗಿರಬೇಕು. ಎಂದುಕೊಂಡು ಕರೆದು ಮೂರ್ಖಳೇ, ಇಲ್ಲಿಯ ಕೃಷ್ಣ ಮೂರ್ತಿಯನ್ನು ತೆಗೆದು ಸಿದ್ಧಾರೂಢರ ಮೂರ್ತಿಯನ್ನೇಕೆ ತಂದಿಟ್ಟೆ? ನಿನಗೆ ಇದೆಲ್ಲಿಯ ಗೀಳು ಹಿಡಿಯಿತು? ಕೋಪದಿಂದ ನುಡಿದನು. ಆ ಸಾಧ್ವಿ ಯಾವುದನ್ನೂ ಅರಿಯದವಳು. 'ನಾನು ಒಂದನ್ನೂ ಅರಿಯೆ' ಎಂದು ಹೇಳಲು ರಮಾನಾಥ ಆಶ್ಚರ್ಯಹೊಂದಿ ಆಗಲೆಂದು ಪೂಜೆಗೆ ಕುಳಿತನು. ಅವನಲ್ಲಿ ರುವ ದೇವರ ಮೂರ್ತಿಗಳೆಲ್ಲ ಸಿದ್ಧಾರೂಢರವಾಗಿದ್ದವು. ನಿತ್ಯ ಪೂಜೆ ಮಾಡುವ ಗಣಪತಿ ಶಾಲಿಗ್ರಾಮ ಮೊದಲಾದ ಯಾವ ದೇವರೂ ಕಾಣಿಸುತ್ತಿ ರಲಿಲ್ಲ. ಆಗ ಅವನ ಕಣ್ಣಿಗೆ ಅಂಜನ ಹಾಕಿದಂತಾಗಿ 'ಛೇ. ಇದು ಸ್ತ್ರೀಯ ಕೆಲಸವಲ್ಲ. ನನ್ನ ಕಣ್ಣು ತೆರೆಯಿಸಬೇಕೆಂದು ದೇವರೇ ಇಂಥ ಲೀಲೆ ತೋರಿಸಿ

ದ್ದಾನೆ.' ಎಂದು ಭಕ್ತಿ ನಮ್ರನಾಗಿ ಹೆಂಡತಿಯನ್ನು ಕರೆದು 'ನೀನು ಭಕ್ತಿವಂತಳು. ನಿನ್ನ ಭಾವಕ್ಕೆ ಸಿದ್ಧಾರೂಢ ನಮ್ಮ ಮನೆಗೆ ಬಂದು ಪೂಜೆಗೆ ಸಿದ್ಧನಾಗಿ ಕುಳಿತಿದ್ದಾನೆ. ಒಂದಲ್ಲದಂತೆ ನಾಲ್ಕೆಂಟು ಮೂರ್ತಿ. ಈ ಪ್ರಸಂಗದಲ್ಲಿ ನಿನ್ನ ಮಾತು ಗೆದ್ದಿತು. ಈಗಲೇ ಹೋಗಿ ನಾನು ಸದ್ಗುರುನಾಥನನ್ನು ಕರೆದುಕೊಂಡು ಬಂದು ಪೂಜೆ ಮಾಡುತ್ತೇನೆ. ಯಾವುದೇ ಪ್ರಸಂಗ ಬಂದರೂ ಹೆದರುವುದಿಲ್ಲ' ಎಂದು ಹೇಳಿ ಬಂಧುಬಳಗವನ್ನೆಲ್ಲ ಕರೆದು ನಡೆದ ಸಂಗತಿಯನ್ನು ಸಾದ್ಯಂತವಾಗಿ ತಿಳಿಸಿದನು. ಸದ್ಗುರು ಮೂರ್ತಿಗಳನ್ನು ತೋರಿಸಿದನು.

ಗುರುಮಹಿಮೆ ಕಂಡು ಎಲ್ಲರೂ ಚಕಿತರಾದರು. ಸದ್ಗುರು ಸರ್ವದೇವಮಯನಾಗಿದ್ದನು. ಗುರುವೇ ಬ್ರಹ್ಮ-ವಿಷ್ಣು-ಮಹೇಶ್ವರ ಎಂದು ಹೇಳುವರಲ್ಲವೇ? ಅದರ ಪ್ರತ್ಯಕ್ಷಾನುಭವ ಇಲ್ಲಿ ಬಂದಂತಾಗಲು ಎಲ್ಲರೂ ಕೂಡಿ ಗುರುವಿನ ಬಳಿಗೆ ಬಂದು ಮನೆಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿ ಕರೆತಂದರು. ಅಷ್ಟರಲ್ಲಿ ಕೃಷ್ಣಾಬಾಯಿ ಪೂಜಾ ಸಾಹಿತ್ಯಗಳನ್ನೆಲ್ಲ ಸಿದ್ಧಗೊಳಿಸಿಕೊಂಡು ಗುರು ಬರುವುದನ್ನೇ ನಿರೀಕ್ಷಿಸುತ್ತಿದ್ದಳು. ಗುರು ಬಂದನು. ಸುಯೋಗ್ಯ ಆಸನದಲ್ಲಿ ಕುಳ್ಳಿರಿಸಿದರು. ಕೃಷ್ಣಾಬಾಯಿ ಅವನ ಪಾದಗಳಲ್ಲಿ ಹಣೆ ಇಟ್ಟು ಆನಂದಬಾಷ್ಪಗಳಿಂದ ಕಾಲು ತೊಳೆದಳು. 'ಗುರುದೇವಾ, ಭಕ್ತಳ ಇಚ್ಛೆಯನ್ನು ಕಡೆಗೆ ಈ ರೀತಿಯಾಗಿ ಪೂರ್ಣಗೊಳಿಸಿದೆಯ?' ಎಂದು ನುಡಿದು ಭಕ್ತಿ ಪರವಶಳಾಗಿ ಕಣ್ಣುಮುಚ್ಚಿ ಕೈಜೋಡಿಸಲು ಸದ್ಗುರು ಅವಳನ್ನು ಆಶೀರ್ವದಿಸಿದನು.

ನಂತರ ಮಡಿಯುಟ್ಟು ಬಂದ ರಮಾನಾಥನು ಭಕ್ತಿಪೂರ್ವಕವಾಗಿ ಗುರುಪೂಜೆಯನ್ನು ನೆರವೇರಿಸಿ ಹಾಲು-ಹಣ್ಣಿನ ನೈವೇದ್ಯ ಅರ್ಪಿಸಿದನು. ಆನಂದಬಾಷ್ಪಗಳನ್ನುದುರಿಸುತ್ತ ಗಂಡ-ಹೆಂಡತಿ ಆರತಿ ಬೆಳಗಿದರು. ತಾಂಬೂಲ ಸಹಿತ ಸುಂದರ ಶಾಲನ್ನು ಗುರುವಿಗರ್ಪಿಸಿ ಪೂಜೆ ಮುಗಿಸಿದನು. ಅವರನ್ನೆಲ್ಲ ಹರಿಸಿ ಗುರುನಾಥ ಆನಂದಮಯನಾಗಿ ಆಶ್ರಮಕ್ಕೆ ಆಗಮಿಸಿದನು.

೨೨

ಗುರು ಚರಣಾಂಬುಜ ನಿರ್ಭರ ಭಕ್ತಃ । ಸಂಸಾರಾದಚಿರಾದ್ಭವ ಮುಕ್ತಃ ॥
ಸೇಂದ್ರಿಯ ಮಾನಸನಿಯಮಾದೇವಂ । ದೃಕ್ಷ್ಯಸಿ ನಿಜ ಹೃದಯಸ್ಥಂ ದೇವಮ್ ॥

--ದ್ವಾದಶಪಂಜರಿಕಾ

(ಗುರುಚರಣಾರವಿಂದಗಳಲ್ಲಿ ತುಂಬ ಭಕ್ತಿಯುಳ್ಳವನಾಗಿ, ಇಂದ್ರಿಯ ಮನಸ್ಸುಗಳನ್ನು ನಿಗ್ರಹಿಸಿಕೊಂಡು, ಹೃದಯಸ್ಥನಾದ ಪರಮಾತ್ಮನ ದರ್ಶನ ಪಡೆದು ಕೂಡಲೇ ಸಂಸಾರದಿಂದ ಮುಕ್ತನಾಗು.)

ಇಷ್ಟರಲ್ಲಿ ಶ್ರೀ ಸದ್ಗುರು ಸಿದ್ಧಾರೂಢನ ಕೀರ್ತಿಯು ಬಹುತರವಾಗಿ ಎಲ್ಲ ಕಡೆಗೆ ಹಬ್ಬಿತ್ತು. ಸ್ವಾಮಿಯ ಅನುಗ್ರಹ ಪಡೆದು ತಮ್ಮ ಸಾಂಸಾರಿಕ ಕಾಮನೆಗಳನ್ನು ಪೂರ್ಣ ಮಾಡಿಕೊಂಡವರು ಕೆಲವರು. ನಿಷ್ಕಾಮ ಭಾವ ದಿಂದ ಅರಾಧಿಸುವವರು ಕೆಲವರು. ಜ್ಞಾನಪಿಪಾಸುಗಳಾಗಿ ಕಮಲಕ್ಕೆ ಮುತ್ತುವ ಭ್ರಮರಗಳಂತೆ ಕೆಲವರು. ಒಬ್ಬರನ್ನು ಕಂಡು ಒಬ್ಬರು ಎಂದಂತೆ ಮೋಜಿಗಾಗಿ ಬರುವವರಿಗೂ ಕೊರತೆ ಇರಲಿಲ್ಲ. ಒಟ್ಟಿನಲ್ಲಿ ಜನ ಬರುವ ಕಾರಣವೇನೇ ಇರಲಿ. ಅವರಿಗೆಲ್ಲ ಸಚ್ಚಿದಾನಂದ ಮೂರ್ತಿಯ ದರ್ಶನ. ಸತ್ಕಥಾಲಾಪ. ಸಜ್ಜನ ಸಹವಾಸ ತುಸುಮಟ್ಟಿಗಾದರೂ ದೊರೆತು ಹೃದಯ ದಯಾವುದೋ ಮೂಲೆಯಲ್ಲಿ ಭಕ್ತಿಬೀಜವು ಮೊಳಿಕೆ ನಾಟಿದರೆ ಆಶ್ಚರ್ಯ ವೇನು ? ಜಾತಿ-ಮತ-ಪಂಥಗಳಿಗತೀತವಾದ ಶುದ್ಧ ವೇದಾಂತ ಸಾಂಪ್ರದಾ ಯವು ಸದ್ಗುರುವಿನದು. ಅದರ ಸವಿಯನ್ನು ಬಲ್ಲವರೇ ಬಲ್ಲರು

ತಿಳಿದಾಗಲೀ, ತಿಳಿಯದೇ ಆಗಲಿ ಮನುಷ್ಯ ಹುಡುಕುವುದು ಆನಂದವನ್ನು. ಆನಂದವೆಂಬುದು ಮತ್ತೆಲ್ಲಿಯೂ ಸಿಗಲಾರದು. ಅದು ತನ್ನ ಸ್ವರೂಪದಲ್ಲಿ ಮಾತ್ರ ದೊರೆಯುತ್ತದೆ. ಎಂದು ಶಾಸ್ತ್ರಗಳು ಹೇಳುವವು.

ಪ್ರತಿವರ್ಷ ಶಿವರಾತ್ರಿಯ ಜಾತ್ರೆಗೆ ಬಹು ದೂರ ದೂರ ಭಕ್ತರು ಬರು ವರು. ತಮ್ಮ ಇಷ್ಟದಂತೆ ಒಂದೆರಡು ದಿನ ನಿಂತು ಸದ್ಗುರುನಾಥನ ವೈಭವ ಕಂಡು ಕಣ್ಮನಗಳನ್ನು ತಣಿಸಿ, ಶಿವಾನುಘೋಷದಿಂದ ಪವಿತ್ರ ವಾತಾವರಣ

ದಲ್ಲಿ ಉಸಿರಾಡಿಸಿ ಹಣ್ಣು-ಕಾಯಿಗಳನ್ನು ಕೊಟ್ಟು ಕೈಮುಗಿದು ಊರಿಗೆ ಮರಳುವರು. ಹಾಗೆ ತೆರಳಿದ ನಂತರವೂ ಎಷ್ಟೋ ದಿನಗಳವರೆಗೆ ಜಾತ್ರೆಯ ನೆನಪು ಮನದಲ್ಲಿ ಮಾಸದೇ ಉಳಿಯಬೇಕು. ಆಗ ನಾಲ್ಕು ಜನ ಒಂದು ಕಡೆಗೆ ಕೂಡಿದಾಗ ನಮ್ಮೂರಿಗೆ ಸದ್ಗುರುನಾಥನನ್ನು ಕರೆತಂದು ಉತ್ಸವ ಮಾಡಿದರೆ ಒಳ್ಳೇದಾಗುವುದು ಎಂದು ಎಷ್ಟೋ ಊರವರು ಯೋಚಿಸುವರು. ಆದರೆ ಅಂಥ ಪುಣ್ಯ ಯೋಗ ಎಲ್ಲರಿಗೂ ಒದಗಿಬರಬೇಕಷ್ಟೇ?

ಮುರಕೀಭಾವಿ ಎಂಬುದೊಂದು ಊರು. ಅಲ್ಲಿ ಯಾವ ಕಾರಣಕ್ಕಾಗಿಯೋ ನಾಲ್ಕು ಊರ ಹಿರಿಯರು ಕೂಡಿದ್ದರು. ಅವರಲ್ಲಿ ಮಾತಿಗೆ ಮಾತು ಹೊರಟು ಶಿವರಾತ್ರಿಗೆ ಸಿದ್ಧಾರೂಢ ಸ್ವಾಮಿಯ ಉತ್ಸವ ಮಾಡೋಣ. ಒಂದೊಂದೇ ಊರವರು ಮಾಡಬೇಕೆಂದರೆ ಆಗುವ ಮಾತಲ್ಲ. ಉತ್ಸವ ನಿಮ್ಮೂರಲ್ಲಿಯೇ ನಡೆಯಲಿ ಎಂದು ಮಾತಾಯಿತು. ಕೆಲವು ಹಿರಿಯರು ಬಂದು 'ನಾವು ಶಿವರಾತ್ರಿಗೆ ನಮ್ಮೂರಲ್ಲಿ ಉತ್ಸವ ಮಾಡಬೇಕೆಂದು ವಿಚಾರ ಮಾಡಿಕೊಂಡಿದ್ದೇವೆ. ನಮ್ಮಲ್ಲಿ ದಯವಿಟ್ಟು ನೀವು ಬಂದರೆ ಬಹಳ ಸಂತೋಷವಾಗುವುದು.' ಎಂದು ಪ್ರಾರ್ಥನೆಮಾಡಿಕೊಂಡರು. ಆಗ ಸಿದ್ಧನು 'ಹಾಗೆ ಇದ್ದ ಸ್ಥಳವನ್ನು ಬಿಟ್ಟು ಬರುವುದು ಸಾಧ್ಯವಾಗುವುದಿಲ್ಲ. ಇಲ್ಲಿ ನಿತ್ಯ ಅನೇಕರು ದರ್ಶನಕ್ಕೆ ಬರುತ್ತಾರೆ. ನಾನು ಅತ್ತಿತ್ತ ಹೋದರೆ ಅವರಿಗೆ ನಿರಾಶೆ ಎನಿಸುವುದು. ಆದರೂ ನೀವು ಚಿಂತಿಸುವ ಕಾರಣವಿಲ್ಲ. ಎಲ್ಲಿ ಭಗವದ್ಭಜನೆ ನಡೆಯುವುದೋ, ಎಲ್ಲಿ ವೇದಾಂತ ವಿಚಾರ ಸಾಗುವುದೋ ಅಲ್ಲಿ ನಾನು ನಿಶ್ಚಯವಾಗಿಯೂ ಇರುತ್ತೇನೆ.' ಎಂದು ನುಡಿಯಲು ಭಕ್ತ ಜನ ಸಮಾಧಾನ ಹೊಂದಿ ತಮ್ಮೂರಿಗೆ ಬಂದು ಸುಂದರವಾದುದೊಂದು ಮಂಟಪ ಹಾಕಿದರು. ಸದ್ಗುರುನಾಥನ ಚಿತ್ರವನ್ನು ತಂದು ಅಲ್ಲಿ ಪೂಜೆಗಿಟ್ಟರು. ಉತ್ಸವದ ಕಾರ್ಯಕ್ರಮಗಳನ್ನೆಲ್ಲ ತಿಳಿಸಲು ಸದ್ಗುರು ಶಿಷ್ಯನಾದ ರಾಮಸ್ವಾಮಿ ಬಂದಿದ್ದನು. ಒಳ್ಳೇ ವಿಜೃಂಭಣೆಯಿಂದ ಉತ್ಸವದ ಸಿದ್ಧತೆ ಸಾಗಿತ್ತು. ಉತ್ಸಾಹ ಭರದಲ್ಲಿ ಸ್ವಯಂ ಸದ್ಗುರುನಾಥ ಉತ್ಸವಕ್ಕೆ ಬರುತ್ತಾನೆಂದು ಪ್ರಸಿದ್ಧಮಾಡಿ ಊರೂರಿಗೆ ಆಮಂತ್ರಣ ಪತ್ರಗಳನ್ನು ಕಳಿಸಿದ್ದರು. ಜನರೆಲ್ಲರಿಗೂ ಗೊತ್ತು. ಸದ್ಗುರುನಾಥ ಹುಬ್ಬಳ್ಳಿಯ ಉತ್ಸವ ಬಿಟ್ಟು ಎಲ್ಲಿಗೂ ಹೋಗುವುದಿಲ್ಲವೆಂದು ಹಾಗಾದರೆ ಇವರು ಸದ್ಗುರು ಬರುವನೆಂದು ಹೇಗೆ ಪ್ರಸಿದ್ಧ ಮಾಡಿದರು?

ಇಲ್ಲಿ ವಿಶೇಷ ಚಮತ್ಕಾರವಿದ್ದಂತೆ ಕಾಣುತ್ತದೆ. ನೋಡೋಣವೆಂದು ಬಹಳ ಜನರು ನೆರೆದರು. ಎಲ್ಲರಿಗೂ ಊಟ-ಉಪಚಾರಗಳು ಸಾಗಿದವು.

ಒಂದು ದೊಡ್ಡ ಬೈಲಿನಲ್ಲಿ ಮಂಟಪವಿತ್ತು. ಅದರ ಮಧ್ಯದಲ್ಲಿ ಉನ್ನತ ಪೀಠವೊಂದನ್ನು ರಚಿಸಿದ್ದರು. ಚಿತ್ರರೂಪದಿಂದ ಸದ್ಗುರುನಾಥ ಅಲ್ಲಿ ವಿರಾಜಮಾನನಾಗಿದ್ದನು. ಆ ಉತ್ಸವ ಏಳುದಿನಗಳ ವರೆಗೆ ನಡೆಯುವಂಥದು. ಹಗಲು-ರಾತ್ರಿ ನಾಮಘೋಷ ಸಾಗಿತ್ತು. ಕೆಲವರು ಕೀರ್ತನವನ್ನೂ ಹೇಳುತ್ತಿದ್ದರು. ಕೆಲವು ಸಾಧು-ಸತ್ಪುರುಷರೂ ಉತ್ಸವಕ್ಕೆ ಬಂದಿದ್ದರು. ಅವರು ಪ್ರಶಾಂತ ಸಮಯದಲ್ಲಿ ತತ್ವವಿಚಾರವನ್ನು ಮಾಡುತ್ತಿದ್ದರು. ಮಧ್ಯಾಹ್ನ ಮತ್ತು ಸಂಜೆಗೆ ಎಲ್ಲರಿಗೂ ಊಟ ದೊರೆಯಬೇಕು. ಪ್ರತಿದಿನ ಸಾಯಂಕಾಲವಾಗಲು ಮಂಟಪದಲ್ಲಿ ದೀಪೋತ್ಸವ ಪ್ರಾರಂಭವಾಗಿ ಸದ್ಗುರುವಿನ ಚಿತ್ರವನ್ನು ವಸ್ತ್ರಾಲಂಕಾರಗಳಿಂದ ಶೃಂಗರಿಸುವರು. ಅನಂತರ ಆರತಿ ಬೆಳಗುವರು. ಜನರ ಆಗಿನ ಆನಂದವನ್ನು ವರ್ಣಿಸುವುದು ಅಸಾಧ್ಯ. ಭಜನೆ ಮಾಡುವವರು ಕೆಲವರಾದರೆ ಆಕಾಶ ತುಂಬುವಂತೆ ಜಯಘೋಷ ಮಾಡುವವರು ಕೆಲವರು. ಹೀಗೆ ಉತ್ಸವವು ಸಂತಸದಿಂದ ಸಾಗಿರಲು ಕೆಲವರು ಕಟು ವಚನಗಳನ್ನಾಡಲಾರಂಭಿಸಿದರು. 'ನೀವು ಇಲ್ಲಿಯ ಉತ್ಸವಕ್ಕೆ ಸ್ವತಃ ಸಿದ್ಧಾರೂಢಸ್ವಾಮಿಗಳು ಬರುವವರಿದ್ದಾರೆ ಎಂದು ಸುಳ್ಳನ್ನೇಕೆ ಪ್ರಸಾರಮಾಡಿದಿರಿ? ಹೀಗೆ ಮಾಡಿದುದು ನಿಮಗೇನೂ ಭೂಷಣವಲ್ಲ.' ಎಂದು ಹೇಳುವವರಿಗೆ ಮತ್ತೆ ಕೆಲವರು 'ಈಗೇನು ಆದಂತಾಯಿತು! ಉತ್ಸವದ ಕಡೆಯ ದಿನ ಸದ್ಗುರುನಾಥ ನಿಜವಾಗಿ ಬಂದೇ ಬರುತ್ತಾನೆ. ಈಗಲೇ ನೀವು ರೇಗಿದರೆ ಹೇಗೆ?' ಎಂದು ಉತ್ತರ ಕೊಡಲು ಕೋಪಗೊಂಡು ಊರಗೆ ಹೊರಡಬೇಕೆಂದವರು ಕೊನೆಯವರೆಗೆ ನಿಲ್ಲುವಂತಾಯಿತು. ಅಂತೂ ನಿರ್ವಿಘ್ನವಾಗಿ ಆರುದಿನ ಉತ್ಸವ ಸಾಗಿ ಕೊನೆಯ ಏಳನೆಯ ದಿನ ಬಂದಿತು.

ಅಂದು ಸದ್ಗುರುನಾಥ ಉತ್ಸವಕ್ಕೆ ಸ್ವತಃ ಬರುವನೆಂದು ಜನ ಜೇನು-ಹುಳಗಳಂತೆ ಬಂದರು. ಮಧ್ಯಾಹ್ನದಲ್ಲಿ ಪಾಯಸದ ಊಟವುಂಡು ತಣಿದರು. ಸಂಜೆಯಾಗುತ್ತ ಬರಲು ಗುರು ಬರುವನೆಂಬ ನಂಬಿಕೆ ಸಡಿಲಾಗಿ ಜನ ಗುಜುಗುಜು ಮಾತಾಡತೊಡಗಿದರು. ಅದನ್ನೆಲ್ಲ ಕಂಡ ಉತ್ಸವದ ಪ್ರಮುಖ ಕಾರ್ಯಕರ್ತರು ಚಿಂತೆಗೊಳಗಾಗಿ 'ಸದ್ಗುರುನಾಥಾ, ನಿನ್ನ ದರ್ಶನವಾಗುವು

ದೆಂದು ದೂರ ದೂರದ ಜನ ತಮ್ಮ ಕೆಲಸ-ಬೊಗಸೆ ಬಿಟ್ಟು ಬಂದಿದ್ದಾರೆ. ನಿನ್ನ ವಚನದಂತೆ ನೀನು ನಮ್ಮ ಬೆಂಗಾವಲಿಗಿದ್ದೀ, ಇರುವೆ ಎಂಬ ಭಾವನೆಯಿಂದ ನಾವು ಉತ್ಸವ ಸಾಗಿಸಿದ್ದೇವೆ. ನೀನು ಸ್ವತಃ ಬರುವೆ, ಎಂದು ಮೊದಲೇ ಪ್ರಸಿದ್ಧಿ ಮಾಡಿಬಿಟ್ಟರುತ್ತೇವೆ. ನಮ್ಮನ್ನು ನಗೆಪಾಟಲು ಮಾಡಬೇಡ. ನಮ್ಮ ಮರ್ಯಾದೆ ಕಾಯುವ ಭಾರ ನಿನ್ನದು. ಇಂದು ನೀನು ದರ್ಶನ ಕೊಡದೆ ಹೋದರೆ ಜನರಲ್ಲಿ ಭಕ್ತಿ ಕಡಿಮೆಯಾಗಿ ನಿನ್ನ ಅಪ್ರತಿಷ್ಠೆಯಾಗುವುದು. ನೀನು ಅನುಗ್ರಹ ಮಾಡಬೇಕು. ಎಂದು ಮನದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರು. ಪೂಜೆಯ ಕಾಲವೂ ಬಂದಿತು. ಎದೆಗುದಿಯಿಂದಲೇ ಸದ್ಗುರು ಶಿಷ್ಯನಾದ ರಾಮಯ್ಯನು ಭಕ್ತರಿಂದ ಅಡ್ಡ ತೆರೆಯನ್ನು ಹಿಡಿಸಿಕೊಂಡು ಗುರುವಿನ ಪೀಠ ಹಾಗೂ ಚಿತ್ರಗಳನ್ನು ಅಲಂಕರಿಸತೊಡಗಿದನು. ಪೂಜೆ ಮಾಡುವ ವರೆಗೆ ಎಲ್ಲರೂ ಸುಮ್ಮನೆ ನಿಂತಿದ್ದರು. ಕೆಲವರು ಆರತಿ ಸಿದ್ಧಗೊಳಿಸಿ ಪೂಜೆ ಮುಗಿಯುವುದನ್ನೇ ನಿರೀಕ್ಷಿಸುತ್ತಿದ್ದರು. ಪೂಜೆ ಮುಗಿಯುತ್ತ ಬರಲು ರಾಮಯ್ಯನಿಗೇಕೋ ಅಪಾರ ನಂಬಿಗೆ ಮೂಡಿತು. ಒಮ್ಮೆ ಗುರುವಿನ ಜಯಜಯಕಾರವನ್ನು ಮಾಡಿ ಅಡ್ಡ ಹಿಡಿಸಿದ ತೆರೆಯನ್ನು ಸರಿಸುವಂತೆ ಹೇಳಿದನು. ಭಕ್ತರ ಕಣ್ಣುಗಳೆಲ್ಲ ಅತ್ತ ಕಡೆಗೇ ಇದ್ದವು. ಅಲ್ಲಿ ಸದ್ಗುರು ಮೂರ್ತಿ ಸರ್ವಾಲಂಕಾರ ಮಂಡಿತವಾಗಿ ವಿರಾಜಮಾನವಾಗಿದೆ. ಅದನ್ನು ಕಂಡ ಜನರ ಆನಂದಕ್ಕೆ ಪಾರವುಳಿಯಲಿಲ್ಲ. ಭೂಮ್ಯಾಕಾಶವೊಂದಾಗುವಂತೆ ಜಯಘೋಷ ಮಾಡತೊಡಗಿದರು. ಕುಣಿದರು, ಹಾಡಿದರು. ಹುಚ್ಚರಂತೆ ನಿಂತು ನೋಡಿಯೇ ನೋಡಿದರು.

ಎಲ್ಲರಿಗೂ ಆಶ್ಚರ್ಯವೇ ಆಶ್ಚರ್ಯ. ಗುರುವು ಇಲ್ಲಿಗೆ ಬಂದುದು ಹೇಗೆ? ಈ ಪೀಠದಲ್ಲಿ ವಿರಾಜಮಾನವಾದುದು ಯಾವಾಗ?........ಸದ್ಗುರುನಾಥ ದಯಾಮಯ. ಆವನು ನಾನು ಬಳಿಯಲ್ಲೇ ಇರುವೆನೆಂದು ತಿಳಿದು ಉತ್ಸವ ಪ್ರಾರಂಭ ಮಾಡಿರಿ ಎಂದು ಮಾತನ್ನು ಕೊಟ್ಟದ್ದು. ಅದನ್ನಿಂದು ಸತ್ಯಮಾಡಿ ತೋರಿಸಿದ. ಎಂದು ಬಹುಪರಿಯಿಂದ ಕೊಂಡಾಡುತ್ತಿದ್ದರು.

ಆದರೆ ಜ್ಞಾನಮಯ ಗಾತ್ರನಾದ ಸದ್ಗುರು ಸರ್ವವ್ಯಾಪಕನೆಂಬುದನ್ನು ಅವರೇನು ಬಲ್ಲರು? ತಿಳಿದ ಒಬ್ಬಿಬ್ಬರು ಆನಂದಬಾಷ್ಪಗಳನ್ನುದುರಿಸಿದರು.

———

೨೩

ಜಾಗ್ರತ್ ಸ್ವಪ್ನ ಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ ।
ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು ಪ್ರೋತಾ ಜಗತ್-ಸಾಕ್ಷಿಣೀ ॥
ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢ ಪ್ರಜ್ಞಾಪಿ ಯಸ್ಯಾಪಿ ಚೇ।
ಚ್ಚಾಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ-ಮನೀಷಾಮಮ ॥

—ಮನೀಷಾಪಂಚಕ

ಎಚ್ಚರ-ಕನಸು-ಗಾಢನಿದ್ರೆಗಳಲ್ಲಿ ಯಾವ ಜ್ಞಾನವು ಬೆಳಗುತಿರುವುದೋ ಯಾವುದು ಬ್ರಹ್ಮನನ್ನು ಮೊದಲು ಮಾಡಿಕೊಂಡು ಸಣ್ಣ ಇರುವೆಯ ವರೆಗಿನ ದೇಹಗಳಲ್ಲಿ ತುಂಬಿಕೊಂಡು ಜಗತ್ತಿನ ಸಾಕ್ಷಿ ಎನಿಸುವುದೋ, ಅದೇ ನಾನು. ತೋರಿಕೆಯ ವಸ್ತುವಲ್ಲ. ಎಂದು ದೃಢವಾದ ತಿಳುವಳಿಕೆಯನ್ನು ಯಾವನು ಹೊಂದಿರುವನೋ, ಅವನು ಚಾಂಡಾಲನಾಗಲಿ, ಬ್ರಾಹ್ಮಣನಾಗಲಿ ಗುರುವೆಂದು ನಾನು ತಿಳಿಯುತ್ತೇನೆ.

ಒಂದು ಸಾರೆ ದಕ್ಷಿಣ ಕನ್ನಡದ ಮಂಗಳೂರ ಕಡೆಯವರು ಯಾರೋ ಒಬ್ಬರು ಪಂಢರಪುರಕ್ಕೆ ಪಾಂಡುರಂಗನ ದರ್ಶನಕ್ಕೆಂದು ಹೋಗಿ ಆಷಾಢ ಏಕಾದಶಿಯ ಉತ್ಸವ ಮುಗಿಸಿಕೊಂಡು ಮರಳಿದರು. ಬರುವಾಗ ತಮ್ಮ ಪರಿಚಯದ ರಾಮರಾಯರೆಂಬ ಗೃಹಸ್ಥರಲ್ಲಿ ಹುಬ್ಬಳ್ಳಿಗೆ ಬಂದು ಇಳಿದುಕೊಂಡರು. ರಾಮರಾಯರು ಬಹು ಭಾವಿಕರು. ಬಂದ ಅತಿಥಿಗಳಾದ ಬ್ರಾಹ್ಮಣರಿಗೆ ಯೋಗ್ಯ ಸತ್ಕಾರವನ್ನು ಮಾಡಿ ಒಂದು ದಿನ ನಿಂತುಹೋಗಬೇಕೆಂದು ಆಗ್ರಹಪಡಿಸಿದರು. ಯಾಕೆಂದರೆ ಅನಾಯಾಸ ಯಾತ್ರೆಮಾಡಿಕೊಂಡು ಪುಣ್ಯಜೀವಿಗಳು ನಮ್ಮ ಮನೆಗೆ ಬಂದಿದ್ದಾರೆ. ನಾಳೆ ಪಾಂಡುರಂಗನಿಗೆ ನೈವೇದ್ಯವನ್ನು ಮಾಡಿ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಬಿಡಬೇಕು. ಎಂದು ಅವರು ಯೋಚಿಸಿಕೊಂಡರು. ಮತ್ತು ಅದರಂತೆ ಸಿದ್ಧತೆಯನ್ನೂ ನಡೆಸಿದರು. ಈಗ ಅವರ ಮನಸ್ಸಿನಲ್ಲಿ ಒಂದು ವಿಚಾರ ಬಂದಿತು. 'ಮಹಾ

ಸಂತ ಶಿರೋಮಣಿ ಎನಿಸಿದ ಸದ್ಗುರು ಸಿದ್ಧಾರೂಢಸ್ವಾಮಿ ಇಲ್ಲಿಯೇ ನೆಲೆಸಿದ್ದಾನೆ. ನಾಳಿನ ಪ್ರಸಂಗದಲ್ಲಿ ಆ ಸದ್ಗುರುವನ್ನು ಕರೆದು ಪೂಜಿಸುವುದು ಒಳಿತು. ಆದರೂ ಬಂದ ಅತಿಥಿಗಳನ್ನು ಕೇಳಿ ಮುಂದಿನ ಕಾರ್ಯ, ಎಂದುಕೊಂಡು ಬಂದ ಅತಿಥಿಗಳನ್ನು ಕುರಿತು– 'ಈ ಊರಲ್ಲಿ ಸಿದ್ಧಾರೂಢರೆಂಬ ಬ್ರಹ್ಮನಿಷ್ಠ ಗುರುಗಳಿರುವರು. ಅವರನ್ನು ನಾಳಿನ ಸಂತರ್ಪಣೆಗೆ ಕರೆಯಬೇಕೆಂದು ಮನಸ್ಸಿದೆ. ತಮ್ಮ ಅಭಿಪ್ರಾಯವೇನು ? ಎನ್ನಲು ಅತಿಥಿಗಳು— 'ನಿಮ್ಮ ವಿಚಾರವೇನೋ ಯೋಗ್ಯ. ಅವರು ಬ್ರಹ್ಮನಿಷ್ಠರೆಂಬುದನ್ನು ನಾವೂ ಕೇಳಿದ್ದೇವೆ. ಆದರೆ ಅವರೊಡನೆ ಏಕ ಪಂಕ್ತಿಯಲ್ಲಿ ನಾವು ಊಟ ಮಾಡಲಾರೆವು. ಯಾಕಂದರೆ ಅವರು ಬ್ರಾಹ್ಮಣರಲ್ಲ. ಇದು ನೋಡಿ, ಅವರನ್ನು ಕರೆದು ನಾವಿಲ್ಲಿ ಭೇದಭಾವ ಮಾಡಹೋದರೆ ಪ್ರಸಂಗ ವಿರಸವಾದೀತು. ಅಂಥ ಪ್ರಸಂಗವೇ ಬಾರದಂತೆ ಮೊದಲೇ ಎಚ್ಚರವಾಗಿರುವುದು ಒಳಿತೆನಿಸುತ್ತದೆ ಎಂದು ಹೇಳಿದರು. ಅವರ ಮಾತನ್ನು ಕೇಳಿ ರಾಮರಾಯರಿಗೆ ಬಹಳ ವಿಷಾದವಾಯಿತು. ಅಂದಿನ ರಾತ್ರಿಯೆಲ್ಲ ಅವರು ಚಿಂತಿಸುತ್ತಲೇ ಇದ್ದರು. 'ಮನೆಯಲ್ಲಿ ಇಂಥ ದೊಡ್ಡ ಸಂತರ್ಪಣೆ ಸಿದ್ಧಾರೂಢ ಸ್ವಾಮಿ ನನ್ನ ದೇವರು. ಅವರನ್ನು ಬಿಟ್ಟು ನಾನು ಸಾಗಿಸಬೇಕಾಗುವುದಲ್ಲ. ಹೇಗೆ ಮಾಡಬೇಕು ? ಬಂದ ಅತಿಥಿಗಳ ಮನಸ್ಸನ್ನು ನೋಯಿಸುವಂತಿಲ್ಲ. ಸದ್ಗುರುನಾಥನನ್ನೂ ಬಿಡುವಂತಿಲ್ಲ. ಈ ನನ್ನ ಎರಡೂ ಅಪೇಕ್ಷೆ ಪೂರ್ಣವಾಗುವ ಬಗೆ ಹೇಗೆ?.... ಆಗಲಿ, ನಾನಂತೂ ಸದ್ಗುರುನಾಥನನ್ನು ಕರೆದು ಕಾಯಾ-ವಾಚಾ-ಮನಸಾ ಅವನ ಪೂಜೆಮಾಡಿ ಯಥಾಶಕ್ತಿ ಸೇವೆ ಮಾಡಬೇಕೆಂದು ಮಾಡಿದ್ದೆನು. ಈ ನನ್ನ ಅಪೇಕ್ಷೆ ಪೂರ್ಣವಾಗಬಾರದೆಂದು ಸದುರುವಿನ ಇಚ್ಛೆಯಾಗಿರಬಹುದು. ಹಾಗೆಂದು ಇಂಥ ಸಂಧಿಗ್ನ ಪ್ರಸಂಗವನ್ನುಂಟು ಮಾಡಿದ್ದಾನೆ.' ಎಂದು ಅನೇಕ ಬಗೆಯಾಗಿ ಹಂಬಲಿಸಿ ನಿದ್ದೆಹೋದರು. ಆಗ ಒಂದು ಕನಸು ಬಿದ್ದಿತು. ಅಲ್ಲಿ ಪ್ರಸನ್ನವದನನಾದ ಸದ್ಗುರು ಬಂದು ಹೇಳಿದನು. 'ಏಳು, ಈ ಪ್ರಶಾಂತ ಸಮಯದಲ್ಲಿ ನನ್ನ ಪೂಜೆಮಾಡು, ಎನ್ನಲು ಕನಸಿನಲ್ಲಿಯೇ ರಾಮರಾಯರು ಉಚಿತಾಸನವಿತ್ತು ಷೋಡಶೋಪಚಾರ ಪೂಜೆ ಮುಗಿಸಿದರು. ಸಾಷ್ಟಾಂಗ ನಮಿಸಿದರು. ಪೂಜೆಯು ಮುಗಿದ ಮೇಲೆ ಸದ್ಗುರುನಾಥನು ಪ್ರಸಾದವೆಂದು ಒಂದು ಪೂರ್ಣಫಲವನ್ನು ಕೊಟ್ಟು

ಅದೃಶ್ಯನಾದನು. ಎಚ್ಚರವಾಯಿತು. ಬಳಿಯಲ್ಲಿ ಪ್ರಸಾದವೆಂದು ಪಡೆದ ಟೆಂಗಿನಕಾಯಿ ಬಹಳ ಸಂತೋಷವಾಯಿತು. ಸದ್ಗುರುನಾಥ ಇನ್ನು ನನ್ನ ಇಚ್ಛೆಯನ್ನು ಪೂರ್ಣಮಾಡುವನೆಂದು ನಂಬಿಗೆಯಾಯಿತು.

ಬೆಳಗಾದ ಕೂಡಲೇ ಎದ್ದು ತನಗೆ ಬೇಕೆನಿಸಿದವರಿಗೆಲ್ಲ ಔತಣಹೇಳಿದರು. ಆ ವೇಳೆಯಲ್ಲಿ ಕೂಡ ಸದ್ಗುರುನಾಥನ ಚಿಂತನೆ ಮನದಲ್ಲಿ ನಡೆದೇ ಇತ್ತು. ಆದರೆ ಸಾಂಪ್ರದಾಯಿಕ ಬಂಧನದಲ್ಲಿ ಸಿಲುಕಿದ ಅವರಿಂದ ಗುರುವಿನ ಬಳಿಗೆ ಹೋಗಿ ಆಮಂತ್ರಿಸುವುದಾಗಲಿಲ್ಲ. ವಿಷಾದದಿಂದ ಮನೆಗೆ ಮರಳಿದರು. ಮೊದಲೇ ಸಿದ್ಧತೆ ಮಾಡಿದಂತೆ ಅಡಿಗೆ ನಡೆದಿತ್ತು. ಮಧ್ಯಾಹ್ನ ಹೊತ್ತಿಗೆ ಅಡಿಗೆ ಸಿದ್ಧವಾಗಲು ಆಮಂತ್ರಿತರೆಲ್ಲರು ಬಂದರು. ಎಲೆ ಹಾಕಿದರು. ಸುಂದರವಾಗಿ ರಂಗವಲ್ಲಿ ಹಾಕಿ ಸುವಾಸಿಕ ಊದುಬತ್ತಿ ಹಚ್ಚಿದರು. ಬಡಿಸುವುದಾಯಿತು. ಪಂಢರಪೂರದ ಯಾತ್ರಿಕರಿಗೆಂದು ಒಂದೇ ಕಡೆಗೆ ಎರಡು ಎಲೆ ತುಸು ಅಂತರದಲ್ಲಿ ಹಾಕಿದ್ದರು. ಅವರ ಮಧ್ಯದಲ್ಲಿ ಒಬ್ಬರು ಸಹಜವಾಗಿ ಕೂಡುವಷ್ಟು ಸ್ಥಳವಿತ್ತು. ಹೀಗೆ ಎಲ್ಲ ಸಿದ್ಧತೆಯಾದ ಕೂಡಲೇ ರಾಮರಾಯು ತೀರ್ಥ-ಗಂಧವನ್ನರ್ಪಿಸಿ ಕೃಷ್ಣಾರ್ಪಣವೆಂದರು. 'ಹರಹರ ಮಹಾದೇವ' ಎಂದು ನಾಮಘೋಷವಾಗಿ ಜನರೆಲ್ಲ ಊಟಕ್ಕೆ ಕುಳಿತರು.

ರುಚಿಕರವಾದ ಅಡಿಗೆ, ವ್ಯವಸ್ಥಿತವಾದ ಬಡಿಸುವಿಕೆ, ಅಲ್ಲದೇ ರಾಮರಾಯರ ವಿನಯಭಕ್ತಿಗಳಿಂದ ಆನಂದಿತರಾದ ಜನ ಎಲೆಯನ್ನು ನೋಡುತ್ತ ಮೌನವಾಗಿ ಊಟ ಮಾಡುತ್ತಿದ್ದರು. 'ಅಹಾ, ಕನಸಿನಲ್ಲಿ ವಚನವಿತ್ತಂತೆ ಸದ್ಗುರುನಾಥ ಬರಲಿಲ್ಲವಲ್ಲ. ನನ್ನಿಂದ ಏನಾದರೂ ತಪ್ಪಾಗಿರಬಹುದೇ ?' ಎಂದು ಮನದಲ್ಲಿ ಮರುಗುತ್ತ ಜನರ ಸಾಲುಗಳ ನಡುವೆ ಸಾವಕಾಶವಾಗಲಿ, ಎನ್ನುತ್ತ ತಿರುಗಾಡುವಾಗ ಒಂದು ಬದಿಗೆ ಹಾಕಿದ ಯಾತ್ರಿಕರ ಎಲೆಗಳಿರುವಲ್ಲಿ ಬಂದು ನೋಡುತ್ತಾರೆ. ಅವರ ಮಧ್ಯದಲ್ಲಿ ಸಿದ್ಧ ಕುಳಿತು ಸಾನಂದದಿಂದ ಊಟ ಮಾಡುತ್ತಿದ್ದಾನೆ. ಅದನ್ನು ಕಂಡು ರಾಮರಾಯರಿಗೆ ಸಂತೋಷವೇನೋ ಆಯಿತು. ಅದರೊಡನೆ ಆಶ್ಚರ್ಯ ಕೂಡ. ಯಾಕಂದರೆ ಸಿದ್ಧನು ಇಲ್ಲಿಗೆ ಬಂದುದು ಯಾವಾಗ ? ಇಲ್ಲಿ ಎಲೆ ಯಾವಾಗ ಹಾಕಿದರು ? ಯಾರು ಬಡಿಸಿದರು ? ನೋಡಿದರೆ ಎಲ್ಲರಂತೆ ಇವನದೂ ಅರ್ಧ ಊಟಕ್ಕೆ ಬಂದಹಾ-

ಗಿದೆ. ಇವನು ಬಂದು ಊಟಕ್ಕೆ ಕುಳಿತಿರುವುದನ್ನು ಯಾರೂ ಗಮನಿಸಿದಂತಿಲ್ಲ. ಆಗಲಿ. ನಾನು ಸಂತರ್ಪಣೆ ಮಾಡಿದುದು ಸಾರ್ಥಕವಾಯಿತು. ನನ್ನ ಪ್ರತ್ಯಕ್ಷ ದೇವರು ಬಂದು ಊಟ ಮಾಡಿದರು, ಎಂದು ಸಂತೊಷಪಡುವಷ್ಟರಲ್ಲಿ ಯಾತ್ರಿಕರಲ್ಲಿ ಒಬ್ಬರು ತಮ್ಮ ಸಂಗಡಿಗರೊಡನೆ ಮಾತಾಡಬೇಕೆಂದು ಅತ್ತ ತಿರುಗಲು ನಡುವೆ ಮತ್ತಾರೋ ಬಂದು ಕುಳಿತಿರುವುದನ್ನು ಕಂಡು ಆಶ್ಚರ್ಯವೆನಿಸಿ 'ಇವರು ಯಾರು?' ಎಂದು ಮತ್ತೊಬ್ಬರನ್ನು ವಿಚಾರಿಸಿದರು. ಅವರೇ ಸಾಕ್ಷಾತ್ ಸಿದ್ಧಾರೂಢ ಜಗದ್ಗುರು. ಎಂದು ತಿಳಿದುಬರಲು ಅವರ ಆಶ್ಚರ್ಯಕ್ಕೆ ಪಾರವೇ ಉಳಿಯಲಿಲ್ಲ. ಯಾಕಂದರೆ ಅವರು ಊಟಕ್ಕೆ ಕೂಡುವವರೆಗೆ ನಡುವೆ ಯಾರೂ ಇರಲಿಲ್ಲ. ಅಷ್ಟೇ ಅಲ್ಲದೇ ಅಲ್ಲಿ ಎಲೆ ಕೂಡ ಹಾಕಿರಲಿಲ್ಲ. ಹೀಗಿದ್ದು ತಮ್ಮೊಡನೆಯೇ ಊಟಕ್ಕೆ ಕುಳಿತವರಂತಿರುವ ಸದ್ಗುರುನಾಥ ಸದ್ದಿಲ್ಲದೇ ಬಂದು ಕುಳಿತು ಭುಜಿಸುತ್ತಿರುವನು.

ಆಶ್ಚರ್ಯಕ್ಕೆ ಇನ್ನೆಂಥ ವಿಷಯಬೇಕು ?

ರಾಮರಾಯನನ್ನು ಕರೆದು 'ನೀವು ಆಮಂತ್ರಿಸಿದ್ದಿರಾ ?' ಎನ್ನಲು 'ನೀವೆಲ್ಲ ಬೇಡವೆಂದಮೇಲೆ ನಾನು ಆ ವಿಚಾರವನ್ನೇ ಮಾಡಲಿಲ್ಲ.' ಎಂದು-ಬಿಟ್ಟರು. ಈಗ ಯಾತ್ರಿಕರಿಗೆ ನಿಜವಾಗಿಯೂ ಪಶ್ಚಾತ್ತಾಪವೆನಿಸಿ ನಾವು ಇವರ ಮಹಿಮೆ ತಿಳಿಯದಾದೆವು. ಎಂದು ಮರುಗಿದರು. ಆ ಪಂಕ್ತಿಯಲ್ಲಿ ಕರ್ಮಠರಾದ ಬ್ರಾಹ್ಮಣರೂ ಕೆಲವರಿದ್ದರು. ಆದರೆ ಮಾಡುವುದೇನು ? ಯಾರ ಕಲ್ಪನೆಗೂ ನಿಲುಕದಂತೆ ಸಿದ್ಧ ಸ್ವಯಮೇವ ಬಂದು ಕುಳಿತಿದ್ದಾನೆ. ಮಾತಿಲ್ಲ, ಕಥೆಯಿಲ್ಲ. ಎಂಬಂತೆ ಮೌನವಾಗಿ ಊಟ ಸಾಗಿತು. ಆದರೂ ಜನರಿಗೆ ಕೌತುಕ. ಕೆಲವರು ಮಠದಲ್ಲಿ ಸಿದ್ಧನಿರುವನೇನೋ ನೋಡಿ ಬರೋಣ ಎಂದು ಓಡಿದರು. ಅಲ್ಲಿ ಕೂಡ ಸಚ್ಚಿದಾನಂದಮೂರ್ತಿ ಸಿದ್ಧ ವ್ಯಾಘ್ರಾಸನದಲ್ಲಿ ವಿರಾಜಮಾನ. ಇದು ಹೇಗೆ ಎಂಬುದನ್ನು ನೆಲೆಗಾಣದೆ ಮರಳಿದರು. ಅಷ್ಟರಲ್ಲಿ ಊಟ ಮುಗಿಯುತ್ತ ಬಂದಿತ್ತು. 'ಇದು ಹೇಗಾ-ಯಿತು ?' ಎಂಬ ಯೋಚನೆಯಿಂದಲೇ ಉಂಡ ಜನ ಅತ್ತ ತಿರುಗಲು ಸಿದ್ಧ ಅದೃಶ್ಯನಾಗಿದ್ದಾನೆ. ಉಂಡ ಎಲೆ ಮಾತ್ರ ಹಾಗೇ ಇದೆ. 'ಅಹಾ, ರಾಮರಾಯ ಎಂಥ ಪುಣ್ಯವಂತ, ಅವನ ಯೋಗದಿಂದ ನಮಗೆ ಕೂಡ ಅನಾಯಾಸ ಮಹಾತ್ಮರ ದರ್ಶನವಾಯಿತು. ಇಂಥವರನ್ನು ಭಕ್ತಿಪೂರ್ವಕವಾಗಿ ಭಜಿಸಿ

ನಾವು ನಮ್ಮ ಪಾಪರಾಶಿಯನ್ನು ಕಳೆದುಕೊಳ್ಳದೇ ಇರುವೆವಲ್ಲ, ಎನ್ನುತ್ತ ಜನರೆಲ್ಲ ಎದ್ದು ಕೈತೊಳೆದರು. ರಾಮರಾಯ ತಾಂಬೂಲ-ದಕ್ಷಿಣೆಗಳನ್ನು ಅವರಿಗಿತ್ತು ವಂದಿಸಲು ಜನರೆಂದರು. 'ಅಯ್ಯ, ನೀನು ಶ್ರೇಷ್ಠ ಭಕ್ತ. ಮೊದಲೇನೋ ಇಂದಿನ ಸಮಾರಂಭಕ್ಕೆ ಸಿದ್ಧಾರೂಢ ಗುರುವನ್ನು ಕರೆತಂದು ಪೂಜಿಸಬೇಕೆಂದು ಯೋಚಿಸಿದ್ದೆಯಂತೆ. ಆದರೆ ಸಾಂಪ್ರದಾಯಿಕರ ಆಕ್ಷೇಪಕ್ಕಂಜಿ ಆ ವಿಚಾರ ಬಿಡಬೇಕಾಯಿತಂತೆ, ನೋಡು ನಿನ್ನ ಇಚ್ಛೆ ಪೂರ್ಣಗೊಳಿಸಲು ಸ್ವತಃ ಸದ್ಗುರು ಬಂದು ಸಮಾರಂಭದಲ್ಲಿ ಭಾಗವಹಿಸಿದನು. ಇನ್ನು ಮೇಲಾದರೂ ತಪ್ಪಿಲ್ಲ. ನೀನು ಸದ್ಗುರುನಾಥನನ್ನ ಕರೆತಂದು ಪೂಜಿಸಿ ಧನ್ಯನಾಗು, ಕಂಡು ನಾವೂ ಧನ್ಯರಾಗುತ್ತೇವೆ. ಎನ್ನಲು ರಾಮರಾಯ ತಮ್ಮ ಸ್ವಪ್ನವೃತ್ತಾಂತವನ್ನೆಲ್ಲ ಹೇಳಿದರು. ಜನರು ಧನ್ಯ-ಧನ್ಯ ಎಂದು ತಲೆದೂಗಿದರು.

ನಂತರ ಎಲ್ಲರ ಅಪೇಕ್ಷೆಯಂತೆ ಸದ್ಗುರುವನ್ನು ಕರೆತರಲು ಮಠಕ್ಕೆ ಬಂದು ವಂದಿಸಿ ನಡೆದ ಸಂಗತಿಯನ್ನೆಲ್ಲ ನಿವೇದಿಸಿದರು. ಅದನ್ನು ಕೇಳಿ ಸದ್ಗುರು ಮಂದಸ್ಮಿತನಾಗಿ 'ಭಾವದಂತೆ ದೇವ' ಎಂದು ನುಡಿದು ರಾಮರಾಯನ ಮನೆಗೆ ಬಂದು ಪೂಜೆ ಸ್ವೀಕರಿಸಿ ಭಕ್ತರನ್ನು ಸಂತೋಷಗೊಳಿಸಿದನು.

೨೪

ಬಸವಣ್ಣೆಪ್ಪ-ಗುರವ್ವ ಎಂಬ ಬಡದಂಪತಿಗಳು, ಅವರಿಗೆ ಎರಡು ಗಂಡು ಎರಡು ಹೆಣ್ಣು ಹೀಗೆ ನಾಲ್ಕು ಮಕ್ಕಳು. ಬಸವಣ್ಣೆಪ್ಪ ಎಲ್ಲಿಯೋ ಚಾಕರಿಗಿದ್ದನು. ಯಾವುದೋ ಕಾರಣದಿಂದ ಅದು ಹೋಯಿತು. ಅದರಿಂದ ಆವರ ಪಾಡು ಬಹಳ ಕಷ್ಟದ್ದಾಗಿ ಏನಾದರೂ ಮಾಡಬೇಕು. ಸಿಕ್ಕಷ್ಟು ತಿನ್ನಬೇಕು. ಒಂದು ಹೊತ್ತು ಊಟ, ಒಂದು ಹೊತ್ತು ಉಪವಾಸ, ಒಂದು ದಿನ ಏನೂ ಇಲ್ಲ. ಹೀಗೆ ಕಾಲಕಳೆಯುತ್ತಿರಲು ಆ ವರ್ಷ ದುಷ್ಕಾಳವೊದಗಿತು. ಕಾಳು-ಕಡಿಗಳ ಧಾರಣಿ ಗಗನಕ್ಕೇರಿ ಬಡಬಗ್ಗರು ಬಹು ಕಷ್ಟಕ್ಕೊಳಗಾದರು. ಬಸವಣ್ಣೆಪ್ಪ ಮನೆಯೊಳಗಿನ ಒಂದೆರಡು ಬೆಳ್ಳಿಯ ಆಭರಣಗಳನ್ನು ಮಾರಿ

ಹೇಗೋ ಕಾಲ ತಳ್ಳತೊಡಗಿದನು. ಹೊಟ್ಟೆಯ ಸಲುವಾಗಿ ಅಟ್ಟು ತಿನ್ನು ಪಾತ್ರೆ ಪಡಗಗಳೂ ಮಾರಾಟವಾದವು. ಕೆಲ ದಿನಗಳಲ್ಲಿ ಎಲ್ಲ ಬರಿದಾಯಿತು.

ನಾಳಿಗೇನು ? ಎನ್ನುತ್ತಲೇ ಅಂದು ಎಲ್ಲರೂ ಮಲಗಿದ್ದರು. ಬೆಳಗಾ-ಯಿತು, ಬಸವಣ್ಣೆಪ್ಪ ಊರಲ್ಲಿ ತಿರುಗಿ ಏನಾದರೂ ಕೂಲಿ ಸಿಕ್ಕರೆ ಕಾಳುತರ ಬೇಕೆಂದು ತಿರುಗತೊಡಗಿದನು.ಇಳಿಹೊತ್ತಿನವರೆಗೆ ತಿರುಗಿದರೂ ಕೂಡ ಏನೂ ದೊರೆಯಲಿಲ್ಲ. ಬರಿಗೈಯಿಂದ ಮನೆಗೆ ಬರುತ್ತಿರಲು ಸಣ್ಣ ಮಕ್ಕಳು 'ಅಪ್ಪ ಬಂದ, ಏನೋ ತಂದಿದ್ದಾನೆ' ಎಂದು ಕುಣಿಯುತ್ತ ಬಂದವು. ಆದರೆ ಅವನ ಸಣ್ಣ ಮುಖ-ಬರಿಗೈಯನ್ನು ಕಂಡು ತಿರುಗಿಹೋಗಿ ಮೆಲ್ಲನೆ ಅಳುತ್ತ ಕುಳಿತು ಕೊಂಡವು. 'ನಮಗೆ ಹಸಿವೆ ಏನಾದರೂ ತಿನ್ನಲು ಕೊಡು' ಎಲ್ಲ ಹುಡುಗರು ಗುರವ್ವನನ್ನು ಪೀಡಿಸಹತ್ತಿದವು. ದಂಪತಿಗಳು ಒಬ್ಬರ ಮುಖ ಮತ್ತೊಬ್ಬರು ನೋಡಿದರು. ಗಂಗಾ- ಯಮುನಾ ಸಂಗಮದಂತೆ ಇಬ್ಬರ ಮುಖದಲ್ಲಿಯೂ ಕಣ್ಣೀರಧಾರೆ. ಮನಕ್ಕೇನಾದರೂ ಯೋಜನೆಯನ್ನು ತೋರಿಸುವ ಸರಸ್ವತಿ ಗುಪ್ತಗಾಮಿನಿ.

ಗುರವ್ವ ಮಕ್ಕಳನ್ನು ಎದೆಗವಚಿಕೊಂಡು ಹೇಗೋ ಸುಮ್ಮನೆ ಮಾಡಿ ದಳು. ಈ ದಂಪತಿಗಳು ಗುಣವಂತರು. ಕಲಿತವರಾಗದಿದ್ದರೂ ಕಲಿತು ಮೈಗೂಡಿಸಿಕೊಳ್ಳಬೇಕಾದ ಸದ್ಗುಣ ಸಂಪತ್ತಿ ಅವರಿಗೆ ಸಹಜ ಕರಗತವಾ ಗಿತ್ತು. ನಮ್ಮ ಕರ್ಮಾನುಸಾರ ಬಂದ ಬಂದ ದುಃಖದ ಪೀಡೆ ಮುಂದಿಗೇಕೆ ? ಎಂದು ಅವರ ವಿಚಾರ. ಅದೇ ನಂಬಿಗೆಯಿಂದ ಅವರು ಬಾಳಿದ್ದರು. ಆಗ ಕಡ-ಕಟ್ಟು ಸಿಗುವಂತೆಯೂ ಇರಲಿಲ್ಲ. ಭಿಕ್ಷೆ ಬೇಡುವುದಂತೂ ಆಗದಮಾತು ಉಪವಾಸದಲ್ಲಿ ಎರಡು ದಿನ ಕಳೆದವು. ಆ ಎರಡು ದಿನ ಅನ್ನ-ಅನ್ನವೆಂದು ಒರಲುವ ಸಣ್ಣ ಮಕ್ಕಳನ್ನು ಸಮಾಧಾನ ಪಡಿಸುವುದು ಅವರ ಶಕ್ತಿಗೆ ಮೀರಿ ದುದಾಯಿತು. ದೇವರು ಎರಡು ಮಕ್ಕಳನ್ನು ತನ್ನ ಕಡೆಗೆ ಕರೆದುಕೊಂಡನು. ಆಗ ತಾಯ್ತಂದೆಗಳಿಗಾದ ದುಃಖವನ್ನು ವರ್ಣಿಸುವುದು ಅಸಾಧ್ಯ. ತಾಯಿ ಯಂತೂ ದುಃಖ ಸಮುದ್ರದಲ್ಲಿ ಮುಳುಗಿ ದಿಕ್ಕುಗೆಟ್ಟಳು. ಅವಳ ಬುದ್ಧಿಯೇ ಮಸಣಿಸಿ ಹೋಯಿತು. ಯಾರದೋ ಸಹಾಯದಿಂದ ಸತ್ತ ಮಕ್ಕಳ ಮಣ್ಣು ಗೂಡಿಸಲು ಬಸವಣ್ಣೆಪ್ಪ ತೆರಳಲು ಅತ್ತು ಅತ್ತು ನಿರ್ವಿಣ್ಣಳಾಗಿ ಎರಡು ಮಕ್ಕ ಳೊಡನೆ ಗುರವ್ವ ಮಲಗಿಕೊಂಡಿದ್ದಳು. ಮಕ್ಕಳಿಗೆ ನಿದ್ರೆ ಹತ್ತಿತೆಂದು ತಿಳಿದ

ಕೂಡಲೆ ಗುರವ್ವ ಮೇಲೆದ್ದು ಹೊರಬಿದ್ದಳು. ಅವಳ ಮನವಂತೂ ರೋಸಿ ಹೋಗಿತ್ತು. ಹೇಳುವವರೂ ಇರಲಿಲ್ಲ. ಕೇಳುವವರೂ ಇರಲಿಲ್ಲ. ಇನ್ನು ಇದ್ದೇನು ಫಲ ಸತ್ತುಹೋದರಾಯಿತು. ಎಂದುಕೊಂಡು ಒಂದು ಬಾವಿಯ ಬಳಿಗೆ ಬಂದಳು. ಇತ್ತ ಬಸವಣ್ಣೆಪ್ಪ ಮನೆಗೆ ಬಂದು ನೋಡುವಷ್ಟರಲ್ಲಿ ಗುರವ್ವನಿಲ್ಲ, ಮಕ್ಕಳೆರಡು ಎದ್ದು ಕತ್ತಲೆಯಲ್ಲಿ ಅಳಲಾರಂಭಿಸಿವೆ. ಅವನಿಗೆ ಅರ್ಥವಾಗಿ ಹೋಯಿತು. ಜೀವ ಕಳೆದುಕೊಳ್ಳುವ ಉದ್ದೇಶದಿಂದ ಹೊರಗೆ ಹೋಗಿದ್ದಾಳೆ. ಕೂಡಲೇ ಅವೆರಡು ಮಕ್ಕಳನ್ನು ಬೆನ್ನು ಹಚ್ಚಿಕೊಂಡು ಸಂದೇಹ ಸ್ಥಳಗಳನ್ನು ನೋಡುತ್ತ ಬರುತ್ತಿರಲು ಅಲ್ಲಿರುವ ಒಂದು ಬಾವಿಯ ದಂಡೆಯ ಮೇಲೆ ಗುರವ್ವ ನಿಂತು ಹಾರಿಕೊಳ್ಳುವ ಸಿದ್ಧತೆ ನಡೆಸಿದ್ದಾಳೆ. ಅಡ್ಡ ಸೆರಗು ಕಟ್ಟಿ ಗಂಡುಕಚ್ಚೆ ಹಾಕಿ 'ಶಿವನೇ ಇದ್ದವರಿಗಾದರೂ ಇನ್ನು ಸುಖಕೊಡು. ನಾನು ನಿನ್ನ ಬಳಿಗೆ ಬಂದೆ.' ಎಂದು ನುಡಿಯುವಷ್ಟರಲ್ಲಿ ಯಾರೋ ಒಬ್ಬ ಸಾಧು ಪುರುಷ 'ಛೀ ಇದು ರೀತಿಯಲ್ಲ.' ಎಂದು ತಿಳಿಹೇಳಿ ಕೈಹಿಡಿದು ಕೆಳಕ್ಕಿಳಿಸಿಬಿಟ್ಟನು. ಅನ್ನವಿಲ್ಲದೇ, ಸಮಾಧಾನವಿಲ್ಲದೇ ಬಳಲಿದ ಗುರವ್ವ ಬವಳಿ ಬಂದು ಬಿದ್ದುಬಿಟ್ಟಳು. ಹಾಗೇ ಪ್ರಾಣಕೂಡ ಹೋಗಬಹುದಿತ್ತು. ಆದರೆ ಮಹಾತ್ಮರ ಅಮೃತಕರ ಸೋಂಕಿದ್ದರಿಂದ ಪ್ರಾಣವೇನೂ ಹೋಗಿರಲಿಲ್ಲ. ಕ್ಷಣ ಮಾತ್ರದಲ್ಲಿ ಜಾಗ್ರತಳಾಗಿ 'ಯಾರು ನನ್ನನ್ನು ಬದುಕಿಸಿದರು? ನಮ್ಮ ಮೇಲೆ ಶಿವ ಮುನಿದಿದ್ದಾನೆ. ಅನ್ನ-ಅನ್ನವೆಂದು ಒರಲಿ ಎರಡು ಮಕ್ಕಳು ಸತ್ತವು. ಇನ್ನೆರಡು ಅದೇ ಹಾದಿ ಹಿಡಿಯುತ್ತವೆ. ನಾನಿದನ್ನು ನೋಡಲಾರೆ. ಸರಿಯಿರಿ ಆಚೆ ನಾನು ಸಾಯುತ್ತೇನೆ.' ಎನ್ನುತ್ತ ಮತ್ತೆ ಮೇಲೆದ್ದು ಬಾವಿಯ ಕಡೆಗೆ ನುಗ್ಗಿದಳು. ಆಗ ಸಿದ್ಧನು ಸರ್ರನೆ ಮುಂದಾಗಿ ತನ್ನ ಕರಾಂಗುಲಿಯಿಂದ ಅವಳ ಹಣೆಯನ್ನು ಸ್ಪರ್ಶಿಸಿದನು. ಆ ಕೂಡಲೇ ಗುರವ್ವನಿಗಾದ ದುಃಖ ಮರೆತು ಹೋಯಿತು.

ಅಷ್ಟರಲ್ಲಿ ಲಗುಬಗೆ ಮಾಡಿ ಅಲ್ಲಿಗೆ ಬಂದ ಬಸವಣ್ಣೆಪ್ಪ ಸಾಧುವಿಗೆ 'ಉಪಕಾರ ಮಾಡಿದಿರಿ.' ಎಂದು ವಂದಿಸಿ ಮೆಲ್ಲನೆ ಕೈಹಿಡಿದು ಹೆಂಡತಿಗೆ 'ನಡೆ ಮನೆಗೆ ಹೋಗೋಣ.' ಎಂದು ನುಡಿದನು. ಹೋಗುತ್ತ 'ಮಹಾತ್ಮರೇ ನಮ್ಮ ಮನೆಗೆ ಬಂದು ಹೋಗಬೇಕು' ಎಂದು ಬೇಡಿಕೊಳ್ಳಲು ಮರೆಯಲಿಲ್ಲ. ಎಲ್ಲರೂ ಕೂಡಿ ಮನೆಗೆ ಬಂದರು.

ಒಂದು ಆಸನ ಕೊಟ್ಟು ಆ ಮಹಾತ್ಮನನ್ನು ಕುಳ್ಳಿರಿಸಿ 'ಮಹಾತ್ಮರೇ, ನೀವು ಮಾಡಿದ ಉಪಕಾರವನ್ನು ನಾನು ಜನ್ಮವಿರುವವರೆಗೆ ಮರೆಯಲಾರೆನು. ನನ್ನ ಮನೆತನ ಉಳಿಸಿದಿರಿ. ಆದರೆ ಏನುಮಾಡಲಿ? ನಾನು ಬಹಳ ಪಾಪಿ ನಿಮ್ಮನ್ನು ಪೂಜೆ ಮಾಡಿ ಏನಾದರೂ ಕೊಡಬೇಕೆಂದರೆ ಸಾಧ್ಯವಿಲ್ಲದಂತಾಗಿದೆ.' ಎಂದು ನುಡಿದು ಕಣ್ಣೀರು ಸುರಿಸತೊಡಗಿದನು. ಆಗ ಸದ್ಗುರುನಾಥನು 'ನನಗಂತೂ ಬಹಳ ಹಸಿವೆಯಾಗಿದೆ. ಈಗ ಏನಾದರೂ ತಿನ್ನಲಿಕ್ಕೆ ಬೇಕೇಬೇಕು.' ಎಂದು ನುಡಿಯಲು ಬಸವಣ್ಣೆಪ್ಪ ಇದ್ದ ಸಂಗತಿಯನ್ನು ಬಹು ದುಃಖದಿಂದ ನಿವೇದಿಸಿದನು. ಆಗ ಸದ್ಗುರುನಾಥ 'ಅದೇನೇ ಇರಲಿ, ಈಗ ಪೆಟ್ಟಿಗೆಯಲ್ಲಿ ಎಷ್ಟಾದರೂ ರೊಕ್ಕವಿದ್ದರೆ ತೆಗೆದುಕೊಂಡು ಬಾ. ನೋಡೋಣ.' ಎನ್ನಲು 'ನಿಜವಾಗಿ ಒಂದು ಕಪರ್ದಿಕ ಕೂಡ ಇಲ್ಲ. ಇದ್ದರೆ ನಮ್ಮ ಅವಸ್ಥೆ ಹೀಗೇಕಾಗಬೇಕು? ಆದರೂ ನಿಮ್ಮ ಅಪ್ಪಣೆಯಂತೆ ಹೋಗಿ ನೋಡುತ್ತೇನೆ.' ಎಂದು ನುಡಿದು ಬಸವಣ್ಣೆಪ್ಪ ಒಳಗೆ ಹೋಗಿ ಹುಡುಕಲು ಒಂದೇಒಂದು ಬಿಲ್ಲಿ ಮಾತ್ರ ಸಿಕ್ಕಿತು. ಅದನ್ನು ತಂದು ಗುರುವಿನ ಮುಂದಿಟ್ಟು ನಿಂತುಕೊಳ್ಳಲು ಅವನೆಂದನು– 'ಇದನ್ನು ತೆಗೆದುಕೊಂಡು ಧೋತರದಲ್ಲಿ ಕಟ್ಟಿಕೊಂಡು ಪೇಟೆಗೆ ಹೋಗು. ಇನ್ನೂ ಅಂಗಡಿ ತೆರೆದಿರಬೇಕು. ಅಡಿಗೆಗೆ ಬೇಕಾಗುವ ಎಲ್ಲ ಸಾಮುಗ್ರಿ ತೆಗೆದುಕೊಂಡು ಬೇಗ ಬಂದುಬಿಡು. ಯಾವ ವಿಚಾರಮಾಡದೇ ಹೋಗು.' ಎನ್ನಲು ಬಸವಣ್ಣೆಪ್ಪ 'ಮಹಾತ್ಮರ ಮಾತು ಏನುಂಟೋ ಯಾರುಬಲ್ಲರು? ಎಂದುಕೊಳ್ಳುತ್ತ ಪೇಟೆಗೆ ಬಂದು ಧೋತರ ಗಂಟುಬಿಚ್ಚಿ ನೋಡಿದನು. ಅದರಲ್ಲಿ ಒಂದು ಬಂಗಾರದ ಸಾವರಿನ್ ನಾಣ್ಯ. ಆಶ್ಚರ್ಯಚಕಿತನಾಗಿ ಅಂಗಡಿಕಾರನಿಂದ ಬೇಕಾದ ಸಾಮಾನುಗಳನ್ನೆಲ್ಲ ತೆಗೆದುಕೊಂಡು ಮನೆಗೆ ಬಂದನು. ಇನ್ನೂ ಕೆಲವು ರೂಪಾಯಿಗಳು ಉಳಿದಿದ್ದವು. ಅವುಗಳನ್ನು ಗುರುವಿನ ಮುಂದಿರಿಸಿ ಸುಮ್ಮನೆ ನಿಂತುಕೊಳ್ಳಲು ತಂದ ಪದಾರ್ಥಗಳನ್ನೆಲ್ಲ ಗುರವ್ವನ ಕಡೆಗೆ ಕೊಟ್ಟು 'ಬೇಗನೆ ಅಡಿಗೆ ಮಾಡಿಸು. ನಾನು ಇಲ್ಲಿ ಕೂತಿರುತ್ತೇನೆ' ಎಂದು ಹೇಳಿದನು.

ಕೆಲವೇಳೆಯ ನಂತರ ಗುರವ್ವ ಅಡಿಗೆ ಮಾಡಿ 'ಆಯಿತೆನ್ನಲು ಮೊದಲು ಮಕ್ಕಳಿಗುಣಿಸು, ನಂತರ ನಾವೆಲ್ಲ ಕೂಡೋಣ. ಎಂದು ಸದ್ಗುರು ಅಂದನು. ಅನಂತರ ಎಲ್ಲರ ಊಟವಾಯಿತು. ಊಟವಾದ ಮೇಲೆ ಕ್ಷಣ

ಮಾತ್ರ ತಡೆದು ಸದ್ಗುರು ಹೊರಡಲು ಸಿದ್ಧನಾದ ಕೂಡಲೇ ಆ ದಂಪತಿಗಳು ಕಾಲಿಗೆರಗಿ 'ಸ್ವಾಮೀ, ಹಾಗೇ ಹೋಗಬಾರದು. ನಮಗೆ ಆಶೀರ್ವಾದ ಕೊಟ್ಟು ಹೋಗಬೇಕು.' ಎಂದು ಪ್ರಾರ್ಥಿಸಿದರು. ಚಿಂತಿಸಬೇಡಿರಿ. ನಿಮ್ಮ ಕಲ್ಯಾಣವಾಗುತ್ತದೆ. ಎಂದು ನುಡಿದು ಮಠಕ್ಕೆ ನಡೆದನು. ದಂಪತಿ ಪರಸ್ಪರ ಮಾತಾಡಿಕೊಂಡರು.

ಬಸವಣ್ಣೆಪ್ಪ ನುಡಿದನು. 'ಇವರು ಮಹಾತ್ಮರಾದ ಸಿದ್ಧಾರೂಢಸ್ವಾಮಿಗಳೇ ಇರಬೇಕು.' 'ಇದ್ದೀತು. ಆದರೆ ಎಂದೂ ನಾವು ಅವರ ದರ್ಶನಕ್ಕೆ ಹೋದವರಲ್ಲ, ಹೀಗಿರಲು ಅವರೇ ಬಂದು ನಮ್ಮನ್ನು ಕಾಪಾಡಿದ್ದು ಹೇಗೆ ?'

'ಹೌದು ನಿನ್ನ ಸಂಶಯ ನನಗೂ ಬಂದಿತ್ತು. ಆದರೆ ದೊಡ್ಡವರ ವಿಚಾರ ಏನೋ ಎಂದು ಸುಮ್ಮನಾಗಿಬಿಟ್ಟೆ.'

'ಏನಾದರೂ ಆಗಲಿ ದುಃಖದಲ್ಲಿ ಮುಳುಗಿದ ನಮ್ಮನ್ನು ಉದ್ಧರಿಸಿ ನಮ್ಮನ್ನು ದಡಕ್ಕೆ ಹಚ್ಚಿದರಲ್ಲ ಸಾಕು.'

'ನೀನು ಹುಚ್ಚಿ ಅಂಥ ಮಹಾತ್ಮರನ್ನು ಇಷ್ಟಕ್ಕೆ ನಾವು ಮರೆಯಬಾರದು ಈಗಂತೂ ರಾತ್ರಿ. ಬೆಳಗಾಯಿತೆಂದರೆ ಮಠಕ್ಕೆ ಹೋಗಿ ಕಂಡು ಬರೋಣ. ಭಕ್ತಿಯಿಂದ ವಂದಿಸೋಣ. ಅದೇಕೋ ಅವರಿಂದಲೇ ನಮ್ಮ ಕಲ್ಯಾಣವಾಗುವುದೆಂದು ನನಗೆ ಅನಿಸತೊಡಗಿದೆ.'

ಎಂದು ಮಾತನಾಡುತ್ತ ಮಲಗಿಕೊಂಡರು. ಮರುದಿನ ಮುಂಜಾನೆ ಎದ್ದು ಹಿಂದಿನ ದಿನ ಯೋಚಿಸಿಕೊಂಡಂತೆ ಸ್ನಾನ ಮಾಡಿಕೊಂಡು ಮಠಕ್ಕೆ ಬಂದು ದರ್ಶನ ಪಡೆದರು. ತಮ್ಮ ಮನೆಯಲ್ಲಿ ಕಂಡ ಮಹಾ ಮಹಿಮನ ಮೂರ್ತಿಯೇ ಅದಾಗಿತ್ತು. ಅದರಿಂದ ಆಶ್ಚರ್ಯವೂ ಭಕ್ತಿಯೂ ಏಕಕಾಲದಲ್ಲಿ ಉಕ್ಕಿದವು. 'ನಮ್ಮ ಕಷ್ಟವನ್ನು ತಪ್ಪಿಸಬೇಕು.' ಎಂದು ಕೈಮುಗಿದರು. ಸಿದ್ಧ ಹೇಳಿದನು. 'ಈಗ ನಿಮ್ಮ ಹತ್ತಿರ ಹತ್ತೆಂಟು ರೂಪಾಯಿಗಳಾದರೂ ಇರಬೇಕು. ಅವುಗಳಿಂದ ವ್ಯಾಪಾರ ಮಾಡು. ಅದರಿಂದ ನಿನ್ನ ಬಡತನ ಹಿಂಗುವುದು.'

ಅದರಂತೆಯೇ ಬಸವಣ್ಣೆಪ್ಪ ವ್ಯಾಪಾರದಲ್ಲಿ ತೊಡಗಿದನು. ಮೆಲ್ಲನೆ ಲಾಭವಾಗುತ್ತ ಹೋಯಿತು. ಒಂದೆರಡು ವರ್ಷದಲ್ಲಿ ವ್ಯಾಪಾರ ಬಲಿತು ಧನಿಕನೆನಿಸಿದನು. ಯಾವ ಮಹಾತ್ಮನ ಕೃಪೆಯಿಂದ ಆವನಿಂಥ ಸ್ಥಿತಿ ಪಡೆದಿದ್ದನೋ ಆ ಮಹಾತ್ಮನನ್ನು ಮರೆಯದೇ ಪ್ರತಿದಿನ ಆವನ ದರ್ಶನ ಪಡೆಯುಲು

ತಪ್ಪುತ್ತಿರಲಿಲ್ಲ. ಬಂಧು-ಬಳದವರು ಯಾರಾದರೂ ಮನೆಗೆ ಬಂದಾಗ ಅವನ ಸ್ಥಿತಿಯನ್ನು ಹೊಗಳಲು 'ಇದೆಲ್ಲ ಸದ್ಗುರು ಸಿದ್ಧಾರೂಢನ ಕೃಪೆ' ಎಂದು ಹೇಳುತ್ತಿದ್ದನು.

———

೨೫

ವಿಪದಃ ಸಂತು ನಃ ಶಶ್ವತ್.

—ಮಹಾಭಾರತ

ನಮಗೆ ಯಾವಾಗಲೂ ವಿಪತ್ತುಗಳೇ ಇರಲಿ.

ಪಾಂಡವರ ತಾಯಿ ಕುಂತೀದೇವಿ ಮೇಲಿನಂತೆ ಬೇಡುತ್ತಿದ್ದಳಂತೆ. ಒಂದು ದಿನ ಬಳಿಯಲ್ಲಿಯೇ ಇದ್ದ ಕೃಷ್ಣ 'ಇದೆಂಥ ವಿಚಿತ್ರ ಬೇಡಿಕೆ ಅತ್ತೆ ?' ಎಂದು ಕೇಳಲು 'ಇದರಲ್ಲಿ ವಿಚಿತ್ರವೇನೂ ಇಲ್ಲ. ಲೋಕದಲ್ಲಿ ಧನ-ಮಾನ ಸನ್ಮಾನಗಳು ಮನುಷ್ಯನಿಗೆ ದೊರೆಯುತ್ತ ಹೋಗಲು ಅವನು ದೇವರನ್ನು ಮರೆತು ಬಿಡುತ್ತಾನೆ. ನಿತ್ಯ ನಿರ್ಮಲನೂ ಪರಮ ಕರುಣಾಘನನೂ, ಶಾಶ್ವತ ಸುಖ ದಾತಾರನೂ ಆದ ದೇವರನ್ನು ಮರೆಸುವ ಯಾವ ವಸ್ತುಗಳೂ ನನಗೆ ಬೇಡ. ಎಂದರೆ ವಿಚಿತ್ರವೇನು ? ಇದರಲ್ಲಿ.' ಎಂದು ಹೇಳಲು ಕೃಷ್ಣ ತಲೆ ದೂಗಿದನು.

ಕುಂತೀದೇವಿ ಹೇಳಿದ ಮಾತು ನಿಜವೇ ?

ಲೋಕಾನುಭವ ನೋಡಿದರೆ ನಿಜವೆನ್ನಬೇಕಾಗುತ್ತದೆ. ಶ್ರೀಮಂತಿಕೆ ದೊರೆತರೆ ಗುರು-ದೈವಗಳನ್ನು ಮರೆತವರು ಎಷ್ಟೋ ಜನ. ದೈವವಶದಿಂದ ದೊಡ್ಡ ಪಗಾರದ ನೌಕರಿ ದೊರೆತರೆ ಹಿಂದಿನ ಗೆಳೆಯರನ್ನು ಬಂಧು-ಬಳಗ ವನ್ನು ಬಹಳವೇಕೆ ತಾಯ್ತಂದೆಗಳನ್ನು ತುಚ್ಛವಾಗಿ ಕಾಣುವವರು ಬಹಳ ಜನ. ಧನದಲ್ಲಿ ಮದಕಾರಕ ಶಕ್ತಿ ಇರಬಹುದೇ ? ಇರುವುದೆಂದು ನೀತಿ ಶಾಸ್ತ್ರ ತಿಳಿದವರು ಹೇಳುತ್ತಾರೆ. ಮದಗುಣಿಕೆ ಎಂಬ ವನಸ್ಪತಿಗೆ ಸಂಸ್ಕೃತ ಭಾಷೆಯಲ್ಲಿ ಕನಕನೆಂದು ಹೆಸರುಂಟು. ಕನಕವೆಂದರೆ ಭಂಗಾರ. ಭಂಗಾರ-

ಬೆಳ್ಳಿ ಮುಂತಾದವು ಸಂಗ್ರಹವಾಗಿ ಶ್ರೀಮಂತರಾದವರು ಬಹುತರವಾಗಿ ಮದೋನ್ಮತ್ತರಾಗಿರುತ್ತಾರೆ. ಯಾಕಂದರೆ ಲಕ್ಷ್ಮೀಯ ಸಹವಾಸವೇ ಹಾಗೆ. ಲಕ್ಷ್ಮೀಪತಿಯಾದ ಶ್ರೀಹರಿ ಎಂದೋ ಆದಿಶೇಷನ ಮೇಲೆ ಹಾಯಾಗಿ ಮಲಗಿ ಬಿಟ್ಟಿದ್ದಾನೆ. ಮೈಬಿಚ್ಚಿ ಸಡಿಲು ಮಾಡಿಕೊಂಡೇನೆಂದರೆ ಶೇಷನಿಗೆ ಅವಕಾಶ ವಿಲ್ಲ. ಅವನ ವೇದನೆ ಹರಿಗೆ ಅರಿಕೆ ಇಲ್ಲ. ಲಕ್ಷ್ಮೀಯ ಸಾನಿಧ್ಯ ಸರ್ವಕಾಲ ವಿರುವುದರಿಂದ ಹರಿಗೆ ಯಾವುದೋ ಮತ್ತು ಕವಿದಿರಬೇಕು. ಇಲ್ಲದಿದ್ದರೆ ತನಗೆ ಹಾಸಿಕೆಯಾದ ಶೇಷನ ಕಷ್ಟ ಅರಿವಾಗುತ್ತಿತ್ತು. ಕನಕ-ಬೆಳ್ಳಿ ಮುಂತಾದವೆಲ್ಲ ಲಕ್ಷ್ಮೀಯ ಜಡರೂಪಗಳೇ. ಇಂದು ಕನಕವೆಂಬ ಹೆಸರು ಮದುಗುಣಿಕೆಗೆ ಇರುವುದರಿಂದ ಅದು ಮದಹುಟ್ಟಿಸುವ ಗುಣವುಳ್ಳದುದಾಗಿದೆ.

ಹಿಂದಿನ ಕಥೆಯಲ್ಲಿ ಹೇಳಿದ ಬಸವಣ್ಣೆಪ್ಪನು ಸದ್ಗುರುವಿನ ಅನುಗ್ರಹ ದಿಂದ ಶ್ರೀಮಂತನಾದನು. ಆ ಅರಿವು ಕೆಲವು ದಿನಗಳವರೆಗೆ ಅವನಿಗಿತ್ತು. ಆ ಸಮಯದಲ್ಲಿ ಸದ್ಗುರು ಸ್ಮರಣ-ಭಜನೆಗಳನ್ನು ತಪ್ಪದೇ ಮಾಡುತ್ತಿದ್ದನು. ಬರಬರುತ್ತ ಅವನ ವ್ಯಾಪಾರ-ಉದ್ಯೋಗ ಬೆಳೆದ ಹಾಗೆಲ್ಲ ಮೆಲ್ಲನೆ ಸದ್ಗುರು ವಿನ ಮರೆವಾಗಲಾರಂಭಿಸಿತು. ದಿನಾಲು ನೂರಾರು ಜನರ ಭೆಟ್ಟಿ ಪತ್ರ ವ್ಯವಹಾರ. ನೌಕರರ ಮೇಲೆ ದರ್ಪ. ಬಡತನಕಾಲದಲ್ಲಿಯ ಮಿತ್ರರು ತ್ಯಾಜ್ಯವೆನಿಸಿದರು. ಬಂಧು-ಬಳಗ ತುಚ್ಛರೆನಿಸಿದರು. ಇರುವಿಕೆಯೂ ಬದ ಲಾವಣೆಯಾಯಿತು. ಶ್ರೀಮಂತರಿಗೊಪ್ಪುವ ವೇಷಭೂಷಣಗಳು ಬಂದವು. ಹೊಲ-ಮನೆ-ಧನ-ಕನಕ ಸಂಗ್ರಹವಾಯಿತು. ವಿಲಾಸ-ಪ್ರವೃತ್ತಿ ಬೆಳೆಯಿತು. ಇಷ್ಟೆಲ್ಲ ಮಧುರ-ಮಾಯೆಯ ಮೋಡಿಯಲ್ಲಿ ಸಿಕ್ಕಮೇಲೆ ಮಾಯಾರಹಿತನಾದ ಗುರುಸ್ಮರಣೆ ಬರಬೇಕೇ?

ಒಂದು ದಿನ ಬಸವಣ್ಣೆಪ್ಪನು ಶ್ರೀಮಂತರಿಗುಚಿತವೆನಿಸುವಂತೆ ವೇಷ ಭೂಷಣಗಳಿಂದ ಸಜ್ಜಾಗಿ ಟಾಂಗಾ ಗಾಡಿಯಲ್ಲಿ ಕುಳಿತು ಯಾವುದೋ ಕೆಲ ಸಕ್ಕೆ ನಡೆದಿದ್ದನು. ಮನದಲ್ಲಿ ಯಾತರದೋ ವಿಚಾರ ನಡೆದಿತ್ತು. ಯಾವ ಲಕ್ಷವೂ ಇರಲಿಲ್ಲ. ದಾರಿಯಲ್ಲಿ ಒಂದು ಯಾವುದೋ ಮುದಿಕೆಯು ನಿಂತು ಕೊಂಡಿತ್ತು. ಭರದಿಂದ ಹೊರಟ ಟಾಂಗಾ ತಾಕಿ ಆ ಮುದಿಕೆ ಬಿದ್ದಳು. ಗಾಡಿ ಅವಳ ಮೇಲೆ ಹಾಯ್ದು ಹೋಯಿತು. ಜನರು ನೆರೆದು ಟಾಂಗಾ ನಿಲ್ಲಿ ಸಿದರು. ಮುದಿಗೆ ನಿಶ್ಚೇತನಳಾಗಿ ಬಿದ್ದಿದ್ದಳು. ಎಲುವು ಪುಡಿಪುಡಿಯಾದುದ

ರಿಂದ ಬದುಕುವ ಆಶೆ ಏನೂ ಇರಲಿಲ್ಲ. ಪೋಲೀಸರು ರೀತಿಯಂತೆ ಪಂಚನಾಮೆ ಮಾಡಿಕೊಂಡು ಬಸವಣ್ಣೆಪ್ಪನನ್ನು ಬಂಧಿಮಾಡಿ ತೆಗೆದುಕೊಂಡು ಹೋದರು. ಮುಂದೆ ಖಟ್ಲೆಯಾಗಿ ಒಂದು ವರ್ಷ ಸಶ್ರಮ ಶಿಕ್ಷೆಯಾಯಿತು. ಅವನಲ್ಲಿದ್ದ ದುಡ್ಡು ಮಾನ ಯಾವುದೂ ಶಿಕ್ಷೆ ತಪ್ಪಿಸಲು ಸಮರ್ಥವಾಗಲಿಲ್ಲ. ತನ್ನದು ದುಷ್ಕರ್ಮವೆಂದುಕೊಂಡು ದುಃಖದಿಂದ ಸೆರೆಮನೆಯಲ್ಲಿ ಕಳೆಯ ತೊಡಗಿದನು.

ಇತ್ತ ಮನೆಯಲ್ಲಿ ಅವನ ಹೆಂಡತಿ-ಮಕ್ಕಳು ಗಂಡನಿಗಾಗುವ ಶಿಕ್ಷೆ ತಪ್ಪಿಸಬೇಕೆಂದು ನೀರಿನಂತೆ ಹಣ ವೆಚ್ಚಮಾಡಿದರು. ಯಾರ-ಯಾರದೋ ಕೈಕಾಲು ಕಟ್ಟಿಕೊಂಡರು. ಅತ್ತರು, ಕರೆದರು. ಆದರೆ ಆಗಬಾರದು ಆಗಿ ಹೋಯಿತು. ನಿರುಪಾಯರಾಗಿ ಸುಮ್ಮನಾದರು. ಇದೇನಾದರೂ ಮನೆಯಲ್ಲಿ ತಿನ್ನುಣ್ಣುವುದಕ್ಕೆ ಯಾವ ಕೊರತೆಯೂ ಇರಲಿಲ್ಲ. ಸದ್ಯಕ್ಕೆ ವ್ಯಾಪಾರೋದ್ಯೋಗ ನಿಂತರೂ ಗಂಡ ಬಂದನಂತರ ಸುಧಾರಿಸಿಕೊಳ್ಳಲು ಅವಕಾಶವಿದ್ದೇ ಇದೆ. ಇತ್ಯಾದಿಯಾಗಿ ಹೇಗೋ ಸಮಾಧಾನ ಮಾಡಿಕೊಂಡು ಕಾಲ ತಳ್ಳ ಹತ್ತಿದರು. ಪ್ರತಿದಿನ ಗಂಡನ ನೆನಪು ಬರುತ್ತಿದ್ದರೂ ವರ್ಷ ಮುಗಿದಮೇಲೆ ಸುರಕ್ಷಿತವಾಗಿ ಬರುವನಲ್ಲ. ಶಿಕ್ಷೆಯಾದಷ್ಟಕ್ಕೆ ಏನಾಯಿತು. ಕಳವುಮಾಡಿಲ್ಲ ಕೊಲೆಮಾಡಿಲ್ಲ. ಏನೋ ತುಸು ಲಕ್ಷ್ಯತಪ್ಪಿ ಯಾವಳೋ ದಿನಹೋದಾಕೆ ಗಾಡಿಯ ಬುಡಕ್ಕೆ ಸಿಕ್ಕು ಸತ್ತಿದ್ದಾಳೆ. ಇಷ್ಟಕ್ಕೆ ಶಿಕ್ಷೆ ಕೊಡುವದೇನು ರೀತಿಯೋ? ತಿಳಿಯದು ಎಂಬುದು ಗುರವ್ವನ ವಿಚಾರವಾಗಿತ್ತು. ಆದರೆ ಒಂದು ಆಶ್ಚರ್ಯ. ತಾವು ಅನ್ನಾನ್ನಗತಿಕರಾಗಿದ್ದಾಗ ಹೊಟ್ಟೆ ತುಂಬ ಊಟ ಮಾಡಿಸಿ ತಮ್ಮನ್ನು ಉನ್ನತಿಯ ಮಾರ್ಗಕ್ಕೆ ಹಚ್ಚಿದ ಆ ಸದ್ಗುರು ಸಿದ್ಧಾ-ರೂಢಸ್ವಾಮಿಯ ನೆನಪು ಅಪ್ಪಿತಪ್ಪಿ ಅವಳಿಗಾಗಲಿಲ್ಲ. ಅದರಂತೆ ಬಸವಣ್ಣೆಪ್ಪ ಕೂಡ ಸೆರೆಮನೆಯಲ್ಲಿ ಗುರುಸ್ಮರಣೆ ಇಲ್ಲವೇ ತನ್ನ ಆಸ್ತಿ-ಪಾಸ್ತಿ ವ್ಯಾಪಾರೋದ್ಯೋಗಗಳ ಚಿಂತೆಯಲ್ಲೇ ಕಾಲಕಳೆಯುತ್ತಿದ್ದನು.

ಹೀಗಿರಲು ಒಂದುದಿನ ಮನೆಯಲ್ಲಿ ಗುರವ್ವ ಮಕ್ಕಳೊಡನೆ ಮಲಗಿ ಗಾಢನಿದ್ರೆಯಲ್ಲಿದ್ದ ಸಮಯ. ಕನ್ನಹಾಕಿ ಕಳ್ಳರು ಒಳನುಗ್ಗಿ ಧನ-ಕನಕ, ವಸ್ತ್ರಾಭರಣ ಮುಂತಾದವುಗಳನ್ನು ಒಂದೂ ಬಿಡದೆ ತೆಗೆದುಕೊಂಡರು. ಅಲ್ಲಿಯೇ ಒಂದು ಸಂದುಕದಲ್ಲಿ ಅಂಗಡಿಯ ಲೆಕ್ಕಪತ್ರದ ಪುಸ್ತಕಗಳಿದ್ದವು.

ಆ ಪೆಟ್ಟಿಗೆಗೆ ಬೆಂಕಿ ಹಚ್ಚಿ ಅವರು ನಿರಾತಂಕವಾಗಿ ಹೋಗಿಬಿಟ್ಟರು. ಉರಿಯು ಹೆಚ್ಚುತ್ತ ಬರಲು ಗುರವ್ವನಿಗೆ ಎಚ್ಚರವಾಗಿ ನೋಡಿದಳು. ಮನೆಗೆ ಕಳ್ಳರು ನುಗ್ಗಿರುವರೆಂಬುದಕ್ಕೆ ನಿದರ್ಶನವೆಂಬಂತೆ ಒಂದು ಕಡೆ ಕನ್ನಗಿಂಡಿಯೂ, ಅಸ್ತವ್ಯಸ್ತವಾಗಿ ಬಿದ್ದ ಪದಾರ್ಥಗಳೂ ಕಂಡವು. ಅದೇನಾದರೂ ಆಗಲಿ ಎಂದು ಸಮಾಧಾನ ಹಚ್ಚಿಕೊಳ್ಳಬೇಕೆಂದರೆ 'ಸರ್ವಂ ಸ್ವಾಹಾ' ಎನ್ನುವ ಅಗ್ನಿ ನಾರಾಯಣನು ಮನೆಯನ್ನು ಕಬಳಿಸತೊಡಗಿದ್ದು ಕಾಣಿಸಿತು. ಮಕ್ಕಳೊಡನೆ ಹೊರಬಂದು ಗುರವ್ವ ಕೂಗಿದಳು. ಚೀರಿದಳು. ಎದೆ ಎದೆ ಬಡಿದುಕೊಂಡಳು. ಅತ್ತಳು ಆಕ್ರೋಶ ಮಾಡಿದಳು. ನೆರೆ-ಹೊರೆಯವರು ಓಡಿ ಬಂದರು. ಆದರೆ ಯಾರು ಬಂದುಮಾಡುವದೇನು. ಬೆಂಕಿಯನ್ನಾರಿಸುವುದು ಅಸಾಧ್ಯದ ಮಾತಾಗಿತ್ತು. ಆಗಲೇ ಮನೆಯ ಮುಕ್ಕಾಲು ಭಾಗಕ್ಕೆ ಉರಿ ಹಬ್ಬಿತ್ತು. ನಿಸ್ಸಹಾಯರಾಗಿ ಜನ ನೋಡುತ್ತ ನಿಂತರು. ಯಾವುದನ್ನೂ ಉಳಿಸದೆ ಅಗ್ನಿ ಸುಟ್ಟು ಬೂದಿ ಮಾಡಿತು. ನಿಲ್ಲಲಿಕ್ಕೆ ನೆರಳು ಕೂಡ ಉಳಿಯದ ಗುರವ್ವ ನೆರೆಮನೆಯಲ್ಲಿರಬೇಕಾಯಿತು. ಹೊಟ್ಟೆಗೆ ಹಿಟ್ಟಿಲ್ಲ. ಮೈಗೆ ಬಟ್ಟೆ ಇಲ್ಲ. ಯಾರು ಯಾರೋ ಕನಿಕರದಿಂದ ಕೊಟ್ಟ ಕೂಳು ತಿಂದು ಬದುಕಿದಳು.

ಹೀಗಿರಲು ಒಂದುದಿನ ದುಃಖಸಂತಪ್ತಳಾಗಿ ಕಣ್ಣೀರು ಹಾಕುತ್ತ ಕುಳಿತಿರಲು ಹಿಂದಿನ ಕಥೆ ನೆನಪಾಯಿತು. ಅಂದು ಮೂರು ದಿನಗಳ ವರೆಗೆ ಅನ್ನ-ಅನ್ನವೆಂದು ಹಲುಬಿ ಎರಡು ಮಕ್ಕಳು ಸತ್ತುಹೋಗಿವೆ. ತಾನು ಜೀವಕಳೆದುಕೊಳ್ಳಬೇಕೆಂದು ಭಾವಿಯದಂಡೆಗೆ ಒಂದಿದ್ದಾಳೆ. ಯಾರೋ ಬಂದು ಕೈ ಹಿಡಿದು ಜಗ್ಗಿ ತನ್ನನ್ನುಳಿಸಿದರು. ಅನುಗ್ರಹಿಸಿ ತಮ್ಮ ಬಡತನವನ್ನು ಕಳೆದರು. ಅವರು ಯಾರು? ಆ ಆಪದ್ಬಾಂದವ? ಹಾ, ಅವನೇ ಸದ್ಗುರು ಸಿದ್ಧಾರೂಢ ಸ್ವಾಮಿ. ಅವನನ್ನು ಕೆಲವು ದಿನ ಸ್ಮರಿಸಿದೆವು. ನಿತ್ಯ ದರ್ಶನ ಪಡೆದೆವು. ಈಚೆಗೆ ಮರೆತುಬಿಟ್ಟೆವು. ಆ ತಪ್ಪಿಗಾಗಿಯೇ ಇಂಥ ಪ್ರಾಯಶ್ಚಿತ್ತ ಇರಬೇಕು. ಅವನ ಕೃಪೆಯಿಂದ ಬಂದುದು ಕೃಪೆತಪ್ಪಲು ಹೊರಟು ಹೋಯಿತು. 'ಅಯ್ಯೋ ಗುರುನಾಥನೇ, ಮದಾಂಧರಾದ ನಮ್ಮ ಕಣ್ಣು ಎಷ್ಟು ವಿಚಿತ್ರವಾಗಿ ತೆರೆಸಿದೆಯಲ್ಲ. ಏನೇ ಆಗಲಿ, ಇಷ್ಟು ಘೋರಶಿಕ್ಷೆ ಕೊಡಬಾರದಿತ್ತು. ತಪ್ಪು ಮಾಡುವುದು ಮಕ್ಕಳ ರೀತಿ. ಅಷ್ಟಕ್ಕೆ ತಾಯ್ತಂದೆ

ಅವರ ಕೈಕಾಲು ಮುರಿಯುವರೇ? ಎಲ್ಲವನ್ನು ತಿಳಿದ ನೀನು ನಮ್ಮಂಥ ಅಜ್ಞಾನರಿಗೆ ತಾಯ್ತಂದೆ. ನೀನೇ ಅಣ್ಣ-ತಮ್ಮ-ಬಂಧು-ಬಳಗ. ಕ್ಷಮೆಮಾಡು ನಾನು ಸೆರಗೊಡ್ಡಿ ಬೇಡುತ್ತೇನೆ. ಧನಮದದಿಂದ ನಾವು ಮರೆತಿದ್ದೆವು. ಇನ್ನು ಜನ್ಮವಿರುವವರೆಗೆ ನಾನು ಮರೆಯಲಾರೆ. ಕ್ಷಮಿಸು' ಎಂದು ಮೊರೆ ಇಡುತ್ತ 'ಏನಾದರಾಗಲಿ, ಅವನಿಗೆ ಶರಣು ಹೋಗುವುದೇ ಸರಿ' ಎಂದು ನಿರ್ಧರಿಸಿದಳು. ಆದರೆ ಅಭಿಮಾನ ಮೂಡಿತು. ಜನ ನಿಂದಿಸುವರೆಂದು ಬಗೆದಳು. ಯಾಕಂದರೆ ಕೈಯಲ್ಲಿ ಧನವಿರುವಾಗ ಒಂದುದಿನ ಕೂಡ ಮಠದ ಕಡೆಗೆ ಸುಳಿಯಲಿಲ್ಲ. ಈಗ ಭಿಕ್ಷಾಪಾತ್ರೆಗೆ ಬಂದಿದ್ದಾಳೆ. ಮತ್ತೆ ಸಂಪತ್ತು ಬೇಡಬೇಕಾಗಿದೆಯೋ ಏನೋ, ಎಂದು ನಿಂದೆಮಾಡಿದರೆ? ಆಡಲಿ. ಬೇಕಾದಂತೆ ಆಡಲಿ. ನಾನು ಪ್ರತ್ಯಕ್ಷ ದೇವರೆನಿಸಿದ ಸದ್ಗುರುವನ್ನು ಮರೆಸುವಂಥ ಸಂಪತ್ತನ್ನು ಎಂದಿಗೂ ಬೇಡುವುದಿಲ್ಲ. ಸಂಪತ್ತಿನಿಂದ ದೊರೆಯುವ ಕುದಿ-ಕುದಿವ ಸುಖ ನನಗೆ ಸಾಕು. ಶಾಶ್ವತ ಸಮಾಧಾನ ಬೇಡುತ್ತೇನೆ. ಯಾರ ಹಂಗೇನು. ಸದ್ಗುರು ಕೊಡುವವ, ನಾನು ಪಡೆಯುವವಳು ಶರಣು ಹೋಗುವುದೇ ಸರಿ. ಎಂದು ನಿರ್ಧರಿಸಿ ಹುಡುಗರೊಡನೆ ಗುರುವಿನ ಬಳಿಗೆ ಬಂದು ಪದತಲದಲ್ಲಿ ಬಿದ್ದು ಹೊಗಳಿದಳು. ಕಂಗಳಲ್ಲಿ ನೀರು ಧಾರೆಗಟ್ಟಿ ಹರಿಯುತ್ತಿದ್ದವು. ಎದ್ದು ಕೈಮುಗಿದು ಸದ್ಗುರುನಾಥನೇ, ನಿನ್ನನ್ನು ಮರೆಸುವಂಥ ಧನವನ್ನು ಕಳೆದು ಪುನಃ ನಿನ್ನ ದಯವು ದಯಪಾಲಿಸಿದೆ. ಈಗ ನಾನು ಧನ ಬೇಡಲು ನಿನ್ನ ಬಳಿಗೆ ಬಂದಿಲ್ಲ. ಮೊದಲಿನಂತೆ ಬಡತನವೇ ಇರಲಿ. ಆದರೆ ನಿನ್ನ ಪದತಲದಲ್ಲಿ ಭಕ್ತಿಯನ್ನು ಮಾತ್ರ ಕೊಡು. ಭಕ್ತಿಯೇ ನನಗೆ ಭಾಗ್ಯ. ಅದಕ್ಕಿಂತ ಹೆಚ್ಚಿನ ಭಾಗ್ಯ ನನಗಿಲ್ಲ. ನೀನು ದಯಾವಂತ. ನಮ್ಮ ಅಪರಾಧಗಳನ್ನು ಕ್ಷಮಿಸು.' ಎನ್ನುತ್ತ ಕಣ್ಣೀರ ಕೋಡಿ ಹರಿಸುತಿರಲು ಗುರುವಿನ ಹೃದಯ ಕರಗಿತು. ಅವನಂದನು 'ಚಿಂತಿಸಬೇಡ. ಏನೇ ಆದರೂ ಗುರು-ಚಿಂತನ ಬಿಡಬೇಡ. ಬೇಗನೇ ನಿನ್ನ ಗಂಡನೂ ಬರುತ್ತಾನೆ.'

ಈ ಮಾತುಗಳನ್ನು ಗುರವ್ವ ಸಮಾಧಾನ ಹೊಂದಿ ಕೈಮುಗಿದು ಮನೆಗೆ ಮರಳಿದಳು. ದಿನಗಳನ್ನೆಣಿಸುತ್ತ ಗುರುವಿನ ಅಪ್ಪಣೆಯಂತೆ ಪ್ರತಿದಿನ ಅವನ ಸ್ಮರಣೆಯಲ್ಲಿ ಕಾಲ ತಳ್ಳತೊಡಗಿದಳು. ಅತ್ತ ಕಾರಾಗ್ರಹದಲ್ಲಿ ಬಸವಣ್ಣೆಪ್ಪ ಬಹು ರೀತಿಯ ಕ್ಲೇಶಗಳನ್ನನುಭವಿಸುತ್ತ ಈ ದುಃಖದಿಂದ ಬಿಡುಗಡೆಯಾಗಲು

ಸದ್ಗುರುವಿನ ಸ್ಮರಣೆಯೇ ತಾರಕೋಪಾಯವೆಂದು ಅನನ್ಯಭಾವದಿಂದ ಸದ್ಗುರುವಿಗೆ ಮೊರೆಇಡಲಾರಂಭಿಸಿದನು. ತಾನು ಧನಗರ್ವಿತನಾಗಲು ಸದ್ಗುರುವನ್ನು ಮರೆತ ಅಪರಾಧಕ್ಕೆ ಪಶ್ಚಾತ್ತಾಪಪಟ್ಟನು. ಅವನಿಗೆ ಹಿಂದಿನ ಕಥೆ ಎಲ್ಲ ಸ್ಮರಣೆಗೆ ಬಂದಿತು. ಆ ಕಾಲದಲ್ಲಿ ಸದ್ಗುರು ಸ್ಮರಣ-ಸೇವೆ ಎಂದರೆ ನನಗೆ ಎಂಥ ಸಂತೋಷವಿತ್ತು. ನಾನು ಶ್ರೀಮಂತನಾಗುತ್ತ ನಡೆದಂತೆ ಎಲ್ಲರನ್ನೂ ಮರೆತು ಇಂಥ ದುರ್ದೆಶೆ ಹೊಂದಿದೆ. ಸಾಕು, ಧನದ ಸಹವಾಸವೇ ನನಗೆ ಸಾಕು. ಯಾವಾಗಲೂ ನನಗೆ ವಿಪತ್ತುಗಳೇ ಇರಲಿ, ಅವುಗಳನ್ನು ಸಹಿಸುತ್ತೇನೆ. ಆದರೆ ಗುರುವಿನ ವಿಸ್ಮರಣೆ ಮಾತ್ರ ಎಂದಿಗೂ ಬೇಡ. ಎಂದು ನಿತ್ಯ ಕಾಲತಳ್ಳುತಿರಲು ಒಂದುದಿನ ಸೆರೆಮನೆಯಿಂದ ಬಿಡುಗಡೆಯಾಯಿತು.

ಧಾವಿಸಿ ಮನೆಗೆ ಬಂದು ನೋಡಿದರೆ ಅಲ್ಲೇನಿದೆ? ಎತ್ತ ನೋಡಿದರೂ ಬೂದಿಯ ರಾಶಿ. ಮನೆ–ವಸ್ತು–ಒಡವೆ ಯಾವುದೂ ಉಳಿದಿಲ್ಲ. ಅದನ್ನು ಕಂಡು ಕ್ಷಣಮಾತ್ರ ವಿಷಾದವಾದರೂ ಕೂಡಲೇ ಜಾಗ್ರತನಾಗಿ ಇದೂ ಒಂದು ಒಳ್ಳೆಯದೇ ಆಯಿತೆಂದು ಭಾವಿಸಿಕೊಂಡನು. ಇದರಲ್ಲಿಯೂ ಅವನಿಗೆ ಗುರುವಿನ ಅನುಗ್ರಹವೇ ಕಂಡಿತು. ಯಾಕಂದರೆ ಮದವನ್ನು ತಂದು ಗುರುಸ್ಮರಣೆಯನ್ನು ಮರೆಸುವ ಧನ–ಮಾನಗಳನ್ನು ಮನಸಾ ತಿರಸ್ಕರಿಸುವಷ್ಟು ಅವನ ಸಿದ್ಧತೆಯಾಗಿತ್ತು. ಹೀಗೆ ಆ ಬೂದಿಯ ರಾಶಿಯನ್ನು ನೋಡುತ್ತ ನಿಂತಿರಲು ಅವನ ಹೆಂಡತಿ ಅಕಸ್ಮಾತ್ ಅಲ್ಲಿಗೆ ಬಂದು ಪತಿಯನ್ನು ಕಂಡು ಭಕ್ತಿಯಿಂದ ಕಾಲಿಗೆರಗಿ ಆನಂದಬಾಷ್ಪಗಳನ್ನು ಸುರಿಸುತ್ತ ನಿಂತಳು. ಆಗ ಉಭಯತರು ಅನೇಕ ಬಗೆಯ ಮಾತಾಡಿಕೊಂಡು ಸದ್ಗುರು ದರ್ಶನಕ್ಕೆ ತೆರಳಿದರು. ಅವರನ್ನು ಪ್ರೇಮದಿಂದ ಆಶೀರ್ವದಿಸಿ ಸದ್ಗುರುನಾಥ— 'ಕೇಳು, ನಿಮ್ಮ ಬಳಿಯಲ್ಲಿ ಇನ್ನೂ ತುಸು ಧನವುಳಿದಿರಬೇಕು. ಅಲ್ಲದೆ ಪ್ರಾಮಾಣಿಕರಾದ ನಿನ್ನ ಕೆಲ ಗಿರಾಕಿಗಳೂ ಬಾಕಿಯ ಹಣವನ್ನು ಕೊಡಬಹುದು. ಆದರಿಂದ ನೀವು ಜೀವನ ಮಾಡಿಕೊಂಡು ಸುಖವಾಗಿ ಜೀವನ ಸಾಗಿಸಿರಿ.' ಎನ್ನಲು ಬಸವಣ್ಣೆಪ್ಪ ಗದ್ಗದಿತರಾಗಿ 'ಗುರುನಾಥನೇ, ಹಣದಿಂದಾಗುವ ಅನರ್ಥಗಳನ್ನೆಲ್ಲ ಅನುಭವಿಸಿದ್ದರಿಂದ ಬಹಳ ಭಯವುಂಟಾಗಿದೆ. ಇನ್ನು ನನಗೆ ಅದರ ಸಂಗತಿ ಬೇಡ. ದಯಮಾಡಿ ನಿನ್ನ ಭಕ್ತಿಭಾಗ್ಯವೊಂದನ್ನು ಕೊಟ್ಟರೆ ಸಾಕು. ನಾನು ಹೇಗಾದರೂ ಜೀವನ ತಳ್ಳುತ್ತೇನೆ.' ಎಂದು ಕೈಮುಗಿದನು.

ಆಗ ಗುರುನಾಥನು– 'ಹಣವನ್ನೇ ಮುಟ್ಟಲಾರೆ. ಎಂಬ ಕಠಿಣ ತ್ಯಾಗವನ್ನು ಮಾಡಬೇಕಾದರೆ ಅಧಿಕಾರಬೇಕು. ಪ್ರಾಪಂಚಿಕನಾದ ನಿನ್ನಿಂದ ಅದು ಸಾಧಿಸುವುದಿಲ್ಲ. ಧನಬರಲಿ, ಹೋಗಲಿ. ಅದರ ಮೋಹ ನಿನಗೆ ತಟ್ಟದಿದ್ದರೆ ಆಯಿತಷ್ಟೇ? ಆ ಹೊಣೆ ನನ್ನದು. ನಾನು ನೋಡಿಕೊಳ್ಳುತ್ತೇನೆ. ನೀನು ನಿರ್ಭಯವಾಗಿರು.' ಎಂದು ನುಡಿದು ಮನೆಗೆ ಕಳಿಸಿದನು. ಮುಂದೆ ಕೆಲವು ಪ್ರಾಮಾಣಿಕ ಜನರು ತಾವು ಬಸವಣ್ಣೆಪ್ಪನಿಗೆ ಕೊಡಬೇಕಾದ ಹಣವನ್ನು ಮುಟ್ಟಿಸಿದರು. ಅದನ್ನೆಲ್ಲ ತಂದು ಅವನು ಸದ್ಗುರುವಿಗೊಪ್ಪಿಸಲು ಸದ್ಗುರು ಮರಳಿ ಕೊಡುತ್ತ ಇದು ನನ್ನ ಪ್ರಸಾದ, ತೆಗೆದುಕೊಂಡು ಹೋಗಿ ಜೀವನ ಸಾಗಿಸು. ಎಂದು ನುಡಿದು ಆಶೀರ್ವದಿಸಿದನು.

ಯಾವಾಗಲೂ ಸದ್ಗುರು ಸ್ಮರಣದಲ್ಲಿ ಕಾಲಕಳೆಯುತ್ತ ಆ ದಂಪತಿಗಳು ಬಡವರಾಗಿಯೇ ಬದುಕಿದರು. ಒರಬರುತ್ತ ನಿರ್ಮಲ ವೈರಾಗ್ಯವು ಅವರಿಗೆ ಮೈಗೂಡಲು ಸದ್ಗುರುನಾಥ ಅವರನ್ನು ಅನುಗ್ರಹಿಸಿ ಭವಭಯದಿಂದ ಮುಕ್ತಮಾಡಿದನು.

———

೨೬

– ಪ್ರಾರಬ್ಧಂ ತ್ವಿಹ ಭುಜ್ಯತಾಮಥ ಪರಬ್ರಹ್ಮಾತ್ಮನಾ ಸ್ಥೀಯತಾಮ್ ||

—ಶಂಕರಾಚಾರ್ಯ

ಪ್ರಾರಬ್ಧ ಕರ್ಮವನ್ನು ಭೋಗಿಸುತ್ತ ಪರಬ್ರಹ್ಮನಲ್ಲಿ ಮನವಿರಿಸಬೇಕು.

'ನರಕರಣೀಕರೇ ಸೋನಾರಾಯಣ ಹೋಜಾಯ.' ಮನುಷ್ಯನು ಸಾಧನೆ ಮಾಡಿದರೆ ನಾರಾಯಣನೇ ಆಗುತ್ತಾನೆ. ಎಂದು ಭಗವದ್ಭಕ್ತ ಕಬೀರದಾಸರು ಹೇಳುತ್ತಾರೆ. ಪ್ರತ್ಯಕ್ಷ ನಾರಾಯಣನೇ ಆಗುವಂಥ ಪದವಿ ಪಡೆಯಬಲ್ಲ ಮನುಷ್ಯ ಅಸಹಾನೆನಿಸಿ ಪ್ರಾರಬ್ಧವನ್ನೇಕೆ ಭೋಗಿಸಬೇಕೆಂದು ತಿಳಿದವರು ಹೇಳುವರು?

ಹಾಗೆ ಹೇಳಲು ಕಾರಣವಿಲ್ಲದೇ ಇಲ್ಲ. ಮನುಷ್ಯನ ಕರ್ಮಸಂಚಿತಕ್ಕ-ನುಸಾರವಾಗಿ ಜನನ-ಮರಣಗಳುಂಟಾದವಷ್ಟೇ? ಅದರಂತೆ ಲೋಕದಲ್ಲಿ ಸುಖ-ದುಃಖಗಳು ಉಂಟಾಗುತ್ತವೆ. ಪುಣ್ಯಬಲದಿಂದ ಸುಖಲಾಭ, ಪಾಪ ತಿಂದ ದುಃಖಭೋಗವೆಂದು ನಿಯಮವಿದೆ. ಇದನ್ನು ಒಂದು ವೇಳೆ ತನ್ನ ತಪೋಬಲದಿಂದ ತಪ್ಪಿಸಿಕೊಳ್ಳಲು ಜ್ಞಾನಿಗಳಿಗೆ ಶಕ್ಯವಿದೆ. ಆದರೆ ಅವರು ಪರಮೇಶ್ವರನ ಕರ್ಮನಿಬಂಧನೆಯಿಂದ ಪಾರಾಗಲು ಯತ್ನ ಮಾಡುವುದಿಲ್ಲ. ಜ್ಞಾನವಾದ ಮೇಲೆ ಮುಂದಿನ ಜನ್ಮದಲ್ಲಿ ಫಲಕೊಡಬೇಕಾದಂಥ ಸಂಚಿತ ಕರ್ಮಗಳು ನಾಶಹೊಂದುತ್ತವೆ. ಸದ್ಯದ ಜನ್ಮಕ್ಕೆ ಕಾರಣವಾದ ಪ್ರಾರಬ್ಧವು ಮಾತ್ರ ನಾಶವಾಗುವುದಿಲ್ಲ. ಅದನ್ನು ಭೋಗಿಸಲೇ ಬೇಕು. ಒಂದು ಸಾಧನಾಂತರಗಳಿಂದ ತಪ್ಪಿಸಿಕೊಂಡರೆ ಮತ್ತೊಂದು ಜನ್ಮಕ್ಕೆ ಕಾರಣವಾಗುವುದು. ಇದನ್ನೆಲ್ಲ ಆಳವಾಗಿ ವಿಚಾರಿಸಿ ಜ್ಞಾನಿಯು ಬಂದ ಸುಖದುಃಖಗಳನ್ನು ಅಪ್ರತೀಕಾರವಾಗಿ ಸಹನಮಾಡುತ್ತ ಶಾಂತಭಾವದಿಂದಿರುವನು.

ಒಂದು ಸಲ ಸಿದ್ಧನ ಮಠದ ಮುಂಭಾಗದ ಕಟ್ಟೆಯ ಮೇಲೆ ಧ್ಯಾನದಲ್ಲಿ ಕುಳಿತಿರುವಾಗ ನಾಲ್ಕೈದು ಜನ ಯವನರು ಮದ್ಯಕುಡಿದು ಬುದ್ಧಿಗೆಟ್ಟವರಾಗಿ ಅಲ್ಲಿಗೆ ಬಂದರು. ಯಾವ ಉದ್ದೇಶಕ್ಕೆ ಬಂದಿದ್ದರೋ ತಿಳಿಯದು. ಬಂದ ಮೇಲೆ ಮಾತ್ರ ಕದಲದಿರುವ ಸಿದ್ಧನ ಸ್ಥಿತಿಯನ್ನು ಕಂಡು ಅವರಿಗೆ ಕೌತುಕವೆನಿಸಿ ಅವರಲ್ಲೊಬ್ಬನು ಹಿಂದಿನಿಂದ ಬಂದು ಸಿದ್ಧನನ್ನು ನೂಕಿದನು. ಸಿದ್ಧ ಕಟ್ಟೆಯಿಂದ ಕೆಳಗೆ ಬಿದ್ದು ಯಾವ ಪ್ರತೀಕಾರವನ್ನೂ ಮಾಡದೆ ಮತ್ತೆ ಕಟ್ಟೆ ಏರಿ ಕುಳಿತನು. ಇದನ್ನು ಕಂಡ ಮೇಲಂತೂ ಅವರಿಗೆ ಬಹಳ ಸಿಟ್ಟೇರಿತು. ಮತ್ತೊಬ್ಬನು ಮುಂದೆ ಬಂದು— 'ಏಯ್ ಕೆಳಗಿಳಿ' ಎನ್ನುತ್ತ ರಟ್ಟೆ ಹಿಡಿದು ಕೆಳಗೆ ಜಗ್ಗಲು ಅವರೆಲ್ಲರೂ ಸಿದ್ಧನ ಸುತ್ತುಗಟ್ಟಿ ನಿಂತರು. ಒಬ್ಬನು ಒಡಬಡಿಸಿದನು. 'ಏಯ್ ಬಿಕನಾಶಿ ನಮ್ಮ ಬಳಿಯಲ್ಲಿ ಆನಂದರಸವಿದೆ. ಕುಡಿ, ಮಜಮಾಡು, ಒಲ್ಲೆನೆಂದು ಹೇಳಬೇಡ. ಒಲ್ಲೆನೆಂದರೆ ನಿಮಗೆ ಸಮ್ಮಾಣೆ.' ಎನ್ನುತ್ತ ಸಿದ್ಧನನ್ನು ನಡುವೆ ಹಾಕಿ ಮದ್ಯದ ಬಾಟಲಿ ತೆಗೆದು ಸಿದ್ಧನಿಗೆ ಬಾಯಿಗೆ ಬಂದಂತೆ ಮಾತಾಡಹತ್ತಿದರು. ಅವರಲ್ಲೊಬ್ಬನು 'ಏಯ್ ಹುಚ್ಚುಪ್ಯಾಲಿ, ಇದನ್ನು ಕುಡಿದಾದರೂ ನೋಡು ಸ್ವರ್ಗ ಇಳಿದುಬರುತ್ತದೆ. ಆಂ, ಆಂ.' ಎನ್ನುತ್ತ ಗುದ್ದತೊಡಗಿದರು. ಅವನ ಗುದ್ದುವಿಕೆಗೆ ನಿಯಮ

ವೆಂಬುದುಳಿಯಲಿಲ್ಲ. ಎಲ್ಲಿಬೇಕೋ ಅಲ್ಲಿ ಗುದ್ದಿದನು. ಶಿಲಾಮೂರ್ತಿಯಂತೆ ಸಿದ್ಧ ಸುಮ್ಮನಿದ್ದನು. ಮತ್ತೊಬ್ಬ ಕೋಲಿನಿಂದ ಹೊಡೆದನು. ಇನ್ನೊಬ್ಬ ಕಣ್ಣಿನಲ್ಲಿ ಕಟ್ಟಿಗೆ ತಿವಿಯಲೆತ್ನಿಸಿದನು. ಮಗದೊಬ್ಬ ತಲೆ ತಲೆ ಕುಕ್ಕಿದನು. ಇವರೇನು ಮಾಡಿದರೂ ಸಿದ್ಧ ಶಾಂತ. ಕೆಲ ವೇಳೆಯ ವರೆಗೆ ಅವರು ಸಿದ್ಧನನ್ನು ಪೀಡಿಸಿ ಸುಮ್ಮನಾಗಲು ಸಿದ್ಧ ಅವರನ್ನು ಕುರಿತು– 'ಅಯ್ಯ, ನನ್ನ ಭಕ್ತರು ಬಹು ಬಗೆಯಿಂದ ನನ್ನ ಸೇವೆಮಾಡುವುದು ನಿಜ. ಆದರೆ ಬಿರುಸಾದ ನನ್ನ ಮೈಯ್ಯನ್ನು ನಿಮ್ಮಷ್ಟು ಮೆತ್ತಗೆ ಯಾರೂ ಮಾಡುವುದಿಲ್ಲ. ನಿಮ್ಮ ಭಕ್ತಿಯಿಂದ ನಾನು ಸಂತುಷ್ಟನಾಗಿದ್ದೇನೆ. ಇರಲಿ, ಇನ್ನು ನಿಮ್ಮ ಹಿತದಮಾತು ಹೇಳುತ್ತೇನೆ ಕೇಳಿರಿ. ಊರೊಳಗಿಂದ ಭಕ್ತರು ಬರುವ ವೇಳೆಯಾಯಿತು. ಅದೋ ಒಬ್ಬಿಬ್ಬರು ಬಂದೂ ಬಿಟ್ಟರು. ಅವರೆಲ್ಲ ಬಂದು ನಿಮ್ಮನ್ನು ಇಲ್ಲಿ ಕಂಡದ್ದಾದರೆ ಸುಮ್ಮನೆ ಬಿಡಲಾರರು. ಯಥೇಷ್ಟವಾಗಿ ಹೊಡೆದುಬಿಡುತ್ತಾರೆ. ಹಾಗೆ ಒಂದುವೇಳೆ ಆದರೆ ನನಗೆ ಬಹಳ ದುಃಖವಾಗುವುದು. ಬೇಗನೆ ಇಲ್ಲಿಂದ ಮರೆಯಾಗಿರಿ. ಒಂದುವೇಳೆ ನನ್ನನ್ನು ಹೊಡೆಯುವುದು ನಿಮಗೆ ಸಾಕಾಗದಿದ್ದರೆ ನಾಳೆ ಮುಂಜಾನೆ ಮತ್ತೆ ಬರಬಹುದು. ನಾನು ಸಿದ್ಧಸಿದ್ದೇನೆ.' ಎನ್ನಲು ಅವರೆಂದರು– 'ಏಯ್ ಈ ಹುಚ್ಚ ಏನೇನೋ ಬೊಗಳುತ್ತಿರುವನಲ್ಲ. ಇವನನ್ನು ಮುಗಿಸಿಯೇ ಬಿಡೋಣ ನಡೆಯಿರಿ.' ಎನ್ನುತ್ತ ಒಂದಿಬ್ಬರು ತಲೆಯಮೇಲೆ ಅಪ್ಪಳಿಸಬೇಕೆಂದು ದೊಡ್ಡದೊಂದು ಕಲ್ಲು ಎತ್ತಿದರು. ಅಷ್ಟರಲ್ಲಿ ದರ್ಶನಕ್ಕೆ ಬಂದ ಜನರ ಕಲಕಲ ಬಾಯಿ ಕೇಳಿಸಲು ಇದೇನೆಂದು ಕಲ್ಲು ಚಲ್ಲಿ ಮರೆಯಾಗಿ ನಿಂತು ನೋಡತೊಡಗಿದರು. ಬಂದ ಭಕ್ತರು ಸಿದ್ಧನಿಗೆ ಸಾಷ್ಟಾಂಗವೆರಗಿ ಹೇಳತೊಡಗಿದರು. 'ಸ್ವಾಮಿ. ದಯಾಘನನೇ, ಇವತ್ತಿನ ದಿನ ಕಾಳಮ್ಮದೇವತೆಯ ರಥೋತ್ಸವ ಮಾಡಬೇಕೆಂದು ನಾಲ್ಕೆಂಟು ದಿನಗಳಿಂದ ಕಷ್ಟಪಟ್ಟು ರಥವನ್ನು ಸಿದ್ಧಗೊಳಿಸಿದೆ. ಸಂಪೂರ್ಣವಾಗಿ ಅಲಂಕಾರ ಮಾಡುವುದು ಕೂಡ ಮುಗಿದಿದೆ. ರಥದಲ್ಲಿ ಕಾಳಮ್ಮನ ಮೂರ್ತಿ ಸಹ ಕೂಡಿಸಿದ್ದೇವೆ. ಇನ್ನು ರಥವೆಳೆಯಬೇಕೆಂದು ಏನು ಯತ್ನ ಮಾಡಿದರೂ ರಥ ನಿಂತ ಸ್ಥಳದಿಂದ ಸರಿಯದಾಗಿದೆ. ನಾವು ದಿಕ್ಕುಗೆಟ್ಟು ಹೋದೆವು. ಆಗ ಒಬ್ಬ ಗೃಹಸ್ಥನು ಮಹಾತ್ಮರ ಸ್ಪರ್ಶವಾಗದೇ ರಥ ಕದಲುವಂತೆ ಕಾಣುವುದಿಲ್ಲ. ಎಂದು ಹೇಳಲು ನಿನ್ನ ಬಳಿಗೆ ಬಂದಿದ್ದೇವೆ, ನೀನು

ಮಹಾತ್ಮನೆಂದು ನಮಗೆ ನಂಬಿಗೆಯುಂಟು. ಆದಕಾರಣ ದಯವಿಟ್ಟು ಅಲ್ಲಿಯವರೆಗೆ ಬಂದ ರಥೋತ್ಸವ ಕಾರ್ಯವನ್ನು ಸಾಗುಮಾಡಿ ನಮ್ಮನ್ನು ಸಂತೋಷಗೊಳಿಸಬೇಕು.' ಎಂದು ಕೈಮುಗಿಯಲು ಸಿದ್ಧನು– 'ಒಳ್ಳೇದು ನಿಮ್ಮಂತೆಯೇ ಆಗಲಿ. ರಾತ್ರಿಯಲ್ಲಿ ಮಾತ್ರ ನಾನು ಅಲ್ಲಿರುವವನಲ್ಲ. ಇಲ್ಲಿಗೆ ಬರತಕ್ಕವನು.' ಎಂದು ಹೇಳಿದನು. ಇವೆಲ್ಲ ಮಾತು ಕೇಳುತ್ತಿದ್ದ ಮರೆಗೆ ನಿಂತ ಯುವನರು– 'ನೋಡಿದೆ ಏನೋ, ಬುದ್ಧಿಗೇಡಿಗಳು ಇಂಥ ಎಬರೇಶಿಯನ್ನು ರಥೋತ್ಸವಕ್ಕೆ ಕರೆಯುತ್ತಾರೆ. ಇವನೇನೋ ಮಹಾತ್ಮನಂತೆ, ನಡೆಯಿರಿ ನಾವು ಮಜ ನೋಡಲು ಹೋಗೋಣ.' ಎಂದು ಮಾತಾಡಿಕೊಂಡರು. ಆಗ ಸಂದೇಹವೆತ್ತಿದನು. 'ನಾವು ಇವನಿಗೆ ಮೈಮೆತ್ತಗಾಗುವಂತೆ ಹೊಡೆದಿದ್ದೇವೆ, ಜನರ ಮುಂದೆ ಹೇಳಿಬಿಟ್ಟರೆ ನಮ್ಮ ಯಾರ ಜೀವವೂ ಉಳಿಯುಲಿಕ್ಕಿಲ್ಲ.'

'ಛೇ. ಇವನು ಅಂಥವನಲ್ಲ, ಹೋಗೋಣ ನಡೆಯಿರಿ.'

ಬಂದ ಜನರು ಭಕ್ತಿಯಿಂದ ಸಿದ್ಧನನ್ನು ಕರೆದುಕೊಂಡು ಮುಂದೆ ಮುಂದೆ ನಡೆದರು. ಯುವನರು ಹಿಂದೆ ಸಾಗಿದರು. ಹಳೇಹುಬ್ಬಳ್ಳಿಯಲ್ಲಿ ರಥ ಸಿದ್ಧವಾಗಿತ್ತು. ಸಾವಿರಗಟ್ಟಲೆ ಜನರು ಕೂಡಿದ್ದರು. ನೂರಾರು ಜನ ಹಿಡಿದು ರಥ ಜಗ್ಗಿದರೂ ಮುಂದೆ ರಥಸಾಗದಾಗಿತ್ತು. ಸಿದ್ಧನನ್ನು ಕರೆತಂದು ಒಂದು ಆಸನಹಾಕಿ ಯಾರದೋ ಮನೆಯ ಕಟ್ಟೆಯಮೇಲೆ ಕುಳ್ಳಿರಿಸಿದರು. ನಿಜವಾಗಿ ಅಂದರೆ ೮–೧೦ ಜನರೆಳೆದರೆ ರಥಸಾಗುವಂಥದು ನೂರು ಜನರಿಗೂ ಸಾಗದೇ ನಿಂತುಕೊಂಡಿತ್ತು. ಅದನ್ನು ಕಂಡು ಯುವನರು ವಿನೋದ ಮಾಡತೊಡಗಿ 'ಇವರೆಲ್ಲ ಜೀವವಿಲ್ಲದವರು. ಇವರಿಂದ ರಥವೆಳೆಯುವುದಾಗುವುದಿಲ್ಲ. ಅದನ್ನು ಮುಂದೆ ಸಾಗಿಸಬೇಕೆಂದು ಈ ಎಬರೇಶಿಯನ್ನು ಕರೆದುಕೊಂಡುಬಂದಿದ್ದಾರೆ. ಇವನೇನೋ ಮಹಾತ್ಮನಂತೆ. ಇವನು ಮಹಾತ್ಮನಾಗಿದ್ದರೆ ನಾವು ಹೊಡೆದರೆ ಯಾಕೆ ಸುಮ್ಮನಿದ್ದ ? ಶಕ್ತಿ ಇದ್ದರೆ ನಮ್ಮನ್ನು ಸುಟ್ಟು ಬೂದಿಮಾಡುತ್ತಿದ್ದ ಹೀಗೆಲ್ಲ ಮಾತಾಡುತಿರಲು ಮಹಾತ್ಮರನ್ನು ಕರೆದು ತರಬೇಕೆಂದು ಹೇಳಿದ ಗೃಹಸ್ಥ ಬಂದು 'ಛೀ. ಛೀ ನಿಮಗೆ ಬುದ್ಧಿಯೇ ಇಲ್ಲ. ಮಹಾತ್ಮರನ್ನು ಕರೆದು ತಂದು ಅವರ ಸನ್ನಿಧಿಯಲ್ಲಿ ರಥವೆಳೆಯಬೇಕೆಂದು ನಾನು ಹೇಳಿದರೆ ತಂದು ಸುಮ್ಮನೇ ಕೂಡಿಸಿಬಿಟ್ಟಿರಿ. ಹೂಂ ಏಳಿರಿ ಸದ್ಗುರುನಾಥನ ಜಯಘೋಷ

ಮಾಡಿ ಅವನನ್ನು ದೇವಿಯೊಡನೆ ರಥದಲ್ಲಿ ಕುಳ್ಳಿರಿಸಿರಿ. ಆಗ ನೋಡೋಣ. ರಥವು ಹೇಗೆ ಮುಂದೆ ಸಾಗುವುದಿಲ್ಲವೋ?' ಎಂದು ಹೇಳಲು ಕೆಲವರು ಅನೇಕ ಬಗೆಯಾಗಿ ಸಂದೇಹ ಪ್ರಕಟಿಸತೊಡಗಿದರು. ಅವರ ಸಂದೇಹಗಳ ಸಾರಾಂಶವೆಂದರೆ—

ಸಿದ್ಧಾರೂಢ ಸ್ವಾಮಿಗಳು ಮಹಾತ್ಮರೆಂಬ ವಿಷಯದಲ್ಲಿ ನಮಗೇನೂ ಸಂದೇಹವಿಲ್ಲ. ಆದರೆ ದೇವಿ ಕೂಡುವ ರಥದಲ್ಲಿ ನರಮನುಷ್ಯರನ್ನು ಕೂಡಿಸಿದರೆ ದೇವಿ ನಮ್ಮ ಮೇಲೆ ಸಿಟ್ಟಾಗಲಿಕ್ಕಿಲ್ಲವೇ? ಎಂದು ವಾದ-ವಿವಾದ ಪ್ರಾರಂಭವಾಗಲು ಆ ಗೃಹಸ್ಥನು 'ಅಪ್ಪಗಳಿರ. ನೀವು ಯಾವ ಬಗೆಯಿಂದಲೂ ಚಿಂತೆ ಮಾಡಬೇಡಿರಿ. ನಿನ್ನೆ ರಾತ್ರಿ ನನಗೆ ಸ್ವಪ್ನವಾಗಿದೆ. ಕಾಳಮ್ಮ ದೇವಿ ಸ್ಪಷ್ಟವಾಗಿ ಹೇಳಿದ್ದಾಳೆ. 'ಸಿದ್ಧನನ್ನು ಕುಳ್ಳಿರಿಸದ ವಿನಃ ನಾನು ರಥವನ್ನು ಸಾಗುಗೊಳಿಸಲಾರೆ.' ನನಗೇನೋ ಮೊದಲು ಈ ಸ್ವಪ್ನ ವಿಷಯದಲ್ಲಿ ವಿಶ್ವಾಸವಿರಲಿಲ್ಲ. ಆದರೆ ದೇವಿಯ ಹೇಳಿಕೆಯಂತೆ ರಥವು ಕದಲದಂತಾದ ಕೂಡಲೇ ಸಿದ್ಧನನ್ನು ಕರೆತರಬೇಕೆಂದು ನಿಮಗೆ ಸೂಚನೆ ಮಾಡಿದೆನು. ಅವನನ್ನು ರಥದಲ್ಲಿ ಕೂಡಿಸಿ ಎಳೆದರೆ ತಪ್ಪೇನೂ ಆಗುವದಿಲ್ಲ. ತಿರುಗಿ ಕೇಳಿದರೆ ಅದು ದೇವಿಯ ಅಪ್ಪಣೆಯನ್ನು ಪಾಲಿಸಿದಂತೆಯೇ ಆಗುತ್ತದೆ.' ಎಂದು ಹೇಳಲು ಬೇರೆ ಉಪಾಯವನ್ನೇ ತಿಳಿಯದ ಅವರು ಕೂಡಲೇ ಒಪ್ಪಿಕೊಂಡರು. ಹೂಮಾಲೆಗಳಿಂದ ಅಲಂಕೃತನಾದ ಸಿದ್ಧನನ್ನು ಜನರು ಕರೆದೊಯ್ದು ರಥದಲ್ಲಿ ಕೂಡಿಸಿ ಜಯಘೋಷ ಮಾಡಿದರು. ಸಾತ್ವಿಕ ತೇಜದಿಂದೊಪ್ಪುವ ಸಿದ್ಧನನ್ನು ಕಂಡು ಎಲ್ಲರಿಗೆ ಸಂತೋಷವಾಯಿತು. ಮುತ್ತೈದೆಯರು ಬಂದು ಆರತಿ ಎತ್ತಿದರು. ಭಕ್ತರು ಜಯಘೋಷ ಮಾಡಿದರು. ಹೂಮಳೆಗರೆದರು. ಅನಂತರ ಕೆಲವರು ಒಮ್ಮೆ ಜಯಜಯಕಾರ ಮಾಡಿ ರಥ ಜಗ್ಗುವುದೇ ತಡ. ರಥ ದಡ-ದಡ ಮುಂದೆ ಸಾಗಿತು. ಎಲ್ಲರಿಗೂ ಅದೊಂದು ಆಶ್ಚರ್ಯವೇ. ಸಿದ್ಧನ ಮಹಿಮೆಯ ವಿಷಯದಲ್ಲಿ ಸಾಶಂಕಿತರಾಗಿ ನಿಂದೆ ಮಾಡುತ್ತಿದ್ದವರು ಬೆರಗಾಗಿ ಹಿಂದೆ ಸರಿದರು. ಮಳೆಗಾಲದ ನದಿಯಂತೆ ಭಕ್ತಿಪೂರ ಹರಿಯಿತು. ಭಕ್ತರಿರಲಿ, ನಿಂದಕರಿರಲಿ, ನಾಸ್ತಿಕರಾಗಲಿ, ಎಲ್ಲರೂ ಕೈಮುಗಿಯುತ್ತ ನಾಲ್ಕು ಹೆಜ್ಜೆಯಾದರೂ ರಥ ಜಗ್ಗಿದರು.

ನಡೆದ ಘಟನೆಯನ್ನು ಕಂಡು ಸಿದ್ಧನ ಮಹಿಮೆಯ ವಿಷಯದಲ್ಲಿ ಯಾರಿಗೂ ಸಂದೇಹ ಉಳಿಯಲಿಲ್ಲ. ಎಲ್ಲರೂ ಬಂದು ಸಿದ್ಧನ ಪಾದಗಳಿಗೆ ವಂದಿಸುವವರೇ. ಒಂದೇ ಸವನೇ ನೂಕುನುಗ್ಗಲು. ಸಚ್ಚಿದಾನಂದಮೂರ್ತಿ ಸಿದ್ಧ ಜನರಲ್ಲಿ ಉಂಟಾದ ಈ ಭಕ್ತಿಯ ಉದ್ರೇಕದ ರಹಸ್ಯವನ್ನು ತಿಳಿದವನು. ಅವನು ಜನರನ್ನು ಕುರಿತು– 'ಅಯ್ಯ, ಇದೆಲ್ಲ ಭಗವಂತನ ಇಚ್ಛೆ. ನಾನು ಹೆಚ್ಚಿನವನಲ್ಲ. ನಿಮ್ಮಂತೆಯೇ ನಾನು.' ಎಂದು ನುಡಿದು ಪುನಃ ತನ್ನ ಮಠಕ್ಕೆ ಬಂದು ಕಟ್ಟೆಯನ್ನೇರಿ ಕುಳಿತನು. ಅಷ್ಟರಲ್ಲಿ ಮೊದಲು ಬಂದ ಸಿದ್ಧನನ್ನು ನೈಮುರಿಯಾಗಿ ಥಳಿಸಿ ಅವಾಚ್ಯ ನುಡಿಗಳನ್ನಾಡಿದ ಯುವನರೆಲ್ಲ ಬಂದರು. ಅವರನ್ನು ಕಂಡು ಸಿದ್ಧನು–'ಅಯ್ಯಾ, ಈಗ ನೀವು ಬಂದುದು ಒಳಿತಾಯಿತು. ಬಹುತರವಾಗಿ ಇನ್ನು ಜನರ ಗದ್ದಲವಾಗುವುದಿಲ್ಲ. ನಿಮ್ಮ ಇಚ್ಛೆ ಪೂರ್ಣ ಮಾಡಿಕೊಳ್ಳಲು ಇದು ಯೋಗ್ಯ ಸಮಯ. ಆಗಲೇ ನೀವು ನನ್ನ ತಲೆಯ ಮೇಲೆ ಹಾಕಬೇಕೆಂಬ ಇಟ್ಟ ಕಲ್ಲು ಇಲ್ಲಿಯೇ ಬಿದ್ದುಕೊಂಡಿದೆ. ಈ ದೇಹ ತನಗೆ ತಾನೇ ಬಿದ್ದುಹೋಗುವಂಥದು. ಯಾರಿಗೂ ಈಗ ಉಪಯೋಗ ವಾಗುವುದಿಲ್ಲ. ನಿಮ್ಮ ಇಚ್ಛೆಯನ್ನು ಪೂರ್ಣಗೊಳಿಸಿಯಾದರೂ ಬಿದ್ದು ಹೋಗಲಿ. ನನಗೆ ಯಾವ ಬಗೆಯಿಂದಲೂ ದುಃಖವಿಲ್ಲ. ನಾನು ಸಿದ್ಧ ನೀವು ಕಲ್ಲು ಎತ್ತಬಹುದು.' ಎಂದು ನುಡಿಯಲು– ಈ ಯುವನರು ನಮ್ರತೆಯಿಂದ ಕಾಲಿಗೆರಗಿ 'ಸ್ವಾಮಿ, ನಾವು ಪಾಪಿಗಳು, ನಿಮಗೆ ಬಹಳ ತಾಪ ಕೊಟ್ಟೆವು. ನಿಮ್ಮ ರೀತಿ-ನಡತೆಗಳನ್ನು ಕಂಡು ನೀವೊಬ್ಬ ಹುಚ್ಚರಿರಬೇಕೆಂದು ನಮ್ಮ ಭಾವನೆಯಾಗಿತ್ತು. ಆದರೆ ಈಗ ನಿಮ್ಮ ಯೋಗ್ಯತೆ ತಿಳಿಯಿತು. ನಾವು ಶರಣಾಗತರು. ನಮಗೆ ಬೇಕಾದಂಥ ಶಿಕ್ಷೆ ವಿಧಿಸಿರಿ. ಅದನ್ನು ನಾವು ಅನು ಭವಿಸುತ್ತೇವೆ. ನೀವು ನಮ್ಮ ಅಪರಾಧಕ್ಕೆ ತಕ್ಕ ಶಿಕ್ಷೆ ಕೊಡದ ವಿನಃ ನಾವು ಪಾದಗಳನ್ನು ಬಿಟ್ಟು ಕದಲುವುದಿಲ್ಲ.' ಎಂದು ಗಟ್ಟಿಯಾಗಿ ಸಿದ್ಧನ ಪಾದ ಹಿಡಿದು ಕುಳಿತುಕೊಳ್ಳಲು ಸಿದ್ಧನು– 'ಅಯ್ಯ, ನಾನು ನಿಮಗೆ ಶಿಕ್ಷೆ ಕೊಡು ತ್ತೇನೆ. ಮಾತ್ರ ಅದನ್ನು ಅನುಭವಿಸಲಿಕ್ಕೆ ನೀವು ಸಿದ್ಧರಿರಬೇಕು.' ಎಂದು ಹೇಳಿದನು. ಅವರು ಒಪ್ಪಿಕೊಂಡರು. ಆಗ ಸಿದ್ಧ ಹೇಳಿದುದೇನಂದರೆ ಇವತ್ತಿನಿಂದ ನೀವು ಯಾರೊಬ್ಬರು ಸೆರೆ ಕುಡಿಯಬಾರದು. ಇದೇ ನಾನು ಕೊಡುವ ಶಿಕ್ಷೆ.

ಈ ಮಾತು ಕೇಳಿ ಅಯ್ಯನವರಿಗೆ ಹರ್ಷವಾಯಿತು. ಬೇಡಿಕೊಂಡರು. 'ಸ್ವಾಮಿ, ನಾವು ಬಹಳ ಪಾಪ ಮಾಡಿದ್ದೇವೆ. ನಮ್ಮ ಉದ್ಧಾರವಾಗುವ ಬಗೆ ಹೇಗೆ?' ಎನ್ನಲು ಸಿದ್ಧನು ಚಿಂತಿಸಬೇಡಿರಿ. ನಿಮ್ಮ ಧರ್ಮದಂತೆ ನಡೆಯುತ್ತ ದೇವರನ್ನು ಭಜಿಸಿರಿ. ಅವನು ಎಲ್ಲ ಪಾಪಗಳನ್ನು ನಾಶಗೊಳಿಸಿ ಉದ್ಧರಿಸುತ್ತಾನೆ.' ಎಂದು ಅನೇಕ ಬಗೆಯಾಗಿ ಉಪದೇಶಿಸಿ ಮನೆಗೆ ಕಳಿಸಿದನು. ಆ ಕರ್ಮಿಗಳು ಮುಂದೆ ಸಮಾಜದಲ್ಲಿ ಒಳ್ಳೆಯವರೆನಿಸಿಕೊಂಡರೆಂದು ಬೇರೆ ಹೇಳುವುದು ಬೇಡ.

೨೭

ತ್ವಮೇವಕಿಲ ಕಾಮಧುಕ್ ಸಕಲಕಾಮಮಾಪೂರಯನ್ ।

—ಶಿವಸ್ತುತಿಃ

ಎಲ್ಲ ಮನೋರಥಗಳನ್ನು ಪೂರಿಸುವ ನೀನು ಕಾಮಧೇನುವೆನ್ನುತ್ತಾರೆ.

ಸ್ವಾಮಿಯಾಶ್ರಮದಲ್ಲಿ ಬಗೆಬಗೆಯ ಉತ್ಸವಗಳು ಜರುಗುತ್ತಿದ್ದವು. ಅವುಗಳಲ್ಲಿ ಶ್ರಾವಣಮಾಸ-ಶಿವರಾತ್ರಿಯ ಉತ್ಸವಗಳು ಮುಖ್ಯವಾದವುಗಳೆಂದು ಹೇಳಬಹುದು. ಆಗ ವಿಶೇಷ ರೀತಿಯಿಂದ ಅನ್ನದಾನವು ನಡೆಯುತ್ತಿದ್ದಿತು. ಸಾವಿರಾರು ಜನರಿಗೆ ದಿನಾಲು ಎರಡೂ ಹೊತ್ತಿನ ಊಟ ನಡೆಯುವ ಬಗೆಯನ್ನು ಸದ್ಗುರುವೇ ಬಲ್ಲನು. ಎಲ್ಲರಿಗೂ ಸಾಲುವಷ್ಟು ಅಡಿಗೆಯ ಸಾಮಗ್ರಿ ಹೇಗೆ ಕೂಡುತ್ತಿತ್ತು. ಒಂದು ಸಪ್ತಾಹದವರೆಗೆ ಯಾವ ಕೊರತೆಯೂ ಇಲ್ಲದೇ ಹೇಗೆ ಸಾಗುತ್ತಿತ್ತು? ಎಂಬ ವಿಷಯ ನಿಜವಾಗಿ ಆಶ್ಚರ್ಯಕರವಾಗಿತ್ತು.

ನೀರಿನ ಅನುಕೂಲತೆಗೆ ಅಲ್ಲಿಯೇ ಒಂದು ಹೊಂಡ ಮಾತ್ರವಿದ್ದಿತು. ಅದು ಮಳೆಯ ನೀರಿನಿಂದಲೇ ತುಂಬುವಂಥದು. ಮಳೆ ಸಾಕಷ್ಟಾದರೆ ತುಂಬಬೇಕು, ಇಲ್ಲವಾದರೆ ನೀರಿನ ಕೊರತೆ ಇದ್ದುದೇ. ಒಂದುಸಾರೆ ಶಿವರಾತ್ರಿಯ ಉತ್ಸವ ಬಂದಿತ್ತು. ಹೊಂಡದಲ್ಲಿ ನೀರು ಇರಲಿಲ್ಲ. ಉತ್ಸವವೆಂದಮೇಲೆ ಪ್ರತಿ

ವರ್ಷದಂತೆ ಲಕ್ಷಾವಧಿ ಜನ ನೆರೆಯುವರು. ಅವರಿಗೆಲ್ಲ ನೀರು ಪೂರೈಸಬೇಕು. ದೂರದಲ್ಲಿ ಎಲ್ಲಿಯಾದರೂ ಸಿಕ್ಕಬಹುದು. ಅಲ್ಲಿಂದ ತರುವುದು ಬಹು ಶ್ರಮ ಸಾಧ್ಯ. ಭಕ್ತರೆಲ್ಲ ದಣಿದು ಹೋಗುವರು. ಅದಕ್ಕಿಂತ ಉತ್ಸವವನ್ನೇ ನಿಲ್ಲಿಸಿಬಿಟ್ಟರೆ ತಪ್ಪೇನು? ಎಂದು ವಿಚಾರಿಸಿಕೊಂಡು ಸಿದ್ಧನು ಭಕ್ತರ ಮುಂದೆ ತನ್ನ ಅಭಿಪ್ರಾಯವನ್ನು ಆಡಿ ತೋರಿಸಿದನು.

ಆ ಮಾತು ಕೇಳಿ ಭಕ್ತ ಜನರಿಗೆ ಬಹಳ ವಿಷಾದವಾಯಿತು. ಉತ್ಸವ ಮಾಡಬೇಕು. ಕಾಯಾ-ವಾಚಾ-ಮನಃಪೂರ್ವಕವಾಗಿ ಆಗ ದುಡಿಯಬೇಕು. ದಣಿಯಬೇಕು. ಆ ತ್ಯಾಗಮೂಲಕವಾದ ಸುಖದ ಸವಿ ನೋಡಬೇಕು. ಆ ನಿರ್ವಿಷಯಾನಂದವನ್ನು ಅನುಭವಿಸಬೇಕು. ತಮಗೆ ದೇವರು ಕೊಟ್ಟ ಶಕ್ತಿಯನ್ನು ಸದ್ವಿನಿಯೋಗ ಮಾಡಬೇಕು. ಎಂಬ ಉತ್ಸಾಹ ಭಕ್ತರಿಗೆ. ಸದ್ಗುರುವಿನ ಮಾತಿನಿಂದ ಅವರ ಉತ್ಸಾಹ ಭಂಗಾರವಾದಂತಾಯಿತು. ತಂತಮ್ಮಲ್ಲಿಯೇ ವಿಚಾರ ಮಾಡಿಕೊಂಡರು. ನಮ್ಮ ಭಕ್ತಿಯ ದೃಢತೆಯನ್ನು ನೋಡಲು ಸದ್ಗುರು ಈ ಮಾತನ್ನೇಕೆ ಆಡಿರಬಾರದು? ಈ ಸಾರೆ ನೀರು ಇಲ್ಲವೆಂಬುದನ್ನು ನಾವೂ ಬಲ್ಲೆವು. ಆದರೆ ಇಷ್ಟು ಜನ ಭಕ್ತರಿದ್ದೇವೆ. ಸಿಕ್ಕಲ್ಲಿಂದ ನೀರು ತಂದು ಹಾಕುವ ಕಾರ್ಯ ಅಸಾಧ್ಯವೇನೂ ಅಲ್ಲ. ನಾವೆಲ್ಲ ಮನಸ್ಸು ಮಾಡಿದರೆ ನಿರಾಯಾಸ ಉತ್ಸವ ನಡೆದು ಹೋಗಬಹುದು. ಇದನ್ನು ಮನದಲ್ಲಿಟ್ಟುಕೊಂಡು ನಮ್ಮನ್ನು ಪರೀಕ್ಷಿಸುವುದಕ್ಕಾಗಿ ಸ್ವಾಮಿ ಹೀಗೆ ಮಾತಾಡಿರುವನು. ಎಷ್ಟೋ ವರ್ಷಗಳಿಂದ ನಿರಾತಂಕವಾಗಿ ನಡೆಯುತ್ತ ಬಂದ ಉತ್ಸವವನ್ನು ನೀರಿಲ್ಲವೆಂಬ ಒಂದು ಕಾರಣಕ್ಕಾಗಿ ನಿಲ್ಲಿಸುವುದು ಸ್ವಾಮಿ ಭಕ್ತರಿಗೆ ಭೂಷಣವೆನಿಸುವ ಮಾತಲ್ಲ. ಒಂದು ವೇಳೆ ಉತ್ಸವ ನಿಲ್ಲಿಸಿದರೆ ನಿಂದಕರ ಬಾಯಿ ಬೇಗ ತೆರೆದಂತಾದೀತು. ಅವರು ಬಗೆಬಗೆಯಿಂದ ಸದ್ಗುರುನಾಥನನ್ನು, ಅವರ ಭಕ್ತರೆನಿಸುವ ನಮ್ಮನ್ನು ಗೇಲಿ ಮಾಡಬಹುದು. 'ನಿಮ್ಮ ಸದ್ಗುರು ಸಿದ್ಧಪುರುಷನೆಂದು ಹೇಳುತ್ತೀರಿ. ನೀರಿಲ್ಲವೆಂದರೆ ಪಾತಾಳ ಗಂಗೆಯಿಂದ ಪಡೆಯಬಹುದು. ಅಥವಾ ಸ್ವರ್ಗಲೋಕದ ಗಂಗೆಯನ್ನು ಪ್ರಾರ್ಥಿಸಿ ಮಳೆ ತರಿಸಬಹುದು. ಇದು ಸಾಧ್ಯವಾಗದೆಂದು ಹೇಳುವುದಾದರೆ ಅವನು ಸಿದ್ಧನಾಗುವುದು ಹೇಗೆ? ಅಂಥವನ ಪೂಜೆಯನ್ನಾದರೂ ನೀವು ಯಾವ ಕಾರಣಕ್ಕಾಗಿ ಮಾಡುತ್ತೀರಿ? ಪ್ರತಿದಿನ ಬಾಯಿತುಂಬ ಸಿದ್ಧನನ್ನು ಹೊಗಳ್

ಏರಲ್ಲ. ಈ ಪ್ರಸಂಗದಲ್ಲಿ ಅವನ ಮಹಿಮೆ ಆದೇಕೆ ಹೊರಬೀಳುವುದಿಲ್ಲ. ಆ ನಿಮ್ಮ ಗುರುವಿನ ಮಾತಿರಲಿ ನೀರಿಲ್ಲವೆಂದು ಜನರ ದಿನಚರಿ ಏನಾದರೂ ನಿಂತಿರುವುದೇ ? ಈ ಸಾರೆ ಮಳೆ ಕಡಿಮೆಯಾದುದರಿಂದ ನೀರಿನ ಕೊರತೆ ಯಾದುದು ನಿಜ. ಹಾಗೆಂದು ಮಾಡುವ ಕಾರ್ಯಗಳನ್ನು ನಿಲ್ಲಿಸುವುದೇ ? ಲಕ್ಷಾವಧಿ ಭಕ್ತರಿದ್ದೀರಿ. ನೀವು ಉತ್ಸವ ನಿಲ್ಲಿಸಿದ್ದು ತಪ್ಪು.'

ಹೀಗೆ ಯಾವ ನಿರ್ಣಯವೂ ಇಲ್ಲವೇ ಭಕ್ತ ಜನರಲ್ಲಿ ಮಾತು ಬೆಳೆಯು ತ್ತಿರಲು ತುಕ್ಕಪ್ಪನೆಂಬ ಭಕ್ತನು 'ಪರಿಸ್ಥಿತಿಯನ್ನು ಸರಿಯಾಗಿ ತಿಳಿಯದೇ ಸದ್ಗುರುವನ್ನಾಗಲಿ ಭಕ್ತರನ್ನಾಗಲಿ ನಿಂದಿಸುವವರು ನಿಂದಿಸಲಿ. 'ಈ ಸಾರೆ ನೀರಿಲ್ಲವಾದುದರಿಂದ ಉತ್ಸವ ಬೇಡ. ನಿಮಗೆ ನೀರು ಪೂರೈಸುವುದು ಶ್ರಮವಾಗುತ್ತದೆ. ಎಂದು ಸದ್ಗುರುನಾಥ ಹೇಳಿದ್ದು ಭಕ್ತಾನುಕಂಪದಿಂದ ತನ್ನ ಭಕ್ತರು ದಣಿವಿಲ್ಲದೇ ಸುಖವಾಗಿರಬೇಕೆಂದು ಅವನ ಅಪೇಕ್ಷೆ. ಈಗ ಯಾವುದೇ ಬಗೆಯ ಸದ್ಗುರು ಸೇವೆ ಎಂದರೆ ನಮಗೆ ಆನಂದವಾಗುತ್ತದೆ. ಸೇವೆ ದೊರೆಯದೇ ಇದ್ದರೇ ದಣಿವು-ದುಃಖ-ಆಲಸ್ಯಗಳುಂಟಾಗುತ್ತವೆ. ಎಂಬುದನ್ನು ತೋರಿಸಿ ಕೊಡಬೇಕು. ಅಂದರೆ ಸದ್ಗುರುನಾಥನೂ ಸಂತೋಷ ಪಡುವನು. ನಿಂದಿಸುವವರೂ ಸುಮ್ಮನಾಗುವರು. ಈ ಉತ್ಸವ ಕಾರ್ಯದಲ್ಲಿ ನೀರು ತಂದು ಪೂರೈಸುವ ಕಾರ್ಯ ನಮ್ಮಿಂದಾಗುತ್ತದೆ. ಹೀಗೆ ನಮ್ಮಿಂದಾ ಗುವ ಕಾರ್ಯಕ್ಕೆ ಸದ್ಗುರುವಿನ ಮುಂದೆ ಹೋಗಿ ನಿನ್ನ ದೈವೀ ಮಹಿಮೆ ಯನ್ನು ತೋರಿಸೆಂದು ಹೇಳುವುದು ಬೇಡ. ಒಂದು ವೇಳೆ ನಾವು ಹಾಗೆ ಮೊರೆ ಇಟ್ಟರೆ ಅವನಿಗೆ ಹೊಂಡ ತುಂಬಿಸುವ ಕಾರ್ಯ ಅಸಾಧ್ಯವಾದುದೇನೂ ಅಲ್ಲ. ಆದರೆ ಒರೆಗೆ ಹಚ್ಚಿ ದೈವೀ ಮಹಿಮೆಯನ್ನು ಪರೀಕ್ಷಿಸುವುದು ಭಕ್ತರ ಧರ್ಮ ವಲ್ಲ.' ಎಂದು ಹೇಳಿದನು. ಅವನ ಮಾತು ಕೇಳಿ ಎಲ್ಲರಿಗೂ ಸಮಾಧಾನವೆ ನಿಸಿ ಬೇಕಾದುದಾಗಲಿ ಉತ್ಸವ ಕಾರ್ಯ ನಿಲ್ಲಿಸುವಂತಿಲ್ಲ. ಎಂದು ಸಂಕಲ್ಪ ಮಾಡಿಕೊಂಡರು.

ಅದರಂತೆ ಅವರೆಲ್ಲ ಕೂಡಿಕೊಂಡು ಸದ್ಗುರು ಬಳಿಗೆ ಬಂದು ಪ್ರಾರ್ಥಿಸಿ ದರು. ' ಸದ್ಗುರುನಾಥ ಈ ಸಾರೆ ನೀರು ಇಲ್ಲ. ಆದ ಕಾರಣ ಉತ್ಸವ ಬೇಡ. ದೂರದಿಂದ ತರುವುದು ನಿಮಗೆ ಬಹಳ ತ್ರಾಸವಾಗುತ್ತದೆ ಎಂದು ಹೇಳಿದಿರಿ. ನಮಗೆ ಎಷ್ಟೇ ತ್ರಾಸವಾಗಲಿ. ವರ್ಷಕ್ಕೊಮ್ಮೆ ನಮಗೆ ದೊರೆಯು

ನಿಮ್ಮ ಸೇವಾಭಾಗ್ಯವನ್ನು ನಾವು ಕಳೆದುಕೊಳ್ಳಲಾರೆವು. ನೀವು ಅಪ್ಪಣೆ ಕೊಡುವುದಾದರೆ ನಾವು ಸಾಕಾಗುವಷ್ಟು ನೀರು ತಂದು ಹಾಕಿ ಉತ್ಸವದ ಕಾರ್ಯ ಮುಗಿಸುತ್ತೇವೆ.'

ಭಕ್ತರ ಮಾತು ಕೇಳಿ ಸದ್ಗುರು ನುಡಿದನು—

'ಹಾಗಾದರೆ ಉತ್ಸವವಾಗಲೇಬೇಕೆಂದು ನಿಮ್ಮ ಅಭಿಪ್ರಾಯವೇ?'

'ನೀರಿನ ಕೊರತೆ ಎಂಬ ಒಂದೇ ಕಾರಣದಿಂದ ಉತ್ಸವ ನಿಲ್ಲಿಸುವುದು ಬೇಡ. ಇದೊಂದು ಮಹಾಯಾತ್ರೆ ಎಂದು ತಿಳಿದು ಬರುತ್ತಿರುವ ಅಸಂಖ್ಯ ಜನರಿಗೆ ಉತ್ಸವ ನಿಂತರೆ ಬಹಳ ನಿರಾಶೆಯಾಗುವುದು. ನಮಗೆ ಬೇಕಾದಷ್ಟು ಶ್ರಮವಾದರೂ ಚಿಂತೆ ಇಲ್ಲ. ಶ್ರಮ ಪರಿಹಾರ ಮಾಡುವ ನೀನು ಇರುವಾಗ ನಾವು ಶ್ರಮವನ್ನು ಲೆಕ್ಕಿಸುವುದಿಲ್ಲ.'

'ಹಾಗಾದರೆ ಉತ್ಸವ ನಡೆಯಲಿ, ನನ್ನದೇನೂ ಅಡ್ಡಿ ಇಲ್ಲ. ಆದರೆ ನಿಮ್ಮ ಪಾಲಿನ ಕರ್ತವ್ಯಗಳನ್ನು ಮಾತ್ರ ದಕ್ಷರಾಗಿ ನೆರವೇರಿಸಿರಿ ಆಯಿತು.'

ಎಂದು ಗುರುದೇವನು ಒಪ್ಪಿಗೆಕೊಡಲು ಆ ಭಕ್ತರೆಲ್ಲ ಬಹಳ ಸಂತೋಷ ದಿಂದ ಮನೆಗೆ ತೆರಳಿದರು.

ದಕ್ಷತೆಯಿಂದ ನಿಮ್ಮ ಪಾಲಿನ ಕರ್ತವ್ಯವನ್ನು ನೀವು ನೆರವೇರಿಸಿರಿ, ಎಂದು ಸಿದ್ಧನು ತನ್ನ ಭಕ್ತರ ಮೇಲೆ ಕಾರ್ಯಭಾರವನ್ನು ಹೊರಿಸಿದ್ದರೂ ಆ ಕಾರ್ಯ ಮಾಡತಕ್ಕ ಭಕ್ತರ ಸುಖ-ದುಃಖಗಳನ್ನು ನೋಡಿಕೊಳ್ಳುವ ಭಾರ ವನ್ನು ಸದ್ಗುರು ವಹಿಸಲೇಬೇಕಾಗಿತ್ತು. ಅದರಂತೆ ಮರುದಿನ ಒಂದು ಮಣ್ಣು ಮಡಿಕೆಯನ್ನು ಹಿಡಿದುಕೊಂಡು ಹೊಂಡದಲ್ಲಿಳಿದು ಸ್ವಸ್ಥವಾಗಿ ಕುಳಿತನು. ಒಂದು ಘಳಿಗೆಯಾಯಿತು, ಎರಡು ಮೂರು ಘಳಿಗೆಗಳವರೆಗೆ ಧ್ಯಾನಸ್ಥನಾಗಿ ಕುಳಿತು ಬಳಿಕ ಆ ಪಾತ್ರೆ ಹಿಡಿದುಕೊಂಡು ಮೇಲಕ್ಕೆ ಬಂದನು. ಹೊಂಡ ಕ್ಕಿಳಿಯುವಾಗ ಬರಿದಾಗಿದ್ದ ಪಾತ್ರೆ ಈಗ ನೀರಿನಿಂದ ತುಂಬಿತ್ತು. ಆ ಲೀಲೆ ಯನ್ನು ಕಂಡ ಭಕ್ತರು ಬೆರಗಾಗಿ ನಿಂತರು. ಸಿದ್ಧನು ಮಾತ್ರ ಮೌನವಾ ಗಿಯೇ ಇದ್ದನು. ಅಷ್ಟರಲ್ಲಿ ದೊಡ್ಡ ಗಾಳಿ ಬೀಸಿತು, ಎತ್ತಿಂದಲೋ ಮೋಡ ಮೇಲೇರಿದವು. ಆಕಾಶ ಮೇಘಾಚ್ಛಾದಿತವಾಗಿ ಗುಡುಗು-ಸಿಡಿಲು-ಮಿಂಚು ಗಳ ಆರ್ಭಟ ಆರಂಭವಾಯಿತು. ಧಾರಾಕಾರವಾಗಿ ಮಳೆ ಸುರಿಯತೊಡ ಗಿತು. ದೊಡ್ಡ ಮಳೆಯಾದುದರಿಂದ ಒಂದೆರಡು ಘಂಟೆಗಳಲ್ಲಿ ಹೊಂಡ ತುಂಬಿ

ಹರಿಯಿತು. ಭಕ್ತರ ಸಂತೋಷಕ್ಕೆ ಪಾರವುಳಿಯಲಿಲ್ಲ. ಓಡುತ್ತ ಹೋಗಿ ಅವರು ಅತ್ಯಾನಂದದಿಂದ ಹೊಂಡ ತುಂಬಿತೆಂದು ಸಿದ್ಧನಿಗೆ ವಾರ್ತೆ ಹೇಳಲು ಹಸನ್ಮುಖನಾಗಿ ಸಿದ್ಧನು ನೋಡಲು ಬಂದನು. ಆಗ ಕೆಲವು ಮುತ್ತೈದೆಯರು ಹೊಸದಾಗಿ ಭೂಮಿಗಿಳಿದ ಗಂಗೆಯನ್ನು ಪೂಜಿಸಿ ಆರತಿ ಬೆಳಗಿ ಸಿದ್ಧನನ್ನು ವಂದಿಸಿದರು.

ಇದನ್ನರಿತ ನಿಂದಕರಿಗೆ ನಿಜವಾಗಿ ಪಶ್ಚಾತ್ತಾಪವೆನಿಸಿ ಸದ್ದಿಲ್ಲದಂತೆ ಸದ್ಗುರು ಸನ್ನಿಧಿಗೆ ಬಂದು 'ನಿಮ್ಮ ಮಹಿಮೆಯನ್ನರಿಯದೇ ನಾವು ಹಿಂದೆ ಅನೇಕ ಬಗೆಯಾಗಿ ನಿಂದೆ ಮಾಡುತ್ತಿದ್ದೆವು. ಕರುಣಾಶಾಲಿಗಳಾದ ತಾವು ನಮ್ಮನ್ನು ಕ್ಷಮಿಸಬೇಕು.' ಎಂದು ಕೈಮುಗಿಯಲು 'ಅಪ್ಪಗಳಿರ, ನಾನು ಕ್ಷಮಿಸಲಿಕ್ಕೆ ಯಾರು? ದಂಡಿಸಲಿಕ್ಕೆ ಯಾರು? ಸರ್ವಸಾಕ್ಷಿಯಾದ ಭಗವಂತ ಅವುಗಳನ್ನೆಲ್ಲ ನೋಡಿಕೊಳ್ಳುತ್ತಾನೆ. ಇರಲಿ. ನೀವು ಈಗ ಕ್ಷಮೆ ಬೇಡುವಂಥ ಕಾರಣವಾದರೂ ಏನು? ನಿಮ್ಮ ಮಾತಿನಿಂದ ಭಗವಂತನಿಗೆ ತಾನು ಇಲ್ಲಿಯ ಜನಕ್ಕೆ ನೀರು ಕೊಡದೇ ಇರುವ ತಪ್ಪಿನ ಅರಿವಾಗಿ ತನ್ನ ತಪ್ಪು ತಿದ್ದಿಕೊಂಡು ಸಮೃದ್ಧಿಯಾಗುವಂತೆ ನೀರು ಕೊಟ್ಟನು. ನಿಮ್ಮಿಂದ ಎಲ್ಲ ಜನರಿಗೂ ಸುಖವಾಯಿತು. ನೀವು ನಿಂದೆ ಮಾಡಿದುದು ಕೂಡ ಭಗವಂತನ ಸೇವೆಯೇ. ಒಂದು ರೀತಿ ಇದು ವಿರೋಧ ಭಕ್ತಿಯೇ. ಈ ವಿರೋಧ ಭಕ್ತಿಯಿಂದಲೇ ಎಷ್ಟೋ ಜನರು ಉದ್ಧಾರ ಹೊಂದಿದರೆಂದು ಪುರಾಣಗಳಲ್ಲಿ ಕಥೆಗಳಿವೆ. ನಿಮ್ಮ ಭಕ್ತಿಗೆ ಶಕ್ತಿ ಬಹಳ. ಭಗವಂತ ನಿಮಗೆ ಬಹುಬೇಗ ಪ್ರಸನ್ನವಾಗುತ್ತಾನೆ. ಪ್ರೇಮ ಭಕ್ತಿಗೆ ಇಷ್ಟು ಬೇಗ ಅವನು ಒಲಿಯುವುದಿಲ್ಲ. ಆದರೆ ಒಂದು ಮಾತು ಮಾತ್ರ ನಿಜ. ಪ್ರೇಮುಳ ಭಕ್ತರಿಗೆ ಭಗವಂತನ ಕೃಪಾಕಟಾಕ್ಷದ ಅನುಭವವಾಗುತ್ತದೆ. ನಿಮಗೆ ಅದಿಲ್ಲ. ಇದು ಹೇಗಾದರೂ ಇರಲಿ. ಒಟ್ಟು ಭಗವಂತನ ಸ್ಮರಣೆ ಇದ್ದರಾಯಿತು. ಅವನು ಸಂತುಷ್ಟನಾಗುತ್ತಾನೆ. ಅವನ ಪ್ರೀತಿ ಸಂಪಾದನೆಯಾದರೆ ತೀರಿತು. ಫಲ ಸಿಕ್ಕೇ ಸಿಗುತ್ತದೆ.'

ಎಂದು ಸಿದ್ಧನು ಅಮೃತೋಕ್ತಿಗಳನ್ನಾಡತೊಡಗಲು ಅವರ ಕಣ್ಣುಗಳು ಹಸಿಗೂಡಿದವು. ಸಿದ್ಧ ತೋರಿದ ಈ ಸಮಾನತೆಯ ದೃಷ್ಟಿಯು ಅವರಿಗೆ ಹೊಸದಾಗಿತ್ತು. ಸಾಮಾನ್ಯರಲ್ಲಿ ಇದನ್ನು ಕಾಣುವುದು ಸಾಧ್ಯವಿಲ್ಲ. ಅಘಾ

ತಕ್ಕೆ ಪ್ರತ್ಯಾಘಾತವೆಂಬುದು ಲೋಕರೀತಿಯಾದರೆ ಆಘಾತಕ್ಕೆ ಪ್ರತ್ಯಾಘಾತವಿಲ್ಲದಿರುವುದು ಮಹಾತ್ಮರ ರೀತಿ.

ಮನಃಪೂರ್ವಕವಾಗಿ ಆ ಜನರು ಉತ್ಸವ ಕಾರ್ಯದಲ್ಲಿ ಭಾಗಿಗಳಾದರು.

೨೮

ಪಂಚಾಕ್ಷರ ಮಿದಂ ಪುಣ್ಯಂ ಯಃ ಪಠೇಚ್ಛಿವಸನ್ನಿಧೌ ।
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥

—ಶಿವಪಂಚಾಕ್ಷರಸ್ತೋತ್ರ

(ಶಿವನ ಸನ್ನಿಧಿಯಲ್ಲಿ ಈ ಪಂಚಾಕ್ಷರ ನಾಮಮಂತ್ರ ಜಪವನ್ನು ಯಾರು ಮಾಡುವರೋ ಅವರು ಶಿವಲೋಕವನ್ನು ಹೊಂದಿ ಶಿವನೊಡನೆ ಆನಂದಿಸುತ್ತಾರೆ.)

ಭಗವದ್ಭಜನೆಯನ್ನು ಹೇಗೆ ಮಾಡಿದರೂ ಸರಿಯೇ. ಅದರಿಂದ ಫಲ ದೊರೆಯುತ್ತದೆ ಎಂದು ಸತ್ಪುರುಷರು ಹೇಳುವುದುಂಟು. ಕೆಲವರು ನಾಮ ಮಂತ್ರವನ್ನು ಅಗ್ನಿಗೆ ಹೋಲಿಸುತ್ತಾರೆ. ಅಗ್ನಿಯನ್ನು ನಾವು ತಿಳಿದಾದರೂ ಮುಟ್ಟಲಿ. ತಿಳಿಯದಾದರೂ ಮುಟ್ಟಲಿ. ಅದರ ದಾಹಕ ಗುಣವೇನೂ ಹೋಗುವುದಿಲ್ಲ. ಅದು ಹಿಡಿದವರ ಅನುಭವಕ್ಕೆ ಬರುವಂಥ ವಿಷಯ. ಆದುದರಿಂದ ಯಾವುದೊಂದಕ್ಕೆ ಭಗವಂತನ ಹೆಸರಿಟ್ಟು ಅಥವಾ ವಿನೋದದಿಂದ ತಿರಸ್ಕಾರದಿಂದ ಸಿಟ್ಟಿನಿಂದ ಹೇಗೆ ನಾಮಮಂತ್ರವನ್ನು ಉಚ್ಚರಿಸಿದರೂ ಸರಿ. ಅದರಿಂದ ಪಾಪ ಸಂಹಾರವಾಗುವುದೆಂದು ಪುರಾಣಗಳಲ್ಲಿ ಹೇಳಿದೆ. ವಿಶೇಷ ಫಲ ಬೇಕೆನ್ನುವವರು ಸ್ಥಳಕಾಲಗಳ ಶುದ್ಧಿಯನ್ನೂ ನೋಡಬೇಕೆಂದು ವಚನಗಳಿವೆ.

ಹಾಗೆ ಕೆಲವು ಭಕ್ತರು ಪಂಚ-ಪಂಚ ಉಷಃಕಾಲಕ್ಕೆದ್ದು ಪವಿತ್ರ ಭೂಮಿ ಎನಿಸಿದ ಸಿದ್ಧಾಶ್ರಮಕ್ಕೆ ಬಂದು ಶಿವನಾಮ ಜಪ ಮಾಡುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಪಂಚ-ಪಂಚಉಷಃಕಾಲವು ಪ್ರಶಾಂತವಾದ ಪವಿತ್ರ ವೇಳೆ. ಸಿದ್ಧನ ವಾಸದಿಂದ ಆವನಾಶ್ರಮವು ಪವಿತ್ರಭೂಮಿ. ಅಲ್ಲಿ

ನಡೆಯುವ ಭಗವನ್ನಾಮದ ಭಜನೆ ಎಂಥ ಫಲದಾಯಿಕವಾಗಿರಬೇಡ. ಒಬ್ಬರನ್ನು ಕಂಡು ಒಬ್ಬರು ಎಂದಂತೆ ಕೆಲವೇ ಜನರಿಂದ ಪ್ರಾರಂಭವಾದ ಈ ಪದ್ಧತಿ ಬರಬರುತ್ತ ಬಹು ವ್ಯಾಪಕವಾಯಿತು. ಸ್ತ್ರೀ–ಪುರುಷ, ಬಾಲ–ಬಾಲಿಕೆಯರಾದಿಯಾಗಿ ಜನ ಬಂದು ಭವನದಲ್ಲಿ ಭಾಗವಹಿಸತೊಡಗಿದರು. ಯಾರೋ ಭಕ್ತರೊಬ್ಬರು ಬೆಳಗು ಮುಂಜಾವದಲ್ಲಿ ಯೋಗ್ಯ ವೇಳೆಗೆ ಬಂದು ಜನರು ಏಳುವುದಕ್ಕೆಂದು 'ನಮಃ ಶಿವಾಯ' ಎಂದು ಪಠಿಸುತ್ತ ಮನೆ ಮನೆ ತಿರುಗತೊಡಗಿದರು. ಜನರಿಗೆ ಅದೊಂದು ಸೂಚನೆಯೇ ಆದಂತಾಯಿತು. ತಪ್ಪದೇ ಆ ಭಕ್ತರು ಬಂದು ಮನೆ ಬಾಗಿಲದಲ್ಲಿ 'ನಮಃ ಶಿವಾಯ. ನಮಃ ಶಿವಾಯ' ಎನ್ನುವುದೇ ತಡ. ದಡ–ಬಡ ಬಾಗಿಲು ತೆರೆದು ಕೈಕಾಲು–ಮೋರೆ ತೊಳೆದು ಜನರು ಮಠಕ್ಕೆ ಧಾವಿಸುವರು. ಹೀಗೆ ಜನರನ್ನೆಚ್ಚರಿಸುವ ಭಕ್ತರೂ ಬಹು ಗಟ್ಟಿಗರು. ಆ ಮನೆಯವರು ಎದ್ದು ಬಾಗಿಲು ತೆರೆಯುವವರೆಗೆ ಅವರ ಮನೆಯ ಮುಂದೆ 'ನಮಃ ಶಿವಾಯ' ನಾಮ ಪಠಣವಿದ್ದುದೇ. ಅವರ ಕಾರ್ಯಕ್ರಮ ಕಂಡು ಕ್ರಮೇಣ ಜನರು ಅವರ ಹೆಸರನ್ನು ಬಿಟ್ಟು 'ನಮಃ ಶಿವಾಯ' ಎಂದೇ ಕೂಗತೊಡಗಿದರು. ಹಾಗೆಂದರೆ ಅವರಿಗೇನೂ ಕೋಪವಿಲ್ಲ. ತಮಗಾದ ಸಂತೋಷ ವ್ಯಕ್ತಪಡಿಸಲಿಕ್ಕೆ ಮುಖದಲ್ಲಿ ಮಂದಹಾಸವನ್ನು ತೋರಿ ಜನಸೇವೆ ಎಂದಾದರೂ ಸರಿಯೇ. ಭಗವತ್ಸೇವೆ ಎಂದರೂ ಸರಿಯೆ. ಒಟ್ಟು ವಿಶಿಷ್ಟ ಸೇವೆಯನ್ನು ಸಾಧಿಸಿಕೊಳ್ಳುವರು. ಸಂಸಾರಾಸಕ್ತರಾದವರಿಗೆ ಅವರ ಕಾರ್ಯ ಒಳ್ಳೇ ಕುತೂಹಲಕರವೆನಿಸಿತ್ತು. ಹೇಗೇ ಆಗಲಿ ಅವರೊಂದು ರೀತಿ ನಮಗೆ ಉಪಕಾರ ಮಾಡುವರೆಂದು ಅವರು ತಿಳಿಯುತ್ತಿದ್ದರು. ಅದರಿಂದ ಅವರನ್ನು ಕಂಡರೆ ಎಲ್ಲರದೂ ಪ್ರೀತಿ. ವಿಶ್ವಾಸ. ಮಳೆಇರಲಿ, ಮೋಡವಿರಲಿ. ಮೈಗೆ ಮೆತ್ತುವಂಥ ಕತ್ತಲೆ ಇರಲಿ. ಅವರು ತಮ್ಮ ಕಾರ್ಯಕ್ರಮ ತಪ್ಪುವವರಲ್ಲ.

ಹೀಗಿರಲು ಒಂದು ತೃತೀಯ ಪ್ರಹರದಲ್ಲೆದ್ದು ಆ ಭಕ್ತರು ಬೀದಿಗಳಲ್ಲಿ 'ನಮಃ ಶಿವಾಯ' ಎಂದು ಪಠಿಸುತ್ತ ಸಾಗಿದರು. ಜನರು ಎದ್ದು ಮುಖ ಮಾರ್ಜನಾದಿಗಳಲ್ಲಿ ತೊಡಗಿದರು. ಅಷ್ಟರಲ್ಲಿ ಒಂದು ಕಡೆಗೆ 'ಗಸ್ತು' ತಿರುಗುವ ಸಿಪಾಯಿ ಜನರು ಭೆಟ್ಟಿಯಾಗಿ ನಿಲ್ಲು ಎಂದು ನೀನು ಯಾರು? ಇದೇನು ಉದ್ಯೋಗ? ಯಾಕೆ ಹುಚ್ಚನಂತೆ ಕೂಗುತ್ತೀ. ಇದರಿಂದ ನಿದ್ರೆ

ಮಾಡುವ ಜನರಿಗೆ ತ್ರಾಸವಾಗುವುದೆಂದು ತಿಳಿಯುವುದಿಲ್ಲವೇ? ಕೂಗಬೇಡ. ಬೆಳಗಾಗುವವರೆಗೆ ಇಲ್ಲಿಯೇ ಕುಳಿತುಬಿಡು. ಮುಂದೆ ಹೆಜ್ಜೆ ಇಟ್ಟಿದ್ದಾದರೆ ಒಳಿತಾಗಲಿಕ್ಕಿಲ್ಲ.' ಎಂದು ಗದರಿಸಿದರು. ಅವರ ಮಾತನ್ನು ಕೇಳಿ ಆ ಭಕ್ತರು ಸ್ವಾಭಾವಿಕವಾದ ತಮ್ಮ ಮಂದಹಾಸದಿಂದ ಉತ್ತರ ಕೊಟ್ಟು 'ನಮಃ ಶಿವಾಯ' ಎಂದು ಕೂಗುತ್ತ ಮುಂದೆ ಮುಂದೆ ಹೋಗತೊಡಗಿದರು. ಈ ರೀತಿಯನ್ನು ಕಂಡು ಇಬ್ಬರು ಸಿಪಾಯಿ ಜನರಿಗೆ ಒಳ್ಳೇ ಕೋಪವುಂಟಾಗಿ ಓಡುತ್ತ ಹೋಗಿ ಅ ಭಕ್ತರನ್ನು ಹಿಡಿದು ಕೇಳಿದರು. 'ಯಾಕೆ ನಮ್ಮ ಮಾತು ನಿನಗೆ ಕೇಳಿಸಲಿಲ್ಲವೇ? ನಿನ್ನ ಕಿವಿ ಸರಿಯಾಗಿರುವವಷ್ಟೇ? ನಿನಗೆಲ್ಲಿಯೋ ಮದ ಬಂದಹಾಗಿದೆ. ನಡೆ ಚೌಕಿಗೆ ನಿನ್ನ ಮದವಿಳಿಸುತ್ತೇವೆ.' ಎಂದು ಸಿಕ್ಕಂತೆ ಮಾತಾಡಿ ಅವರೇನು ಹೇಳುತ್ತಾರೆ ಎಂಬುದನ್ನು ಕೂಡ ಕೇಳಿಕೊಳ್ಳುವಷ್ಟು ತಾಳ್ಮೆ ತೋರದೆ ಕೈಗಳಿಗೆ ಹಗ್ಗ ಹಚ್ಚಿ ಎಳೆಯತೊಡಗಿದರು. ಆ ಭಕ್ತರ ಕೈಗೆ ಹಗ್ಗ ಕಟ್ಟಿದರೇನಾಯಿತು? ಬಾಯಿಗೆ ಯಾವ ಬಂಧನವೂ ಇರಲಿಲ್ಲ. 'ನಮಃ ಶಿವಾಯ, ನಮಃ ಶಿವಾಯ' ಎಂದು ನಾಮ ಘೋಷ ನಡೆದೇ ಇತ್ತು. ಸಾತ್ವಿಕ ವಾತಾವರದಲ್ಲಿ ಉಸಿರಾಡಿಸದ ಆ ಸಿಪಾಯಿಗಳಿಗೆ ಇದರಿಂದ ಬಹು ಬೇಸರವೆನಿಸಿತು. ಮಂಗಗಳಿಗೂ ಮಂಗಳಕರವೆನಿಸುವ ಭಗವನ್ನಾಮವು ಕಿವಿಗೆ ಬಹು ಕರ್ಕಶವಾಗಿ ಕೇಳಿತು. ಎಲ್ಲಕ್ಕಿಂತ ಹೆಚ್ಚಾಗಿ ತಾವು ಹಾಗೆ ಕೂಗಬೇಡವೆಂದು ಹೇಳಿದರೂ ಇವರು ಕೇಳದೇ ಪುನಃ ಪುನಃ ಕೂಗಿ ತಮ್ಮನ್ನು ಅಪಮಾನಗೊಳಿಸುತ್ತಿರುವರೆಂದು ಅವರು ಬಗೆದು ಆ ಭಕ್ತರ ಬಾಯಲ್ಲಿ ಅರಿವೆಯ ಚಂಡು ತುರುಕಿ ಬಾಯಿ ಮುಚ್ಚಿಸಿದರು. ಸರಿ ಬಾಯಿ ಮುಚ್ಚಿಸಿದರೇನಾಯಿತು. ಮನಸ್ಸು ಸ್ವಾಧೀನವಿತ್ತಲ್ಲ. ಮನಸ್ಸಿನಲ್ಲಿಯೇ 'ನಮಃ ಶಿವಾಯ, ನಮಃ ಶಿವಾಯಃ' ಎಂದು ಆ ಭಕ್ತರು ಜಪಮಾಡಹತ್ತಿದರು.

ಬೆಕ್ಕು ನಾಯಿ ನಿಜವಾಗಿ ಕ್ಷುದ್ರ ಜೀವಿಗಳು ನಿಜ. ಸಾಕಿದಂಥ ಮನುಷ್ಯ ಆ ಪ್ರಾಣಿಗಳಲ್ಲಿ ಅಭಿಮಾನ ವಹಿಸಿ ಅವುಗಳನ್ನು ರಕ್ಷಿಸುವುದಕ್ಕೆ ಆಸ್ಥೆ ವಹಿಸುತ್ತಾನೆ. ಎಂದಮೇಲೆ ಸರ್ವ ಸತ್ತಾಧೀಶನಾದ ಭಗವಂತ ತನ್ನ ಭಕ್ತರ ವಿಷಯದಲ್ಲಿ ಅಭಿಮಾನ ವಹಿಸಬೇಡವೇ? ಪರಮೇಶ್ವರ ರೂಪನಾದ ಸಿದ್ಧ ತನ್ನ ಭಕ್ತರಲ್ಲಿ ಅನುರಾಗ ತಾಳಿ ಚಿಂತಿಸತೊಡಗಿದನು. ಮೇಲಿದ್ದನು 'ನಮಃ

ಶಿವಾಯ' ಭಕ್ತನು ಯಾವ ಅನ್ಯಾಯವನ್ನೂ ಮಾಡಿಲ್ಲ. ಅಂಥವನನ್ನು ಕಲ್ಲೆದೆಯವರಾದ ಸಿಪಾಯಿಗಳು ಕಾರಣವಿಲ್ಲದೆ ದಂತಿಸುತ್ತಿರುವರಲ್ಲ. ಆಲಸಿಗಳಾದ ಸಾಂಸಾರಿಕರು ಮಂಗಳಕರ ಉಷಃಕಾಲದಲ್ಲಿ ಎದ್ದರೆ ಎದ್ದರು ಇಲ್ಲವಾದರೆ ಇಲ್ಲ. ಅಂಥವರನ್ನು ಜಾಗ್ರತಗೊಳಿಸಿ 'ಎದ್ದೇಳಿರಿ ಪುಣ್ಯ ಸಂಗ್ರಹ ಮಾಡಿಕೊಳ್ಳಿರಿ. ಮನುಷ್ಯ ದೇಹ ಅಶಾಶ್ವತ ಭವಿಷ್ಯ ಕಾಲದಲ್ಲಿ ವಿಶ್ವಾಸ ಬೇಡ. ಇಂದಿನ ಕಾಲ ಮಾತ್ರ ನಿಮ್ಮದು.' ಎಂದು ಸಾರುತ್ತಿರುವುದು ಅಪರಾಧವೇ? ನಾನು ಈಗಲೇ ಆ ಭಕ್ತನ ಕಷ್ಟವನ್ನು ಬಿಡಿಸಬೇಕು. ಎಂದುಕೊಂಡು ತಾನು ಕೊತವಾಲನ ವೇಷವನ್ನು ತಾಳಿ ಬೆಟ್ಟದಂಥ ಕುದುರೆ ಏರಿ ಆ ಭಕ್ತನೊಡನೆ ಬರುತ್ತಿರುವ ಸಿಪಾಯರಿಗೆ ಎದುರಾಗಲು ಅವರು ರೀತಿಯಂತೆ ಮುಜುರೆ ಮಾಡಿದರು. ಆಗ ಇವನು ಯಾರು? ಏನು ಅಪರಾಧ ಮಾಡಿದ್ದಾನೆ? ಯಾಕೆ ಅವನನ್ನು ಹಿಡಿದು ತಂದಿದ್ದೀರಿ? ಎಂದೆಲ್ಲ ವಿಚಾರಿಸಲು ಸಿಪಾಯರು 'ಇವನು ನಿತ್ಯದಲ್ಲಿ ಮಧ್ಯರಾತ್ರಿಯಾಗಲು 'ನಮಃ ಶಿವಾಯ' ಎಂದು ಕೂಗುತ್ತ ಜನರ ನಿದ್ದೆಗೇಡು ಮಾಡುತಿರುವನು. ಬೇಡವೆಂದು ಹೇಳಿದರೂ ಕೇಳದಷ್ಟು ಹಟಮಾರಿತನ ಇವನಲ್ಲಿದೆ. ಕಾರಣ ಇವನಿಗೆ ಶಿಕ್ಷೆಯಾಗುವುದು ಯೋಗ್ಯವೆಂದು ತಮ್ಮ ಕಡೆಗೆ ಕರೆದುಕೊಂಡು ಹೊರಟದ್ದೇವೆ. ನೀವು ಬರುವವರೆಗೆ ಇವನನ್ನು ಬಂಧನದಲ್ಲಿಡಬೇಕೆಂದು ಮಾಡಿದ್ದೆವು. ತಾವೀಗ ಭೆಟ್ಟಿಯಾದಿರಿ. ಅಪ್ಪಣೆಯಾದಂತೆ ನಡೆಯುತ್ತೇವೆ' ಎಂದು ಹೇಳಲು ಕೊತವಾಲನು 'ನೀವು ಮೂರ್ಖರು. ಮೊದಲು ಇವನಿಗೆ ಕಟ್ಟಿದ ಹಗ್ಗ ಬಿಚ್ಚಿರಿ. ಬಾಯಲ್ಲಿ ತುರುಕಿದ ಅರಿವೆ ತೆಗೆಯಿರಿ. ಇಷ್ಟು ದಿನ ನೌಕರಿ ಮಾಡಿದಿರಿ. ನಮ್ಮ ಕರ್ತವ್ಯವೇನು ? ನಾವು ಯಾರನ್ನು ದಂಡಿಸಬೇಕು? ಯಾರನ್ನು ಬಿಡಬೇಕೆಂಬುದು ತಿಳಿಯಬಾರದೇ? ಇವನೇನು ಕಳ್ಳನೇ? ಸುಳ್ಳನೇ? ಮೋಸಗಾರನೇ? ಕಾರಣವಿಲ್ಲದೇ ಸಾತ್ವಿಕ ಮನುಷ್ಯನೊಬ್ಬನನ್ನು ದಂಡಿಸಿದಿರಿ. ಉಪಾಯವಿಲ್ಲ. ಇವನೇನೋ ಜನರ ನಿದ್ದೆಗೇಡು ಮಾಡುತ್ತಾನಂತೆ. ನೀವು ಘಂಟೆ-ಘಂಟೆಗೊಮ್ಮೆ ಜನರನ್ನು ಕೂಗಿ ಎಚ್ಚರಿಸುವುದಿಲ್ಲವೇ? ನಿಮ್ಮಿಂದಲೂ ಜನರ ನಿದ್ದೆಗೇಡಾಗುತ್ತದೆ. ನಿಮ್ಮಿಂದ ನಿದ್ದೆಗೇಡಾದವರು ಹೊರಗಿನ ಕಳ್ಳರಿಂದ ಮಾತ್ರ ಉಳಿಯಬಹುದು. ಆದರೆ ಈ ಮಹಾತ್ಮನ ನಾಮ ಗರ್ಜನೆಯಿಂದ ನಿದ್ದೆಗೇಡಾದವರು ಹೊರಗಿನ-ಒಳಗಿನ ಎರಡೂ ಬಗೆಯ ಕಳ್ಳರ ಸುಲಿ

ಯಿಂದ ಉಳಿಯುತ್ತಾರೆ. ಇವನ ಕೆಲಸವು ನೀವು ಮಾಡುವದಕ್ಕಿಂತ ಬಹಳ ಶ್ರೇಷ್ಠವೆನ್ನಲು ಅಡ್ಡಿಯಿಲ್ಲ. ಜನರನ್ನು ಅಂತರ್ಬಹಿಯಲ್ಲಿ ಸುಲಿಗೆಗಾರರಿಂದ ಉಳಿಸಲು ಸಂಬಳವಿಲ್ಲದೇ ತಿರಗುತ್ತಾನೆ. ನೀವು ಅವನ ಅರ್ಧದಷ್ಟು ಕೂಡ ಕೆಲಸ ಮಾಡದೇ ಸರಕಾರದಿಂದ ಸಂಬಳ ಪಡೆಯುತ್ತೀರಿ ಮೂರ್ಖರೇ, ಇನ್ನು ಮೇಲೆ ಎಂದಿಗೂ ಇವನನ್ನು ತಡವಬೇಡಿರಿ. ಈಗಾದ ತಪ್ಪಿಗೆ ಕಾಲು ಬೀಳಿರಿ. ಎಂದು ಹೇಳಲು ಅದರಂತೆ ಮಾಡಿ ಸಿಪಾಯರು ಆ ಭಕ್ತನನ್ನು ಬಿಟ್ಟು ತಮ್ಮ ಕಾರ್ಯಕ್ಕೆ ತೆರಳಿದರು. ಆ ಭಕ್ತನು ತನ್ನ ಲೋಕೋಪಕಾರಕ ಕೆಲಸವನ್ನು ಪುನಃ ಆರಂಭಿಸಿದನು.

ಮರುದಿನ ಸಿಪಾಯರು ಚೌಕಿನಲ್ಲಿ ಕೊತವಾಲನನ್ನು ಕಂಡು ನಿನ್ನೆ ರಾತ್ರಿ ತಾವು ಮಾಡಿದ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಹತ್ತಲು ಯಾವುದನ್ನೂ ಅರಿಯದ ಕೊತವಾಲ ಸಮಾಚಾರವೇನು? ಎಂದು ಕೇಳಿದನು. ಸಿಪಾಯರು ಸಾದ್ಯಂತ ಸಂಗತಿಯನ್ನು ತಿಳಿಸಿದರು. ಅದನ್ನೆಲ್ಲ ಕೇಳಿ ಕೊತವಾಲನು- ನಿಜವಾಗಿ ಇದು ಆಶ್ಚರ್ಯದ ಸಂಗತಿ. ನಿನ್ನೆ ಗಾತ್ರಿ ಸಾಯಂಕಾಲಕ್ಕೆ ಮನೆಯಲ್ಲಿ ಮಲಗಿದವನು ಬೆಳಗಿನಲ್ಲಿಯೇ ಮೇಲಕ್ಕೆದ್ದಿರುವೆನು. ಅಂದಮೇಲೆ ನೀವು ಹೇಳುತ್ತಿರುವ ಸಂಗತಿಯ ಅರ್ಥವೇನು? ನಿಮಗೆಲ್ಲಿಯಾದರೂ ಕನಸು ಬಿದ್ದಿರಬೇಕು. ಎನ್ನಲು ಅವರು-'ಸಾಹೇಬರೇ ಸತ್ಯವಾಗಿಯೂ ಇದು ಘಟಿಸಿದ ಸಂಗತಿ.' ಎಂದರು. ಆಗ ಕೊತವಾಲನು- ನಿಮ್ಮ ದೃಷ್ಟಿಯಲ್ಲಿ ಹಾಗಿರಬಹುದು. ಆದರೆ 'ಹೊಡೆದ ದೆವ್ವ ಪ್ರತ್ಯಕ್ಷವಾಗಿರಲು ಕೇಳಿಸಿ ನೋಡಿದರಂತೆ' ಎಂದಹಾಗೆ ಮನೆಯಲ್ಲಿ ಮಲಗಿ ನಿದ್ದೆಮಾಡಿದ ನಾನು ಪ್ರತ್ಯಕ್ಷವಾಗಿರಲು ನಿಮ್ಮ ಮಾತು ಹೇಗೆ ನಂಬಲಿ? ಎಂದು ಕೇಳಲು ಅವರು 'ಇದೇನೋ ಕೌತುಕವಿದೆ. ಇದು ಸುಳ್ಳೋ? ನಿಜವೋ? ಎಂಬುದನ್ನು ಮನಗಾಣಬೇಕಾದರೆ ನಾವು ಬೇಕಾದರೆ ಮಠಕ್ಕೆ ಹೋಗೋಣ. ಅಲ್ಲಿ 'ನಮಃಶಿವಾಯ, ಹೇಗೂ ಭೆಟ್ಟಿಯಾಗುತ್ತಾನೆ. ರಾತ್ರಿ ನಡೆದ ಸಂಗತಿ ನೀವೇ ವಿಚಾರಿಸಿಕೊಳ್ಳಿರಿ.' ಎಂದು ಹೇಳಲು ಕೊತವಾಲನು ಅವನೊಡನೆ ಸ್ವಾಮಿಯ ಮಠಕ್ಕೆ ಬಂದನು. ಅಲ್ಲಿ ಸದ್ಗುರುನಾಥನನ್ನು ಕಂಡು ತಾವು ಬಂದ ಉದ್ದೇಶವನ್ನರುಹಲು ನಗುತ್ತ ಸಿದ್ಧನು-'ಅಯ್ಯ, ಮನುಷ್ಯ ತಾನು ಸಾಕಿದ ಕ್ಷುದ್ರ ಪ್ರಾಣಿಗಳ ಅಭಿಮಾನ ಹಿಡಿದು ಬಡಿದಾಡುತ್ತಿರುವಾಗ ದೇವರು ಭಕ್ತರ ಅಭಿ

ಮಾನ ವಹಿಸುವುದು ಆಶ್ಚರ್ಯವಲ್ಲ. ಅನೇಕ ರೀತಿಯಾಗಿ ಭಗವಂತ ತನ್ನ ಭಕ್ತರನ್ನು ರಕ್ಷಿಸುತ್ತಾನೆ. ನಿನ್ನೆ ರಾತ್ರಿ ಅವನು ನಿಮ್ಮ ರೂಪ ತಾಳಿ ತನ್ನ ಭಕ್ತನನ್ನು ಸಂಕಟದಿಂದ ಮುಕ್ತಗೊಳಿಸಿದನು. ಹೀಗೆ ಮಾಡಿದುದು ದೇವರ ಅಪರಾಧವೆಂದು ನೀವು ಭಾವಿಸುವುದಾದರೆ ಮೊದಲು ಅವನು ಎಲ್ಲಿರುವನೆಂದು ಶೋಧಮಾಡಬೇಕು. ಶೋಧವಾಗಿ ಅವನು ಒಮ್ಮೆ ಕೈವಶನಾದನೆಂದರೆ ತೀರಿತು. ಎಲ್ಲಿಯೂ ಪುನಃ ಕಣ್ಮರೆಯಾಗಲಾರ. ಇಂಥ ದೇವರು ಸಿಕ್ಕಮೇಲೆ ನಿಮಗೆ ಅವನನ್ನು ದಂಡಿಸಬೇಕೆಂದು ಅನಿಸಿದರೆ ದಂಡಿಸಲೂಬಹುದು. ಗೋಕುಲದಲ್ಲಿ ಯಶೋದೆ ತನ್ನ ಮಗನಾದ ಕೃಷ್ಣನನ್ನು ದಂಡಿಸಬೇಕೆಂದು ಒರಳಗುಂಡಿಗೆ ಕಟ್ಟಿಹಾಕಿದ್ದಳಂತೆ. ಆಕೆಯಂತೆ ಸಾಮರ್ಥ್ಯವಾದರೆ ನೀವೂ ಮಾಡಬಹುದು.' ಎನ್ನಲು ಎಲ್ಲರೂ ಸಿದ್ಧನ ವಾಣಿಯಿಂದ ಆನಂದಿತರಾಗಿ ತಮ್ಮ ಕಾರ್ಯಗಳಿಗೆ ಹೊರಟುಹೋದರು.

————

೨೯

....ತ್ವಮಸಿ ಚ ಕರುಣಾಯಾಃ ಸಾಗರಃ ಕೃತ್ಸ್ನದಾತಾ
ಪ್ಯತಿ ತವ ಭೃತಕೋಽಹಂ ಸರ್ವದಾ ಚಿಂತಕೋಽಸ್ಮಿ ॥

—ಮಹಿಮ್ನ

ಎಲ್ಲವನ್ನು ಕೊಡಬಲ್ಲ ಕರುಣಾಸಾಗರ ನೀನು. ಯಾವಾಗಲೂ ನಿನ್ನನ್ನೇ ನೆನೆಯುತ್ತಿರುವ ಸೇವಕ ನಾನು.

ಕಾಲಕ್ರಮದಲ್ಲಿ ಸಿದ್ಧಾಶ್ರಮಕ್ಕೆ ಸದ್ಗುರು ಸೇವೆಗೆಂದು ಅನೇಕ ಭಕ್ತರು ಬರಲಾರಂಭಿಸಿದರು. ಒಂದೆರಡು ದಿನ ನಿಂತು ಹೋಗುವವರು ಕೆಲವರು. ನಿರ್ದಿಷ್ಟಕಾಲದವರೆಗೆ ಸೇವೆಮಾಡಿ ಸದ್ಗುರುಕೃಪೆಗೆ ಪಾತ್ರರಾಗಿ ತೆರಳುವವರು ಹಲವರು. ಇವರೆಲ್ಲರ ವಸತಿಗೆ ಒಂದು ಶಾಶ್ವತ ಮಂದಿರವು ಅವಶ್ಯವಾಗಿತ್ತು. ಅದನ್ನು ಶ್ರಮದಾನ ಯಜ್ಞದಿಂದ ಕಟ್ಟಿ ಮುಗಿಸೋಣವೆಂದು ಭಕ್ತರು ಯೋಚಿಸಿ ಒಂದು ಶುಭಮುಹೂರ್ತದಲ್ಲಿ ಕಾರ್ಯಾರಂಭ ಮಾಡಿದರು. ತುಸು

ದಿನ ಕಳೆದ ಮೇಲೆ ಶ್ರಮದಾನ ಮಾಡುವವರ ಸಂಖ್ಯೆ ಬೆಳೆದು ಕಾರ್ಯವು ತ್ವರಿತಗತಿಯಿಂದಲೇ ಸಾಗತೊಡಗಿತು. ಅಲ್ಲಿ ಭಕ್ತ ಅಹಂಮಮಿಕೆಯಿಂದ ದುಡಿಯುವರು. ಹೊತ್ತಾದರೆ ನನಗೆ ಸೇವೆಯ ಭಾಗ್ಯ ದೊರೆಯುವುದಿಲ್ಲ. ಎಂದುಕೊಂಡು ಹೊತ್ತು ಮೂಡುವಷ್ಟರಲ್ಲಿ ಎಲ್ಲರೂ ಕೆಲಸಕ್ಕೆ ಸಿದ್ಧರಾಗಿ ಬರುವರು. ಹಾಗೆ ಬರುವವರಲ್ಲಿ ಎಲ್ಲರೂ ಬರಿಕೆಲಸಗಾರರಾಗಿರಲಿಲ್ಲ. ಹಲವಾರು ವಾಸ್ತುಶಿಲ್ಪ ಬಲ್ಲವರು. ಕೆಲವರು ಬಡಿಗತನ ಬಲ್ಲವರು. ಎಲ್ಲರೂ ನಿಸ್ವಾರ್ಥಸೇವಕರು. ಆ ಸೇವೆ ಮಾಡುವಲ್ಲಿ ಅವರೆಲ್ಲರಿಗೆ ನಿರ್ಮಲವಾದ ಆನಂದ ದೊರೆಯುತ್ತಿದ್ದಿತು.

ಹಾಗೆ ದುಡಿಯುವ ಭಕ್ತರಲ್ಲಿ ಶಿವಪ್ಪನೆಂಬವನೊಬ್ಬನು. ಬಹು ಭಕ್ತಿಯಿಂದ ಕೆಲಸ ಮಾಡುವನು. ಕೆಲವೇ ದಿನಗಳಲ್ಲಿ ಮಂದಿರದ ಗೋಡೆಗಳು ಮೇಲೇರಿದವು. ಒಂದು ದಿನ ಮೇಲಿನ ಕೆಲಸ ನಡೆದಿತ್ತು. ಎಲ್ಲರೂ ತಂತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದರು. ಆಗ ಮೇಲಿನ ಕೆಲಸ ಮಾಡಬೇಕೆಂದುಶಿವಪ್ಪ ಒಂದು ನಿಚ್ಚಣಿಕೆಯನ್ನು ಇಟ್ಟುಕೊಂಡು ಸರಸರ ಮೇಲೇರತೊಡಗಿದನು. ಕೆಳಗೆ ಕಲ್ಲುಗಳ ಫರಸಿ ಇತ್ತು. ಅದರ ಮೇಲೆ ಇಟ್ಟ ನಿಚ್ಚಣಿಕೆ ಸರಿದಿತು, ಯಾರ ಕಡೆಯಿಂದಾದರೂ ಅದನ್ನು ಘಟ್ಟಿಯಾಗಿ ಹಿಡಿಸಿಕೊಂಡು ಮೇಲೇರಬೇಕು, ಎಂಬ ಯಾವ ಕಲ್ಪನೆಯೂ ಶಿವಪ್ಪನಿಗೆ ಬರಲಿಲ್ಲ. ಇದು ಗುರುವಿನ ಸೇವೆ. ಮಾಡಿಮುಗಿಸಬೇಕು. ಎಂಬುದಷ್ಟೇ ವಿಚಾರದಿಂದ ಮೇಲೇರುತ್ತ ಕೊನೆಯ ಹಲ್ಲು ಹತ್ತಿ ಗೋಡೆಯ ಮೇಲೆ ನಿಲ್ಲಬೇಕೆಂದಿರುವಾಗ ಒಮ್ಮೆಲೇ ನಿಚ್ಚಣಿಕೆ ಜಾರಿ ನೆಲಕ್ಕೆ ಬಿದ್ದಿತು. ಅದರೊಡನೆ ಶಿವಪ್ಪನೂ ಕೆಳಗೆ ಬಿದ್ದನು. ಕೆಳಗೆ ಕಲ್ಲಿನ ಕಟ್ಟೆಯು ಅವನ ತಲೆಗೆ ಬಲವಾಗಿ ತಾಕಿ ಬಹಳ ಪೆಟ್ಟಾಯಿತು. ಅದರಿಂದ ಶಿವಪ್ಪನು ಬವಳಿಬಂದು ಬಿದ್ದುಬಿಟ್ಟನು. ಸಿದ್ಧನು ಮಂದಿರ ಕಟ್ಟುವ ಕಾರ್ಯವನ್ನು ನಿರೀಕ್ಷಿಸುತ್ತ ಬಳಿಯಲ್ಲಿಯೇ ಓಡಾಡುತ್ತಿದ್ದನು. ಶಿವಪ್ಪ ತೂಕತಪ್ಪಿ ಬಿದ್ದುದನ್ನು ಮೊದಲು ಕಂಡವನೇ ಅವನು. ಎಲ್ಲರೂ ಶಿವಪ್ಪನಸುತ್ತ ನೆರೆದರು. ಅವನ ಮೈಮೇಲೆ ಬಿದ್ದ ನಿಚ್ಚಣಿಕೆಯನ್ನು ಎತ್ತಿ ಒಬ್ಬರು ಆಚೆಗೆ ಸರಿಸಿದರು. ತಲೆಗೆ ಬಹಳ ಪೆಟ್ಟಾಗಿ ಒಡೆದುಹೋಗಿ ರಕ್ತ ಸುರಿಯತೊಡಗಿತ್ತು. ಮೈಮೇಲೆಲ್ಲ ರಕ್ತಸುರಿದು ಆ ನೋಟ ಭಯಾನಕ

ವಾಗಿತ್ತು. ನೆತ್ತಿಗೆ ತಣ್ಣೀರು ತಟ್ಟಿದರು. ಮೈತುಂಬ ಕೈಯಾಡಿಸಿದರು. ಕೈಕಾಲು ತಿಕ್ಕಿದರು. ಏನಾದರೂ ಶಿವಪ್ಪನಿಗೆ ಎಚ್ಚರ ಬರಲಿಲ್ಲ.

ಈ ಸುದ್ದಿ ತಿಳಿದು ಅಲ್ಲಿಗೆ ಬಂದ ಅವನ ಹೆಂಡತಿ-ಮಕ್ಕಳು ಶಿವಪ್ಪನ ಸ್ಥಿತಿಯನ್ನು ಕಂಡು ಒಂದೇ ಸವನೆ ಬಡಿದುಕೊಂಡು ಅಳಲಾರಂಭಿಸಿದರು. ಅಷ್ಟರಲ್ಲಿ ಶಿವಪ್ಪನ ಬಾಯಿಂದ ರಕ್ತವು ಬರಹತ್ತಿತು. ಬುರಗು ಬರತೊಡಗಿತು. ಇದನ್ನು ಕಂಡ ಮೇಲಂತೂ ಇನ್ನು ಈ ಮನುಷ್ಯ ಉಳಿಯಲಾರನೆಂದೇ ಎಲ್ಲರ ಭಾವನೆಯಾಗಿ ಹೋಯಿತು. ವೈದ್ಯರನ್ನು ಕರೆತರಬೇಕೆಂದು ಕೆಲವರು ಚಟುವಟಿಕೆ ಮಾಡತೊಡಗಲು ಬೇರೆ ಕೆಲವರು– 'ಯಾರು ಬಂದೇನು ಮಾಡುವುದು? ಇನ್ನು ಇವನ ಕಥೆ ಮುಗಿದಂತೆ. ಮುಂದಿನ ಸಿದ್ಧತೆ ಮಾಡಬೇಕೆ'ಂದು ಹೇಳಹತ್ತಿದರು. ಜನರ ಮಾತು ಕೇಳಿ ಅತಿಶಯ ಶೋಕಾಕುಲರಾಗಿ ಶಿವಪ್ಪನ ಹೆಂಡತಿ–ಮಕ್ಕಳು ಅನನ್ಯಗತಿಕರಾಗಿ ಸಿದ್ಧನ ಪಾದತಲದಲ್ಲಿ ಬಿದ್ದು ಹೊರಳುತ್ತ 'ಸದ್ಗುರುನಾಥನೇ, ಇನ್ನು ನೀನೇ ನಮ್ಮನ್ನು ಕಾಪಾಡು.' ಎಂದು ಗೋಗರೆದರು. ಅಪ್ಪೊತ್ತಿನ ವರೆಗೆ ಸುಮ್ಮನೇ ನಿರೀಕ್ಷಿಸುತ್ತಿದ್ದ ಗುರುನಾಥನು ಈಗ ಶಿವಪ್ಪನ ಬಳಿಯಲ್ಲಿ ಬಂದು ಕುಳಿತು ನೋಡಿದನು. ತಲೆಯಿಂದ ಇನ್ನೂ ರಕ್ತ ಸೋರುತ್ತಲೇ ಇತ್ತು. ಆಗ ಸದ್ಗುರು ಆ ಘಾಯವನ್ನು ಸ್ಪರ್ಶ ಮಾಡಲು ರಕ್ತಸೋರುವುದು ನಿಂತುಹೋಯಿತು. ಆದರೆ ಪ್ರಾಣಚಿಹ್ನಗಳೇನೂ ತೋರದಾದವು. ಜನ ಏಕಕಂಠದಿಂದ ಬೇಡಿಕೊಂಡರು. 'ಸ್ವಾಮೀ, ಇಂಥ ನಂಬಿಗೆ ಭಕ್ತನನ್ನು ಕಳೆದುಕೊಳ್ಳಬಾರದು. ಇವನನ್ನು ಬದುಕಿಸುವುದು ನಿಮಗೆ ಅಸಾಧ್ಯ ಕಾರ್ಯವಲ್ಲ.'

ಸಿದ್ಧನು ಶಿವಪ್ಪನ ಮೈಮೇಲೆ ತಣ್ಣೀರು ಸಿಂಪಡಿಸುತ್ತ ಸುಮ್ಮನೆ ಕುಳಿತನು. ಜನರೂ ಸದ್ದುಮಾಡದೆ ಗೊಂಬೆಗಳಂತೆ ನಿಂತು ನೋಡತೊಡಗಿದರು. ಗುರುಸೇವೆಯಲ್ಲಿ ದೇಹವಿಟ್ಟ ಶಿವಪ್ಪನನ್ನು ಕಂಡು ಕೆಲವರು ಧನ್ಯನಾದನೆಂದು ಹೇಳಿದರೂ ಎದುರಿಗೆ ಬಂದು ನಿಂತಿರುವ ಅವನ ಹೆಂಡತಿ-ಮಕ್ಕಳ ಅನಾಥ ಪರಿಸ್ಥಿತಿಯನ್ನು ಕಂಡು ಮರುಗದೇ ಇರಲಿಲ್ಲ. ಒಟ್ಟು ಬೇಕಾದುದಾಗಲಿ, ಶಿವಪ್ಪನನು ಸದ್ಗುರುನಾಥ ಬದುಕಿಸಬೇಕೆಂದು ಅಭಿಪ್ರಾಯವಾಗಿ ಎಲ್ಲರೂ ಶಿವಪ್ಪನ ಕಡೆಗೇ ನೋಡಹತ್ತಿದರು. ತುಸು ವೇಳೆಯಲ್ಲಿ ಶಿವಪ್ಪನ ತುಟಿ ಅಲುಗುತ್ತಿರುವಂತೆ ಕಂಡಿತು. ಪರೀಕ್ಷಿಸಿ ನೋಡಲು ಅವನು ರಾಮನಾಮ

ಜಪ ಮಾಡುತ್ತಿರುವಂತೆ ಕೇಳಿಸಿತು. ಅದನ್ನು ತಿಳಿದು ಎಲ್ಲರೂ ಆನಂದದಿಂದ ಸದ್ಗುರುನಾಮದ ಜಯಘೋಷ ಮಾಡಿದರು. 'ಇನ್ನೇನೂ ಭಯವಿಲ್ಲ. ಶಿವಪ್ಪ ಬದುಕಿದನು.' ಎಂದು ನುಡಿದು ಸಿದ್ಧನು ಎದ್ದುಹೋದನು.

ಮನೆಯಲ್ಲಿ ಕೆಲದಿನ ಆರೈಕೆಹೊಂದಿ ಆರಾಮವಾದ ಶಿವಪ್ಪನು ಮರಳಿ ಗುರುಸೇವೆಗೆ ಸಿದ್ಧನಾದನು. ಈ ಅಪಘಾತದಿಂದ ನನ್ನನ್ನು ಉಳಿಸಿದವ ಸಿದ್ಧನೆಂದೇ ಅವನ ಭಾವನೆ. ಅವನಿಂದ ಉಳಿದ ಜೀವ ಅವನ ಸೇವೆಗೆ ಮೀಸಲು ಎನ್ನುತ್ತ ಬಹುಭಕ್ತಿಯಿಂದ ಗುರುಸೇವಾತತ್ಪರವಾದನು.

೩೦

ವ್ಯಾಘ್ರೀವತಿಷ್ಠತಿ ಜರಾ ಪರಿತರ್ಜಯಂತಿ
ರೋಗಾಶ್ಚ ಶತ್ರವ ಇವ ಪ್ರಹರಂತಿ ದೇಹಮ್....||

--ನೀತಿಶಾಸ್ತ್ರ

ಭಯಗೊಳಿಸುತ್ತ ಮುಪ್ಪು ಎದುರಾಗುತ್ತದೆ. ದೇಹವನ್ನು ವೈರಿಗಳಂತೆ ರೋಗಗಳು ಹಣ್ಣುಮಾಡುತ್ತವೆ.

ಸಿದ್ಧಜನರ ಲೀಲೆಗಳು, ನಡತೆ ನಡಾವಳಿಗಳು ಸಾಮಾನ್ಯ ಜನರಿಗೆ ಅರ್ಥವಾಗುವುದು ಕಠಿಣ. ಯಾಕೆಂದರೆ ಸ್ವಾಭಾವಿಕವಾಗಿ ಸಾಮಾನ್ಯರ ದೃಷ್ಟಿಗೊಂದು ಸೀಮೆ ಇರುತ್ತದೆ. ಆ ಸೀಮೆದಾಟ ಅವರಿಗೇನೂ ಗೋಚರವಾಗುವದಿಲ್ಲ. ಆದರೆ ಸಿದ್ಧಜನರು ಅಸೀಮರು, ಅಗಾಧ ಚಾರಿತ್ರ್ಯವುಳ್ಳವರು ಆಗಿರುವದರಿಂದ ಅವರ ಉದ್ದೇಶಗಳು ನಮಗೆ ತಿಳಿಯದೇ ನಾವು ತಪ್ಪು ಗ್ರಹಿಕೆ ಮಾಡಿಕೊಂಡು ಗೊಂದಲಕ್ಕೊಳಗಾಗುತ್ತೇವೆ.

ಒಂಮುಸಾರೆ ಸಿದ್ಧನಿಗೆ ಜ್ವರಬಂದವು. ಬಳಿಯಲ್ಲಿಯ ಭಕ್ತರು ಔಷಧೋಪಚಾರ ಮಾಡಿಸಬೇಕೆಂದು ಯತ್ನಮಾಡಹತ್ತಿದರು. ಆಗ ಸಿದ್ಧ ಹೇಳಿದನು- 'ಅಯ್ಯ, ಇಷ್ಟುದಿನ ನಾನು ಆರೋಗ್ಯವಾಗಿ ಇದ್ದೆನು. ಯಾವ ರೋಗ-ರುಜಿನಗಳೂ ನನ್ನ ಸನಿಹಕ್ಕೆ ಬಂದಿಲ್ಲ, ಈಗ ಜ್ವರಬಂದಿವೆ. ಕೆಲವು

ದಿನ ನನ್ನ ದೇಹದಲ್ಲಿ ಇದ್ದು ಹೋಗಬೇಕೆಂದು ಅದರ ಪರೀಕ್ಷೆ ಇರುವಂತೆ ಕಾಣುತ್ತದೆ. ಇದ್ದುಹೋಗಲಿ. ಯಾಕಂದರೆ ಅದರ ಋಣಾಂಶದ ಕೆಲ ಭಾಗವೂ ನನ್ನ ದೇಹಕ್ಕಿದೆ. ಅದನ್ನು ಮುಟ್ಟಿಸುವುದು ಬೇಡವೇ?'

ಎಳ್ಳು ಇಟ್ಟರೆ ಸಿಡಿದುಹೋಗುವಂಥ ಜ್ವರ. ಹೀಗಿದ್ದು ಸಿದ್ಧನ ಮಾತು ಈ ರೀತಿ. ಜನರಿಗೆ ಇದೇನೆಂದು ತಿಳಿಯದಾಯಿತು. ಅವರು ಔಷಧ ತೆಗೆದು ಕೊಳ್ಳುವಂತೆ ಪುನಃ ಪುನಃ ಪ್ರಾರ್ಥಿಸಹತ್ತಿದರು. ಸಿದ್ಧನಂದನು.

'ಈ ದೇಹ ನನ್ನದೆಂದು ಮನುಷ್ಯ ತಿಳಿಯುತ್ತಾನೆ. ಅದನ್ನು ಒಳ್ಳೇ ಆಹಾರಹಾಕಿ ಪೋಷಿಸುತ್ತಾನೆ. ಶೃಂಗರಿಸುತ್ತಾನೆ. ಮೈಗೆ ಮಣ್ಣುಹತ್ತದಂತೆ ಸ್ವಚ್ಛವಾಗಿರಿಸುತ್ತಾನೆ. ಇವುಗಳಲ್ಲಿ ಏನು ವ್ಯತ್ಯಾಸವಾದರೂ ಅವನಿಗೆ ದುಃಖ ವಾಗುತ್ತದೆ. ಇದರ ಕಾರಣವೇನು? ಎಂಬುದನ್ನು ಯೋಚಿಸುವಿರಾ? ಈ ದೇಹವು ಜೀವನು ವಾಸಿಸುವುದಕ್ಕೆ ಒಂದು ಗೂಡಾಗಿರುವುದು ನಿಜ. ಅಷ್ಟು ಮಾತ್ರಕ್ಕೆ ಇದು ನನ್ನದೇ ಎಂದು ಮೋಹಗೊಳ್ಳುವುದು ತಪ್ಪು. ಯಾಕಂದರೆ ಅದರಲ್ಲಿ ಅನೇಕ ಪಾಲುಗಾರರಿದ್ದಾರೆ. ತಗಣಿ-ಚಿಕ್ಕಾಡು-ಹೇನು-ಕೂರಿ ಮುಂತಾದ ಜೀವಿಗಳು. ರೋಗಗಳು. ಕೊನೆಗೆ ಯಾವ ವಸ್ತುಗಳಿಂದ ಈ ದೇಹ ನಿರ್ಮಾಣಗೊಂಡಿರುವುದೋ ಆ ಪಂಚಮಹಾಭೂತಗಳು ಇವೆಲ್ಲ ತಂತಮ್ಮ ಪಾಲನ್ನು ದೇಹದಿಂದ ಪಡೆಯಲು ಯತ್ನಮಾಡುತ್ತಿರುತ್ತವೆ. ನಾವು ಎಷ್ಟೇ ಪ್ರಯತ್ನಮಾಡಿದರೂ ಅವುಗಳ ಋಣ ಮುಟ್ಟಿಯೇ ತೀರಬೇಕು. ಅದು ದೇವರ ಸಂಕೇತ. ಇದನ್ನೊಪ್ಪಿಕೊಂಡರೆ ನಮಗೆ ಸುಖ-ಸಮಾಧಾನ. ಒಪ್ಪದಿದ್ದರೆ ದುಃಖ.

ಹೀಗೆ ಒಂದು ಸಾರೆಯಲ್ಲ. ಅನೇಕ ಸಾರೆ ಸಿದ್ಧ ಹೇಳಿದರೂ ಭಕ್ತರಿಗೆ ಸಮಾಧಾನವಿಲ್ಲ. ಬೆಂಕಿಯಂಥ ಜ್ವರಬಂದಿರುವುದರಿಂದ ನಿಜವಾಗಿಯೂ ಅವನು ತಳಮಳಿಸುತ್ತಿರುವನೆಂದೇ ಅವರ ಭಾವನೆ. ಆದರೆ 'ನಾಹಂ ದೇಹೋ ನೇಂದ್ರಿಯಾಣ್ಯಂತರಂಗಮ್' ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ ಎಂದು ಸಿದ್ಧನ ದೃಢನಿಶ್ಚಯ. ದೇಹದ ಯಾವ ಪೀಡೆಗಳು ವಸ್ತುತಃ ಅವನಿಗೆ ಸಂಬಂಧವಿರಲಿಲ್ಲ. ಹಾಗೆಂದು ಭಕ್ತರಿಗೆ ಉಪದೇಶ ಮಾಡುತ್ತಿದ್ದನು. ಅವರನ್ನು ಸಮಾಧಾನ ಗೊಳಿಸುತ್ತಿದ್ದನು. ವಿನೋದ ಮಾಡುತ್ತಿದ್ದನು. ಆದರೆ ಹಾಸಿಗೆ ಮಾತ್ರ ಬಿಟ್ಟೇಳುತ್ತಿರಲಿಲ್ಲ.

ಎಂಟುದಿನ ಕಳೆದರೂ ಜ್ವರವಿಳಿಯದಾಗಲು ಭಕ್ತರು ಗಾಬರಿಯಾಗಿ ಜ್ವರದ ಗುಳಿಗೆಗಳನ್ನು ತಂದುಕೊಟ್ಟು ತೆಗೆದುಕೊಳ್ಳಬೇಕೆಂದು ಅನುಗ್ರಹ ದಿಂದ ಬೇಡಿಕೊಂಡರು. ಸಿದ್ಧನು ಸ್ವೀಕರಿಸಿ 'ನಿಮ್ಮಂತೆಯೇ ಆಗಲಿ' ಎಂದು ಹೇಳಿ ಹಾಸಿಗೆಯ ಬುಡದಲ್ಲಿ ಅವುಗಳನ್ನು ಸರಿಸಿಬಿಟ್ಟನು. ಔಷಧ ಕೊಡಿಸಿ ದರೂ ಜ್ವರ ಕಡಿಮೆಯಾಗಲಿಲ್ಲ. ಎಂದು ಚಿಂತಿಸಿ ಒಂದುದಿನ ನಾಮಾಂಕಿತ ವೈದ್ಯರನ್ನು ಭಕ್ತರು ಕರೆತಂದರು. ಅವರು ಪರೀಕ್ಷಿಸಿ ಜ್ವರಕ್ಕೆ ರಾಮಬಾಣ ವೆನಿಸುವ ಗುಳಿಗೆ ಕೊಟ್ಟು ಹೊರಟುಹೋದರು. ಆ ಗುಳಿಗೆಗಳೂ ಹಾಸಿಗೆಯ ಬುಡದಲ್ಲಿ ಕುಳಿತವು. ಪ್ರತಿದಿನ ವೈದ್ಯರು ಬಂದು ದೇಹಪರೀಕ್ಷೆ ಮಾಡಿ ಮತ್ತೆ ತಮ್ಮ ಗುಳಿಗೆ ಕೊಟ್ಟು ಹೋಗಬೇಕು. ಆದರ ಪರಿಣಾಮವೇನೂ ಇಲ್ಲ. ಪ್ರಕೃತಿ ಯಥಾಸ್ಥಿತ, ವೈದ್ಯರಿಗೆ ಆಶ್ಚರ್ಯವಾಯಿತು. ನಾನು ಜ್ವರಕ್ಕೆ ರಾಮಬಾಣವೆನಿಸುವಂಥ ಗುಳಿಗೆ ಕೊಟ್ಟದ್ದೇನೆ ಜ್ವರವೇಕೆ ಕಡಿಮೆಯಾಗಲಿಲ್ಲ. ಇಷ್ಟರಲ್ಲಿ ಕಡಿಮೆಯಾಗಲೇಬೇಕಾಗಿತ್ತು. ಆಗದಿರುವುದಕ್ಕೆ ಕಾರಣವೇನು. ಎಂದು ಸಂದೇಹಗೊಂಡು–'ಮಹಾತ್ಮರೇ, ನಿಮ್ಮ ಪ್ರಕೃತಿಯನ್ನು ಪರೀಕ್ಷಿಸಿ ನೋಡುವುದರಿಂದ ನೀವು ನಾನು ಕೊಟ್ಟ ಗುಳಿಗೆಗಳನ್ನು ತೆಗೆದುಕೊಂಡಿಲ್ಲ ವೆಂದು ಕಾಣುವುದು. ಹೀಗಾದರೆ ರೋಗಗುಣವಾಗುವುದು ಹೇಗೆ? ನಿಮಗೆ ಕೈಮುಗಿದು ಬೇಡಿಕೊಳ್ಳುತ್ತೇನೆ. ದಯಮಾಡಿ ಔಷಧ ತೆಗೆದುಕೊಳ್ಳಿರಿ.' ಎಂದು ಬೇಡಿಕೊಂಡರು.

ಸಿದ್ಧ ನುಡಿದನು– 'ವೈದ್ಯರೇ ನಿಮ್ಮ ಔಷಧ ತೆಗೆದುಕೊಳ್ಳುತ್ತೇನೆ, ಆದರೆ ನನಗೆ ಬಂದ ಜ್ವರ ತನ್ನ ಋಣಸಂದಾಯವಾಗುವ ಮೊದಲೇ ಔಷಧಕ್ಕೆ ಹೆದರಿ ಬಿಟ್ಟು ಹೋಗುವುದೆನ್ನುತ್ತೀರಾ?'

'ಇಂಥ ಬೇನೆ ಇಂಥ ಔಷಧ ತೆಗೆದುಕೊಳ್ಳುವುದರಿಂದ ಕಡಿಮೆ ಯಾಗುವುದೆಂದು ಶಾಸ್ತ್ರವಿರುವದಲ್ಲ.'

'ನಿಮ್ಮ ಶಾಸ್ತ್ರದಲ್ಲಿ ಹಾಗೆ ಹೇಳಿರಬಹುದು. ಯಾವುದೇ ರೋಗವು ತನ್ನ ಋಣ ಮುಟ್ಟಿತೆಂದರೆ ದೇಹವನ್ನು ಬಿಟ್ಟು ಹೋಗುವುದೆಂದು ನಮ್ಮ ಶಾಸ್ತ್ರ ಹೇಳುತ್ತದೆ. ಇದರಲ್ಲಿ ಯಾವುದು ನಿಜ?'

'ಸ್ವಾಮಿ, ಅದನ್ನು ನಾನು ತಿಳಿಯಲಾರೆ.'

ಎಂದು ವೈದ್ಯರು ನುಡಿಯಲು ಸಿದ್ಧ ಹಸನ್ಮುಖನಾಗಿ 'ವೈದ್ಯರೇ, ನಿಮ್ಮೆಲ್ಲರ ಅಪೇಕ್ಷೆ ನಾನು ಔಷಧ ತೆಗೆದುಕೊಳ್ಳಬೇಕೆಂದು ಇರುವದಷ್ಟೇ?' ಎಂದು ಕೇಳಲು ವೈದ್ಯರು ಹೌದು. ನಿಮ್ಮ ಯೋಗ್ಯತೆಯನ್ನಾಗಲೀ, ಮಹಿಮೆಯನ್ನಾಗಲೀ ನಾವು ತಿಳಿಯಲಾರೆವು. ನಮಗೆ ತಿಳಿದಿರುವುದು ವೈದ್ಯಶಾಸ್ತ್ರವೊಂದೇ. ಅದಕ್ಕನುಸಾರವಾಗಿ ನಿಮಗಾಗಿ ಬೇಡ. ಭಕ್ತರ ಸಮಾಧಾನಕ್ಕಾಗಿಯಾದರೂ ನೀವು ಔಷಧ ತೆಗೆದುಕೊಳ್ಳುವುದು ಒಳಿತು ಎಂದರು.

ಹಾಗೇ ಆಗಲೆಂದು ನುಡಿದು ಸಿದ್ಧನು ಹಾಸಿಗೆ ಬುಡಕ್ಕಿರುವ ಗುಳಿಗೆಗಳನ್ನು ತೆಗೆದುಕೊಂಡು ಆ ಎಂದು ದೊಡ್ಡಬಾಯಿ ತೆರೆದು ಎಲ್ಲ ಗುಳಿಗೆಗಳನ್ನು ನುಂಗಿಬಿಟ್ಟನು. ಆ ಅಮಾನುಷ ಕೃತಿಯನ್ನು ಕಂಡು ವೈದ್ಯ ಗಾಬರಿಗೆಟ್ಟು 'ಸ್ವಾಮೀ, ಇದೇನು ಮಾಡಿದಿರಿ?' ಎಂದು ಕೂಗಿದರು. ಮತ್ತು ನಿಮಗೆ ನಾನು ಔಷಧ ತೆಗೆದುಕೊಳ್ಳಿರೆಂದು ಹೇಳಿದುದು ಅಪರಾಧವಾಯಿತು. ನಾನು ನಿಮ್ಮ ಮಹಿಮೆಯನ್ನು ತಿಳಿದವನಲ್ಲ. ನನ್ನನ್ನು ಕ್ಷಮಿಸಬೇಕು. ಎಂದು ಪ್ರಾರ್ಥಿಸುತ್ತ ಸಾಷ್ಟಾಂಗ ನಮಸ್ಕಾರ ಹಾಕಿದರು. ಉಳಿದ ಭಕ್ತರು ಸಿದ್ಧನ ಆ ಕೃತಿ ಕಂಡು ಥರ-ಥರ ನಡುಗಿ ಇನ್ನು ನಾವು ಸಿದ್ಧನ ಜೀವದಾಶೆ ಹಿಡಿಯುವುದು ಮೂರ್ಖತನವೆಂದು ಭಾವಿಸಿ ಕಣ್ಣೀರು ತಂದು ಶೋಕಾಕುಲರಾಗಿ ನಿಂತರು. ಇನ್ನು ಸಿದ್ಧ ನಮ್ಮನ್ನಗಲಿದನೆಂದು ನಿರಾಧಾರರಾಗಿ ನೆಲಕ್ಕೆ ಕುಸಿದರು.

ತನ್ನ ಕೃತಿಯಿಂದ ಯಾರಿಗೇನು ಪರಿಣಾಮವಾಗುವುದೆಂದು ಸಿದ್ಧ ನೋಡುತ್ತಲೇ ಇದ್ದನು. ಭಕ್ತರು ತಳಮಳಗೊಂಡುದನ್ನು ಗಮನಿಸಿ ಥಟ್ಟನೆ ಹಾಸಿಗೆ ಬಿಟ್ಟು ಮೇಲೆದ್ದು 'ವೈದ್ಯರೇ, ನಿಮ್ಮ ಹೇಳಿಕೆಯಂತೆ ಹತ್ತು ದಿನಗಳ ಔಷಧ ಒಂದೇ ಹೊತ್ತು ತೆಗೆದುಕೊಂಡಿದ್ದೇನೆ. ನಿಮ್ಮ ಔಷಧ ಒಳ್ಳೇ ಪರಿಣಾಮಕಾರಿ ಇದ್ದಂತೆ ಕಾಣುತ್ತದೆ. ಈಗ ನನ್ನ ಜ್ವರ ಕಡಿಮೆಯಾಗಿರಬೇಕು. ಯಾಕೆಂದರೆ ಇಂಥ ರೋಗವು ಇಂಥ ಔಷಧಕ್ಕೆ ಹೆದರುತ್ತದೆ ಎಂದು ವೈದ್ಯಶಾಸ್ತ್ರದಲ್ಲಿ ಹೇಳಿದೆ. ಇರಲಿ, ವೈದ್ಯರೇ ಈಗ ನನ್ನನ್ನು ಪರೀಕ್ಷೆ ಮಾಡಿರಿ. ನನಗೆ ರೋಗವೇನೂ ಇಲ್ಲ' ಎಂದು ನುಡಿದನು. ಗೊಂದಲಗೆಟ್ಟ ವೈದ್ಯರು ಗಾಬರಿಯಿಂದಲೇ ಪರೀಕ್ಷಿಸುತ್ತ ಹಸನ್ಮುಖರಾದರು. ಸಿದ್ಧನೂ ಮಂದಸ್ಮಿತನಾದನು.

ಮಧುರ ಧ್ವನಿಯಿಂದ ಯಾರೋ ಹಾಡಿದರು.

ನಾಹಂ ದೇಹೋ ನೇಂದ್ರಿಯಾಣ್ಯಂತರಂಗಮ್ ।
ನಾಹಂಕಾರಃ ಪ್ರಾಣವರ್ಗೋ ನ ಬುದ್ಧಿಃ ॥
ದಾರಾಪತ್ಯಕ್ಷೇತ್ರವಿತ್ತಾದಿ ದೂರಃ ।
ಸಾಕ್ಷೀ ನಿತ್ಯಃ ಪ್ರತ್ಯಗಾತ್ಮಾ ಶಿವೋಽಹಮ್" ॥

—ಆತ್ಮ ಪಂಚಕಮ್

ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಅಹಂಕಾರವಲ್ಲ, ಪ್ರಾಣಪಂಚಕವಲ್ಲ, ಬುದ್ಧಿಯಲ್ಲ, ಹೆಂಡತಿ-ಮಕ್ಕಳು-ಭೂಮಿ-ಧನ ಮೊದಲಾದವುಗಳಿಂದ ದೂರವಿದ್ದವನು. ಎಲ್ಲಕ್ಕೂ ನಿತ್ಯಸಾಕ್ಷಿಎನಿಸುವ ಪ್ರತ್ಯಗಾತ್ಮನು. ನಾನೇ ಶಿವನು.

ಈ ಹಾಡು ಕೇಳಿ ಹರ್ಷಭರಿತನಾಗಿ ಸದ್ಗುರುನಾಥ ಹೌದು. ನಾನು ಯಾರೆಂಬುದು ನಿಮಗೆ ಯಾರಿಗೂ ತಿಳಿದಿಲ್ಲ. ನನಗೆ ದೇಹವಿಲ್ಲ, ರೋಗವಿಲ್ಲ, ರುಜಿನವಿಲ್ಲ, ಹಸಿವೆಇಲ್ಲ, ನೀರಡಿಕೆಇಲ್ಲ ಎನ್ನುತ್ತ ಭರಭರ ಓಡಾಡಲಾರಂಭಿಸಿದನು.

ಹದಿನೈದುದಿನಗಟ್ಟಲೆ ಅನ್ನ ನೀರುಗಳನ್ನು ಸ್ವೀಕರಿಸದೇ ಜ್ವರ ಬಂದು ಮಲಗಿದ ಗುರುವು ಈಗ ಅರೋಗ ಧೃಢಕಾಯ. ಇದೇನು ಆಶ್ಚರ್ಯಪಡುವ ಸಂಗತಿಯೋ? ಮಾಯೆಯೋ? ಕನಸೋ? ಯಾವುದೆಂಬುದನ್ನು ತಿಳಿಯಲಾಗದೇ ಭಕ್ತರು ಮರಳಿ ಮರಳಿ ಕೈಮುಗಿಯುತ್ತ ಮನೆಗೆ ತೆರಳಿದರು.

————

೩೧

ಪ್ರೀತೋಽಸ್ಮಿ ದೇವಿ ಭದ್ರಂತೇ ಭವಿಷ್ಯತಿ ಸುತಸ್ತವ ।

—ಪದ್ಮಪುರಾಣ

ದೇವಿ! ನಾನು ಸಂತೋಷನಾಗಿದ್ದೇನೆ. ನಿನ್ನ ಕಲ್ಯಾಣವಾಗುವುದು. ನಿನಗೊಬ್ಬ ಮಗಹುಟ್ಟುತ್ತಾನೆ.

ಕುರುವಿನಕೊಪ್ಪವೆಂಬುದೊಂದು ಗ್ರಾಮ. ಅಲ್ಲಿ ಬಸಪ್ಪ-ದಾನವ್ವರೆಂಬ ದಂಪತಿಗಳು. ಹೊಲ-ಮನೆ ಇದೆ, ಧನ-ಕನಕವಿದೆ. ಆದರೆ ಮನೆಯಲ್ಲಾಡುವ ಮಕ್ಕಳಿಲ್ಲ. ಯಾವಾಗಲೂ ಗಂಡ-ಹೆಂಡತಿಯರು ಕೊರಗುವರು, ದೇವರಿಗೆ ಮೊರೆಯಿಡುವರು. ಕೊನೆಗೆ ದೇವರು ಅವರ ಮೊರೆ ಕೇಳಿದನೇನೋ. ದಾನವ್ವ ಗರ್ಭಿಣಿಯಾದಳು. ಬಂಧು-ಬಳಗ ಕೂಡಿ ವಸ್ತ್ರಾಭರಣಗಳನ್ನು ಕೊಟ್ಟರು. ಮನೆಯಲ್ಲಿ ದೇವರ ಆರಾಧನೆ ಮಾಡಿದರು. ದಾನವ್ವನ ಬಯಕೆ ಪೂರ್ಣವಾದವು.

ದಿನತುಂಬುತ್ತ ಬಂದಹಾಗೆಲ್ಲ ಬಂಧುಗಳು ದಾನವ್ವನನ್ನು ಹೂವಿನಂತೆ ಜೋಪಾನ ಮಾಡಿದರು. ದಿನತುಂಬಿದವು. ಇಂದು ನಾಳೆ ಪ್ರಸವಕಾಲ ವೆಂದು ಎಲ್ಲರೂ ದಾರಿಕಾಯತೊಡಗಿದರು. ಆದರೆ ಪ್ರಸವಕಾಲ ಮುಂದೆ ಹೋದಂತೆ ದಿನ-ದಿನಕ್ಕೆ ದಾನವ್ವನ ಹೊಟ್ಟೆ ಇಳಿದು ಗರ್ಭಿಣಿ ಚಿಹ್ನಗಳೆಲ್ಲ ಇಲ್ಲದಂತಾದವು. ಸ್ವಾಭಾವಿಕ ಹೆಣ್ಣುಮಗಳಂತೆ ಸ್ಥಿತಿಯಾಗಲು ಮುಂದೆ ಕಂಡಾಳು, ಇದೇನೋ ಆಶ್ಚರ್ಯವಾಗಿದೆ ಎನ್ನುತ್ತ ಸಮಾಧಾನಮಾಡಿ ಕೊಂಡರು. ಆದರಿಂದ ಆ ದಂಪತಿಗಳಿಗೆ ಕೆಲವುದಿನ ವಿಷಾದವೆನಿಸಿದರೂ ಕಾಲಕ್ರಮೇಣ ಅದನ್ನು ಹಿಂದೂಡಿ ಬದುಕಿನಲ್ಲಿ ಒಂದಾದರು. ಯಾಕಂದರೆ ದಾನವ್ವನಿಗೆ ಇದಿನ್ನೂ ಮೊದಲ ಗರ್ಭ, ವಯಸ್ಸೂ ಆಗಿರಲಿಲ್ಲ. ಒಳಿತಾಗಿ ಬಾಳ್ವೆಮಾಡಿ ಎಲ್ಲರ ಮೆಚ್ಚಿಗೆ ಪಡೆಯಬೇಕೆಂಬ ಉಲ್ಲಾಸ ಜೇರೆ, ದೇವರು ಕಣ್ಣೆರೆದರೆ ಮತ್ತೆ ಕಾಣಬಹುದೆಂಬ ನಂಬಿಗೆಯೊಂದು.

ಹೀಗೆ ಕಾಲಕಳೆಯುತ್ತಿರಲು ಮತ್ತೆ ದಾನವ್ವ ಗರ್ಭವತಿಯಾದಂತೆ ಚಿಹ್ನಗಳು ಈ ಸಲ ಯಾರಿಗೂ ಅಷ್ಟೊಂದು ಉತ್ಸಾಹವಿರಲಿಲ್ಲ. ಹೇಗೆ ಇದ್ದರೂ ಕಾಲಸಿಲ್ಲುವಂಥದಲ್ಲ. ದಾನವ್ವನಿಗೆ ದಿನತುಂಬಿದವು. ತುನೆಯಲ್ಲಿ ವಿಶ್ರಾಂತಿಪಡೆಯತೊಡಗಿದಳು. ದಿನದಿನಕ್ಕೆ ಮೊದಲಿನಂತೆಯೇ ಗರ್ಭಕರಗಿ ಪುನಃ ಸ್ವಾಭಾವಿಕ ಹೆಣ್ಣುಮಗಳಂತಾದಳು. ದುರ್ದೈವವೆಂದು ಸುಮ್ಮನಾದರು.

ಉಳಿದವರು ಏನಾದರೂ ತಿಳಿದುಕೊಂಡು ಸುಮ್ಮನಾಗಬಹುದು. ಆದರೆ ಹೆಣ್ಣುಜೀವ ತನ್ನ ಪರಿಪೂರ್ಣತೆ ಕಾಣುವುದು ಇನ್ನೊಂದು ಜೀವಕ್ಕೆ ಜನ್ಮ ವಿತ್ತಾಗಲೇ. ದಾನವ್ವ ತನಗೊಂದು ಸಂತಾನಕೊಡು ಎಂದು ದೇವರನ್ನು ಭಜಿಸತೊಡಗಿದಳು. ಬಸಪ್ಪ ಕೂಡ ಮಕ್ಕಳಿಗಾಗಿ ಬಹಳ ಹಂಬಲಿಸುವ

ದನ್ನು ಕಂಡು ಮನಕರಗಿ ಅವಳು ತನ್ನ ಇಷ್ಟದಂತೆ ವ್ರತೋಪವಾಸಮಾಡಲು, ದಾನ-ಧರ್ಮಮಾಡಲು ಅವಕಾಶ ಕಲ್ಪಿಸಿದನು.

ಮೂರನೆಯ ಸಾರೆ ಮತ್ತೆ ದಾನವ್ವನಲ್ಲಿ ಗರ್ಭಚಿಹ್ನ ತೋರಹತ್ತಿದವು. ಆಗ ಒಂದುದಿನ ಅವರ ಮನೆಗೆ ಬಂದ ನೆರೆಮನೆಯಾಕೆ ದಾನವ್ವನನ್ನು- 'ದಾನವ್ವ, ಮತ್ತೆ ಶಿವ ನಿನಗೆ ಫಲಕೊಟ್ಟಂತೆ ಕಾಣುತ್ತದೆ. ಈ ಸಾರೆಯೂ ಹಿಂದಿನಂತಾಗಬಾರದು. ಈಗ ನೀನೊಂದು ಉಪಾಯ ಮಾಡಿದರೆ ಎಲ್ಲ ಒಳಿತಾದೀತೆನಿಸುತ್ತದೆ.' ಎಂದಳು. ಆ ಮಾತು ಕೇಳಿ ದಾನವ್ವ ನುಡಿದಳು. 'ಹೌದವ್ವ, ನನಗೂ ಹೆದರಿಕೆ ಇದ್ದೇಇದೆ. ದೇವರು ಯಾಕೋ ಚೇಷ್ಟೆಮಾಡಿ ದಂತೆ ನಡೆಸಿದ್ದಾನೆ. ಎಲ್ಲ ಚಿಹ್ನತೋರಿಸಿ ಮನದಲ್ಲಿ ಆಶೆಹುಟ್ಟಿಸುವುದು. ಹಿಂದಿನಿಂದ ನಿರಾಶೆಮಾಡುವುದು. ಹೀಗೆ ಮಾಡುವುದಕ್ಕಿಂತ ಶಿವ ನನ್ನನ್ನು ಬಂಜೆಯನ್ನಾಗಿ ಮಾಡಿದರೂ ದುಃಖವಿಲ್ಲ. ಜನರಲ್ಲಿ ಎಷ್ಟು ನಗೆಗೇಡಾಗ ಬೇಕಲ್ಲ. ಎಂದು ಬಹಳ ಕಷ್ಟವಾಗುತ್ತದೆ. ಹೇಳು, ಈ ಸಾರೆ ನಾನು ಕಸರಿಲ್ಲ ದಂತೆ ದೇವರ ಸೇವೆಮಾಡಿ ಮುಗಿಸಿದ್ದೇನೆ. ಇನ್ನೂ ಮಾಡಬೇಕಾದ ಉಪಾಯ ಗಳಿದ್ದರೆ ಹೇಳು, ಅವನ್ನೂ ಮಾಡಿನೋಡೋಣ. ಮುಂದಿನ ಫಲ ಶಿವನದು.'

'ಹೌದು. ನೀನು ಮಕ್ಕಳ ಸಲುವಾಗಿ ಪಡುವ ಕಷ್ಟ ನನಗೆ ಗೊತ್ತಿ-ಲ್ಲವೇ? ಈ ಸಾರೆ ನೀನು ಬಹಳರೀತಿ ದೇವರ ಸೇವೆಮಾಡಿದ್ದೂ ನಾನು ಬಲ್ಲೆ. ಏನೇಆಗಲಿ. ನೀನು ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಯ ದರ್ಶನ ಪಡೆದು ಯಾಕೆ ಬರಬಾರದು? ಅವರು ಬಹಳ ದಯಾವಂತರು. ಭಕ್ತರ ಸಂಕಟಗಳನ್ನು ಪರಿಹಾರ ಮಾಡುವವರು. ಎಂದು ಹೇಳುತ್ತಾರೆ. ನೀವು ಗಂಡ-ಹೆಂಡತಿಯರು ಹೋಗಿ ನಿಮ್ಮ ಸಂಗತಿಯನ್ನೆಲ್ಲ ಅವರ ಮುಂದೆ ಹೇಳಿ ಆಶೀರ್ವಾದ ಪಡೆದುಕೊಂಡು ಬರ್ರಿ. ನಿಮ್ಮ ಆಶೆ ಫಲಿಸುತ್ತದೆ.'

'ಅವಶ್ಯವಾಗಿ ಹೋಗಿಬರುತ್ತೇವೆ. ಆದರೆ ಅವರು ನಮ್ಮಿಂದ ಏನಾದರೂ ರೊಕ್ಕ-ಗಿಕ್ಕ ತೆಗೆದುಕೊಳ್ಳುವರೇನು?'

'ಎಂಥ ಹುಚ್ಚಿ ನೀನು ದಾನವ್ವ, ಅವರಿಗೇನೂ ಬೇಡ. ನೀವು ಒಳ್ಳೇ ಭಕ್ತಿಯಿಂದ ವಂದಿಸಿದರೆ ಸಾಕು. ಅಷ್ಟರಿಂದ ಅವರು ಸಂತೋಷ ಹೊಂದು ತ್ತಾರೆ. ಬೇಗನೆ ಹೋಗಿಬರ್ರಿ ದಿನಗಳೆಯುವುದು ಬೇಡ.'

ಎಂದು ಹೇಳಿ ನೆರೆಮನೆಯಾಕೆ ಹೋದಳು. ಸ್ವಾಮಿಯ ಬಳಿಗೆ ಹೋಗಿ ಬೇಡಿಕೊಂಡು ಬರಬೇಕೆಂದು ದಾನವ್ವನಿಗೂ ಬಲವಾದ ಇಚ್ಛೆಯಾಯಿತು. ಗಂಡನೊಡನೆ ಆ ಮಾತು ಹೇಳಲು ಅವನೂ ಆಗಲೆಂದನು. ಕೂಡಲೇ ಸದ್ಗುರುನಾಥನಿಗೆ ಅರ್ಪಿಸಲೆಂದು ಹಣ್ಣು-ಕಾಯಿ ತೆಗೆದುಕೊಂಡು ಮಠಕ್ಕೆ ಬಂದರು. ಅವರು ಮಠಕ್ಕೆ ಬಂದಾಗ ಸಿದ್ಧನು ಪ್ರಸನ್ನಮುಖನಾಗಿ ಆಸನದಲ್ಲಿ ವಿರಾಜಮಾನನಾಗಿದ್ದನು. ಆಗ ಸಾಯಂಕಾಲದ ಆರತಿಯ ವೇಳೆ. ಭಕ್ತರು ಎಲ್ಲ ಸಿದ್ಧತೆ ಮಾಡಿಕೊಂಡು ನಿಂತಿದ್ದರು. ಅಷ್ಟರಲ್ಲಿ ಈ ದಂಪತಿಗಳು ಮುಂದಾಗಿ ಹಣ್ಣು-ಕಾಯಿಗಳನ್ನು ಅರ್ಪಿಸಿ ಭಕ್ತಿಯಿಂದ ವಂದನೆ ಮಾಡಿ ಸರಿದು ಒಂದು ಕಡೆಗೆ ನಿಂತರು. ಭಕ್ತರು ಸುಸ್ವರದಿಂದ ಹಾಡುತ್ತ ಆರತಿ ಬೆಳಗಿ ಪುಷ್ಪಾಂಜಲಿ ಮಾಡಿ ವಂದಿಸಿ ತಂತಮ್ಮ ಕಾರ್ಯಗಳಿಗೆ ತೆರಳಿದರು. ಆಗ ಸಿದ್ಧ ಈ ದಂಪತಿಗಳ ಕಡೆಗೆ ಹೊರಳಿ ಎಲ್ಲ ವೃತ್ತಾಂತವನ್ನು ಕೇಳಿಕೊಂಡು ನುಡಿದನು. 'ಆಗಲಿ ಈ ಸಾರೆ ನಿಮ್ಮ ಇಚ್ಛೆಯಂತೆ ಮಗನು ಹುಟ್ಟುವುದು ನಿಜ. ಆದರೆ ನಿಮಗೆ ಅವನು ಉಪಯೋಗ ಬೀಳುವವನಲ್ಲ. ಅವನು ಮಹಾಯೋಗಿಯಾಗಬೇಕಾಗಿದೆ. ನೀವು ಪುಣ್ಯಶೀಲರಾದುದರಿಂದ ಅವನು ನಿಮ್ಮ ಹೊಟ್ಟೆಯಿಂದ ಹುಟ್ಟಿ ಬರುವದಷ್ಟೇ. ಮುಂದೆ ತನ್ನನ್ನು ಜೋಪಾನ ಮಾಡುವ ಶ್ರಮ ಕೂಡ ನಿಮಗೆ ಕೊಡುವದಿಲ್ಲ. ಹುಟ್ಟಿದ ಕೂಡಲೇ ಅದೃಶ್ಯನಾಗಿ ಬೇರೆ ಕಡೆಗೆ ಬೆಳೆಯುತ್ತಾನೆ.' ಎನ್ನಲು ಆ ದಂಪತಿಗಳು ಕಣ್ಣೀರ್ಗರೆಯುತ್ತ 'ಹಾಗಾದರೆ ನಮ್ಮ ಗತಿ ಏನು ? ನಾವು ಇಂಥ ಮಗನನ್ನು ಬಯಸಿದವರಲ್ಲ. ನಿನ್ನ ಅನುಗ್ರಹದಿಂದ ನಮಗೆ ಮನೆ-ಮಾರು, ಭೋಗ-ಭಾಗ್ಯವೆಲ್ಲ ಇದೆ. ನಮಗೊಬ್ಬ ಮಗ ಹುಟ್ಟಿದರೆ ಬಾಳ್ವೆ ಸಾರ್ಥಕವಾಗುವುದೆಂದು ನಮಗನಿಸುತ್ತದೆ ಆ ನಮ್ಮ ಆಶೆ ಸುಳ್ಳಾದಂತೆ ಆಗುವುಲ್ಲ.' ಎಂದು ಗೋಳಿಡಲು ಸದ್ಗುರು ಕರುಣಾರ್ದ್ರಚಿತ್ತನಾಗಿ ' ಈ ಸಾರೆ ಹುಟ್ಟುವ ಮಗನಂತೂ ನೀವು ಕಾಣಲಾರಿರಿ. ಮುಂದೆ ನಿಮಗೆ ಮತ್ತೊಬ್ಬ ಮಗ ಹುಟ್ಟಿ ಮನೆಯನ್ನು ಬೆಳಗುತ್ತಾನೆ. ಚಿಂತಿಸಬೇಡಿರಿ.' ಎಂದು ಹೇಳಿ ಅವರನ್ನು ಊರಿಗೆ ಕಳಿಸಿದನು.

ಬಸಪ್ಪ-ದಾನವ್ವ ಮಾತಾಡಿಕೊಂಡರು. 'ನಮ್ಮದೇನು ನಡೆಯುತ್ತದೆ. ಸದ್ಗುರುವಿನ ಇಚ್ಛೆ ಇರುವಂತಾಗಲಿ' ಎಂದು ಸಮಾಧಾನದಿಂದ ದಿನಗಳೆಯು

ತೊಡಗಿದರು. ದಾನವ್ವನಿಗೆ ದಿನ ತುಂಬಿದವು. ಇಂದು ನಾಳೆ ಹೆರಿಗೆಯ ದಿನ ಎಣಿಕೆಹಾಕತೊಡಗಿದರು.

ಒಂದು ದಿನ ದಾನವ್ವ ನಿದ್ರೆಯಲ್ಲಿದ್ದಳು. ಕನಸಿನಲ್ಲಿ ಪ್ರಸವವೇದನೆಯಾದಂತೆನಿಸಿತು. ನೋವು ತಡೆಯದೇ ಸಿದ್ಧಾರೂಢರ ನಾಮವನ್ನು ಸ್ಮರಿಸಹತ್ತಿದಳು. ಎದುರಿಗೇ ಸಿದ್ಧಾರೂಢ ಮೂರ್ತಿ ಪ್ರತ್ಯಕ್ಷವಾದಂತಾಯಿತು. ಅವನ ಕೃಪಾವಲೋಕನವಾಗುವುದೇ ತಡ, ಗುರುವರನು ಆ ಕೂಸನ್ನು ಎತ್ತಿಕೊಂಡು ಹೇಳಿದನು– 'ಅವ್ವ, ಇದು ಕನಸಲ್ಲ. ಎಲ್ಲರಿಗೆ ಪ್ರತ್ಯಕ್ಷವೂ ಅಲ್ಲ. ನೀನು ಮಠಕ್ಕೆ ಬಂದಾಗ ಹೇಳಿದಂತೆ ಈ ಕೂಸನ್ನು ಎತ್ತಿಕೊಂಡು ಹೋಗುತ್ತೇನೆ. ನಿನಗೆ ಬೇಗನೇ ಮತ್ತೊಬ್ಬ ಮಗು ಹುಟ್ಟುತ್ತಾನೆ. ಈ ನಿನ್ನ ಮಗ ಸಜ್ಜನರಲ್ಲಿ ಜೋಪಾನ ಹೊಂದಿ ಪ್ರಸಿದ್ಧನಾಗುತ್ತಾನೆ. ಎಷ್ಟು ಮಾತ್ರವೂ ಚಿಂತೆಮಾಡಬೇಡ' ಎಂದು ಹೇಳಿ ಕೂಸಿನೊಡನೆ ಸದ್ಗುರು ಅದೃಶ್ಯನಾದಂತಾಯಿತು. ಅವಳಿಗೆ ಕೂಡಲೇ ಎಚ್ಚರವಾಗಿ ಕಣ್ಣು ತೆರೆದಳು. ಹೆತ್ತ ಚಿಹ್ನಗಳೆಲ್ಲ ಇದ್ದವು. ಮನೆಯಲ್ಲಿ ಹೆಂಗಸರನ್ನು ಕೂಗಿದಳು. ಅವರೆಲ್ಲ ಬಂದು ಕೂಸು ಮಟಮಾಯವಾದುದನ್ನು ಕಂಡು ಆಶ್ಚರ್ಯಪಡುತ್ತ ಕೂಸನ್ನು ನಾಯಿ ಎಳೆದಿರಬಹುದೇ? ಬೆಕ್ಕು ಬಂದಿರಬಹುದೇ? ಎನ್ನುತ್ತ ಸಂದಿ-ಮೂಲೆಗಳಲ್ಲಿ ಹುಡುಕಲಾರಂಭಿಸಿದರು. ಈ ಸುದ್ದಿ ತಿಳಿದು ಬಸಪ್ಪ ಬರಲು ದಾನವ್ವ ಕನಸಿನ ವೃತ್ತಾಂತವನ್ನು ತಿಳಿಸಿ ಗುರುನಾಥನು ಕೂಸನ್ನು ಒಯ್ದಿರುವದನ್ನೂ ಹೇಳಿದರು. ಅದನ್ನು ಕೇಳಿ ಬಸಪ್ಪನಿಗೆ ವಿಷಾದವೇನೂ ಅನಿಸಲಿಲ್ಲ. ಯಾಕಂದರೆ ಆ ಸಂಗತಿ ಮೊದಲೇ ನಿಶ್ಚಯವಾಗಿತ್ತು. ಹುಡುಕಹೋದವರು ವಿಷಾದದಿಂದ ಮರಳಿದರು. ಇದೇ ಚಮತ್ಕಾರವೆಂಬುದು ಒಬ್ಬರಿಗೂ ಗೊತ್ತಾಗಲಿಲ್ಲ.

ಬಾಣಂತಿಯಾಗಿ ಪಥ್ಯ–ಪಳಿಗೆಯಲ್ಲಿರುವದು ನಿಜ. ಆದರೆ ಕೂಸು ಮಾತ್ರ ಇಲ್ಲ. ಎನ್ನುತ್ತ ಕೆಲದಿನ ದಾನವ್ವ ಯಾರಿಗೂ ತಿಳಿಯದಂತೆ ಕಣ್ಣೀರು ಹಾಕುತ್ತಿದ್ದಳು. ಕಾಲಕಳೆದಂತೆ ಅದು ಕಡಿಮೆಯಾಗಿ ಹೋಯಿತು. ಹೀಗೆ ಕೆಲಕಾಲ ಕಳೆಯುತ್ತಿರಲು ಒಂದು ಸಾರೆ ಪುನಃ ಗಂಡ–ಹೆಂಡತಿ ಸದ್ಗುರುನಾಥನ ಬಳಿಗೆ ಬಂದರು. ದಾನವ್ವ ತನ್ನ ಹೆರಿಗೆಯ ಸುದ್ದಿಯನ್ನೆಲ್ಲ ಹೇಳಿದಳು. ಅದನ್ನು ಕೇಳಿ ಸಿದ್ಧನು ನುಡಿದನು— 'ದಾನವ್ವ, ಆ ಕೂಸನ್ನು

ನೆನೆದು ಮರುಗಬೇಡ. ಅದು ಸುರಕ್ಷಿತವಾಗಿ ಸುಖರೂಪದಿಂದ ಬೆಳೆಯುತ್ತಿದೆ. ಅವನೊಬ್ಬ ತಪಸ್ವೀ ಪುರುಷ. ಕರ್ಮಶೇಷದಿಂದ ಇಲ್ಲಿ ನಿಮ್ಮ ಹೊಟ್ಟೆಯಿಂದ ಹುಟ್ಟಬೇಕಾಯಿತು. ಅವನಿಗೆ ಸರ್ವಥಾ ಪ್ರಾಪಂಚಿಕದ ಸಹವಾಸ ಬೇಡಾಗಿತ್ತು. ಇದಿನ್ನೆಲ್ಲ ತಿಳಿದು ಸಾಧು ಸಮಾಗಮದಲ್ಲಿ ಅವನನ್ನು ಬೆಳಿಸಬೇಕಾಯಿತು. ಈ ಮೊದಲೇ ನಿನಗೆ ಹೇಳಿದಂತೆ ವರ್ಷ ತುಂಬುವಷ್ಟರಲ್ಲಿ ನಿನಗೊಬ್ಬ ಮಗ ಹುಟ್ಟಿ ಮನೆಗೆ ಬೆಳಕಾಗುವನು.' ಎಂದು ಮಧುರ ಮಾತುಗಳನಾಲಿಸಿ ಅತ್ಯಾನಂದಿತರಾದ ದಂಪತಿಗಳು ತಮ್ಮೂರಿಗೆ ಬಂದು ಸದ್ಗುರು ಸ್ಮರಣದಲ್ಲಿ ತಲ್ಲೀನರಾದರು. ಇನ್ನೂ ವರ್ಷ ತುಂಬಿರಲಿಲ್ಲ ದಾನವ್ವ ಗಂಡು ಮಗುವನ್ನು ಹೆತ್ತು ಆನಂದಭಾಗಿಯಾದಳು.

೩೨

ಕಸ್ತ್ವಂ ಶಿಶೋ ಕಶ್ಯ ಕುತೋಽಸಿ ಗಂತಾ । ಕಿಂ ನಾಮ ತೇ
ತ್ವಂ ಕುತ ಆಗತೋಽಸಿ ॥
ಏತನ್ಮಯೋಕ್ತಂ ವದ ಚಾರ್ಭಕ ತ್ವಂ । ಮತ್ಪ್ರೀತಯೇ
ಪ್ರೀತಿವಿವರ್ಧನೋಽಸಿ ॥

--ಹಸ್ತಾಮಲಕ

ಮಗುವೇ ನೀನು ಯಾರು? ಯಾರ ಮನೆಯವ? ಎಲ್ಲಿಗೆ ಹೋಗಬೇಕು? ನಿನ್ನ ಹೆಸರೇನು? ನೀನು ಎಲ್ಲಿಂದ ಬಂದೆ? ನಿನ್ನನ್ನು ಕಂಡು ನನ್ನ ಪ್ರೀತಿ ಉಕ್ಕಿದೆ. ನನ್ನ ಮಾತಿಗೆ ಉತ್ತರ ಕೊಡು. ಅಂದರೆ ಸಂತೋಷವಾಗುವುದು.

ಎಂದು ಭಗವಾನ್ ಶಂಕರಾಚಾರ್ಯರು ತಮ್ಮ ಬಳಿಗೆ ಬಂದ ಹುಡುಗನನ್ನು ಕುರಿತು ಪ್ರಶ್ನೆ ಮಾಡಿದರಂತೆ. ಆ ಹುಡುಗ ಆಚಾರ್ಯರಿಗೆ ಸರಿಯಾದ ಉತ್ತರ ಕೊಟ್ಟು ಅವರ ಶಿಷ್ಯತ್ವವನ್ನು ವಹಿಸಿ ಮುಂದೆ ಹಸ್ತಾಮಲಕನೆಂದು ಪ್ರಸಿದ್ಧನಾದನೆಂದು ಒಂದು ಕಥೆಯುಂಟು.

ತುಸು ಹೆಚ್ಚು ಕಡಿಮೆಯಾಗಿ ಇಂಥದೇ ಒಂದು ಕಥೆ ಸಿದ್ಧಾರೂಢ ಚರಿತ್ರದಲ್ಲಿಯೂ ನಡೆದಿದೆ. ಆ ಕಥೆ ಹೀಗೆ- ಒಂದುದಿನ ಸಿದ್ಧಾರೂಢಸ್ವಾಮಿ ಸುಖಾಸನದಲ್ಲಿ ಮಂಡಿಸಿರಲು ಹತ್ತು-ಹನ್ನೆರಡು ವರ್ಷ ವಯಸ್ಸಿನ ಬಾಲಕನು ಅಳುತ್ತ ಬಂದವನೇ ಪದತಲದಲ್ಲಿ ಬಿದ್ದು ಹೊರಳಾಡತೊಡಗಿದನು. ಅವನು ಬೇಗನೆ ಮೇಲಕ್ಕೇಳದಂತಾಗಲು ಸಿದ್ಧನು ಅವನನ್ನು ಹಿಡಿದೆತ್ತಿ ಬಳಿಯಲ್ಲಿ ಕುಳ್ಳಿರಿಸಿಕೊಂಡು ಮೈದಡವಿ ಪ್ರೇಮದಿಂದ ಮೇಲಿನ ಶ್ಲೋಕದಲ್ಲಿ ಹೇಳಿದಂತೆ ಪ್ರಶ್ನೆ ಕೇಳಲು ಆ ಹುಡುಗ ಹೇಳಿದನು.

'ಯಾರು ನನ್ನವರೆಂದು ನಂಬಿದ್ದೆನೋ ಅವರು ಮನೆಬಿಡಿಸಿ ಹೊರಗೆ ಹಾಕಿದರು. ಅಂದಮೇಲೆ ಅವರು ನನ್ನವರೆಂದು ಅನ್ನಲು ಬರುವಂತಿಲ್ಲ. ನಾನು ಇದುವರೆಗೆ ಅವರ ಬಳಿಯಲ್ಲಿದ್ದುದು ನನಗೆ ಆಶ್ರಯಬೇಕೆಂದು. ಹಾಗೆ ಇದ್ದಾಗಲೂ ಅವರ ಮಾತಿನಂತೆ ನಡೆದು ಅವರನ್ನು ಒಂದುದಿನ ಕೂಡ ಸಂತೋಷಗೊಳಿಸಿಲ್ಲ, ಅವರ ಸೇವೆಮಾಡಿಲ್ಲ. ಸದಾಶಿವಧ್ಯಾನ-ಶಿವಪೂಜೆ ಗಳು ನನ್ನ ಪ್ರೀತಿಯವು. ಅವುಗಳಲ್ಲಿಯೇ ನಾನು ಕಾಲಕಳೆಯತೊಡಗಿದ್ದ ರಿಂದ ಮನೆಬಿಡಿಸಿ ಹೊರಗೆಹಾಕಿದರು. ಇನ್ನೇನೂ ನಾನು ಮನೆಗೆ ಹೋಗ ಲಾರೆ. ನೀನು ಶಿವಾವತಾರವೆನಿಸಿದ ಸದ್ಗುರುನಾಥನೆಂದು ಕೀರ್ತಿಕೇಳಿ ಸನ್ನಿಧಿಗೆ ಬಂದಿರುವೆನು. ನನ್ನನ್ನು ಉದ್ಧರಿಸುವ ಭಾರ ನಿನ್ನದು.' ಎಂದು ಅಸ್ಖಲಿತವಾಗಿ ಮಾತಾಡಿ ಕೈಮುಗಿದು ಸುಮ್ಮನಾದನು. ಆ ಬಾಲಕನನ್ನು ಕಂಡು ಸದ್ಗುರುನಾಥನ ಮನ ವಾತ್ಸಲ್ಯದಿಂದ ತುಂಬಿತು. ದೃಢನಿರ್ಧಾರ ನುಡಿಗಳನ್ನು ಕೇಳಿ ಮೆಚ್ಚಿಕೆಯಾಯಿತು. ಅವನಂದನು-

'ಒಳ್ಳೇದು. ನೀನು ಶರಣನೆಂದು ಹೆಸರಾಗಿ ಮಠದಲ್ಲಿದ್ದುಬಿಡು.'

ಕಳೆದುಕೊಂಡ ಆಶ್ರಯವನ್ನು ಶರಣ ಪಡೆದನು. ಮೊದಲಿನ ಆಶ್ರಯ ದಲ್ಲಿ ಶಿವಧ್ಯಾನ-ಶಿವಪೂಜೆಗಳಿಗೆ ಅಷ್ಟೊಂದು ಅವಕಾಶವಿರಲಿಲ್ಲ. ಸದ್ಗುರು ವಿನ ಸನ್ನಿಧಿಯಲ್ಲಿ ಅವೇ ಮುಖ್ಯ ಕಾರ್ಯಗಳಾಗಿದ್ದವು. ಮನೆಯಲ್ಲಿರುವಾಗ ಅವುಗಳನ್ನು ಮಾಡುತ್ತಿದ್ದರೆ ಎಲ್ಲರ ತಿರಸ್ಕಾರ. ಇಲ್ಲಿ ಮಾಡಿದರೆ ಸದ್ಗುರು ಕೃಪೆಯ ಪುರಸ್ಕಾರ. ಶರಣನು ಆನಂದದಿಂದ ಮಠದಲ್ಲಿ ನಿಂತನು. ಬೆಳಗಿ ನಲ್ಲೆದ್ದು ಸ್ನಾನ-ಸದ್ಗುರುದರ್ಶನ-ಶಿವಪೂಜೆ-ಶಿವಧ್ಯಾನ ಮುಗಿಸಿಕೊಂಡು ಮಧ್ಯಾಹ್ನವಾಗಲು ಊರೊಳಗೆ ಭಿಕ್ಷೆಯ ಸಲುವಾಗಿ ತೆರಳುವನು. ಬಂದ

ಭಿಕ್ಷೆಯನ್ನು ಸಿದ್ಧನಿಗರ್ಪಿಸಿ ಅವನು ಕೊಟ್ಟಷ್ಟು ಸ್ವೀಕಾರಮಾಡಿ ಊಟ ಮಾಡುವನು. ಒಂದುಸಾರೆ ಪರೀಕ್ಷಿಸಬೇಕೆಂದು ಸದ್ಗುರುನಾಥ ಭಿಕ್ಷಾನ್ನವನ್ನೇ ಕೊಡಲಿಲ್ಲ. ಆಗ ಶರಣನು ಯಾವ ಮಾತನ್ನೂ ಆಡದೆ ಸುಮ್ಮನಾಗಿ ತನ್ನ ನಿತ್ಯಕಾರ್ಯದಲ್ಲಿ ತೊಡಗಿದನು. ಸದ್ಗುರು ಉಪವಾಸವಿಟ್ಟನೆಂದು ಸಿಟ್ಟನ್ನೂ ಮಾಡಲಿಲ್ಲ. ಶೋಕವನ್ನೂ ಪ್ರಕಟಿಸಲಿಲ್ಲ. ಸಮಾಧಾನದಿಂದ ಸದ್ಗುರು ಸ್ಮರಣದಲ್ಲಿ ಅಂದಿನ ದಿನ ಕಳಿದನು. ಮರುದಿನ ಯಥಾಪ್ರಕಾರ ಭಿಕ್ಷೆಗೆ ಹೋಗಲು ದಿನಕ್ಕಿಂತ ಎಷ್ಟೋ ಹೆಚ್ಚು ಭಿಕ್ಷೆ ದೊರೆಯಿತು. ಹಸಿದ ಹೊಟ್ಟೆ ಉಂಡುಬಿಡು, ಎಂದು ಹೇಳಿತು. ಆದರೆ ಗುರುವಿಗರ್ಪಿಸದೇ ಉಂಡ ಅನ್ನ ವಿಷಕ್ಕೆ ಸಮಾನವಾದುದೆಂದು ಸಮಾಧಾನ ತಾಳಿ ಗುರುವಿನ ಬಳಿಗೆ ಬಂದು ಭಿಕ್ಷೆಯನ್ನು ಅರ್ಪಿಸಿದನು. ಹೀಗೆ ಅವನು ಬಂದಕೂಡಲೇ ಸದ್ಗುರು ಅವನನ್ನು ಕುರಿತು– 'ಶರಣಾ, ನಿನ್ನೆ ದಿನವಿಡೀ ನೀನು ಉಪವಾಸ. ಭಿಕ್ಷೆತರುವಾಗ ದಾರಿಯಲ್ಲಿ ಉಂಡುಬಂದಿರಬೇಕಲ್ಲವೇ? ಹೌದು. ಇದರಲ್ಲಿ ಸಂದೇಹವೇ ಇಲ್ಲ.' ಎನ್ನಲು ಮರುಮಾತಾಡದೇ ವಂದಿಸಿ ಶರಣ ಸೇವೆಗೆ ತೆರಳಿದನು.

ಪ್ರಸನ್ನಮನಸ್ಕನಾಗಿ ಸದ್ಗುರು ಸೇವೆಯಲ್ಲಿ ಅವನು ನಿಮಗ್ನನಾಗಿ ಬಾಯಿಂದ ಸದ್ಗುರುನಾಮವನ್ನು ಪಠಿಸತೊಡಗಿದನು. ಅವನು ಯಾವಾಗಲೂ ವಿನಯಶಾಲಿ. ಒತ್ತಿಮಾತಾಡಿ ಅವನಿಗೆ ಗೊತ್ತಿರಲಿಲ್ಲ. ಇಂಥ ಭಕ್ತನು ಎರಡು ದಿನಗಳಿಂದ ಉಪವಾಸವಿರುವುದು ಸದ್ಗುರುನಾಥನ ಸಮಾಧಾನವನ್ನು ಭಂಗಿಸಿತು. ಶರಣನಿರುವಲ್ಲಿಗೆ ಬಂದು ಹೇಳಿದನು. 'ಶರಣಾ, ಆಚೆಯ ಗಿಡದಲ್ಲಿರುವ ಹಣ್ಣುಗಳನ್ನು ಹರಿದುಚಲ್ಲು, ನಾನು ಕೆಳಗೆ ಆರಿಸುತ್ತೇನೆ.' ಇದು ಗುರುವಿನ ಅಪ್ಪಣೆ, ಪಾಲಿಸುವುದು ಕರ್ತವ್ಯ. ಎಂದುಕೊಂಡು ಗಿಡವನ್ನೇರಹತ್ತಿದನು. ಕೈಕಾಲು ನಡುಗುತ್ತಿದ್ದವು, ತಲೆ ಸುತ್ತುತ್ತಿದ್ದಿತು. ಆದರೂ ಅವನು ಹಿಂದೆಗೆಯಲಿಲ್ಲ. ಯಾರಿಂದಲೋ ಕಲಿತ ಹಾಡೊಂದು ನೆನಪಿಗೆ ಬಂದಿತು.

ದೇಹ–ವಾಣಿ-ಎನ್ನಮನಾ । ನಿನಗರ್ಪಣಾ ।
ನನಗೇಕದರಭಾನಾ । ಗುರು ಭಗವಾನಾ ॥

–ಮಿಶ್ರಪೀಲೂ ಕವ್ವಾಲಿ

ಮನದಲ್ಲಿಯೇ ಅಂದುಕೊಳ್ಳುತ್ತ ಮೆಲ್ಲನೇ ಗಿಡವೇರಿದನು. ಅವಯವಗಳಲ್ಲಿ ಉಪವಾಸದಿಂದ ಶಕ್ತಿ ಇಲ್ಲದಂತಾಗಿತ್ತು. ಎಲ್ಲಿ ಕೆಳಗೆ ಬೀಳುವೇನೋ

ಎಂಬ ಹೆದರಿಕೆಯಾಗಲು ಶರಣ ಯೋಚಿಸಿದನು. 'ಒಮ್ಮೆ ಈ ದೇಹವನ್ನು ಸದ್ಗುರುನಾಥನಿಗರ್ಪಿಸಿರುವೆನೆಂದ ಮೇಲೆ ಮತ್ತೇಕೆ ನಾನು ಅದರ ವಿಚಾರ ಮಾಡಬೇಕು ? ನನ್ನ ಸದ್ಗುರುವಿಗೆ ಬೇಕೆನಿಸಿದ್ದರೆ ಅವನು ರಕ್ಷಿಸುದನು. ಬೇಡವಾಗಿದ್ದರೆ ಉರುಳಿಸುವನು. ಅದರ ಬಗೆಗೆ ನಾನು ವಿಚಾರಿಸುವುದು ಸರಿಯಲ್ಲ.' ಎಂದುಕೊಂಡು ಸದ್ಗುರುವಿನ ಹೊರತು ಮತ್ತೊಂದನ್ನು ಚಿಂತಿಸದೇ ಆ ಗಿಡದ ತುತ್ತತುದಿಗೇರಿದನು. ಕಣ್ಣಿಗೆ ಕತ್ತಲು ಕವಿದಂತಾಯಿತು. ಕ್ಷಣ ಮಾತ್ರ ಕಣ್ಣುಮುಚ್ಚಿ ಒಂದು ಟೊಂಗೆಯ ಮೇಲೆ ಕುಳಿತು ನಂತರ ಕಣ್ಣು ತೆರೆದು ಹಣ್ಣುಹರಿಯಲು ಕೈಚಾಚಿದನು. ಕೈಕಾಲು ಕತ್ತರಿಸಿದವು. ಜೋಲಿ ಸಂಭಾಳಿಸಲಾಗಲಿಲ್ಲ. ಕೈಹಿಡಿದ ಟೊಂಗೆ ಮುರಿಯಲು— 'ಸದ್ಗುರು ಸಿದ್ಧಾರೂಢಸ್ವಾಮೀ' ಎಂದು ಕೂಗಿ ಭೂಮಿಗೆ ಬಿದ್ದು ಮೂರ್ಚ್ಛಾಕ್ರಾಂತನಾದನು. ಆ ಸಪ್ಪಳ ಕೇಳಿ ಜನರು ಓಡೋಡಿ ಬಂದರು. ಅವರನ್ನು ಕಂಡು ಸಿದ್ಧನು 'ನೀವೇನೂ ಶರಣರ ವಿಷಯವಾಗಿ ಚಿಂತಿಸಬೇಡಿರಿ. ನಿಮ್ಮ ನಿಮ್ಮ ಕೆಲಸ ನೋಡಿಕೊಳ್ಳಿರಿ. ನಾನು ಅವನನ್ನು ನೋಡಿಕೊಳ್ಳುತ್ತೇನೆ.' ಎಂದು ನುಡಿದು ಶರಣನ ಬಳಿಯಲ್ಲಿ ಬಂದು ಕುಳಿತನು. ಆಗ ಮೈತುಂಬ ಕೈಯಾಡಿಸಿ ಅವನ ವಕ್ಷಸ್ಥಲವನ್ನು ಸ್ಪರ್ಶಿಸಿ 'ಮಗು, ಇನ್ನು ಏಳು.' ಎಂದು ಮಧುರವಾಗಿ ನುಡಿಯಲು ಶರಣನಿಗೆ ಎಚ್ಚರ ಬಂದು ಮೆಲ್ಲನೆ ಕಣ್ಣು ತೆರೆದು ನೋಡಿದನು. ಬಳಿಯಲ್ಲಿಯೇ ಸದ್ಗುರು ಕುಳಿತಿದ್ದಾನೆ. ಮಲಗಿದಲ್ಲಿಯೇ ಶರಣ ಕೈಮುಗಿದು ಕೃತಜ್ಞತೆಯಿಂದ ಸದ್ಗುರುವನ್ನು ನಿರೀಕ್ಷಿಸಲಾರಂಭಿಸಿದನು. ಆಗ ಸದ್ಗುರು ಕೇಳಿದನು.

'ಈ ಅವಸ್ಥೆಯಲ್ಲಿ ನಿನಗೆ ಯಾವ ಅನುಭವ ಬಂದಿತು ?''

'ನನಗೆ ಯಾವುದೂ ತಿಳಿಯಲಿಲ್ಲ. ನಾನು ಇರುವೆನೆಂದು ಕೂಡ ಅನುಭವಕ್ಕೆ ಬರಲಿಲ್ಲ.'

'ಯಾವುದೂ ಅನುಭವಕ್ಕೆ ಬರಲಿಲ್ಲವೆಂಬ ಅಭಾವ ಸ್ಥಿತಿ ಅನುಭವಕ್ಕೆ ಬಂದದ್ದಾದರೆ ಅದನ್ನರಿಯುತ್ತ ನೀನು ಇರಬೇಕಲ್ಲವೇ ?'

'ಹೌದು.'

'ಮಗು, ಆ ಅಚ್ಚ ಅರಿವೆಂದರೇ ಸ್ವರೂಪಜ್ಞಾನವೆಂದು ತಿಳಿ.'

'ಧನ್ಯನಾದೆ ಗುರುದೇವಾ.'

ಈ ಮೂರ್ಚ್ಛೆಬಂದಾಗಿನ ನಿನ್ನ ಸ್ಥಿತಿಯನ್ನು ಯಾವಾಗಲೂ ನೆನೆಯುತ್ತಿರು. ಅಚ್ಚ ಅರಿವೇ ನನ್ನ ರೂಪವೆಂದು ಅಖಂಡವಾಗಿ ಧ್ಯಾನಿಸು. ಅಂದರೆ ನೀನು ಮುಕ್ತ.'

ಎಂದು ನುಡಿದು- ಸದ್ಗುರು ತನ್ನ ಅಮೃತಹಸ್ತವನ್ನು ವಾತ್ಸಲ್ಯದಿಂದ ಶಿಷ್ಯನ ಮಸ್ತಕದಮೇಲಿರಿಸಿದನು. ಆಗ ಶರಣನು ಕಣ್ಮುಚ್ಚಿ ಅಂತರ್ಮುಖಿಯಾಗಿ ನಿರುಪಾಧಿಕ ಸ್ವಾತ್ಮದರ್ಶನವನ್ನು ಪಡೆದನು.

ಕ್ಷಣಮಾತ್ರ ಈ ಸ್ಥಿತಿಯಲ್ಲಿದ್ದು ಪುನಃ ಬಹಿರ್ಮುಖನಾಗಿ ನೋಡಲು ಜಗತ್ತು ವಿಲಕ್ಷಣವಾಗಿ ತೋರಿತು. ಅಖಂಡನಾದ ಆತ್ಮನೊಬ್ಬನುಳಿದು ಜಗತ್ತೆಲ್ಲ ಕರಗಿಹೋದಂತೆನಿಸಿತು. ನಿರ್ಮಲಾನಂದವು ಅನುಭವಕ್ಕೆ ಬಂದಿತು.

ಸದ್ಗುರುವು ಶಿಷ್ಯನ ಸ್ಥಿತಿಯನ್ನು ಕಂಡು 'ಶರಣಾ, ಇದನ್ನೇ ಪುನಃ ಪುನಃ ಧ್ಯಾನಮಾಡು. ನಿನ್ನ ವಿನಾ ಅನ್ಯವೇನಾದರೂ ಧ್ಯಾನದಲ್ಲಿ ಬಂದರೆ ಅದೆಲ್ಲ ಆತ್ಮವೇ ಎಂದು ನಿಶ್ಚಯವಾಗಿ ತಿಳಿ. ನಾಮರೂಪಗಳ ವ್ಯಾಮೋಹವನ್ನು ತ್ಯಾಗಮಾಡು. ನಾನು ಜ್ಞಾನಿ, ಎಂಬ ಗರ್ವವನ್ನೆಂದೂ ತಾಳಬೇಡ.' ಎಂದು ಶಿಷ್ಯನನ್ನು ಅನುಗ್ರಹಿಸಿ ಆಶ್ರಮ ಪ್ರವೇಶಿಸಿದನು.

ಹೀಗಿರಲು ಸದ್ಗುರುವಿನ ದರ್ಶನಾರ್ಥಿಯಾಗಿ ಒಬ್ಬ ಗೃಹಸ್ಥನು ಒಂದು ದಿನ ಬಂದು ನಮಸ್ಕರಿಸಿ ಕುಳಿತನು. ಆಗ ಸಿದ್ಧನು 'ಬಂದ ಕಾರ್ಯವೇನೆಂ'ದು ಅವನನ್ನು ವಿಚಾರಿಸಲು 'ಸ್ವಾಮಿ, ನಾನು ವಿಜಾಪೂರದವನು. ತಮ್ಮ ದರ್ಶನಕ್ಕೆ ಬಂದಿದ್ದೇನೆ. ಅಲ್ಲಿ ನಾನಿರುವುದು ಷಣ್ಮುಖಸ್ವಾಮಿಗಳ ಬಳಿ. ಈ ನಿಮ್ಮ ಶಿಷ್ಯನಾದ ಶರಣಪ್ಪನು ಸಣ್ಣಕೂಸು ಇದ್ದಾಗಿನಿಂದ ಅಲ್ಲಿಯೇ ದೊಡ್ಡವನಾದವನು. ಅವನು ಅಲ್ಲಿಗೆ ಬಂದ ಕಥೆಯೇ ದೊಡ್ಡ ವಿಚಿತ್ರವಾಗಿದೆ.' ಎಂದು ನುಡಿದನು ಆಗ ಸಿದ್ಧನು 'ಅದೇನು! ಹೇಳಿಬಿಡಿರಿ. ಜನರೆಲ್ಲ ಕುತೂಹಲಿಗಳಾಗಿದ್ದಾರೆ' ಎಂದನು.

ಆ ಗೃಹಸ್ಥನು ಹೇಳಲಾರಂಭಿಸಿದನು—

'ಈಗ ಸುಮಾರು ಹನ್ನೆರಡು ವರ್ಷಗಳ ಹಿಂದೆ ಒಂದುದಿನ ಷಣ್ಮುಖಸ್ವಾಮಿಗಳು ಮಲಗಿದಾಗ ಅವರಿಗೊಂದು ಸ್ವಪ್ನವಾಯಿತು. ಸ್ವಪ್ನದಲ್ಲಿ ನೀವು ಬಂದು 'ನಾಳೆ ಬೆಳಗಾಗುವಷ್ಟರಲ್ಲಿ ನಿನಗೊಂದು ಗಂಡುಕೂಸು ದೊರೆಯುವುದು. ಅದನ್ನು ಜೋಪಾನ ಮಾಡುವ ವ್ಯವಸ್ಥೆಯನ್ನು ನೀವು ಅವಶ್ಯ ಮಾಡ

ಬೇಕು.' ಎಂದು ಅದೃಶ್ಯರಾದಿರಂತೆ. ನಂತರ ಎಚ್ಚತ್ತ ಸ್ವಾಮಿಗಳು ಸುತ್ತಲೂ ನೋಡಲು ಆ ಘೋರ ಕತ್ತಲೆಯಲ್ಲಿ ದಿವ್ಯ ಪ್ರಕಾಶ ಗೋಚರವಾಯಿತು. ಮರುದಿನ ಬೆಳಗಾಗಲು ಅವರು ಹೂದೋಟಕ್ಕೆ ಹೋದಾಗ ಅಲ್ಲಿಯ ಒಂದು ಗಿಡದ ಬುಡದಲ್ಲಿ ಬಿಳಿಯ ಒಂದು ಅರಿವೆ ಹಾಸಿ ಹೊಚ್ಚಿದ ಗಂಡು ಕೂಸು. ಆಶ್ಚರ್ಯದಿಂದ ಎತ್ತಿಕೊಂಡು ಮಠದೊಳಗೆ ಬಂದರು. ಈ ರೀತಿಯಾಗಿ ದೊರಕಿದ ಕೂಸನ್ನು ಕಂಡು ನಮಗೆಲ್ಲ ಆಶ್ಚರ್ಯವಾಯಿತು. ಆಗ ಸ್ವಾಮಿಗಳು 'ಇದನ್ನು ನಿನ್ನ ಮಗು ಎಂದು ತಿಳಿದು ಜೋಪಾನ ಮಾಡಬೇಕು. ತೆಗೆದುಕೊಂಡು ಹೋಗು' ಎಂದರು. ನಾನು ಸ್ವಾಮಿಗಳ ಮುಖದಿಂದ ಶ್ರವಣ ಕೇಳಲು ನಿತ್ಯ ಮಠಕ್ಕೆ ಹೋಗುವವ. ಮಠದ ಸಮೀಪದಲ್ಲಿಯೇ ನನ್ನ ಮನೆ. ನಾನು ಕೂಸನ್ನು ನನ್ನ ಮಗನಂತೆಯೇ ನೋಡಿಕೊಂಡೆನು. ಇವನು ಕೂಡ ದೊಡ್ಡವನಾದ ಮೇಲೆ ನಿತ್ಯದಲ್ಲಿ ನನ್ನೊಡನೆ ಮಠಕ್ಕೆ ಬಂದು ಸ್ವಾಮಿಗಳ ಶ್ರವಣವನ್ನು ಕೇಳತೊಡಗಿದನು. ಸತ್ಸಂಗತಿಯಲ್ಲಿಯೇ ಇವನ ಕಾಲ ಕಳೆದಿದೆ. ಇಷ್ಟು ಪ್ರೇಮದಿಂದ ನೋಡಿಕೊಳ್ಳುತ್ತಿದ್ದರೂ ಇವನೇಕೆ ನಮ್ಮನ್ನು ಬಿಟ್ಟು ಬಂದನೋ ತಿಳಿಯಲಿಲ್ಲ. ಒಂದು ದಿನ ಬೆಳಗಾಗುವಷ್ಟರಲ್ಲಿ ಇವನು ಮನೆಯಲ್ಲಿರಲಿಲ್ಲ. ಅಲ್ಲಿ ಇಲ್ಲಿ ನಾವು ಶೋಧಿಸುತಿರಲು ಹೇಗೋ ನಿಮ್ಮ ಬಳಿಯಲ್ಲಿರುವನೆಂದು ಸುದ್ದಿ ತಿಳಿಯಿತು. ಏನುಂಟೋ ನೋಡಿ ಬರುವುದು ಒಳ್ಳೆಯದೆನಿಸಿ ಇಲ್ಲಿಗೆ ಬಂದೆನು. ಈ ಹುಡುಗ ಇಲ್ಲಿರುವದನ್ನು ಕಂಡು ಸಮಾಧಾನವಾಯಿತು. ಈಗ ನಿಮಗೆ ಬೇಡಿಕೊಳ್ಳುವದೇನಂದರೆ ಇವನನ್ನು ನನ್ನ ಸಂಗಡ ದಯಮಾಡಿ ಕಳಿಸಿ ಕೊಡಬೇಕು.

ಎಂದು ನುಡಿದ ಆ ಗ್ರಹಸ್ಥನ ಮಾತು ಕೇಳಿ ಸಿದ್ಧನು ಶರಣನಿಗೆ– 'ಶರಣಾ ಇವರ ಜತೆಗೆ ಹೋಗುತ್ತೀಯಾ?' ಎಂದು ಪ್ರಶ್ನೆ ಮಾಡಲು ಅವನು 'ಸ್ವಾಮಿಯೇ ಪ್ರಾಪಂಚಿಕ ಜನರ ಸಹವಾಸವೇ ನನಗೆ ಬೇಡವೆನಿಸಿದೆ. ಮತ್ತೆ ನನ್ನನ್ನು ಅಲ್ಲಿಗೆ ಕಳಿಸಬಾರದು. ಸನ್ನಿಧಿಯಲ್ಲಿಯೇ ಇರಬೇಕೆಂದು ನಾನು ಬಯಸುತ್ತೇನೆ.' ಎಂದನು. ಆಗ ಸದ್ಗುರುನಾಥ ಆ ಗ್ರಹಸ್ಥನಿಗೆ 'ಕೇಳಿದಿರಾ ? ಇವನ ನಿರ್ಧಾರದ ಮಾತುಗಳನ್ನು, ಎನ್ನಲು ಆ ಗ್ರಹಸ್ಥನು 'ನಿಮ್ಮ ಬಳಿಯಲ್ಲಿ ಇದ್ದರೂ ನನಗೆ ಸಂತೋಷ ನನಗೂ ಮನೆಗೆ ಕರೆದೊಯ್ಯಬೇಕೆಂದು ಆಗ್ರಹವಿಲ್ಲ' ಎಂದು ಸಿದ್ಧನಿಗೆ ವಂದಿಸಿ ಅಪ್ಪಣೆ ಪಡೆದು ತನ್ನ ಊರಿಗೆ ತೆರ

ಲು ಸಿದ್ಧನಾಗಿ ನಿಲ್ಲಲು ಶರಣನು ಅವನನ್ನು ವಂದಿಸಿ 'ನನ್ನನ್ನು ಕ್ಷಮಿಸ ಬೇಕು' ಎಂದು ನುಡಿದು ತಲೆಬಾಗಿದನು. ಆಗ ಶರಣನನ್ನು ಮನಃಪೂರ್ವಕ ವಾಗಿ ಆಶೀರ್ವದಿಸಿ ಊರಿಗೆ ಹೋದನು.

ಹಿಂದಿನ ಕಥೆಯಲ್ಲಿ ಹೇಳಿದ ದಾನವ್ವನ ಮಗನೇ ಈ ಶರಣನು. ಯಾವ ಸಂಬಂಧದಿಂದ ಸದ್ಗುರುನಾಥ ಆ ಕೂಸನ್ನು ಸ್ವೀಕರಿಸಿ ಅದನ್ನು ಸತ್ಸಹವಾಸ ದಲ್ಲಿ ಬೆಳೆಸಿದನು. ಏನು ಕಾರಣದಿಂದ ಅವನಲ್ಲಿ ವೈರಾಗ್ಯವೆಂಬ ಅಗ್ನಿಯನ್ನು ಹೊತ್ತಿಸಿದನು. ಯಾವ ಋಣಾನುಬಂಧನದಿಂದ ಆ ಶರಣನನ್ನು ಕೃತಕೃತ್ಯನ ನ್ನಾಗಿ ಮಾಡಿದನು ?

ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಸದ್ಗುರುವೇ ಕೊಡಬಲ್ಲನು.

———

೩೩

ಅಹಿಮಿವ ಜನಯೋಗಂ ಸರ್ವದಾ ವರ್ಜಯೇದ್ಯಃ ।

....

....

ಜಯತಿ ಪರಮಹಂಸೋ ಮುಕ್ತಿಭಾವಂ ಸಮೇತಿ ॥

—ಧನ್ಯಾಷ್ಟಕ

ಜನರ ಸಹವಾಸವು ಹಾವಿನ ಸಹವಾಸದಂತೆ ಎಂದು ತಿಳಿದು ಯಾರು ಅದರಿಂದ ದೂರವಿರುವರೋ ಆ ಪರಮಹಂಸರು ಮುಕ್ತಿಯನ್ನೇ ಪಡೆಯು ವರು.

ಸಿದ್ಧಾರೂಢ ಸ್ವಾಮಿಯು ಹುಬ್ಬಳ್ಳಿಗೆ ಬಂದು ಬಹಳ ದಿನಗಳಾಗಿರ ಲಿಲ್ಲ. ಆಗ ಡುಮ್ಮಗೆರೆಯ ಅಡವಿಯಲ್ಲಿ ಅವನ ವಾಸ. ಕ್ವಚಿತ್ತಾಗಿ ಜನರು ಅವನನ್ನು ಕಾಣುವರು. ಆದರೆ ಆ ಅಡವಿಯಲ್ಲಿ ದನಮೇಯಿಸಲು ಬರುವ ಹುಡುಗರಿಗೆ ಅವನು ಒಳ್ಳೆ ಪರಿಚಿತನು. ಇಂಥ ಪರಿಸ್ಥಿತಿಯಲ್ಲಿರುವಾಗ ಸಿದ್ಧ ನನ್ನು ಕಂಡವರು ಅವನೊಬ್ಬ ಹುಚ್ಚನೆಂದು ನಿರ್ಣಯಿಸಿ ಅದರಂತೆ ಆ ಅಡವಿ

ಯಲ್ಲಿ ಒಬ್ಬ ಹುಚ್ಚ ಬಂದಿದ್ದಾನೆ. ಇವತ್ತು ನಮ್ಮ ಹುಡುಗನಿಂದ ರೊಟ್
ಬೇಡಿ ತಿಂದನಂತೆ, ಇವತ್ತು ಹಾಗೆ ಮಾಡಿದನಂತೆ, ಹೀಗೆ ಮಾಡಿದನಂತೆ ಎಂದ
ಮಾತಾಡಿಕೊಳ್ಳುತ್ತಿದ್ದರು. ಇವೆಲ್ಲ ಮಾತುಗಳಲ್ಲಿ ಕೆಲವು ಅಂಶ ಸತ್ಯವಾಗಿತ
ಯಾಕಂದರೆ ಆ ಕಾಲದಲ್ಲಿ ಸಿದ್ಧ ದನಗಾಹಿ ಹುಡುಗರ ಹೊರತು ಮತ್ತೊಬ
ರನ್ನು ಕಾಣಲು ಇಷ್ಟಪಡುತ್ತಿರಲಿಲ್ಲ. ಒಂದು ವೇಳೆ ಯಾರಾದರೂ ತಾನ
ಗಿಯೇ ಕಾಣಹೋದರೆ ಓಡಿಹೋಗುವುದು, ಅಥವಾ ಮೂಕರಂತೆ ಮಾ
ತಾಳುವುದು ಹೀಗಿರುವುದರಿಂದ ಜನರಿಗೆ ಅವನು ಯಾರು ? ಅವನ ಸ್ಥಿ
ಗತಿ ಏನು ? ತಿಳಿದುಕೊಳ್ಳಬೇಕೆಂದು ಕುತೂಹಲವುಂಟಾಗಿರಲಿಲ್ಲ. ದಿ
ಬೆಳಗಾದರೆ ಅವನ ಸಹವಾಸ ಘಟಿಸುವುದು ದನಗಾಯುವ ಸಣ್ಣ ಮಕ್ಕಳಿಗೆ
ಅವಂತೂ ಸ್ವಾಭಾವಿಕವಾಗಿ ಕುತೂಹಲ ವೃತ್ತಿ ಇಲ್ಲದಂತಹವು ಅಲ್ಲದ
ಸಿದ್ಧ ಅವರೊಡನೆ ಸಮರಸನಾಗಿ ಆಟವಾಡುವನು. ಅಂದಮೇಲೆ ಸಿದ್ಧನ
ನಮಗೊಬ್ಬ ದೊಡ್ಡ ಗೆಳೆಯನೆಂದು ಅವು ಭಾವಿಸಿದ್ದರೆ ಆಶ್ಚರ್ಯವಲ್ಲ.

ಪ್ರತಿದಿನ ಒಂದಿಲ್ಲೊಂದು ಬಗೆಯ ಸಿದ್ಧನ ವಾರ್ತೆಗಳನ್ನು ಕೇಳಿ
ಹಿರೇಮಠದ ಗುರುಪಾದಯ್ಯನವರಿಗೆ ಅವನು ಯಾರು? ಅವನ ಸ್ಥಿತಿಯ
ದರೂ ಏನು ? ತಿಳಿಯಬೇಕೆಂದು ಕುತೂಹಲವೆನಿಸಿ ಒಮ್ಮೆ ಸಿದ್ಧನಿರುವಲ್ಲಿ
ಬಂದು ದೂರ ನಿಂತು ನೋಡತೊಡಗಿದನು. ಆಗ ಸಿದ್ಧನು ಒಂದು ಗಿಡವೇ
ಕುಳಿತಿದ್ದನು. ಕೈಯ್ಯಲ್ಲೊಂದು ಬಿರುಗಲ್ಲು ಹಿಡಿದಿದ್ದನು. ಕೆಳಗೆ ದನ
ಕಾಯುವ ಹುಡುಗರು ಆಡುತ್ತಿದ್ದರು. ಅವರಲ್ಲಿಯ ಒಬ್ಬ ಹುಡುಗನ ತಲೆ
ಗುರಿಯಿಟ್ಟು ಸಿದ್ಧ ಕೈಯಲ್ಲಿ ಹಿಡಿದ ಕಲ್ಲುಬೀಸಿದನು. ಪೆಟ್ಟು ಬಲವಾಗಿ ತಾ
ದ್ದರಿಂದ ಆ ಹುಡುಗ ದೊಡ್ಡಧ್ವನಿ ತೆಗೆದು ಚೀರುತ್ತ ಅಳಲಾರಂಭಿಸಿ
ಉಳಿದ ಹುಡುಗರು ಏನಾಯಿತು? ಏನಾಯಿತು? ಎಂದು ಕೂಗತೊಡಗಿದವ
ಆ ಗೊಂದಲವನ್ನು ಕಂಡು ಸಿದ್ಧನು ಮತ್ತೊಂದು ಕಲ್ಲು ಹಿಡಿದು ಮೊದ
ಪೆಟ್ಟು ತಿಂದು ಅಳುತ್ತಿರುವ ಹುಡುಗನ ತಲೆಗೆ ಬೀಸಲು ಪೆಟ್ಟಿನೋ ತಾಗಿತು
ಆದರೆ ಅದು ನೋವುಂಟು ಮಾಡುವಂಥದಾಗಿರಲಿಲ್ಲ. ಮೊದಲಿನ ನೋವನ್ನು
ಕಳೆಯುವಂಥದಾಗಿತ್ತು. 'ನಮಃ ಶಿವಾಯ' ಎಂದು ಅಭಿಮಂತ್ರಿಸಿ ಸಿದ್ಧ
ಆ ಕಲ್ಲನ್ನು ಬೀಸಿದ್ದನು. ಆ ಹುಡುಗನು ಈಗ ನಗುತ್ತ ಪುನಃ ಆಟಕ
ಸಿದ್ಧನಾಗಿದ್ದಾನೆ.

ಸುವಿಚಾರಿಗಳಾದ ಅಯ್ಯನವರು ಇದೆಲ್ಲ ಲೀಲೆಯನ್ನು ಮರೆಗೆ ನಿಂತು ಕಂಡು- 'ಅಹಾ, ಇದೇನು ಆಶ್ಚರ್ಯ. ಒಂದು ಕಲ್ಲು ಬೀಸಿ ಪೆಟ್ಟುಕೊಟ್ಟರೆ ದುಃಖ. ಮತ್ತೊಂದು ಕಲ್ಲಿನ ಪೆಟ್ಟಗೆ ಸುಖ. ಛೀ ಈ ಸಿದ್ಧನು ಹುಚ್ಚನೆಂದು ಜನ ಹೇಳುತ್ತಿರುವರು, ನನಗನಿಸುವುದೇನಂದರೆ ಇವನು ಒಬ್ಬ ಮಹಾತ್ಮನಾಗಿರಬೇಕು. ಪ್ರಪಂಚ ಸಾಗರದಲ್ಲಿ ಮುಳುಗಿ, ನರಳಿ ಹೊರಳುತ್ತಿರುವ ಮೂಢರನ್ನು ಉದ್ಧರಿಸಲು ಇವನು ಬಂದಿದ್ದಾನೆ. ಇವನು ಮಹಾಜ್ಞಾನಿ ದೊಡ್ಡ ಸಿದ್ಧಪುರುಷ ಉನ್ಮಾದವಸ್ಥೆಯಲ್ಲಿದ್ದಾನೆ. ಇವನಿಗೆ ಅನ್ನ-ನೀರು ಕೊಟ್ಟು ಸೇವೆ ಮಾಡಬೇಕು. ಆದರೆ ಹೇಗೆ ಕೊಡುವದು ? ಇವನ ಪರಿಚಯವು ನಮಗೆಷ್ಟೂ ಇಲ್ಲ. ಬಳಿಯಲ್ಲಿ ಹೋದರೆ ನಿಂತು ಮಾತಾಡುವನೋ ? ಓಡಿ ಹೋಗುವನೋ ತಿಳಿಯದು. ಇವನ ಸ್ವಭಾವಾದಿಗಳನ್ನು ಅರಿಯಲು ಈ ಹುಡುಗರನ್ನು ಮೊದಲು ವಿಚಾರಿಸಿಕೊಳ್ಳಬೇಕು.' ಎಂದು ಮನದಲ್ಲಿ ವಿಚಾರಿಸಿಕೊಂಡು ಮೆಲ್ಲನೆ ಆ ಪೆಟ್ಟು ತಿಂದ ಹುಡುಗನನ್ನು ಗುಟ್ಟಾಗಿ ಕರೆದು ಕೇಳಿದರು.

'ಬಾಲಕನೇ, ಮೊದಲಸಾರೆ ನಿನಗೆ ಕಲ್ಲು ಹೊಡೆದಾಗ ನೀನು ದೊಡ್ಡ ಧ್ವನಿಮಾಡಿ ಅಳತೊಡಗಿದೆ. ಎರಡನೆಸಾರೆ ಹೊಡೆದ ಕಲ್ಲು ತಾಕಿದರೂ ನೀನು ನಗುತ್ತ ನಿಂತಿರುವೆಯಲ್ಲ.'

ಓ, ಅದೇ ನಿಮಗೆ ಕಾಣುವ ಈ ಗೃಹಸ್ಥ ಹುಚ್ಚನಂತಿರುವುದು ನಿಜ. ಆದರೆ ಇವನು ದೊಡ್ಡ ಮಹಾತ್ಮ. ಬೇಕಾದಂಥ ದುಃಖವಾಗಿರಲಿ ಹೋಗಿ ಹೇಳಿದರೆ ಸಾಕು. ಕಡಿಮೆ ಮಾಡುತ್ತಾನೆ. ಮೊದಲನೇ ಕಲ್ಲು ಹೊಡೆದಾಗ ಪೆಟ್ಟುತಾಕಿ ನೋವಾಯಿತು. ಎರಡನೇ ಕಲ್ಲು ಹೊಡೆದಕೂಡಲೇ ಪೆಟ್ಟೂ ಇಲ್ಲ. ಹಿಂದೆ ಆದ ನೋವೂ ಇಲ್ಲ. ಇವನ ಕಥೆ ಯಾರಿಗೂ ತಿಳಿಯದು. ಪ್ರತಿದಿನ ಹೀಗೇ ನಮ್ಮ ಕೂಡ ಆಡುತ್ತಾನೆ. ಇವನ ಆಟದಿಂದ ನಮಗೆ ಬೇಸರವೇ ಇಲ್ಲ.'

ಎಂದು ಆ ಬಾಲಕನು ಸಂಕ್ಷೇಪವಾಗಿ ಸಿದ್ಧನ ದಿನಚರಿಯನ್ನು ಹೇಳಲು ಗುರುಪಾದಯ್ಯನವರಿಗೆ ಬಹಳ ಹರ್ಷವಾಯಿತು. ಯಾಕಂದರೆ ಅವರು ಅದೇನುಕಾರಣವೋ ಸಿದ್ಧ ಅಲೌಕಿಕ ಮಹಿಮಾಪುರುಷನೆಂದು ಭಾವಿಸಿಕೊಂಡವರು. ತಾವು ತಿಳಿದುಕೊಂಡದ್ದು, ಇಲ್ಲಿ ಸಿದ್ಧನ ಸಂಗಡಿಗರಾದ ಬಾಲಕ

ರಿಂದ ತಿಳಿದುಬಂದದ್ದು ಹೊಂದಿಕೆಯಾದವು. ಇದರಿಂದ ಅವರಿಗೆ ಹರ್ಷಹೆಚ್ಚಿ ಆ ಹುಡುಗನಿಗೆ– 'ಸಿದ್ಧ ಊಟವನ್ನೆಲ್ಲಿ ಮಾಡುತ್ತಾನೆ ?' ಎಂದು ವಿಚಾರಿಸಿದರು. ಆ ಹುಡುಗ ಹೇಳಿದನು.

'ಊಟವೆಂದರೆ ಪ್ರತಿದಿನ ಅನ್ನವೇ ಆಗಬೇಕೆಂದು ಅವನಿಗೆ ನೇಮವಿಲ್ಲ. ಒಂದುದಿನ ನಮ್ಮ ಆಡನ್ನು ಹಿಂಡಿಸಿ ಹಾಲುಕುಡಿಯುತ್ತಾನೆ. ಒಂದುದಿನ ನಮ್ಮನ್ನು ಬೇಡಿ ಅನ್ನ–ರೊಟ್ಟಿ ಉಣ್ಣುತ್ತಾನೆ. ಕೆಲವುಸಾರೆ ಮಣ್ಣುತಿಂದು ನೀರು ಕುಡಿದುಬಿಟ್ಟರೆ ಅವನ ಊಟವಾಯಿತು.'

ಇದನ್ನು ಕೇಳಿ ಸಾತ್ವಿಕರಾದ ಗುರುಪಾದಯ್ಯನವರಿಗೆ ಸ್ವಾಭಾವಿಕವಾಗಿ ದುಃಖವೆನಿಸಿತು. ಯಾಕಂದರೆ ದೊಡ್ಡ ಮಹಾತ್ಮ. ಸಿದ್ಧಪುರುಷ. ಅವನ ಅವಸ್ಥೆ ತುತ್ತುಅನ್ನಕ್ಕೆ ಪರಾಧೀನ. ಹೀಗಾಗಬಾರದು ಈ ವರಪುರುಷನಿಗೆ ತುತ್ತನ್ನಕೊಟ್ಟರೆ ದೇವರು ಮೆಚ್ಚುವನು. ಎಂದು ವಿಚಾರಮಾಡಿಕೊಂಡು ಸಿದ್ಧನು ಏರಿಕುಳಿತ ಗಿಡದಬುಡಕ್ಕೆ ಹೋಗಲು ಸಿದ್ಧ ಕೆಳಗಿಳಿದನು. ಗುರುಪಾದಯ್ಯ ಕಾಲಿಗೆರಗಿದನು. ಸಿದ್ಧ ಅಯ್ಯನವರ ತಲೆಗೆ ಜಾಡಿಸಿ ಒದ್ದು ಬಿಟ್ಟನು. ಮೊದಲೇ ಸಿದ್ಧನ ರೀತಿ–ನೀತಿಗಳನ್ನು ಅರ್ಥಮಾಡಿಕೊಂಡ ಅಯ್ಯನವರಿಗೆ ಅದರಿಂದೇನೂ ಸಿಟ್ಟುಬರಲಿಲ್ಲ. ಕೈಮುಗಿದುಕೊಂಡು ಕೆಲವೇಳೆ ಸುಮ್ಮನೆ ನಿಂತು ಅಂದರು.

'ಮಹಾತ್ಮರೇ, ದಯಮಾಡಿ ನಮ್ಮ ಮನೆಗೆ ಬಂದು ನನ್ನನ್ನುಉದ್ಧಾರಗೊಳಿಸಿದಂತೆ ಎಲ್ಲರನ್ನೂ ಉದ್ಧಾರಗೊಳಿಸಬೇಕೆಂದು ಬೇಡಿಕೊಳ್ಳುತ್ತೇನೆ.'

ಹೀಗೆ ಬೇಡುತ್ತ ನಿಂತ ಅಯ್ಯನವರನ್ನು ಕಂಡು ಸಿದ್ಧ ತನ್ನ ಮನದಲ್ಲಿ- 'ಓ, ಇವನ ಭಕ್ತಿ ಘಟ್ಟಿ ಇರುವಂತೆ ಕಾಣುತ್ತದೆ.' ಎಂದು ತಿಳಿದು ನಗುತ್ತ ನುಡಿದನು.

'ನನಗೆ ಏನಾದರೂ ಕೊಡಬೇಕೆಂದು ಇಚ್ಛೆ ಇದ್ದರೆ ಇಲ್ಲಿಗೇ ತಂದು ಕೊಡಬೇಕು. ನಿನ್ನ ಮನೆಗೆ ನಾನು ಬರುವದಿಲ್ಲ. ಹು, ನಡೆ ಇಲ್ಲಿಂದ. ಬಹಳ ಹೊತ್ತು ಇಲ್ಲಿದ್ದರೆ ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ. ಹೋಗು, ಹೋಗು.'

ಎಂದು ಸಿದ್ಧ ಖಂಡಿತವಾದ ಮಾತುಗಳನ್ನಾಡಲು ಅಯ್ಯನವರು 'ಅಪ್ಪಣೆ, ಎಂದುಕೊಂಡು ಸಂತೋಷದಿಂದಲೇ ಮನೆಗೆ ಬಂದು ಹೆಂಡತಿಯನ್ನು ಕೂಗಿ ಹೇಳಿದರು. 'ತುಸು ಕೇಳುತ್ತಿಯಾ ! ಇಂದು ನಮ್ಮ ಉದ್ಧಾರಕರ್ತ

ನೊಬ್ಬನನ್ನು ಕಂಡೆ. ಅಂಥ ಯೋಗಿಗಳು ಸಿಗುವುದು ಕಠಿಣ. ಯಾವುದೇ ಬಗೆಯಿಂದ ಅಂಥವರ ಸೇವೆಮಾಡಿದರೂ ಜನ್ಮ ಸಾರ್ಥಕವಾಗುತ್ತದೆ. ಪಾಪ, ಆ ಮಹಾತ್ಮನಿಗೆ ಅನ್ನ ಸಿಗುವುದಿಲ್ಲ. ತುಸು ಅನ್ನ-ರೊಟ್ಟಿ ಕೊಡು, ಒಯ್ದು ಕೊಟ್ಟುಬರುತ್ತೇನೆ.'

ಪತಿಯ ಮಾತು ಕೇಳಿ ಆ ಸಾಧ್ವಿಗೆ ಸಂತಸವೆನಿಸಿದರೂ ಅನ್ನ-ರೊಟ್ಟಿ ಕೊಡು ಎಂದಾಗ ತುಸು ಸಂಕೋಚವೆನಿಸದೇ ಹೋಗಲಿಲ್ಲ. ಯಾಕಂದರೆ ಅವರು ಕಡುಬಡವರು. ಅವರ ಮಗ ಭಿಕ್ಷೆಮಾಡಿಕೊಂಡು ಬಂದನಂತರವೇ ನಿತ್ಯ ಒಲೆಹೊತ್ತಬೇಕು. ಪರಿಸ್ಥಿತಿ ಹೀಗೆ, ಮನಸ್ಸು ಒಳ್ಳೆಯದು. ಮಹಾತ್ಮ ರಿಗೆ ಕೂಡ ಧೈರ್ಯವಾಗಿ ತುತ್ತನ್ನ ಹಾಕುವಷ್ಟು ಭಗವಂತ ನಮಗೆ ಭಾಗ್ಯ ವನ್ನು ಕೊಟ್ಟಿಲ್ಲವಲ್ಲ. ಎಂಬುದೇ ಆ ಹೆಣ್ಣುಮಗಳ ಸಂಕೋಚಕ್ಕೆ ಕಾರಣ. ಆದರೆ ಶುದ್ಧ ಭಕ್ತಿಭಾಗ್ಯ ಪಡೆದ ಅಯ್ಯನವರಿಗೆ ಯಾವ ಸಂಕೋಚವೂ ಇಲ್ಲ ಅವರು ಒಳ್ಳೇ ಆತುರತೆಯಿಂದ ಅನ್ನವನ್ನು ತಂದು ಸಿದ್ಧನಿಗರ್ಪಿಸಿದರು.

ಅದನ್ನು ಸ್ವೀಕರಿಸಿದ ಸಿದ್ಧನು ತನ್ನ ನಿತ್ಯದ ಗೆಳೆಯರಾದ ಬಾಲಕ-ರನ್ನೆಲ್ಲ ಕರೆದು ಅವರಿಗಷ್ಟು ಹಂಚಿ ತಾನೂ ತುಸು ಸ್ವೀಕರಿಸಿ ಅಯ್ಯನವರಿಗಂದನು. 'ನೀನು ಬಹಳ ಸ್ವಲ್ಪ ಅನ್ನವನ್ನು ತಂದುಬಿಟ್ಟೆ, ಸಾಕಾಗುವಂತೆ ತಂದಿದ್ದರೆ ಎಲ್ಲರದೂ ಹೊಟ್ಟೆತುಂಬ ಊಟವಾಗುತ್ತಿತ್ತು.'

'ಹಾಗಾದರೆ ನಾನು ಈಗಲೇ ಮನೆಗೆ ಹೋಗಿ ಎಲ್ಲರಿಗೂ ಸಾಲುವಷ್ಟು ಅನ್ನವನ್ನು ತೆಗೆದುಕೊಂಡು ಬರುತ್ತೇನೆ.' ಎಂದು ಹೇಳಿ ಮನೆಗೆ ಬಂದು ನೋಡುತ್ತಿರಲು ತಾವು ಉಣ್ಣಬೇಕಾಗಿದ್ದ ಅನ್ನ ಮಾತ್ರ ಉಳಿದಿತ್ತು. ಅದನ್ನೇ ತೆಗೆದುಕೊಂಡು ಹೋಗಿ ಸಿದ್ಧನ ಮುಂದಿಟ್ಟರು. ತಾವು ಮಾತ್ರ ಉಪವಾಸ ಮಾಡಬೇಕಾಯಿತು. ಆದರೂ ಅಂದು ಗುರು-ದೇವರಿಗೆಲ್ಲ ಎಡೆಮಾಡಿದಷ್ಟು ಸಂತೋಷ ಅಯ್ಯನವರಿಗೆ.

ಹೀಗೆ ಎರಡನೇಸಾರೆ ಅಯ್ಯನವರು ತಂದುಕೊಟ್ಟ ಅನ್ನವನ್ನು ಸಿದ್ಧ ಮತ್ತೆ ಹುಡುಗರಿಗೆ ಹಂಚಿದನು. ತಾನೂ ತುಸು ಉಂಡನು. ಒಂದು ತುಣುಕು ಚಕ್ಕರಿ ಮಾತ್ರ ಉಳಿಯಿತು. ಅದನ್ನು ಮಾತ್ರ ಅಯ್ಯನವರಿಗೆ ಕೊಟ್ಟು 'ಸಾಕೇ ?' ಎಂದು ನಗೆಮಾಡಿದನು. ದೊರಕಿದಷ್ಟೇ ಮಹಾಪ್ರಸಾದವೆಂದು ಅಷ್ಟನ್ನೇ ತಿಂದು ನೀರುಕುಡಿಯಲು ಅಯ್ಯನವರಿಗೆ ಹೊಟ್ಟೆತುಂಬಿಹೋಯಿತು.

ಆ ಅನುಭವದಿಂದ ಅಯ್ಯನವರು ಆಶ್ಚರ್ಯಚಕಿತರಾಗಿ– 'ಇಂಥ ಮಹಿಮಾ ಶಾಲಿಗಳನ್ನು ಸೇವಿಸಿ ಧನ್ಯನಾಗುವುದು ಯೋಗ್ಯ.' ಎಂದು ವಿಚಾರಮಾಡಿ ಕೊಂಡು ಸಿದ್ಧನಿಗೆ ವಂದಿಸಿ ಮನೆಗೆ ಮರಳುತ್ತಿರಲು ದಾರಿಯಲ್ಲೊಬ್ಬನು– 'ಎಲೈ ಕುಲಗೇಡಿ, ಆ ಭವಿಯ ಎಂಜಲುರೊಟ್ಟಿಯನ್ನು ನೀನು ತಿಂದುಬಂದೆ ಯಲ್ಲ. ಪ್ರತ್ಯಕ್ಷವಾಗಿ ನಿನ್ನ ಕೃತಿಕಾಣುವಾಗ ನನ್ನ ಮೈಜುಮ್ಮೆಂದಿತು. ಕೂಳಿಗೇನು ಬರಗೆಟ್ಟು ಹೋಗಿದ್ದೆಯಾ? ತಡೆ, ಎಲ್ಲರ ಮುಂದೆ ಹೇಳಿ ನಿನಗೆ ಯೋಗ್ಯಶಾಸನ ಮಾಡಿಸುತ್ತೇನೆ. ನಿನ್ನ ಕೃತಿ ತಿಳಿದಮೇಲೆ ಯಾರೂ ಭ್ರಷ್ಟ ನಾದ ನಿನ್ನನ್ನು ಊಟಕ್ಕೆ ಕರೆಯುವುದಿಲ್ಲ. ಒಂದುವೇಳೆ ಕರೆದರೆ ಅವರನ್ನು ಎತ್ತಿಡಬೇಕಾಗುವುದು.' ಎಂದು ನುಡಿದು ಆ ಮತ್ತೊಬ್ಬ ಅಯ್ಯನು ತನ್ನ ದೈವದವರ ಮುಂದೆ ಎಲ್ಲಿ ವಿಷಯವನ್ನೂ ತಿಳಿಸಿಬಿಟ್ಟನು.

ಅವರೆಲ್ಲರೂ ಕೂಡಿಕೊಂಡು ಬಂದು ಗುರುಪಾದಯ್ಯನವರಿಗೆ– 'ನೀವು ಆ ಭವಿಯ ಸಂಗತಿಯನ್ನು ಬಿಡಬೇಕು ಒಂದು, ಆಗದೆಂದರೆ ಈ ಮಠವನ್ನು ಬಿಟ್ಟು ಹೊರಬೀಳಬೇಕು. ಈಗ ನಿಮಗೆ ಎರಡು ದಾರಿಗಳಿವೆ. ಬೇಕಾದು ದೊಂದು ಆರಿಸಿಕೊಳ್ಳಬೇಕು' ಎಂದು ಕಟ್ಟುನಿಟ್ಟಾಗಿ ಹೇಳಲು ಅಯ್ಯನವರು 'ನೀವೆಲ್ಲ ದೈವದವರ ಮಾತನ್ನು ನಾನು ಮಾನ್ಯಮಾಡಬೇಕು ಸರಿಯೇ, ಆದರೆ ಆ ಸಿದ್ಧ ಈಶ್ವರನ ಅವತಾರವೆಂದು ನನಗೆ ನಂಬಿಕೆಯಾಗಿದೆ. ಅವನ ಸಂಗತಿ ಬಿಡುವಂತೆ ನನಗೆ ಮಾತ್ರ ಅಗ್ರಹಮಾಡಬೇಡಿರಿ. ನನ್ನದೇನಾದರೂ ಆಗಲಿ, ನನ್ನ ಹೆಂಡತಿ–ಮಕ್ಕಳು ಮಾತ್ರ ಮಠದೊಳಗಿರುತ್ತಾರೆ.' ಎಂದು ನಿರ್ಧಾರದ ನುಡಿಗಳನ್ನಾಡಿದರು. ಇದನ್ನು ಕೇಳಿ ಇವರ ಎದುರಾಳಿಯಾದ ಅಯ್ಯ–'ಓ, ಆ ಭವಿಗೆ ಅಷ್ಟು ಮರುಳಾಗಿರುವೆ ಎಂದಮೇಲೆ ನಾವು ಹೇಳುವ ಕಾರಣ ಉಳಿಯಲಿಲ್ಲ. ಆದರೆ ನೀನು ದೊಡ್ಡಕುಲದಲ್ಲಿ ಹುಟ್ಟಿದವ, ವ್ಯರ್ಥ ಹಾಳಾಗಿ ಧರ್ಮಭ್ರಷ್ಟನಾಗುವಿಯಲ್ಲ ಎಂದು ತಾಪವಾಗುತ್ತದೆ.' ಎಂದು. ಮಾತಿಗೆ ಮಾತು ಬೇಡವೆಂದು ಗುರುಪಾದಯ್ಯ ಸುಮ್ಮನಾದನು. ಹೀಗೆ ಗುರುಪಾದಯ್ಯ ಸಿದ್ಧನ ಸಹವಾಸ ಬಿಡಲು ಸಿದ್ಧನಿಲ್ಲವೆಂದು ತಿಳಿದಕೂಡಲೇ ಅವರ ಹೆಂಡತಿ–ಮಕ್ಕಳು ಘಾಬರಿಗೊಂಡರು. ಯಾಕೆಂದರೆ ಸಮಾಜದ ಕೋಪಕ್ಕೆ ಗುರಿಯಾದ ಅವರನ್ನು ತಾವು ಅನುಸರಿಸಿಕೊಂಡಿದ್ದರೆ ಇದ್ದ ನೆರಳು ಕಳೆದುಕೊಳ್ಳುವ ಪ್ರಸಂಗ. ಇನ್ನು ಅನುಸರಿಸುವದಿಲ್ಲವೆಂದರೆ ಗುರುಪಾದಯ್ಯ

ನವರನ್ನು ದೂರಮಾಡುವ ಪ್ರಸಂಗ, ಎರಡೂ ಕಷ್ಟಕರ. ತಮ್ಮ ಸಂಕಟಗಳನ್ನೆಲ್ಲ ತೋಡಿಕೊಂಡು ಸಿದ್ಧನ ಸಂಗತಿಬಿಡುವಂತೆ ಅಯ್ಯನವರಿಗೆ ನಯವಿನಯದಿಂದ, ಸಿಟ್ಟಿನಿಂದ ಹೇಳಿನೋಡಿದರು. ಅಯ್ಯನವರು ಅವರೊಡನೆ ಮಾತೇ ಆಡಲಿಲ್ಲ. ಸುಮ್ಮನೇ ತಮ್ಮ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು ಹೊರಬಿದ್ದರು. ಊರೊಳಗೆ ಭಿಕ್ಷೆಮಾಡಿಕೊಂಡು ನೆಟ್ಟಗೆ ಸಿದ್ಧನ ಸಮೀಪಕ್ಕೆಬಂದು ಅವನ್ನೆಲ್ಲ ಅರ್ಪಿಸಿ ಅವನು ಕೊಟ್ಟಷ್ಟು ತಿಂದು ಕಾಲಕ್ಷೇಪ ಮಾಡತೊಡಗಿದರು.

ಹೀಗೆ ಕೆಲವುಕಾಲ ಕ್ರಮಿಸುತ್ತಿರಲು ಇವರನ್ನು ಕಂಡು ಅನೇಕರು ಸಿದ್ಧನ ಬಳಿಗೆ ಬಂದರು. ಮಕರಂದದ ಆಶೆಗಾಗಿ ಬಂದ ಭೃಂಗಗಳು ಕಮಲದಲ್ಲಿಯ ಮಕರಂದವನ್ನು ಸೇವಿಸಿ ಪರವಶವಾಗಿರುವಾಗ ಸಾಯಂಕಾಲವಾಗಲು ಕಮಲ ಮುಚ್ಚಿಕೊಳ್ಳುವದರಿಂದ ಅದರಲ್ಲಿಯೇ ಸಿಕ್ಕುಬೀಳುವಂತೆ, ಸಿದ್ಧನ ಬಳಿಗೆ ಬಂದ ಭಕ್ತರ ಸ್ಥಿತಿ ಹೀಗೆ ಆಯಿತು. ಭಕ್ತರ ಸಂಖ್ಯೆ ಬೆಳೆಯಿತು. ಕೆಲವರು ಪ್ರಾರ್ಥಿಸಿ ಸಿದ್ಧನನ್ನು ಒಡಂಬಡಿಸಿ ಮನೆಗೆಕರೆದುಕೊಂಡು ಹೋಗಿ ನಿತ್ಯ ಊಟಹಾಕಿ ಕಳಿಸತೊಡಗಿದರು. ಕೆಲವರು ಬಗೆಬಗೆಯ ಅಡಿಗೆಮಾಡಿಕೊಂಡು ಅವನಿರುವಲ್ಲಿಗೆ ಬರುವರು. ಬೇರೆ ಕೆಲವು ಜ್ಞಾನಾಪೇಕ್ಷಿಗಳು ಸಿದ್ಧನನ್ನು ಕರೆದೊಯ್ದು ಯೋಗ್ಯರೀತಿಯಿಂದ ಉಪಚರಿಸಿ ಅವನ ಮುಖದಿಂದ ಪುರಾಣ ಕೇಳುವರು, ಶ್ರವಣ ಕೇಳುವರು. ಒಟ್ಟು ಅದೊಂದು ನಿತ್ಯೋತ್ಸವ ನಡೆಯಿತು. ಅದನ್ನು ಕಂಡು ಗುರುಪಾದಯ್ಯನವರಿಗಾದ ಹರ್ಷ ಹೇಳಕೂಡದಷ್ಟು. ಯಾಕಂದರೆ ಸಿದ್ಧ ತನ್ನ ಅವಸ್ಥೆಯಿಂದಿಳಿದು ಲೋಕಾದ್ಧಾರಕ್ಕೆ ಮನಸ್ಸು ಮಾಡಿದ್ದನು.

ಒಂದುಸಾರೆ ಕಾರ್ತಿಕಮಾಸ, ಹುಣ್ಣಿಮೆ ಸಮೀಪದಲ್ಲಿ ಬಂದಿತ್ತು. ಆಗ ಗುರುಪಾದಯ್ಯ ಸಿದ್ಧನ ಭಕ್ತರಿಗೆಲ್ಲ ಹೇಳಿದನು. 'ಹುಣ್ಣಿಮೆಯದಿನ ಎಲ್ಲರೂ ಕೂಡಿ ಸಿದ್ಧನನ್ನು ಪೂಜೆಮಾಡೋಣ.' ಎಲ್ಲರಿಗೂ ಒಪ್ಪಿಗೆಯಾಯಿತು. ದೊಡ್ಡ ಮಂಟಪ ಹಾಕಿದರು, ಮಧ್ಯದಲ್ಲಿ ಸಿದ್ಧನನ್ನು ಕೂಡಿಸಿ ಪೂಜಿಸುವದಕ್ಕೆಂದು ಒಂದು ಆಸನ ಸಿದ್ಧಗೊಳಿಸಿದರು. ಇಷ್ಟೆಲ್ಲ ಸಿದ್ಧತೆಯಾಗುವಷ್ಟರಲ್ಲಿ ಹುಣ್ಣಿಮೆ ಬಂದಿತು. ಅಂದು ಅತ್ಯಂತ ಹರ್ಷಭರಿತರಾಗಿ ಸಿದ್ಧನನ್ನು ಪೂಜೆಮಾಡಿದರು. ಜರಿಯ ಪೀತಾಂಬರವನ್ನುಡಿಸಿದರು. ಹೂವಿನ ಕಿರೀಟ

ವಿಟ್ಟರು. ಕೊರಳಲ್ಲಿ ಸುಂದರವಾಗಿ ನಿರ್ಮಿಸಿದ ಹೂಮಾಲೆ ಹಾಕಿದರು. ತೇಜಸ್ವಿಯಾದ ಸಿದ್ಧನ ಮೂರ್ತಿಯು ಅತಿಶಯವಾಗಿ ಶೋಭಿಸಿತು.

ಶಾಂತಿಯೇ ಮೈವೆತ್ತು ಬಂದಂತೆ ಜನರಿಗೆ ತೋರಿತು. ಜಳದಿಂದ ಬಾಡಿ ಬೆಳೆಗೆ ಹದವಾಗಿ ಮಳೆಯಾದಂತೆ, ಸಿದ್ಧನ ಕೃಪಾದೃಷ್ಟಿ ಎಲ್ಲರ ಅಂತಃಕರಣಕ್ ರಸವನ್ನು ಮುಟ್ಟಿಸಿತು. ಆ ವೈಭವ-ಆ ಕೀರ್ತಿ ಎಂಥ ಪಾಖಂಡಿಗಳಮೇಲು ಸುಪರಿಣಾಮಮಾಡಿ ಅವರಿಗೆ ಸನ್ಮಾರ್ಗದ ಕಡೆಗೆ ಹೊರಳುವಂತೆ ಪ್ರೇರ ಕೊಟ್ಟಿತು.

ಅಂದು ಸಿದ್ಧನ ನಿಂದಕರೆಲ್ಲ ವಂದಿಸಿದರು. ನಮ್ಮ ಅಲ್ಪದೃಷ್ಟಿಯಾಚೆ ಯಾವುದೋ ಒಂದು ಸ್ಥಿತಿಯುಂಟು. ಸಿದ್ಧ ಅಲ್ಲಿಗೆ ತಲುಪಿದ ಮಾನವ ಹಾಗೆಂದು ಜನ ಪೂಜಿಸುತ್ತಾರೆ. ಭಕ್ತಿಪರವಶರಾಗಿ ಪೂಜಿಸಿ ನಲಿದವರ ನಲಿದೇ ನಲಿಯುವರು. ನಿಂದೆಯ ಕಾಡುಗಲ್ಲು ಕಟಿಯುತ್ತ ಕುಳಿತವರ ಹಾಗೇ ಕುಳಿತರು. ಆ ದಿನದ ಪೂಜೆ ಕಂಡವರು ಎಂಥವರೇ ಆಗಲಿ, ಅವ ಹೃದಯದಲ್ಲಿ ಭಕ್ತಿರಸದ ಸೆಲೆ ಚಿಮ್ಮದೇ ಹೋಗಲಿಲ್ಲವೆಂದರೇನೂ ತಪ್ಪಾಗದು

ಮಹಾತ್ಮರಾದವರಿಗೆ ಇದೆಲ್ಲ ಆಡಂಬರ-ಪೂಜೆ-ನಮಸ್ಕಾರ ಯಾತಕ್ ಬೇಕು ? ವಿಚಾರಿಸಿದರೆ ಯಾವುದೂ ಅವರಿಗೆ ಬೇಡ. ಆದರೂ ಭಕ್ತರಿಂ ಅವುಗಳನ್ನು ಸ್ವೀಕರಿಸುತ್ತಾರೆ. ಇದು ವಿರೋಧಾಭ್ಯಾಸವಲ್ಲ. ಲೋಕಸಂಗ್ರ ಕ್ಕಾಗಿ, ಭಕ್ತಿಯನ್ನು ಬೆಳೆಸುವುದಕ್ಕಾಗಿ ಅವರು ಜನರ ವಶವರ್ತಿಗಳಾ ಅವರ ಉತ್ಸವಮೂರ್ತಿಗಳಾಗುತ್ತಾರೆ.

ಅಂದಿನಿಂದ ಭಕ್ತರ ಸಂಖ್ಯೆ ಬೆಳೆಯುತ್ತ ಸಿದ್ಧನ ಮಹಿಮೆ ದೂರ-ದೂರಕ್ಕೂ ಪಸರಿಸಿತು. ದೂರ ದೂರದ ಪ್ರಾಂತಗಳಿಂದ ಭಕ್ತರು ಬರತೊಡ ದರು. ಗುರುವಿನ ವಾಸಸ್ಥಾನವೆನಿಸುವ ಮಠವು ನಿರ್ಮಾಣವಾಯಿತು.

ಗುರುಪಾದಯ್ಯನಿಗೆ ಬಹಿಷ್ಕಾರ ಹಾಕಿದವರು ಪಶ್ಚಾತ್ತಾಪಹೊಂ ಕಾಲಕ್ರಮದಲ್ಲಿ ಅಯ್ಯನವರ ಕ್ಷಮೆಯಾಚಿಸಿದರು. ತಮ್ಮ ನಿಶ್ಚಲಭಕ್ತಿಯಿಂ ಎಲ್ಲರ ಕಣ್ಣಿಗೆ ಅಂಜನ ಹಾಕಿ, ಸಿದ್ಧನೆಂಬ ಮೋಕ್ಷನಿಧಿಯನ್ನು ತೋರಿ ಕೊಟ್ಟವರೆಂದು ಗೌರವಿಸಿದರು.

————

೩೪

....ಸಂತ ಸಂಗ ದೇಯಿ ಸದಾ ।

--ತುಕಾರಾಮ

ಸತ್ಸಂಗತ್ವೇ ನಿಸ್ಸಂಗತ್ವಂ....

--ಆಚಾರ್ಯ ಶಂಕರ

ಯಾವಾಗಲೂ ಸಂತರ ಸಹವಾಸವನ್ನು ಕೊಡು.

ಸತ್ಸಂಗ ಮಾಡಿದಲ್ಲಿ ನಿಸ್ಸಂಗ ಮಾಡಿದಂತೆಯೇ.

ಒಂದು ಕಾಲದಲ್ಲಿ 'ಕಿತ್ತೂರ' ಅಲ್ಲಿಯ ಸಂಸ್ಥಾನಿಕರಿಗೆ ರಾಜಧಾನಿ ಎನಿಸಿತ್ತು. ಅನೇಕ ವಿದ್ವಾಂಸರು – ಕಲಾವಂತರು – ಕುಶಲ ಶಿಲ್ಪಿಗಳು– ರಾಜನೀತಿ ನಿಪುಣರು ಅಲ್ಲಿ ಬಂದು ನೆಲೆಸಿದ್ದರು.

ಮುಗಿಲ ನೀರು ಮಳೆಯಾಗಿ ಸುರಿಯುವಾಗ ನಿರ್ಮಲವಾಗಿಯೇ ಬೀಳುತ್ತದೆ. ಆದರೆ ಅದು ಯಾವ ಬಣ್ಣದ ಮಣ್ಣಿನಮೇಲೆ ಬೀಳುವದೋ ಆ ಮಣ್ಣಿನ ಬಣ್ಣವಾಗಿ ಹರಿದು ತನ್ನ ಮೂಲ ನಿರ್ಮಲತ್ವವನ್ನು ಕಳೆದು ಕೊಳ್ಳುತ್ತದೆ. ಹೀಗೆಯೇ ಮನುಷ್ಯರ ಸ್ಥಿತಿ. ದುಷ್ಟ ಸಹವಾಸಾದಿಗಳಿಂದ ಒಳ್ಳೆಯ ಗುಣಗಳನ್ನೆಲ್ಲ ಕಳೆದುಕೊಂಡು ಕಂಟಕಪ್ರಾಯನೆನಿಸುವನು. ಇಹ-ಪರ ಸುಖಗಳಿಗೆ ಎರವಾಗುವನು. ಇದು ತಪ್ಪಿ ಮನುಷ್ಯನ ಉನ್ನತಿ ಯಾಗಬೇಕಾದರೆ ಅವನಿಗೆ ಮಹಾತ್ಮರ ದರ್ಶನ–ಸಹವಾಸಗಳು ಮೇಲಿಂದ ಮೇಲೆ ಬೇಕು.

ಕಿತ್ತೂರಿನಲ್ಲಿ ಮಹಾತ್ಮರು ವಾಸವಾಗಿದ್ದರು. ಅವರಿಗೊಂದು ಮಠವೂ ಇತ್ತು. ಅಲ್ಲಿಗೆ ಮಡಿವಾಳನೆಂಬ ಒಬ್ಬ ತೇಜಃಪುಂಜನಾದ ಹುಡುಗನು ದಿನಾಲು ಅಭ್ಯಾಸಕ್ಕೆ ಬರುತ್ತಿದ್ದನು. ಅವನು ಬಹು ಕುಶಾಗ್ರಮತಿ, ವಿನಯಿ, ಗುರುಭಕ್ತ- ಹೀಗೆ ಗುಣವಂತನಾಗಿರುವದರಿಂದ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದನು. ಗುರುಗಳಾದರೂ ಅವನ ಬುದ್ಧಿವಂತಿಕೆಗೆ ಮೆಚ್ಚಿ ಪ್ರೇಮದಿಂದ ವಿದ್ಯೆಯನ್ನು ಹೇಳುವರು.

ಕಾಲಾಂತರದಲ್ಲಿ ಮಡಿವಾಳನ ಸಕಲ ವಿದ್ಯಾಪರಿಣಿತನಾದನು. ಒಂದು ಸಾರೆ ಅವನ ಗುರುಗಳು ಕಾರಣಾಂತರದಿಂದ ಪರಸ್ಥಳಕ್ಕೆ ಹೋದರು. ಆಗ ರಾಜಪರಿವಾರಕ್ಕೆ ಸೇರಿದ ಕನ್ಯೆಯರಿಬ್ಬರು ಮಠವನ್ನು ಕಾಣಲು ಬಂದರು. ಅಲ್ಲಿ ಗುರುಗಳಿಲ್ಲವೆಂದು ತಿಳಿಯಲು ಮಡಿವಾಳನ ಬಳಿಗೆ ಬಂದರು. ಮಡಿವಾಳ ಸುಂದರ ತರುಣ. ಸಂಯಮಿಯಾದುದರಿಂದ ಒಳ್ಳೇ ತೇಜಸ್ವಿ, ಅಲ್ಲದೇ ಮುಖದಲ್ಲಿ ವಿದ್ಯೆಯ ಕಳೆ. ಆ ಕನ್ಯೆಯರಿಗೆ ಮದನನಂತೆ ತೋರಿದನು. ಅವರು ಅವನ ಸಹವಾಸ ಪಡೆಯಬೇಕೆಂದು ಬಹಳ ಹವಣಿಸಿದರು. ಪರಿಪರಿಯ ಕಾಮಚೇಷ್ಟೆ ತೋರಿದರು. ರಸಭರಿತ ಮಾತು-ಕಥೆ ಬೆರಿಸಿದರು. ಆಶೆ ತೋರಿಸಿದರು. ಆದರೆ ಮಡಿವಾಳ ಇವರನ್ನು ಕಣ್ಣೆತ್ತಿ ಕೂಡ ನೋಡಲಿಲ್ಲ.

ತಾವು ಬೆಳೆದ ವಾತಾವರಣಕ್ಕೆ ತಕ್ಕಂತೆ ರಾಜಕನ್ಯೆಯರು ಸುಖವನ್ನು ಬಯಸಿದರೆ ಮಡಿವಾಳನು ತನ್ನ ಸಂಸ್ಕಾರ-ಶಿಕ್ಷಣಗಳಿಗೆ ತಕ್ಕಂತೆ ವಿಷಯ ಸುಖ ತುಚ್ಛವೂ, ಕ್ಷಣಿಕವೂ ಎಂದು ತಿಳಿದನು. ಅದನ್ನು ತಿರಸ್ಕರಿಸಿದನು. ನಿರಾಶರಾಗಿ ಆ ಕನ್ಯೆಯರು ' ನೋಡುತ್ತೇವೆ. ' ಎಂದುಕೊಂಡು ಹೊರಟು ಹೋದರು. ದೊಡ್ಡ ಮನೆತನದವರೆನಿಸುವ ಆ ತರುಣಿಯರ ಹೊಲ್ಲದ ರೀತಿಯನ್ನು ಕಂಡು ಮಡಿವಾಳನಿಗೆ ಸಿಟ್ಟುಬಂದಿತು. 'ಇನ್ನು ಇಲ್ಲಿದ್ದರೆ ಈ ಹೊಯ್ಯಾಲೆಯರ ಕಾಟತಪ್ಪದು. ಕೆಲಕಾಲ ಈ ಸ್ಥಳಬಿಟ್ಟು ಹೋಗಿಬಿಡಬೇಕು. ಮರಳಿ ಬರುವಷ್ಟರಲ್ಲಿ ಇವರು ಹಾಳಾಗಿಹೋಗುತ್ತಾರೆ. ' ಎಂದು ನುಡಿದು ಒಂದು ಕೌಪೀನ ಮಾತ್ರ ಧರಿಸಿಕೊಂಡು ಉತ್ತರ ಭಾರತದ ಯಾತ್ರೆಗೆ ತೆರಳಿದನು.

' ಕೌಪೀನವಂತಃ ಖಲು ಭಾಗ್ಯವಂತಃ ಕೌಪೀನ ಮಾತ್ರವಿದ್ದವನು ನಿಜವಾಗಿ ಭಾಗ್ಯಶಾಲಿ ಎಂದಂತೆ ಅರ್ಧನಗ್ನನಾಗಿ ಮಡಿವಾಳನು ಯಾತ್ರೆ ನಡೆಸಿದನು. ನೋಡಿದವರಿಗೆ ಇವನ ವಿದ್ಯೆಮಾತ್ರ ಮುಖತೇಜದಿಂದ ತಿಳಿದು ಬರಬೇಕು. ಅಲ್ಲದೇ ಇವನ ಮತ-ಪಂಥ-ತತ್ವ ಯಾವುದೂ ತಿಳಿದು ಬರುತ್ತಿರಲಿಲ್ಲ. ಅಲ್ಲಲ್ಲಿಯ ತೀರ್ಥಕ್ಷೇತ್ರಗಳನ್ನು ನೋಡುತ್ತ ಅವಿಮುಕ್ತ ಕ್ಷೇತ್ರವೆನಿಸಿದ ಕಾಶಿಗೆ ಬಂದು ತಲುಪಿದನು. ಅದು ಎಂದಿನಂತೆ ಆರ್ಯವಿದ್ಯೆಯ ತವರುಮನೆ. ಅಲ್ಲಿ ಶಾಸ್ತ್ರಗಳ ಅಧ್ಯಯನಕ್ಕೆ ಅನುಕೂಲವಾದ ಪಾಠಶಾಲೆಗಳು ಎಷ್ಟೋ! ಸಾಂಗವೇದಾಭ್ಯಾಸವನ್ನು ಹೇಳಿಕೊಡುವ ಶ್ರೋತ್ರಿಯರೆಷ್ಟೋ ಗೀರ್ವಾಣ ಭಾಷೆಯಲ್ಲಿ ಎಷ್ಟೋ ದಿನಗಳ ವರೆಗೆ ವಾದ-ವಿವಾದ

ನಡೆಸಬಲ್ಲ ಘನವಿದ್ವಾಂಸರೆಷ್ಟೋ ಅಲ್ಲಿಗೆ ಬಂದ ಮಡಿವಾಳನು ಆ ವಿದ್ವಜ್ಜನ ಸಂಘವನ್ನು ಕಂಡು ಆನಂದಿಸಿದನು. ಮತ್ತು ಎಷ್ಟೋ ವಿಷಾದಪಟ್ಟನು. ಯಾಕಂದರೆ ಅವರ ವಿದ್ಯೆಯು ಐಹಿಕ ಕೀರ್ತಿಗೆ ಅಹಂಕಾರಕ್ಕೆ ಕಾರಣವಾಗಿತ್ತೇ ವಿನಃ ಆತ್ಮೋದ್ಧಾರಕ್ಕೆ ಉಪಯುಕ್ತವಾಗಿರಲಿಲ್ಲ. ಅದನ್ನು ಕಂಡು ತಡೆಯಲಾರದೇ ಕೆಲವರಿಗೆ ಸೂಚನೆಗಳನ್ನು ಕೊಡಲು ಅವರು ಹೊನ್ನಕಡಗ-ಜರತಾರಿಯ ಶಾಲು-ಹಿಂದೆ ಹೊಗಳುವ ಶಿಷ್ಯಸಮುದಾಯಗಳಿಲ್ಲದ ಈ ದಿಗಂಬರ ಪಂಡಿತನೊಡನೆ ವಾದಕ್ಕೆ ಬಂದರು. ಮಡಿವಾಳನೂ ಹಿಂದೆಗೆಯಲಿಲ್ಲ. ಛೆಟ್ಟಯಾದವರನ್ನು ಮುಖ ಕೆಳಗೆ ಹಾಕುವಂತೆ ಮಾಡಿದನು. ಹೀಗಾಗಿ ಆ ಮಹಾಕ್ಷೇತ್ರದಲ್ಲಿ ಮಡಿವಾಳನು ಪ್ರಸಿದ್ಧನಾದನು. ಮರ್ಯಾದೆಯೂ ಸಾಕಷ್ಟು ಸಿಕ್ಕಿತು.

ಆದರೆ ಬೇಗನೆ ಮಡಿವಾಳನಿಗೆ ವಾದದಲ್ಲಿ ಉಪರತಿಯುಂಟಾಯಿತು ಅವನು ತನ್ನನ್ನು ತಾನೇ ನಿಂದಿಸಿಕೊಂಡನು. ಐಹಿಕ ಮಾನ-ಮರ್ಯಾದೆ, ಭೋಗ-ಭಾಗ್ಯಗಳನ್ನು ಬಯಸಿ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುತ್ತಿರುವ ಇಲ್ಲಿಯ ಪಂಡಿತರಿಗೂ ನನಗೂ ಭೇದವೇನು ? ನಾನು ವಿಷಯಗಳಲ್ಲಿ ವೈರಾಗ್ಯ ತಾಳಿ ತೀರ್ಥಯಾತ್ರೆಗೆ ಬಂದವನು. ದೇಹಪೋಷಣೆ ಮಾಡಿ ಇಂದ್ರಿಯಗಳ ಚಾಪಲ್ಯಗಳನ್ನು ಪೂರಿಸುವ ಜಡವಿಷಯಗಳನ್ನು ನಾನು ಬಿಟ್ಟದ್ದು ಮಾತ್ರ ನಿಜವಾಯಿತು. ಆದರೆ ಅಹಂಕಾರವನ್ನು ಪೋಷಿಸುವ ಕೀರ್ತಿ-ಮಾನ-ಮರ್ಯಾದೆಗಳನ್ನು ಸಾಕಷ್ಟು ಸಂಪಾದಿಸಿಕೊಂಡಿಲ್ಲ. ಪಾಪ, ನನ್ನೊಡನೆ ವಾದಮಾಡಿ ಸೋತ ಪಂಡಿತರು ಎಷ್ಟು ನೊಂದುಕೊಂಡರೋ, ಎಷ್ಟು ಬಗೆಯಿಂದ ನನಗೆ ಶಪಿಸಿದರೋ, ಛೆ, ನನ್ನ ಪರಮಾರ್ಥವು ನಾಶವಾಯಿತು. ಈಗ ನಾನು ಪಂಡಿತರ ಮುಖಭಂಗಮಾಡಿದ ಪಾಪಕ್ಕೆ ಬ್ರಹ್ಮರಾಕ್ಷಸಜನ್ಮ ತಾಳಬೇಕಾದೀತು. ಇನ್ನು ಸಾಕು, ನನ್ನ ಪಾಂಡಿತ್ಯದ ಆಡಂಬರ. ಇಂದಿನಿಂದ ಸಂಸ್ಕೃತಭಾಷೆ ಎಂದಿಗೂ ನನ್ನ ಬಾಯಿಂದ ಬರಲಿಕ್ಕಿಲ್ಲ. ಇದು ವಿಶ್ವನಾಥನ ಸನ್ನಿಧಿಯಲ್ಲಿ ಪ್ರತಿಜ್ಞೆ. ಎಂದು ವೈರಾಗ್ಯತಾಳಿ ವಾದದಲ್ಲಿ ಗೆದ್ದುದರಿಂದ ತನಗೆ ದೊರೆತ ಕಡಗ-ಶಾಲು ಮುಂತಾದವುಗಳನ್ನೆಲ್ಲ ಭಿಕ್ಷುಕರಿಗೆ ದಾನಮಾಡಿ ಹಿಮಾಲಯ ಪ್ರಾಂತಕ್ಕೆ ತೆರಳಿದನು.

ಬಹುಕಾಲದ ವರೆಗೆ ಅಲ್ಲಿಯ ಒಂದು ಗುಹೆಯಲ್ಲಿದ್ದು ಸಾಧನೆಮಾಡಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದನು. ತರುವಾಯ ಮರಳಿ ತನ್ನ ನಾಡಿಗೆ ಬಂದು ಕಿತ್ತೂರಿನ ಪರಿಸ್ಥಿತಿಯನ್ನು ವಿಚಾರಿಸಲು ವೈರಿಗಳಿಂದ ಎಲ್ಲ ಐಶ್ವರ್ಯ-ರಾಜ್ಯ ನಾಶವಾಗಿಹೋಗಿದ್ದವು. ಸ್ತ್ರೀಯರು ಅಪಹೃತರಾಗಿದ್ದರು. ಗೋವುಗಳು, ಮಹಾತ್ಮರು ಪತಿವ್ರತೆಯರು ಮುಂತಾದವರಿಂದ ಭೂಮಿಯು ಸ್ಥಿರವಾಗಿ ನಿಂತಿರುವುದೆಂದು ಮಹಾಭಾರತದಲ್ಲಿ ಹೇಳಿದ್ದಾರೆ. ಇಂಥ ಮಹಿಮಾಶಾಲಿಗಳಾದ ಮಹಾತ್ಮರ ಕೃಪಾವಲೋಕನ ತಪ್ಪಿದ ಕಿತ್ತೂರ ರಾಜ್ಯ ಉಳಿಯುವ ಬಗೆ ಹೇಗೆ? ಈ ನಾಡನ್ನು ತೊರೆದು ಹೋಗುವಾಗಲೇ ಮಡಿವಾಳಸ್ವಾಮಿ ರಾಜ್ಯನಾಶವಾಗಲಿ, ಎಂದು ಶಾಪವಿತ್ತು ತೆರಳಿದ್ದನು. ಅದೀಗ ನಿಜವಾಗಿತ್ತು. ಅಲ್ಲಿ ವಾಸಿಸಲು ಮನಸ್ಸಾಗಲಿಲ್ಲ,

ಗರಗ ಗ್ರಾಮಕ್ಕೆ ಬಂದು ನೆಲೆಸಿದನು. ಅರಳಿ ದೆಶೆ ದೆಶೆಗೆ ತಮ್ಮ ಸೌರಭವನ್ನು ಬೀರುತ್ತಿರುವ ಹೂಗಳು ತುಂಬಿಗಳಿಗೆ ಔತಣಕೊಡಬೇಕೆ? ಮಡಿವಾಳ ಸ್ವಾಮಿಯ ಯೋಗ್ಯತೆಯ ಅರಿವಾದಂತೆ ಭಕ್ತರು ಬರತೊಡಗಿದರು. ಕೆಲದಿನಗಳಲ್ಲಿ ಭಕ್ತರ ಸಮುದಾಯ ಬಹಳ ದೊಡ್ಡದಾಯಿತು. ಅವರಲ್ಲಿ ಘಂಟೆಪ್ಪನು ಪ್ರಮುಖ ಭಕ್ತನೆನಿಸಿದನು. ಪ್ರಾರಬ್ಧ ಭೋಗವಶದಿಂದ ಮಡಿವಾಳಸ್ವಾಮಿಯು ಕಣ್ಣುಗಳು ಕಾಣದಂತಾದವು. ಒಂದು ಸಾರೆ ಇಲ್ಲಿಗೆ ಬಂದ ನವಿಲುಗುಂದ ನಾಗಲಿಂಗಪ್ಪ- 'ಮಡಿವಾಳಾ, ಕಣ್ಣು ಇಲ್ಲದಂತಾದುದಕ್ಕೆ ನಿನಗೆ ಬಹಳ ತ್ರಾಸವಾಗಿರಬೇಕು. ನಾನು ನಿನಗೆ ಕಣ್ಣು ಕೊಡಬೇಕೆನ್ನುತ್ತೇನೆ.' ವನ್ನಲು ಮಡಿವಾಳಸ್ವಾಮಿ 'ನನ್ನ ಕರ್ಮಾನುಸಾರವಾಗಿ ಕಣ್ಣು ಹೋಗಿವೆ. ನನಗೆ ಅವು ಬಂದರೂ ಅಷ್ಟೇ, ಹೋದರೂ ಅಷ್ಟೇ. ಲೋಕದಲ್ಲಿ ಬಹಳ ಜನ ಕಣ್ಣಿದ್ದೂ ಕುರುಡರಂತೆ ಆಗಿದ್ದಾರೆ. ಅವರಿಗೆ ಕಣ್ಣುಬರುವಂತೆ ನೀನು ಯತ್ನಮಾಡು.' ಎಂದು ಹೇಳಿ ಸುಮ್ಮನಾದನು. ಆದರ ಭಾವವನ್ನು ಗ್ರಹಿಸಿದ ನಾಗಲಿಂಗಪ್ಪ ಪುನಃ ಕಣ್ಣಿನ ವಿಷಯವನ್ನೇ ಎತ್ತಲಿಲ್ಲ.

ಹೀಗಿರಲು ಇತ್ತ ಹುಬ್ಬಳ್ಳಿಯಲ್ಲಿ ನೆಲೆಸಿರುವ ಸಿದ್ಧಾರೂಢಸ್ವಾಮಿ ಮಡಿವಾಳಪ್ಪನ ಕೀರ್ತಿಯನ್ನು ಕೇಳಿ ದರ್ಶನಕ್ಕೆಂದು ಗರಗಕ್ಕೆ ಬಂದನು. ಪರಸ್ಪರ ಸಂಭಾಷಣೆ ನಡೆಯಿತು. ಮಡಿವಾಳಪ್ಪ ಕೇಳಿದನು. 'ನಿನ್ನದು ಯಾವ ಸ್ಥಳ?'

'ಬ್ರಹ್ಮಾಂಡ. ಆದರೆ ಕುರುಡ ಭಕ್ತರು ನಾನಿರುವುದು ಹುಬ್ಬಳ್ಳಿ ಎಂದು ತಿಳಿಯುತ್ತಾರೆ.'

'ನಿನ್ನ ಹೆಸರು?'

'ಆರೂಢ.'

'ಅಂದರೆ ತಾಯಿಯ ಹೊಟ್ಟೆಯಿಂದ ನೀನು ಹುಟ್ಟಿದವನಲ್ಲವೇನು? ಆಕಾಶದಿಂದ ಉದುರಿ ಬಿದ್ದೆಯಾ?'

'ಮಾಯೆಯ ಮುಸುಕು ಸರಿಸಿದರೆ ಅದೇ ನಿಜ. ಎಲ್ಲಕಡೆಗೂ ನಾನು ಇದ್ದವನು. ಆದರೆ ಒಂದರದೂ ನನಗೆ ಸ್ಪರ್ಶವಿಲ್ಲ.'

ಎಂದು ಸಿದ್ಧ ಉತ್ತರ ಕೊಡಲು ಮಡಿವಾಳಪ್ಪ ಆತ್ಮಾನಂದಿತನಾಗಿ ಅವನನ್ನು ಬಳಿಗೆ ಕರೆದು ವಾತ್ಸಲ್ಯಭಾವದಿಂದ ಮೈತುಂಬ ಕೈಯಾಡಿಸಿದನು. ಆಗ ಸಿದ್ಧನ ದೇಹ ಸೊರಗಿ ಬಡಕಲಾಗಿರುವಂತೆನಿಸಿತು. ಕೂಡಲೇ ಮಡಿವಾಳಪ್ಪ ತರ್ಕಿಸಿದನು.' ಓ, ಇವನು ಶಮ-ದಮಾದಿ ಸಂಪನ್ನ, ಹೀಗಿರುವಲ್ಲಿಯೇ ಜ್ಞಾನವು ಪ್ರಕಾಶಿಸುವುದು.' ಎಂದುಕೊಂಡು–'ಸಿದ್ಧ, ಬರಿಯ ಮಂಗಗಳು ನೆಲೆಸಿರುವ ಒಂದು ಊರನ್ನು ನೀನು ಕಂಡಿರುವೆಯಾ? ಎಂದನು.

ಆ ಮಾತನ್ನು ಕೇಳಿ ಸಿದ್ಧ–ಓಹೋ, ದೇಹವೇ ಆ ಊರು. ಚಂಚಲ ಮನೋವೃತ್ತಿಗಳೇ ಮಂಗ ಎಂದು ತಿಳಿದು–'ಕಂಡಿದ್ದೇನೆ.' ಎಂದು ಉತ್ತರ ಕೊಟ್ಟರು.

ಕೇಳಿದವರಿಗೆ ವಿನೋದಕರವೆನಿಸುವಂತಿದ್ದರೂ ಅರ್ಥಗರ್ಭಿತವಾದ ಸಂಭಾಷಣೆ ಅವರಿಬ್ಬರಲ್ಲಿ ಎಷ್ಟೋಹೊತ್ತು ಜರುಗಿದ ಮೇಲೆ ಮಡಿವಾಳಸ್ವಾಮಿ ಸಿದ್ಧನ ಯೋಗ್ಯತೆ ತಿಳಿದು ಸಂತೋಷದಿಂದ ಸಿದ್ಧನ ಭಕ್ತರಿಗೆ–'ಅಪ್ಪಗಳಿರಾ, ನೀವು ಪುಣ್ಯವಂತರೆಂದು ಸಿದ್ಧನ ಸಹವಾಸವೊದಗಿದೆ. ಅವರಲ್ಲಿ ಭಕ್ತಿಇಟ್ಟು ಸುಖಿಗಳಾಗಿರಿ. ಲೋಕದಲ್ಲಿ ಸುಖಕ್ಕೇನೂ ಕೊರತೆಯಿಲ್ಲ. ಅದಕ್ಕೆ ಯಾವ ಮೂಲ್ಯವನ್ನೂ ಕೊಡಬೇಕಾಗಿಲ್ಲ. ಪಡೆದುಕೊಳ್ಳುವಂಥ ಪಾತ್ರತೆಮಾತ್ರ ಸಂಪಾದಿಸಿಕೊಳ್ಳಬೇಕು. ಸಿದ್ಧಾ, ಇನ್ನುಮೇಲೆ ನಿನಗೊಂದು ಮಾತು ಹೇಳಬೇಕಾಗಿದೆ. ಏನೆಂದರೆ ಬೇಗನೆ ನಿನಗೆ ಅಕ್ಷಯನಿಧಿಯೊಂದು ದೊರಕೀತು. ಅದನ್ನು ಸಿಕ್ಕ-ಸಿಕ್ಕವರಿಗೆ ಕೊಟ್ಟು ಹಾಳುಮಾಡಬೇಡ. ಬೇಡಬಂದವರು ನಿಧಿ ಕಾದುಕೊಳ್ಳುವಷ್ಟು ಯೋಗ್ಯತೆಯುಳ್ಳವರಿರಬೇಕು. ಎಲ್ಲಕಡೆಗೆ ಕಾದುಕುಳಿತ

ಕಳ್ಳರು ಇದ್ದೇಇರುತ್ತಾರೆ. ನಿನಗೆ ಬೇಕೆನಿದರೆ ನನ್ನ ಕಡೆಗೂ ಕಳಿಸಬಹುದು.' ಎಂದು ಹೇಳಲು ಸಿದ್ಧನು- ನೀವು ವಿರಕ್ತರಾದ ಮೇಲೆ ದೊಡ್ಡದೊಂದು ನಿಧಿ ನಿಮ್ಮ ಕೈವಶವಾಗಿರುವುದೆಂದು ಕೇಳುತ್ತೇನೆ. ನಿಮ್ಮ ಕಡೆಗೆ ಬರುವ ಜನ ಎಲ್ಲ ಕಸುಬಿನವರೂ ಇರುತ್ತಾರೆ. ನೀವು ದಯಾಸಮುದ್ರರು. ಲೋಭ-ಮೋಹ ಗಳಿಲ್ಲದ ವಿರಕ್ತರು. ಆದುದರಿಂದ ನಿಧಿಕಾಯ್ದುಕೊಳ್ಳುವುದು ನಿಮಗೆ ಬಹಳ ಕಠಿಣವಾಗಿರಬೇಕು. ಅದನ್ನು ನನಗೊಪ್ಪಿಸಿಬಿಡಿರಿ. ನಾನು ಯೋಗ್ಯರಾದ ಜನರಿಗೆ ಸಾಲಕೊಟ್ಟು ಬಡ್ಡಿಸಹಿತ ಅಸಲು ವಸೂಲು ಮಾಡುತ್ತ ನಿಮ್ಮ ನಿಧಿ ಒಂದಕ್ಕೆರಡರಷ್ಟು ಬೆಳೆಸಿ ನಿಮಗೆ ಮುಟ್ಟಿಸುತ್ತೇನೆ.' ಎಂದು ನುಡಿದನು.

ಆ ಮಾತು ಕೇಳಿ ಮಡಿವಾಳಪ್ಪನಿಗೆ ಹರ್ಷಹಿಡಿಸದಾಯಿತು. ಸಿದ್ಧನನ್ನು ಅಪ್ಪಿಕೊಂಡು 'ನೀನು ಚತುರ' ಎಂದು ಆಶೀರ್ವದಿಸುತ್ತಿರಲು ಅಷ್ಟರಲ್ಲಿ ಹೊರಗೆ ಜನರ ಕಲ-ಕಲ ಕೇಳಿಸಿತು. ನೋಡಿ ಬರುವಂತೆ ಮಡಿವಾಳಪ್ಪ ಶಿಷ್ಯರಿಗೆ ಹೇಳಿದನು. ಶಿಷ್ಯರು ಹೊರಗೆ ಬಂದು ನೋಡಿದರು. ಅಲ್ಲಿ ಒಬ್ಬನು ಹಾವು ಕಡಿದು ಮರಣಹೊಂದಿದ್ದನು. ಅವನ ಹೆಂಡತಿ-ಮಕ್ಕಳು ಅಳುತ್ತ ಆಕ್ರೋಶ ಮಾಡತೊಡಗಿದ್ದರು. ಇದನ್ನು ಕಂಡು ಬಂದು ತಮ್ಮ ಗುರುಗಳಿಗೆ ಹೇಳಲು- 'ಹು ಬೇಗ ಉಪಾಯ ಮಾಡಿರಿ ಈ ಸಿದ್ಧನ ಪಾದೋದಕವನ್ನು ಅವನ ಮೈಗೆಲ್ಲ ಸವರಿ ಬಾಯಲ್ಲಿಯೂ ತುಸುಬಿಡಿರಿ. ಆಮೇಲೆ ಗದ್ದಲ ಮಾಡದೇ ನೀವೆಲ್ಲರೂ ಕುಳಿತು ಭಜನೆ ಮಾಡಿರಿ. ದೇವರು ಕರುಣಿಸುತ್ತಾನೆ' ಎಂದು ಮಡಿವಾಳಪ್ಪ ಸೂಚಿಸಿದನು. ಅದರಂತೆ ಮಾಡಿ ಜನರೆಲ್ಲ ಭಜನಮಗ್ನರಾಗಿ ಒಂದು ಘಳಿಗೆ ಕುಳಿತರು. ಮೃತನು ಮೆಲ್ಲನೆ ಕಣ್ಣು ತೆರೆದು ಚಟ್ಟನೆ ಎದ್ದು ಕುಳಿತನು. ಆಗ ಜನರಿಗಾದ ಸಂತೋಷವೆಷ್ಟೆಂಬುದನ್ನು ಹೇಳುವುದು ಸಾಧ್ಯವೇ? ಅವನ ಹೆಂಡತಿಯಂತೂ ತನ್ನ ಸೌಭಾಗ್ಯ ಮರಳಿ ದೊರೆತದುದಕ್ಕೆ ಆನಂದಾಶ್ಚರ್ಯಪಟ್ಟು ಕಂಗಳಲ್ಲಿ ಹರ್ಷಜಲ ಸುರಿಸುತ್ತ ಉಭಯ ಮಹಾತ್ಮರನ್ನು ವಂದಿಸಿ ಬಗೆಬಗೆಯಿಂದ ಸ್ತೋತ್ರ ಮಾಡಿದಳು. ಇಷ್ಟರಲ್ಲಿ ಅವಳ ಪತಿ ಪೂರ್ಣ ಜಾಗ್ರತನಾಗಿ ಬಂದು ಇಬ್ಬರಿಗೂ ವಂದಿಸಿ--'ಮಹಾತ್ಮರೇ, ನನ್ನ ತನು-ಮನ-ಧನ ನಿಮಗೆ ಅರ್ಪಿಸಿದ್ದೇನೆ. ಬೇಕಾದಂತೆ ಉಪಯೋಗಿಸಿಕೊಳ್ಳಬಹುದು.' ಎಂದು ವಿನಯದಿಂದ ಪ್ರಾರ್ಥಿಸಲು ಮಡಿವಾಳಪ್ಪ ಹಸನ್ಮುಖನಾಗಿ—'ನಾವು ಸ್ವೀಕರಿಸಿದೆವು. ಇನ್ನು ನಮ್ಮ

ಅಪ್ಪಣೆಯಂತೆ ನೀನು ನಡೆಯಬೇಕು. ನಿನ್ನ ಧನ ನಿನಗೇ ಇರಲಿ ವಿರಕ್ತರಾದ ನಮಗೆ ಅದುಬೇಡ, ತನು-ಮನ ಮಾತ್ರ ನನಗೆ ಬೇಕು. ಮನಸ್ಸನ್ನು ಪೂರ್ಣ ವಾಗಿ ನಮಗೆ ಒಪ್ಪಿಸು ನಿನ್ನ ಉದ್ಧಾರದ ಗುತ್ತಿಗೆ ನಮ್ಮದು. ಉಳಿದುದು ತನು. ಅದರ ಮೇಲೆ ನಮಗೆ ಪೂರ್ಣ ಅಧಿಕಾರ ಬರುವಂತಿಲ್ಲ. ನಿನ್ನ ಹೆಂಡತಿ-ಮಕ್ಕಳ ಪಾಲನ-ಪೋಷಣೆಗೆ ಅರ್ಧ ಉಪಯೋಗಿಸು, ಉಳಿದ ಅರ್ಧ ನಮ್ಮ ಸೇವೆಗೆ ಮೀಸಲು ಮಾಡು.

ಮಡಿವಾಳಸ್ವಾಮಿಯ ಮಧುರ ಮಾತುಗಳನ್ನು ಕೇಳಿ ಆನಂದಿತರಾದ ಜನ ಜಯ ಧ್ವನಿಮಾಡಿ ತಮ್ಮ ಹರ್ಷವನ್ನು ವ್ಯಕ್ತಗೊಳಿಸಿದರು. ಆ ಮಹಾತ್ಮರಿಬ್ಬರ ಮೇಲೆಯೂ ಹೂಮಳೆಗರೆದು ಮಹಿಮೆ ಕೊಂಡಾಡುತ್ತ ಮನೆಗೆ ತೆರಳಿದರು. ಇದಾದ ನಂತರ ಸಿದ್ಧನು ಕೆಲವು ದಿನಗಳ ವರೆಗೆ ಮಡಿವಾಳ ಸ್ವಾಮಿಯ ಬಳಿಯಲ್ಲಿ ನಿಂತನು. ಪ್ರತಿದಿನ ವೇದಾಂತ ಚರ್ಚೆ ನಡೆಯಬೇಕು ಅಥವಾ ಯೋಗವಾಸಿಷ್ಠ ಮುಂತಾದ ಪುರಾಣ ಶ್ರವಣವಾಗಬೇಕು, ಮುಮುಕ್ಷುಗಳಿಗೆ ಅದೊಂದು ಪರ್ವಕಾಲ. ಜ್ಞಾನಗಂಗೆಯೇ ಅಲ್ಲಿಯ ಜನರ ತಪಸ್ಸಿಗೆ ಮೆಚ್ಚಿ ಪ್ರಸನ್ನಳಾದ ಹಾಗಿತ್ತು. ಅಲ್ಲಿ ಮಿಂದು-ಕುಡಿದು ಜನ ಪಾವನರಾದರು. ಒಂದು ಕಾಲದಲ್ಲಿ ಪಂತಿತೋತ್ತಮನೆನಿಸಿದ ಮಡಿವಾಳಪ್ಪ ಸಿದ್ಧನ ಅನುಭವಪೂರ್ಣ ವಿವೇಚನೆ ಕೇಳುತ್ತ ತಲೆದೂಗುತ್ತಿದ್ದನು. ಒಂದು ದಿನ ಸಿದ್ಧನು ಆತ್ಮವಿಚಾರವನ್ನು ಪ್ರತಿಪಾದಿಸುತ್ತಿದ್ದನು. ಮಧ್ಯದಲ್ಲಿ ಮಡಿವಾಳಸ್ವಾಮಿ ಅವನನ್ನು ತಡೆದು ನಿಲ್ಲಿಸಿ ತಾನು ಹೇಳತೊಡಗಿದನು.

'ಆತ್ಮನು ಎಲ್ಲ ಕಡೆಗೂ ಇರುವವನು. ಉಪಾಧಿಗಳ ಮೂಲಕ ಅವನಲ್ಲಿ ಆಯಾ ಉಪಾಧಿ ಧರ್ಮಗಳನ್ನು ಆರೋಪಿಸಿ ಆತ್ಮ ಹಾಗೆ-ಹೀಗೆ ಎಂದು ಹೇಳುವರು. ಆದರೆ ದೇಹ-ಇಂದ್ರಿಯ-ಮನಸ್ಸು-ಬುದ್ಧಿ-ಪ್ರಕೃತಿಗಳಿಂದ ಆತ್ಮನು ಬೇರೆ, ಅವನು ಸಾಕ್ಷಿ. ನಿರ್ಮಲವಾದ ಬುದ್ಧಿಯಿಂದ ಅವನನ್ನು ಅರಿಯಬಹುದು. ಅವನ ಆಶ್ರಯದಿಂದಲೇ ದೇಹೇಂದ್ರಿಯಾದಿಗಳು ತಮ್ಮ ಅರ್ಥಗಳಲ್ಲಿ ಪ್ರವೃತ್ತಿಸುವವು. ಸೂರ್ಯನು ಮೂಡಿದ ಕೂಡಲೇ ಜನರು ತಮ್ಮ ಕಾರ್ಯಗಳಲ್ಲಿ ತೊಡಗುವುದಿಲ್ಲವೇ ಹಾಗೆ.'

ಇದರಂತೆ ಜ್ಞಾನಗಂಗೆಯನ್ನು ಹರಿಸುತ್ತ ಕೆಲದಿನಗಳ ವರೆಗೆ ಸಿದ್ಧ ನಿಂತು ಹುಬ್ಬಳ್ಳಿಗೆ ಮರಳುವುದಕ್ಕೆ ಆಜ್ಞೆಯನ್ನು ಪಡೆದುಕೊಂಡನು. ಆಗ

ಮಡಿವಾಳಪ್ಪ ಹೇಳಿದುದೇನಂದರೆ--'ಸಿದ್ಧ, ಇನ್ನು ಮೇಲೆ ಹುಬ್ಬಳ್ಳಿ ಬಿಟ್ಟು ಎಲ್ಲಿಗೂ ಹೋಗಬೇಡ. ಅಲ್ಲಿ ನಿನ್ನ ಜ್ಞಾನವೈಭವ ಹೆಚ್ಚುವುದು ಅಸಂಖ್ಯಾತ ಭಕ್ತರ ಸಮುದಾಯ ಬೆಳೆಯುವುದು. ಅಷ್ಟಸಿದ್ಧಿಗಳು ನಿನ್ನ ಸೇವೆಗೆ ಹಾತೊರೆಯುವವು. ಆದರೆ ಒಂದು ರಹಸ್ಯಮಾತು. ನಿನ್ನ ತಪೋಭಂಗದ ಯೋಚನೆ ನಡೆದಿರುವಂತೆ ತಿಳಿಯುತ್ತದೆ. ಮಾನಿನಿಯರ ಮೂರ್ತಿ-ಚಿತ್ರಗಳನ್ನು ಕೂಡ ಕಣ್ಣಿಟ್ಟು ನೋಡಬೇಡ. ಇದರಲ್ಲಿ ನಿನಗೆ ಜಯವಿದೆ ಎಂದು ನಾನು ಬಯಸುತ್ತೇನೆ' ಎಂದು ಹೇಳಿ ಸಾಮಾನ್ಯರು ಪ್ರೇಮದ ಜನರನ್ನು ಅಗಲುವಾಗ ದುಃಖಿಸುವಂತೆ ಅಳುತ್ತ ಆಲಂಗಿಸಿ ಬೀಳ್ಕೊಡುತ್ತ-'ಮಗು ನನ್ನನ್ನು ಮರೆಯುವುದಿಲ್ಲವಷ್ಟೇ?' ಎಂದು ಗೋಳಿಟ್ಟನು. ಆಗ ಸಿದ್ಧನೂ ಕಣ್ಣೀರ್ಗರೆಯುತ್ತ—'ಅನಂತಾಕಾಶದ ಧ್ರುವತಾರೆಯನ್ನು ಮರೆತರೆ ದಿಕ್ಕು ತಿಳಿಯುವ ಬಗೆ ಯಾವುದು?' ಎಂದು ವಂದಿಸಲು 'ನಿನಗೆ ಜ್ಞಾನಸಿದ್ಧಿ ಲಭಿಸಲಿ' ಎಂದು ಮಡಿವಾಳಪ್ಪ ಹರಿಸಿದನು.

ತರುವಾಯ ಸಿದ್ಧ ಊರಿಗೆ ನಡೆದಿರಲು ಮಡಿವಾಳಪ್ಪ ಬಹು ದೂರದ ವರೆಗೆ ಕಳಿಸಲು ಬಂದು—'ಸಿದ್ಧಾ, ನಿನ್ನಂಥವರು ವಿರಳವಾಗಿ ಕಾಣಲು ಸಿಗುತ್ತಾರೆ' ಎಂದು ದುಃಖದಿಂದ ನುಡಿದನು. ಆಗ ಸಿದ್ಧನಾದರೂ ಆ ಪ್ರೇಮಕ್ಕೆ ಮನಸೋತು ದುಃಖದಿಂದಲೇ ಅವನನ್ನು ಮರಳಿ ಕಳಿಸಿ ಹುಬ್ಬಳ್ಳಿಗೆ ಬಂದು ತಲುಪಿದನು.

ಇತ್ತ ತನ್ನ ಮಠಕ್ಕೆ ಮರಳಿದ ಮಡಿವಾಳ ಸ್ವಾಮಿ ತನ್ನ ಶಿಷ್ಯರೆದುರಿಗೆ ಎಷ್ಟೋ ದಿನಗಳ ವರೆಗೆ ಸಿದ್ಧನ ಗುಣ ವರ್ಣನೆಯನ್ನು ಮಾಡುತ್ತಲೇ ಇದ್ದನು.

———————

೨೫

ಅಸಾರೇ ಸಂಸಾರೇ ಸುತಹಿತ ಕಲತ್ರಾದಿಭರಣಾ-
ದ್ಯುಪಾಧೌ ಮಗ್ನಾಸ್ತತ್ತರಣ ಕರುಣೋಪಾಯ ರಹಿತಾಃ ॥
ಪತಂತಿ ತ್ವತ್ಪಾದಾಂ ಬುಜಯುಗಲ ಸೇವಾಸು ವಿಮುಖಾ
ನರಾಃ ಪಾಪಾತ್ಮಾನಃ ಪ್ರವರನರಕೇ ಶೋಕನಿಲಯೇ ॥

– ಸ್ತೋತ್ರಾವಲಿ

ಬಿಡುಗಡೆ ಮಾಡಿಕೊಳ್ಳಲು ಬಹಳ ಕಠಿಣವೆನಿಸಿದ ಸಂಸಾರದಲ್ಲಿ ಮಕ್ಕಳು-ಮರಿ-ಹೆಂಡತಿ ಮೊದಲಾದವರ ಹಿತ-ಪೋಷಣೆಗಳಲ್ಲಿ ಮುಳುಗಿದವರು ಸಂಸಾರ ದಾಟುವ ಉಪಾಯಗಳನ್ನೇ ತಿಳಿಯದಾಗುವರು. ಅದರಲ್ಲಿಯೂ ನಿನ್ನ ಪಾದಕಮಲಗಳ ಸೇವೆ ಮಾಡದವರಂತೂ ಪಾಪಿಗಳು. ಆ ಮಾನವರು ದುಃಖಪೂರ್ಣವಾದ ಮಹಾನರಕದಲ್ಲಿ ಬೀಳುವರು.

ಕರಾವಳಿಯ ಕೊಂಕಣ ಪ್ರಾಂತದಲ್ಲಿ ಬ್ರಾಹ್ಮಣ ದಂಪತಿಗಳು ಸುಖದಿಂದ ವಾಸಮಾಡಿಕೊಂಡಿದ್ದರು. ಅವರ ಹೊಟ್ಟೆ ಬಟ್ಟೆಗೆ ಕೊರತೆ ಇರಲಿಲ್ಲ. ಸಮರಸವಾದ ಸಂಸಾರ. 'ಧನ್ಯೋ ಗೃಹಸ್ಥಾಶ್ರಮಃ' ಗೃಹಸ್ಥ ಧರ್ಮದ ಆಚರಣೆ ಶ್ರೇಷ್ಠ ಎಂದು ಅಂದುಕೊಳ್ಳುತ್ತಿರುವಾಗ ಹೆಂಡತಿಗೆ ಪಿಶಾಚ ಬಾಧೆಯಾಯಿತು. ಬಲ್ಲವರಿಂದ ಉಪಚಾರ ಮಾಡಿಸಿದರು. ಮಣಿ-ಮಂತ್ರ-ಔಷಧಗಳು ಮುಗಿದವು. ಆ ಗೃಹಸ್ಥ ದಿಕ್ಕುಗಾಣದಾದನು. ಭಾವಿಕರೊಬ್ಬರು ಹೇಳಿದರು. 'ನೀನು ನೃಸಿಂಹವಾಡಿಗೆ ಹೋಗಿ ಹೆಂಡತಿಯನ್ನು ಸೇವೆಗೆ ಹಚ್ಚು' ಆ ಮಾತು ಸಮಂಜಸವೆನಿಸಿ ಹೆಂಡತಿಯೊಡನೆ ವಾಡಿಗೆ ಬಂದನು. ಸೇವೆ ಪ್ರಾರಂಭವಾಯಿತು. ಹೆಂಡತಿಯ ಬಾಧೆ ಕಡಿಮೆಯಾದರೆ ನಿನಗೆ ನೂರು ರೂಪಾಯಿ ಅರ್ಪಿಸುವೆನೆಂದು ದತ್ತಾತ್ರೇಯನಲ್ಲಿ ಹರಿಕೆಹೊತ್ತನು.

ಒದ್ದೆಬಟ್ಟೆಯುಟ್ಟು ಆ ಸ್ತ್ರೀ ಬಹುಭಕ್ತಿಯಿಂದ ಸೇವೆ ಮಾಡುತ್ತಿದ್ದಳು. ಮೂರುತಿಂಗಳು ಕಳೆದವು. ಒಂದುದಿನ ರಾತ್ರಿ ಸ್ವಪ್ನವಾಯಿತು. ದತ್ತಾತ್ರೇಯ ಹೇಳಿದನು. 'ನಿಮ್ಮ ಬಾಧೆ ಇಲ್ಲಿ ಕಡಿಮೆಯಾಗುವುದಿಲ್ಲ. ನೀವು ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿಯಲ್ಲಿ ಹೋಗಿರಿ ಅಲ್ಲಿ ನಿಮ್ಮ ಇಚ್ಛೆ ಪೂರ್ಣವಾಗುವುದು.'

ಆ ಸ್ತ್ರೀ ಜಾಗ್ರತಳಾಗಿ ಗಂಡನನ್ನು ಕೂಡಿ ಸ್ವಪ್ನವೃತ್ತಾಂತವನ್ನು ತಿಳಿಸಿದಳು. 'ದೇವರ ಅಪ್ಪಣೆ.' ಎಂದು ದತ್ತನಿಗೆ ವಂದಿಸಿ ಹುಬ್ಬಳ್ಳಿಗೆ ಬಂದು ಸಿದ್ಧನಿಗೆ ವಾಡಿಯಲ್ಲಿ ತಮಗಾದ ನಿದರ್ಶನವನ್ನು ತಿಳಿಸಿದರು. ಅದನ್ನು ಕೇಳಿ ಸದ್ಗುರುನಾಥ 'ಒಳ್ಳೇದು, ನೀವು ಇಲ್ಲಿದ್ದು ನಿತ್ಯ ಭಜನೆಮಾಡುತ್ತ ಹೋಗಿರಿ. ಬಾಧೆಯು ಇಲ್ಲದಂತಾಗುವುದು.' ಎಂದು ಹೇಳಲು ಅವರು ಭಕ್ತಿಯಿಂದ ಅದರಂತೆ ನಡೆಯತೊಡಗಿದರು. ಅಲ್ಲದೆ ಮಠದಲ್ಲಿ ನಡೆಯುವ ಶ್ರವಣವನ್ನೂ ಅವರು ಕೇಳುತ್ತಿದ್ದರು. ಕೆಲವುದಿನ ಹೀಗೆ ಸಾಗಲು ಆ ಸ್ತ್ರಿಯ ಪಿಶಾಚಬಾಧೆ ಇಲ್ಲದಂತಾಯಿತು. ವೇದಾಂತ ಶ್ರವಣದಿಂದ ವಿಚಾರ ಜಾಗ್ರತಿಯೂ ಆಯಿತು.

ಒಂದುದಿನ ಆ ದಂಪತಿಗಳು ಆನಂದದಿಂದ ಸಿದ್ಧನ ಬಳಿಗೆ ಬಂದು– 'ಸದ್ಗುರುವೇ, ನಿನ್ನ ಕೃಪೆಯಿಂದ ಬಾಧೆಯು ಇಲ್ಲದಂತಾಯಿತು. ಒಂದು ರೀತಿ ನೋಡಿದರೆ ನಮ್ಮ ಇಚ್ಛೆ ಪೂರ್ಣವಾದುದರಿಂದ ಇನ್ನು ಇಲ್ಲಿರುವ ಕಾರಣವೇನೂ ಇಲ್ಲ. ಆದರೆ ಇಲ್ಲಿಯ ಶುದ್ಧ ವಾತಾವರಣ, ಶಾಂತಿ, ಭಕ್ತರ ಸಮಾಗಮ ಇವುಗಳನ್ನು ಬಿಟ್ಟು ಊರಿಗೆ ಮರಳಲು ಮನಸ್ಸಾಗದಂತಾಗಿದೆ.' ಎಂದು ನುಡಿದರು. ಆಗ ಸಿದ್ಧನು– 'ಇನ್ನು ನೀವು ಊರಿಗೆ ತೆರಳಲು ಯಾವ ಅಡ್ಡಿಯೂ ಇಲ್ಲ. ಮನವಿರುವಲ್ಲಿ ಮಹಾದೇವನೆಂದು ಹೇಳುವುದನ್ನು ಕೇಳಿಲ್ಲವೇ? ಊರಿನಲ್ಲಿಯಾದರೂ ನಿತ್ಯಭಜನೆ ಮಾಡುತ್ತ ಭಗವಂತನಲ್ಲಿ ವಿಶ್ವಾಸವಿಟ್ಟು ವರ್ತಿಸಿರಿ. ಅದರಿಂದ ನಿಮ್ಮ ಕಲ್ಯಾಣವಾಗುವುದು.' ಎಂದು ಹೇಳಲು ಅವರು ತಮ್ಮ ನಿವಾಸಕ್ಕೆ ತಿರುಗಿಬಂದರು. ಊರಿಗೆ ಹೋಗಲು ಸಿದ್ಧನ ಅಪ್ಪಣೆಯಾಗಿದ್ದರೂ ಅವರಿಗೆ ಸಮಾಧಾನವೆಷ್ಟೂ ಇರಲಿಲ್ಲ. ಯಾಕಂದರೆ ನೃಸಿಂಹವಾಡಿಯಲ್ಲಿ ಅವರು ಬಾಧೆಯು ಇಲ್ಲದಂತಾದರೆ ನೂರುರೂಪಾಯಿ ನಿನಗೆ ಅರ್ಪಿಸುತ್ತೇವೆ, ಎಂದು ಹರಿಕೆ ಹೊತ್ತಿದ್ದರು. ಈಗ ಬಾಧೆ ಏನೋ ಇಲ್ಲದಾಗಿತ್ತು. ಆದರೆ ದತ್ತಾತ್ರೇಯನಿಂದಲ್ಲ, ಸಿದ್ಧನಿಂದ. ಹೀಗಿರುವಾಗ ತಾವು ಕಾಣಿಕೆಯನ್ನು ಯಾರಿಗೆ ಅರ್ಪಿಸಬೇಕು? ದೇವರಿಗೋ? ಸಿದ್ಧನಿಗೋ? ಎಂಬುದನ್ನು ತಿಳಿಯದಾಗಿದ್ದರು. ಅದನ್ನೇ ಮಾತಾಡಿಕೊಂಡು ಮಲಗಿದರು. ಅಂದು ಪುನಃ ಆ ಸ್ತ್ರೀಗೆ ಸ್ವಪ್ನವಾಯಿತು. ಸ್ವಪ್ನದಲ್ಲಿ ದೇವರು ಹೇಳಿದನು. 'ನಿಮ್ಮ ಕಾಣಿಕೆ ಸಿದ್ಧನಿಗೇ ಅರ್ಪಿತವಾಗಲಿ.' ಅವಳು ತನಗೆ ದೇವರು ಹೀಗೆ ಹೇಳಿದನೆಂದು ಸ್ವಪ್ನವನ್ನು ಗಂಡನಿಗೆ ತಿಳಿಸಿದಳು.

ಅವನು ಮತ್ತೆ ಸಿದ್ಧಾರೂಢಸ್ವಾಮಿಯ ಬಳಿಗೆ ಬಂದು ತನ್ನ ಮನದ ಅಭಿಪ್ರಾಯಗಳನ್ನೆಲ್ಲ ನಿವೇದಿಸಿದನು. ಸಿದ್ಧನು 'ಒಳ್ಳೇದು, ನಿನಗೆ ಅಪ್ಪಣೆಯಾದಂತೆ ವರ್ತಿಸು.' ಎನ್ನಲು ಆ ಗೃಹಸ್ಥನು ಕಾಣಿಕೆಯನ್ನರ್ಪಿಸಿ ಊರಿಗೆ ತೆರಳಿದನು. ಅಲ್ಲಿ ಕೂಡ ಸದ್ಗುರು ಭಕ್ತಿಯನ್ನು ಬಿಡದೇ ಭಜನಾದಿಗಳಲ್ಲಿ ಆನಂದದಿಂದ ಕಾಲಕಳೆಯತೊಡಗಿದನು.

* * * * * *

ನಿರುಪಾದಪ್ಪನೆಂಬವನು ಹುಬ್ಬಳ್ಳಿಯಲ್ಲಿರುವ ಸಿದ್ಧನ ಭಕ್ತನೊಬ್ಬನು. ಅವನು ಉದ್ಯೋಗ ವ್ಯವಸಾಯವನ್ನೇನೂ ಮಾಡದೇ ಅಣ್ಣನ ಮನೆಯಲ್ಲಿ ಊಟಮಾಡಿಕೊಂಡು ಇರುವವನು. ಮೇಲಿಂದಮೇಲೆ ಮಠಕ್ಕೆ ಬರುವುದು. ಅಲ್ಲಿ ನಡೆಯುವ ಭಜನೆ-ಶ್ರವಣಾದಿಗಳಲ್ಲಿ ಭಾಗಿಯಾಗುವುದು ಇವೇ ಅವನ ಉದ್ಯೋಗಗಳಾಗಿದ್ದವು. ಒಂದುದಿನ ಅವನಿಗೆ ಸಿದ್ಧ ಹೇಳಿದನು. 'ಏನಾದರೂ ಉದ್ಯೋಗ ಮಾಡಿ ಹೊಟ್ಟೆತುಂಬಿಕೊಳ್ಳುವ ತ್ರಾಣ ನಿನಗುಂಟು. ಹೀಗಿರಲು ನಿಮ್ಮ ಅಣ್ಣನ ಮೇಲೇಕೆ ಭಾರಹಾಕುವೆ? ಉದ್ಯೋಗ ಮಾಡಿಕೊಂಡು ಪರಮಾರ್ಥ ಸಾಧಿಸಲು ಬರುವದಲ್ಲ.'

ಗುರುವಿನ ಅಪ್ಪಣೆಯೇ ಪ್ರಮಾಣವೆಂದುಕೊಂಡು ನಿರುಪಾದಪ್ಪ ಉದ್ಯೋಗದಲ್ಲಿ ತೊಡಗಿ ಪರಮಾರ್ಥವನ್ನೂ ಸಾಧಿಸುತ್ತಿದ್ದನು. ಹೀಗೆ ಕೆಲವು ದಿನ ಕಳೆಯುತ್ತಿರಲು ಒಂದುದಿನ ತಮ್ಮ ಅಣ್ಣನೊಡನೆ ವಿಚಾರಿಸಿದನು.

'ನಾನು ಗುರುನಾಥನಿಗೆ ಪ್ರತಿದಿನ ನೈವೇದ್ಯವನ್ನೊಯ್ದು ಅರ್ಪಿಸಬೇಕೆಂದು ವಿಚಾರಿಸಿದ್ದೇನೆ. ಅದಕ್ಕೆ ನಿನ್ನ ಅಭಿಪ್ರಾಯವೇನು?'

'ಅದು ನಮ್ಮಂಥವರ ಕಾರ್ಯವಲ್ಲ. ನಮಗೆ ಉಪದ್ರವವಾಗದಂತೆ ನಿನ್ನ ಪರಮಾರ್ಥ ನೀನು ನೋಡಿಕೋ. ಈಗೇನೋ ತುಸು ಉದ್ಯೋಗ ಮಾಡತೊಡಗಿರುವೆ. ಅಷ್ಟರಲ್ಲಿ ನಿನ್ನ ಹೊಟ್ಟೆತುಂಬಬೇಕಾದರೆ ಕಠಿಣ, ನಾವು ಪ್ರಪಂಚಿಕರು. ನೀನು ಹೇಳಿದಂತೆ ಕುಣಿಯುತ್ತ ಹೋದರೆ ನಾವೂ ಬೂದಿ ಬಡೆದುಕೊಂಡು ಹೋಗಬೇಕಾದೀತು, ಸುಮ್ಮನಿರು."

ಎಂದು ಖಂಡಿತವಾಗಿ ಹೇಳಿಬಿಡಲು ನಿರುಪಾದಪ್ಪ ನಿರುಪಾಯನಾಗಿ ತನ್ನ ಅಪೇಕ್ಷೆ ಪೂರ್ಣವಾಗದ್ದಕ್ಕೆ ಬಹಳ ವ್ಯಾಕುಲಗೊಂಡು ಎರಡು ಮೂರು ದಿನ ಚಿಂತಿತನಾಗಿಯೇ ಕಾಲಕಳೆದನು. ಕೊನೆಗೆ ಒಂದುದಿನ ನಿರ್ಧಾರಮಾಡಿ

ಕೊಂಡು ಸಮಾಧಾನ ತಾಳಿದನು. ಅದೇನಂದರೆ- 'ಹೇಗೂ ನನ್ನ ಅನ್ನ-ರೊಟ್ಟಿ ಮುಂತಾದವನ್ನು ಪ್ರತಿದಿನ ಬಡಿಸುವರಲ್ಲವೇ? ಅದರೊಳಗಿನ ಅರ್ಧ ಭಾಗವನ್ನು ಮುಚ್ಚಿಟ್ಟು ಅದನ್ನೇ ಸಿದ್ಧನಿಗೆ ಮುಟ್ಟಿಸಿದರಾಯಿತು. ಹೀಗೆ ಮಾಡಲು ಯಾರಿಂದಲೂ ಅಡ್ಡಿಯಾಗಲಿಕ್ಕಿಲ್ಲ.' ಹೀಗೆ ವಿಚಾರ ಮಾಡಿಕೊಂಡು ಊಟಕ್ಕೆ ಬಡಿಸಿದ ಕೂಡಲೇ ಅರ್ಧಭಾಗವನ್ನು ಮುಚ್ಚಿಟ್ಟುಕೊಳ್ಳುವನು. ತನ್ನ ಊಟವಾಗುವುದೇ ತಡ. ರಹಸ್ಯವಾಗಿ ಆ ಮುಚ್ಚಿಟ್ಟ ನೈವೇದ್ಯವನ್ನು ಒಯ್ದು ಸದ್ಗುರುವಿಗೆ ಅರ್ಪಿಸುವನು. ಆ ಪ್ರೇಮಕವಳವನ್ನು ಸಿದ್ಧ ಆನಂದದಿಂದ ನಾಲ್ಕು ತುತ್ತಾದರೂ ಉಂಡು ತೇಗುವನು.

ಇದರಂತೆ ಕೆಲವುದಿನ ನಡೆದಿರಲು ಒಂದುದಿನ ಅಕಸ್ಮಾತ್ತಾಗಿ ನಿರುಪಾದಪ್ಪನ ಅಣ್ಣ ಮಠಕ್ಕೆ ಬಂದು ಸಿದ್ಧನ ದರ್ಶನ ತೆಗೆದುಕೊಂಡು ಕುಳಿತನು. ಆಗ ಸಿದ್ಧನು 'ಏನಯ್ಯ, ನಿತ್ಯ ಮಠಕ್ಕೆ ನೈವೇದ್ಯ ಕಳಿಸುತ್ತಿರುವೆಯಲ್ಲ. ಮನೆಯ ದೇವರಿಗೆ ನೈವೇದ್ಯ ಅರ್ಪಿಸಿದರಾಗದೆ?' ಎಂದನು.

'ಇಲ್ಲ ಯಾವಾಗಲೂ ನಾನು ಮಠಕ್ಕೆ ನೈವೇದ್ಯ ಕಳಿಸಿಲ್ಲ.'

'ಅದೇಕೆ ನಿಮ್ಮ ತಮ್ಮ ದಿನಾಲು ತರುತ್ತಾನೆ.'

'ಇರಬಹುದು, ಆ ವಿಷಯ ನನಗೆ ಗೊತ್ತಿಲ್ಲ.' ಎಂದು ನುಡಿದು 'ತಾನು ಮಠಕ್ಕೆ ನೈವೇದ್ಯ ಕೊಡುವುದು ಬೇಡವೆಂದು ಹೇಳಿದರೂ ಇವನು ನನ್ನ ಮಾತು ನಡೆಸಿಲ್ಲ. ಒಳ್ಳೇದು, ಇದಕ್ಕೆ ಯೋಗ್ಯ ವ್ಯವಸ್ಥೆ ಮಾಡೋಣ.' ಎನ್ನುತ್ತ ಮನೆಗೆ ಬಂದು ತಮ್ಮನಿಗೆ 'ಇಲ್ಲಿ ಕೇಳು, ಹಾಳುಬಡಕರ ರೀತಿ ಇನ್ನು ಸಾಕು. ಇವತ್ತಿನಿಂದ ನೀನು ಮಠಕ್ಕೆ ನೈವೇದ್ಯ ಒಯ್ಯಬೇಡ, ಒಯ್ದರೆ ನಿನಗೆ ಸಿದ್ಧನ ಆಣೆಯಾಗಿದೆ.' ಎಂದು ಸಿಟ್ಟಿನಿಂದ ನುಡಿಯಲು ಅವನು 'ನನ್ನ ಊಟದೊಳಗಿನ ಅರ್ಧಪಾಲನ್ನು ಮಾತ್ರ ನಾನು ಒಯ್ಯುತ್ತೇನೆ. ಹೆಚ್ಚಿನದನ್ನು ನಾನು ಯಾವಾಗಲೂ ಒಯ್ದಿಲ್ಲ.' ಎಂದನು. 'ಇದ್ದೀತು. ನಮಗೂ ಈಚೆಗೆ ನಿನ್ನ ಊಟ ಯಾಕೆ ಹೆಚ್ಚಾಗಿದೆ ಎಂದು ಸಂಶಯಬಂದಿತ್ತು. ಈಗ ತಿಳಿದಂತಾಯಿತು.' ಎನ್ನುತ್ತ ತನ್ನ ಕಾರ್ಯಕ್ಕೆ ಹೊರಟುಹೋದನು.

ಅಣ್ಣನ ಮಾತಿನಿಂದ ನಿರುಪಾದಪ್ಪನಿಗೆ ಬಹಳ ವ್ಯಸನವುಂಟಾಯಿತು. ಊಟದ ಅಪೇಕ್ಷೆಯೇ ಇಲ್ಲದೆ ಬಹಳ ವೇಳೆ ಕುಳಿತನು. ಅಣ್ಣ ಮನೆಗೆ ಬಂದು

ಊಟದ ವಿಚಾರಮಾಡಿದಾಗಲೇ ಇವನೂ ಊಟಕ್ಕೆದ್ದು 'ಹಾಂ, ಮನೆಯಲ್ಲಿಯೇ ನೈವೇದ್ಯ ಕೊಡುತ್ತೇನೆ. ಅಂದರೆ ನನ್ನ ಊಟಕ್ಕೂ ಅನುಕೂಲವಾಗುವುದು.' ಎಂದುಕೊಂಡು ತನ್ನ ಸಲುವಾಗಿ ಬಡಿಸಿದ ತಟ್ಟೆಯನ್ನೆತ್ತಿಕೊಂಡು ಏಕಾಂತಸ್ಥಲದಲ್ಲಿ ಕುಳಿತು ಅನನ್ಯಭಾವದಿಂದ ಸಿದ್ಧನನ್ನು ಕರೆಯಲಾರಂಭಿಸಿದನು. 'ಸದ್ಗುರುನಾಥನೇ, ಪ್ರತಿದಿನ ವೇಳೆಗೆ ಸರಿಯಾಗಿ ಅನ್ನ ತರಲಿಲ್ಲವೆಂದು ಸಿಟ್ಟಾಗಬೇಡ. ಅಣ್ಣ ನಿನ್ನ ಆಣೆ ಹಾಕಿ ನನಗೆ ಪ್ರತಿಬಂಧ ನನಗೆ ಪ್ರತಿಬಂಧ ಮಾಡಿದ್ದಾನೆ. ನಾನು ನೈವೇದ್ಯ ತೆಗೆದುಕೊಂಡು ಮಠಕ್ಕೆ ಬರುವ ಹಾಗಿಲ್ಲ. ನೀನೇ ಇಲ್ಲಿಗೆ ಬಂದು ಊಟ ಮಾಡಿ ಹೋಗು. ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ- ಬೇಗ ಬಾ, ನಾನು ಇಷ್ಟು ಪ್ರಾರ್ಥಿಸಿಕೊಂಡರೂ ನೀನು ಬರದೇ ಹೋದರೆ ನಾನು ಪ್ರಾಣಕೊಡುತ್ತೇನೆ ನೋಡು.' ಹೀಗೆ ಪ್ರಾರ್ಥಿಸುತ್ತ ಎಷ್ಟೋ ಹೊತ್ತು ಕುಳಿತನು. ಸಿದ್ಧ ಮಾತ್ರ ಬರಲಿಲ. ಇನ್ನು ನಾನು ಗುರುವಿಗೆ ಬೇಡಾದೆನೆಂದು ನಿರುಪಾದಪ್ಪ ಬಗೆದನು. ಜೀವನದ ರುಚಿಕಳೆಯಿತು. ಆಗ ತೊಲೆಗೆ ಒಂದು ಹಗ್ಗ ಕಟ್ಟಿ ಅದರಿಂದ ಉರಲು ಹಾಕಿಕೊಳ್ಳಲು ಸಿದ್ಧನಾದನು. ಇನ್ನೇನು ಉರಲು ಹಾಕಿಕೊಳ್ಳುವುದೇ, ಕೊನೆಯ ಸಾರೆ ಕೈ ಮುಗಿದು 'ಈ ದಿನ ನಿನಗೆ ನೈವೇದ್ಯ ಮುಟ್ಟಲಿಲ್ಲ. ನಿನಗೆ ಉಪವಾಸವಾಯಿತು. ನಾನಿದನ್ನು ಸಹಿಸಲಾರೆ. ನನ್ನ ಮಾತು ಕೇಳಿ ಬೇಗ ಬಂದು ಊಟಮಾಡು, ಇಲ್ಲವಾದರೆ ನಾನು ಹೊರಟೆ.' ಎಂದು ಹೇಳಿಕೊಂಡು ಹಗ್ಗವನ್ನು ಕೈಯಲ್ಲಿ ಹಿಡಿದು ಸುತ್ತೆಲ್ಲ ನೋಡಿದನು. ಸಿದ್ಧನ ಸುಳಿವೇನೂ ಕಾಣಲಿಲ್ಲ. ಹಗ್ಗದ ಮಲಕನ್ನು ಕೊರಳಿಗೆ ಹಾಕಿಕೊಂಡು ಟಣ್ಣನೆ ಹಾರಿ ನೇತಾಡತೊಡಗಿದನು. ತಕ್ಷಣದಲ್ಲಿ ಸಿದ್ಧ ಬಂದು ನಿರುಪಾದಪ್ಪನನ್ನು ಹಿಡಿದೆತ್ತಿ ಹಗ್ಗದ ಮಲಕು ತಪ್ಪಿಸಿದನು. ಇದೇನಾಯಿತೆಂದು ನಿರುಪಾದಪ್ಪ ಕಣ್ಣು ತಿಕ್ಕಿಕೊಂಡು ನೋಡಲು ಸದ್ಗುರು ತನ್ನನ್ನು ಹಿಡಿದುಕೊಂಡು ಕುಳಿತಿದ್ದಾನೆ. ಅದನ್ನು ಕಂಡು ಅವನಿಗೆ ಸಂತೋಷವೆನಿಸಿ 'ನೋಡಿದೆಯಾ, ನೀನು ಭಕ್ತರ ಬಂಧುವೆಂದು ತಿಳಿದವರು ಹೇಳುತ್ತಾರೆ. ಬಂದುದು ಬಹಳ ಒಳ್ಳೇದಾಯಿತು. ಯಾಕಿಷ್ಟು ತಡಮಾಡಿದೆ ? ಸುಮ್ಮನೆ ಹೊಟ್ಟೆ ಮರುಗಿಸಿದೆಯಲ್ಲ. ಬಾ, ನೈವೈದ್ಯ ಬಡಿಸಿ ಸಿದ್ಧಪಡಿಸಿದೆ.' ಎಂದು ನುಡಿದು ತಾನೇ ತುತ್ತು ಮಾಡಿ ಗುರು-ವಿಗುಣಿಸಿ ತೃಪ್ತಿ ಹೊಂದಿದನು. ಆ ಮೇಲೆ ಸಿದ್ಧ ತನ್ನ ಭಕ್ತನಿಗುಣಿಸಿ ಅಡಗಿ-

ಹೋದನು. ಈ ವಿಷಯ ಯಾರಿಗೂ ತಿಳಿಯಲಿಲ್ಲ. ನಿತ್ಯ ಇದೇ ಕ್ರಮ ಸಾಗಿತು.

ಒಮ್ಮೆ ಅವನ ಅಣ್ಣ ಯೋಚಿಸಿದನು. ನಾನಂತೂ ಮಠಕ್ಕೆ ನೈವೇದ್ಯ ಒಯ್ಯುವಂತಿಲ್ಲವೆಂದು ಯುಕ್ತಿಯಿಂದ ತಮ್ಮನನ್ನು ಪ್ರತಿಬಂಧಿಸಿದ್ದೇನೆ. ಆದರೂ ಇವನು ವ್ಯಸನವಿಲ್ಲದೆ ಸಂತೋಷವಾಗಿದ್ದಾನೆ. ಇದನ್ನು ತಿಳಿಯಬೇಕು. ಎಂದು ಒಂದು ದಿನ ಅಡಗಿಕೊಂಡಿದ್ದು ಎಲ್ಲವನ್ನೂ ಕಂಡನು. ನಿರುಪಾದಪ್ಪ ತನಗೆ ಬಡಿಸಿದ ತಟ್ಟೆ ಎತ್ತಿಕೊಂಡು ಏಕಾಂತ ಸ್ಥಳವೆನಿಸಿದ ಆ ಕೋಣೆಗೆ ಬಂದು ಸಿದ್ಧನನ್ನು ಪ್ರಾರ್ಥಿಸಿ ಕೈಮುಗಿದನು. ಅಷ್ಟರಲ್ಲಿ ಸಿದ್ಧ ಪ್ರಕಟನಾಗಿ ಊಟಮಾಡತೊಡಗಿದನು. ಆ ಆಶ್ಚರ್ಯ ಸಂಗತಿಯನ್ನು ಕಂಡು ನಿರುಪಾದಪ್ಪನ ಅಣ್ಣನಿಗೆ ಮೈಗೂದಲು ನೆಟ್ಟಗಾದವು. ತನ್ನ ಕ್ಷುದ್ರವೃತ್ತಿಗೆ ನಾಚಿಕೆ ಎನಿಸಿತು. ತಟ್ಟನೆ ಸದ್ಗುರು ಚರಣಗಳಿಗೆರಗಿ 'ಕಾಪಾಡಬೇಕು' ಎಂದು ಬೇಡಿಕೊಳ್ಳುತ್ತ 'ಗುರುನಾಥನೇ ನಾನು ಕ್ಷುದ್ರ ಅಜ್ಞಾನಿ ನಿನ್ನ ಮಹಿಮೆಯನ್ನೂ, ನಿನ್ನ ಭಕ್ತರ ಪ್ರೇಮವನ್ನೂ ನಾನು ತಿಳಿಯಲಾರೆ. ವ್ಯರ್ಥವಾಗಿ ನಿಮ್ಮನ್ನು ದಣಿಸಿ ಪಾಪಕ್ಕೆ ಗುರಿಯಾದೆ. ಈ ನಿನ್ನ ಭಕ್ತ ನೀನು ಇನ್ನುಮೇಲೆ ಅಗಲಿಕೊಂಡು ಇರುವುದು ಬೇಡ. ನಿರುಪಾದಪ್ಪ ಇನ್ನು ಮೇಲೆ ನಿನ್ನ ಮಠದಲ್ಲಿಯೇ ಇರಲಿ. ಇವನ ವಿಷಯದಲ್ಲಿ ನನಗೆ ಯಾವ ಬಗೆಯ ಸಿಟ್ಟೂ ಇನ್ನು ಬರುವುದಿಲ್ಲ. ಇಂಥ ತಮ್ಮನನ್ನು ಪಡೆದುದಕ್ಕೆ ನಾನೇ ಧನ್ಯ ಪ್ರತಿದಿನ ನಾನೇ ಊಟ ತಂದು ಮಠಕ್ಕೆ ಮುಟ್ಟಿಸುವೆನು. ಆ ಯೋಗದಿಂದಲಾದರೂ ನಿನ್ನ ದರ್ಶನ ನಿತ್ಯ ಘಟಿಸಲಿ' ಎಂದು ನುಡಿಯಲು ಸದ್ಗುರುನಾಥ—ನಿನ್ನ ಆಲೋಚನೆ ಸರಿ. ನಮಗಿಬ್ಬರಿಗೂ ಸಮಾಧಾನವಾಗುವಂತೆ ಮಾತಾಡಿದೆ' ಎನ್ನುತ್ತ ಭಕ್ತನೊಡನೆ ಮಠಕ್ಕೆ ತೆರಳಿದನು.

ಬಹಳ ಭಕ್ತಿಯಿಂದ ನಿರುಪಾದಪ್ಪ ಗುರುಸೇವೆ ಸಾಗಿಸಿದನು. ಮಾತಾಡಿದಂತೆ ಅವರ ಅಣ್ಣ ನಿತ್ಯ ಮಠಕ್ಕೆ ಅನ್ನವನ್ನು ಮುಟ್ಟಿಸುತ್ತಿದ್ದನು. ಕೆಲವು ದಿನ ಹೀಗೆ ನಡೆದಿರಲು ನಿರುಪಾದಪ್ಪನಿಗೆ ಅಕಸ್ಮಾತ್ ಅವಸಾನ ಕಾಲ ಸಮೀಪಿಸಿತು. ಸದ್ಗುರು ಬಳಿಯಲ್ಲಿಯೇ ಕುಳಿತಿದ್ದನು. ಆ ಮೂರ್ತಿಯ ಮೇಲೆಯೇ ಕಣ್ಣಿಟ್ಟು ಮರಳಿ ಮರಳಿ ಕೈಮುಗಿಯುತ್ತ 'ನಾನಿನ್ನು ಕೈಲಾಸಕ್ಕೆ ಹೋಗ

ತ್ತೇನೆ ಅಪ್ಪಣೆ ಕೊಡಬೇಕು' ಎಂದು ನುಡಿದು ನಿರುಪಾದಪ್ಪ ದೇಹವಿಟ್ಟನು. ಅಲ್ಲಿದ್ದವರೆಲ್ಲ 'ಎಂಥ ಧನ್ಯ, ಎಂಥ ಧನ್ಯ' ಎಂದು ಹೊಗಳಿದರು.

ಸಿದ್ಧ ಮಾತ್ರ ಮರೆಗೆ ಹೋಗಿ ತನ್ನ ಶಾಟಿಯಿಂದ ಉಕ್ಕಿಬರುತ್ತಿದ್ದ ಕಣ್ಣೀರುಗಳನ್ನು ಹತ್ತಿಕ್ಕಿಕೊಂಡನು.

೩೬

ಯಸ್ಯಾನುಗ್ರಹಮಿಚ್ಛಾಮಿ ತಸ್ಯ ಸರ್ವಂ ಹರಾಮ್ಯಹಮ್ ।

– ಭಾಗವತ

ನಾನು ಅನುಗ್ರಹಿಸಬೇಕೆಂದಿರುವವರ ಸರ್ವಸ್ವವನ್ನು ಹರಣ ಮಾಡುತ್ತೇನೆ.

ಒಂದು ದಿನ ಮೈಸೂರ ಕಡೆಯ ಭಕ್ತನೊಬ್ಬನು ಬಂದು ಸಿದ್ಧನಿಗೆ ವಂದಿಸಿ ಉದ್ಧರಿಸಬೇಕೆಂದು ಬೇಡಿಕೊಂಡನು. ಅವನ ಲಕ್ಷಣಗಳನ್ನು ಪರೀಕ್ಷಿಸುತ್ತ ಸಿದ್ಧನು—'ಇವನು ಬಹಳ ಭೋಳೇ ಸ್ವಭಾವದವನಿದ್ದಾನೆ. ಆದರೆ ಮುಮುಕ್ಷುತ್ವವಿದೆ. ಅಡ್ಡಿ ಇಲ್ಲ' ಎಂದು 'ಒಳ್ಳೇದು ಪ್ರತಿದಿನ ಇಲ್ಲಿ ನಡೆಯುವ ವೇದಾಂತ ಶ್ರವಣ ಮಾಡುತ್ತ ಹೋಗು ಅದರಿಂದ ನಿನ್ನ ಇಹಪರಕಲ್ಯಾಣ ಸಾಧಿಸುವುದು' ಎಂದನು. ಮತ್ತು ಅವನ ಸ್ವಭಾವಕ್ಕೆ ಅನುರೂಪವೆನಿಸುವಂತೆ 'ಭೋಳೇ ಭಕ್ತ' ನೆಂದು ಹೆಸರಿಟ್ಟನು.

ಅವನು ತನಗೆ ಅನುಕೂಲವೆನಿಸಿದ ಒಂದು ಮನೆ ಭಾಡಿಗೆಗೆ ಹಿಡಿದುಕೊಂಡು ಗುರುಸೇವೆಯಲ್ಲಿ ತತ್ಪರನಾದನು. ಆದರೊಂದು ಚಮತ್ಕಾರ ನಿತ್ಯ ದರ್ಶನ-ಶ್ರವಣಗಳಿಗೆ ಅವನು ಬರುತ್ತಿರುವುದೇನೋ ನಿಜ. ಆದರೆ ಮನಸ್ಸು ಮಾತ್ರ ಅದರ ಕಡೆಗಿಲ್ಲ. ಹೀಗಾಗಲು ಕಾರಣವೂ ಇತ್ತು. ಆ ಗೃಹಸ್ಥನಲ್ಲಿ ಕೆಲವು ಹಣವಿತ್ತು. ತಾನು ಪರಮಾರ್ಥ ಸಾಧಿಸಿಕೊಳ್ಳಬೇಕೆಂದು ಗುರುವಿನ ಬಳಿಗೆ ಬಂದಿದ್ದರೂ ಅದನ್ನು ಸಂಗಡ ತಂದಿದ್ದನು. ಯಾಕಂದರೆ ಆವನಿವರ

ಕೈಯಲ್ಲಿ ಹಣ ಕೊಡಲು ಅವನಿಗೆ ವಿಶ್ವಾಸವಿಲ್ಲ. ನನ್ನ ಹಣ ನನ್ನ ಬಳಿಯಲ್ಲಿರಲಿ. ಹೊತ್ತು ವೇಳೆ ಉಪಯೋಗ ಬೀಳುತ್ತದೆ. ಎಂಬ ನಂಬಿಕೆ ಬೇರೆ.

ಆ ಹಣವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಭದ್ರಪಡಿಸಿ ಮನೆಬಿಟ್ಟು ಹೊರಗೆ ಬರುವಾಗ ಕೀಲಿಹಾಕಿಕೊಂಡು ಬರುವನು. ವೇದಾಂತ ಶ್ರವಣಕ್ಕೂ ಕೂಡುವನು. ಭಜನೆಯನ್ನೂ ಮಾಡುವನು. ಆದರೆ ಮನಸ್ಸು ಮಾತ್ರ ಪೆಟ್ಟಿಗೆಯಲ್ಲಿಟ್ಟ ಹಣದಮೇಲೆ ಯಾರಾದರೂ ಹಣ ಕದ್ದುಕೊಂಡು ಹೋಗಬಹುದೇ? ಎಂಬುದೇ ಚಿಂತೆ. ಇದೇ ಚಿಂತೆಯಲ್ಲಿ ಮಲಗಿದ ಮೇಲೆ ರಾತ್ರಿ ನಿದ್ರೆಯೂ ಸರಿಯಾಗಿ ಬರುವಂತಿಲ್ಲ ಹೀಗಾಗಿ ಮಠದಲ್ಲಿ ಶ್ರವಣಕ್ಕೆ ಕುಳಿತಾಗ. ಭಜನೆಯಲ್ಲಿರುವಾಗ ತೂಕಡಿಕೆಯೇ ತೂಕಡಿಕೆ. ಸದ್ಗುರು ಇವನ ಲಕ್ಷಣಗಳಿಂದ ಪರಮಾರ್ಥಕ್ಕೆ ಇವನಿಗಿರುವ ಪ್ರತಿಬಂಧಕವೇನೆಂಬುದನ್ನು ತಿಳಿದನು. ಒಂದು ದಿನ ಈ ಭಕ್ತ ಧನದ ಚಿಂತೆಯಲ್ಲಿಯೇ ಮಗ್ನನಾಗಿ 'ಒಂದು ವೇಳೆ ಇದನ್ನು ಯಾರಾದರೂ ಅಪಹರಿಸಿಕೊಂಡು ಹೋದರೆ ಮುಂದೆ ಹೊಟ್ಟೆಯ ಗತಿ ಏನು? ಇಂದಿನವರೆಗೆ ನಾನು ಯಾರಿಗೂ ಕೈಯೊಡ್ಡಿದವನಲ್ಲ. ಹಣವನ್ನು ಹೇಗೆ ಕಾಯ್ದುಕೊಳ್ಳಬೇಕು' ಎಂದು ಮೊದಲಾಗಿ ಯೋಚಿಸುತ್ತ ಬಹಳ ರಾತ್ರಿಯ ವರೆಗೆ ಎಚ್ಚರದಿಂದಲೇ ಕಳೆದನು. ಒಂದು ದಿನವಲ್ಲ. ಎರಡು ದಿನವಲ್ಲ ಪ್ರತಿದಿನ ಹೀಗೇ ಬೆಳಗಾಗುತ್ತಿತ್ತು. ಆ ದಿನವೇಕೋ ಗಾಢನಿದ್ರೆ ಹತ್ತಿಹೋಯಿತು. ಕಳ್ಳರು ಕನ್ನಹಾಕಿ ಮನೆಗೆ ನುಗ್ಗಿದರು. ಅವರು ನಾಲ್ಕಾರು ಜನ ಇವನೊಬ್ಬ. ಪ್ರತಿಭಟಿಸಲು ಯತ್ನಿಸಿದನು. ಕೂಗಲು ಮೊದಲು ಮಾಡಿದನು. ಕಳ್ಳರು ಗಟ್ಟಿಯಾಗಿ ಇವನನ್ನು ಹಿಡಿದು ಬಾಯಿಗೆ ಅರಿವೆ ತುರುಕಿ ಕಂಭಕ್ಕೆ ಬಿಗಿದು ಇದ್ದ-ಬಿದ್ದ-ಹಣ-ಅರಿವೆ ಅಂಚಡಿಗಳನ್ನೆಲ್ಲ ತೆಗೆದುಕೊಂಡು ಹೋದರು. ಇವನಿಗೆ ಒಂದು ಲಂಗೋಟಿ ಮಾತ್ರ ಉಳಿದಿತ್ತು.

ಬೆಳಗಾದ ಮೇಲೆ ಇದನ್ನು ಕಂಡು ನೆರೆಹೊರೆಯವರು ಬಂದು ಅವನನ್ನು ಬಂಧನದಿಂದ ಬಿಡಿಸಿ ಸಮಾಧಾನ ಹೇಳಿಹೋದರು. ಅವರೇನು ಭೋಳೇ ಭಕ್ತನ ಶಕ್ತಿಯೇ ಉಡುಗಿ ಹೋದಂತಾಗಿತ್ತು. ಸದ್ಗುರುವಿನ ಬಳಿಗೆ ಬಂದು ಅಳುತ್ತ ತನ್ನ ಕಥೆ ತೋಡಿಕೊಂಡನು. 'ಮನುಷ್ಯನ ಕಲ್ಯಾಣಕ್ಕಾಗಿಯೇ ಭಗವಂತ ದುಃಖ ಕೊಡುತ್ತಾನೆ ಸಹಿಸು. ಅಳಬೇಡ ಹುಚ್ಚಪ್ಪ

ಬ್ರಹ್ಮನನ್ನು ತಿಳಿದವನು ಬ್ರಹ್ಮನೇ ಆಗುತ್ತಾನೆ. ಎಂದು ಶೃತಿ-ಸ್ಮೃತಿ-ಪುರಾಣೇತಿಹಾಸಗಳು ಹೇಳುತ್ತವೆ. ಆ ಪದವಿ ಎಂಥದು? ಆ ವೈಭವ ಎಂಥದು ಅದನ್ನು ತಿಳಿದುಕೊಳ್ಳದೇ ಇರುವುದರಿಂದ ಮನುಷ್ಯನಿಗೆ ದೈನ್ಯಾವಸ್ಥೆಯುಂಟಾಗಿದೆ. ಆ ಪದವಿಯನ್ನು ಪಡೆಯಲು ಯತ್ನಮಾಡು. ನಿನ್ನ ನಶ್ವರವಾದ ಹಣ ಹೋದರೆ ಹೋಗಲಿ. ಇವತ್ತಿನವರೆಗೆ ನಾನು ನೋಡುತ್ತಿದ್ದೆನು, ನೀನು ಯಾವುದೇ ಸ್ಥಳದಲ್ಲಿದ್ದರೂ ನಿನ್ನ ಮನಸ್ಸು ಮನೆಯಲ್ಲಿಟ್ಟ ಹಣದ ಚಿಂತೆಯನ್ನೇ ಮಾಡುತ್ತಿತ್ತು. ಕಾಮಿನೀ-ಕಾಂಚನಗಳು ಪರಮಾರ್ಥಕ್ಕೆ ವಿಘ್ನಮಾಡತಕ್ಕಂಥವುಗಳು. ತಾನಾಗಿಯೇ ನಿನ್ನ ವಿಘ್ನ ಪರಿಹಾರವಾಯಿತು. ಹೋಗಲಿಬಿಡು, ಶಾಶ್ವತವಾದ ನಿನ್ನ ವೈಭವ ದೊರೆಯುತ್ತದೆ.' ಎಂದು ಹೇಳಿ ಅವನಿಗೆ ವಸ್ತ್ರಗಳನ್ನು ಕೊಡಿಸಿದನು. ಆಗ ಅವನು ಅಳುತ್ತ-'ಗುರುವೇ ಇವತ್ತಿನವರೆಗೆ ಸ್ವತಂತ್ರವಾಗಿ ಜೀವನಮಾಡಿಕೊಂಡಿರಲು ಅನುಕೂಲವಿತ್ತು ಇನ್ನು ಮೇಲೆ ಹೇಗೆ ಜೀವನ ಮಾಡಿಕೊಂಡಿರಲಿ? ಇಲ್ಲೇ ಮಠದಲ್ಲಿ ವಸತಿಮಾಡಿ ಭಿಕ್ಷೆಬೇಡಿ ಜೀವನ ಸಾಗಿಸುತ್ತೇನೆ.' ಎಂದನು. ನಗುತ್ತ ಸದ್ಗುರುನಾಥ ಒಪ್ಪಿಕೊಂಡು 'ಸರಿ, ನಿನ್ನ ಹೆಸರು ಇಂದು ಸಾರ್ಥಕವಾಯಿತು' ಎಂದು ನುಡಿದು ಅವನನ್ನು ಆಶೀರ್ವದಿಸಿದನು. ಅವನು ಮಠದಲ್ಲಿ ನಿಂತುಕೊಂಡನು. ಈಗ ಅವನಿಗೆ ಯಾವುದೇತರದ ಚಿಂತೆ ಇರಲಿಲ್ಲ. ಭಿಕ್ಷಾನ್ನದಿಂದ ಜೀವನ ಕಣ್ತುಂಬ ನಿದ್ದೆ, ಯಾವಾಗಲೂ ಗುರುವಿನ ಚಿಂತನ. ವೇದಾಂತ ಶ್ರವಣಕ್ಕೆ ಕುಳಿತಾಗ ಈಗೇನೂ ನಿದ್ದೆ ಬರುತಿರಲಿಲ್ಲ. ಮುಮುಕ್ಷುತ್ವವು ಅವನಲ್ಲಿ ಜಾಗ್ರತವಿದ್ದುದರಿಂದ ಶ್ರವಣದ ಉಪಯೋಗವು ಉತ್ತಮ ರೀತಿಯಿಂದಾಗತೊಡಗಿತು. ವೈರಾಗ್ಯ ಮೈಗೂಡಿ ವಾಸನೆ ಕ್ಷೀಣವಾದವು. ಸಾಧನೆಯಲ್ಲಿ ಸ್ವಾದಕಂಡಿತು.

ಹೀಗಿರಲು ಶಿವರಾತ್ರಿಯ ಉತ್ಸವ ಬಂದಿತ್ತು. ಗುರುನಾಥನಿಗೆ ಛಳಿಜ್ವರ ಬರತೊಡಗಿದ್ದವು. ಸಮೀಪದಲ್ಲಿ ಉತ್ಸವ. ಸಿದ್ಧನಿಗೆ ಜಡ್ಡು, ಹೇಗೆ ಮಾಡಬೇಕೆಂದು ಭಕ್ತರು ತಳಮಳಗೊಳ್ಳುತ್ತಿದ್ದರು. ಭಕ್ತರ ಮನಸ್ಸು ಸಿದ್ಧನಿಗೆ ವೇದ್ಯವಾಯಿತು. ಆಗ ಎಲ್ಲ ಭಕ್ತರನ್ನು ಬಳಿಯಲ್ಲಿ ಕರೆದು-'ನನಗಂತೂ ಛಳಿಜ್ವರ ಬಡಿದಾಗಿದೆ. ಬೆಳಗಾಗದರೆ ಉತ್ಸವ, ಅದರಲ್ಲಿ ಭಾಗವಹಿಸುವದು ಬಹುಶಃ ನನ್ನಿಂದಾಗದು. ನೀವು ಯಾರಾದರೂ ಈ ಜಡ್ಡು ಸ್ವೀಕಾರಮಾಡು

ವುದಾದರೆ ನನಗೆ ಎಲ್ಲರ ಭೆಟ್ಟಿಯಾಗಲು ನೆಟ್ಟಗಾಗುವುದು? ಯಾರು ಒಪ್ಪುತ್ತೀರಿ?" ಎಂದು ಕೇಳಲು ಒಬ್ಬೊಬ್ಬರು ಒಂದೊಂದು ಥರದ ಉತ್ತರ ಕೊಟ್ಟರು.

'ನಾನು ಒಬ್ಬೊಂಟಿಗ. ಹಿರಿಯರಿಲ್ಲದ ಮನೆ ಹೆಂಡತಿ ಘಾಬರಿಯಾಗುತ್ತಾಳೆ.

'ಹೆಂಡತಿ ದಿನ ತುಂಬಿದ ಗರ್ಭಿಣಿ. ಮನೆಯಲ್ಲಿ ಮತ್ತೊಬ್ಬರಿಲ್ಲ'

'ಇದೇ ಸಮಯದಲ್ಲಿ ನನ್ನ ಲಗ್ನ ನಿಶ್ಚಯವಾಗುವದಿದೆ'

'ನನ್ನ ವ್ಯಾಪಾರೋದ್ಯೋಗ ನಿಂತು ಹೋಗುವವು'

'ಇನ್ನು ನಾಲ್ಕು ದಿನಗಳಲ್ಲಿ ನನ್ನ ಹೆಂಡತಿಯನ್ನು ಕರೆದುಕೊಂಡು ಬರುವವರಿದ್ದಾರೆ'

'ಜಡ್ಡಿನಿಂದ ನನ್ನ ಹೆಂಡತಿ ನೆಲ ಹಿಡಿದಿದ್ದಾಳೆ. ಇನ್ನೂ ಮಕ್ಕಳು ಸಣ್ಣವು.'

ಹೀಗೆ ಇನ್ನೂ ಎಷ್ಟೋ ಉತ್ತರಗಳು.ಮನದಲ್ಲಿ ನಗುತ್ತ ಕೌತುಕದಿಂದ ಭಕ್ತರು ಕೊಡುವ ಉತ್ತರ ಕೇಳುತ್ತಿದ್ದನು. ಮೆಲ್ಲನೆ ಸಂಸಾರಿಗಳಾದ ಶಿಷ್ಯರೆಲ್ಲ ಮನೆಗೆ ತೆರಳಿದರು. ಇನ್ನುಳಿದವರು ವಿರಕ್ತರು. ಅವರಿಗೂ ಸಿದ್ಧ ಅದೇ ಪ್ರಶ್ನೆ ಕೇಳಿದನು. ಅವರು ಕೂಡ ತಮಗೆ ಶೋಭಿಸುವಂಥ ನೆವಗಳನ್ನು ಹೇಳಿದರು.

'ತಮ್ಮ ಅಪ್ಪಣೆಯಂತೆ ತೀರ್ಥಯಾತ್ರೆಗೆ ತೆರಳಬೇಕಲ್ಲ'

'ಇನ್ನೂ ನನ್ನ ಧ್ಯಾನದ ಅಭ್ಯಾಸ ಪೂರ್ಣವಾಗಿಲ್ಲ'

'ಕೋಟಿ ನಾಮ ಜಪದ ಸಂಕಲ್ಪ ಹಾಗೇ ಉಳಿಯುತ್ತದೆ'

ಒಟ್ಟಿನಲ್ಲಿ ಎಲ್ಲ ಭಕ್ತರೂ ತಪ್ಪಿಸಿಕೊಂಡರು. ಇನ್ನು ಉಳಿದವ ಭೋಳೇ ಭಕ್ತ. ಅವನನ್ನು ಕೇಳುವುದೇ ತಡ.

'ಆಗಲಿ, ನಾನು ನಿನ್ನ ಜಡ್ಡು ಸ್ವೀಕರಿಸುತ್ತೇನೆ. ಆದರೆ ಒಂದು ಮಾತು. ಒಂದು ವೇಳೆ ನಾನು ಸತ್ತರೆ ನಿನ್ನ ಮೇಲೆ ಅಪವಾದ ಬರದಂತೆ ಮಾತ್ರ ವ್ಯವಸ್ಥೆಯಾಗಬೇಕು. ಅಂದರೆ ನನಗೆ ಸಮಾಧಾನವಾಗುವುದು. ನಿನ್ನ ಅಪ್ಪಣೆಯಂತೆ ನಡೆಯುವುದೆಲ್ಲ ನಿನ್ನ ಸೇವೆಯೆಂದು ನಾನು ತಿಳಿದಿದ್ದೇನೆ' ಎಂದನು.

ಅವನ ಮುಗ್ಧ ಭಕ್ತಿ ಸದ್ಗುರುನಾಥನನ್ನು ಮೆಚ್ಚಿಸಿತು. ಕೂಡಲೇ ಭೋಳೇಭಕ್ತನ ಕೈಯನ್ನು ಸ್ಪರ್ಶಮಾಡಿದನು. ಭಕ್ತನಿಗೆ ಜ್ವರಬಂದವು. ಸದ್ಗುರು ಆರೋಗ್ಯಶಾಲಿಯಾದನು. ಯಥಾಪ್ರಕಾರ ವಿಜೃಂಭಣೆಯಿಂದ ಉತ್ಸವ ನಡೆಯಿತು. ಭಜನೆ-ಪೂಜೆ-ಅಲಂಕಾರ-ದೀಪೋತ್ಸವ ಭಕ್ತರ ಸಮಾಗಮ ಇವೆಲ್ಲ ಇದ್ದರೂ ಸದ್ಗುರುವಿನ ಲಕ್ಷವೆಲ್ಲ ಭೋಳೇಭಕ್ತನ ಮೇಲೆ. ಮೇಲಿಂದಮೇಲೆ ಜ್ವರಬಂದು ನರಳುತ್ತಿರುವ ಅವನ ಬಳಿಗೆ ಬಂದು 'ಹೆದರಬೇಡ. ಉತ್ಸವ ಮುಗಿದ ಮೇಲೆ ನನ್ನ ಜಡ್ಡು ನಾನೇ ತೆಗೆದುಕೊಳ್ಳುತ್ತೇನೆ' ಎಂದು ನುಡಿಯುವನು. ಆ ಮಾತಿಗೆ ಭಕ್ತನು- 'ಗುರುನಾಥಾ ನಿನಗೆ ಯಾವುದೂ ದೊಡ್ಡದಲ್ಲ. ಆದರೆ ನೀನು ಜಡ್ಡಾಗಿ ಮಲಗುವುದರಿಂದ ಅನೇಕ ಭಕ್ತರು ವಿಷಾದ ಪಡುವರು. ಹಾಗೆ ಆಗುವುದು ಬೇಡ. ಈಗ ನಾನು ಮಲಗಿದ್ದೇನೆ ಯಾರು ವಿಷಾದ ಪಡುತ್ತಾರೆ ? ನೋಡು' ಎಂದು ಅನ್ನುವನು. ಪರಸ್ಪರ ಸಂಭಾಷಣೆ ಸಾಗುವುದು.

'ಹುಚ್ಚಾ ನಿನ್ನನ್ನು ಕಂಡು ನನಗೆ ದುಃಖವಾಗುವುದಿಲ್ಲವೆಂದು ತಿಳಿದಿರುವೆಯಾ ?'

'ನಿನಗೆ ದುಃಖವಾದರೆ ಸಹಿಸುವ ಸಾಮರ್ಥ್ಯ ನಿನಗಿದೆ. ನಿನ್ನಂತೆ ಉಳಿದವರಿಗೆ ಸಾಮರ್ಥ್ಯವುಂಟೇ ? ನಿನ್ನ ಅನುಗ್ರಹವೊಂದಿದ್ದರೆ ಸಾಕು. ನಾನು ಈ ಬೇನೆ ಬೇಕಾದಂತೆ ಸಹಿಸಬಲ್ಲೆ. ಆರೋಗ್ಯವಂತನಾಗಿರುವ ನಿನ್ನನ್ನು ನೋಡುವುದೇ ನನಗೊಂದು ಆನಂದ'

ಎಂದು ನುಡಿದ ಭೋಳೇಭಕ್ತನ ಮಾತು ಕೇಳಿ ಸಿದ್ಧನು- 'ಅಹಾ ಇವನ ದೇಹಾಭಿಮಾನವಳಿದು ಹೋಗಿರುವುದಲ್ಲ. ಇದು ಒಳ್ಳೆಯ ಲಕ್ಷಣ' ಎಂದುಕೊಂಡು ಅಂತಃಕರುಣದಿಂದ ಮೈಮೇಲೆ ಕೈಯಾಡಿಸಿದನು. ಆದರಿಂದ ಆ ಭಕ್ತನಿಗೆ ಆರಾಮವೆನಿಸಲು ಅವನು ಎದ್ದು ಕುಳಿತು- 'ನೀನು ಜಡ್ಡು ತಂದುಕೊಳ್ಳಬೇಕೆಂದು ನನ್ನನ್ನು ನೆಟ್ಟಗೆ ಮಾಡಿದೆಯು? ಕೇಳು ಒಂದುವೇಳೆ ನಿನಗೆ ಜಡ್ಡಾದರೆ ಆ ಸ್ಥಿತಿಯನ್ನು ನಾನು ನೋಡದೇ ಜೀವ ಕಳೆದುಕೊಳ್ಳುತ್ತೇನೆ. ತಿಳಿಯಿತೇ?' ಎನ್ನಲು ಸಿದ್ಧ ನಗುತ್ತ 'ಇನ್ನು ಯಾರಿಗೂ ಜಡ್ಡಾಗುವುದಿಲ್ಲ. ಆ ಭೋಗ ತೀರಿತು. ಚಿಂತೆ ಮಾಡಬೇಡ' ಎಂದು ಸಮಾಧಾನಗೊಳಿಸಿದನು.

ಒಂದುದಿನ ರಾತ್ರಿ ಸಿದ್ಧನು ಎದ್ದು ಭೋಳೀ ಭಕ್ತನಿಗೆ 'ಈಗ ನಾನು ಹೊರಗೆ ಹೋಗಬೇಕಾಗಿದೆ ಬರುವೆಯಾ? ಎಂದು ಕೇಳಲು ಅವನು ಮೌನವಾಗಿ ಹಿಂಬಾಲಿಸಿದನು. ಕತ್ತಲೆಯಲ್ಲಿಯೇ ಇಬ್ಬರೂ ಸಾಗತೊಡಗಿದ್ದರು. ಆದರೆ ಆ ಭಕ್ತನ ಲಕ್ಷವೆಲ್ಲ ಸಿದ್ಧನ ಮೇಲಿತ್ತು. ಹೀಗಿರುವಾಗ ಒಮ್ಮೆಲೇ ಒಂದು ಭಾವಿ, ಅದರಲ್ಲಿ ಸಿದ್ಧನು ಧಡಮ್ಮನೆ ಬಿದ್ದಂತೆ ತೋರಿತು. ಗಡಿಬಿಡಿಯಿಂದ ಆ ಭಕ್ತನೂ ಹಾರಿಬಿಟ್ಟನು, ಮೈಗೆಲ್ಲ ಪೆಟ್ಟಾಯಿತು. ಯಾತರ ಲಕ್ಷವೂ ಅವನಿಗಿಲ್ಲ, ಸದ್ಗುರುವಿನ ಸ್ಮರಣೆ ಮಾಡುತ್ತ ಈಸತೊಡಗಿದನು. ಅಷ್ಟರಲ್ಲಿ ಎದುರಿಗೊಂದು ಉಜ್ವಲ ಪ್ರಕಾಶ ತೋರಿತು. ಅದನ್ನು ನೋಡುತ್ತ ಹೋದಹಾಗೆಲ್ಲ ಎಲ್ಲ ಮರೆತು ಆನಂದವೆನಿಸತೊಡಗಿತು. ಆ ಪ್ರಕಾಶದಲ್ಲಿ ಸದ್ಗುರುಮೂರ್ತಿ ಕಂಡಂತಾಗಲು ಭಕ್ತನು ಅತ್ತಹೋಗಿ ಆ ಮೂರ್ತಿಯನ್ನು ಅಪ್ಪಿಕೊಂಡನು. ಮುಂದೆ ಅವನಿಗೆ ಎಚ್ಚರವಿಲ್ಲ. ಈಗ ಗುರುವೆಲ್ಲಿ? ಶಿಷ್ಯನೆಲ್ಲಿ? ಏಕರಸಸಮುದ್ರದಲ್ಲಿ ಏಕಾಕಾರ. ಕೆಲವೇಳೆಯನಂತರ ಗುರು ದೂರಸರಿದಂತೆ ತಾನು ಬದಿಗಾದಂತೆ ಭಾಸವಾಯಿತು. ಆದರೂ ಆ ಸ್ಪರ್ಶಸುಖದ ಆನಂದಾನುಭವ ಉಳಿದಿತ್ತು. ಮೆಲ್ಲನೆ ಪ್ರಕಾಶ ಅಡಗಿತು. ಸದ್ಗುರುಮೂರ್ತಿಯೂ ಅದೃಶ್ಯವಾಯಿತು. ಆದರೂ ಭಕ್ತನಿಗೆ ಆನಂದ ರಸಾನುಭವದ ಮತ್ತು ಮುಸುಕಿಯೇ ಇತ್ತು. ಹೀಗೆ ತುಸುವೇಳೆ ಕಳೆಯುವಷ್ಟರಲ್ಲಿ ಚಿತ್ತವು ಹೊರಗಿನ ಪ್ರಪಂಚಕ್ಕೆ ಜಿಗಿಯಲು ದೇಹಭಾಗವು ಬಂದು ಮೈ-ಕೈನೋವು ಅನುಭವಕ್ಕೆ ಬಂದವು. ಭಾವಿಯಲ್ಲಿಯೇ ನರಳತೊಡಗಿದನು. ಆಗ ಮೇಲಿನಿಂದ ಸಿದ್ಧನು ಕೂಗಿದನು. ಆ ಧ್ವನಿ ಕೇಳಿದಕೂಡಲೇ ಮತ್ತೆ ದುಃಖವಿಲ್ಲದಂತಾಗಿ ಆನಂದವೆನಿಸಿತು. 'ಓ'ಗೊಟ್ಟನು. ಭಕ್ತ ಭಾವಿಯಲ್ಲಿರುವನೆಂದು ಸಿದ್ಧ ಕೈ ಚಾಚಿದನು. ಆ ಆಧಾರದಿಂದ ಭಕ್ತನು ಮೇಲಕ್ಕೆ ಬಂದು ಸಿದ್ಧನನ್ನು ದೃಢವಾಗಿ ಆಲಿಂಗಿಸಿಕೊಂಡನು. ದುಃಖವೆಲ್ಲ ಹೊರಟುಹೋಯಿತು.

ಕೊನೆಯಲ್ಲಿ ಅನುಗ್ರಹಿಸಿ ಸದ್ಗುರು ಅವನಿಗೆ ಸಮಾಧಿಸುಖವನ್ನು ಕರುಣಿಸಿದನು. ಪಾಂಡಿತ್ಯವಿಲ್ಲ, ತರ್ಕವಿಲ್ಲ, ಶಾಸ್ತ್ರವಿಲ್ಲ ಶುದ್ಧಭಾವದಿಂದ ಭೋಳೀ ಭಕ್ತ ಸಿದ್ಧನಾದ.

———

೩೭

ಗುರುದೇವ ಮಹಾರಾಜಂ ಕೋ ನ ಸೇವೇತ ತಂ ಗುರುಮ್ ।
ಗುರುಃ ಪ್ರಸನ್ನಃ ಸೇವಾಭಿರಾತ್ಮತತ್ವಂ ನಿರೂಪಯೇತ್ ॥

--ಪರಮಾರ್ಥದರ್ಶನ

ಗುರುವೆಂಬ ದೇವರನ್ನು, ಸ್ವಾರಾಜ್ಯ-ಸಾಮ್ರಾಜ್ಯದ ಮಹಾರಾಜನನ್ನು ಯಾರು ಸೇವಿಸಲಿಕ್ಕಿಲ್ಲ? ಶಿಷ್ಯರ ಸೇವಾ-ಭಕ್ತಿಗಳಿಂದ ಪ್ರಸನ್ನನಾದ ಗುರುವು ಆತ್ಮತತ್ವವನ್ನು ಹೇಳಿಕೊಡುವನು.

ಪರಶುರಾಮಪಂತ ಕರಮರಕರರೆಂಬ ಒಬ್ಬ ಗೃಹಸ್ಥರು, ಪರಮಾರ್ಥ ದಲ್ಲಿ ಅವರಿಗೊಳ್ಳೆ ಪ್ರೀತಿ. ಅವರ ಜನ್ಮಭಾಷೆ ಮರಾಠಿಯಾದುದರಿಂದ ಯಾವಾಗಲೂ ಮಹಾರಾಷ್ಟ್ರದ ಸಂತರ ಗ್ರಂಥವನ್ನೋದುವರು. ಸ್ವತಃ ಓದಿಕೊಂಡು ಪರಮಾರ್ಥವನ್ನು ತಿಳಿಯುವೆನೆನ್ನುವುದು ದಡ್ಡತನ, ಅಧ್ಯಾತ್ಮ ಭಾಂಡಾರದ ಕೀಲಿಯಕೈ ಸದ್ಗುರುವಿನ ಬಳಿಯಲ್ಲಿರುತ್ತದೆ. ಆದಕಾರಣ ಸದ್ಗುರುವಿಗೆ ಶರಣುಹೋಗಿ ಅರಿತುಕೊಳ್ಳುವುದು ನಿರುಪಾಯಕಾರಿಯಾದ ಮಾರ್ಗ ಎಂದು ಭಾವಿಸಿ ಸಿದ್ಧನ ಬಳಿಗೆ ಬಂದು ತಮ್ಮ ಮನ'ತಾಪಗಳನ್ನೆಲ್ಲ ಹೇಳಿಕೊಂಡು ಉದ್ಧರಿಸಬೇಕೆಂದು ಪ್ರಾರ್ಥಿಸಿದರು. ಅವರ ಪೂರ್ವಜರು ಎಷ್ಟೋ ದಿನಗಳ ಮೊದಲು ಕನ್ನಡನಾಡಿನಲ್ಲಿ ನೆಲೆಸಿದವರಾದುದರಿಂದ ಪಂತರಿಗೆ ಕನ್ನಡ ಭಾಷೆಯೂ ಚನ್ನಾಗಿ ಬರುತ್ತಿದ್ದಿತು.

ಹೀಗೆ ಅವರು ಸಿದ್ಧನನ್ನು ಪ್ರಾರ್ಥಿಸಿ ಕೈಮುಗಿದು ನಿಲ್ಲಲು ಅವರ ಕಡೆ ಗೊಮ್ಮೆ ನೋಡಿ– 'ಸಂಸಾರದಲ್ಲಿ ಪೂರ್ಣ ತೃಪ್ತಿದೊರೆಯುವುದು ಶಕ್ಯವಿಲ್ಲ. ಅದರ ಸ್ಥಿತಿಯೇ ಹಾಗೆ. ಅಲ್ಲಿ ಸುಖ ಹುಡುಕಿದರೆ ಸಿಗುವ ಬಗೆ ಹೇಗೆ? ಚಿಂತೆಯಿಲ್ಲ, ಇಲ್ಲಿಗೆ ಬಂದದ್ದು ಒಳಿತಾಯಿತು. ಸಮೀಪದಲ್ಲಿ ಬಂದುಕುಳಿತು ಕೊಳ್ಳಿರಿ. ನಿಮಗೊಂದು ಮಂತ್ರ ಉಪದೇಶಿಸುತ್ತೇನೆ. ಅದನ್ನು ಜಪಮಾಡುತ್ತ ಹೋಗುವುದರಿಂದ ನಿಮ್ಮ ತಾಪಗಳೆಲ್ಲ ನಿವಾರಣೆಯಾಗುವವು. ಭಗವಂತನಲ್ಲಿ ಭಕ್ತಿ ಬೆಳೆಯುವುದು, ಸಾಂಸಾರಿಕ ಉಪಾಧಿಗಳೆಲ್ಲ ಕಳಚುವವು. ಸದ್ಗುರುವಿನ

ಉಪಾಸನೆ-ಚರಿತ್ರಗಳನ್ನು ಪ್ರಚಾರಮಾಡುತ್ತ ದಿಕ್ಕುದಿಕ್ಕಿಗೆ ಸ್ವೇಚ್ಛೆಯಿಂದ ಸಂಚಾರಮಾಡಲು ನಿಮಗೆ ಅನುಕೂಲವಾಗುವುದು. ನಿಮಗೆ ಆ ಯೋಗ್ಯತೆ ಯುಂಟು.' ಎಂದು ನುಡಿದು ಪುಸ್ತಕದಲ್ಲಿ ವರದ ಹಸ್ತವಿಟ್ಟು ಆಶೀರ್ವದಿಸಿ ದನು. ಪಂತರಿಗೆ ಗುರುಪ್ರಸಾದ ದೊರೆತುದರಿಂದ ಪರಮಾನಂದವಾಗಿ ಕ್ಷಣ ಮಾತ್ರ ಕಣ್ಮುಚ್ಚಿ ಕುಳಿತು ಜಾಗ್ರತರಾದರು. ತಮ್ಮಲ್ಲಿ ಏನೋ ಬದಲಾವಣೆ ಯಾದಂತೆ ಬೋಧವಾಯಿತು. ತೊಡಕೆಲ್ಲ ಬಿಟ್ಟುಹೋದಂತೆನಿಸಿ-ಮುಂದಿನ ಕರ್ತವ್ಯಪಥಗೋಚರವಾಯಿತು. ಅವರೀಗ ಹೊಸ ಮನುಷ್ಯರಂತಾಗಿದ್ದರು. ಮೊದಲಿನ ಎದೆಗುದಿ ಚಾಂಚಲ್ಯಗಳು ಈಗ ಉಳಿದಿರಲಿಲ್ಲ. ಸದ್ಗುರುನಾಥನಿ ಗಂದರು.

'ಗುರುನಾಥನೇ, ಗಂಗೆಯು ಪಾಪವನ್ನು, ಚಂದ್ರನು ತಾಪವನ್ನು, ಕಲ್ಪವೃಕ್ಷವು ಬಡತನವನ್ನು ಕಳೆಯುವುದೆಂದು ಹೇಳಿದರು. ಆದರೆ ಅವು ಗಳ ಫಲ ತೋರಲು ಕಾಲಾವಧಿಯ ಅಪೇಕ್ಷೆಯುಂಟು. ಆದರೆ ನನಗಿಂದು ಅನುಭವವಾದುದು 'ದರ್ಶನಾದೇವಸಾಧವಃ' ಸಾಧುಗಳು ದರ್ಶನಮಾತ್ರ ದಿಂದ ಅವುಗಳನ್ನೆಲ್ಲ ಪರಿಹರಿಸುವರೆಂದು. ಇಲ್ಲಿಗೆ ಬರುವುದಕ್ಕಿಂತ ಮೊದಲು ನಾನು ಪ್ರಪಂಚದಲ್ಲಿ ಬಹಳ ಬಳಲಿ ಬೆಂಡಾಗಿದ್ದೆನು. ಸಮಾಧಾನ ಮಾಡಿ ಕೊಳ್ಳಬೇಕೆಂದು ಸಂತಜನರ ಗ್ರಂಥಗಳನ್ನೋದುವ ಚಟವೂ ನನಗಿತ್ತು. ಆದರೆ ಅವುಗಳಲ್ಲಿ ಬರುವ ಪರಸ್ಪರ ವಿರೋಧ, ಕೆಲವು ಕಡೆಗೆ ತೋರುವ ಶಬ್ದಜಾಲ ಇವುಗಳಿಂದ ಮನಸ್ಸಿನ ಗೊಂದಲವು ಹೆಚ್ಚುತ್ತಿದ್ದಿತೇ ವಿನಾ ಸಮಾಧಾನವಾಗುತ್ತಿರಲಿಲ್ಲ. ಇಂದು ನೀನು ಮಾಡಿದ ಉಪಕಾರ ಜನ್ಮ-ಜನ್ಮಾಂತರಕ್ಕೂ ಮರೆಯದಂಥದು. ಯಾಕಂದರೆ ಎಷ್ಟು ಜನ್ಮ ತಿರುಗಿದರೂ ದೊರೆಯದ ಸುಖರಾಶಿ ಈಗ ನನಗೆ ಕೈವಶವಾಗಿರುವಂತೆ ಎನಿಸತೊಡಗಿದೆ. ಇನ್ನು ಎಷ್ಟೇ ಜನ್ಮ ಬಂದರೂ ನಾನು ಹೆದರುವುದಿಲ್ಲ. ಆದರೆ ನಿಮ್ಮ ಚರಣ ಗಳಲ್ಲಿ ಭಕ್ತಿ ಹಾಗೂ ಈಗ ನನ್ನಲ್ಲಿ ಉಕ್ಕಿದ ಸುಖ ನಿರಂತರವಾಗಿ ದೊರೆಯು ವಂತೆ ಮಾತ್ರ ಅನುಗ್ರಹಿಸಬೇಕು.

ಒಂದೂರಲ್ಲಿ ಒಬ್ಬ ಶ್ರೀಮಂತ. ಮಕ್ಕಳಿನ್ನೂ ಸಣ್ಣವರು. ತಂದೆ ತನ್ನ ಹಣವನ್ನು ನೆಲದಲ್ಲಿ ಹುಗಿದಿಟ್ಟು ಸತ್ತುಹೋದ. ಅದು ಮಕ್ಕಳಿಗೆ ತಿಳಿದಿರ ಲಿಲ್ಲ. ಅನಾಥರಂತೆ ಭಿಕ್ಷಾವೃತ್ತಿಗಿಳಿದರು. ಜನ ನಿಂದಿಸುತ್ತಿದ್ದರು. ಶ್ರೀಮಂತನ

ಮಕ್ಕಳಾಗಿ ಭಿಕ್ಷೆಗೆ ಬಂದಿರುವಿರಲ್ಲ. ನಿಮಗೆ ನಾಚಿಕೆ ಇರಬಾರದೇ ? ಹೀಗೆ ಜನರ ನಿಂದೆ ಕೇಳಿ ಮಕ್ಕಳು ಬಹಳ ಮರಗುತ್ತಿದ್ದರು. ಒಂದು ದಿನ ಅವರ ತಂದೆಯ ಯಾರೋ ಆಪ್ತರು ಬಂದು ಈ ಕಥೆ ತಿಳಿದರು, ಕನಿಕರಹುಟ್ಟಿತು. ಆ ಹುಡುಗರನ್ನು ಕರೆದು ಅವರ ತಂದೆ ಮಲಗುವ ಕೋಣೆಯಲ್ಲಿ ಹುಗಿದಿಟ್ಟ ಹಣ ತೋರಿಸಿಕೊಟ್ಟರು. ಅಂದಿನಿಂದ ಆ ಹುಡುಗರು ಸುಖವಾಗಿ ಕಾಲ ಕಳೆಯತೊಡಗಿದವು. ಇದರಂತೆ ಪಂತರೇ, ನಾನು ನಿಮ್ಮ ವಿಷಯದಲ್ಲಿ ಮಾಡಿದ ಕೆಲಸ.'

'ಅದನ್ನಾದರೂ ತೋರಿಸುವ ಶಕ್ತಿ ಪರಮಾಪ್ತರೆನಿಸುವ ನಿಮ್ಮಹೊರತು ಯಾರಿಗಿದೆ ? ನಮ್ಮ ಹಿರಿಯರು ಗುರುಸ್ತುತಿಯನ್ನು ಸುಮ್ಮನೆ ಮಾಡಿಲ್ಲ. ಇವನು ತ್ರೈಮೂರ್ತಿರೂಪನೆಂದು ಎಲ್ಲರೂ ಏಕಕಂಠದಿಂದ ಹೊಗಳಿದ್ದಾರೆ.'

'ಆಗಲಿ, ಅದು ಅವರವರ ಭಾವನೆ.ಈಗ ಮತ್ತೇನು ನಿಮ್ಮ ಅಪೇಕ್ಷೆ?'

'ಅಪೇಕ್ಷೆ ಮತ್ತೆನಿರಬೇಕು? ದೇಹವಿರುವ ವರೆಗೆ ಗುರುಸೇವೆ ದೊರೆಯ ಬೇಕೆಂಬುದೇ. ತಮ್ಮ ಅನುಗ್ರಹದಿಂದ ನನಗೆ ಗದ್ಯ—ಪದ್ಯ ಗ್ರಂಥವನ್ನು ರಚಿಸುವ ಸಾಮರ್ಥ್ಯವುಂಟು. ಅಪ್ಪಣೆ ದೊರೆಯುವುದಾದರೆ ತಮ್ಮ ಚರಿತ್ರ ಗ್ರಂಥವನ್ನು ರಚಿಸಬೇಕೆನ್ನುತ್ತೇನೆ.'

'ಆಗಲಿ, ಬರೆದು ತೋರಿಸಿರಿ.'

ಎಂದು ಗುರುದೇವ ನುಡಿಯಲು ಪಂತರಿಗೆ ಸಂತೋಷವಾಯಿತು. ವಂದಿಸಿ ತಮ್ಮ ಮನೆಗೆ ಬಂದು ಶೂಚಿರ್ಭೂತರಾಗಿ ದಿನಾಲು 'ಸಿದ್ಧಾರೂಢ-ವಿಜಯ ಎಂಬ ಗ್ರಂಥವನ್ನು ರಚಿಸತೊಡಗಿದರು. ಒಂದು ತಿಂಗಳಾಗುವಷ್ಟ ರಲ್ಲಿ ಗ್ರಂಥ ಸಿದ್ಧವಾಯಿತು. ಅದನ್ನು ತೆಗೆದುಕೊಂಡು ಬಂದು ಸಿದ್ಧನ ಚರಣ ಗಳಿಗರ್ಪಿಸಿದರು. ಗುರುವು ಅದನ್ನು ಕೇಳಬೇಕೆಂದಪೇಕ್ಷಿಸಲು ಓದಿಯೂ ತೋರಿಸಿದರು. ರಸಭರಿತವಾದ ಆ ಗ್ರಂಥವನ್ನು ಕೇಳಿ ಗುರುನಾಥ ಮೆಚ್ಚಿ– 'ಪಂತರೇ ಇನ್ನು ನೀವು ಮಾಡಬೇಕಾದ ಸೇವೆ ಇದೇ. ಈ ಚರಿತ್ರ ಗ್ರಂಥದ ಪ್ರಸಾರ.' ಎಂದು ನುಡಿಯಲು 'ಅಪ್ಪಣೆ' ಎಂದು ಪಂತರು ಕೈಮುಗಿದರು. ಅಷ್ಟೇ ಅಲ್ಲ, ತಾವು ಅಡ್ಡಾಡುವ ಗೋವಾ ಮೊದಲಾದ ಪ್ರಾಂತಗಳಲ್ಲಿ ಆ ಚರಿತ್ರವನ್ನು ಪ್ರಸಾರಮಾಡಿದರು. ಮತ್ತು ಗುರುಭಕ್ತಿಯ ಮಹತಿಯನ್ನು ಬೋಧಿಸಿದರು. ಪಂತರು ಡಾಂಭಿಕರಲ್ಲ. ಯಾವುದೇ ಕಾರ್ಯ

ಮಾಡಿದರೂ ಹೃತ್ಪೂರ್ವಕ ಮಾಡುವುದು ಅವರ ರೀತಿ. ಅವರಲ್ಲಿರುವ ವೈರಾಗ್ಯ, ಗುರುಭಕ್ತಿಗಳಿಂದ ಅವರ ಕೀರ್ತನ-ಪ್ರವಚನಗಳು ಬಹು ಪರಿಣಾಮಕಾರಿ ಎನಿಸಬೇಕು. ಹೀಗಾಗಿ ಸಿದ್ಧಾರೂಢಸ್ವಾಮಿಯ ಉತ್ಸವ ನಡೆದಲ್ಲೆಲ್ಲ ಪಂತರ-ಕೀರ್ತನವಾಗಲೀ, ಪ್ರವಚನವಾಗಲೀ ಜರುಗಬೇಕೆಂದು ಜನ ಅಪೇಕ್ಷಿಸುವಂತಾಯಿತು.

ಒಂದುಸಾರೆ 'ರೋಣ'ದಲ್ಲಿ ಸ್ವಾಮಿಯ ಉತ್ಸವವನ್ನು ಏಳು ದಿನಗಳವರೆಗೆ ಜರುಗಿಸುವುದೆಂದು ಅಲ್ಲಿಯವರು ನಿರ್ಧರಿಸಿದರು. ಪರಶುರಾಮ ಪಂತರಿಗೆ ಸಿದ್ಧಾರೂಢ ಚರಿತ್ರಕಥನ ಮಾಡಲು ಆಮಂತ್ರಣ ಬಂದಿತು. ಪಂತರು ಅವರ ಹೆಂಡತಿ ಜಾನಕಿಬಾಯಿ, ಮಂಗೇಶನೆಂಬ ಒಬ್ಬ ಭಕ್ತ, ಹೀಗೆ ಮೂವರು ಅಲ್ಲಿಗೆ ಹೋಗುವುದೆಂದು ಗೊತ್ತಾಗಿ ಹುಬ್ಬಳ್ಳಿಯ ನಿಲ್ದಾಣಕ್ಕೆ ಬಂದರು. ಅಂದು ಊರಿಗೆ ಹೊರಡುವ ಜನರ ವಿಪರೀತ ಗದ್ದಲ, ಟಿಕೇಟು ಪಡೆಯುವುದು ದುಸ್ತರವಾಯಿತು. ಆ ದಿನ ಗಾಡಿಯು ತಪ್ಪಿದರೆ ರೋಣದ ಉತ್ಸವಕಾರ್ಯದಲ್ಲಿ ವ್ಯತ್ಯಯವಾಗುವಂತಿತ್ತು. ಹೇಗಾದರೂ ಊರಿಗೆ ಹೋಗಬೇಕೆಂದು ಪಂತರು ಯತ್ನಮಾಡಿದರು. ಯಾವ ಯತ್ನವೂ ಫಲಿಸದಂತಾಗಲು ಗುರುವಿನ ಸ್ಮರಣವನ್ನು ಮಾಡಿ- 'ಸದ್ಗುರುವೇ, ನಾನೀಗ ನಿನ್ನ ಉತ್ಸವಕಾರ್ಯಕ್ಕೆ ಹೊರಟಿದ್ದೇನೆ' ಹೋಗುವಂತೆ ಅಪ್ಪಣೆಕೊಟ್ಟವನು ನೀನು, ನನ್ನ ಯತ್ನಸಾಗದಂತಾಗಿದೆ. ಬೇಕಾದರೆ ಕರೆದುಕೊಂಡುಹೋಗು, ಬೇಡವಾದರೆ ಮನಸ್ಸಿಗೆ ತಿಳಿದಂತೆ ಮಾಡು.' ಎಂದು ಥಣ್ಣಗೆ ಕುಳಿತುಬಿಟ್ಟರು.

ಅಷ್ಟರಲ್ಲಿ ಪ್ರವಾಸಿಕನಂತೆ ಕಾಣುವವನೊಬ್ಬನು ಬಂದು ಯಾರು? ಎಲ್ಲಿಗೆ ಹೋಗಬೇಕು? ಎಂದು ಮೊದಲಾಗಿ ವಿಚಾರಿಸಿ ತನ್ನ ಚೀಲದಿಂದ ಮೂರು ಟಿಕೇಟು ತೆಗೆದುಕೊಡುತ್ತ- 'ಇವು ಮಲ್ಲಾಪೂರ ನಿಲ್ದಾಣದವರೆಗೆ ಟಿಕೇಟು. ನಾನು ಇನ್ನಿಬ್ಬರು ಕೂಡಿ ರೋಣಕ್ಕೆ ಹೋಗುವುದನ್ನು ನಿರ್ಧರಿಸಿದ್ದೆವು, ಆಯತ್ತವೇಳೆಗೆ ನಾಳೆ ಹೊರಡುವುದೆಂದು ಅಭಿಪ್ರಾಯವಾಯಿತು. ನಿಮಗೆ ಹೋಗುವುದು ಅಗತ್ಯವಿರುವಂತೆ ಕಾಣುತ್ತದೆ, ತೆಗೆದುಕೊಳ್ಳಿರಿ.' ಎಂದು ಹೇಳಿ ಟಿಕೇಟುಕೊಟ್ಟು ಜನರ ಗದ್ದಲದಲ್ಲಿ ಮಟಮಾಯವಾದನು. 'ಅಹಾ, ಇದೆಂಥ ಪ್ರಮಾದ. ಆ ಗೃಹಸ್ಥ ಟಿಕೇಟಿನ ಹಣ ತೆಗೆದುಕೊಳ್ಳದೇ ಹೋದನಲ್ಲ, ಇನ್ನು ಅವನನ್ನು ಎಲ್ಲಿ ಹುಡುಕಬೇಕು?' ಎಂದು ಪಂತರು

ಬಹಳ ಮರುಗಿದರು. ಅತ್ತಿತ್ತ ಹುಡುಕಿದರೂ ಅವನು ಕಣ್ಣಿಗೆ ಬೀಳಲಿಲ್ಲ. ಅವನಿಗೆ ಕೊಡಬೇಕೆಂದು ತೆಗೆದ ಟಿಕೀಟಿನ ಹಣ ಪಂತರ ಕೈಯಲ್ಲಿಯೇ ಉಳಿಯಿತು. ವಿಷಾದಪಟ್ಟು ಗಾಡಿ ಏರಿದರು. ಕುಳಿತ ಮೇಲೆ ಅವರಿಗೆ ಸಿದ್ಧನ ಸ್ಮರಣೆಯಾಯಿತು. 'ಅಹಾ ಗುರುನಾಥ ಎಂಥ ಕರುಣಾಘನ. ಊರಿಗೆ ಹೋಗುವದಕ್ಕಾಗದೇ ಪರಿತಾಪ ಪಡುತ್ತಿರುವ ನಮ್ಮನ್ನು ಕಂಡು ತಾನೇ ಸಹಾಯ ಸಲ್ಲಿಸಿದ. ಗುರುವೇ ಭಕ್ತರ ವಿಷಯದಲ್ಲಿ ನಿನಗೆಷ್ಟು ಮಮತೆ ! ಅನಿಮಿತ್ತ ಬಂಧುವಿನಂತೆ ನಿನಗೇನೋ ಸಹಾಯ ಸಲ್ಲಿಸುವೆ. ಅದು ನಿನಗೆ ಭೂಷಣ. ಆದರೆ ನೀನು ನಮಗೆ ಮಾಡುತ್ತಿರುವ ಉಪಕಾರದ ಹೊರೆ ಬಹುಭಾರವಾಗುವುದಲ್ಲ. ಅದನ್ನು ನಾವು ಇಳಿಸುವುದು ಹೇಗೆ ?' ಎಂದು ಮೊದಲಾಗಿ ವಿಚಾರಿಸಿ ತಮ್ಮ ಹೆಂಡತಿಯ ಮುಂದೆ ಹೇಳಲು ಅವರೂ ನಿಮ್ಮ ಮಾತು ನಿಜವೆಂದು ನುಡಿದು ಅವನ ಮಹಿಮೆ ಅಗಾಧವಾಗಿದೆ. ಎಂದು ಅಂದರು.

ಮಲ್ಲಾಪುರ ನಿಲ್ದಾಣ ಬರಲು ಗಾಡಿ ನಿಂತಿತು. ಕೆಳಗಿಳಿದರು. ಅಲ್ಲಿಂದ ರೋಣವು ಕೆಲವು ಮೈಲುಗಳಷ್ಟು ಅಂತರದಲ್ಲಿ. ರಾತ್ರಿಯಾಗಿದೆ. ಈಗಂತೂ ಹೋಗುವುದು ಶಕ್ಯವಿಲ್ಲ, ಬೆಳಗಾದ ನಂತರ ಹೋಗುವ ವಿಚಾರ. ಹಾಗಾ ಇಲ್ಲಿ ವಸತಿ ಎಲ್ಲಿ ? ಎಂದು ಪಂತರು ವಿಚಾರ ಮಾಡುವಷ್ಟರಲ್ಲಿ ಒಬ್ಬನು ಬಂದು ವಿಚಾರ ಮಾಡಿದನು.

' ನೀವು ಎಲ್ಲಿಗೆ ಹೋಗುವವರು ?'

'ರೋಣಕ್ಕೆ ಹೋಗುವವರು. ಈಗ ನೋಡಿದರೆ ರಾತ್ರಿ. ಜಿಟಿ-ಜಿಟಿ ಮಳೆ ಬೇರೆ. ವಾಹನಗಳೂ ಈಗ ದೊರೆಯುವುದಿಲ್ಲ. ಬೆಳಗಿನಲ್ಲಿ ಹೋಗಬೇಕೆಂದು ಮಾಡಿದ್ದೇವೆ. ಈಗ ಒಂದು ಪ್ರಶ್ನೆ ಬಂದಿದೆ.'

'ಅದೇನು ?'

'ಇಂದಿನ ರಾತ್ರಿ ಕಳೆಯಲು ತುಸು ಸ್ಥಳ ಬೇಕಾಗಿದೆ.'

'ಅದೇನು ದೊಡ್ಡದು. ಯಾರೇನು ಮನೆಮಾರು ಕಟ್ಟಿಕೊಂಡು ಊರಿಗೆ ಬರುತ್ತಾರೆಯೇ? ತಡೆಯಿರಿ. ನಾನು ನಿಮಗೆ ಅನುಕೂಲ ಮಾಡಿ ಕೊಡುತ್ತೇನೆ.' ಎಂದು ನುಡಿದು ಈ ಗೃಹಸ್ಥ ಕತ್ತಲೆಯಲ್ಲಿ ಎತ್ತೋ ಹೋಗಿ ಬಿಟ್ಟನು. ಮುಂದೆ ಒಂದೇ ಕ್ಷಣದಲ್ಲಿ ಲಾಟನು ಹಿಡಿದುಕೊಂಡು ಬಂದು ಬನ್ನಿರೆಂದು ಹೇಳಿ ಸಮೀಪದ ಮನೆಯ ಬಯಲ ಕಟ್ಟೆಯ ಮೇಲೆ ಕುಳ್ಳಿರಿಸಿ 'ಇಲ್ಲಿ

ಏನೂ ಭಯವಿಲ್ಲ. ಆರಾಮವಾಗಿ ರಾತ್ರಿ ಕಳೆಯಿರಿ. ಈಗ ನಿಮಗೆ ತುಸ ಫಲಾಹಾರವಾಗಬೇಕಲ್ಲ. ತಂಬಿಗೆ ಇದ್ದರೆ ಕೊಡಿರಿ.' ಎಂದು ಕೇಳಿದನು ತಂಬಿಗೆ ತೆಗೆದು ಕೊಟ್ಟರು. ಆ ಮನೆಯೊಳಗೆ ಹೋಗಿ ಬಾಳೇಹಣ್ಣು-ಸಕ್ಕರ ತಂಬಿಗೆ ಹಾಲು ತಂದುಕೊಟ್ಟು 'ಒಳ್ಳೇದು ನಾನಿನ್ನು ಹೋಗುತ್ತೇನೆ.' ಎನ್ನಲು ಪಂತರು 'ಅಯ್ಯಾ, ನಿನ್ನ ಹೆಸರೇ ತಿಳಿಯಲಿಲ್ಲ. ನಿನ್ನಂಥ ಸಾತ್ವಿಕರು ವಿರಳ. ನಿನ್ನ ಊರು ಯಾವುದು? ಇಲ್ಲಿಯವನೇ?' ಎಂದು ಪ್ರಶ್ನೆ ಮಾಡಿ ದರು. ಅವನು ನಗುತ್ತ 'ನನ್ನ ಹೆಸರು ಸಿದ್ದ. ಊರು ಮೊದಲಾದವನ್ನು ತೆಗೆದುಕೊಂಡು ಏನು ಮಾಡುವಿರಿ? ನನ್ನದು ಅತ್ತ ಮೊಗಲಾಯಿ ಸೀಮಿ.' ಎಂದನು. ನೀನು ಹುಬ್ಬಳ್ಳಿಯ ಕಡೆಗೆ ಎಂದಾದರೂ ಬಂದಿದ್ದೆಯ? ಎಂದು ಪಂತರು ಕೇಳಿದರು. ಬರದೇ ಏನು ನಾನು ಎಲ್ಲ ಕಡೆಗೂ ಓಡಾಡುವವನು. ಒಳ್ಳೇದು ನಾನಿನ್ನು ಹೋಗುತ್ತೇನೆ. ಎಂದು ನುಡಿದು ಆ ಮನುಷ್ಯ ಕತ್ತಲೆ ಯಲ್ಲಿ ಕರಗಿ ಹೋದನು.

ಈ ಘಟನೆಯನ್ನು ಕಂಡು ಜಾನಕೀಬಾಯರಿಗೆ ಎಲ್ಲಿಲ್ಲದ ಆಶ್ಚರ್ಯ. ತಮಗೆ ಸಹಾಯ ಮಾಡಿದ ಮನುಷ್ಯನ ಮೋರೆಯ ಮೇಲಿನ ಕಳೆ-ರೀತಿ-ನೀತಿ ಹೆಸರಿನಲ್ಲಿರುವ ಸಾಮ್ಯ. ಎಲ್ಲಕ್ಕಿಂತ ಹೆಚ್ಚಾಗಿ ಹಸುಗೂಸಿನಂಥ ಹಸ ನ್ಮುಖ. ಇವುಗಳನ್ನು ಕಂಡು ಅವರು ಈ ಮನುಷ್ಯ ಬೇರೆ ಯಾರೂ ಆಗಿರದೆ ಪ್ರತ್ಯಕ್ಷ ಸದ್ಗುರು ಸಿದ್ಧಾರೂಢ ಸ್ವಾಮಿಯೇ ಎಂದು ತಿಳಿದಿದ್ದರು. ಅದರಂತೆ ತಮ್ಮ ಪತಿಯ ಮುಂದೆ ಆಡಿ ತೋರಿಸಿದರು. ಅಷ್ಟರಲ್ಲಿ ಆ ಮನೆಯವ ರೊಬ್ಬರು ಹೊರಬಂದು ಕಟ್ಟಿಯ ಮೇಲೆ ಇಳಿದುಕೊಂಡ ಈ ಹೊಸಬರನ್ನು ಕಂಡು ಯಾರು? ಎಲ್ಲಿಯವರು? ಮೊದಲಾಗಿ ವಿಚಾರಿಸಿದರು. ಮಂಗೇಶ ಎಲ್ಲ ಸಮಾಚಾರವನ್ನು ಹೇಳಿ ನಡೆದ ಘಟನೆಯನ್ನು ವಿವರಿಸಿ ನಿಮ್ಮವರೇ ಯಾರೋ ಸಿದ್ಧಪ್ಪನಂತೆ ಅವರು ಇಲ್ಲಿ ನಮಗೆ ವಸತಿಗೆ ಅನುಕೂಲ ಮಾಡಿ ಕೊಟ್ಟು ಈಗ ಹೊರಗೆ ಹೋದರು. ನೀವು ಅರಿಯದವರಂತೆ ಕೇಳುತ್ತೀರಿ. ಎಂದನು. ಆ ಮನೆಯವರು ಆಶ್ಚರ್ಯಚಕಿತರಾಗಿ 'ನಮ್ಮ ಮನೆಯಲ್ಲಿ ಸಿದ್ಧಪ್ಪನೆಂಬುವರು ಯಾರೂ ಇಲ್ಲ. ನೀವು ಬಂದು ವಸತಿ ಮಾಡಿದ್ದು ನಮಗೆ ತಿಳಿದುದು ಈಗಲೇ ಇದೆಲ್ಲ ಸದ್ಗುರು ಸಿದ್ಧಾರೂಢನ ಮಹಿಮೆಯೇ ಸರಿ. ಏನೂ ಚಿಂತೆಯಿಲ್ಲ. ನಿಮ್ಮಂಥ ಪುಣ್ಯವಂತರು ನಮ್ಮ ಮನೆಗೆ ಈ ರೀತಿ

ಬಂದು ವಸತಿ ಮಾಡಿದ್ದು ನಮ್ಮ ಭಾಗ್ಯ. ನೀವು ಸ್ವಾಮಿಯ ಭಕ್ತರು ಧನ್ಯರು ಎಂದು ನುಡಿಯಲು ಪಂತರು 'ಅದೆಲ್ಲ ಸರಿ. ಆ ಸಿದ್ಧಪ್ಪ ನಿಮ್ಮ ಮನೆಯೊಳಗಿಂದಲೇ ತಂಬಿಗೆ ಹಾಲು ತಂದು ಕೊಟ್ಟನಲ್ಲ. ಇದನ್ನೆಲ್ಲ ಕಂಡು ಅವನು ನಿಮ್ಮವನೇ ಎಂದು ನಾವು ಈ ಹೊತ್ತಿನ ವರೆಗೆ ತಿಳಿದಿದ್ದೆವು. ಈಗ ನಿಮ್ಮ ಮಾತು ಕೇಳಿ ವಿಚಾರ ಬದಲಾಯಿತು.' ಎಂದರು.

ಎಲ್ಲರಿಗೂ ನಡೆದ ಘಟನೆಯಿಂದ ಆಶ್ಚರ್ಯ. ಆ ಮನೆಯವರಂತೂ ಎಲ್ಲರೂ ಬಂದು ಪಂತರಿಗೆ ವಂದಿಸಿ 'ನಿಮ್ಮ ಯೋಗದಿಂದ ನಮ್ಮ ಮನೆಯಲ್ಲಿ ಸ್ವಾಮಿ ಅಡ್ಡಾಡಿ ಹೋದನು. ಅವನೆ ದರ್ಶನಕ್ಕೆ ಹೋಗಬೇಕೆಂದು ಬಹಳ ದಿನಗಳಿಂದ ಅನ್ನುತ್ತೇವೆ. ಆದರೆ ಹೋಗುವುದು ಆಗಿಯೇ ಇಲ್ಲ. ನೀವು ಅತ್ತ ಹೋಗುವಾಗ ನಾವೆಲ್ಲರೂ ಬರುತ್ತೇವೆ. ಬಿಟ್ಟು ಹೋಗಬೇಡಿರಿ.'ಎಂದು ಹೇಳಿಕೊಂಡರು. ಪಂತರು ಒಪ್ಪಿದರು.

ಬೆಳಗಾದ ಮೇಲೆ ಆ ಮನೆಯವರೇ ಗಾಡಿ ಕಟ್ಟಿಸಿ ರೋಣಕ್ಕೆ ಪಂತರನ್ನು ಕರೆದು ಹೋದರು. ಏಳು ದಿನಗಳ ವರೆಗೆ ನಿರ್ವಿಘ್ನವಾಗಿ ಸ್ವಾಮಿಯ ಉತ್ಸವ ಜರುಗಿತು.

ಪಂತರು ಮರಳಿ ಹುಬ್ಬಳ್ಳಿಗೆ ಬರುವಾಗ ಆ ಮನೆಯವರೂ ಸದ್ಗುರು ದರ್ಶನಕ್ಕೆಂದು ಬಂದರು. ಅವರಿಗೆ ಸದ್ಗುರು ದರ್ಶನ ಮಾಡಿಸಿ ಪಂತರು ಮಾರ್ಗದಲ್ಲಿ ಜರುಗಿದ ಘಟನೆಗಳನ್ನು ಹೇಳಲು ಸಿದ್ಧ ಮಂದಸ್ಮಿತನಾಗಿ 'ಅವರವರ ನಂಬಿಗೆ ಅವರನ್ನು ತಾರಿಸುತ್ತದೆ. ಮನುಷ್ಯ ತನ್ನ ಆಗು-ಹೋಗು ಗಳ ಭಾರವನ್ನೆಲ್ಲ ಪರಮಾತ್ಮನ ಮೇಲೆ ಹೊರಿಸಿಕೊಟ್ಟರೆ ಅವನು ಭಕ್ತರ ಯೋಗಕ್ಷೇಮ-ನೋಡಲೇ ಬೇಕಾಗುತ್ತದೆ. ನನ್ನಿಂದಾಗುತ್ತದೆ, ನಾನು ಮಾಡುತ್ತೇನೆ ಎಂದು ಅಹಂಕಾರ ತಾಳಿದರೆ ಭಗವಂತ ಓರೆಯಾಗುತ್ತಾನೆ.' ಎಂದು ಹೇಳಿದನು.

ಪಂತರೊಡನೆ ಬಂದವರು ಸದ್ಗುರುವಿಗೆ ಹಣ್ಣು-ಕಾಯಿ ಅರ್ಪಿಸಿ ಆಶೀರ್ವಾದ ಪಡೆದು ತಮ್ಮೂರಿಗೆ ಮರಳಿದರು.

————

೩೮

ನ ತೇ ಕಾರುಣ್ಯಂ ಸ್ಯಾತ್ ಸಕಲಗುಣವಾನಪ್ಯಗುಣವಾನ್ ।
ಭವತ್ಕಾರುಣ್ಯಂ ಸ್ಯಾದಗುಣಗಣಪೋ ವ್ಯೋರುಗುಣವಾನ್ ॥
ಯಥಾ ಪತ್ಯೌ ರಕ್ತೇ ಸದಪಿಚ ವಿರಕ್ತೇ ತು ಯುವತೌ ।
ವೃಥಾ ಸೌಂದರ್ಯಂ ಸ್ಯಾತ್ಸಕಲಮಪಿ ತೇಽನುಗ್ರಹವಶಾತ್ !

– ದತ್ತಲಹರೀ

ಎಲ್ಲ ಗುಣಗಳಿಂದ ಕೂಡಿದವನಾಗಿದ್ದರೂ ನಿನ್ನ ದಯೆಯೊಂದು ಇಲ್ಲ ದಿದ್ದರೆ ಅವನು ಗುಣರಹಿತನೇ, ಗುಣರಹಿತನಾದರೂ ಅವನಮೇಲೆ ನಿನ್ನ ದಯೆ ಇರುವುದಾದರೆ ಅವನು ಗುಣವಂತನೇ. ತರುಣಿಯೊಬ್ಬಳು ಪತಿಯಲ್ಲಿ ಪ್ರೀತಿಯನ್ನು ತಳೆದಿರುವಳು. ಅವನು ಮಾತ್ರ ಅವಳ ವಿಷಯದಲ್ಲಿ ವಿರಕ್ತ ನಾಗಿರುವನು. ಎಂದಮೇಲೆ ಅವಳ ಸೌಂದರ್ಯ ವ್ಯರ್ಥವಾದಂತಲ್ಲವೇ? ಎಲ್ಲದರ ಸಾಫಲ್ಯ ನಿನ್ನ ಅನುಗ್ರಹದಿಂದ.

ಭರತಭೂಮಿಯಲ್ಲಿ ಮಹಾಪವಿತ್ರವೆನಿಸಿದ ಹರಿದ್ವಾರ ಕ್ಷೇತ್ರ. ಅಲ್ಲಿ ವಿದ್ವಾಂಸನಾದ ಒಬ್ಬ ಬ್ರಾಹ್ಮಣ. ಅವನಿಗೆ ಕೃಷ್ಣನೆಂಬ ಒಬ್ಬ ಮಗ. ಆ ಬ್ರಾಹ್ಮಣ ಪ್ರತಿದಿನ ಹಿಂದೀಭಾಷೆಯಲ್ಲಿ ಪ್ರಸಿದ್ಧವಾದ ತುಲಸೀ ರಾಮಾ ಯಣವನ್ನು ಭಕ್ತಿಯಿಂದ ಓದುತ್ತಿದ್ದನು. ಆ ಹುಡುಗ ತದೇಕಚಿತ್ತನಾಗಿ ಕೇಳುವನು. ಒಂದೊಂದು ದಿನ ಭಕ್ತಿವಿಜಯವನ್ನು ಓದುತ್ತಿರಲು ಕೇಳಿ ಆನಂದಭರಿತನಾಗುವನು. ಕಬೀರದಾಸನ ಚರಿತ್ರ ನಡೆದಿರುವಾಗಲಂತೂ ಕೃಷ್ಣ ಕಣ್ಣೀರ ಕಾಲುವೆ ಹರಿಸುತ್ತ 'ಅಹಾ, ಎಂಥ ತಾಳ್ಮೆ. ಅತಿಥಿ ಸತ್ಕಾರ ದಲ್ಲಿ ಎಂಥ ಪ್ರೀತಿ. ಎಂಥ ಭಗವದ್ಭಾವ. ನಾನೂ ಹಾಗಾಗಬೇಕು.' ಎನ್ನುವನು.

ಗಂಗಾತಟಾಕವು ಸಾಧುಗಳಿರುವ ಸ್ಥಳವೆಂದು ಅವನು ಬಲ್ಲನು. ಅಲ್ಲಿಗೆ ಬಂದು ತಪೋಮಗ್ನರಾದ ಒಬ್ಬ ಸಾಧುಗಳನ್ನು ಕಂಡು ಅವರನ್ನು ಸೇವಿಸುತ್ತ ಪ್ರತಿದಿನ ಅವರ ಬಳಿಯಲ್ಲಿ ಕಾಲಕಳೆಯತೊಡಗಿದನು. ಅವನಿಗಾಗ ಹತ್ತು ವರ್ಷ. ತಂದೆಯು ಮಗನನ್ನು ಮಹಾ ಪಂಡಿತನನ್ನು ಮಾಡಬೇಕೆಂದು ಆಸ್ಥೆ ಯಿಂದ ವಿದ್ಯಾಭ್ಯಾಸ ಮಾಡಿಸುತ್ತಿದ್ದನು. ಆದರೆ ಕೃಷ್ಣನು ಮಾಡುವ ಸಾಧು

ಸೇವೆಯ ಅವಾಂತರದಲ್ಲಿ ಅಭ್ಯಾಸವು ತಪ್ಪತೊಡಗಿತು. ಅದರಿಂದ ತಾಯ್ತಂದೆಗಳು ಚಿಂತೆಗೀಡಾಗಿ- 'ಮೊದಲು ವಿದ್ಯಾಭ್ಯಾಸ ಮುಗಿಸು, ಆ ನಂತರ ಇತರ ಕಾರ್ಯ.' ಎಂದು ಬಹುಪರಿಯಾಗಿ ಹೇಳಿದರು. ಆ ಮಾತಿನ ಕಡೆಗೆ ಕೃಷ್ಣನ ಲಕ್ಷವೇ ಹೋಗಲಿಲ್ಲ. ದಿನ ದಿನಕ್ಕೆ ಸಾಧುಗಳ ಮೇಲಿನ ಅವನ ಪ್ರೀತಿ ಹೆಚ್ಚಾಗುತ್ತ ಹೋಯಿತು. ಅಕಸ್ಮಾತ್ತಾಗಿ ಯಾರಾದರೂ ಸಾಧುಗಳು ಭೆಟ್ಟಿಯಾದರೆ ಅವರನ್ನು ಮನೆಗೆ ಊಟಕ್ಕೆ ಕರೆತರಲಾರಂಭಿಸಿದನು. ಅದನ್ನು ಕಂಡು ಒಂದುದಿನ ಅವನ ತಂದೆ ಹೇಳಿದನು. 'ಇದು ನಮಗೆ ಪೂರೈಸುವ ಮಾತಲ್ಲ. ಇಂದಿನಿಂದ ಸಾಧುವೇ ಆಗಲಿ, ಸನ್ಯಾಸಿಯೇ ಆಗಲಿ ಯಾರನ್ನೂ ಮನೆಗೆ ಕರೆತರಬೇಡ. ಇಷ್ಟಾಗಿ ಕರೆತಂದರೆ ನಾನು ಸಹನ ಮಾಡಲಾರೆ.'

ತಂದೆಯ ಮಾತು ಕೇಳಿ ಕೃಷ್ಣನಿಗೆ ಬಹು ತಾಪವಾಯಿತು. 'ಹೇಗೆ ಮಾಡಬೇಕು?' ಎಂದು ಚಿಂತಿಸುತ್ತ ಗಂಗಂತಟಾಕದಲ್ಲಿ ಸುತ್ತತೊಡಗಿದನು. ಒಂದುದಿನ ಅಡ್ಡಾಡುವಾಗ ಅಲ್ಲೊಬ್ಬ ಸಾಧು ನಿಶ್ಚೇಷ್ಟಿತನಾಗಿ ಬಿದ್ದಿರುವುದನ್ನು ಕಂಡು ಅಲ್ಲಿಗೆ ಧಾವಿಸಿಹೋಗಿ ವಿಚಾರಿಸಿದನು. 'ಇದೇನು ನಿಮ್ಮ ಅವಸ್ಥೆ?'

'ಮಗು ನನಗೆ ಆಹಾರವಿಲ್ಲದ್ದರಿಂದ ಹೀಗಾಗಿದೆ. ನಾನು ಯಾವಾಗಲೂ ಹಾಲು ಕುಡಿಯುತ್ತ ಜೀವನ ಸಾಗಿಸಿದವನು. ಈಗ ನನಗೆ ಹಾಲು ಸಿಗದಂತಾಗಿದೆ.'

ಎಂದು ನುಡಿದ ಸಾಧುವಿನ ಮಾತು ಕೇಳಿ ಕೃಷ್ಣ ಚಿಂತಿಸಿದನು. ಈ ಸಾಧುವಿಗೆ ಏನಾದರೂ ಪ್ರಯತ್ನಮಾಡಿ ಹಾಲು ಕುಡಿಸಲೇಬೇಕು. ನಮ್ಮ ಮನೆಯಲ್ಲಂತೂ ಹಾಲಿರುವ ಸಂಭವವಿಲ್ಲ, ಕೊಂಡುತರಬೇಕೆಂದರೆ ನನ್ನ ಬಳಿಯಲ್ಲಿ ಹಣವಿಲ್ಲ ಏನು ಮಾಡಲಿ?' ಎಂದು ಬಹಳ ವಿಚಾರಮಾಡಿ ಕೊನೆಗೆ ತಂದೆಯ ಹಣವನ್ನು ಅದೂ ಹಾಲುಕೊಳ್ಳುವ ಮಟ್ಟಿಗೆ ಕಳವುಮಾಡಿ ಹಾಲು ತಂದುಕೊಟ್ಟನು. ಅವನ ಆದರ್ಶನೆನಿಸಿದ ಕಬೀರದಾಸನು ಅತಿಥಿಗಳ ಸತ್ಕಾರಕ್ಕೆ ಬೇಕಾಗುವಷ್ಟು ಪದಾರ್ಥಗಳನ್ನು ಕಳುವು ಮಾಡಿದ್ದನು. ಅದರಂತೆ ಇವನೂ ಮಾಡಿರಲು ತಂದೆಗೆ ಅದು ಗೊತ್ತಾಗದೆ ಹೋಗಲಿಲ್ಲ. ಕೃಷ್ಣ ಆ ಸಾಧುವಿಗೆಂದು ಹಾಲು ಒಯ್ಯುತ್ತಿರಲು ತಂದೆ ಅಡ್ಡಗಟ್ಟಿ 'ಅದೇನು?' ಎಂದು ಕೇಳಿದನು. ಕೃಷ್ಣ ಸತ್ಯವನ್ನೇ ಹೇಳಿದನು. 'ಗಂಗಾತಟಾಕದಲ್ಲಿ

ಸಾಧುವೊಬ್ಬನು ಆಹಾರವಿಲ್ಲದೇ ಬಿದ್ದುಕೊಂಡು ತಳಮಳಿಸುತ್ತಿದ್ದಾನೆ. ಅವನಿಗೆ ಕುಡಿಯಲೆಂದು ಹಾಲು ಒಯ್ಯುತ್ತೇನೆ.'

'ಹಾಲು ಎಲ್ಲಿಯದು? ಮನೆಯೊಳಗಂತೂ ಹಾಲು ಇಲ್ಲ.'

'ಕೊಂಡು ತಂದಿದ್ದೇನೆ.'

'ಹಣವೆಲ್ಲಿತ್ತು ?'

'ನೀನಿಟ್ಟಲ್ಲಿಂದ ತೆಗೆದುಕೊಂಡೆ.'

'ಕಳುವು ಮಾಡಿದೆಯಾ?' ಎಂದು ನುಡಿದು ಅವನು ಮಗನನ್ನು ಮನಬಂದಂತೆ ಒಡಿದು ಒಂದು ಕಂಬಕ್ಕೆ ಕಟ್ಟಿಹಾಕಿದನು. ಮಗನ ಕೃತಿಯನ್ನು ಕಂಡು ಅವನು ಬಹಳ ಖತಿಗೊಂಡಿದ್ದನು. ಇದು ಪ್ರಪಂಚಿಕರ ಲಕ್ಷಣವಲ್ಲ, ಹಾಳುಬಡುಕರ ಲಕ್ಷಣವೆಂದು ಅವನು ತಿಳಿದಿದ್ದನು. ಹೀಗೆ ಮಗನನ್ನು ಬಂಧಿಸಿಟ್ಟು ತಂದೆ ಹೊರಟುಹೋಗಲು ಕೃಷ್ಣ 'ಇನ್ನು ಆ ಸಾಧುವಿಗೆ ಹಾಲು ಒಯ್ದುಕೊಡುವವರು ಯಾರು ? ಅವನಿಗೆ ಹಾಲು ದೊರೆಯದೇ ಹೋದರೆ ಸತ್ತುಹೋಗುವನು. ಶ್ರೀರಾಮ ! ಇದೇನು ನಿನ್ನ ಲೀಲೆ, ಹಾಲಿಲ್ಲದೇ ಅವನನ್ನು ಬಳಲಿಸುವುದೇಕೆ ? ಸೇವೆ ಮಾಡುವೆನೆಂದು ಹಾತೊರೆಯುವ ನನಗೆ ಬಂಧನವೇಕೆ ? ದಯಮಾಡಿ ನನ್ನನ್ನು ಬಂಧನದಿಂದ ಬಿಡಿಸು. ಓಡುತ್ತ ಆ ಸಾಧುವಿನ ಬಳಿಗೆ ಹೋಗಿ ಜೀವವನ್ನು ಒತ್ತೆ ಇಟ್ಟಾದರೂ ಅವನಿಗೆ ಹಾಲು ತಂದು ಕುಡಿಸಿ ಬದುಕಿಸುತ್ತೇನೆ.' ಎಂದು ಹಂಬಲಿಸತೊಡಗಿದನು. ಧಾರೆಯಾಗಿ ಕಣ್ಣೀರು ಹರಿಯತೊಡಗಿದವು. ಅಷ್ಟರಲ್ಲಿ ಯಾವ ಸಾಧುವಿಗಾಗಿ ಇವನು ಮರಗುತ್ತಿದ್ದನೋ ಅವನು ಬಳಿಗೆ ಬಂದು ಪ್ರೇಮದಿಂದ ಕೃಷ್ಣನ ಮೈಮೇಲೆ ಕೈಯಾಡಿಸುತ್ತ 'ಮಗು, ಚಿಂತಿಸಬೇಡ. ಅಳು ನಿಲ್ಲಿಸು, ನನಗೆ ಹಾಲು ಬೇಡ, ಹಾಲಿನಂಥ ಹೃದಯವಿದ್ದರೆ ಸಾಕು.' ಎಂದು ಸಾಂತ್ವನಗೊಳಿಸಲು ಕೃಷ್ಣ— 'ಸ್ವಾಮಿ, ನನಗೆ ಈ ಪ್ರಪಂಚದ ಬಂಧನ ಬಿಡಿಸಿ ನಿಮ್ಮ ಸೇವೆಗೆ ಅವಕಾಶ ಮಾಡಿಕೊಡಿರಿ. ಇಲ್ಲಿರುವುದು ರುಚಿಸದಾಗಿದೆ.' ಎಂದು ಬೇಡಿಕೊಂಡನು. ಆಗ ಅವನ ತಂದೆ ಕಟ್ಟಿದ ಹಗ್ಗವು ತಂತಾನೇ ಬಿಚ್ಚಿಬಿದ್ದಿತು. ಸಾಧು ನುಡಿದನು– 'ಅಯ್ಯ, ಯೋಗ್ಯಕಾಲ ಬಂದಕೂಡಲೇ ನಿನ್ನ ಬಿಡುಗಡೆಯಾಗುವುದು.. ಅವಸರ ಪಡಬೇಡ.' ಎಂದು ಸಾಧುವಿನ ವಚನಗಳನ್ನು ಕೇಳಿ ಕೃಷ್ಣ ಕಣ್ಣೆತ್ತಿ ನೋಡಲು ಎದುರಿಗಿದ್ದವನು ಸಾಧುವಾಗಿರದೇ ಶ್ರೀರಾಮನಾಗಿ

ದ್ದನು. ನೀಲಮೇಘ ಶ್ಯಾಮಲಾಂಗನಾಗಿ, ಕೋದಂಡಧಾರಿಯಾಗಿ, ಕಿರೀಟ-ಕುಂಡಲಾದಿಗಳಿಂದ ಅಲಂಕೃತನಾಗಿ ಕಂಡ ಪ್ರಭುದರ್ಶನದಿಂದ ಕೃಷ್ಣನಿಗೆ ಪರಮಾನಂದವಾಯಿತು. ತಂದೆಯ ಹೊಡೆತಗಳಿಂದ ಅವನಿಗಾದ ಪೆಟ್ಟಿನ ನೋವೆಲ್ಲ ಹೊರಟುಹೋಯಿತು. ಅವನು ಮರಳಿ ಮರಳಿ ಕೈಮುಗಿದನು. ಆಗ ಶ್ರೀರಾಮ-'ನಿನಗೆ ಸಜ್ಜನ ಸಹವಾಸದಲ್ಲಿರುವ ಪ್ರೀತಿಯನ್ನು ನಾನು ಅರಿತಿದ್ದೇನೆ. ಪಕ್ವದಶೆ ಬಂದಾಗ ನಿನ್ನ ಬಯಕೆ ಕೈಗೂಡುವುದು. ಅಲ್ಲಿಯ ವರೆಗೆ ನನ್ನ ನಾಮವನ್ನು ನೆನೆಯುತ್ತಿರು.' ಎಂದು ಹೇಳಿ ಅದೃಶ್ಯನಾದನು.

ಕನಸಿನಲ್ಲಿ ಕಂಡಂತೆ ಈ ಸಂಗತಿಯನ್ನು ಕೃಷ್ಣನ ತಂದೆ ಅವಲೋಕಿಸಿ ಓಡುತ್ತ ಬಂದು ಮಗನನ್ನು ಬಿಗಿದಪ್ಪಿ 'ಅಹಾ ನಾನು ದುಷ್ಟಾತ್ಮ. ಅರಿಯದೇ ನಿನ್ನಂಥ ಭಗವದ್ಭಕ್ತನನ್ನು ದಂಡಿಸಿ ಪಾಪಕ್ಕೆ ಗುರಿಯಾದೆ. ದೇವರು ನನಗೆ ಯಾವ ಶಿಕ್ಷೆ ವಿಧಿಸುವನೋ ತಿಳಿಯದು ಕೃಷ್ಣಾ. ನನ್ನ ಸಲುವಾಗಿ ನೀನು ದೇವರಲ್ಲಿ ಕ್ಷಮೆ ಬೇಡು. ದೇವರ ಕೋಪವು ನನ್ನ ಮೇಲೆ ಆಗದಿರಲಿ. ಇಂದಿನಿಂದ ನೀನು ಸ್ವತಂತ್ರ. ನಿನಗೆ ಉಚಿತವೆನಿಸಿದಂತೆ ನೀನು ನಡೆಯಬಹುದು. ನೀನು ನನ್ನ ಹೊಟ್ಟೆಯಿಂದ ಹುಟ್ಟಿರುವುದಕ್ಕೆ ನಾನು ಅಭಿಮಾನ ಪಡುತ್ತೇನೆ. ಎಂದು ನುಡಿಯಲು ಕೃಷ್ಣ ಭಗವನ್ನಾಮವನ್ನು ಸ್ಮರಿಸುತ್ತ ಆನಂದದಿಂದ ಕುಣಿದಾಡಿದನು.

ಅಂದಿನಿಂದ ಕೃಷ್ಣನ ವೃತ್ತಿಯೇ ಬದಲಾಯಿತು. ಯಾವಾಗಲೂ ಭಗವನ್ನಾಮ ಜಪ ಸಾಧು ಸೇವೆ. ಯಾರಾದರೂ ಸಾಧುಗಳನ್ನು ಕಂಡರೆ ಪ್ರೀತಿಯಿಂದ ಅವರನ್ನು ಕರೆತಂದು ಉಪಚರಿಸುವುದು. ಮನೆಯಲ್ಲಿದ್ದ ಪದಾರ್ಥವನ್ನು ಊಟಕ್ಕೆ ಹಾಕಿ ತೃಪ್ತಿಗೊಳಿಸುವುದು ಇವೇ ಅವನ ದಿನಚರಿಯಾದವು. ಅಷ್ಟರಲ್ಲಿ ತಂದೆ ಲೋಕಾರೂಢಿಯಂತೆ ಮಗನ ಲಗ್ನ ಮಾಡಬೇಕೆಂದು ಯೋಚಿಸಲು ಕೃಷ್ಣ ಬೇಡವೆಂದು ಅಂಗಲಾಚಿ ಬೇಡಿಕೊಂಡರೂ ತಂದೆ ಆಪ್ತೇಷ್ಟರು ಕೇಳಲಿಲ್ಲ. ಲಗ್ನವಾಗಿ ಹೋಯಿತು. ಕೃಷ್ಣ ಆ ತರುವಾಯ ಒಂದು ವರ್ಷ ಮನೆಯಲ್ಲಿದ್ದನು. ಆಗ ಇವರ ಮನೆಗೆ ಬಂದ ಒಬ್ಬ ಸಾಧು ಕೃಷ್ಣನಿಗೆ ವೈರಾಗ್ಯವನ್ನು ಬೋಧಿಸಿದನು. 'ಆತ್ಮಕಲ್ಯಾಣ ಸಾಧಿಸಿಕೊಳ್ಳಬೇಕೆನ್ನುವವನಿಗೆ ಅಹಂಕಾರ-ಮಮಕಾರಗಳು ದೊಡ್ಡ ಪ್ರತಿಬಂಧಕಗಳು. ಸಂಸಾರದಲ್ಲಿದ್ದು ಪರಮಾರ್ಥ ಸಾಧಿಸುತ್ತೇನೆಂದು ತಿಳಿಯುವುದು ತಪ್ಪು. ತೀವ್ರ ಮುಮುಕ್ಷು

ತ್ತವೇ ನಿನಗಿರುವುದಾದರೆ ಆತ್ಮ ವಿಚಾರವನ್ನು ಮಾಡು. ಪ್ರತಿಬಂಧಗಳನ್ನೆಲ್ಲ ಕಳಚು ಎದ್ದೇಳು.'

ಇದರಿಂದ ಕೃಷ್ಣನಿಗೊಳ್ಳೆ ಪರಿಣಾಮವಾಯಿತು. ಕೂಡಲೇ ಅವನು ತನ್ನ ಎಲ್ಲ ಸಂಸಾರಿಕ ಬಂಧನಗಳನ್ನು ಕಳಚಿ ಒಂದು ರಾತ್ರಿ ಮನೆಬಿಟ್ಟು ಆ ಸಾಧುವಿನ ಸಂಗಡ ಹೊರಟು ಅನೇಕ ಕ್ಷೇತ್ರಗಳನ್ನು ಸಂಚಾರ ಮಾಡುತ್ತ ಕಾಶಿಗೆ ಬಂದು ತಲುಪಿದನು. ಅಲ್ಲಿ ಒಬ್ಬ ಜ್ಞಾನಿಗಳು. ಉಭಯತರೂ ಅವರ ಸೇವೆಯಲ್ಲಿ ನಿಂತರು. ತಾನು ಸನ್ಯಾಸಿಯಾಗಬೇಕೆಂದು ಕೃಷ್ಣನಿಗೆ ಇಚ್ಛೆ ಬಲವಾಯಿತು. ಅದರಂತೆ ತನ್ನ ಗುರುಗಳಿಗೆ ತಿಳಿಸಿದನು. ಅವರು 'ನಿನಗಿನ್ನೂ ವಯಸ್ಸು ಸಣ್ಣದು. ತಾಯ್ತಂದೆ ವೊದಲಾದವರನ್ನು ಬಿಟ್ಟು ಬಂದಂತೆ ಕಾಣುತ್ತದೆ. ಅಧ್ಯಾತ್ಮ ಸಾಧನೆಗೆ ಸನ್ಯಾಸಿಯೇ ಆಗಬೇಕೆಂದು ನಿಯಮವಿಲ್ಲ. ಜಗತ್ತಿನ ವಿಷಯದಲ್ಲಿ ಆಸಕ್ತಿ ತಳೆಯದೇ ಇರಲು ಸಾಧ್ಯವಾದರೆ ಸಿದ್ಧಿಯಾಗುವುದು ತಡವಲ್ಲ.' ಎನ್ನಲು ಕೃಷ್ಣ ತನಗೆ ಯಾರೂ ಇಲ್ಲವೆಂದು ಹೇಳಿ ಅವರಿಂದ ಸನ್ಯಾಸ ದೀಕ್ಷೆ ಪಡೆದು 'ಗೋವಿಂದಾನಂದನೆಂಬ ನಾಮವನ್ನು ಗುರುಗಳಿಂದ ಹೊಂದಿದನು. ಆನಂತರ ಗುರುಗಳ ಬಳಿಯಲ್ಲಿ ಕೆಲವು ದಿನಗಳ ವರೆಗೆ ನಿಂತು ಸನ್ಯಾಸ ಧರ್ಮದ ರಹಸ್ಯವನೆಲ್ಲ ಅರಿತು ಗುರು ಆಜ್ಞೆಯನ್ನು ಪಡೆದು ಸಂಚಾರಕ್ಕೆ ಹೊರಟು ದ್ವಾರಕೆಗೆ ಬಂದನು.

ಅಲ್ಲಿ ಸಾಧು ಶಿವಾನಂದನ ಭೆಟ್ಟಿಯಾಯಿತು. ಪರಸ್ಪರ ಸಂಭಾಷಣೆ ನಡೆಯುತ್ತಿರಲು ಸದ್ಗುರು ಸಿದ್ಧಾರೂಢ ಸ್ವಾಮಿಯ ವಾರ್ತೆಯು ಶಿವಾನಂದನಿಂದ ತಿಳಿಯಿತು. ಸ್ವಾಮಿಯ ಅದ್ಭುತ ಸಿದ್ಧಿಯೂ, ಭಕ್ತಾನುಕಂಪನವೂ ತಿಳಿದಾಗ ಗೋವಿಂದಾನಂದನ ಮನದಲ್ಲಿ ಅವರನ್ನು ಕಾಣಬೇಕೆಂದೆನಿಸಿತು. ತಾನೂ ದಕ್ಷಿಣಕ್ಕೆ ಬರುವೆನೆಂದು ಹೇಳಲು ಶಿವಾನಂದನು. 'ಪ್ರತಿವರ್ಷ ಶಿವರಾತ್ರಿಗೆ ಹುಬ್ಬಳ್ಳಿಯ ಶ್ರೀ ಮಠದಲ್ಲಿ ದೊಡ್ಡ ಉತ್ಸವವಾಗುತ್ತದೆ. ಆಗ ಲಕ್ಷಾವಧಿ ಜನ ಸೇರುತ್ತಾರೆ. ಬಂದ ಜನರಿಗೆಲ್ಲ ಅನ್ನ ಸಂತರ್ಪಣೆಯ ವ್ಯವಸ್ಥೆಯುಂಟು. ನಾನು ಸಿದ್ಧಾರೂಢರ ಶಿಷ್ಯ. ಉತ್ಸವಕ್ಕೆ ಬೇಕಾಗುವ ಸಾಮುಗ್ರಿಗಳನ್ನು ಕೂಡಿಸಲು ನಾನು ಸಂಚಾರ ಮಾಡಬೇಕು. ನಾನು ಬರಲು ತಡವಾಗುವುದು. ನೀನು ಹೋಗಿ ಸದ್ಗುರು ದರ್ಶನ ಪಡೆಯಲು ಅಡ್ಡಿ ಇಲ್ಲ.' ಎಂದು ಹೇಳಿದನು.

ಆತುರನಾದ ಗೋವಿಂದಾನಂದ ದ್ವಾರಕೆಯನ್ನು ಬಿಟ್ಟು ತೀವ್ರ ಗತಿಯಿಂದ ಹೊರಟು ಹುಬ್ಬಳ್ಳಿಗೆ ಬಂದನು. ಆಗ ಮಧ್ಯರಾತ್ರಿಯಾಗಿತ್ತು ಜನರೆಲ್ಲ ನಿದ್ರಾವಶರಾಗಿದ್ದರು. ಆದರೂ ಗೋವಿಂದಾನಂದ ಮಠಕ್ಕೆ ಬಂದನು. ಬಹುತರವಾಗಿ ಈ ಸದ್ಗುರು ದರ್ಶನವಾಗಲಿಕ್ಕಿಲ್ಲವೆಂದು ಅವನ ಭಾವನೆಯಾಗಿತ್ತು. ಇವನು ಮಠದ ಮೆಟ್ಟಲೇರುತ್ತಿದ್ದಾನೆ, ಬಾಗಿಲದಲ್ಲಿ ಸದ್ಗುರುಮೂರ್ತಿ ಎದುರಿಗೆ. ಒಮ್ಮೆಲೆ ಯಾರೆಂಬುದು ತಿಳಿಯದೇ 'ಸ್ವಾಮೀ ಸದ್ಗುರು ಸಿದ್ಧಾರೂಢಸ್ವಾಮಿ ಎಲ್ಲಿ?' ಎಂದು ವಿಚಾರಿಸಿದನು. ಆಗ ಸ್ವಾಮಿ 'ಸಧ್ಯಕ್ಕೆ ಆ ಮಾತಿರಲಿ, ನಿಮಗೆ ಬಹಳ ಹಸಿವೆಯಾಗಿದೆ ಅದನ್ನು ನಾನು ಬಲ್ಲೆ. ಮೊದಲು ಒಳಗೆ ಬನ್ನಿ' ಎನ್ನಲು ಗೋವಿಂದಾನಂದನಿಗೆ ಬಹಳ ಕೌತುಕವೆನಿಸಿತು. ನನ್ನ ಹಸಿವೆಯ ಸುದ್ದಿ ಇವರಿಗೆ ತಿಳಿದಬಗೆ ಹೇಗೆ? ನಾನು ಯಾರು ? ಎಲ್ಲಿಂದ ಬಂದೆ ? ಯಾಕೆ ಬಂದೆ ? ಎಂಬ ಯಾವ ಸಂಗತಿಗಳನ್ನು ಇವರು ತಿಳಿದಿಲ್ಲ. ಎಂದು ಬೆರಗಾಗಿ ನಿಂತಿರಲು ಸದ್ಗುರು ಪ್ರೇಮದಿಂದ ಕೈ ಹಿಡಿದು ಎಳಗೆ ಕರೆದೊಯ್ದು ಶಿಷ್ಯರನ್ನೆಬ್ಬಿಸಿ 'ಇವರು ಮೂರು ದಿನಗಳಿಂದ ಉಪವಾಸವಿದ್ದಾರೆ, ಇವರಿಗೆ ಫಲಹಾರ ಮಾಡಿಸಿರಿ.' ಎನ್ನಲು ಗೋವಿಂದಾನಂದನು 'ಸದ್ಗುರು ದರ್ಶನಪಡೆಯದೇ ನಾನು ಯಾವುದನ್ನೂ ಸ್ವೀಕರಿಸುವುದಿಲ್ಲ' ಎಂದನು. ಆಗ ಶಿಷ್ಯರು 'ಸ್ವಾಮೀ, ಇವರೇ ಸದ್ಗುರು ಸಿದ್ಧಾರೂಢ ಸ್ವಾಮಿಗಳು' ಎಂದು ಹೇಳಿದರು. ಆ ಮಾತನ್ನು ಕೇಳಿ ಗೋವಿಂದಾನಂದ ಬಹು ಹರ್ಷಿತನಾಗಿ ಥಟ್ಟನೆದ್ದು ಸದ್ಗುರುವಿಗೆರಗಿ ಆನಂದಭಾಷ್ಪಗಳನ್ನು ಸುರಿಸಿ 'ಸದ್ಗುರುನಾಥನೇ, ಇಂದು ನಾನು ಧನ್ಯನಾದೆ. ನಾನು ದ್ವಾರಕೆಯಲ್ಲಿದ್ದಾಗ ಭೆಟ್ಟಿಯಾದ ಶಿವಾನಂದನು ತಮ್ಮ ಯೋಗ್ಯತೆಯನ್ನೂ, ಶಿಷ್ಯ-ವಾತ್ಸಲ್ಯವನ್ನೂ ವರ್ಣಿಸಿದ್ದನು. ಅವನು ಹೇಳಿದಂತೆಯೇ ಇಲ್ಲಿರುವುದನ್ನು ಕಂಡು ಕೃತಾರ್ಥನಾದೆ. ನಾನೊಬ್ಬ ಪಾಮರ, ಉದ್ಧರಿಸಬೇಕು. ಎನ್ನುತ್ತ ಮರಳಿ ವಂದಿಸಿ ಸುಮ್ಮನಾದನು. ಹಸನ್ಮುಖದಿಂದ ಸದ್ಗುರುವು ಅವನನ್ನು ನೋಡುತ್ತಿದ್ದನು.

ಹೊಸತಾಗಿ ಬಂದ ಅತಿಥಿಯ ಫಲಹಾರ-ಪದಾರ್ಥಗಳನ್ನು ತರಲು ಒಳಗೆ ಹೋದ ಶಿಷ್ಯರು ಎಲ್ಲ ಕಡೆಗೂ ಹುಡುಕಿ ಏನೂ ದೊರೆಯದೆ ಬರಿಗೈಯಿಂದ ಮರಳಿ 'ಏನೂ ಉಳಿದಿಲ್ಲ'ವೆಂದು ತಿಳಿಸಿದರು. ಆಗ ಸಿದ್ಧನು

ಹುಚ್ಚರಲ್ಲವೇ? ನೀವು ಪಾಂಡವರ ವನವಾಸ ಕಾಲದಲ್ಲಿ ಒಂದು ಸಾರೆ ಶಿವಾತಾರವೆನಿಸಿದ ದೂರ್ವಾಸ ಮುನಿಗಳು ತಮ್ಮ ಐವತ್ತು ಸಾವಿರ ಶಿಷ್ಯರಿಂದೊಡಗೂಡಿ ಮಧ್ಯರಾತ್ರಿಯಲ್ಲಿ ಬಂದು ಊಟ ಬೇಡಿದರು. ಸೂರ್ಯನಿರುವ ಸಮಯವಾಗಿದ್ದರೆ ಪ್ರಶ್ನೆಯೇ ಇರಲಿಲ್ಲ. ಪಾಂಡವರ ಬಳಿಯಲ್ಲಿ ಅಕ್ಷಯ ಪಾತ್ರೆಯಿತ್ತು. ಅದರ ಸಹಾಯದಿಂದ ಬೇಕಾದಷ್ಟು ಜನರಿಗೆ ಊಟ ಹಾಕ ಬಹುದಾಗಿತ್ತು. ಸೂರ್ಯ ಮುಳುಗಿದನೆಂದರೆ ಅಕ್ಷಯಪಾತ್ರೆ ನಿಷ್ಕ್ರಿಯ ವಾಗುತ್ತಿತ್ತು. ಆಗ ದ್ರೌಪದಿ ಪರಮಾತ್ಮನಾದ ಶ್ರೀ ಕೃಷ್ಣನನ್ನು ಧ್ಯಾನಿಸಿದಳು. ಅವನು ಬಂದು ಅತಿಥಿಗಳನ್ನು ತೃಪ್ತಿಗೊಳಿಸಿದನು. ಭಾರತದ ಈ ಕಥೆಯನ್ನು ನೀವು ಕೇಳಿಲ್ಲವೇ? ವಿಶ್ವ ಪೋಷಕನಿರುವಾಗ ನಾವು ಇಲ್ಲವೆಂದು ಅನ್ನಬೇಕೆ? ಎಂದು ನುಡಿಯುತ್ತ ಹೊರಗೆ ಹೋಗಿ ಕ್ಷಣಮಾತ್ರದಲ್ಲಿ ಒಂದು ಗಂಟು ಹಿಡಿದುಕೊಂಡು ಬಂದು ಶಿಷ್ಯರಿಗೊಪ್ಪಿಸಿದನು.

ಬಿಚ್ಚಿ ನೋಡಿದರೆ ಅದರಲ್ಲಿ ಬಗೆಬಗೆಯ ಹಣ್ಣು-ಹಂಪಲಗಳು, ಸಿಹಿಯಾದ ಕೆಲವು ತಿನಿಸುಗಳು. ಇದನ್ನೆಲ್ಲಾ ಕಂಡಾರೆಕಂಡ ಗೋವಿಂದಾನಂದನ ಆಶ್ಚರ್ಯಕ್ಕೆ ಪಾರವುಳಿಯಲಿಲ್ಲ. ಇಂಥ ಮಹಾತ್ಮರ ಸಾನ್ನಿಧ್ಯಪಡೆದ ನಾನು ಧನ್ಯನೆಂದು ಅವನು ಬಗೆದು ಆನಂದದಿಂದ ಫಲಾಹಾರ ತೀರಿಸಿದನು. ತರುವಾಯ ಶಿಷ್ಯರು ಸಿದ್ಧಪಡಿಸಿದ ಹಾಸಿಗೆಯಲ್ಲಿ ಸಿದ್ಧನನ್ನು ನೆನೆಯುತ್ತ ಮಲಗಿದನು. ಮರುದಿನ ಸಿದ್ಧನು ಬಂದು 'ಗೋವಿಂದಾನಂದರೇ ನೀವು ಇಲ್ಲಿಯೇ ನೆಲೆಸಿ ಲೋಕೋದ್ಧಾರದ ಕಾರ್ಯವನ್ನು ನಡೆಸಬೇಕೆಂದು ನಮ್ಮ ಅಪೇಕ್ಷೆ.' ಎನ್ನಲು ಗೋವಿಂದಾನಂದ ಸಮ್ಮತಿಸಿ 'ಸದ್ಗುರುನಾಥನೇ ಮಕರಂದ ತುಂಬಿದ ಕಮಲವನ್ನು ಕಂಡು ಭೃಂಗವು ಅತ್ತಿತ್ತ ಹೋಗಬಹುದೇ? ಆದರೂ ಆನಂದದಿಂದ ಗುಂಜಾರವ ಮಾಡುತ್ತ ಹಾರಾಡುವುದು ಭೃಂಗದ ಸ್ವಭಾವ. ಅದರಂತೆ ನಾನಾದರೂ ಸದ್ಗುರು ಪಾದ ಕಮಲಗಳ ಮಕರಂದವನ್ನುಂಡು ಅದರ ಸವಿಯನ್ನು ಇತರರಿಗೂ ತಿಳಿಸಿ ಕೊಡಬೇಕೆಂಬುದು ನನ್ನ ಬಲವತ್ತರ ಆಶೆ. ಆದ ಕಾರಣ ಸದ್ಗುರು ಚರಿತ್ರ ಕೀರ್ತನೆಗೆ ನನ್ನಲ್ಲಿ ಸಾಮರ್ಥ್ಯ ಬರುವಂತೆ ಅನುಗ್ರಹಿಸಬೇಕು. ಇಷ್ಟೇ ನನ್ನ ಪ್ರಾರ್ಥನೆ,' ಎಂದು ಕೈಮುಗಿದು ಮಠದಲ್ಲಿ ವಾಸಮಾಡಿ ಕೃತಾರ್ಥತೆಯನ್ನು ಪಡೆದನು.

೩೯

ಅಹಿಂಸಾ ಸತ್ಯವಚನಂ ಸರ್ವಭೂತಾನುಕಂಪನಮ್ ।
ಶಮೋ ದಾನಂ ಯಥಾಶಕ್ತಿ ಗಾರ್ಹಸ್ಥೋ ಧರ್ಮ ಉತ್ತಮಃ ॥
—ಸ್ಮೃತಿ

ಹಿಂಸೆ ಇಲ್ಲದಿರುವಿಕೆ, ಸತ್ಯವಾದ ನುಡಿ, ಎಲ್ಲ ಪ್ರಾಣಿಗಳಲ್ಲಿ ಪ್ರೀತಿ, ಶಾಂತಿ, ಶಕ್ತಿಮೀರದಂತೆ ದಾನ ಮಾಡುವಿಕೆ, ಇವು ಗೃಹಸ್ಥನ ಶ್ರೇಷ್ಠ ಧರ್ಮ ಕರ್ತವ್ಯಗಳು.

ಒಡಿಗರ ಕಾಳಪ್ಪನೆಂಬವನು ಸಿದ್ಧನ ಪರಮ ಭಕ್ತನು. ಸಿದ್ಧನನ್ನು ಮನೆಗೆ ಕರೆಯಬೇಕು, ಗಂಧ-ಪುಷ್ಪಗಳಿಂದ ಪೂಜಿಸಬೇಕು, ಊಟಕ್ಕೆ ಹಾಕಬೇಕು, ಉಳಿದುದನ್ನು ಪ್ರಸಾದವೆಂದು ಸ್ವೀಕರಿಸಬೇಕು ಎಂದು ಬಹು ದಿನಗಳಿಂದ ಯೋಚಿಸುತ್ತಿದ್ದನು. ಆಗ ಮಾವಿನಹಣ್ಣಿನ ಸುಗ್ಗಿ ಉತ್ತಮವಾದ ಮಾವಿನಹಣ್ಣು ತಂದು ಮನೆಯಲ್ಲಿ ಅಡಿಗೆ ಮಾಡುವಂತೆ ತಿಳಿಸಿ ಸಿದ್ಧನಿಗೆ ಆಮಂತ್ರಣ ಕೊಡಲು ಮಠಕ್ಕೆ ಬಂದನು. ಭಕ್ತರ ಅಪೇಕ್ಷೆಯೇ ಸದ್ಗುರುವಿನ ಅಪೇಕ್ಷೆ. ಆನಂದದಿಂದ ಸಿದ್ಧ ಸಮ್ಮತಿಸಿದನು.

ಮನೆಯಲ್ಲಿ ಅಡಿಗೆ ಎಲ್ಲ ಸಿದ್ಧವಾದಂತಾಗಲು ಕಾಳಪ್ಪ ಸದ್ಗುರುವನ್ನು ಕರೆದುಕೊಂಡು ಬಂದು ಉಚಿತಾಸನದಲ್ಲಿ ಕುಳ್ಳಿರಿಸಿ ತಾನು ಶುಚಿಯಾಗಿ ಭಕ್ತಿಯಿಂದ ಸಿದ್ಧನನ್ನು ಪೂಜಿಸಿದನು. ಸುಂದರವಾದ ಹೂವಿನ ಮಾಲೆಯನ್ನು ಹಾಕಿದನು. ಹಣ್ಣುಗಳನ್ನರ್ಪಿಸಿದನು. ಧೂಪ-ದೀಪಾದಿಗಳು ಮುಗಿಯಲು ಆರತಿ ಬೆಳಗಿದನು. ಪಾದಕಮಲಗಳಲ್ಲಿ ಹಣೆಯಿಟ್ಟು ವಂದಿಸಿದನು. ಅಂದು ಅವನ ಮನೆಯವರಿಗೆಲ್ಲ ಅತ್ಯಂತ ಹರ್ಷ. ತಮ್ಮ ಆರಾಧ್ಯ ದೈವ ಮನೆಗೆ ಬಂದಿದ್ದಾನೆ, ಎಷ್ಟು ಕೈಮುಗಿದರೂ ಸಾಕಿಲ್ಲ. ಎಷ್ಟುಸಾರೆ ಆರತಿ ಬೆಳಗಿದರೂ ಸಾಕಿಲ್ಲ. ಹೀಗೆ ಪೂಜೆ ಬೆಳೆಯುತ್ತ ನಡೆಯಲು ಸಿದ್ಧ ನಗುತ್ತ 'ಇದೇನು ಕಾಳಪ್ಪ ನನ್ನನ್ನು ಕರೆದುದು ಊಟಕ್ಕೋ? ಪೂಜೆಗೋ?' ಎಂದು ಕೇಳಲು ಆಗ ಜಾಗ್ರತನಾಗಿ ಕಾಳಪ್ಪ ಊಟಕ್ಕೆ ಬಡಿಸುವಂತೆ ಹೇಳಿದನು. ಕ್ಷಣದಲ್ಲಿ ಬಡಿಸುವದಾಯಿತು. ಸಿದ್ಧ ಊಟ ಮಾಡತೊಡಗಿದನು. ಊಟ ನಡೆದಾಗಲೇ ಒಂದೆರಡು ಒಳ್ಳೆಯ ಹಣ್ಣು ಹೆಚ್ಚಿ ಹೋಳುಮಾಡಿ

ಸಿದ್ಧನಿಗೆ ಹಾಕಬೇಕೆಂದು ಸಿದ್ಧನ ಮನಸ್ಸು. ಒಂದು ಹಣ್ಣು ಹೆಚ್ಚಿದನು-ನೋಡಲಿಕ್ಕೇನೋ ಅವು ಉತ್ತಮ ಹಣ್ಣುಗಳಂತೆ ಕಾಣುತ್ತಿದ್ದವು. ಒಳಗೆ ಹೆಚ್ಚಿ ನೋಡಿದ ಹುಳಗಳಾದಂತೆ ಕಾಣಿಸಿತು. ಮತ್ತೊಂದು ಹೆಚ್ಚಿ ನೋಡಿದರೂ ಹಾಗೆಯೇ. ಇದೇನಾಯಿತೆಂದು ವಿಷಾದಪಟ್ಟು ಕಾಳಪ್ಪ ಓಡುತ್ತ ಹೋಗಿ ಒಳ್ಳೆಯ ಹಣ್ಣು ತರುತ್ತೇನೆಂದು ಗಡಿಬಿಡಿ ಮಾಡತೊಡಗಲು ಸಿದ್ಧನು ಕರೆದು ಏನು ಎಂದು ಕೇಳಲು ಕಾಳಪ್ಪ 'ಹಣ್ಣು ಕೆಟ್ಟುಹೋಗಿವೆ, ಬೇರೆ ಹಣ್ಣು ತರಬೇಕಾಗಿದೆ' ಎಂದನು. ಎಲ್ಲಿ ತೆಗೆದುಕೊಂಡು ಬಾ ನೋಡೋಣ ಎಂದು ಸಿದ್ಧ ನುಡಿಯಲು ಕಾಳಪ್ಪ ಹಣ್ಣುಗಳನ್ನು ಅವನ ಮುಂದಿಟ್ಟನು. ಆಗ ಸಿದ್ಧ ತನ್ನ ಅಮೃತ ದೃಷ್ಟಿಯಿಂದ ಆ ಹಣ್ಣುಗಳನ್ನು ನೋಡಿ ಇನ್ನು ಹೆಚ್ಚಿ ನೋಡು, ನೀನು ಸುಮ್ಮನೆ ಹೇಳಿದೆ. ಇವು ಕೆಟ್ಟ ಹಣ್ಣುಗಳಲ್ಲ ಎನ್ನಲು ಹೆಚ್ಚಿ ನೋಡಿದರೆ ಅವೆಲ್ಲ ಉತ್ತಮ ಹಣ್ಣುಗಳಾಗಿದ್ದವು. ತಿನ್ನಲಿಕ್ಕೂ ರುಚಿಕರವೆನಿಸಿದವು. ಕಾಳಪ್ಪ ತನ್ನ ಮನದಲ್ಲಿ ಅಂದುಕೊಂಡನು. 'ಅಹಾ ಸದ್ಗುರುವಿನ ಅಮೃತ ದೃಷ್ಟಿಯಿಂದ ಜೀವವಿಲ್ಲದ ಈ ಹಣ್ಣುಗಳು ಕೂಡಾ ಶುದ್ಧವಾದವು. ಇನ್ನು ಸಜೀವ ಮನುಷ್ಯನಾಗಲಾರನೇ ? ಮನುಷ್ಯನಿಗೆ ವಿಚಾರವಿದೆ, ವಿವೇಕವಿದೆ. ಅವನು ಶುದ್ಧನಾಗಲು ಕೊರತೆ ಎಂದರೆ ಗುರುವಿನ ಅನುಗ್ರಹವೊಂದೆ. ಆ ಅನುಗ್ರಹವಾಗುವುದೇ ತಡ, ಮನೋಬುದ್ಧಿಗಳ ಕಾಲುಷ್ಯವೆಲ್ಲ ತೊಳೆದು ಜೀವ ಏಕರಸ ಬ್ರಹ್ಮನ ಅನುಭವ ಪಡೆಯುತ್ತಾನೆ, ಇದೆಂಥ ಆಶ್ಚರ್ಯಕರ.'

ಹೀಗೆ ಕಾಳಪ್ಪ ಯೋಚಿಸುವಷ್ಟರಲ್ಲಿ ಗುರುನಾಥನ ಊಟವಾಯಿತು. ವೀಳ್ಯ ದಕ್ಷಿಣೆಗಳನ್ನು ಕೊಟ್ಟು ವಂದಿಸಿದನು. ಸಿದ್ಧ ಭಕ್ತನನ್ನು ಆಶೀರ್ವದಿಸಿ ಮಠಕ್ಕೆ ನಡೆದನು.

‡ ‡ ‡ ‡

ತುಕ್ಕನೆಂಬುವ ಮತ್ತೊಬ್ಬ ಭಕ್ತನು. ಅವನಿಗೂ ಸದ್ಗುರುವನ್ನು ಮನೆಗೆ ಕರೆತಂದು ಪೂಜೆ ಮಾಡಬೇಕೆಂದು ಅಪೇಕ್ಷೆ. ಯೋಗ್ಯ ಸಮಯ ನಿರೀಕ್ಷಣೆಯಲ್ಲಿದ್ದನು. ನವರಾತ್ರಿಯು ಬಂದಿತು, ಮನೆಯಲ್ಲಿ ಸುಂದರವಾದುದೊಂದು ಪೀಠವನ್ನು ರಚಿಸಿದನು. ಅದರ ಸುತ್ತಲೂ ಮಂಟಪವನ್ನು ಕಟ್ಟಿದನು. ದೇವರನ್ನು ಪೂಜಿಸಲು ನಿರ್ಮಿಸಿದ ಪೀಠದಂತೆ ಅದು ಮನೋಹರ

ವಾಗಿ ತೋರಿತು. ಪೂಜೆಯ ಸಾಹಿತ್ಯ ಸಿದ್ಧವಾಗಿತ್ತು. ಹಣ್ಣು-ಹಾಲು-ಸಕ್ಕರೆ-ತುಪ್ಪ ಮುಂತಾದವುಗಳನ್ನು ತಂದಿಟ್ಟು ಇನ್ನೇನು ಸದ್ಗುರುನಾಥನನ್ನು ಕರೆತರಬೇಕೆಂದು ಹೊರಡುವಷ್ಟರಲ್ಲಿ ಅವನ ಹೆಂಡತಿ ಬಂದು ನುಡಿದಳು.

'ಈಗೇನು ಗುರುನಾಥನನ್ನು ಕರೆಯಲಿಕ್ಕೆ ಹೋಗುವಿರಾ?'

'ಹೌದು, ಪೂಜೆಗೆ ಎಲ್ಲಾ ಸಿದ್ಧನಾಗಿದೆಯಲ್ಲ.'

'ನೀವು ಎಲ್ಲ ಸಿದ್ಧ ಮಾಡಿದುದನ್ನು ನಾನೂ ನೋಡಿದ್ದೇನೆ. ಆದರೆ ನಿಮ್ಮ ಮಗನ ಗತಿ ನೀವು ಮರೆತುಬಿಟ್ಟದ್ದೀರಿ.'

'ತುಸು ಜಡ್ಡಾದರೆ ಏನಾಯಿತೀಗ?'

'ಇಲ್ಲ, ಈ ಪೂಜೆಯ ಸಂಭ್ರಮದಲ್ಲಿ ನೀವು ಸರಿಯಾಗಿ ಹನಮಂತನನ್ನು ನೋಡಿಯೇ ಇಲ್ಲ, ಬಹಳಮಾಡಿ ಅವನು ಇನ್ನು ಬದುಕಲಾರನೆನಿಸುತ್ತದೆ.'

'ಅಂ, ಇದನ್ನೇನು ಹೇಳಿದೆ. ನಾನಂತೂ ಮನಸ್ಸಿನಲ್ಲಿ ಸದ್ಗುರುನಾಥನನ್ನು ಪೂಜಿಸಬೇಕೆಂದು ಸಂಕಲ್ಪಮಾಡಿದ್ದೇನೆ ಈಗ ಬಿಡುವುದು ಯೋಗ್ಯವೆ? ಹೇಳು.'

'ನಿಮ್ಮ ಸ್ವಭಾವ ತಿಳಿದೇ ನಾನು ಯಾವ ಮಾತನ್ನೂ ಆಡದೆ ಈ ಹೊತ್ತಿನವರೆಗೆ ಸುಮ್ಮನಿದ್ದೆ. ಆದರೆ ಏನೂ ಮಾಡಲಿ? ಅವನಿಗೆ ಸಾಯುವ ಕಾಲ ಸಮೀಪವಾದಂತೆ ತೋರುತ್ತದೆ. ಒಮ್ಮೆ ಒಳಗೆ ಬಂದು ಅವನ ಸ್ಥಿತಿ ನೋಡಿ ನಿಮಗೆ ತಿಳಿದಂತೆ ಮಾಡಿರಿ.' ಎಂದು ಕಣ್ಣೀರು ಸುರಿಸುತ್ತ ಹೇಳಿ ಒಳಗೆ ನಡೆದಳು. ತುಕ್ಕಪ್ಪ ಹೋಗಿ ಮಗನ ಸ್ಥಿತಿ ನೋಡಿದನು. ಹೆಂಡತಿಯ ಮಾತು ನಿಜವಾಗಿತ್ತು. ಕ್ಷಣಮಾತ್ರ ಅವನಿಗೆ ಅಂಜಿಕೆ ಎನಿಸಿದರೂ 'ಗುರುನಾಥನಿದ್ದಾನೆ' ಎಂದು ನಂಬಿಗೆಯುಂಟಾಗಿ ಮಗನಿಗಂದನು– 'ಹನುಮಂತಾ ಇಂದು ನಮ್ಮಲ್ಲಿ ಸದ್ಗುರುನಾಥನ ಪೂಜೆಯಾಗಬೇಕಾಗಿದೆ. ನೀನು ನರಳದೇ ರಂಭಾಟ ಮಾಡದೇ ಮಲಗಿಕೊಳ್ಳಬೇಕು. ಅಂದರೆ ಪೂಜೆ ವಿಘ್ನವಿಲ್ಲದೇ ನಡೆಯುವುದು. ಪೂಜೆ ಮುಗಿದ ಮೇಲೆ ಏನಾಗುವುದೋ ಆಗಲಿ. ಒಂದು ವೇಳೆ ಅದಕ್ಕೂ ಮೊದಲೇ ನಿನಗೆ ಸಾವು ಬಂದರೆ ಗುರುನಾಥನ ನಾಮವನ್ನುಚ್ಚರಿಸುತ್ತ ಗದ್ದಲ ಮಾಡದೇ ಪ್ರಾಣ ಬಿಡಬೇಕು. ತಿಳಿಯಿತೇ?' ಎನ್ನಲು ಹನಮಂತ ಪಿಳಿಪಿಳಿ ಕಣ್ಣುಬಿಡುತ್ತ ಸನ್ನೆಮಾಡಿ ಒಪ್ಪಿಗೆ ಸೂಚಿಸಿದನು.

ಗಂಡನ ಈ ವಿಚಿತ್ರ ಸ್ವಭಾವವನ್ನೂ, ಮಗನ ಪರಿಸ್ಥಿತಿಯನ್ನೂ ಕಂಡು ತಾಯಿ ಅಳಲಾರಂಭಿಸಿದಳು. ಅತನ್ನು ಕಂಡು ತುಕ್ಕಪ್ಪ ಕೋಪಗೊಂಡು ಕೇಳಿದನು.

'ಹೀಗೆ ನೀನು ಅಳುತ್ತ ಕುಳಿತರೆ ನಾನೂ ಅಳಲು ಪಾಲುಗೊಡ ಬೇಕೋ? ಗುರುನಾಥನನ್ನು ಕರೆತಂದು ಪೂಜಿಸಬೇಕೋ? ಏನು ಮಾಡಲಿ ಹೇಳು.'

'ಇಲ್ಲ ನಾನು ಇನ್ನು ಅಳುವದಿಲ್ಲ. ಅತ್ತದ್ದು ತಪ್ಪಾಯಿತು ಕ್ಷಮಿಸಿರಿ. ಒಂದುವೇಳೆ ಪೂಜೆ ನಡೆದಾಗ ಹನುಮಂತ ಸತ್ತರೂ ಕೂಡ ನಾನು ಧ್ವನಿ ಮಾಡಿ ಅಳುವದಿಲ್ಲ. ಅವನ ಮೇಲೆ ಏನಾದರೂ ಹೊಚ್ಚಿ, ಮುಸುಕುಹಾಕಿ ಬಿಡುತ್ತೇನೆ. ನಿಮ್ಮ ಪೂಜೆ ಸಾಗಲಿ.'

ಎಂದು ದುಃಖವನ್ನು ನುಂಗಿಕೊಂಡು ಹೇಳಿದಳು. ತುಕ್ಕಪ್ಪ ಯಾವುದಕ್ಕೂ ಲಕ್ಷಿಸದೇ ಮಠಕ್ಕೆ ತೆರಳಿ ವಿಜೃಂಭಣೆಯಿಂದ ಗುರುನಾಥನನ್ನು ಕರೆ ತಂದು ಪೀಠದಲ್ಲಿ ಕುಳ್ಳಿರಿಸಿದನು. ಸುಸ್ವರಯುಕ್ತವಾದ ಭಜನೆ ಆರಂಭ ವಾಯಿತು. ಇತ್ತ ಹನುಮಂತನಿಗೆ ಪ್ರಾಣಸಂಕಟವಾಗುತ್ತಿತ್ತು. ಆದರೂ ತಂದೆಯ ಮಾತಿನಲ್ಲಿ ವಿಶ್ವಾಸ. ಆ ಪ್ರಾಣಹೋಗುವ ಕಾಲದಲ್ಲಿಯೂ ಸಿದ್ಧನ ಸ್ಮರಣೆಮಾಡುತ್ತ 'ಗುರುವೇ, ಮನೆಯಲ್ಲಿಯೇ ನಿನ್ನ ಪೂಜೆ ನಡೆಯುತ್ತದೆ. ತಂದೆ ಒಳ್ಳೇಸಡಗರದಿಂದ ಮಂಟಪ ಕಟ್ಟಿರುವೆನೆಂದು ಕೇಳಿರುತ್ತೇನೆ. ಅದನ್ನೂ ನಾನು ಕಾಣಲಿಲ್ಲ, ನಿನ್ನ ದರ್ಶನವನ್ನೂ ಪಡೆಯಲಿಲ್ಲ. ಹಾಗೆ ಸತ್ತು ಹೋಗಬೇಕೆ? ಸ್ವಾಮಿ. ಈಗ ನನಗೆ ಏಳಲು ಬರುವದಿಲ್ಲ. ನರ-ನಾಡಿಗಳೆಲ್ಲ ಜಗ್ಗತೊಡಗಿವೆ, ಮಾತಾಡಲು ಬರುವದಿಲ್ಲ. ಒಮ್ಮೆ-ಒಮ್ಮೆಯೇ ದರ್ಶನ ಕೊಡು. ನಂತರ ಸಾಯಲು ನನಗೆ ದುಃಖವಿಲ್ಲ.' ಎಂದು ಅಂತರಂಗದಲ್ಲಿ ಮೊರೆ ಇಡುತಿರಲು ಸದ್ಗುರುನಾಥ ಚಟ್ಟನೆ ಮೇಲೆದ್ದು ತುಕ್ಕಪ್ಪನನ್ನು ಕರೆದು 'ಹನುಮಂತನೆಲ್ಲಿದ್ದಾನೆ? ಅವನನ್ನು ತೋರಿಸು ನಡೆ.' ಎನ್ನಲು ತುಕ್ಕಪ್ಪ 'ಪೂಜೆ ಮುಗಿದ ಮೇಲೆ ನೋಡಿದರಾಗದೇ? ಈಗ ಅವನು ಸ್ವಸ್ಥ ಮಲಗಿದ್ದಾನೆ' ಎಂದನು. 'ಇಲ್ಲ, ಈಗಲೇ ನಾನು ನೊಡಬೇಕು.' ಎಂದು ಸದ್ಗುರುನಾಥ ಒಳಗೆ ಬಂದು ಹನುಮಂತನನ್ನು ಕಂಡನು. ಆಗಲೇ ಮೃತ್ಯುದೇವ

ತೆಯ ನೆರಳು ಮುಖದಲ್ಲಿ ಕವಿದಿತ್ತು. ಅಷ್ಟಾದರೂ ಬಹು ಮಂದವಾಗಿ 'ಶಿವಾಯನಮಃ' ಎಂದು ಕಾಲಕಾಲಾತೀತನ ಮಂತ್ರೋಚ್ಚಾರ ನಡೆದಿತ್ತು.

ಅದನ್ನು ಕೇಳಿ ಸಿದ್ಧ ಸಮಾಧಾನಪಟ್ಟು ತನ್ನ ಅಮೃತಕರವನ್ನು ಹನುಮಂತನ ಮೈಮೇಲೆ ಆಡಿಸಿದನು. ಜೀವಕಳೆ ತುಂಬಿತು. ಮೆಲ್ಲನೆ ಕೈಕಾಲುಗಳ ಅಲುಗಾಟವಾರಂಭವಾಯಿತು. ಹಿಂದೆ ಆರಂಭ ಮಾಡಿದ ಶಿವನಾಮ ಘೋಷ ದೊಡ್ಡದಾಗಿ ಕಣ್ಣು ತೆರೆದು ಹನುಮಂತ 'ಗುರುನಾಥಾ' ಎಂದು ಉಚ್ಚರಿಸಿದನು. ಆಗ ಅವನ ಕೈಹಿಡಿದು ಮೆಲ್ಲನೆ ಸಿದ್ಧ ಮೇಲಕ್ಕೆಬ್ಬಿಸಿ ಕೂಡಿಸಲು ಆರಾಮದಿಂದ ಕುಳಿತನು. ಅದನ್ನು ಕಂಡು ತಾಯ್ತಂದೆಗಳು ಆನಂದಾಶ್ರುಗಳನ್ನುದುರಿಸಿದರು. ಆ ತಾಯಿಯಂತೂ ಸಿದ್ಧನ ಪಾದಗಳಲ್ಲಿ ಹೊರಳಿ 'ಗುರುನಾಥನೇ, ಹನುಮಂತ ಕೈಬಿಡುವನೆಂದು ನನಗೆ ತಿಳಿದಿತ್ತು. ಇವರಂತೂ ನಿಮ್ಮ ಪೂಜೆ ಮಾಡಿಯೇ ತೀರುವುದೆಂದು ಹಟ ಹಿಡಿದಿದ್ದರು. ನಾನು ಈ ಪ್ರಸಂಗದಲ್ಲಿ ಪೂಜೆಗೆ ವಿಘ್ನತರಬಾರದೆಂದು ಎಲ್ಲ ದುಃಖವನ್ನು ನುಂಗಿಕೊಂಡು ಸುಮ್ಮನಿದ್ದೆ. ಕೊನೆಗೂ ನೀನು ಸಂತೋಷವನ್ನು ಕೊಟ್ಟೆ. ನನ್ನ ಮಗ ಉಳಿದನು. ಸ್ವಾಮಿ, ನಿನ್ನ ಉಪಕಾರ ತೀರುವ ಬಗೆ ಹೇಗೆ?' ಎಂದು ಬಹುಪರಿ ಕೊಂಡಾಡಿದಳು.

ತುಕ್ಕಪ್ಪನೆಂದನು–

'ಸ್ವಾಮಿ, ನನ್ನ ಮಗನಿಗೆ ಜಡ್ಡಾದ ಸುದ್ದಿಯನ್ನು ನಾನು ನಿನ್ನ ಮುಂದೆ ಯಾವಾಗಲೂ ಹೇಳಿರಲಿಲ್ಲ, ಆದರೂ ನಿನಗೆ ಹೇಗೆ ತಿಳಿಯಿತು?

ಆವನ ಮಾತು ಕೇಳಿ ಹಸನ್ಮುಖನಾಗಿ ಸಿದ್ಧನಂದನು–

'ನನಗೆ ಸಾವಿರ ಕಣ್ಣು, ಸಾವಿರ ಕಿವಿ. ನನ್ನ ಭಕ್ತರ ಮನೆ ವಾರ್ತೆಗಳೆಲ್ಲ ನನಗೆ ತಿಳಿಯುತ್ತವೆ. ಅದರಲ್ಲಿ ಭಕ್ತರಿಗೊದಗಿದ ಸಂಕಟಗಳಂತೂ ಬಲುಬೇಗ ನನಗೆ ತಿಳಿಯುವವು. ಅವುಗಳನ್ನು ನಿವಾರಿಸಲು ಕೂಡಲೇ ನಾನು ಧಾವಿಸುತ್ತೇನೆ.'

'ಹನುಮಂತನ ಸ್ಥಿತಿ ನಿನಗೆ ತಿಳಿಯಬಾರದೆಂದು ನಾನು ಬೇಕೆಂದು ಭಜನೆಯ ಮೇಳ ಕರಸಿ ಭಜನೆ ಮಾಡಿಸತೊಡಗಿದ್ದೆ. ನೀನು ಅವರ ಭಜನೆ ಕೇಳುತ್ತ ತಲೆದೂಗತೊಡಗಿದ್ದೆ. ಗುರುನಾಥನಿಗೆ ಸಂತೋಷವಾಯಿತು. ಸಾಕು ಬೇಕಾದುದಾಗಲಿ, ನಾನು ಇನ್ನು ಧನ್ಯನಾದೆ ಎಂದು ಭಾವಿಸಿದ್ದೆ.'

'ಆಗಲೇ ಒಮ್ಮೆ ದರ್ಶನ ಕೊಡು' ಎಂದು ಹನುಮಂತ ಪ್ರಾರ್ಥಿಸಿದ್ದು. ಆ ಧ್ವನಿ ಕೇಳಿ ನಾನು ಮೇಲಿದ್ದೆ. ಅದಿರಲಿ. ಇನ್ನೇನೂ ಅವನಿಗೆ ಮರಣ ಭಯವಿಲ್ಲ. ಮೆಲ್ಲನೆ ಹೊರಗೆ ಕರೆತಂದು ಒತ್ತಟ್ಟಿಗೆ ಕೂಡಿಸಿರಿ. ಅವನೂ ಸಮಾರಂಭ ನೋಡಲಿ.'

ಎಂದು ನುಡಿದು ಸಿದ್ಧ ಹೊರಬಂದು ಪೀಠವೇರಿ ಕುಳಿತರು. ತುಕ್ಕಪ್ಪ ಮಗನ ಕೈಹಿಡಿದು ಹೊರಗೆ ಕರೆತರುತಿರಲು ಹನುಮಂತ ಒತ್ತಟ್ಟಿಗೆ ಕೂಡಲೊಪ್ಪದೇ ಸಿದ್ಧನ ಪಾದಗಳ ಮೇಲೆ ಉರುಳಿ ಹೊರಳಿದನು. ಅವನ ಭಕ್ತಿಗೆ ಮೆಚ್ಚಿ ಸಿದ್ಧನು ಅವನನ್ನು ಆಲಿಂಗಿಸಿ 'ಮಗು ನನ್ನ ಭಾವನೆಯನ್ನೇ ತಾಯ್ತಂದೆಗಳಲ್ಲಿಟ್ಟು ಅವರನ್ನು ಸೇವಿಸಿ ಸುಖಿಯಾಗು.' ಎಂದನು.

ನಡೆದ ಸಂಗತಿಯನ್ನೆಲ್ಲ ತಿಳಿದ ಜನ ಆನಂದಾಶ್ಚರ್ಯಭರಿತರಾಗಿ ಭಕ್ತಿಪರವಶರಾಗಿ ಕುಣಿದರು. ಭಕ್ತಿಯಿಂದ ಪೂಜೆ ಸಾಗಿತು. ಅಲ್ಲಿ ನಡೆದ ಸಮಾರಂಭ-ಶಿವನಾಮಘೋಷ-ಜಯ ಜಯಕಾರಗಳು ಇದು ಭೂಕೈಲಾಸವೇನೋ ಎಂಬಂತೆ ತನ್ಮಯಗೊಳಿಸಿದವು.

ತುಕ್ಕಪ್ಪ ಸಿದ್ಧನ ಭಕ್ತರಲ್ಲಿ ಶ್ರೇಷ್ಠನೆನಿಸಿ ಕೃತಾರ್ಥನಾದನು.

————

೪೦

ಸುರತರುವು ಮರನಲ್ಲ। ಸುರಭಿಯೊಂದಾವಲ್ಲ।
ಪರುಷ ಪಾಷಾಣದೊಳಗಲ್ಲ ಗುರುರಾಯು ।
ನರರೊಳಗೆಲ್ಲ ಸರ್ವಜ್ಞ ॥ —ಸರ್ವಜ್ಞ

ಧನವೆಂಬುದು ಬಹಳ ಕೆಟ್ಟದೆಂದು ಶಾಸ್ತ್ರಕಾರರು, ತತ್ವವೇತ್ತರು ಬಹುಜನ ನಿಜವಾಗಿಯೂ ಹೀಗುಂಟೇ ಎಂಬುದು ವಿಚಾರಣೀಯವಾದ ವಿಷಯ.

ಧನದಿಂದಲೇ ಅಲ್ಲವೇ ದಾನ-ಧರ್ಮ-ಕೆರೆ-ಭಾವಿ ಕಟ್ಟಸುವುದು. ಅನ್ನ ಛತ್ರಗಳನ್ನಿಡಿಸುವುದು. ವೈದ್ಯಶಾಲೆಗಳು-ಶಿಕ್ಷಣ ಮಂದಿರಗಳು ನಿರ್ಮಾಣವಾಗುವುದು?

ವ್ಯಾಪಾರ-ಉದ್ಯೋಗಗಳು ನಗರಕ್ಕೆ ಅಲಂಕಾಲಪ್ರಾಯ ಮಂದಿರಗಳು. ಜ್ಞಾನಾರ್ಜನೆಗೆ ಪರದೇಶ ಗಮನಾದಿಗಳು.

ಕುಟುಂಬ ಪೋಷಣೆ–ಅತಿಥಿ ಸತ್ಕಾರ.

ಎಷ್ಟೊಂದು ಕಾರ್ಯಗಳಾಗುವವು. ಧನದಿಂದ 'ಅರ್ಥಾಬಹಿಶ್ಚರಾಃ ಪ್ರಾಣಾಃ' ಎಂದು ಹೇಳುವುದರಲ್ಲಿ ಅರ್ಥವಿದೆ. ಹೀಗಿದ್ದು ಅದರ ವಿಷಯದಲ್ಲಿ ನಿಂದೆ ಯಾಕೆ? ಎಂದರೆ ಅದು ಯಾರ ಬಳಿಯಲ್ಲಿರುವುದೋ ಅವರು ಸದ್ಗುಣಿಗಳಾಗಿದ್ದರೆ ಪ್ರಶ್ನೆಯೇ ಇಲ್ಲ. ಅವರು ದುರ್ಗುಣಿಗಳಾಗಿದ್ದರೆ ಮಾತ್ರ ಅನರ್ಥ ತಪ್ಪಿದ್ದಲ್ಲ. ವಸ್ತುತಃ ವಿಚಾರ ಮಾಡಿದರೆ ಯಾವುದೊಂದು ಪದಾರ್ಥ ಕೆಟ್ಟದೂ ಅಲ್ಲ. ಒಳ್ಳೆಯದೂ ಅಲ್ಲ. ಅದನ್ನು ಉಪಯೋಗಿಸುವವರ ಗುಣಗಳ ಮೇಲಿಂದ ಆಯಾ ಪದಾರ್ಥಕ್ಕೆ ಕೆಟ್ಟದಾಗಲೀ ಒಳ್ಳೆಯದಾಗಲೀ ಹೆಸರು ಬರುತ್ತದೆ.

ಹಿಂದೆ ಮುಂಬಯಿಯಲ್ಲಿ ತಾಯೀಬಾಯಿ ದಾಭೋಳಕರ ಎಂಬ ಹೆಣ್ಣುಮಗಳು ಇರುತ್ತಿದ್ದಳು. ಅವರದು ಶ್ರೀಮಂತ ಮನೆತನ. ಅದರಂತೆ ದಾನ–ಧರ್ಮ–ಸತ್ಕಾರ್ಯಗಳಿಗೂ ಪ್ರಸಿದ್ಧವಾದುದು.

ಒಂದು ದಿನ ಅಕಸ್ಮಾತ್ತಾಗಿ ಸಾಧುವೊಬ್ಬನು ಅವಳ ಮನೆಗೆ ಬಂದನು. ಆ ಸಾಧ್ವಿ ಅವನನ್ನು ಬಹಳ ರೀತಿ ಸತ್ಕರಿಸಿದಳು. ಮನೆಯ ಮಕ್ಕಳನ್ನೆಲ್ಲ ಕಳೆದು ಅವರಿಗೆ ನಮಸ್ಕಾರ ಮಾಡಿಸಿ ಅವರಿಂದ ಆಶೀರ್ವಾದ ಕೊಡಿಸಿದಳು. ಇದರಿಂದ ಆನಂದಗೊಂಡ ಸಾಧು- 'ಅವ್ವಾ, ಶ್ರೀಮಂತಿಕೆ-ಸುವಿಚಾರ ಒಂದೇ ಕಡೆಗೆ ಇರುವುದು ಬಹಳ ವಿರಳ. ಶ್ರೀಮಂತಿಕೆ ಲಕ್ಷ್ಮೀಯ ಪ್ರಸಾದ. ಸುವಿಚಾರ ಸರಸ್ವತಿಯ ಪ್ರಸಾದ. ಲಕ್ಷ್ಮೀ-ಸರಸ್ವತಿ ಅತ್ತೆ-ಸೊಸೆಯರಾಗಬೇಕಂತೆ ಅವರಲ್ಲಿ ಪರಸ್ಪರ ಸಾಮರಸ್ಯವಿರಲಾರದು. ಆದರೆ ಇಲ್ಲಿ ನಾನು ಆ ಸಾಮರಸ್ಯ ನೋಡಿದೆ. ಸಂತೋಷವಾಯಿತು. ನಾನೊಬ್ಬ ಸಾಮಾನ್ಯ ಸಾಧು, ನನಗಿಷ್ಟು ಸತ್ಕಾರಮಾಡಿದೆ. ಆದರೆ ತಾಯೀ ನಾನು ಅಸಮರ್ಥ. ನಿಮ್ಮ ಹೆಚ್ಚಿನ ಕಲ್ಯಾಣ ಮಾಡಲಾರೆ. ಒಂದುವೇಳೆ ನಿಮಗೆ ಶಾಶ್ವತ ಕಲ್ಯಾಣವನ್ನೇ ಸಾಧಿಸಿಕೊಳ್ಳಬೇಕೆಂದು ಅಪೇಕ್ಷೆ ಇದ್ದರೆ ಒಂದು ಸ್ಥಳವನ್ನು ಸೂಚಿಸುವೆನು. ಅಲ್ಲಿಗೆ ನೀವು ಹೋಗಬಹುದು.' ಎಂದನು.

ಅದಕ್ಕೆ ತಾಯೀಬಾಯಿ ಆತುರಳಾಗಿ 'ಹೇಳಿರಿ ಅವಶ್ಯವಾಗಿ ಹೇಳಿರಿ. ನಾವು ಸಾಂಸಾರಿಕರು. ನಮ್ಮಂಥವರಿಗೆ ಸತ್ಪುರುಷರ ದರ್ಶನವಾಗುವದೇ ಕಷ್ಟ. ಅನಾಯಾಸವಾಗಿ ತಮ್ಮಂಥವರು ಒರುವದೆಲ್ಲಿ? ಮಹಾತ್ಮರ ಹೆಸರು ಹೇಳುವುದೆಲ್ಲಿ?' ಕೇಳಿದಳು.

'ಹುಬ್ಬಳ್ಳಿಯಲ್ಲಿ ಸಿದ್ಧಾರೂಢಸ್ವಾಮಿ ಎಂಬ ಮಹಾತ್ಮರಿದ್ದಾರೆ. ದೂರ ದೂರದಿಂದ ಅನೇಕ ಭಕ್ತರು ಅವರಲ್ಲಿಗೆ ಬಂದು ಅನುಗ್ರಹ ಪಡೆದುಕೊಂಡು ಸುಖಿಗಳಾಗುತ್ತಾರೆ. ಅವರ ಯೋಗ್ಯತೆಯನ್ನು ವರ್ಣಿಸುವದು ಸಾಧ್ಯವಿಲ್ಲ. ದರ್ಶನಪಡೆದುಕೊಂಡೇ ತಿಳಿಯಬೇಕು. ಬೇಕೆನಿಸಿದರೆ ಇದು ನೋಡಿರಿ, ಅವರ ಭಾವಚಿತ್ರ.' ಎನ್ನುತ್ತ ಆ ಸಾಧು ಸ್ವಾಮಿಯ ಚಿತ್ರವನ್ನು ತೋರಿಸಿದನು. ಶಾಂತಿಯೇ ಮೈದಾಳಿ ಬಂದಂತಿರುವ ಆ ಚಿತ್ರವನ್ನು ಕಾಣುತ್ತ ತಾಯೀಬಾಯಿಗೆ ಬಹು ಭಕ್ತಿಯುಂಟಾಗಿ ಹಣೆಗೊತ್ತಿಕೊಂಡು ನುಡಿದಳು. 'ಅಹಾ, ನಾನು ಬಹುದಿನಗಳಿಂದ ಇಂಥ ಮಹಾತ್ಮರನ್ನು ಕಾಣಬೇಕೆಂದು ಅಪೇಕ್ಷಿಸುತ್ತಿದ್ದೆನು. ಇಂದು ಅನಾಯಾಸ ಅವರಿದ್ದ ಸ್ಥಳ ಗೊತ್ತಾಯಿತು. ಇದು ನನ್ನ ಭಾಗ್ಯವೇ ಸರಿ. ಅವರ ದರ್ಶನ ಪಡೆಯುತ್ತೇನೆ. ಸ್ವಾಮೀ, ನೀವು ಈಗ ಯಾವ ಕಡೆಗೆ ಹೊರಡುವವರು ಸಂಚಾರಕ್ಕೆ?'

'ನಾನೂ ಅವರ ಬಳಿಗೇ ಹೋಗತಕ್ಕವನು. ನೀವು ಬರುವುದಾದರೆ ಬರಬಹುದು.'

ಎಂದು ಸಾಧುವು ಹೇಳಲು ಮರುದಿನ ಹೊರಡುವುದೆಂದು ಗೊತ್ತಾಯಿತು. ಆ ಸಾಧ್ವಿ ಬಹಳ ಭಾವಿಕಳು. ಚಿತ್ರ ಕಂಡಾಗಿನಿಂದ ಸದ್ಗುರು-ಮೂರ್ತಿ ಮನದಲ್ಲಿ ಅಚ್ಚೊತ್ತಿದಂತಾಗಿತ್ತು. ಮರಳಿ ಮರಳಿ ಅದನ್ನೇ ನೆನೆಯುವಳು, ಅಂದು ರಾತ್ರಿಯಾಯಿತು ಮಲಗಿಕೊಂಡಳು. ಕನಸಿನಲ್ಲಿ ಸದ್ಗುರು ಮೂರ್ತಿ ಬಂದಂತೆ, ಹಗಲು ಮನೆಗೆ ಬಂದ ಸಾಧು ಹೇಳಿದ ಲಕ್ಷಣಗಳೆಲ್ಲ, ದಿವ್ಯವಾದ ಮುಖಶ್ರೀ. ಭಕ್ತರ ವಿಷಯದಲ್ಲಿ ಅದೇ ವಾತ್ಸಲ್ಯ, ಉಚಿತಾಸನವಿತ್ತು ಕೂಡಿಸಿದಳು. ಭಕ್ತಿಯಿಂದ ವಂದಿಸಿದಳು. ಸಕಲ ಸಾಮುಗ್ರಿಗಳಿಂದ ಪೂಜೆಯಾಯಿತು. ಕೈಮುಗಿದು ಬೇಡಿದಳು– 'ಗುರುನಾಥನೇ, ಪ್ರತಿದಿನ ಇದೇ ರೀತಿ ದರ್ಶನವಾಗಬೇಕು. ಇಷ್ಟೇ ನನ್ನ ಪ್ರಾರ್ಥನೆ.'

ಸದ್ಗುರುನಾಥ ಹಸನ್ಮುಖನಾಗಿ ನುಡಿದನು. 'ತಥಾಸ್ತು.'

ಎಚ್ಚರಿಕೆಯಾಯಿತು. ಕನಸಿನಲ್ಲಿ ಪಡೆದ ಸದ್ಗುರು ದರ್ಶನದಿಂದ ಉಂಟಾದ ಸಮಾಧಾನ ಸ್ಥಿರವಾಗಿತ್ತು. ಬೆಳಗಾಗಲು ಎದ್ದು ತನ್ನ ಕನಸಿನ ವಾರ್ತೆಯನ್ನು ಎಲ್ಲರಿಗೂ ತಿಳಿಸಿದಳು. ಲಗುಬಗೆಯಿಂದ ಸಿದ್ಧರಾಗಿ ಗಾಡಿ ಹತ್ತಿದರು. ಗಾಡಿಯ ವೇಗಕ್ಕಿಂತಲೂ ವೇಗವುಳ್ಳ ಮನಸ್ಸು ಯಾವಾಗಲೋ ಸದ್ಗುರು ಸನ್ನಿಧಿಗೆ ಬಂದುಬಿಟ್ಟಿತ್ತು.

ಹಿಂದಿನ ಕಥೆಯಲ್ಲಿ ಹೇಳಿದಂತೆ ಶುಕ್ಕಪ್ಪನ ಮನೆಯಲ್ಲಿ ಗುರುನಾಥನನ್ನು ಮಂಟಪದಲ್ಲಿ ಕುಳ್ಳಿರಿಸಿ ಇನ್ನೂ ಪೂಜೆ ನಡೆದಿತ್ತು. ಆಗಲೇ ತಾಯೀಬಾಯಿ ಅಲ್ಲಿಗೆಬಂದು ಗುರುದರ್ಶನ ಪಡೆದದ್ದು. ಸದ್ಗುರುವನ್ನು ಕಾಣುತ್ತಲೇ ಅವಳ ಭಕ್ತಿಯುಕ್ಕಿತು. ಹೋದವಳೇ ಅವನ ಪಾದಕಮಲಗಳಿಗೆ ಮಣಿದಳು. ಭಕ್ತವತ್ಸಲನಾದ ಗುರು ಅಂಥ ಗಡಿಬಿಡಿಯಲ್ಲಿಯೂ ವಿಚಾರಿಸಿದನು.

'ಎಲ್ಲಿಂದ ಬಂದೆಯವ್ವ.'

'ಮುಂಬಯಿಂದ ದರ್ಶನ ಪಡೆಯಬೇಕೆಂದು ಬಂದಿದ್ದೇನೆ. ಅಲ್ಲಿರುವಾಗ ಕನಸಿನಲ್ಲಿ ಕಂಡೆ, ಪ್ರತ್ಯಕ್ಷ ಕಾಣಬೇಕೆಂದು ಅಪೇಕ್ಷೆ ಬಲವಾಯಿತು. ಹೊರಟುಬಂದೆ.'

'ಒಳ್ಳೇದು, ಕೆಲಹೊತ್ತು ವಿಶ್ರಾಂತಿ ಪಡೆ. ಕೆಲಹೊತ್ತು.'

ಬೇರೆ ವಿಶ್ರಾಂತಿ ಇನ್ನೇನು ಬೇಕಾಗಿತ್ತು ? ವಿಜೃಂಭಣೆಯಿಂದ ಜರಗುತ್ತಿರುವ ಗುರುನಾಥನ ಪೂಜೆಯನ್ನು ಕಾಣುತ್ತ ಪಂಚೇಂದ್ರಿಯಗಳೂ ತಣಿದವು. ಪೂಜಾ ಸಮಯಕ್ಕೆ ಇಲ್ಲಿಗೆ ಬಂದು ತಲುಪಿದ್ದೂ ಭಾಗ್ಯವೆಂದು ಮನಸ್ಸು ಮೋದಗೊಂಡಿತು.

ಪೂಜೆ ಮುಗಿಯಲು ತಾಯೀಬಾಯಿ ಮತ್ತು ಅವಳ ಜನರೊಡನೆ ಸದ್ಗುರು ಮಠಕ್ಕೆ ಬಂದನು. ಅಲ್ಲಿ ಕೆಲವುದಿನ ನಿಂತು ಭಕ್ತಿಯಿಂದ ಆ ಸಾಧ್ವಿ ಗುರುಸೇವೆ ಮಾಡಿದಳು. ಶ್ರೀಸನ್ನಿಧಿಯನ್ನು ಬಿಟ್ಟು ಹೋಗಬಾರದೆಂದು ಮನಸ್ಸು ಮರುಗಿದರೂ ಮನೆ ಜಗ್ಗಿತು, ಆಜ್ಞೆಪಡೆದು ಊರಿಗೆ ತೆರಳಿದಳು. ಅಂದಿನಿಂದ ಪ್ರತಿವರ್ಷ ಶಿವರಾತ್ರಿಯ ಉತ್ಸವಕ್ಕೆ ಬರುವ ಪರಿಪಾಠವನ್ನು ಅವಳಿಟ್ಟುಕೊಂಡಳು. ಅವಳಿಗೆ ಮೂವರು ಗಂಡುಮಕ್ಕಳು. ಎರಡನೆಯ ಮಗನ ಹೆಸರು ಪ್ರಭಾಕರ. ಅವನ ಮಗಳು ನಲಿನಿ, ಅವಳಿಗಿನ್ನೂ ಏಳು ವರ್ಷ ವಯಸ್ಸು. ಒಂದುಸಾರೆ ಈ ಪರಿವಾರದೊಡನೆ ಉತ್ಸವಕ್ಕೆ ಬಂದಿರಲು

ನಲಿನಿಗೆ ಜ್ವರಬಂದವು. ಉಳಿದವರು ಔಷಧೋಪಚಾರ ಮಾಡಿಸಬೇಕೆಂದು ಪ್ರಯತ್ನದಲ್ಲಿರಲು ತಾಯೀಬಾಯಿ ಹೇಳಿದಳು. 'ತೀರ್ಥದ ಹೊರತು ಬೇರೆ ಯಾವ ಔಷಧವೂ ಬೇಡ.' ಅದರಂತೆ ಮಗ-ಸೊಸೆ ಅವಳ ಮಾತಿನಂತೆ ನಡೆದರು. ಮೂರುದಿನಗಳಾದರೂ ಜ್ವರ ಕಡಿಮೆಯಾಗದೇ ಹಾಗೇ ಏರುತ್ತಿದ್ದವು. ಅಂದು ಮೂರನೇದಿನ, ಮಧ್ಯರಾತ್ರಿ ಮೀರಿತ್ತು. ಜ್ವರಬಂದು ಹುಡಿಗೆ ಒಂದೇ ಸವನೆ ನರಳುತ್ತಿತ್ತು. ಅತ್ತೆಯ ಮಾತಿಗೆ ಎದುರಾಡಲಾಗದೇ ಆ ಹುಡಿಗೆಯ ತಾಯಿ ಒಳಗೇ ಮರಗುತ್ತ ಮಗಳನ್ನೇ ನೋಡುತ್ತ ಕುಳಿತಿದ್ದಳು. ಇನ್ನೇನು ಮಗಳು ಸಾಯುವಳೆಂದು ಅವಳಿಗೆ ತೋರಿತು. ಕಣ್ಣೀರಿಟ್ಟಳು. ನಮಗೆ ಔಷಧಿ ಕೊಡಿಸುವ ಯೋಗ್ಯತೆ ಇದ್ದೂ ಹಿರಿಯರ ಮಾತು ನಂಬಿ ಬರಿ ತೀರ್ಥ ಹಾಕಿ ಮಗಳನ್ನು ಕಳೆದುಕೊಳ್ಳಬೇಕಾಯಿತಲ್ಲ ಎಂದು ಹಲುಬಿದಳು. ಕಡೆಗೆ ತಡೆಯಲಾರದೇ ಚೀರಿದಳು. 'ಅತ್ತೆಯವರೇ, ನಲಿನಿ ಕೈಬಿಟ್ಟಳು.'

ನಿಜಕ್ಕೂ ಆ ಮಾತು ತಾಯೀಬಾಯಿಗೆ ವಜ್ರಾಘಾತದಂತೆನಿಸಿತು.

'ಅಹಾ, ಈಗೇನು ಮಾಡಬೇಕು? ಗುರುನಾಥ ಮಲಗಿಕೊಂಡಿದ್ದಾನೆ, ಆವನನ್ನು ಎಚ್ಚರಿಸಿ ಹೇಗೆ ಈ ಮಾತನ್ನು ಹೇಳಲಿ. ನನ್ನ ಮಾತನ್ನು ಕೇಳಿ ಈ ಹುಡಿಗೆಯತಾಯ್ತಂದೆ ಔಷಧಕೊಡಿಸುವುದನ್ನು ಬಿಟ್ಟು ಗುರುವಿನ ಚರಣ ತೀರ್ಥ ಹಾಕುತ್ತ ಬಂದರು. ಗುರುವೇ ನಿನ್ನಭಕ್ತರಿಗೆ ನಾಶವಿಲ್ಲವೆಂದು ನಾನು ತಿಳಿದಿದ್ದೆನಲ್ಲ ನನ್ನ ನಂಬಿಗೆ ಸುಳ್ಳಾದುದೇ? ಈ ಪ್ರಸಂಗದಲ್ಲಿ ನಿನ್ನ ಭಕ್ತಳಾದ ನಾನು ಹಾಗು ಮಹಾತ್ಮನಾದ ನೀನು ಇಬ್ಬರೂ ಅಪಕೀರ್ತಿ ಹೊರಬೇಕಾಯಿತು.' ಎಂದು ಅನೇಕ ಬಗೆಯಿಂದ ಹಂಬಲಿಸ ತ್ತ ಕುಳಿತಳು. ಆ ಪ್ರಸಂಗದಲ್ಲಿ ಸಿದ್ಧ ಮಲಗಿಕೊಂಡದ್ದೂ ನಿಜ. ಆದರೆ ಅದು ನಿಮಿತ್ತ ಮಾತ್ರವೋ ಏನೋ? 'ಎಲ್ಲ ಪ್ರಾಣಿಗಳಿಗೆ ರಾತ್ರಿಎನಿಸಿ ಅವು ಮಲಗಿಕೊಂಡಿರುವಾಗ ಸಂಯಮಶೀಲನಾದ ಮಹಾತ್ಮ ಜಾಗರೂಕನಾಗಿರುವನು.' ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಥಟ್ಟನೆ ಸದ್ಗುರುನಾಥ ಮೇಲೆದ್ದು ಪಾದುಕೆಗಳನ್ನು ಮೆಟ್ಟಿ ಖಟ್-ಖಟ್ ಎಂದು ಸಪ್ಪಳ ಮಾಡುತ್ತ ಅಲ್ಲಿಗೆ ಬಂದನು. ತಾಯೀಬಾಯಿ ಅವನನ್ನು ಕಂಡು ಚಟ್ಟನೆದ್ದು ವಂದಿಸಿ 'ಗುರುನಾಥಾ, ಇಂಥ ಅಪರಾತ್ರಿಯಲ್ಲಿ ನಿನ್ನನ್ನು ಯಾರು ಎಬ್ಬಿಸಿದರು?' ಎನ್ನಲು ಸಿದ್ಧನು—ನಿನ್ನ ಕೂಗು ಕೇಳಿಸಿತು. ಎದ್ದುಬಂದೆ. ನಲಿನಿ ಎಲ್ಲಿದ್ದಾಳೆ? ತೋರಿಸು.' ಎಂದನು

ತಾಯೀಬಾಯಿ ಸಿದ್ಧನನ್ನು ಕರೆದೊಯ್ದು ನಲಿನಿಯನ್ನು ತೋರಿಸಿದಳು. ಅಮೃತಮಯವಾದ ದೃಷ್ಟಿಯಿಂದ ಸಿದ್ಧ ನಲಿನಿಯನ್ನು ನೋಡಿ– 'ಇನ್ನೇನೂ ಚಿಂತೆಯಿಲ್ಲ. ನಲಿನಿಗೆ ಆರೋಗ್ಯವಾಗಿ ಎದ್ದು ಕೂಡುತ್ತಾಳೆ.' ಎಂದು ಎಲ್ಲರನ್ನು ಸಮಾಧಾನಗೊಳಿಸಿದನು. ಕುತೂಹಲಿಗಳಾಗಿ ಎಲ್ಲರೂ ನೋಡುತ್ತಿರಲು ನಲಿನಿ ಮೆಲ್ಲನೆ ಎದ್ದು ಕುಳಿತಳು. ಆಗ ಅವರಿಗಾದ ಆನಂದವನ್ನು ಹೇಳಲಸಾಧ್ಯ. ಸಿದ್ಧನೂ ಆ ಭಕ್ತರ ಆನಂದದಲ್ಲಿ ಭಾಗಿಯಾಗಿ ಕೆಲಹೊತ್ತು ಕುಳಿತು ಒಳಗೆ ತೆರಳಿದನು. ಮುಂದೆ ಕೆಲದಿನ ನಿಂತು ತಾಯೀಬಾಯಿ ಮುಂಬಯಿಗೆ ಹೋದಳು.

ಒಂದುಸಾರೆ ಹುಬ್ಬಳ್ಳಿಯಿಂದ ಸಿದ್ಧನ ಕೆಲವು ಭಕ್ತರು ಮುಂಬಯಿ ಯಾತ್ರೆ ಕೈಕೊಂಡು ತಾಯೀಬಾಯಿಯ ಮನೆಗೆ ಬಂದಿಳಿದರು. ಅವಳು ಗುರುವಿನ ಕ್ಷೇಮಸಮಾಚಾರವನ್ನು ವಿಚಾರಿಸಿ ಯೋಗ್ಯರೀತಿಯಿಂದ ಅವರನ್ನು ಉಪಚರಿಸತೊಡಗಿದಳು. ನಿತ್ಯದಲ್ಲಿ ಭಜನೆ–ಸದ್ಗುರು ಗುಣಚಿಂತನ ಕಥನ ಇವುಗಳಲ್ಲಿ ಕೆಲದಿನ ಕಳೆದವು. ಅಂದು ಕಾರ್ತಿಕ ವದ್ಯ ಚತುರ್ದಶಿ. ಸಿದ್ಧನ ಭಕ್ತರು ತಮ್ಮ ಗುರುವಿನ ಭಕ್ತವಾತ್ಸಲ್ಯವನ್ನು ವರ್ಣಿಸುತ್ತಿದ್ದರು. ಕೇಳುತ್ತಿದ್ದಂತೆ ತಾಯೀಬಾಯಿ ಭಾವನಾಪರವಶಳಾದಳು. ಅವಳ ಕಣ್ಣೆದುರಿಗೆ ಸದ್ಗುರುಮೂರ್ತಿ ಪ್ರತ್ಯಕ್ಷದಂತೆ ಕಾಣಿಸಿತು. ಅವಳು ಆ ಮೂರ್ತಿಗೆ ಕೈಜೋಡಿಸಿ– 'ಗುರು ನನ್ನನ್ನು ಕರೆಯುತ್ತಿದ್ದಾನೆ. ಹೋಗುತ್ತೇನೆ.' ಎಂದವಳೇ ಎದ್ದು 'ಶಿವಾಯನಮಃ' ಎಂದು ನಾಮವನ್ನುಚ್ಚರಿಸುತ್ತ ಮುಂದೆ ಸಾಗಿದಳು. ಇದೇನಾಶ್ಚರ್ಯವೆಂದು ಭಕ್ತರು ನೋಡುತ್ತಿದ್ದರು. ಎಲ್ಲರಿಗೂ ಪರಮೋಜ್ವಲ ಪ್ರಕಾಶ ಕಂಡಂತಾಯಿತು. ಅದು ಉಜ್ವಲವಿದ್ದರೂ ಶಾಂತವಾಗಿತ್ತು. ಕಣ್ಣಿಗೆ ಹಿತಕರವಾಗಿತ್ತು. ಆ ಪ್ರಕಾಶದಲ್ಲಿ ತಾಯಿ ಒಂದುಗೂಡಿದಳು. ಆಕೆಯ ದೇಹ ಕಾಣದಂತಾಯಿತು. ಕ್ಷಣಾರ್ಧದಲ್ಲಿ ಇಷ್ಟೆಲ್ಲ ನಡೆದು ಒಮ್ಮೆಲೇ ಪ್ರಕಾಶವಡಗಿತು. ಅಲ್ಲಿರುವವರೆಲ್ಲ ದೇಹಭಾಗವುಳ್ಳರಾಗಿ ನೋಡಿದರು. ಗತಪ್ರಾಣವಾದ ತಾಯೀಬಾಯಿಯ ದೇಹ ಬಿದ್ದುಕೊಂಡಿತ್ತು.

ತಾಯೀಬಾಯಿಯ ಪ್ರಾಣಜ್ಯೋತಿ ಪ್ರಕಾಶಾತ್ಮನಾದ ಸದ್ಗುರುನಾಥನಲ್ಲಿ ಲೀನವಾಯಿತೆಂಬ ರಹಸ್ಯವನ್ನು ಸಿದ್ಧನ ಭಕ್ತರು ತಿಳಿದು ಧನ್ಯವೆಂದು

ಕೊಂಡರು. ಆದರೆ ಇದು ಅವಳ ಮನೆಯ ಸಾಮಾನ್ಯ ಜನರಿಗೆ ಹೇಗೆ ತಿಳಿಯಬೇಕು? ಅವರು ಇದೇನಾಯಿತೆಂದು ಅಳಲಾರಂಭಿಸಿದರು.

ಆದರೆ 'ಶರಣರ ಸಾವು ಮರಣದಲ್ಲಿ ನೋಡು' ಎನ್ನುವರಲ್ಲವೇ?

——————

೪೧

ಸರ್ಪಾಣಾಂ ಚ ಖಲಾನಾಂ ಚ ಸರ್ವೇಷಾಂ ದುಷ್ಟಚೇತ-
ಸಾಮ್ ।
ಅಭಿಪ್ರಾಯಂ ನ ಸಿದ್ಧ್ಯಂತಿ ತೇನೇದಂ ವರ್ತತೇ ಜಗತ್ ॥

ನೀತಿ

ಹಾವುಗಳು, ದುಷ್ಕರು, ಅಷ್ಟೇ ಏಕೆ? ಬಹುತರವಾಗಿ ಎಲ್ಲ ದುಷ್ಟ ಪ್ರಾಣಿಗಳು. ಇವುಗಳ ಅಪೇಕ್ಷೆ ಪೂರ್ಣವಾಗುವುದಿಲ್ಲ. ಹೀಗಿರುವದರಿಂದಲೇ ಇದುವರೆಗೆ ಜಗತ್ತು ಬದುಕಿದೆ.

ಪ್ರಾರಬ್ಧ ಕರ್ಮಕ್ಕನುಸಾರವಾಗಿ ಮನುಷ್ಯನಿಗೆ ಸುಖ-ದುಃಖಗಳು ಬರುವವೆಂದು ಶಾಸ್ತ್ರ ಹೇಳುತ್ತದೆ. ಇಷ್ಟನ್ನೇ ನಾವು ತಿಳಿದುಬಿಟ್ಟರೆ ಮನುಷ್ಯ ಕರ್ಮದ ಆಳಾದಂತಾಗಬೇಕಾಯಿತು. ಮನುಷ್ಯ ಪ್ರಯತ್ನ ಶೂನ್ಯವಾಗಿ ಉಡಿಯೊಡ್ಡಿ ಕೂಡಬೇಕು. ಪ್ರಾರಬ್ಧ ಸುಖವನ್ನೋ ದುಃಖವನ್ನೋ ನೀಡಬೇಕು. ಇವನು ಅದನ್ನು ಉಣಬೇಕು. ಇಷ್ಟೆಯೇ? ಮನುಷ್ಯನ ಬದುಕು. ಅಲ್ಲವೆಂದರೆ ತಿಳಿದವರಭಿಪ್ರಾಯ. ಶ್ರದ್ಧಾ-ಭಕ್ತಿ-ಭಗವಂತನ ಆರಾಧನೆ. ಸದ್ಗುರುವಿನ ಆಶ್ರಯ-ವಿವೇಕಯುಕ್ತವಾದ ಆಚರಣೆ ಇವುಗಳಿಂದ ಪ್ರಾರಬ್ಧ ಛಂದ ತೀಕ್ಷ್ಣತೆಯನ್ನು ತಗ್ಗಿಸಿಕೊಳ್ಳಬಹುದು. ತೀವ್ರತರವಾದ ಉಪಾಸನೆ ಮೊದಲಾದವುಗಳಿಂದ ಪ್ರಾರಬ್ಧವನ್ನು ಗೆಲ್ಲಬಹುದು. ಮಾರ್ಕಾಂಡೇಯನಿಗೆ ಮೊದಲೇ ಅಲ್ಪಾಯುಷ್ಯವೆಂದು ನಿರ್ಣಯವಾಗಿತ್ತು. ಅವನು ಭಗವಂತನ ಉಪಾಸನೆಯಿಂದ ಕಲ್ಪಕಾಲ್ಪಗಳವರೆಗೂ ಜೀವಿಸುವ ದೀರ್ಘಾಯುಷ್ಯ ಪಡೆದನಲ್ಲವೇ?

ಅದಕ್ಕಾಗಿಯೇ ಶಾಸ್ತ್ರವೇತ್ತರು ಹೇಳುತ್ತಾರೆ. ದೈವವು ಕುಳಿತ ಮನುಷ್ಯನೊಡನೆ ಕೂಡುತ್ತದೆ, ಏಳುವವನೊಡನೆ ಏಳುತ್ತದೆ ಎಂದು: ಇದರರ್ಥವಿಷ್ಟೇ, ಪ್ರಯತ್ನಶೀಲನಾದ ಮನುಷ್ಯನಿಗೆ ದೈವವು ಅನುಕೂಲವಾಗುತ್ತದೆ. ಆ ಪ್ರಯತ್ನಗಳು ಅನೇಕ ಬಗೆ. ಅವುಗಳಲ್ಲಿ ಮಹಾತ್ಮರ ದರ್ಶನ-ಸ್ಮರಣಗಳೂ ಬರುತ್ತವೆ.

ಸಾಮಾನ್ಯರಿಗೆ ಇಲ್ಲಿಯ ಸುಖ-ಸಾಮುಗ್ರಿಗಳಲ್ಲಿಯೇ ಹೆಚ್ಚು ಆಸ್ಥೆ. ಇಲ್ಲದುದನ್ನು ಪಡೆಯಬೇಕೆಂದು ಕೆಲವರ ಆಶೆಯಾಗಿದ್ದರೆ ಇದ್ದುದು ಹೆಚ್ಚಾಗಬೇಕೆಂದು ಕೆಲವರ ಆಶೆ. ಒಟ್ಟು ಎಲ್ಲರೂ ಮಹಾತ್ಮರ ಭಕ್ತರು. ಅವರಿಂದಲೇ ಮಠ-ಮಾನ್ಯ-ಜಾತ್ರೆ-ಉತ್ಸವ ಇವರ ಅಲ್ಪತನ. ಇವರ ಅಗಣಿತ ಆಶೆ ಮಹಾತ್ಮರಿಗೆ ಗೊತ್ತಿರುವದಿಲ್ಲವೆಂದೇನೂ ಅಲ್ಲ. ಗೊತ್ತಿದ್ದರೂ ಜನಪ್ರಗತಿ ಕುಂಠಿಸಿ ನಿಂತಲ್ಲಿಂದ ಅವರನ್ನು ಮುಂದೆ ಕರೆದು ಶಾಶ್ವತದ ಕಡೆಗೆ ಕರೆದೊಯ್ಯಬೇಕೆಂದು ಅವರು ಯತ್ನಿಸುತ್ತಾರೆ. ಯಾಕಂದರೆ ಒಂದುದಿನ-ಅದು ಎಂದಾದರೂ ಬರಲಿ- ಎಲ್ಲರೂ ತನ್ನ ಕಡೆಗೆ ಬರಬೇಕೆನ್ನುವುದು ಪರಮಾತ್ಮನ ಯೋಜನೆ. ಅವನ ಪ್ರತಿನಿಧಿಗಳೇ ಮಹಾತ್ಮರು. ಅವನಂತೆಯೇ ಇವರದೂ ಕಾರ್ಯಪದ್ಧತಿ.

ಸಿದ್ಧಾರೂಢಸ್ವಾಮಿಯ ಮಠದಲ್ಲಿ ನಡೆಯುತ್ತ ಬಂದ ಶಿವರಾತ್ರಿಯ ಉತ್ಸವಕ್ಕೆ ಅನೇಕ ದೂರದೂರದ ಜನರು ಬರುತ್ತಿದ್ದರೆಂದ ಮೇಲೆ ಸಮೀಪದ ಗ್ರಾಮ-ಹಳ್ಳಿಗಳ ಜನ ನಿಲ್ಲಬಹುದೇ ? ಹೊಸ ಅರಿವೆಯುಟ್ಟು-ತೊಟ್ಟು ಅಲಂಕಾರಗಳನ್ನಿಟ್ಟು ಬಂಡಿ ಹೂಡಿಕೊಂಡು ಅಪ್ಪನ ಜಾತ್ರೆಗೆ ಬರುವದೆಂದರೆ ಎಲ್ಲರಿಗೂ ಅದೊಂದು ಹಿಗ್ಗು. ಹಾಗೆ ಜಾತ್ರೆಮಾಡಿ ಬರುವುದರಿಂದ ಜೀವನದಲ್ಲೊಂದು ಹೊಸತನ. ಮುಂದೆ ಜಾತ್ರೆ ಬರುವುದಿದೆ ಎಂಬ ನಿರೀಕ್ಷೆಯಲ್ಲಿ ಮನಸ್ಸಿಗೊಂದು ಸಮಾಧಾನ.

ಒಂದುಸಾರೆ ಕೆಲವು ಹಳ್ಳಿಯ ಭಕ್ತರು ನಾಲ್ಕು ಬಂಡಿ ಹೂಡಿಕೊಂಡು ಜಾತ್ರೆಗೆ ಹೊರಟರು. ಅವರಲ್ಲಿ ಹೆಂಗಸರು-ಹುಡುಗರ ಸಂಖ್ಯೆಯೇ ಹೆಚ್ಚು. ಬಂಡಿ ಹೊಡೆಯುವವರಷ್ಟೇ ಗಂಡಸರು. ಪದ್ಧತಿಯಂತೆ ಹೆಂಗಸರು ಆಭರಣಗಳನ್ನಿಟ್ಟು ಬಣ್ಣ-ಬಣ್ಣದ ವಸ್ತ್ರಗಳನ್ನುಟ್ಟು ಸಡಗರದಿಂದ ಸಾಗಿದ್ದರು. ಸಂಜೆಯಾಗುತ್ತ ಬಂದಿತ್ತು, ಆಗಲೇ ಕಾಲ್ನಡಿಗೆಯವರು ತಮ್ಮ ಸ್ಥಳ ಕಂಡಿದ್ದರು, ದಾರಿಯಲ್ಲಿ ಇವಿಷ್ಟೇ ಬಂಡಿ, ಕತ್ತಲಾಯಿತು. ಮಗ್ಗಲಿನ ಕಾಡು-ಕಗ್ಗಂಟೆಯ

ಪೊದೆಯಿಂದ ಹತ್ತಿಪ್ಪತ್ತು ದಾರಿಬಡಕರು ಭಯಾನಕವಾಗಿ ಕೂಗುತ್ತ ಬಂದು ಗಾಡಿಗಳನ್ನು ತರುಬಿದರು. ಅವರು ಕೈಗಳಲ್ಲಿ ಹಿಡಿದ ಹರಿತವಾದ ಆಯುಧ ಚೀರುವ ಆವೇಶ ಎಂಥವರಿಗೂ ಎದೆಯೊಡಿಸುವಂತಿದ್ದವು. ಈ ಗಾಡಿಗಳ ಜತೆಗಿದ್ದ ಗಂಡಸರು ನಾಲ್ಕೈಜನ. ಕಳ್ಳರು ಬಂದಕೂಡಲೇ ಅವರನ್ನೆಳೆದು ಗಿಡಗಳಿಗೆ ಕಟ್ಟಿಹಾಕಿದರು. ಉಳಿದವರೆಲ್ಲ ಹೆಂಗಸರು, ಹುಡುಗರು, ಒಂದೇ ಸವನೆ ಅಳುತ್ತ ಸದ್ಗುರುನಾಥನನ್ನು ಕೂಗಲಾರಂಭಿಸಿದರು. ಆ ಕತ್ತಲೆಯಲ್ಲಿ ಕೆಲವರು ತಮ್ಮ ಆಭರಣಗಳನ್ನು ಬಂಡಿಯ ಬುಡದ ಹುಲ್ಲಿನಲ್ಲಿ ಮುಚ್ಚಿಟ್ಟರು. ಕೆಲವರು ತಾವು ಇಟ್ಟುಕೊಂಡು ಹೀಗೆ ಬರಬಾರದಿತ್ತೆಂದು ಹಣೆಗಟ್ಟಿಸಿಕೊಂಡರು. ಕೆಲವರು ಸಿದ್ಧ ಮಾಡಿಸಿದುದಾಗಲಿ ಎಂದು ಸ್ವಸ್ಥ ಕುಳಿತು ಬಿಟ್ಟರು. ಗಂಡಸರಂತೂ ಬಂಧಿತರಾದುದರಿಂದ ನಿರುಪಾಯರಾಗಿ 'ಸದ್ಗುರು ನಾಥನೇ ನಮ್ಮನ್ನು ಸಂರಕ್ಷಿಸಬೇಕು.' ಎನ್ನುತ್ತ ದೀನವದನರಾದರು. ಬೇರೆ ಕೆಲವರು 'ಗುರುವೇ ಈ ಪ್ರಸಂಗದಲ್ಲಿ ನಮ್ಮನ್ನು ಉಳಿಸಿದೆಯಾದರೆ ಜೀವವಿರುವವರೆಗೆ ನಿನ್ನ ಜಾತ್ರೆಗೆ ಬಂದು ಸೇವೆ ಮಾಡುತ್ತೇವೆ' ಎಂದು ಹರಿಕೆ ಹೊತ್ತರು. ಒಟ್ಟನಲ್ಲಿ ನೋಡಿದರೆ ಆಗ ಎಲ್ಲರೂ ಸಿದ್ಧನೇ ಉಳಿಸಿದರೆ ಉಳಿಸಬೇಕು. ಎಂದು ನಂಬಿದರು. ಚೀರುವ-ಅಳುವ ಧ್ವನಿಯಂತೂ ಈ ಪ್ರಶಾಂತ ಸಮಯದಲ್ಲಿ ರೌದ್ರತೆಯನ್ನು ಹೆಚ್ಚಿಸಿತ್ತು. ಕಳ್ಳರು ಬಂಡಿಏರಿ 'ಹಾಂ ಇದ್ದ ವಸ್ತುಗಳನ್ನು ಚೂರು-ಚಾರು ಬಿಡದೆ ಇತ್ತ ಕೊಡಿರಿ. ಉಳಿಸಿಕೊಂಡರೆ ಸತ್ತೀರಿ.' ಎಂದು ಗರ್ಜಿಸುತ್ತಿದ್ದರು.

ಅಷ್ಟರಲ್ಲಿ ರೋಂಯ್ ಎಂದು ಗಾಳಿಬೀಸಿ ಮೇಘ ಗರ್ಜನೆಯಂತೆ ಧ್ವನಿ ಕೇಳಿಸಿತು. ಕೋಲ್ಮಿಂಚು ಹೊಡೆದಂತೆ ಬೆಳಕು ಬಿದ್ದು ಕಣ್ಣು ಕುಕ್ಕಿಸಿತು. ಕಳ್ಳರು ಸಹಿತ ಎಲ್ಲರು ಘಾಬರಿಗೊಂಡು ಅತ್ತಿತ್ತ ನೋಡುತಿರಲು ಮೆಲ್ಲನೆ ಪ್ರಕಾಶವು ಮಂದವಾಗಿ ಆ ಬೆಳಕಿನಲ್ಲಿ ಟೆಂಗಿನ ಗಿಡದಷ್ಟು ಎತ್ತರವುಳ್ಳ ಮನುಷ್ಯನೊಬ್ಬನು ಒಂದು ದಿಕ್ಕಿನಿಂದ ಇವರತ್ತ ಬರುತ್ತಿರುವುದು ಕಂಡಿತು. ಆಲದ ಗಿಡದ ಬೀಳಲುಗಳಂತೆ ಅವನ ಕೂದಲು ಜಡೆಗಟ್ಟಿ ಲಂಬಾಯಮಾನವಾಗಿ ಜೋಲುತ್ತಿದ್ದವು. ರೈಲುಗಾಡಿಯ ಮುಂದಿನ ದೀಪದಂತೆ ಕಣ್ಣುಗಳು ಹೊಳೆಯುತ್ತಿದ್ದವು. ಸಿಂಹದ ಆಯಾಲದಂತೆ ಗಡ್ಡ-ಮೀಸೆಗಳು ಭಯ ಹುಟ್ಟಿಸುತ್ತಿದ್ದವು. ಅವನು ಪುನಃ ಪುನಃ ನಾಲಿಗೆ ಹೊರಚಾಚಿ ಯಾತರದೋ ರುಚಿಗೆ

ಮನಸೋತವನಂತೆ ಕಾಣುತ್ತಿದ್ದನು. ತುಟಿಮೀರಿ ಹೊರಚಾಚಿದ ಅವನ ಹಲ್ಲುಗಳು ರೌದ್ರತೆಯನ್ನು ಇಮ್ಮಡಿಗೊಳಿಸಿದ್ದವು. ಯಾವನೋ ಮಹಾ ರಾಕ್ಷಸನು ತಮ್ಮನ್ನೆಲ್ಲ ನುಂಗಲು ಬಂದನೆಂದು ಕೈಕಾಲುಬಿಟ್ಟರು. ಆದರೆ ಬಂಡಿಯಲ್ಲಿರುವವರಿಗೆ ಅವನು ಕಂಡ ರೀತಿಯೇ ಬೇರೆ. ತಮ್ಮನ್ನು ರಕ್ಷಿಸಲು ಸಿದ್ಧಾರೂಢ ಸ್ವಾಮಿಯೇ ಸ್ವತಃ ಬಂದನೆಂದು ಅವರು ತಿಳಿದು ಸದ್ಗುರುವಿನ ಜಯು ಜಯಕಾರ ಮಾಡಿದರು. ಕಳ್ಳರು ಕಂಗೆಟ್ಟರು. ಮತಿ ಮಸಣಿತು. ಧೈರ್ಯವಳಿಯಿತು. ಆವೇಶ ಕುಗ್ಗಿತು. ಶಕ್ತಿ ಇಲ್ಲದಂತಾಗಿ ಕೈಯಲ್ಲಿ ಹಿಡಿದ ಆಯುಧಗಳು ತಂತಾವೇ ಕಳಚಿ ಬಿದ್ದವು. ಓಡಿಹೋಗಿ ಜೀವವನ್ನಾದರೂ ಉಳಿಸಿಕೊಳ್ಳೋಣ ಇಲ್ಲಿದ್ದರೆ ಉಳಿಯಲಾರೆವು. ಎಂದುಕೊಂಡು ಓಡಬೇ ಕೆಂದರೆ ಕಾಲು ಕೀಳದಂತಾಗಿದ್ದವು. ಒಂದೆರಡು ಹೆಜ್ಜೆ ಮುಂದಿಟ್ಟರೆ ಸಾಕು. ಮುಗ್ಗರಿಸಿ ಬೀಳುವಂತಾಗಿತ್ತು. ಅಷ್ಟರಲ್ಲಿ ಆ ರೌದ್ರ ಪುರುಷ ಬಂಡಿಗಳ ಬಳಿಗೆ ಬಂದೇ ಬಿಟ್ಟನು. ಇಲ್ಲಿ ಇಬ್ಬರು ಬಂಡಿಯಲ್ಲೇರಿ ನಿಂತವರು ಇಳಿಯ ಲಾಗದೇ ಅಲ್ಲಿಯೇ ನಿಂತಿದ್ದರು. ಆ ಪುರುಷ ಮೊದಲು ಅವರನ್ನೆಳೆದು ಒಂದೇ ಏಟಿಗೆ ತೂರಿಬಿಟ್ಟನು. ಅವರಿಬ್ಬರು ಅಲ್ಲಿರುವ ಒಂದು ವೃಕ್ಷದ ಮೇಲೆ ಬಿದ್ದು ಮೇಲೆಯೇ ಒದ್ದಾಡತೊಡಗಿದರು. ಇದನ್ನು ಕಂಡ ನಂತರ ಕಳ್ಳರು ಸಂಪೂರ್ಣ ಶರಣಾಗತರಾಗಿ ತಮ್ಮ ಆರಾಧ್ಯ ದೇವತೆಯಾದ ಕಾಳಿಯನ್ನು ನೆನೆಯತೊಡಗಿದರು. 'ಜಗದಂಬೆ ಇದೊಂದು ಪ್ರಸಂಗದಿಂದ ಉಳಿಸು. ನಾವು ನಿನ್ನ ಗುಡಿಕಟ್ಟಿ ದೊಡ್ಡ ಉತ್ಸವ ಮಾಡುತ್ತೇವೆ. ನಿತ್ಯ ಪೂಜಾದಿಗಳು ನಡೆಯುವಂತೆ ವ್ಯವಸ್ಥೆ ಮಾಡುತ್ತೇವೆ. ನಿನಗೆ ಮುತ್ತು-ರತ್ನಗಳ ಆಭರಣವಿ ಡಿಸುತ್ತೇವೆ.' ಇತ್ಯಾದಿ ಬೇಡಿಕೊಳ್ಳಲಾರಂಭಿಸಲು ಆ ರೌದ್ರ ಪುರುಷ 'ಎಲೈ ಅಧಮರಾದ ಕಳ್ಳರಿರಾ, ನೀವು ಭದ್ರಕಾಳಿಯನ್ನು ಪ್ರಾರ್ಥನೆ ಮಾಡುತ್ತಿರುವಿ ರೆಂಬುದನ್ನು ನಾನು ತಿಳಿದಿದ್ದೇನೆ. ಆದರೆ ಇಂಥ ಅನ್ಯಾಯ ಕಾರ್ಯಕ್ಕೆ ಕಾಳಿ ಎಂದಿಗೂ ಸಹಾಯ ಮಾಡಲಾರಳು. ಈ ಮಾತು ನಿಮಗೆ ವಿಶ್ವಾಸವೆನಿಸದಿ ದ್ದರೆ ಇದೋ ನಿಮ್ಮ ಶಾಸನ ಮಾಡಲು ನನಗೆ ಸಹಾಯಕಳಾಗಿ ಭದ್ರಕಾಳಿ ನನ್ನ ಹಿಂದೆಯೇ ಬಂದಿದ್ದಾಳೆ. ನೋಡಿ ಎಂದನು.

ಕಳ್ಳರು ಕಾಳಿಗೆ ಕೈಮುಗಿಯುತ್ತ 'ಜಗದಂಬೇ ರಕ್ಷಿಸು ರಕ್ಷಿಸು ನಾವು ನಿನ್ನ ದಾಸರು.' ಎಂದು ಬೇಡಿಕೊಳ್ಳಲು ಭದ್ರಕಾಳಿ ಕೋಪಾವೇಶದಿಂದ

'ಚಾಂಡಾಲರೇ, ನೀವು ಮಾಡುವ ಪಾಪಕೃತಿಗಳಿಗೆಲ್ಲ ನಾನು ಸಹಾಯ ಮಾಡಲಾರೆನು. ಸುಮ್ಮನೇ ನೀವು ನನ್ನ ಹೆಸರನ್ನು ಲೋಕದಲ್ಲಿ ಹರಲಿ ಮಾಡುತ್ತೀರಿ. ಈಗ ನಿಮಗೆ ಶಾಸನವಾಗುವುದೇ ಯೋಗ್ಯ.' ಎಂದಳು. ನಿರಾಶೆಗೊಂಡ ಕಳ್ಳರು ಬಹುಬಗೆಯಿಂದ ಪ್ರಾರ್ಥಿಸಲು ಕೊನೆಗೆ ಕಾಳಿ- 'ಹಾಗಾದರೆ ನನ್ನಮಾತು ಕೇಳಿರಿ. ಈಗ ಹೇಗೂ ನಿಮಗೆ ನಿಮ್ಮ ಕೃತಿಗಳ ಬಗೆಗೆ ಪಶ್ಚಾತ್ತಾಪವಾಗಿದೆ. ಇದೇ ಸಮಯದಲ್ಲಿ ಸದ್ಗುರು ಸಿದ್ಧಾರೂಢ ಸ್ವಾಮಿಗೆ ಶರಣು ಹೋಗಿ ನಡೆದ ವಿಷಯವನ್ನೆಲ್ಲ ತಿಳಿಸಿರಿ. ಅಂದರೆ ಬದುಕುವಿರಿ. ಇಲ್ಲವಾದರೆ ಈಗಿಂದೀಗ ಇಲ್ಲಿಯೇ ಪ್ರಾಣಕಳೆದುಕೊಳ್ಳುವಿರಿ.' ಎಂದು ನುಡಿದಳು. ಕಳ್ಳರು ಆ ಮಾತಿಗೆ ಒಪ್ಪಿ ಹುಬ್ಬಳ್ಳಿಯ ಕಡೆಗೆ ಮುಖ ತಿರುಗಿಸಿ ದಾರಿ ಹಿಡಿದರು. ಬಹುತೇಕವಾಗಿ ಅವರು ಮೌನವಾಗಿಯೇ ಮಾರ್ಗ ಕ್ರಮಿಸುತ್ತಿದ್ದರು. ಅದರಲ್ಲಿ ಒಬ್ಬನೆಂದನು- 'ನಮಗೆ ದೇವರು-ದಿಂಡರು. ಗುರು ಇವರ ಸಂಗತಿ ಬಗೆಹರಿಯುವದಿಲ್ಲ. ಪ್ರಾಣಾಂತಕ ಪ್ರಸಂಗ ಬಂದುದರಿಂದ ದೇವಿಯ ಮಾತಿಗೊಪ್ಪಿ ಸಿದ್ಧನ ಕಡೆಗೆ ಹೊರಟೆವು. ಈಗಂತೂ ಯಾವ ಸಂಕಟವೂ ನಮಗಿಲ್ಲ. ಇಲ್ಲಿಂದ ಓಡಿಹೋಗಿಬಿಡಬಾರದೇಕೆ ?'

ಬಹಳ ಜನರ ಮನಸ್ಸಿನಲ್ಲಿಯೂ ಇದೇ ವಿಚಾರ ಮೂಡಿತ್ತು. ಅಪ್ಪಿ ತಪ್ಪಿ ಕೂಡ ಅವರು ಸದ್ವಿಚಾರ-ಸತ್ಕಾರ್ಯದ ಕಡೆಗೆ ಮನಹಾಯಿಸಿದವರಲ್ಲ. ಈಗ ಯಾವುದೋ ಬಲಾತ್ಕಾರಕ್ಕೆ ಒಳಗಾಗಿ ಒಪ್ಪಿಕೊಂಡಿದ್ದರು. ಆ ಬಲಾತ್ಕಾರದ ಭಯ ತಪ್ಪಿತೆನಿಸಿದ ಕೂಡಲೇ ಸಹಜ ಸ್ವಭಾವ ಪ್ರಕಟವಾದರೆ ಆಶ್ಚರ್ಯವೇನು ? ಸಿದ್ಧನ ಕಡೆಗೆ ಯಾರೂ ಹೋಗುವಂತಿಲ್ಲ, ಎಂಬ ನಿರ್ಧಾರಕ್ಕೆ ಬಂದರು. ಅಷ್ಟರಲ್ಲಿ ಯಾರೋ ಒಬ್ಬರು ಹಿಂದಿರುಗಿ ನೋಡಿದನು. ಆ ರೌದ್ರಪುರುಷ ಬೆನ್ನುಹತ್ತಿ ಬರುತಿರುವನು. ಅವನ ಸೂಚನೆಯಂತೆ ಎಲ್ಲರೂ ಆ ರೂಪವನ್ನು ಕಂಡರು. ಉಸಿರು ಬಿಡದೇ ಸದ್ಗುರುವಿನ ಬಳಿಗೆ ಬಂದರು. ತಾವು ಕಂಡು ಹೆದರಿದ ರೌದ್ರಪುರುಷನ ಸಣ್ಣ ಆಕೃತಿಯೇ ಇಲ್ಲಿ ಸದ್ಗುರುನಾಥನಾಗಿದ್ದನು. ಅಲ್ಲಿ ರೌದ್ರತೆ, ಇಲ್ಲಿ ಶಾಂತಿ. ಅಲ್ಲಿ ಕ್ರೂರತ್ವ ಇಲ್ಲಿ ವಾತ್ಸಲ್ಯ. ಹೇಗೆ ಇವನ ಮುಂದೆ ಹೋಗಿನಿಂತು ನಮ್ಮ ಕೃತಿಗಳನ್ನು ಹೇಳೋಣ. ಎಂದು ಅನುಮಾನಿಸುತ್ತ ಹಿಂದೆ ನೋಡಲು ರೌದ್ರಪುರುಷ ಕಾಯುತ್ತ ಬೆನ್ನಿಗಿದ್ದೇಬಿಟ್ಟಿದ್ದಾನೆ. ಸದ್ಗುರುವಿಗೆ ಶರಣಾಗತರಾಗದ ವಿನಃ

ಇವನು ಬಿಡಲಾರನೆಂದು ಭಾವಿಸಿ ಮುಂದೆಹೋಗಿ ಸದ್ಗುರುವಿಗೆ ವಂದಿಸಿ ಕಾಪಾಡಬೇಕೆಂದು ಕೈಮುಗಿದು ನಿಂತರು. ಆಗ ಸದ್ಗುರುನಾಥ ಯಾಕೆ ನಡುಗುತ್ತಿರುವಿರಲ್ಲ. ಏನು ಭಯವುಂಟಾಗಿದೆ? ಎನ್ನಲು ನಡೆದ ಸಂಗತಿಯನ್ನೆಲ್ಲ ನಿವೇದಿಸಿದರು. ಅವರ ಮಾತು ಕೇಳಿ ನಕ್ಕು ಸಿದ್ಧ ಹುಚ್ಚಪ್ಪಗಳಿರಾ ಎಲ್ಲಿಯ ಭೂತ? ಏನು ಮಾತು? ಏನು ಕಥೆ ಅದೆಲ್ಲ ಭಯ ಬಿಟ್ಟುಬಿಡಿರಿ. ನಿಮ್ಮ ದುಷ್ಕರ್ಮದ ಭಯಂಕರ ರೂಪವನ್ನು ಕಂಡು ನೀವು ಭಯಗೊಂಡಿರಿ. ಇನ್ನಾದರೂ ಸತ್ಕರ್ಮಮಾಡುವ ಸಂಕಲ್ಪ ಮಾಡಿದರೆ ನಿಮಗೆ ಬೆನ್ನುಹತ್ತಿದ ಆ ರೂಪ ಅಡಗಿಹೋಗುವುದು ಎಂದು ಹೇಳಿದನು.

ಕಳ್ಳರು ನಿರ್ವಾಹವಿಲ್ಲದೇ ಸತ್ಕರ್ಮ ಮಾಡುತ್ತೇವೆಂದು ಸಂಕಲ್ಪ ಮಾಡಿದರು. ಅವರಿಗೆ ಸ್ವಧರ್ಮದ ಮಹತ್ವವನ್ನೂ, ಅದರ ಫಲವನ್ನೂ ಉಪದೇಶಿಸಿ ಸದ್ಗುರು ಅಪ್ಪಣೆ ಕೊಟ್ಟನು. ಅಂದಿನಿಂದ ಕಳ್ಳರು ತಮ್ಮ ಕಸಬನ್ನು ಬಿಟ್ಟು ಎಲ್ಲರೂ ಸದ್ಗುರುವಿನ ದಾಸಾನುದಾಸರಾದರು. ಇತ್ತ ಕಳ್ಳರು ತಮ್ಮನ್ನು ಬಿಟ್ಟುಹೋದುದರಿಂದ ಜಾತ್ರೆಗೆ ಹೊರಟ ಜನ ಸದ್ಗುರುವಿನ ಜಯಜಯಕಾರವನ್ನು ಮಾಡಿ ತಮ್ಮ ರಕ್ಷಣೆಗೆ ಗುರುನಾಥನಿದ್ದಾನೆ, ಎಂದು ಧೈರ್ಯದಿಂದ ಕೆಳಗಿಳಿದು ಗಂಡಸರನ್ನು ಬಿಚ್ಚಿದರು. ಭಯ-ಭಕ್ತಿಗಳಿಂದ ಸದ್ಗುರು ಚರಿತ್ರವನ್ನು ನೆನೆಯುತ್ತ ಮತ್ತೆ ಗಾಡಿ ಹೂಡಿ ಹುಬ್ಬಳ್ಳಿಗೆ ಬಂದು ತಲುಪಿದರು. ದರ್ಶನಕ್ಕೆ ಬಂದಾಗ ದಾರಿಯಲ್ಲಿ ನಡೆದ ಎಲ್ಲ ವೃತ್ತಾಂತವನ್ನು ಗುರುನಾಥನಿಗೆ ಹೇಳಿದರು. ನಗುತ್ತ ಅವರ ಮಾತುಗಳನ್ನಾಲಿಸಿ ಸಿದ್ಧ ಮನುಷ್ಯ ಯಾವಾಗಲೂ ಸತ್ಕರ್ಮ ಮಾಡುತ್ತಿರಬೇಕು. ಹಾಗೆಂದು ತನಗೆ ನೀಗದಂಥ ಕಾರ್ಯಕ್ಕೆ ಕೈಹಾಕಬಾರದು. ಸಣ್ಣ ಸತ್ಕರ್ಮವು ಕೂಡ ದೊಡ್ಡ ಭಯದಿಂದ ಕಾಪಾಡುವದೆಂದು ಶಾಸ್ತ್ರ ಹೇಳುತ್ತದೆ. ಶುದ್ಧಭಾವದಿಂದ ನೀವು ಜಾತ್ರೆಗೆ ಹೊರಟದ್ದಿರಿ. ಇದರಲ್ಲಿ ಅನ್ಯಾಯವಾಗಲೀ, ಪಾಪವಾಗಲೀ ಯಾವುದೂ ಇರಲಿಲ್ಲ. ಹೀಗಿರಲು ಅಕಸ್ಮಾತ್ತಾಗಿ ನಿಮಗೆ ಉಪದ್ರವವುಂಟಾಯಿತು. ಆದರೆ ನಿಮ್ಮ ಭಾವಬಲದಿಂದ ಸುಖವಾಗಿ ಪಾರಾದಿರಿ. ಅಲ್ಲದೇ ನಿಮಗೆ ಮೃತ್ಯುರೂಪವಾಗಿ ಬಂದವರನ್ನು ಮಿತ್ರರನ್ನಾಗಿ ಬದಲಿಸಿಕೊಂಡಿರಿ ಎಂದು ನುಡಿದನು.

ಈ ಕಥೆಯನ್ನು ಕೇಳಿದ ಭಕ್ತರೆಲ್ಲ ನಿಜ-ನಿಜವೆಂದು ಮನದಲ್ಲಿಯೇ ಹೇಳಿಕೊಂಡರು. ಸದ್ಗುರು ಮಹಿಮೆ ಅಗಾಧವೆಂದು ಅವರ ಭಾವನೆಯಾಯಿತು.

———

೪೨

ವಿಷಯಕ್ಕೆ ಕುದಿಯದಿರು । ಅಶನಕ್ಕೆ ಹರಿಯದಿರು ।
ಅಸಮಾಕ್ಷನಡಿಯ ಬಿಡದಿರು ಗುರುಕರುಣ ।
ವಶವರ್ತಿಯಹುದು ಸರ್ವಜ್ಞ ॥ —ಸರ್ವಜ್ಞ

ಸಕೃದುಚ್ಚರಿತಂ ಯೇನಹರಿರಿತ್ಯಕ್ಷರದ್ವಯಮ್ ।
ಬದ್ಧಃಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥
—ಪರಾಶರ

ಹರಿಯೆಂಬ ಎರಡಕ್ಷರಗಳನ್ನು ಒಂದುಸಾರೆ ಅಂದರೆ ಸಾಕು. ಮೋಕ್ಷಕ್ಕೆ ತೆರಳಲು ಅವನು ಗಂಟುಕಟ್ಟಿ ಇಟ್ಟುಕೊಂಡಂತೆ.

ವಿರಪಣ್ಣನೆಂಬವನೊಬ್ಬ ಭಕ್ತ. ಅವನ ತಾಯಿ ಹೀರೂಬಾಯಿ ಅವಳು ಬಹು ಭಾವಿಕಳು. ಹಿಂದಿನ ಜನ್ಮದ ಯಾವ ಪುಣ್ಯಾಂಶವೋ ಪರಮಾರ್ಥದಲ್ಲಿ ಅವಳಿಗೆ ಪ್ರೀತಿ. ಸಿದ್ಧಾರೂಢ ಸ್ವಾಮಿಯ ಭಕ್ತಳು. ಅವಳೀಗ ಮುದುಕೆಯಾಗಿದ್ದಳು. ಆದರೂ ಗುರುಸ್ಮರಣ ಗುರುಸೇವೆ. ಪುರಾಣ ಶ್ರವಣಗಳನ್ನು ಬಿಟ್ಟವಳಲ್ಲ. ನೆರೆಹೊರೆಯ ಜನ ನಿನಗಿನ್ನು ದಿನವಾಯಿತು. ಮನೆಯಲ್ಲಿಯೇ ಕುಳಿತು ಶಿವ-ಶಿವ ಎಂದರಾಗದೇ? ಶಿವನೇನು ಕಿವುಡನಲ್ಲ. ಕುರುಡನಲ್ಲ. ಎಂದು ಹೇಳುವರು. ಅದಕ್ಕೆ ಇವಳು 'ಕೈಕಾಲು ಘಟ್ಟಿ ಇರುವವರೆಗೆ ನಡೆಸೋಣ. ಪರಾಧೀನವಾದ ಮೇಲೆ ಮನೆ ಹಿಡಿದು, ಕುಳಿತಲ್ಲಿಯೇ ನೆನೆಯುವುದು ಇದ್ದೇ ಇದೆ. ಎಂದು ನುಡಿದು ಪುರಾಣಕ್ಕೆ ನಡೆಯುವಳು. ಹಾಗೆ ಒಂದು ದಿನ ಪುರಾಣಕ್ಕೆ ಹೊರಟಿರಲು ಅಕಸ್ಮಾತ್ತಾಗಿ ಒಂದು ಕಲ್ಲೆಡವಿ ಬಿದ್ದಳು. ಆಗಲೂ ಅವಳಿಗೆ ಸದ್ಗುರುನಾಥನ ಸ್ಮರಣೆಯೇ. ಮೊದಲೇ ಮುಪ್ಪಿ

ನವಳು. ಬಿದ್ದ ಪೆಟ್ಟು ಬೇರೆ. 'ಸದ್ಗುರುನಾಥಾ ಬಲಕೊಡು ತಂದೇ. ಎಂದು ಸ್ಮರಿಸಿ ಏಳಲು ಪ್ರಯತ್ನಿಸಿದಳು. ಆದರೆ ಏಳಲಿಕ್ಕೆ ಬರಲಿಲ್ಲ. ಕಂಡವರು ಯಾರೋ ಎತ್ತಿ ಕೊಂಡೊಯ್ದು ಮನೆಗೆ ಹಾಕಿದರು. ಕಾಲಿನ ಎಲುವು ಮುರಿದು ಹೋಗಿತ್ತು.

ಅವಳ ಹೇಳಿಕೆಯಂತೆ ವಿರುಪಣ್ಣ ಸ್ವಾಮಿಯನ್ನು ಮನೆಗೆ ಕರೆತಂದು ಭಕ್ತಿಯಿಂದ ಪೂಜೆ ಮಾಡಿದನು. ಆಗ ಹೀರೂಬಾಯಿ 'ಸ್ವಾಮೀ, ನಾನು ಪುಣ್ಯ ಕಾರ್ಯಕ್ಕೆ ಹೊರಟದ್ದೆನು. ಆ ವೇಳೆಯಲ್ಲಿ ಹೀಗೆ ಕಾಲು ಮುರಿಯ ಬೇಕೆ?' ಎಂದು ಕೇಳಲು ಸಿದ್ಧನು 'ಇಷ್ಟೇ ಆದುದು ನಿನ್ನ ಪುಣ್ಯ ಬಲ. ಯಾಕಂದರೆ ಆ ವೇಳೆಗೆ ನಿನ್ನ ಆಯುಷ್ಯ ಮುಗಿದು ಹೋಗಿತ್ತು ಬಲವತ್ತರ ಪುಣ್ಯ ಸಂಗ್ರಹವು ನಿನ್ನದಿರುವುದರಿಂದ ಮೃತ್ಯುವಿನ ಆಟ ಸಾಗಲಿಲ್ಲ. ಬರಿ ಕಾಲು ಮುರಿಯಿತು.' ಎಂದನು. ಅದೇನೇ ಇರಲಿ. ಸದ್ಗುರುನಾಥ ಕಾದ ನೆಂದು ಹೀರೂಬಾಯಿ ಸುಮ್ಮನಾದಳು. ಆದರೆ ಬಹು ದಿನಗಳಿಂದ ಕೇಳುತ್ತ ಬಂದ ಪುರಾಣ ಶ್ರವಣವಿಲ್ಲವಲ್ಲ. ಎಂದು ಆಕೆ ಕಳವಳಿಸುವಳು. ಯಾವಾ ಗಲೂ ನಾಮಸ್ಮರಣೆ ಮಾಡುತ್ತ ಕಾಲ ಕಳೆಯುವಳು. ಹೀಗೆ ತಾಯಿ ಪರಾ ಧೀನಳಾಗಿ ನರಳುತ್ತ ಮಲಗಿರಲು ವಿರುಪಣ್ಣನಿಗೆ ಕೆಡಕೆನಿಸಿತು. ತಾನು ಪ್ರತಿದಿನ ಪುರಾಣಕ್ಕೆ ಹೋಗಿ ಬಂದು ಅಲ್ಲಿ ನಡೆದ ಕಥೆಯನ್ನೆಲ್ಲ ತಾಯಿಗೆ ಹೇಳತೊಡಗಿದನು. ಒಂದುದಿನ ಅದರಂತೆ ಮಾರ್ಕಾಂಡೇಯನ ಕಥೆಯನ್ನು ಹೇಳಿದನು. ಮರಣ ಕಾಲ ಬಂದಿದ್ದರೂ ಅವನು ಶಿವನನ್ನು ನಂಬಿಕೊಂಡಿದ್ದ ರಿಂದ ಯಮನು ಹೆದರಿ ದೇವನಿಂದ ಬೈಸಿಕೊಂಡು ಹೊರಟು ಹೋದನು. ಅಲ್ಲವೇ? ಅದರಂತೆ ನನ್ನ ದೇವರು ಸಿದ್ಧ ಸದ್ಗುರು. ಅವನನ್ನು ಎಡೆಬಿಡದೇ ಸ್ಮರಿಸುವುದರಿಂದ ನಾನೂ ಮರಣ ಸಂಕಟ ತಪ್ಪಿಸಿಕೊಳ್ಳಬಹುದು ಎಂದು ಭಾವಿಸಿ ಕ್ಷಣವೂ ಬಿಡದೇ ಸದ್ಗುರುನಾಮ ನೆನೆಯುತ್ತಿದ್ದಳು. ಸದ್ಗುರು ಮೂರ್ತಿಯಂತೂ ಮನದಲ್ಲಿ ನೆಲೆಸಿಹೋಗಿತ್ತು.

ಒಂದುದಿನ ಹೀರೂಬಾಯಿ ಊಟಮಾಡಿ ಕುಳಿತಿರಲು ತಲೆ ಸುತ್ತಿದಂ-ತಾಯಿತು. ಕಣ್ಣುಮುಚ್ಚಿ ಕುಳಿತಳು. ತೆರೆದು ನೋಡುವಷ್ಟರಲ್ಲಿ ಕಾಡಿಗೆಯ ಗುಡ್ಡದಂತೆ ಆಕೃತಿಯುಳ್ಳ ಇಬ್ಬರು ಪುರುಷರು ಕಂಡರು. ಅವರು ಕಂಗಣ್ಣಿ ನಿಂದ ಇವಳನ್ನು ನೋಡುತ್ತ ಬಾಯಿ ಚಪ್ಪರಿಸುತ್ತಿದ್ದರು. ಭಯದಾಯಕವಾದ

ಅವರ ರೂಪಗಳನ್ನು ನೋಡುವದು ಅಸಹ್ಯವಾಯಿತು. ಸದ್ಗುರುಮೂರ್ತಿಯನ್ನು ನೆನೆದಳು. ನಾಮವನ್ನು ಸ್ಮರಿಸತೊಡಗಿದಳು. 'ಗುರುನಾಥನೇ, ಬೇಗ ಬಂದು ಈ ಯಮದೂತರಿಂದ ನನ್ನ ರಕ್ಷಿಸೆಂದು' ಮೊರೆಯಿಟ್ಟಳು.

ಅವಳಿಗೆ ನಾನು ಇನ್ನೂ ಬಹಳದಿನ ಬದುಕಬೇಕೆಂದೇನೂ ಇಚ್ಛೆ ಇರಲಿಲ್ಲ. ಆದರೂ ಕೆಲವು ಇಚ್ಛೆಗಳಿದ್ದವು. ನನ್ನ ಕಾಲು ಸರಿಯಾಗಿ ನಾನು ಪುನಃ ಪುರಾಣಕ್ಕೆ ಹೋಗಬೇಕು. ಸದ್ಗುರು ದರ್ಶನಕ್ಕೆ ಹೋಗಬೇಕು. ಅವನ ಅಮೃತವಾಣಿಯನ್ನು ಕೇಳಬೇಕು. ಇತ್ಯಾದಿ. ಇವಳ ಇಚ್ಛೆಗಳೇನೆಂಬುದನ್ನು ಸ್ವಾಮಿ ಬಲ್ಲವನಾಗಿದ್ದನು. ಹೀಗೆ ಅಂತ್ಯಕಾಲದಲ್ಲಿ ಅವಳು ಮೊರೆ ಇಡುತ್ತಿರಲು ಸದ್ಗುರುನಾಥ ಅವಳ ಬಳಿಯಲ್ಲಿ ಪ್ರಕಟನಾದನು. ಅವನ ಸಾನಿಧ್ಯ ದೊರಕಿದುದರಿಂದ ಅವಳಿಗೊಳ್ಳೆ ಧೈರ್ಯಬಂದಿತು. ಯಮದೂತರಿಗಂದಳು- 'ನೀವಿನ್ನು ಹೊರಟುಹೋಗಿರಿ. ಈಗ ನಾನು ನಿಮ್ಮೊಡನೆ ಬರುವುದಿಲ್ಲ. ನನ್ನ ಮುರಿದ ಕಾಲು ನೆಟ್ಟಗಾಗಿ ನಾನು ಸದ್ಗುರುನಾಥನ ದರ್ಶನಕ್ಕೆ ಹೋಗಬೇಕು. ಅವನ ಬೋಧ ಕೇಳಬೇಕು. ಇನ್ನೇನೂ ಅಡ್ಡಿಯಿಲ್ಲವೆಂದು ಅವನು ಹೇಳಿದ ನಂತರ ನೀವು ಬನ್ನಿ. ಆಗ ಬರುತ್ತೇನೆ.' ಎಂದು ಖಂಡಿತವಾದ ಮಾತುಗಳನ್ನು ಹೇಳಲು ಅವರು- 'ಹಾಂ-ಹಾಂ-ಹೇಗೆ ಬರುವುದಿಲ್ಲ. ಹಿಡಿಯಿರಿ. ಇವಳನ್ನು ಎಳೆದುಕೊಂಡು ಹೋಗೋಣ.' ಎಂದು ಗರ್ಜಿಸಿ ಅವಳ ಕೊರಳಿಗೆ ಅನೇಕ ಸಾರೆ ಪಾಶ ಹಾಕಿದರು. ಆದರೆ ಪ್ರತಿಸಾರೆ ಆ ಪಾಶ ಕತ್ತರಿಸಿ ಹೋಗುತ್ತಿತ್ತು. ಇನ್ನು ಕೊನೆಯ ಯತ್ನಮಾಡುವುದೆಂದು ಅವರು ಮುಂದುವರಿದು ಬರಲು ಕೈಯ್ಯಲ್ಲೊಂದು ದಂಡವನ್ನು ಹಿಡಿದು ಸದ್ಗುರು ಅವರನ್ನು ಹೊಡೆಯಲು ಹೋದನು. ಗಾಬರಿಯಾಗಿ ಚೀರುತ್ತ ಅವರು ಓಡತೊಡಗಿದರು. ತಮ್ಮ ಪಟ್ಟಣ ಬರುವವರೆಗೂ ಅವರು ನಿಲ್ಲಲಿಲ್ಲ.

ಯಮರಾಜನನ್ನು 'ಕಂಡು-ದೇವಾ, ನಿನ್ನಾಜ್ಞೆಯನ್ನು ನಾವು ಪಾಲಿಸಲು ಹೋದಾಗ ಒಬ್ಬ ಸಾಧುವು ನಮಗೆ ಅಡ್ಡಿಯುಂಟು ಮಾಡಿದನು. ಇದು ನ್ಯಾಯವೇ?' ಎನ್ನಲು ಸರ್ವಜ್ಞನಾದ ಯಮರಾಜನು- 'ಅಪ್ಪಗಳಿರಾ, ನೀವು ಬರಿ ಆಜ್ಞಾಪಾಲಕರು. ಸೃಷ್ಟಿರಹಸ್ಯವನ್ನು ತಿಳಿಯಲಾರಿರಿ. ನಿಮ್ಮ ಕಾರ್ಯದಲ್ಲಿ ಅಡ್ಡಿಯುಂಟುಮಾಡಿದ ಆ ಸಾಧುವು ನರನಲ್ಲ, ಅವನೂ ಹರನ ಅವತಾರ. ಅವನ ಭಕ್ತರಮೇಲೆ ನಿಮ್ಮ ಅಧಿಕಾರವೇಕೆ? ನನ್ನ ಅಧಿಕಾರ

ಕೂಡ ನಡೆಯುವುದಿಲ್ಲ. ಪರಮಾತ್ಮನೇ ಜಗಚ್ಚಾಲಕ. ನಾವು ಅವನ ಇಚ್ಛೆಯಂತೆ ನಡೆಯುವ ಸೇವಕರು.' ಎಂದು ತನ್ನ ದೂತರನ್ನು ಸಮಾಧಾನಗೊಳಿಸಿದನು.

ಇತ್ತ ಹೀರೂಬಾಯಿ ಸ್ವಾಮಿಗಂದಳು— 'ಯಮನ ಕೈಯಿಂದಂತೂ ಉಳಿಸಿದೆ. ಗುರುನಾಥಾ, ನನ್ನ ಕಾಲು ಸರಿಯಾಗುವಂತೆ ಮಾಡಿಬಿಡು. ನಿತ್ಯ ನಿನ್ನ ದರ್ಶನಕ್ಕೆ ಬಂದು ಸೇವೆಮಾಡಿ ಕೃತಾರ್ಥಳಾಗುತ್ತೇನೆ.

ಸಿದ್ಧ ನುಡಿದನು- 'ಇನ್ನೂರು ತಿಂಗಳು ನಿನಗೆ ಹೆಚ್ಚು ಆಯುಷ್ಯ ದೊರಕಿದೆ. ಅಷ್ಟರಲ್ಲಿ ಏನು ಸಾಧಿಸಿಕೊಳ್ಳುವಿಯೋ ಸಾಧಿಸಿಕೋ.'

ಹೀರೂಬಾಯಿ 'ಕಾಲು' ಎಂದಳು. ಸ್ವಾಮಿ ತನ್ನ ಕೈಯಿಂದ ಅದನ್ನು ಸ್ಪರ್ಶಮಾಡಿದನು, ಕಾಲು ಮೊದಲಿನಂತಾಯಿತು. ಆಗಲೇ ಅವಳು ಎದ್ದು ನಿಂತು ಸದ್ಗುರುವನ್ನು ವಂದಿಸಿದಳು. ಸದ್ಗುರು ಅಡಗಿದನು- ಬಳಿಯಲ್ಲಿಯೇ ವಿಷಣ್ಣನಾಗಿ ಕುಳಿತಿದ್ದ ವಿರುಪಣ್ಣನಿಗೆ ಈ ಯಾವ ವಿಷಯವೂ ತಿಳಿಯಲಿಲ್ಲ. ತಾಯಿ ಒಮ್ಮೆಲೇ ಎದ್ದುನಿಂತುದನ್ನು ಕಂಡು ಅವನು ಚಕಿತನಾಗಿ ಇದೇನೆಂದು ಕೇಳಲು ಅವಳು ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ಅದರಿಂದ ವಿರುಪಣ್ಣ ಆನಂದಿತನಾಗಿ ತಾಯಿಯನ್ನು ಕರೆದುಕೊಂಡು ಸದ್ಗುರುವಿನ ಬಳಿಗೆ ಬಂದನು. ಹೀರೂಬಾಯಿ ನಡೆದ ಸಂಗತಿಯನ್ನೆಲ್ಲ ಗುರುವಿಗೆ ತಿಳಿಸಿ ಬಗೆಬಗೆಯಿಂದ ಅವನನ್ನು ಸ್ತುತಿಸಿ 'ನಾನಿನ್ನು ಪುರಾಣ ಕೇಳುತ್ತೇನೆ, ನಿನ್ನ ಸೇವೆ ಮಾಡುತ್ತೇನೆ ಆರುತಿಂಗಳಲ್ಲಿ ಜನ್ಮ ಸಾರ್ಥಕಮಾಡಿಕೊಳ್ಳುತ್ತೇನೆ. ನಿನ್ನ ಮಹಿಮೆಯಿಂದಲೇ ನಾನು ಬದುಕಿದವಳು.' ಎಂದು ನುಡಿಯಲು ಸದ್ಗುರುನಾಥ- 'ನಿನ್ನ ಭಾವದಿಂದಲೇ ನೀನು ಬದುಕಿದೆ. ನಾಮಸ್ಮರಣ ಮರೆಯಬೇಡ, ಇತರ ಸಾಧನಗಳನ್ನೂ ಬಿಡಬೇಡ. ಅಂದರೆ ನಿನಗೆ ಸದ್ಗತಿ ಸಿದ್ಧ,' ಎಂದು ಉಪದೇಶ ಮಾಡಿದನು. 'ಅದರಂತೆಯೇ ನಡೆಯುತ್ತೇನೆ' ಎಂದು ನುಡಿದು ಅವಳು ಕೆಲಹೊತ್ತು ಕುಳಿತು ತರುವಾಯ ಮಗನ ಸಂಗಡ ಮನೆಗೆ ಬಂದಳು.

ತಾನು ಮನಸ್ಸಿನಲ್ಲಿ ಯೋಚಿಸಿಕೊಂಡಂತೆ ಸದಾ ನಾಮಸ್ಮರಣ-ಗುರುಚಿಂತನ-ಪುರಾಣ ಶ್ರವಣಗಳನ್ನು ಮಾಡುತ್ತ ದಿನಗಳೆಯತೊಡಗಿದಳು. ಗೊತ್ತಾಗದಂತೆ ದಿನಗಳುರುಳಿದವು. ಆರುತಿಂಗಳು ಕಳೆದೇಹೋದವು. ಆಗ

ಒಂದುದಿನ ಹೀರೂಬಾಯಿ ಮಲಗಿದ್ದಳು, ಪಕ್ಕನೆ ಎಚ್ಚರವಾಯಿತು. ಎದುರಿಗೆ ಸಿದ್ಧಾರೂಢಸ್ವಾಮಿ, ಕೈಜೋಡಿಸಿದಳು. ಸದ್ಗುರು ನುಡಿದನು–'ಬೇಗನೆ ಏಳು, ಇನ್ನು ತಡಮಾಡುವುದು ಉಚಿತವಲ್ಲ.' ಆ ಮಾತು ಕೇಳಿ ಅವಳು ಎದ್ದಳು. ಸ್ವತಃ ಜಗದ್ಗುರು ಕೈಹಿಡಿದು ಕರೆತಂದು ಒಂದು ದಿವ್ಯ ವಿಮಾನದಲ್ಲಿ ಕುಳ್ಳಿರಿಸಿದನು. ಆಗ ಅವಳಿಗೆ ಆನಂದವೇ ಆನಂದ. ಮನೆ-ಮಠ-ಧನ-ಕನಕ-ಭೂಮಿ-ಸೀಮೆ-ದೇಹ-ಮನ-ಬಂಧು-ಬಳಗ ಎಲ್ಲ ದ್ವಂದ್ವಗಳು ಇಲ್ಲದಂತಾಗಿದ್ದವು. ಅವುಗಳ ಮೋಹವೂ ಇಲ್ಲದಂತಾಗಿತ್ತು. ಅವಳ ಮಗ ವಿರುಪಣ್ಣ ತಾಯಿಯ ಬಳಿಯಲ್ಲಿ ಕುಳಿತಿದ್ದರೂ ಈ ಯಾವ ವ್ಯಾಪಾರಗಳನ್ನೂ ಅರಿಯನು. ಸುಮ್ಮನೆ ಒಂದು ಕ್ಷಣ ಬೆಳಕು ಕಂಡಂತಾಗಿದ್ದಿತು. ಅದೂ ಅವನ ತಾಯಿ–'ಬಂದೆ ಸ್ವಾಮಿ, ನಿನ್ನಾಜ್ಞೆಗೆ ನಾನು ಹೊರತಿಲ್ಲ.' ಎಂದು ಕೂಗಿ ಪ್ರಾಣಬಿಟ್ಟಾಗ, ಆ ಸಮಯದಲ್ಲಿ ಅದೇನು ? ಎಂದು ವಿಚಾರ ಮಾಡಬೇಕೆಂಬ ಬುದ್ಧಿಯೇ ಅವನಿಗೆ ಉಂಟಾಗಲಿಲ್ಲ. ತಾಯಿ ಮೃಳಾದಳೆಂದು ಅವನಿಗೆ ತೋರಿತು. ಯೋಗ್ಯರೀತಿ ಸಂಸ್ಕಾರ ಮಾಡಿದನು.

ನಾಮಜಪದಿಂದಲೇ ಅವಳು ಸದ್ಗತಿಪಡೆದಳು.

————

೪೩

ಆಶ್ವಾಸ್ಯ ಪಶ್ಚಾತ್ಪಪ್ರಚ್ಛ ಶ್ರೀಗುರುರ್ನತವತ್ಸಲಃ
ಬ್ರೂಹಿ ಕಿಂ ಕರವಾಣ್ಯತ್ರ ಮಚ್ಚಿತ್ತಂ ದ್ರಾವಯನ್ನಸಿ ॥

—ಪರಮಾರ್ಥದರ್ಶನ

ಶರಣೆಂದವರನ್ನು ಹಿಡಿದೆತ್ತುವ ಗುರುವು ಮೊದಲು ಅವನನ್ನು ಸಮಾಧಾನಗೊಳಿಸಿ ನಂತರ ಕೇಳಿದನು. ಹೇಳು, ನಿನ್ನ ವಿಷಯದಲ್ಲಿ ನನ್ನ ಮನಸ್ಸು ಕರಗಿಹೋಗಿದೆ. ಈಗೇನುಮಾಡಲಿ ?

ಸಂಸಾರವು ನಶ್ವರವಾಗಿದೆ, ಎಂದು ಜ್ಞಾನಿಗಳು ಹೇಳುತ್ತಾರೆ. ನಶ್ವರವೆಂದರೆ ನಾಶವುಳ್ಳದುದು ಎಂದರ್ಥ. ಆದರೆ ಮೊಲದ ಕೊಂಬಿನಂತೆ ಅತ್ಯಂತ

ಸುಳ್ಳಾದುದು ಅಲ್ಲ. ಬದಲಾವಣೆ ಹೊಂದುವಂಥದು, ಎಂಬುದನ್ನು ಮನುಷ್ಯ ತಿಳಿದಿರಬೇಕು. ಈ ವಿಷಯದಲ್ಲಿ ಪೂರ್ಣ ತಿಳಿವಳಿಕೆ ಮಾಡಿಕೊಳ್ಳದೇ ಸಂಸಾರದಲ್ಲಿ ಧುಮುಕಿದರೆ ಹಿಂದಿನಿಂದ ಪಶ್ಚಾತ್ತಾಪ-ದುಃಖಗಳಿಗೆ ಗುರಿಯಾಗಬೇಕಾಗುವದು.

ಒಬ್ಬ ಸತ್ಪುರುಷರಂದಿದ್ದಾರೆ. ಹಾಲು ಕೆಡುವ ಸಂಭವ ಬಹಳ. ಅದನ್ನು ಕಾಸಿ ಹೆಪ್ಪು ಹಾಕಿ ಮೊಸರು ಮಾಡಬೇಕು. ಕಡೆಗೋಲಿನಿಂದ ಕಡೆದು ಬೆಣ್ಣೆ ತೆಗೆಯಬೇಕು. ಬೆಣ್ಣೆಯಾದ ಮೇಲೆ ಬಹಳ ಭಯವಿಲ್ಲ. ಹುಳಿ ಮಜ್ಜಿಗೆಯಲ್ಲಿ ಅದನ್ನು ಇಡಬಹುದು. ಇದರಂತೆ ಪ್ರಪಂಚವೆಂಬ ಹುಳಿಮಜ್ಜಿಗೆಯಲ್ಲಿ ಮನುಷ್ಯ ಬೆಣ್ಣೆಯಂತಾಗಿ ಇರಬೇಕು. ಅಂದರೆ ಹುಳಿಯ ಪರಿಣಾಮವಾಗುವುದಿಲ್ಲ.

ದಕ್ಷಿಣ ದೇಶದಲ್ಲಿ ಮುಕ್ತಾಪುರವೆಂಬುದೊಂದು ಗ್ರಾಮ. ಅಲ್ಲಿ ಬ್ರಾಹ್ಮಣ ದಂಪತಿಗಳು. ಸುಶೀಲರಾಗಿ ಬಾಳುವೆ ಮಾಡಿಕೊಂಡಿದ್ದರು. ಸ್ವಭಾವವಾಗಿಯೇ ಅವರು ವೈರಾಗ್ಯಶಾಲಿಗಳು. ಭಗವದ್ಭಕ್ತರು. ಮನೆಗೆ ಸಮೀಪದಲ್ಲಿರುವ ಶ್ರೀ ಕೃಷ್ಣದೇವನನ್ನು ಪ್ರತಿದಿನ ಆರಾಧಿಸುವರು. ಸಂಸಾರವು ಹೇಗೆ ನಡೆದೀತೆಂದು ಅವರು ಒಂದು ದಿನ ಕೂಡ ಚಿಂತೆ ಮಾಡಲಿಲ್ಲ. ಹೀಗಿರಲು ಇವರ ಹೊಟ್ಟೆಯಿಂದ ಐದು ಮಕ್ಕಳು ಹುಟ್ಟಿದವು. ಅವರಲ್ಲಿ ಎರಡನೆಯವನೇ ಶಂಕರನು. ಕೂಸಿದ್ದಾಗಿನಿಂದಲೂ ಇವನ ಲಕ್ಷಣಗಳು ಬಹಳ ಸಾತ್ವಿಕವಾಗಿದ್ದವು. ಅಳುವದಂತೂ ಗೊತ್ತೇ ಇರಲಿಲ್ಲ. ಯಾವಾಗಲೂ ಬಹು ಸಮಾಧಾನಿ. ಸಲಕ್ಷಣ ಮುದ್ದಾದ ಮುಖ.

ಚಿಕ್ಕಂದಿನಲ್ಲಿಯೇ ತಾಯಿಯೊಡನೆ ಪುರಾಣಕ್ಕೆ ಹೋಗುವನು. ಒಂದು ಸಾರೆ ಯಾರೋ ಜ್ಞಾನೇಶ್ವರಿಯನ್ನು ಹೇಳುತ್ತಿದ್ದರು. ಆಗ ಅವರು 'ಕೃಷ್ಣ ವಂದೆ ಜಗದ್ಗುರುವ !' ಜಗತ್ತಿಗೆಲ್ಲ ಗುರುವಾದ ಶ್ರೀ ಕೃಷ್ಣನನ್ನು ವಂದಿಸುತ್ತೇನೆ ಎಂದು ನುಡಿದರು. ಬಾಲಕನಾದ ಶಂಕರನು ಅನೇಕಸಾರೆ ಮನೆಯ ಬಳಿಯಲ್ಲಿರುವ ಕೃಷ್ಣ ಮೂರ್ತಿಯನ್ನು ನೋಡಿದ್ದನು. ಆಗಿನ ಕೃಷ್ಣ ಅರ್ಜುನನಿಗೆ ಗೀತೆಯನ್ನು ಉಪದೇಶಮಾಡಿ ಜ್ಞಾನ ಕೊಟ್ಟಂತೆ ಈ ಕೃಷ್ಣ ನನಗೇಕೆ ಕೊಡಲಾರ ? ಎಂದು ಭಾವಿಸಿ ಗುಡಿಗೆ ಬಂದು ಯಾರೂ ಇಲ್ಲದ ಹೊತ್ತು ಸಾಧಿಸಿ ಜ್ಞಾನವನ್ನು ದಯಪಾಲಿಸು ಎಂದು ಬೇಡಿಕೊಳ್ಳುವನು. ಹೀಗೆ

ಸದ್ಗುಣಿಯಾಗಿ ಬೆಳೆಯುತ್ತಿರುವುದನ್ನು ಕಂಡವರೆಲ್ಲ ಇವನೊಬ್ಬ ಮಹಾ ಪುರುಷನಾಗುವನೆಂದು ಮಾತಾಡಿಕೊಳ್ಳುವರು. ಕ್ರಮೇಣ ಈ ಮಾತು ಸುಳ್ಳಾಗುವ ಲಕ್ಷಣಗಳು ತೋರಿಬಂದವು.

ತಂದೆಯ ಅಪ್ಪಣೆಯಂತೆ ಶಂಕರ ಸಾಲೆಗೆ ಹೋಗತೊಡಗಿದನು.ವಿದ್ಯಾಭ್ಯಾಸದ ಒಲವು ಬೆಳೆಯಿತು. ದೇವರ ಭಕ್ತಿ ಕಡಿಮೆಯಾಯಿತು. ಆದರೆ ವಿದ್ಯೆ ಪೂರ್ಣವಾಗಲಿಲ್ಲ. ಬುದ್ಧಿವಂತನೆಂಬ ಹೆಸರು ಮಾತ್ರ ಪಡೆದನು. ಯೋಗ್ಯ ಕಾಲಕ್ಕೆ ಮದುವೆಯಾಗಿ ಹೆಂಡತಿ ಮನೆಗೆ ಬಂದಳು. ಆಸ್ಥೆಯಿಂದ ಸಂಸಾರ ಸಾಗಿತು. ಉದ್ಯೋಗ ವ್ಯವಹಾರಗಳನ್ನು ಬೆಳೆಸಿ ಧನ-ಮಾನಗಳನ್ನು ಪಡೆದನು. ಅಷ್ಟರಲ್ಲಿ ಅವನ ಹೊಟ್ಟೆಯಿಂದ ಒಂದು ಗಂಡು ಮಗುವೂ ಹುಟ್ಟಿತು. ಅದರಿಂದ ಶಂಕರನಿಗಾದ ಆನಂದ ಅಪಾರ. ಸಕ್ಕರೆ ಹಂಚಿದನು. ಬಂಧು-ಬಳಗ ಕರೆಸಿ ಸಮಾರಂಭ ಮಾಡಿದನು. ಬಿದಿಗೆಯ ಚಂದ್ರನಂತೆ ಮಗು ಬೆಳೆಯತೊಡಗಿತು.

ಆಗೊಂದು ದಿನ ಶಂಕರನಿಗೆ ಕನಸಾಯಿತು. ಕನಸಿನಲ್ಲಿ ಒಬ್ಬ ಸನ್ಯಾಸಿ ಬಂದು ಕೋಪದೃಷ್ಟಿಯಿಂದ ಕೆಲಹೊತ್ತು ಶಂಕರನನ್ನು ನೋಡುತ್ತಿದ್ದು ಮಾಯವಾದನು. ಶಂಕರನಿಗೆ ಎಚ್ಚರವಾಗಲ ಮೈಮೇಲೆ ಶುದ್ಧಿಯೇ ಇರಲಿಲ್ಲ. ಅವನು ದೊಡ್ಡ ದನಿ ತೆಗೆದು ಅಳಲಾರಂಭಿಸಿದನು. 'ಶ್ರೀಕೃಷ್ಣಾ ಇದೇನಾಯಿತು ?' ಎಂದು ಹಲುಬಿದನು. ಮನೆಯವರೆಲ್ಲ ಘಾಬರಿಯಾಗಿ ಕೃಷ್ಣನ ಗುಡಿಗೆ ಕರೆತಂದು ಕುಳ್ಳಿರಿಸಿದರು. ಅಲ್ಲಿ ಕೃಷ್ಣಮೂರ್ತಿಯ ದರ್ಶನದಿಂದಂತೂ ಅಳುವುದು ಹೆಚ್ಚಾಯಿತೇ ವಿನಾಃ ಕಡಿಮೆಯಾಗಲಿಲ್ಲ. ತಾಸೆರಡು-ತಾಸು ಅಳುತ್ತಲೇ ಕುಳಿತನು. ಅನಂತರ ಮಾತ್ರ ಮೆಲ್ಲನೇ ಎಚ್ಚರ ಬಂದಂತಾಗಿ- 'ಕ್ಷಮಿಸು ಕೃಷ್ಣಾ, ನನ್ನಿಂದ ದೊಡ್ಡ ತಪ್ಪಾಯಿತು.' ಎಂದು ಕೈಮುಗಿದು ಮನೆಗೆ ಬಂದನು. ಎಲ್ಲರಿಗೂ ಸಂತೋಷವಾಯಿತು.

ಆದರೆ ಮನೆಯವರ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ, ಶಂಕರನ ವೃತ್ತಿ ಪಲ್ಲಟಿಸಿ ಹೋಗಿತ್ತು. ಮನೆ-ಮಾರು-ಹೆಂಡತಿ-ಮಕ್ಕಳು ಒಟ್ಟು ಜಗತ್ತು ನನಗೇನೂ ಸಂಬಂಧವಿಲ್ಲ, ಎನ್ನುವಂತೆ ಅವನು ವರ್ತಿಸತೊಡಗಿದನು. ಸದಾ ಯೋಚನೆಯಲ್ಲಿ ಮಗ್ನನಾಗಿ ಕುಳಿತನು. 'ನಾನಿಲ್ಲಿ ಯಾವ ಕಾರಣಕ್ಕಾಗಿ ಬಂಧಿತನಂತೆ ಇರಬೇಕು ? ಹುಟ್ಟಿಬಂದವರಿಗೆ ಮರಣವಂತೂ

ಸಿದ್ಧವಷ್ಟೇ? ಆ ಮರಣ ಕಾಲದ ಪಾಶದಿಂದ ನನ್ನನ್ನು ಬಿಡಿಸುವವರು ಯಾರು? ತಾಯಿ-ತಂದೆ-ಬಂಧುಗಳು, ಹೆಂಡತಿ-ಮಕ್ಕಳು ಯಾರೂ ಬಿಡಿಸಲಾರರು. ಆಗ ನಾನು ಬಹಳ ವೇದನೆ ಪಡಬೇಕಾಗುವುದು. ಎಂದಮೇಲೆ ಇವರ ಸಲುವಾಗಿ ನಾನು ಕಷ್ಟಪಡುವುದೇಕೆ? ಸುಮ್ಮನೆ ಇವರೆಲ್ಲ ಸಂಬಂಧ, ಯಾವುದೋ ಮೋಹದಿಂದ ಗಂಟುಹಾಕಿಕೊಂಡವುಗಳು. ಇವು ಒಂದೂ ನನಗೆ ಬೇಡ. ನಾನು ಸದ್ಗುರುವನ್ನು ಕಂಡು ಬಂಧಮುಕ್ತನಾಗಬೇಕು. ಆದರೆ ಸದ್ಗುರು ಎಲ್ಲಿ?' ಎಂದು ಮೊದಲಾಗಿ ವಿಚಾರಿಸುತ್ತಿರಲು ಅವನು ಚಿಕ್ಕಂದಿನಲ್ಲಿ ಯಾರದೋ ಬಾಯಿಂದ ಕೇಳಿದ ಹುಬ್ಬಳ್ಳಿಯ ಸಿದ್ಧಾರೂಢರ ನೆನಪಾಯಿತು. ಮನೆಯಲ್ಲಿ ಹೇಳದೇ ಕೇಳದೇ ಹೊರಟುಬಿಟ್ಟನು. ಅವನನ್ನು ಕಾಣದೇ ಮನೆಯವರು ಕಳವಳಿಸಿ ಹುಬ್ಬಳ್ಳಿಯ ಮಾರ್ಗಹಿಡಿದಿರುವ ಶಂಕರನನ್ನು ಸಂಧಿಸಿ ಮನೆಗೆ ನಡೆ, ಎಂದು ಬಹಳರೀತಿ ಹೇಳಿದರು. ಆದರೆ ಅವನ-ದೊಂದೇ ಮಾತು. 'ನಾನು ಸಿದ್ಧಾರೂಢಸ್ವಾಮಿಯ ದರ್ಶನ ಪಡೆಯದೇ ಮನೆಗೆ ಬರಲಾರೆ.' ಕಡೆಗೆ ಮನೆಯವರು ಅವನ ಜತೆಗೆ ಮಿತ್ರನೊಬ್ಬನನ್ನು ಕಳಿಸಿ ಊರಿಗೆ ಮರಳಿದರು.

ಶಂಕರ ಹುಬ್ಬಳ್ಳಿಗೆ ಬಂದು ಶ್ರೀ ಸ್ವಾಮಿಯನ್ನು ಕಂಡು ಭಕ್ತಿಯಿಂದ ವಂದಿಸಿ ತನ್ನ ಕಥೆಯನ್ನೆಲ್ಲ ನಿವೇದಿಸಿ 'ನನಗೆ ಉದ್ಧಾರದ ಮಾರ್ಗ ತೋರಿಸಿರಿ' ಎಂದು ಬೇಡಿಕೊಂಡನು. ಆಗ ಸದ್ಗುರುವು 'ಚಿಂತಿಸಬೇಡ ಸಕಾಲದಲ್ಲಿ ಎಚ್ಚರಾದೆ. ಇನ್ನೇನೂ ಅಡ್ಡಿ ಇಲ್ಲ. ಪ್ರತಿದಿನ ನೀನು ನಾಮಸ್ಮರಣ ಮಾಡು. ನಿನ್ನ ಇಷ್ಟ ದೈವತ್ವವನ್ನು ಧ್ಯಾನಮಾಡು. ಈಗಾಗಲೇ ನಿನಗೆ ಧ್ಯಾನಾಧಿಕಾರವುಂಟಾಗಿದೆ. ಕ್ರಮೇಣ ಜ್ಞಾನಕ್ಕೂ ಪಾತ್ರತೆ ಬರುತ್ತದೆ. ಆದರೆ ಅವಸರ ಪಡಬೇಡ. ಸಾವಧಾನತೆಯಿಂದ ಸಾಗು' ಎಂದು ಮಧುರ ವಾಣಿಯಿಂದ ಉಪದೇಶಿಸಲು ಅಂದಿನವರೆಗೆ ದೊರೆಯದ ಸಮಾಧಾನ ಶಂಕರನಿಗಾಯಿತು. ಒಂದೆರಡು ದಿನ ನಿಂತು ಮನೆಗೆ ಮರಳಿ ಬಂದನು. ಅದರಿಂದ ತಾಯ್ತಂದೆ-ಹೆಂಡತಿ ಸಂತೋಷಿತರಾದರು. ಆದರೆ ಎರಡನೇ ದಿನ. ಶಂಕರ ಅಡವಿ ಸೇರಿ ಅಲ್ಲೊಂದು ಗುಡಿಸಲನ್ನು ನಿರ್ಮಿಸಿಕೊಂಡು ಅಲ್ಲಿದ್ದು ಸಾಧನೆ ಮಾಡತೊಡಗಿದನು. ಹಿಂದೆ ಅವನೊಂದು ದಿನ ಭಾಗವತ ಪುರಾಣದಲ್ಲಿ ಕೇಳಿದ್ದನು. 'ಜಿತಂ ಸರ್ವಂ ಜಿತೇ ರಸವ್ಯೇ' ನಾಲಿಗೆಯೊಂದನ್ನು ಗೆದ್ದರೆ

ಎಲ್ಲವನ್ನೂ ಗೆದ್ದಂತೆ. ಈಗ ಆ ಮಾತಿನ ನೆನಪಿಗಾಗಿ ಹುಳಿ-ಉಪ್ಪು-ಕಾರಗ ಗಳನ್ನು ವರ್ಜ್ಯಮಾಡಿ ನೀರೂ-ಅನ್ನ ಕಲಿಸಿ ಉಣ್ಣತೊಡಗಿದ್ದನು. ಏಕಾಂತ ವಾಗಿ ಕುಳಿತು ನಾಮಜಪ ಮಾಡುತ್ತಿದ್ದನು. ಹೀಗೆ ಕೆಲದಿನ ಮಾಡುತ್ತಿರಲು ಸಹಜವಾಗಿ ಚಿತ್ತ ಶುದ್ಧಿಯಾಯಿತು.

ಒಂದು ದಿನ ಶಂಕರ ಊಟ ಮಾಡುತ್ತಿರಲು ಕರಿಯ ನಾಯಿಯೊಂದು ಒಳಗೆ ಬಂದಿತು. ಕುಳಿತಲ್ಲಿಂದಲೇ ಅದಕ್ಕೆ ಕೈಮುಗಿದು 'ಶುನಿ ಚೈವ ಶ್ವಪಾ ಕೇಚ ಪಂಡಿತಾಃ ಸಮದರ್ಶಿನಃ' ನಾಯ ಮೊದಲಾದ ಪ್ರಾಣಿಗಳಲ್ಲಿ ಚಾಂಡಾ ಲನೇ ಮೊದಲಾದ ಪಾಪಿಗಳಲ್ಲಿ ಪಂಡಿತರು ಸಮಭಾವದಿಂದಿರುತ್ತಾರೆ ಎಂಬ ಭಗವದ್ಗೀತೆಯ ಶ್ಲೋಕವನ್ನು ಪಠಿಸುತ್ತಿರಲು ಆ ನಾಯಿ ಶಂಕರನ ಎಲೆಯ ಲ್ಲಿಯೇ ಬಾಯಿಹಾಕಿ ಅನ್ನ ತಿನ್ನಲಾರಂಭಿಸಿತು. ಆಗಲಿ ಇದೂ ಒಂದು ಭಗವದಿಚ್ಛೆ ಎಂದುಕೊಂಡು ಊಟ ಮುಗಿಸಿದನು. ಈ ಕ್ರಮ ಒಂದು ದಿನಕ್ಕೆ ಮುಗಿಯಲಿಲ್ಲ. ನಾಯಿ ಆ ಗುಡಿಸಲಿನಲ್ಲಿಯೇ ನಿಂತುಬಿಟ್ಟಿತು. ಪ್ರತಿದಿನ ಆದೇ ರೀತಿ ಊಟ ನಡೆಯಿತು. ಹೀಗಿರಲು ಆ ನಾಯಿ ಒಂದು ದಿನ ಹೇಸಿಕೆ ತಿನ್ನುವುದನ್ನು ಶಂಕರ ಕಂಡನು. ಕೂಡಲೇ ನೀರು ತೆಗೆದುಕೊಂಡು ಅದರ ಬಾಯಿ ತೊಳೆದು ನಿತ್ಯದಂತೆ ಅದರೊಡನೆ ಊಟ ಮಾಡಿದನು. ಮನಸ್ಸು ಮಾಡಿದ್ದರೆ ಸಹಜವಾಗಿ ನಾಯಿಯನ್ನೋಡಿಸಬಹುದಿತ್ತು. ಆದರೆ ಇದೂ ಒಂದು ದೇವರು ತಂದ ಪರೀಕ್ಷಾ ಪ್ರಸಂಗವೆಂದು ಅವನ ಭಾವನೆ ಯಾಗಿ ಯಾವ ಪ್ರತೀಕಾರವನ್ನೂ ಮಾಡಲಿಲ್ಲ.

ಹೀಗೆ ಕೆಲ ದಿನ ಸಾಗುತ್ತಿರಲು ಅವನು ನಿರಭಿಮಾನದ ಮೂರ್ತಿಯಾ ದನು. ಕಂಡದುದೆಲ್ಲ ಭಗವದ್ರೂಪವೆಂಬ ಭಾವ ಬಲಿಯಿತು. ಎಲ್ಲಕ್ಕೂ ನಮಸ್ಕರಿಸತೊಡಗಿದನು. ಹಿಂದೆ ತಾನು ಕೇಳಿದ ಪುರಾಣದ ವಚನಗಳು ಜ್ಞಾಪಕಕ್ಕೆ ಬಂದವು. ಭಾಗವತದಲ್ಲಿ 'ಗರ್ವರಹಿತನಾಗಿ ನಾಚಿಕೆಬಿಟ್ಟು ಕುದುರೆ-ಚಾಂಡಾಲ-ಆಕಳು-ಕತ್ತೆ ಮುಂತಾದವುಗಳಿಗೆ ನಮಿಸಬೇಕು' ಎಂದು ಹೇಳಿದೆ.

ಇದು ದೊಡ್ಡ ಸಾಧನೆ. ಇದರಿಂದ ಮನುಷ್ಯನ ಅಹಂಕಾರವು ನಾಶ ವಾಗುತ್ತದೆ. ಆದರೆ ಈ ಸಾಧನೆಗೆ ಅಡವಿ ಯೋಗ್ಯವಲ್ಲವೆಂದು ಶಂಕರನಿಗೆ ತೋರಲು ಅವನು ಒಂದು ಕೌಪೀನವನ್ನು ಧರಿಸಿ ಊರಿಗೆ ಬಂದನು. ಅಲ್ಲಿ

ತಾಯ್ತಂದೆ, ಬಂಧು-ಬಳಗ, ಹೆಂಡತಿ-ಮಕ್ಕಳು, ಇಷ್ಟಮಿತ್ರರಿದ್ದರು. ಅವರೆಲ್ಲರೂ ಕಂಡರು. ಶಂಕರ ಎಲ್ಲರಿಗೂ ನಮಸ್ಕರಿಸಿದನು. ತಾನು ಪ್ರಪಂಚದಲ್ಲಿರುವಾಗ ಸೇವಾವೃತ್ತಿ ಮಾಡುತ್ತಿದ್ದವರೂ ಭೆಟ್ಟಿಯಾದರು. ಅವರಿಗೂ ಶಂಕರ ವಂದಿಸಿದನು. ಇವನ ರೀತಿ ಕೆಲವರಿಗೆ ಆಶ್ಚರ್ಯಕರವೆನಿಸಿದರೆ ಕೆಲವರಿಗೆ ಕನಿಕರವನ್ನುಂಟು ಮಾಡಿತು. ಕೆಲವರಿಗೆ ಭಯವನ್ನೂ ಹುಟ್ಟಿಸಿತು. ಬಹುತರವಾಗಿ ಭಯಗೊಂಡವರೆಂದರೆ ಹೆಂಗಸರು. ಶಂಕರ ಬರುವನೆಂದರೆ ಅವರು ಮನೆ ಸೇರುವರು. ಇಲ್ಲವಾದರೆ ಮರೆಯಾಗುವರು. ಕೆಲವು ಹಿರಿಯರು 'ಪಾಪ ಹುಚ್ಚು ಕಡಿಮೆಯಾಗಿ ನೆಟ್ಟಗಾದನು. ಮತ್ತೆ ಹುಚ್ಚನಾದನಲ್ಲ.' ಎಂದು ಮರಮರ ಮರುಗುತ್ತಿದ್ದರು. ಈ ಲೋಕವೈಲಕ್ಷಣ್ಯದಿಂದ ಶಂಕರನಿಗೆ ಲಾಭವಾದುದೆಂದರೆ ನಿಸ್ಸಂಗ. ಇವನೊಡನೆ ಮಾತಾಡುವ ಗೊಡವೆಯನ್ನೇ ಜನ ಮಾಡುತ್ತಿರಲಿಲ್ಲ. ಶಂಕರ ದೊಡ್ಡ ಸಾಧಕನೆಂದು ತಿಳಿದವರು ಬಹಳ ಸ್ವಲ್ಪ ಜನ.

ಊರ ಬಳಿಯಲ್ಲಿರುವ ಪರ್ವತದ ಮೇಲೆ ಶಂಕರ ವಾಸ ಮಾಡಿದನು. ಪ್ರತಿದಿನ ಅವನ ಹೆಂಡತಿ ಆಹಾರ ತಂದಿಟ್ಟು ಮೌನವಾಗಿ ಹಿಂದಿರುಗುತ್ತಿದ್ದಳು. ಕೆಲದಿನ ಹೀಗೆ ಕಳೆಯುತಿರಲು ಒಂದುದಿನ ಮಧ್ಯರಾತ್ರಿ ಗುರು 'ಈಗಲೇ ಹುಬ್ಬಳ್ಳಿಗೆ ನಡೆ' ಎಂದಂತಾಯಿತು. ಶಂಕರ ಮೇಲೆದ್ದನು. ಆಗ ಮಳೆಗಾಲ. ಯಾವುದನ್ನೂ ನೋಡದೆ ಮುಂದೆ ಸಾಗಿದನು. ದೇಹದಿಂದಾಗದಿದ್ದರೂ ಮನಸ್ಸಿನಿಂದ ಯಾವಾಗಲೂ ಶಂಕರ ಸದ್ಗುರುವಿನ ಸನ್ನಿಧಿಯಲ್ಲಿಯೇ ಇದ್ದವನು. ಈಗ ದೇಹವನ್ನೂ ಅವನಿಗೊಪ್ಪಿಸಲು ತೆರಳಿದನು. ನದಿ ತುಂಬಿ ಹರಿಯುತ್ತಿದ್ದಿತು. ಮತ್ತೊಬ್ಬರಾದರೆ ಆ ಪ್ರವಾಹದಲ್ಲಿಳಿಯುವುದು ಸಾಧ್ಯವೇ ಇಲ್ಲ. ಸೂಸಿ ಹರಿಯುವ ನದಿ ಭಗವದ್ರೂಪವೆಂದು ಕೈಮುಗಿದನು. 'ಭಗವಂತನೇ ನಿನ್ನ ಬಳಿಗೆ ಬಂದವನು ನಿರ್ಭಯನಾಗುತ್ತಾನೆ. ನನಗೆ ಭಯವೇಕೆ? ಅನೇಕ ರೂಪಗಳನ್ನು ಧರಿಸಿ ನೀನೇ ನಟಿಸುತಿರುವೆ. ಜಯ ಸದ್ಗುರು ಎಂದು ಕಾಲಿಟ್ಟನು. ಯಾರೋ ಕೈಹಿಡಿದಂತಾಯಿತು. ಇಲ್ಲಿ ಯಾರು ? ಎಂದು ನೋಡಲು ಬೆಳಕು ಕಾಣಿಸಿತು. ಆ ಬೆಳಕಿನಲ್ಲಿ ಸದ್ಗುರು ಮೂರ್ತಿ. ಕೈಹಿಡಿದುಕೊಂಡು ಶಂಕರನನ್ನು ಆಚೆಯದಡಕ್ಕೆ ಕರೆತಂದನು.

ಹೀಗೆ ದಂಡೆಗೆ ಕರೆತಂದಮೇಲೆ ಶಂಕರನು ಭಕ್ತಿಪರವಶನಾಗಿ 'ಗುರುವರನೇ. ಇದೇ ರೀತಿ ಯಾವಾಗಲೂ ನನ್ನನ್ನು ರಕ್ಷಿಸು. ಎಂದೂ ನನ್ನ ಕೈ ಬಿಡಬೇಡ.' ಎಂದು ಬೇಡಿಕೊಳ್ಳಲು ಸಿದ್ಧನು 'ಶಂಕರಾ, ಸ್ಥಿರ-ಚರಗಳಲ್ಲಿ ನನ್ನ ರೂಪವನ್ನು ಕಾಣುವ ಅದ್ಭುತ ಸಾಧನೆಯನ್ನು ಮಾಡಿರುವೆ. ಎಂದ ಮೇಲೆ ನಿನ್ನನ್ನು ಬಿಟ್ಟು ನಾನು ಬೇರೆ ಇರಬಲ್ಲನೇ? ನೀನೇ ನಾನು. ನಾನೇ ನೀನು. ನಮ್ಮಿಬ್ಬರಲ್ಲಿ ಭೇದವಿಲ್ಲ. ಭೇದವೆಂಬುದು ಕಾಲ್ಪನಿಕವೆಂದು ತಿಳಿ. ಇದಿರಲಿ. ನಿನಗೆ ಪ್ರೇರಣೆಯಾದಂತೆ ಹುಬ್ಬಳ್ಳಿಗೆ ಬಂದು ಕೆಲವು ಸಮಯದವರೆಗೆ ಅಲ್ಲಿರು.' ಎಂದು ನುಡಿದು ಕಾಣದಾದನು. ಗುರು ಮಹಿಮೆಯನ್ನು ಚಿಂತಿಸುತ್ತ ಶಂಕರ ಮುಂದೆ ನಡೆದನು. ಅವನು ಗುರುಕಾರುಣ್ಯವೆಂಬ ಅಮೃತವನ್ನು ಪ್ರಾಶನ ಮಾಡಿದುದರಿಂದ ಅನ್ನ-ನೀರಿನ ಪರಿವೆ ಇಲ್ಲದೇ ಮುನ್ನಡೆದನು. ಆದರೆ ಮನಸ್ಸಿನ ವೇಗವನ್ನು ದೇಹ ತಡೆಯಬಹುದೇ? ಕಾಲಿಗೆ ಗುಳುಳೆಗಳೆದ್ದವು. ಊದಿಕೊಂಡವು. ಒಂದು ಧರ್ಮಶಾಲೆಯಲ್ಲಿ ಹೋಗಿ ದೊಪ್ಪನೆ ಬಿದ್ದುಬಿಟ್ಟನು. ಎದ್ದರೆ ಕಣ್ಣಿಗೆ ಕತ್ತಲೆ ಕವಿದಂತಾಗುತ್ತಿತ್ತು. ಸ್ವಲ್ಪಕೂಡ ಮೈಯಲ್ಲಿ ಶಕ್ತಿಯುಳಿದಿರಲಿಲ್ಲ. ಅಷ್ಟಾದರೂ ಅವನು ಗುರುಸ್ಮರಣವನ್ನು ಮಾಡುತ್ತಲೇ ಇದ್ದನು.

ಗುರುದೇವ ಸರ್ವವ್ಯಾಪಕ. ಸರ್ವಾಂತರ್ಯಾಮಿ. ಅವನಿಗರಿಕೆಯಾಗದುದು ಯಾವುದಾದರೂ ಉಂಟೇ? ಬ್ರಾಹ್ಮಣ ರೂಪ ತಾಳಿ ಅಲ್ಲಿಗೆ ಬಂದು ಶಂಕರನ ಸ್ಥಿತಿಯನ್ನು ನೋಡಿ ಕಣ್ಣೀರುದುರಿಸಿದನು. ಭಕ್ತನಿಗೆ ಕಾಣದಂತೆ ಅವುಗಳನ್ನೊರೆಸಿಕೊಂಡು ಪ್ರೇಮದಿಂದ 'ಅಯ್ಯ ಇದೇನು ನಿನ್ನ ಅವಸ್ಥೆ. ನಿನಗೆ ಯಾರೂ ದಿಕ್ಕಿಲ್ಲವೇ?' ಎಂದು ಕೇಳಿದನು.

ಶಂಕರನಂದನು.

'ಸರ್ವ ಸಮರ್ಥನಾದ ಸದ್ಗುರುನಾಥನು ಇರುವಾಗ ಯಾರೂ ದಿಕ್ಕಿಲ್ಲವೆಂದು ಹೇಗೆ ಅನ್ನಲಿ?'

'ನಿನ್ನ ಮಾತು ನಿಜ. ಈಗ ನಿನ್ನ ಅಪೇಕ್ಷೆ ಏನು? ಮೊದಲು ಹೇಳು.'

'ಇನ್ನೇನೂ ನನಗೆ ಅಪೇಕ್ಷೆ ಇಲ್ಲ. ನನ್ನ ಸದ್ಗುರುನಾಥನಿರುವ ಹುಬ್ಬಳ್ಳಿಗೆ ಹೋಗಿ ಅವನ ಸೇವೆಮಾಡಿಕೊಂಡಿರಬೇಕು, ಎಂಬುದೇ ಅಪೇಕ್ಷೆ.'

'ಆಗಲಿ. ನಿನ್ನ ಅಪೇಕ್ಷೆ ಏನೋ ಒಳ್ಳೆಯದೇ ಇದೆ. ಆದರೆ ಈಗ ಹೋಗುವುದು ಸಾಧ್ಯವಿಲ್ಲ. ನಿನಗೆ ಒಂದೆರಡು ದಿನ ವಿಶ್ರಾಂತಿಯು ಆವಶ್ಯಕತೆ ಇದೆ. ನೀನು ಶ್ರೇಷ್ಠಸಾಧಕನೆಂಬುದು ನನಗೆ ತಿಳಿಯಿತು. ಅದರೆ ದೇಹವನ್ನು ಇಷ್ಟು ಅಲಕ್ಷಿಸಬಾರದು. ದೇಹನೆಟ್ಟಗಿದ್ದರೇ ಸಾಧನೆ ಮುಂದರಿಯುವುದಲ್ಲವೆ?'

'ಇದ್ದೀತು.' ಎಂದು ಶಂಕರನು ಅಲಕ್ಷದಿಂದಲೇ ನುಡಿಯಲು ಸಿದ್ಧ ಕೌತುಕಬಟ್ಟು ಎಣ್ಣೆತಂದು ಕಾಲಿಗೆ ಹಚ್ಚಿದನು ಅನ್ನವನ್ನೂ ತಂದು ಹಾಕಿದನು. ಎರಡು-ಮೂರು ದಿನಗಳ ವರೆಗೆ ಇದೇ ರೀತಿ ಉಪಚಾರವಾಗಲು ಶಂಕರನಿಗೆ ಆರಾಮುವಾಯಿತು. ಆಗ ಬ್ರಾಹ್ಮಣ ಹೇಳಿದನು.

'ಇನ್ನು ಮೇಲೆ ಮಾತ್ರ ಹೀಗೆ ದೇಹದಂಡನೆಯನ್ನು ಅತಿಯಾಗಿ ಮಾಡಬೇಡ. ನಾನು ಹಣಕೊಡುತ್ತೇನೆ. ತೆಗೆದುಕೊಂಡು ಗಾಡಿಯಲ್ಲಿ ಕುಳಿತು ಹುಬ್ಬಳ್ಳಿಗೆ ಹೋಗು. ನನ್ನ ಮಾತು ಕೇಳುವುದು ನಿನಗೆ ಒಳ್ಳೇದು.'

'ನೀವು ಮಾಡಿದ ಈ ಉಪಕಾರವೇ ಹೊರೆಯಾಗಿದೆ. ನಿಮ್ಮನ್ನು ನಾನು ಮರೆಯಲಾರೆ. ಈಗ ನೀವು ಹಣಕೊಟ್ಟು ನನ್ನ ಶ್ರಮವನ್ನು ಉಳಿಸುವುದರಿಂದ ನನಗೆ ದೊರೆಯುವ ಪುಣ್ಯವು ದೊರೆಯದಂತಾಗುವುದು. ಆದಕಾರಣ ನಿಮ್ಮ ಹಣ ಬೇಡ.'

'ನನ್ನ ಹಣಕ್ಕೂ ನಿನ್ನ ಪುಣ್ಯಕ್ಕೂ ಏನು ಸಂಬಂಧ?'

'ನೋಡಿ, ಸದ್ಗುರುಸೇವೆಯನ್ನು ತನು-ಮನ-ಧನದಿಂದ ಮಾಡಬೇಕೆನ್ನುವರಲ್ಲವೇ? ನನ್ನಲ್ಲಿ ಧನವಂತೂ ಇಲ್ಲ. ಇರುವ ತನು—ಮನದಿಂದಲಾದರೂ ನಾನು ಸೇವೆಮಾಡುವುದು ಯೋಗ್ಯವಲ್ಲವೇ?'

'ಒಂದು ರೀತಿ ನಿನ್ನ ಮಾತು ಸರಿ, ಇನ್ನೊಂದು ರೀತಿ ವಿಚಾರಿಸಿನೋಡು'

'ಮತ್ತೇನು ವಿಚಾರ?'

'ಸ್ಥಿರ ಚರಗಳಲ್ಲಿ ನೀನು ಭಗವದ್ರೂಪ ಕಾಣುವವನು. ನಾನೀಗ ಹೇಳುವ ಮಾತು ಭಗವಂತನ ಅಪ್ಪಣೆ ಎಂದು ತಿಳಿದುಕೊಂಡರೆ ಸರಿಯಾಗುತ್ತದೆ' ಎಂದು ಆ ಬ್ರಾಹ್ಮಣ ನುಡಿಯಲು ಶಂಕರ ನಿರುತ್ತರನಾಗಿ- 'ಆಹಾ ತಿಳಿದೆ ತಿಳಿದೆ ನಿನ್ನ ಆಜ್ಞೆ ನನಗೆ ಶಿರಸಾ ಮಾನ್ಯ' ಎಂದು ಹೇಳಿ ಅವನನ್ನು ಅನುಸರಿಸಿದನು. ತಿಕೀಟು ತೆಗೆಸಿ ಶಂಕರನನ್ನು ಗಾಡಿ ಹತ್ತಿಸಿ ಬ್ರಾಹ್ಮಣ ಅದೃಶ್ಯನಾದನು.

ಸುಖರೂಪವಾಗಿ ಹುಬ್ಬಳ್ಳಿಗೆ ಬಂದ ಶಂಕರನು ಮಠಕ್ಕೆ ಬಂದು, ಸದ್ಗುರುವನ್ನು ಕಂಡನು. ಅದೇಕೋ ಅವನ ಕಣ್ಣು ನೀರು ತುಂಬಿದವು. 'ಇನ್ನಾದರೂ ನನ್ನನ್ನು ಉದ್ಧರಿಸಬೇಕು' ಎಂದು ಕೈ ಜೋಡಿಸಿದನು. ಆಗ ಸದ್ಗುರುನಾಥ 'ಶಂಕರಾ, ಚಿಂತಿಸಬೇಡ. ಈಗ ನಿನ್ನ ಅಧಿಕಾರ ಬಹು ದೊಡ್ಡದಾಗಿದೆ. ಇಲ್ಲಿದ್ದು ನಿತ್ಯ ವೇದಾಂತ ಶ್ರವಣ ಮಾಡುತ್ತ ಹೋಗು' ಎಂದು ಅಪ್ಪಣೆ ಕೊಡಲು ಅದರಂತೆ ವರ್ತಿಸುತ್ತ ಶಂಕರನು ಮಠದಲ್ಲಿ ನಿಂತನು.

ಬರೀ ಶ್ರವಣ ಮಾಡುವದರಿಂದ ಜ್ಞಾನವಾಗುವದಿಲ್ಲವೆಂಬುದನ್ನು ಅವನು ತಿಳಿದಿದ್ದನು. ಏಕಾಂತದಲ್ಲಿ ಕುಳಿತು ಮನನಮಾಡಿ ನಿದಿಧ್ಯಾಸನ ಮಾಡುವನು. ಕೆಲ ದಿನ ಇದೇ ರೀತಿ ಕಳೆದವು. ಬ್ರಹ್ಮನಿಷ್ಠನಾದ ಸದ್ಗುರುವಿನ ಸನ್ನಿಧಿ, ಶ್ರವಣ, ಮನನ, ನಿದಿಧ್ಯಾಸನ, ತೀವ್ರವಾದ ಮುಮುಕ್ಷುತ್ವ ಪ್ರಪಂಚವೆಲ್ಲ ಕರಗಿ ಏಕರಸದಲ್ಲಿ ಕೂಡಿ ಹೋಯಿತು. ಪೂರ್ಣ ಬೋಧದ ಸ್ಥಿತಿಯನ್ನು ವರ್ಣಿಸುವುದು ಸಾಧ್ಯವೇ ?

ಆಗ ಗುರುವೆಲ್ಲಿ? ಶಿಷ್ಯನೆಲ್ಲಿ? ಪ್ರಪಂಚವೆಲ್ಲಿ? ಬಂಧುವೆಲ್ಲಿ? ಮೋಕ್ಷವೆಲ್ಲಿ ? ಜನನ-ಮರಣವೆಲ್ಲಿ ? ಸಹಸ್ರ-ಲಕ್ಷ-ಕೋಟಿ ನದಿಗಳು ಹರಿದು ಬಂದು ಬ್ರಹ್ಮ ಸಮುದ್ರದಲ್ಲಿ ಒಂದಾದವು.

೪೪

ಯದ್ಯದ್ವಿಭೂತಿ ಮತ್ ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್‌ದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಮ್ ॥

–ಭಗವದ್ಗೀತಾ

ಯಾವುದು ಮಹಿಮಾನ್ವಿತವಾಗಿ ವೈಭವ ಸಂಪನ್ನವಾಗಿ, ಶ್ರೇಷ್ಠವಾಗಿ ಕಂಗೊಳಿಸುವದೋ ಅದು ನನ್ನ ತೇಜದಿಂದಲೇ ಹುಟ್ಟಿದುದೆಂದು ನೀನು ತಿಳಿ.

ಗೊಂದಾವಲಿ ಗ್ರಾಮದಲ್ಲಿ ಒಂದು ಬ್ರಾಹ್ಮಣ ಕುಟುಂಬ. ಪಂಢರಿಯ ಪಾಂಡುರಂಗನ ಪರಮಭಕ್ತರು. ಆಷಾಢ ಶುದ್ಧ ಏಕಾದಶಿಗೊಮ್ಮೆ, ಕಾರ್ತಿಕ

ಶುದ್ಧ ಏಕಾದಶಿಗೊಮ್ಮೆ ತಪ್ಪದೆ ಪಾಂಡುರಂಗನ ದರ್ಶನಕ್ಕೆ ತೆರಳುವರು. ಅಲ್ಲಿ ಪಾಂಡುರಂಗನ ಮೂರ್ತಿದರ್ಶನವಾಗುವುದೇ ತಡ ಎಷ್ಟೋ ವೇಳೆ ಆ ಭವನ ಮೋಹನನ ರೂಪ ಸುಧೆ ಸವಿಯುತ್ತ ನಿಂತುಬಿಡುವರು. ಆಗ ಕಣ್ಣಿನಿಂದ ಪ್ರೇಮಾಶ್ರುಗಳು ಹರಿಯಬೇಕು. ವಿಠ್ಠಲನಾಮ ಜಪವಂತೂ ಸರ್ವಕಾಲ ಇದ್ದುದೇ. ಹೀಗೆ ಸೇವೆ ಮಾಡುತ್ತ ವರ್ಷಗಳು ಕಳೆದವು. ಭಗವಂತನ ಸೇವೆಯಲ್ಲಿ ತನು-ಮನಗಳು ಪಾವನವಾದವು.

ಒಂದು ದಿನ ಆ ದಂಪತಿಗಳಿಗೆ ಕನಸಾಯಿತು.

ಪಾಂಡುರಂಗನು ಬಂದು ಜಗತ್ತಿನ ಉದ್ಧಾರಕ್ಕಾಗಿ ನಿಮ್ಮ ಹೊಟ್ಟೆಯಲ್ಲಿ ಮಾರುತಿಯ ಅವತಾರವೆನಿಸಿದ ರಾಮದಾಸ ಸ್ವಾಮಿ ಹುಟ್ಟುವನು. ಇಬ್ಬರ ಕನಸೂ ಅದೇ. ಪಾಂಡುರಂಗನನ್ನು ವಂದಿಸಿದರು. ಹರ್ಷಭರಿತರಾಗಿ ನಮ್ಮ ಜನ್ಮ ಸಾರ್ಥಕವಾಯಿತೆಂದು ಭಾವಿಸಿದರು. ಕಾಲಾವಧಿಯಲ್ಲಿ ಆ ಸ್ತ್ರೀಯು ಗರ್ಭಿಣಿಯಾದಳು. ನವಮಾಸಗಳು ತುಂಬಲು ಗಂಡು ಮಗುವಿಗೆ ಜನ್ಮವಿತ್ತಳು. ಹರ್ಷದಿಂದ ಹನ್ನೆರಡನೇ ದಿನ ಗಣಪತಿ ಎಂದು ಹೆಸರಿಟ್ಟರು. ಮನೆಯಲ್ಲಿ ಪಾಂಡುರಂಗ ಭಜನ–ಕೀರ್ತನಗಳು ಯಾವಾಗಲೂ ನಡೆಯುತ್ತಿದ್ದುದರಿಂದ ಚಿಕ್ಕಂದಿನಿಂದಲೇ ಗಣಪತಿಗೆ ಭಕ್ತಿಯ ಸಂಸ್ಕಾರವಾಯಿತು.

ಎಂಟನೆಯ ವರ್ಷ ತುಂಬಲು ಉಪನಯನ ಮಾಡಿದರು. ತಕ್ಕಮಟ್ಟಿಗೆ ವೇದಾಭ್ಯಾಸವೂ ನಡೆಯಿತು. ನಾಮಜಪದ ಸಂಸ್ಕಾರವಂತೂ ಮೊದಲಿನಿಂದಲು ಇತ್ತು. ಬಾಲಕ ಗಣಪತಿ ಕುಳಿತಲ್ಲಿ, ನಿಂತಲ್ಲಿ, ಹೋದಲ್ಲಿ, ಬಂದಲ್ಲಿ ಕೆಲಸ ಮಾಡುವಲ್ಲಿ ರಾಮನಾಮ ಜಪ ಮಾಡತೊಡಗಿದನು. ಅದರಿಂದ ಬಹುಬೇಗ ಚಿತ್ತವು ಶುದ್ಧವಾಯಿತು. ಪವಿತ್ರವಾದ ತಂದೆ-ತಾಯಿಗಳ ಹೊಟ್ಟೆಯಿಂದ ಜನನ. ಭಗವದ್ಭಕ್ತಿ ಸದಾಚರಣೆಗಳ ಸಂಸ್ಕಾರ. ಮೇಲೆ ಅಖಂಡವಾದ ರಾಮನಾಮಜಪ. ಇನ್ನೇನು ಬೇಕು? ಸಾಧನ. ವೈರಾಗ್ಯರೂಪೀ ಅಗ್ನಿ ಪ್ರಜ್ವಲಿಸಿತು. ವಿಷಯುಗಳ ಪ್ರೀತಿ ಉಳಿಯಿತು. ಹದಿನೈದು ವರ್ಷ ತುಂಬಿದ್ದವು. ಗಣಪತಿ ತೀರ್ಥಯಾತ್ರೆಗೆ ತೆರಳಿದನು. ಎಲ್ಲ ತೀರ್ಥಗಳನ್ನು ಸುತ್ತುತ್ತ ಅಲ್ಲಿರುವ ಸಾಧು-ಸತ್ಪುರುಷರನ್ನು ಕಾಣುತ್ತ ತಿರುಗಿದರೂ ಗುರುವು ಕಾಣಲಿಲ್ಲ.

ವರ್ಹಾಡ ಪ್ರಾಂತದ ಏಳೀ ಎಂಬ ಗ್ರಾಮಕ್ಕೆ ಗಣಪತಿ ಬಂದನು. ಅಲ್ಲಿ ತುಕಾರಾಮ ಚೈತನ್ಯರೆಂಬ ಸತ್ಪುರುಷರು ಊರಹೊರಗೆ ಆಶ್ರಮ ಕಟ್ಟಿ ಕೊಂಡಿದ್ದರು. ಅವರು ಮಹಾಸಿದ್ಧರೆಂದು, ಅಪರೋಕ್ಷ ಜ್ಞಾನಿಗಳೆಂದು ಹೆಸರಾದವರು. ಕೀರ್ತಿಯನ್ನು ಕೇಳಿದ ಗಣಪತಿ ಅವರ ಬಳಿಗೆಹೋಗಲು ಅವರು 'ಓ, ದರೋಡೆಗಾರ ಬಂದ ನೋಡಿ' ಎಂದುಬಿಟ್ಟರು. ಬಳಿಯಲ್ಲಿದ್ದ ಶಿಷ್ಯರೆಲ್ಲ ಆಶ್ಚರ್ಯದಿಂದ ಸುತ್ತೆಲ್ಲ ನೋಡಿದರು. ಯಾರೂ ಕಾಣಲಿಲ್ಲ. ಗಣಪತಿ ಮಾತ್ರ ಗುರುಗಳಿಗೆ ವಂದಿಸಿ ಕೈಮುಗಿದು ನಿಂತು ಬೇಡಿಕೊಳ್ಳುತ್ತಿದ್ದನು. 'ಸ್ವಾಮಿ, ಬಹಳ ತೀರ್ಥಕ್ಷೇತ್ರಗಳನ್ನು ತಿರುಗಿದೆನು. ಮನಸ್ಸಿಗೆ ಎಲ್ಲಿಯೂ ನಿಲ್ಲಬೇಕೆಂದು ಆಸಿಸಲಿಲ್ಲ. ಕಾರಣವೇನೋ ಅರಿಯೆ. ಇಲ್ಲಿ ನಿಂತು ನಿಮ್ಮ ಸೇವೆ ಮಾಡಬೇಕೆಂದು ಅಪೇಕ್ಷೆಯುಂಟಾಗಿದೆ. ದಯಮಾಡಿ ಆಶ್ರಯಕೊಡಬೇಕು.' ಈ ಮಾತುಗಳನ್ನು ಕೇಳಿ ಆ ಸತ್ಪುರುಷರು 'ಇರಬಹುದು. ಇಲ್ಲಿ ಆಶ್ರಯವೇನೋ ಸಿಕ್ಕಿತು. ಆದರೆ ನಿನ್ನಿಂದ ನಮ್ಮ ಸೇವೆಯಾಗಲಾರದೆಂದು ಕಾಣುತ್ತದೆ. ನಾನು ಬಹಳ ಕಠೋರ ಹೃದಯದವನು, ನನಗೆ ದಯೆ ಎಂಬುದು ಗೊತ್ತಿಲ್ಲ. ಇದನ್ನೆಲ್ಲ ಚನ್ನಾಗಿ ವಿಚಾರಿಸಿಕೊಂಡು ನಿಲ್ಲುವದಕ್ಕೆ ಮನಸ್ಸು ಗಟ್ಟಿಮಾಡು. ಒಂದುವೇಳೆ ನಿನಗೆ ಬೇಕೆನಿಸಿದರೆ ನಾನು ಎಂಥವನು? ಸ್ವಭಾವ ಹೇಗೆ ಎಂಬುದನ್ನು ಇಲ್ಲಿಯ ನಾಲ್ಕು ಜನರನ್ನು ಕೇಳಿಕೋ ಎಂದು ನುಡಿದು- ಆ ಗುರುದೇವನು ಒಂದು ಕಲ್ಲು ತೆಗೆದುಕೊಂಡು ಗಣಪತಿಗೆ ಹೊಡೆದನು. ಆ ಗಣಪತಿ ಕಲ್ಲಿನಿಂದ ಬಿದ್ದ ಪೆಟ್ಟನ್ನು ಲಕ್ಷಿಸದೇ ಅಹಾ ನನಗೆ ಸದ್ಗುರು ಪ್ರಸಾದ ದೊರಕಿತು. ಈ ಕಲ್ಲು ಸದ್ಗುರುವಿನ ಕೈತಾಕಿ ಪಾವನವಾಗಿ ಪ್ರಾಣ ಪ್ರತಿಷ್ಠೆಯನ್ನು ಪಡೆದು ನನಗೆ ಲಭ್ಯವಾಗಿರುವದರಿಂದ ಇದು ಪೂಜ್ಯವಾಗಿದೆ ಎನ್ನುತ್ತ ಅದನ್ನು ಮಸ್ತಕದಲ್ಲಿಟ್ಟುಕೊಂಡು ಕೆಳಗಿರಿಸಿದನು. ಪುನಃ ಗುರುವು ಆವನನ್ನು ಕರೆದು ಸಿಟ್ಟಿನಿಂದ— 'ಗುರುಸೇವೆ ಎಂದರೆ ಅದೇನು ಸ್ವೇಚ್ಛಾ ವಿಹಾರವೆಂದು ತಿಳಿದಿರುವಿಯ ? ಎಲ್ಲಿ ನೋಡುವ ಕಾಲು ಒತ್ತು, ನೋಡಲಿಕ್ಕೆ ಕೋಣನಂತೆ ಮೈಬಿಟ್ಟಿರುವೆ. ನಿನಗೆ ತೀರ್ಥ-ಯಾತ್ರೆ ಒಳ್ಳೇ ಮಾನಿಸಿದೆ, ಹತ್ತಿಪ್ಪತ್ತು ಮನೆಗಳಿಗಾದರೂ ನೀನು ಭಿಕ್ಷೆಗೆ ಹೋಗುತ್ತಿರಬೇಕು. ಮಧ್ಯಾಹ್ನ, ಸಾಯಂಕಾಲ ಎರಡೂ ವೇಳೆ ಹೊಟ್ಟೆ ತುಂಬ ಊಟ ಮಾಡಿರಲೇಬೇಕು. ವ್ರತ-ಉಪವಾಸ-ಜಪ-ಸಜ್ಜನ ಸೇವೆ

ಇವುಗಳ ಕಡೆಗೆ ಬಹುಶಃ ನಿನ್ನ ಲಕ್ಷವೇ ಹೋಗಿರಲಿಕ್ಕಿಲ್ಲ. ಅದರ ಫಲವೇ ಇಷ್ಟು ನೀನು ಸೊಕ್ಕಿದುದು' ಎನ್ನುತ್ತ ಬಹುಪರಿಯಾಗಿ ಬೈಗುಳ ಮಳೆಗರೆದನು. ಅಷ್ಟಾದರೂ ಅವನಿಗೆ ಕೋಪವಿಲ್ಲ, ತಾಪವಿಲ್ಲ. ಮೌನದಿಂದ ಅವನು ಗುರುವಿನ ಪಾದಗಳನ್ನು ಸೇವೆಗೋಸುಗ ಹಿಡಿದನು. ಆಶ್ಚರ್ಯ ಅವು ನಿಜವಾಗಿ ಹೂಗಳಂತೆ ಮೃದುವಾಗಿವೆ. ಇನ್ನು ಅದೇ ತುಸು ಕೈಯಾಡಿಸಿದನು. ಥಟ್ಟನೇ ಗುರು ಕಾಲಿನಿಂದ ಝಾಡಿಸಿ ಒದ್ದು–' ಥೂ-ಥೂ, ಏಳು ದೂರಾಗು, ನಿನ್ನ ಕೈ ಕಲ್ಲಿಗಿಂತ ಬಿರುಸಾಗಿವೆ, ಇಂಥ ಕೈಗಳಿಂದ ನಾನು ಸೇವೆ ಸ್ವೀಕರಿಸಲಾರೆ. ನೀನು ಶುದ್ಧ ಕೋಣನಾಗಿರುವೆ' ಎಂದು ನಿಂದಿಸಿದನು. ಆದರೂ ಗಣಪತಿಯಲ್ಲಿ ಯಾವ ವಿಕಾರಗಳೂ ಕಾಣದಾಗಲೂ ಗುರುವು– 'ನೀನು ಗಟ್ಟಿಮುಟ್ಟಾಗಿರುವೆ, ನಿನಗಿನ್ನು ತಕ್ಕಂಥ ಸೇವೆಗಳನ್ನೇ ಹೇಳಬೇಕಾಯಿತು. ಒಳ್ಳೇದು, ಮುಂದಿನ ವಿಚಾರವಿರಲಿ, ನೀನು ಅಡವಿಗೆ ಹೋಗಿ ನಮಗೆ ಬೇಕಾಗುವ ಕಟ್ಟಿಗೆಗಳನ್ನು ತೆಗೆದುಕೊಂಡು ಬಾ' ಎಂದನು. ಗಣಪತಿ ಅಪ್ಪಣೆ ಎಂದು ಹೊರಡಲು ಸಿದ್ಧನಾಗಿ ನಿಂತನು. ಆಗ ಮತ್ತೆ ಗುರುದೇವ– 'ಥೂ, ಅದುಕೂಡ ನಿನ್ನಿಂದ ಸರಿಯಾಗಿ ನೆರವೇರಲಾರದು. ಯಾಕಂದರೆ ನೀನು ಶತಮೂರ್ಖನಿರುವಿ, ಉರಿಯದಂಥ ಕಟ್ಟಿಗೆ ತಂದಿಟ್ಟರೆ ಮಾಡುವದೇನು? ನಿಲ್ಲು, ನಾನೂ ಜೊತೆಗೆ ಬರುತ್ತೇನೆ' ಎಂದು ನುಡಿದು ಶಿಷ್ಯನ ಸಂಗಡ ತಾನೂ ನಡೆದನು. ಅಡವಿಯಲ್ಲಿ ಗಣಪತಿಯೊಬ್ಬನೇ ಬಹಳ ಕಟ್ಟಿಗೆಗಳನ್ನು ಸಂಗ್ರಹಿಸಿದನು. ಹೊರೆಕಟ್ಟ ಸಿದ್ಧವಾಯಿತು. ಗಣಪತಿ ಅದನ್ನು ಹೊತ್ತುಕೊಂಡು ನಿಂತನು. ಆಗ ಗುರುವು ತನ್ನ ಕೈಯಲ್ಲಿ ಸವುಳಾದ ಒಂದು ಕಟ್ಟಿಗೆ ಹಿಡಿದುಕೊಂಡು– 'ಹೂ! ನೀನು ಮುಂದೆ ಮುಂದೆ ನಡೆ ನಾನು ಹಿಂದಿನಿಂದ ಬರುತ್ತೇನೆ ಎನ್ನಲು ಶಿಷ್ಯ ಮುಂದೆ ನಡೆದನು.

ನಿಜವಾಗಿ ನೋಡಿದರೆ ಆ ಕಟ್ಟಿಗೆಹೊರೆ ಇಬ್ಬರು ಹಿಡಿದು ಎತ್ತಿದರೂ ನೆಗವಲಾರದಂಥದು. ಅಂಥ ಹೊರೆ ಹೊತ್ತು ಗಣಪತಿ ನಡೆದಿರಲು ಭಾರವು ಹೆಚ್ಚೆನಿಸಿ ಕುತ್ತಿಗೆ, ಬೆನ್ನು ನೋಯಹತ್ತಿದವು. ವಿಶ್ರಾಂತಿ ಪಡೆದುಕೊಂಡು ಹೇಗಾದರೂ ಒಯ್ಯಬೇಕೆಂದರೆ ಗುರುನಾಥನಿಗೆ ಅದು ಒಪ್ಪಿಗೆಯಿಲ್ಲ. ಎಲ್ಲಿಯಾದರೂ ಒಂದು ಕ್ಷಣ ನಿಂತುಕೊಂಡರೆ ಬೆನ್ನು ಮೇಲೆ ಏಟು ಬಿದ್ದಿತೇ. ತಲೆಯ ಮೇಲೆ ಕಟ್ಟಿಗೆ ಹೊರೆಯಭಾರ, ನಿಂತರೆ ಬಡಿಗೆಯಪೆಟ್ಟು. ಈ ಪ್ರಸಂಗ

ದಲ್ಲಿ ಗಣಪತಿಯನ್ನು ಕೇಳುವವರಾರು? ರಾಮ-ರಾಮ ಎಂದು ನಾಮವನ್ನು ಸ್ಮರಿಸುತ್ತ ಕೆಲವೇಳೆ ಅಂತೂ ಇಂತೂ ನಡೆದು ನಿಟ್ಟುಸಿರಿಡುತ್ತ ಕ್ಷಣಹೊತ್ತು ನಿಂತುಕೊಂಡನು. ಅಷ್ಟರಲ್ಲೇ ಅವನಿಗೆ ಸಾಕು-ಸಾಕೆನಿಸಿ ಹೋಗಿತ್ತು. ಹಾಗೆಂದು ಅವನಲ್ಲಿ ಗುರುಭಕ್ತಿಯೇ ಕಡಿಮೆಯಾಗಿದೆ ಎಂದೇನೂ ಅನ್ನುವಂತಿರಲಿಲ್ಲ. ಆದರೆ ಈ ಕಟ್ಟಿಗೆಯ ಭಾರ ತಾಳಲಾರದಷ್ಟಾಗಿತ್ತು. ತುಸು ವಿಶ್ರಾಂತಿ ಪಡೆಯಬೇಕೆಂದು ಅವನು ನಿಲ್ಲುವದೇ ತಡ, ಛಟ್ ಎಂದು ಸದ್ಗುರುವಿನ ಕೈಯ ಕಟ್ಟಿಗೆಯ ಪೆಟ್ಟು ಬೆನ್ನಿಗೆ ಬಿತ್ತು. ಒಂದು-ಎರಡು-ನಾಲ್ಕಾರು ಗಣಪತಿ ಕಳವಳಿಸಿದನು. ತಲೆ ತಿರುಗಿದಂತಾಯಿತು. ಕಣ್ಣಿಗೆ ಕತ್ತಲೆಗವಿಯಿತು. ದೊಪ್ಪನೆ ಭೂಮಿಗುರುಳಿದನು. ಕಟ್ಟಿಗೆಹೊರೆ ಅಷ್ಟು ದೂರ ಹೋಗಿ ಬಿತ್ತು. ಬಹಳ ದಣಿವಾದುದರಿಂದ ಬವಳಿ ಬಂದಿತು. ಮೈಮೇಲೆ ಎಚ್ಚರವೇ ಇರಲಿಲ್ಲ. ಶಿಷ್ಯನ ಅವಸ್ಥೆಯನ್ನು ಕಂಡು ಗುರುವಿನ ಮನಸ್ಸು ಕರಗಿತು. ಕೃಪೆ ತೋರಿ ಮೈತುಂಬ ಕೈಯಾಡಿಸಿ 'ಗಣಪತಿ ಇನ್ನು ಮೇಲೇಳು ಮಗು, ಎಂದು ನುಡಿಯಲು ಅವನಿಗೆ ಎಚ್ಚರವುಂಟಾಯಿತು. ಮೆಲ್ಲನೇ ಕೈ ಹಿಡಿದು ಒಂದು ಗಿಡದ ನೆರಳಿಗೊಯ್ದು ಕುಳ್ಳಿರಿಸಲು ಗಣಪತಿಪೂರ ಜಾಗ್ರತನಾಗಿ ಅತ್ತಿತ್ತ ನೋಡಿದನು. ಎದುರಿಗೆ ಗುರುದೇವ ಕೃಪಾಸಮುದ್ರ ಮಿಂದು ಆಯಾಸರಹಿತನಾದನು. ನಗುತ್ತ ಗುರು ನುಡಿದನು– 'ಗಣಪತಿ, ನಿನ್ನನ್ನು ಕಂಡಾಗಲೇ ನಾನು ತರ್ಕಿಸಿದ್ದೇನೆ. ನೀನು ನಿಜವಾಗಿ ದರೋಡೆಗಾರ.'

'ಅಂಥ ಮಾತೇಕೆ? ಗುರುದೇವಾ.'

'ಮತ್ತೇನು? ಇಂದಿನವರೆಗೆ ಯಾವ ಶಿಷ್ಯರಿಂದಲೂ ಆಗಿರಲಿಲ್ಲ. ನೀನು ಮಾತ್ರ, ಬರು ಬರುವಷ್ಟರಲ್ಲಿ ನನ್ನ ಜ್ಞಾನಭಾಂಡಾರವನ್ನೇ ಅಪಹರಿಸಿದೆ.'

'ಇಲ್ಲ, ಇಲ್ಲ. ನೀನೇ ಅನುಗ್ರಹಿಸಿ ಅದನ್ನು ನನ್ನ ಕೈವಶಮಾಡಿದೆ.' ಎಂದು ಗಣಪತಿ ಹೇಳಹೇಳುವಷ್ಟರಲ್ಲಿ ಕಣ್ಣು ಮುಚ್ಚಿದವು. ಪದ್ಮಾಸನ ಹಾಕಿದನು. ಸ್ವರ್ಗದಲ್ಲಿ ಸುಖಿಸುವ ದೇವತೆಗಳಿಗೆ ಕೂಡ ದುರ್ಲಭವೆನಿಸುವ ನಿರತಿಶಯ ಸಮಾಧಿ ಸುಖದಲ್ಲಿ ಗಣಪತಿ ಲೀನನಾದನು. ಅದನ್ನು ಕಂಡು ಶಿಷ್ಯನ ಯೋಗ್ಯತೆ ತಿಳಿದುದರಿಂದ ಗುರುವಿಗೆ ಬಹಳ ಸಂತೋಷವಾಯಿತು. ಸ್ವಲ್ಪವೇಳೆ ಅದೇ ಸ್ಥಿತಿಯಲ್ಲಿ ಗಣಪತಿಯುಳಿಯುವಂತೆ ತಡೆದು ನಂತರ ಯೌಗಿಕ ಯುಕ್ತಿಗಳಿಂದ ಅವನನ್ನು ಜಾಗ್ರತಗೊಳಿಸಿ– 'ಮಗು, ಜ್ಞಾನ-

ಭಾಂಡಾರವೆಲ್ಲ ನಿನ್ನ ಕೈವಶವಾಯಿತು. ಆದರೆ ಇದನ್ನು ಕಾಯ್ದುಕೊಂಡು ಹೋಗುವುದು ನಿನ್ನನ್ನೇ ಕೂಡಿದೆ. ಉಪಾಸನೆ ಇಲ್ಲದೆ ಜ್ಞಾನವು ದೃಢಪಡುವುದಿಲ್ಲ. ಅಖಂಡವಾಗಿ ನಾಮಸ್ಮರಣೆ ಮಾಡು. ದಾಸಬೋಧ ಮೊದಲಾದ ಗ್ರಂಥಗಳನ್ನು ಚೆನ್ನಾಗಿ ಮನನಮಾಡು. ಮುಗಿಯಿತು. ನಿನ್ನ ದರೋಡೆ ಯಶಸ್ವಿಯಾಯಿತು. ನೀನಿನ್ನು ಆ ಮತ್ತೈಶ್ವರ್ಯಕ್ಕೆ ಸ್ವಾಮಿ, ಸ್ವಾನಂದ ಸಾಮ್ರಾಜ್ಯ ಚಕ್ರವರ್ತಿ. ಮನೆಗೆ ತೆರಳು. ಲೋಕೋದ್ಧಾರ ಮಾಡು. ಭಗವದ್ಭಕ್ತಿಯನ್ನು ಬೆಳೆಸು. ಯೋಗ್ಯ ಅಧಿಕಾರಿಗಳಾದವರು ಯಾರಾದರೂ ಬಂದರೆ ಅವರಿಗೆ ಉಪದೇಶ ಕೊಡು. ನೀನು ಕೃತಾರ್ಥನಾದೆ. ಶುದ್ಧ ಚೈತನ್ಯರೂಪನಾದೆ ಇಂದಿನಿಂದ ನಿನಗೆ ಬ್ರಹ್ಮಚೈತನ್ಯನೆಂಬ ಹೆಸರಾಯಿತು.' ಎಂದು ಹೇಳಲು ಶಿಷ್ಯನ ಕುತ್ತಿಗೆ ಸೆರೆಗಳು ಬಿಗಿದುಬಂದವು. ಆನಂದಾಶ್ರುಗಳು ಸೂಸಿದವು. ಸದ್ಗುರು ಚರಣಕ್ಕೆ ಮಣಿದು ನುಡಿದನು. 'ಸದ್ಗುರುನಾಥನೇ, ಇದೆಂಥ ಆಶ್ಚರ್ಯಕರವಾಗಿದೆ. ಸಹಜ ಲಭ್ಯವಿರುವ ಸ್ವರೂಪವು ಮರೆಯಾಗಿ ಏನೋ ಕಳೆದುಕೊಂಡಂತೆ ಮನುಷ್ಯ ಹೊರಗೆ ಹುಡುಕುತ್ತಿರುವನಲ್ಲ.'

'ಹೌದು ಜನ್ಮ-ಜನ್ಮಾಂತರಗಳಲ್ಲಿ ಹೊರಗಿನ ಪ್ರಪಂಚವು ಸತ್ಯವೆಂದು ಭಾವಿಸಿಕೊಂಡಿದುದಕ್ಕೆ ದೊರೆಯುವ ದುಷ್ಟ ಫಲವೆಂದರೆ ಹುಡುಕುವುದು.'

'ನಿನ್ನಿಂದಲೇ ಅದನ್ನು ನಾನು ಪಡೆದೆ.'

'ಇಲ್ಲಿ ಸದ್ಗುರುವಿನ ಸಹಾಯ ಅವಶ್ಯ.'

'ನಾನು ನಿನ್ನನ್ನು ಮರೆಯಲಾರೆ.'

'ತಥಾಸ್ತು'

ಇಷ್ಟು ಸಂಭಾಷಣೆ ಜರುಗಿದ ನಂತರ ಬ್ರಹ್ಮಚೈತನ್ಯನು ತನ್ನ ಮನೆಗೆ ಮರಳಿದನು. ಅನೇಕ ಭಕ್ತರು-ಆರ್ತರು ಬರಲಾರಂಭಿಸಿದರು. ಸುಲಭವಾದ ನಾಮಮಂತ್ರವನ್ನು ಉಪದೇಶಿಸುತ್ತ ಬಹುಜನರನ್ನು ಉದ್ಧಾರ ಮಾಡಿದನು. ಭಕ್ತವೃಂದದಲ್ಲಿ ಗೊಂದಾವಲಿಕರ ಮಹಾರಾಜರೆಂದು ಅವನ ಹೆಸರು ಪ್ರಸಿದ್ಧವಾಯಿತು.

ಹುಬ್ಬಳ್ಳಿಯಲ್ಲಿರುವ ನವಿಲುಗುಂದದ ತಮ್ಮಣ್ಣ ಶಾಸ್ತ್ರಿಗಳು ಮಹಾರಾಜರ ಶಿಷ್ಯರು. ಒಳ್ಳೆ ಉಪಾಸಕರು. ಒಳ್ಳೆ ವಕ್ತಾರರು. ಅವರು ಮತ್ತು ಇತರ ಭಕ್ತರು ಕೂಡಿಕೊಂಡು ಒಂದು ಸಾರೆ ಬ್ರಾಹ್ಮ ಚೈತನ್ಯರನ್ನು ಹುಬ್ಬ

ಳ್ಳಿಗೆ ಆಮಂತ್ರಿಸಿದರು. ಶಿಷ್ಯರ ಪ್ರಾರ್ಥನೆಯನ್ನು ನಿರಾಕರಿಸಲಾಗದೇ ಭಕ್ತರನ್ನು ಸಂತೋಷಗೊಳಿಸಲು ಅವರು ಬಂದರು. ಜತೆಗೆ ಅವರ ದೊಡ್ಡ ಶಿಷ್ಯ ಸಮುದಾಯವೂ ಬಂದಿತ್ತು.

ಆ ಸಮಯದಲ್ಲಿ ಅನೇಕ ಮಂದಿ ಭಾವಿಕರು ಬ್ರಾಹ್ಮಚೈತನ್ಯರಿಂದ ಮಂತ್ರೋಪದೇಶ ಪಡೆದುಕೊಂಡರು. ಸಿದ್ಧನ ಕೀರ್ತಿಯು ಅವರ ಕಿವಿಗೂ ತಲುಪಿತ್ತು. ಕಾಣಬೇಕೆಂದು ಅವರೂ ಇಚ್ಛಿಸುತ್ತಿದ್ದರು. ಆದರೆ ಭಕ್ತರ ವಿಧಿ-ನಿಷೇಧಗಳ ಗೊಂದಲದ ಮಾತುಗಳಿಂದ ಭೆಟ್ಟಿಯಾಗುವುದಾಗಿರಲಿಲ್ಲ. ಹೀಗಿರಲು ಒಂದುದಿನ ಭಕ್ತರೊಬ್ಬರ ಮನೆಗೆ ಹೋಗುವದಿತ್ತು. ರೀತಿಯಂತೆ ಅವರ ಹಿಂದಿನಿಂದ ಅನೇಕ ಶಿಷ್ಯರು ತೆರಳತಕ್ಕವರು. ಆದರೆ ಮಹಾರಾಜರು ಯಾರೂ ಬರುವುದು ಬೇಡವೆಂದು ಹೇಳಲು ನಿರುಪಾಯರಾಗಿ ಶಿಷ್ಯರು ಸುಮ್ಮನೇ ಕುಳಿತರು. ತಾವೊಬ್ಬರೇ ಒಂದು ಗಾಡಿಯಲ್ಲಿ ಕುಳಿತು ನೆಟ್ಟಗೆ ಸಿದ್ಧಾಶ್ರಮಕ್ಕೆ ನಡೆದರು. ಇತ್ತ ಮಠದಲ್ಲಿ ಸಿದ್ಧನು ವಿಶ್ರಾಂತಿ ಪಡೆಯುತ್ತ ಇನ್ನೂ ಹಾಸಿಗೆಯಲ್ಲಿದ್ದವನು ಥಟ್ಟನೆ ಎದ್ದು ಬಳಿಯಲ್ಲಿದ್ದ ಶಿಷ್ಯನಿಗೆ- 'ಎಲೋ, ಈಗ ಬ್ರಹ್ಮಚೈತನ್ಯ ಮಹಾರಾಜ ಬರುತ್ತಾರೆ. ಸಿದ್ಧವಾಗಲಿ' ಎಂದು ನುಡಿದು ಹೊರಗೆ ಬಂದನು. ದೂರದಲ್ಲಿ ಬ್ರಹ್ಮಚೈತನ್ಯರು ಕಂಡರು. ಓಡುತ್ತಹೋಗಿ ಅವರನ್ನು ಆಲಿಂಗಿಸಿದನು. ಸಾಗರವು ಸಾಗರವನ್ನು ಭೆಟ್ಟಿಯಾದಂತೆ ಅದೊಂದು ಬ್ರಹ್ಮಸ್ಪರ್ಶ ಆದರೆ ಇಲ್ಲಿ ಜೀವನು ಯಾರು? ಬ್ರಹ್ಮನು ಯಾರು? ಎಂದು ಹೇಳುವುದು ಕಠಿಣ. ಯಾಕಂದರೆ ಇಬ್ಬರೂ ಬ್ರಹ್ಮಜ್ಞಾನಿಗಳು. ಇಬ್ಬರಿಗೂ ದೇಹವಿರಲಿಲ್ಲ. ಕೆಲಹೊತ್ತಿನವರೆಗೆ ಉಭಯತರೂ ಹಾಗೆ ನಿಂತರು.

ತರುವಾಯ ಜಾಗ್ರತಿಯನ್ನು ಹೊಂದಿ ಸಿದ್ಧನು ಬ್ರಹ್ಮಚೈತನ್ಯರ ಸ್ವಾಗತ ಮಾಡಿ ಕೈಹಿಡಿದು ಮಠಕ್ಕೆ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿದನು. ಆಗ ಮಹಾರಾಜರು ಸಿದ್ಧನಿಗೆ- 'ಸಿದ್ಧಾರೂಢಸ್ವಾಮಿಗಳೇ ನಾನು ಗೊಂದಾವಲಿಯಲ್ಲಿರುವುದು ನಿಜ, ಆದರೆ ನನ್ನ ಮಿತ್ರರಿರುವದು ಇಲ್ಲಿ. ಆದುದರಿಂದ ಈ ದೇಹವನ್ನೆಳೆದುಕೊಂಡು ಇಲ್ಲಿಗೆ ಬಂದೆವು. ನಿಮ್ಮ ನೆನವು ಯಾವಾಗಲೂ ನನಗೆ ಆಗುತ್ತಿತ್ತು, ಆದರೆ ಬರುವುದಾಗಲಿಲ್ಲ. ಈಗ ಒಂದು ಪ್ರಶ್ನೆ ನಾವು ರಾಮನಾಮೋಪಾಸಕರು. ಯಾವಾಗಲೂ ರಾಮ-ರಾಮನೆಂದು

ಸ್ಮರಣ ಮಾಡುತ್ತೇವೆ, ಮುಮುಕ್ಷುಗಳು ಯಾರಾದರೂ ಬಂದು ನಮಗೆ ಮೋಕ್ಷೋಪಾಯ ಹೇಳಿರಿ ಎಂದು ಕೇಳಲು ರಾಮನಾಮ ಸ್ಮರಣೆಯನ್ನು ಹೇಳುವೆವು. ಇದು ಸರಿಯಾದ ಉಪಾಯವೇ? ಹೇಳಿ ನಿಮ್ಮ ಅಭಿಪ್ರಾಯ ವೇನು? ಎನ್ನಲು ಸಿದ್ಧನು– ನಾಮಕ್ಕಿಂತ ಸುಲಭೋಪಾಯವು ಮೋಕ್ಷಕ್ಕೆ ಇನ್ನೊಂದಿಲ್ಲ. ಇದನ್ನು ಜೀವಿಗಳಿಗೆ ತಿಳಿಸುವದಕ್ಕಾಗಿಯೇ ಈಶ್ವರನು ಯಾವಾಗಲೂ ರಾಮನಾಮ ಜಪ ಮಾಡುತ್ತಾನೆ. ಮನುಷ್ಯರು ಅನುಭವಿಸುವ ಎಲ್ಲ ರಸಗಳಲ್ಲಿ ನಾಮರಸವು ಒಳ್ಳೆ ಮಾಧುರ್ಯಯುಕ್ತವೂ, ಶ್ರೇಷ್ಠವೂ ಎನಿಸಿದೆ. ಉಳಿದ ಮೋಕ್ಷ ಸಾಧನೆಯ ಉಪಾಯಗಳನ್ನು ಅವಲಂಬಿಸುವದಾದರೆ ಬಹಳ ವಿಧಿ–ನಿಷೇಧಗಳನ್ನು ಪಾಲಿಸಬೇಕಾಗುವುದು. ನಾಮಸ್ಮರಣೆಗೆ ಯಾವ ನಿರ್ಬಂಧವೂ ಇಲ್ಲ. ಭಗವಂತನ ಹೆಸರನ್ನು ಮಕ್ಕಳಿಗಿಟ್ಟು ಕರೆಯಲಿ, ಅಥವಾ ಹಾಸ್ಯಕ್ಕಾಗಿ ಉಚ್ಚಾರ ಮಾಡಲಿ, ಹೇಗೆ ಸ್ಮರಣ ಮಾಡಿದರೂ ನಿಶ್ಶೇಷವಾಗಿ ಪಾಪರಾಶಿ ಸುಟ್ಟು ಹೋಗುವುದೆಂದು ಜ್ಞಾನಿಗಳಾದ ಶುಕ್ರಾಚಾರ್ಯರು ಹೇಳಿದ್ದಾರೆ. ಭಗವನ್ನಾಮವು ಜ್ಞಾನಿ–ಅಜ್ಞಾನಿ-ಪುಣ್ಯವಂತ-ಪಾಪಿ ಇವರೆಲ್ಲರಿಗೂ ಪ್ರಿಯವಾದುದು. ಮುಮುಕ್ಷುಗಳಿಗೆ ಇಂಥ ಶ್ರೇಷ್ಠವಾದ ನಾಮಸ್ಮರಣೆಯನ್ನು ನೀವು ಉಪದೇಶಿಸುವುದು ಯೋಗ್ಯವಾಗಿದೆ. ನಮ್ಮ ಮಠದಲ್ಲಿ ಕೂಡ ಶಿವರಾತ್ರಿಯ ಉತ್ಸವ ಸಮಯದಲ್ಲಿ ಅಖಂಡ ನಾಮಘೋಷವು ಏಳು ದಿನಗಳ ವರೆಗೆ ನಡೆಯುವುದು ಪದ್ಧತಿಯಾಗಿದೆ. ತತ್ವದ ವಾಚ್ಯನಾದ ಪರಬ್ರಹ್ಮನೇ ನಾಮಕ್ಕೆ ಪರ್ಯಾಯವೆನಿಸಿದ್ದಾನೆ. ನೀವು ಲೋಕೋದ್ಧಾರಕ್ಕಾಗಿ ಬಂದವರೆಂಬುದನ್ನು ನಾನು ಬಲ್ಲೆ. ಉತ್ತಮ ರೀತಿಯಿಂದ ಆ ಕಾರ್ಯವನ್ನು ನಿರ್ವಹಿಸುತ್ತಿರುವಿರಿ. ಇದಕ್ಕೆ ಮತ್ತೊಬ್ಬರ ಅನುಮೊದನೆಯಾಗಲೀ, ಪ್ರಶಂಶೆಯಾಗಲೀ ಯಾತಕ್ಕೆಬೇಕು?' ಎಂದು ನುಡಿದನು.

ಅವರಿಬ್ಬರ ಅಮೃತವಾಣಿ ಭಕ್ತಜನರಿಗೆ ಸಂಜೀವಿನಿ ಎನಿಸಿತು. ಉಚ್ಚ ಕಂಠದಿಂದ ನಾಮಘೋಷವನ್ನು ಮಾಡಿದರು. ಅಲ್ಲಿದ್ದ ಸುವಾಸಿನಿಯರು ಆರತಿಯನ್ನೆತ್ತಿ ಉಭಯ ಜ್ಞಾನಿಗಳಿಗೆ ಮಣಿದು ಧನ್ಯತೆಪಡೆದರು. ಇಷ್ಟಾದ ಮೇಲೆ ಸಿದ್ಧನು ಮಹಾರಾಜರ ಕೈಹಿಡಿದು ಒಳಮನೆಗೆ ಕರೆದೊಯ್ದು ಫಲಹಾರದ ಪದಾರ್ಥಗಳನ್ನು ತರಿಸಿದನು. ಅದೂ ಒಂದು ವಿಚಿತ್ರವೇ. ಬಾಳೇ ಹಣ್ಣು ಸುಲಿದು ಸಿದ್ಧನು ಮಹಾರಾಜರ ಬಾಯಿಗೆ ಹಾಕಬೇಕು, ಅವರು

ತಿನ್ನಬೇಕು. ಹೀಗೆ ಮಕ್ಕಳಾಟದಂತೆ ಫಲಹಾರ ಮುಗಿಸಲು ಬ್ರಹ್ಮಚೈತನ್ಯರು ಸಿದ್ಧನ ಅಪ್ಪಣೆ ಪಡೆದು ತಮ್ಮಣ್ಣ ಶಾಸ್ತ್ರಿಗಳಲ್ಲಿ ಬಂದರು. ಮಹಾರಾಜರೂ ಯಾರಿಗೂ ಸೂಚನೆಯನ್ನು ಸಹಕೊಡದೇ ಸಿದ್ಧಾರೂಢ ಸ್ವಾಮಿಗಳ ಭೆಟ್ಟಿಗೆ ಹೋಗಿರುವರೆಂಬುದನ್ನು ಶಾಸ್ತ್ರಿಗಳು ತಿಳಿದಿದ್ದರು. ಆದರಿಂದ ಅವರಿಗೆ ಬಹಳ ಆಶ್ಚರ್ಯವಾಗಿತ್ತು. ಮಹಾರಾಜರು ಬಂದ ಕೂಡಲೇ ಪ್ರಶ್ನೆ ಮಾಡಿದರು.

'ನಾನು ಪ್ರಪಂಚದಲ್ಲಿ ಹೊರಳುವ ಪ್ರಾಣಿ. ಸತ್ಪುರುಷರ ಮನೋಗತವನ್ನಾಗಲೀ, ಅವರ ಲೀಲೆಗಳ ರಹಸ್ಯವನ್ನಾಗಲೀ ತಿಳಿಯಲು ಸಮರ್ಥನಲ್ಲ. ಕುತೂಹಲವಶನಾಗಿ ತಮಗೆ ಪ್ರಶ್ನೆಮಾಡುತ್ತೇನೆ ಕ್ಷಮಿಸಬೇಕು. ಸಿದ್ಧಾರೂಢ ಸ್ವಾಮಿ ತಮ್ಮ ವರೆಗೆ ಇರಿದರೆ?'

'ಶಾಸ್ತ್ರಿಗಳೇ ನಿಮ್ಮ ಮಾತಿಗೆ ಉತ್ತರ ಹೇಳುವುದು ಬಲು ತೊಡಕು. ಯಾಕಂದರೆ ಒರೆಗೆ ಹಚ್ಚುವ ನಾನು ಯಾರು. ಒರೆಗೆ ಇರಿಯುವ ಸಿದ್ಧಾರೂಢ ಸ್ವಾಮಿ ಯಾರು? ಸರ್ವವ್ಯಾಪಕನೂ, ಸಚ್ಚಿದಾನಂದಘನನೂ ಆದ ಭಗವಂತನು ದೇಶ, ಕಾಲೋಚಿತ ರೂಪಗಳನ್ನು ಧರಿಸಿ ಜೀವಿಗಳನ್ನು ಉದ್ಧರಿಸುತ್ತಾನೆ. ಭಗವಂತನ ಈ ಕಾರ್ಯ ಹೊಸದೇನೂ ಅಲ್ಲ. ಯುಗ-ಯುಗಗಳಿಂದಲೂ ಅಖಂಡವಾಗಿ ಭಗವಂತನ ಕಾರ್ಯ ಸಾಗಿಯೇ ಇದೆ. ಹಿಂದೆ ಜ್ಞಾನೇಶ್ವರ ರೂಪದಿಂದ ಅವತರಿಸಿ ಮಹಾರಾಷ್ಟ್ರದ ಭಕ್ತರನ್ನು ಉದ್ಧರಿಸಿದರು. ಈಗ ಸಿದ್ಧಾರೂಢ ಸ್ವಾಮಿಗಳ ರೂಪದಿಂದ ಬಂದು ಕರ್ನಾಟಕ ಭಕ್ತರನ್ನು ಉದ್ಧಾರ ಮಾಡುತ್ತಿದ್ದಾರೆ. ಇವರು ಜ್ಞಾನೇಶ್ವರನ ಅವತಾರ,

ಎಂದು ನುಡಿದು ಮಹಾರಾಜರು ಸುಮ್ಮನಾಗಲು ಶಾಸ್ತ್ರಿಗಳು ಕೌತುಕಬಟ್ಟು ಸಿದ್ಧನ ದರ್ಶನಕ್ಕೆ ಬಂದು ಸಹಜವೆನ್ನುವಂತೆ ಮಾತಾಡಿದರು.

'ಸಿದ್ಧಾರೂಢ ಸ್ವಾಮಿಗಳೇ, ಬ್ರಹ್ಮಚೈತನ್ಯ ಮಹಾರಾಜರು. ತಮ್ಮ ದರ್ಶನಕ್ಕೆ ಬಂದಿದ್ದರೆಂದು ಕೇಳಿದೆನು. ನಾವು ಯಾರ ಯೋಗ್ಯತೆಯನ್ನೂ ಅರಿಯದ ಮೂಢರು. ಆದರೂ ಸಲಿಗೆಯಿಂದ ಒಂದು ಮಾತನ್ನು ಕೇಳುತ್ತೇನೆ. ಬ್ರಹ್ಮಚೈತನ್ಯರು ಹೇಗಿದ್ದಾರೆ? ಮಹಾತ್ಮರೆನಿಸಿದವರೇ ಮಹಾತ್ಮರ ಗುರುತು ಬಲ್ಲರು.'

ಶಾಸ್ತ್ರಿಗಳ ಮಾತು ಕೇಳಿ ಸಿದ್ಧ ನುಡಿದನು.

'ಶಾಸ್ತ್ರಿಗಳೇ, ಹಿಂದಿನ ರಾಮದಾಸರೇ ಬ್ರಹ್ಮಚೈತನ್ಯರೆನಿಸಿ ಭೂಮಿಗಿಳಿದಿದ್ದಾರೆ. ನಮ್ಮ ಭರತ ಭೂಮಿಯಲ್ಲಿ ಈ ಅವತಾರ ಪರಂಪರೆಯು ಅವ್ಯಾಹತವಾಗಿ ನಡೆದು ಬಂದಿರುವುದು. ಆ ಅವತಾರ ಕೆಲವು ಸಾರೆ ವಿಶೇಷ ಪ್ರಕಾರದಿಂದ ಕೂಡಿರಬಹುದು. ಒಟ್ಟನಲ್ಲಿ ಉದ್ಧಾರ ಕಾರ್ಯ ಪರಿಸ್ಥಿತಿಗನುಸಾರವಾಗಿ ನಡೆಯ ವುದು. ಈ ರಹಸ್ಯವನ್ನು ತಿಳಿದ ವಿಚಾರಿಗಳಿಗೆ ಉದ್ಧಾರ ಮಾರ್ಗವು ಸುಗಮವೆನಿಸುವುದು.'

ಎಂದು ನುಡಿದ ಸಿದ್ಧನ ಮಾತುಗಳನ್ನು ಕೇಳಿ ತಮಗೊಂದು ಹೊಸ ದೃಷ್ಟಿಯುಂಟಾಯಿತೇನೋ ಎನ್ನುವಷ್ಟು ಸಂತಸಪಟ್ಟು ಶಾಸ್ತ್ರಿಗಳು ಅಪ್ಪಣೆ ಪಡೆದು ವಂದಿಸಿ ತೆರಳಿದರು.

೪೫

ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಣಮ್ ।
ಅತಃ ಪ್ರಯತ್ನಾತ್ ಜ್ಞಾತವ್ಯಂ ತತ್ವಜ್ಞಾತ್ತತ್ವಮಾತ್ಮನಃ ॥
—ವಿವೇಕಚೂಡಾಮಣಿ

ಹೇಳಿದ್ದೆ ಹೇಳುವರು । ಕೇಳಿದ್ದೆ ಕೇಳುವರು ।
ಕೇಳಿದ್ದ ಕೇಳಿ ಸುಖಿಸುವರು, ಗುರುಗಳ ।
ಹೇಳಿಕೆಯೆ ಬೇರೆ ಸರ್ವಜ್ಞ ॥ —ಸರ್ವಜ್ಞ

ಮಾತುಗಳ ಮಲಕು ಮನುಷ್ಯನ ಮನಸ್ಸನ್ನು ಭ್ರಮೆಗೊಳಿಸುವ ಮಹಾರಣ್ಯವಿದ್ದಂತೆ. ಆದುದರಿಂದ ಬಹಳ ಎಚ್ಚರ ವಹಿಸಿ ಜ್ಞಾನಿಗಳಾದವರಿಂದ ಆತ್ಮ ತತ್ವವನ್ನು ತಿಳಿಯಬೇಕು.

ಬುದ್ಧಿಶಾಲಿಗಳಾದವರಿಗೆ ವೇದಾಂತ ಶಾಸ್ತ್ರವನ್ನರಿಯುವುದೇನೂ ದೊಡ್ಡದಲ್ಲ. ಅದನ್ನು ಮೈಗೂಡಿಸಿಕೊಳ್ಳುವುದು ದೊಡ್ಡದು. ಅದಕ್ಕೇ ಸಾಧನೆ ಎಂದು ಹೆಸರು. ಮತ್ತೊಬ್ಬರಿಗೆ ಹೇಳುವಾಗ ಅಥವಾ ಉಪದೇಶ ಮಾಡುವಾಗ ತರ್ಕ-ಯುಕ್ತಿಬದ್ಧವಾಗಿ ಉಪದೇಶ ಕೊಡಲು ಪಾಂಡಿತ್ಯ ನೆರವಾಗು

ತ್ತದೆ. ಆದರೆ ತನ್ನ ಮನಸ್ಸನ್ನು ಸಮಾಧಾನಗೊಳಿಸಿಕೊಳ್ಳುವಾಗ ಅದೆ ಪಾಂಡಿತ್ಯ ಅಡ್ಡಿಯಾಗುತ್ತದೆ ಎಂಬುದು ಎಲ್ಲ ವಿಚಾರವಂತರ ಅನುಭವ.

ಜನ್ಮ-ಜನ್ಮಾಂತರಗಳಿಂದ ಜಗತ್ತು ಸತ್ಯವೆಂಬ ಬುದ್ಧಿಯೂ, ಇಲ್ಲಿ ಪದಾರ್ಥಗಳ ವಿಷಯದಲ್ಲಿ ರಾಗ-ದ್ವೇಷಗಳೂ ಅದರಿಂದ ವಾಸನೆಗಳೂ ಮನು ಷ್ಯರಲ್ಲಿ ಬೆಳೆದುಬಂದಿರುತ್ತವೆ. ಇಂಥ ವಾಸನೆಗಳನ್ನು ನಿರ್ಮಲಗೊಳಿಸ ವುದು ಸಾಧ್ಯವಲ್ಲ. ಅದಕ್ಕೆ ಬ್ರಹ್ಮನಿಷ್ಠನಾದ ಸದ್ಗುರುವಿನ ಅನುಗ ಹವೇಬೇಕು.

ಹಿಂದಿನ ಅಧ್ಯಾಯದಲ್ಲಿ ಹೇಳಿದ ತಮ್ಮಣ್ಣ ಶಾಸ್ತ್ರಿಗಳು ಮೂಲತ ನವಿಲುಗುಂದದವರು. ಕಾರಣಾಂತರ ಅವರು ಹುಬ್ಬಳ್ಳಿಯಲ್ಲಿ ನೆಲೆಸಿದ್ದರು ಒಳ್ಳೇ ಧರ್ಮಾಭಿಮಾನಿಗಳೂ ಅಲ್ಲದೇ ದೈವಭಕ್ತರು. ರಸಾಳವಾಣಿಯಿಂದ ಇವರು ಪುರಾಣ ಹೇಳುವರು. ಹೀಗಾಗಿ ಪಂಡಿತ-ಪಾಮರರೆನ್ನದೇ ಶ್ರೋತೃಗಳ ನೆರೆಯುವರು. ವಿಶೇಷ ಪುರಾಣಿಕರೆಂದು ಅವರ ಖ್ಯಾತಿ. ಸ್ವಧರ್ಮಾಚರಣ ಗಳನ್ನು ಮಾಡುತ್ತ ಬಹುದಿನಗಳವರೆಗೆ ಭಗವದುಪಾಸನೆಯನ್ನು ಇವರು ಮಾಡುತ್ತ ಬಂದುದಕ್ಕೆ ಫಲವಾಗಿ ಪರಮಾರ್ಥ ಪ್ರೀತಿಯು ಅತಿಶಯವಾಗಿ ಇವರಲ್ಲಿ ಬೆಳೆದುಬಂದಿತ್ತು. ಯಾವಾಗಲೂ ಸಜ್ಜನ ಸಂಗವನ್ನು ಇವರು ಅಪೇಕ್ಷಿಸುವರು. ತಾವು ಕಂಡ ಒಳಿತಿನ ಅಂಶಗಳನ್ನು ಪ್ರೀತಿಸುವರು.

ಸ್ವತಃ ಪಂಡಿತರಾದ ಕಾರಣ ವೇದಾಂತ ಶಾಸ್ತ್ರವನ್ನೇನೂ ಬೇರೆಯವರ ಬಳಿಯಲ್ಲಿ ಓದಬೇಕಾಗಿರಲಿಲ್ಲ. ಆದರೂ ಶಬ್ದಜಾಲದ ಮಹಾರಣ್ಯದಲ್ಲಿ ಒಮ್ಮೊಮ್ಮೆ ಬಳಲುವರು. ಸಮಾಧಾನಕ್ಕಾಗಿ ಯತ್ನಿಸುವರು, ವೈರಾಗ್ಯ-ಅಹಂಕಾರರಾಹಿತ್ಯ ಮುಂತಾದ ಗುಣಗಳಂತೂ ಇದ್ದೇಇದ್ದವು. ಹೀಗಿರಲು ಒಂದುಸಾರೆ ಇವರು ಸಿದ್ಧಾರೂಢಸ್ವಾಮಿಗಳಿಗೆ ದರ್ಶನರಾದರು. ಇವರ ಶರ ಣಾಗತಿಯು 'ಗುರುವಿಲ್ಲದೇ ಜ್ಞಾನಸಿದ್ಧಿ ಇಲ್ಲ.' ಎಂಬ ಮಾತನ್ನು ಜನರಿಗೆ ತೋರಿಸುವುದಕ್ಕಾಗಿಯೋ ಅಥವಾ ಜ್ಞಾನಲಾಭಕ್ಕಾಗಿಯೋ ಹೇಳಬರದು ಸದ್ಗುರು ದರ್ಶನ ಪಡೆದು ನುಡಿದರು.

'ಸದ್ಗುರುನಾಥನೇ, ನಾನು ಪ್ರಪಂಚದಲ್ಲಿ ಬಹಳ ಬಳಲಿದೆನು. ಈ ಬಳಲಿಕೆ ಏಕೆ? ಇದನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎಂಬುದನ್ನು ನಾನು

ತಿಳಿಯುತ್ತೇನೆ. ಆದರೆ ಆಚರಣೆಯಲ್ಲಿಳಿಸುವುದು ಬಹಳ ಕಠಿಣವೆನಿಸುತ್ತದೆ. ಹೀಗಾಗಿ ನನ್ನ ಉಪಾಯಗಳೆಲ್ಲವು ನಿಂತವು. ದಯಮಾಡಿ ನನ್ನನ್ನು ಉದ್ಧರಿಸಬೇಕು.

ಶಾಸ್ತ್ರಿಗಳ ಮಾತು ಕೇಳಿ ಸದ್ಗುರುವು 'ಶಾಸ್ತ್ರಿಗಳೇ ನೀವು ಬಂದುದು ಒಳ್ಳೇಯದಾಯಿತು. ಲೋಕದಲ್ಲಿ ಒಂದು ಜೀವ ಉದ್ಧಾರ ಹೊಂದಬೇಕಾದರೆ ಇನ್ನೊಂದು ಜೀವದ ನೆರವು ಬೇಕೆಬೇಕು. ಪರಮಾರ್ಥ ಪ್ರಸಂಗದಲ್ಲಿ ನೆರವಾಗುವವನಿಗೆ ಸದ್ಗುರುವೆನ್ನುವರಲ್ಲವೇ? ಅವತಾರವೆತ್ತಿ ಭೂಲೋಕಕ್ಕೆ ಬಂದ ಸರ್ವಜ್ಞಮೂರ್ತಿಯಾದ ಭಗವಂತ ಕೂಡ ಗುರುವನ್ನು ಅಂಗೀಕರಿಸಿದ್ದಾನೆ. ಪರಶುರಾಮನು ವಿದ್ಯಾಧಿದೇವನಾದ ವಿನಾಯಕನನ್ನು ಗುರುವಾಗಿ ಸ್ವೀಕರಿಸಿದ್ದಾನೆ. ರಾಮಚಂದ್ರನು ವಸಿಷ್ಠರನ್ನು ಮಾಡಿಕೊಂಡಿದ್ದಾನೆ. ಪುರುಷೋತ್ತಮನೆನಿಸಿದ ಶ್ರೀಕೃಷ್ಣನು ಕೂಡ ಸಾಂದೀಪನಿಗಳೆಂಬ ಗುರುಗಳನ್ನು ಆಶ್ರಯಿಸಿದ್ದಾನೆ. ದೇವಾಧಿದೇವರೆನಿಸುವ ಇವರೆಲ್ಲ ಗುರುಗಳನ್ನು ಸ್ವೀಕರಿಸಿದ ಮೇಲೆ ಮನುಷ್ಯಮಾತ್ರರಿಗೆ ಗುರುವಿನ ಅವಶ್ಯಕತೆಯಿದೆಯೆಂಬುದು ವ್ಯಕ್ತವಾದಂತಲ್ಲವೇ? ನಿಮಗೆ ಉಪದೇಶ ಕೊಡುವಂಥ ವಿಷಯ ನನ್ನ ಬಳಿಯಲ್ಲಿ ಏನೂ ಇಲ್ಲ. ಯಾಕಂದರೆ ವೇದಾಂತ ಶಾಸ್ತ್ರವೇ ನಿಮಗೆ ಕರಗತವಾಗಿದೆ. ಇಷ್ಟು ಮಾತ್ರ ಹೇಳಬಹುದು, ಜ್ಞಾನವು ದೃಢವಾಗಬೇಕಾದರೆ ಭಗವದುಪಾಸನೆಯೂ, ವೈರಾಗ್ಯವೂ ಬಲಗೊಳ್ಳಬೇಕು. ನಿಮ್ಮ ಅಭಿಪ್ರಾಯದಂತೆ ಇದಕ್ಕೆ ಸದ್ಗುರು ಕೃಪೆಯು ಅವಶ್ಯವಾಗಿದೆ. ಇಲ್ಲಿ ಇನ್ನೊಂದು ಮಾತೆಂದರೆ ಗುರು-ಶಿಷ್ಯರೆಂಬ ಸಂಬಂಧವೊದಗಿಬರಲು ಜನ್ಮಾಂತರ ಋಣಾನುಬಂಧವು ಇರಬೇಕಾಗುತ್ತದೆ. ಅದಿಲ್ಲದಿದ್ದರೆ ಗುರು-ಶಿಷ್ಯರೆಂಬ ಸಂಬಂಧವು ಉಂಟಾಗುವದಿಲ್ಲ. ನೀವೀಗ ಗೋಂದಾವಲಿಯ ಮಹಾರಾಜರ ಬಳಿಗೆ ಹೋಗಿರಿ. ಅಲ್ಲಿ ನಿಮ್ಮ ಇಷ್ಟಾರ್ಥವು ಸಿದ್ಧಿಸುವುದು. ಈ ರೀತಿ ನನ್ನ ಬಳಿಗೆ ಬಂದವರನ್ನು ಮತ್ತೊಬ್ಬರ ಬಳಿಗೆ ಕಳಿಸಿ ನಿಮ್ಮನ್ನು ತಿರಸ್ಕರಿಸಿದೆನೆಂದು ಸರ್ವಥಾ ತಿಳಿಯಬೇಡಿರಿ. ನಾನು ಹೀಗೆಮಾಡುವ ಕಾರಣವಿಷ್ಟೇ, ನಿಮ್ಮ ಶಿಷ್ಯತ್ವದ ಋಣಾನುಬಂಧವು ಅಲ್ಲಿದೆ.' ಎಂದು ಹೇಳಲು ಆ ಮಾತುಗಳಲ್ಲಿ ಗುರುವಿನ ಇತರ ಭಾವನೆಗಳಿಗಿಂತ ವಾತ್ಸಲ್ಯಭಾವನೆಯೇ ಶಾಸ್ತ್ರಿಗಳಿಗೆ ತೋರಿತು. ಅದರಿಂದ ಅವರು ಸಂತೋಷಿತರಾಗಿ ಗುರುನಾಥನಿಗೆ ವಂದಿಸಿ ಗೊಂದಾವಲಿಗೆ ಬಂದರು.

ಅಲ್ಲಿ ಮಹಾರಾಜರಿಗೆ ವಂದಿಸಿ ತಮ್ಮ ಮನೋಭಾವನೆಯನ್ನೆಲ್ಲ ನಿವೇದಿಸಿದರು. ಅದನ್ನು ಕೇಳಿ ಅವರು 'ಓ ಸರಿಯಾಯಿತು. ಸಿದ್ಧಾರೂಢ ಸ್ವಾಮಿಗಳೇ ಇಲ್ಲಿಗೆ ನಿನ್ನನ್ನು ಕಳಿಸಿರುವರು. ಈಗ ನೀನು ಒಂದೇ ಒಂದು ಸಾಧನೆ ಮಾಡು. ಆದರಿಂದ ನಿನ್ನ ಮನಸ್ಸು ಸಮಾಧಾನ ಪಡೆಯುವುದು. ತ್ರಯೋದಶಾಕ್ಷರ (೧೩ ಅಕ್ಷರಗಳಿಂದ ಯುಕ್ತ) ರಾಮನಾಮವನ್ನು ನೀನು ತ್ರಯೋದಶಲಕ್ಷ ಜಪಮಾಡು. ಅದರಿಂದ ನಿನ್ನ ಕಲ್ಯಾಣವಾಗುವುದು.' ಎಂದು ಉಪದೇಶ ಮಾಡಿದರು.

ಮುಂದೆ ಕೆಲವು ದಿನಗಳವರೆಗೆ ಶಾಸ್ತ್ರಿಗಳು ಅಲ್ಲಿದ್ದು ಹುಬ್ಬಳ್ಳಿಗೆ ಬಂದು ರಾಮನಾಮ ಜಪದ ಪುರಶ್ಚರಣವನ್ನು ಆರಂಭಿಸಿದರು. ಸಂಕಲ್ಪದಂತೆ ತ್ರಯೋದಶಲಕ್ಷ ಜಪ ಮುಗಿದವು. ಅಂದು ಶಾಸ್ತ್ರಿಗಳು ಧನ್ಯರಾದ ದಿನ. ಕೃತಕೃತ್ಯರಾದ ದಿನ. ನೀಲಮೇಘ ಶ್ಯಾಮಲಾಂಗನೂ, ಕೋದಂಡಧಾರಿಯೂ, ಪೀತಕೌಶೇಯಧರನೂ ಆದ ಶ್ರೀರಾಮನು ಪ್ರತ್ಯಕ್ಷವಾಗಿ ದೃಗ್ಗೋಚರನಾದನು. ಆ ಭುವನ ಮೋಹನ ರೂಪವನ್ನು ಕಾಣುತ್ತ ಶಾಸ್ತ್ರಿಗಳು ದೇಹಭಾನರಹಿತರಾಗಿ ಕ್ಷಣಮಾತ್ರ ಸ್ತಬ್ಧರಾದರು. ಆನಂದಾಶ್ರುಗಳು ಧಾರಾಕಾರವಾಗಿ ಸುರಿದವು. ದೇವ ನಿನ್ನ ದರ್ಶನ ಲಾಭವು ನನಗೆ ನಿತ್ಯದಲ್ಲಿ ದೊರೆಯಬೇಕು. ಪ್ರಪಂಚದಲ್ಲಿಯ ಮತ್ತೊಂದು ವಿಷಯವು ನನಗೆ ರುಚಿಸಬಾರದು. ಎಂದು ಬೇಡಿದರು. ರಾಮನು ಮಂದಹಾಸ ತೋರಿ 'ತಥಾಸ್ತು' ಎಂದು ನುಡಿಯುತಿರಲು ಅವನ ಚರಣ ಕಮಲಗಳಲ್ಲಿ ಹಣೆ ಇಟ್ಟರು. ರಾಮನು ಅಂತರ್ಧಾನ ಹೊಂದಿದ್ದನು. ಅವರು ಹಣೆ ಇಟ್ಟ ಬ್ರಹ್ಮಚೈತನ್ಯರ ಪಾದಗಳು ಗೋಚರಿಸಿದವು. ಶಾಸ್ತ್ರಿಗಳು ಆನಂದಾಶ್ಚರ್ಯದಿಂದ ಅವರ ಮುಖ ನೋಡಲು ಮಹಾರಾಜರಂದರು.

'ಶಾಸ್ತ್ರಿಗಳೇ, ಸಚ್ಚಿದಾನಂದ ಸ್ವರೂಪ ಸಿದ್ಧಾರೂಢಸ್ವಾಮಿಗಳು ನಿಮ್ಮನ್ನು ನನ್ನ ಕಡೆಗೆ ಕಳಿಸಿದವರಷ್ಟೇ. ಆ ನೆನಪಿಗಾಗಿ ನಾನು ನಿಮಗೆ 'ಸಚ್ಚಿದಾನಂದ'ರೆಂದು ನಾಮಕರಣ ಮಾಡುತ್ತೇನೆ. ನೀವಿನ್ನು ಜನರಲ್ಲಿ ದೈವಭಕ್ತಿಯನ್ನು ಜಾಗ್ರತಗೊಳಿಸುವ ಕಾರ್ಯದಲ್ಲಿ ತೊಡಗಿರಿ. ನಿಮ್ಮ ಮೇಲೆ ಪ್ರಭು ರಾಮಚಂದ್ರನ ಪೂರ್ಣಾನುಗ್ರಹವಾಗಿದೆ.'

ಹೀಗೆ ನುಡಿದ ಮಹಾರಾಜರ ಮಾತುಕೇಳಿ ಸಚ್ಚಿದಾನಂದರು ಆ ರಾಮಚಂದ್ರನ ಅನುಗ್ರಹವಾಗಲು ಸದ್ಗುರು ಕೃಪೆಯೇ ಕಾರಣವೆಂದು ಬಗೆದು ಕೃತಜ್ಞತೆಯಿಂದ ಪುನಃ ಪುನಃ ವಂದಿಸತೊಡಗಿದರು. ಅಷ್ಟರಲ್ಲಿ ಅಲ್ಲಿ ಯಾರೂ ಇಲ್ಲ. ಆಗ ಅವರಂದುಕೊಂಡರು. 'ಅಹಾ ಅದೊಂದು ಅದ್ಭುತ ಲೋಕ. ಕಂಡದ್ದು ಸುಳ್ಳೆನ್ನಲೇ? ಅಚ್ಚಳಿಯದಂತೆ ಮನದಲ್ಲಿ ಎಲ್ಲ ದೃಶ್ಯ ನಿಚ್ಚಳ ವಾಗಿದೆ. ನಿಜವೆನ್ನಲೇ? ತೋರಿಸಲು ಬರುವಂತಿಲ್ಲ. ಅಂತೂ ಸದ್ಗುರುವು ನನ್ನನ್ನು ಒಂದು ಅಗಾಧ ರಾಜ್ಯದಲ್ಲಿ ಪ್ರವೇಶ ಮಾಡಿಸಿದನು.'

ಇಷ್ಟಾದಮೇಲೆ ಸಚ್ಚಿದಾನಂದರು ಸದ್ಗುರು ಸಿದ್ಧಾರೂಢಸ್ವಾಮಿಯ ಬಳಿಗೆ ಇತ್ಥಿಂಭೂತ ಸಂಗತಿಯನ್ನೆಲ್ಲ ತಿಳಿಸಲು ಸಿದ್ಧನು ಮಂದಹಾಸ ಬೀರಿ ಅಂದನು.

'ಇಷ್ಟಕ್ಕೆ ಮುಗಿಯಲಿಲ್ಲ. ನಾವು ಭಗದ್ಭಕ್ತರು. ನಾವು ಶ್ರೇಷ್ಠ ಸಾಧಕರು. ಉಪಾಸಕರು. ಎಂಬ ಜಂಭವಳಿಯಬೇಕು. ನೀವಿನ್ನು ಮನೆ-ಮನೆಗೆ ಭಿಕ್ಷೆಬೇಡಿರಿ. ಆ ಸಾಮಗ್ರಿ ಸಂಗ್ರಹಿಸಿ ಅನ್ನದಾನ ಮಾಡುತ್ತಹೋಗಿರಿ. ಇದರಿಂದ ನಿಮ್ಮಲ್ಲಿ ನಿರಭಿಮಾನತೆ ಬೇರೂರುವುದು.'

ಸಚ್ಚಿದಾನಂದರು ನುಡಿದರು.

'ಇಂಥ ಒಂದು ವಿಚಾರವು ಮನದಲ್ಲಿದೆ. ನಿಮ್ಮ ಅಪ್ಪಣೆಯಂತೆ ಅವಶ್ಯ ವಾಗಿ ಭಿಕ್ಷೆ ಬೇಡುತ್ತೇನೆ. ಅದರಿಂದ ದೊರೆತ ಸಾಮಗ್ರಿಯನ್ನೆಲ್ಲ ದಾಸನ ನವಮಿಯ ಉತ್ಸವದಲ್ಲಿ ವೆಚ್ಚಮಾಡುತ್ತೇನೆ.'

'ಈಗ ನೀವು ದಾಸನ ನವಮಿಯ ಉತ್ಸವದಲ್ಲಿ ಮಾಡುತ್ತಿರುವಿರಾ?'

'ಇಲ್ಲ ಪ್ರಾರಂಭಿಸಬೇಕು. ಈ ವಿಚಾರ ಮಾತ್ರ ಬಹುದಿನಗಳಿಂದ ಮನ ದಲ್ಲಿತ್ತು. ಅದಕ್ಕೆ ಯೋಗ್ಯ ಕಾಲವು ಬಂದಿರಲಿಲ್ಲ. ಈಗ ರೋಗಿ ಬಯಸಿ ವೈದ್ಯ ಹೇಳಿದುದೂ ಒಂದೇ ಆದಂತಾಯಿತು. ಅನಾಯಾಸವಾಗಿ ದಾಸನ ನವಮಿಯೂ ಬಂದಿರುತ್ತದೆ. ಉತ್ಸವ ಪ್ರಾರಂಭಿಸಲು ಅಪ್ಪಣೆಯಾಗ ಬೇಕು.'

'ಸಂತೋಷ. ಅವಶ್ಯ ನಡೆಯಲಿ.'

ಶಾಸ್ತ್ರಿಗಳು ಸದ್ಗುರುವಿನ ಅಪ್ಪಣೆ ಪಡೆದು ಮನೆಗೆ ಬಂದು ಉತ್ಸವದ ಸಿದ್ಧತೆ ನಡೆಸಿದರು. ದೊಡ್ಡ ಹಂದರವು ಸಿದ್ಧವಾಯಿತು. ಏಳುದಿನ ಉತ್ಸವ

ನಡೆಯಬೇಕೆಂದು ಗೊತ್ತಾಗಿತ್ತು. ಪ್ರತಿನಿತ್ಯ ಭಜನೆ, ಕೀರ್ತನ, ಉಪನ್ಯಾಸ ಪುರಾಣಗಳು ನಡೆಯಬೇಕು. ಹಗಲು-ರಾತ್ರಿ ನಾಮಸ್ಮರಣೆ ಸಾಗಬೇಕು. ದೂರದೂರದ ಜನರು ನೆರೆದರು. ಯಾರು ಯಾರೋ ಸಹಾಯ ಮಾಡಿದರು. ಏಳು ದಿನಗಳ ವರೆಗೆ ಉತ್ಸವ ನಡೆದು ಎಂಟನೆಯ ದಿನವೇ ಸಮಾರಾಧನೆ. ಅದು ಭಿಕ್ಷೆಬೇಡಿ ತಂದ ಸಾಮಗ್ರಿಗಳಿಂದ ನಡೆಯಬೇಕು. ಎಂಟು-ಹತ್ತು ಸಾವಿರ ಜನ ಕೂಡಬಹುದೆಂದು ಮೊದಲು ಅಂದಾಜು ಮಾಡಿದ್ದರು. ಅನ್ನ ಪೂರ್ಣೆ ಪ್ರಸನ್ನಳಾದಂತೆ ಪಾಕಶಾಲೆ ತೋರಿತು. ಒಂದು ಪಂಕ್ತಿಯ ಊಟ ವಾಯಿತು. ಇನ್ನೊಂದು ಪಂಕ್ತಿಯಾಯಿತು. ಜನ ಬಂದೇ ಬರುತ್ತಿದ್ದರು. ಆ ಮಹಾ ಸಮಾರಾಧನೆಯ ಕಾಲದಲ್ಲಿ ಸಚ್ಚಿದಾನಂದರ ಪ್ರಾರ್ಥನೆಯಂತೆ ಸಿದ್ಧಾರೂಢ ಸ್ವಾಮಿ ಬಂದು ಸಮಾಧಾನಪಟ್ಟು ಶಾಸ್ತ್ರಿಗಳಿಗಂದರು. ಅಂತೂ ಭಿಕ್ಷೆಯ ಸಾಮಗ್ರಿಗಳಿಂದಲೇ ಸಮಾರಾಧನೆ ಜರುಗಿಸಿದಿರಾ ? ಎಂದು ನುಡಿದನು.

ಶಾಸ್ತ್ರಿಗಳೆಂದರು.

'ಅಷ್ಟಮಹಾಸಿದ್ಧಿಗಳಿಂದ ಸೇವೆಯನ್ನು ಕೈಕೊಳ್ಳುವ ಗುರುನಾಥ ಪ್ರಸನ್ನನಿರುವಾಗ ಕೊರತೆ ಯಾತರದು ? ಇದೆಲ್ಲ ಮಹಿಮೆ ನಿನ್ನದು. ನಾನು ನಿಮಿತ್ತ ಮಾತ್ರ.'

ಶಾಸ್ತ್ರಿಗಳ ನಿರಭಿಮಾನತೆಯಿಂದ ಸದ್ಗುರು ಸಂತೋಷ ತಾಳಿದನು. ಅಷ್ಟರಲ್ಲಿ ಕಾರ್ಯಕರ್ತರು ಬಂದು 'ಮಹಾರಾಜರೇ ಈಗ ಮತ್ತೆ ಮೊದಲಿನಷ್ಟೇ ಜನ ಊಟಕ್ಕೆ ಬಂದು ಕುಳಿತಿದ್ದಾರೆ. ಅನ್ನವು ಸಾಲುವಂತೆ ಕಾಣುವದಿಲ್ಲ.' ಎಂದು ಹೇಳಲು ಶಾಸ್ತ್ರಿಗಳು ಖಿನ್ನ ಮನಸ್ಕರಾದರು. ಯಾಕಂದರೆ ಉಳಿದ ಆಹಾರ ಪದಾರ್ಥ ಎರಡು-ಮೂರು ಸಾವಿರ ಜನರಿಗೆ ಸಾಲುವಷ್ಟು ಬಂದು ಊಟಕ್ಕೆ ಕುಳಿತಜನ ಏಳೆಂಟು ಸಾವಿರ. ಆಯುತ್ತ ವೇಳೆಯಲ್ಲಿ ಏನು ಮಾಡಬೇಕೆಂದು ತೋಚದೆ ಇರುವುದೇ ಶಾಸ್ತ್ರಿಗಳ ಖಿನ್ನತೆಗೆ ಕಾರಣವಾಗಿತ್ತು ಕೊನೆಗೆ ಸದ್ಗುರುನಾಥನ ಕೃಪೆ ಇದ್ದಂತಾಗಲಿ. ಎಂದುಕೊಂಡು ಸಿದ್ಧನೊಡನೆ ಪಾಕಶಾಲೆಗೆ ಬಂದರು. ಸಿದ್ಧನು ಅಲ್ಲಿದ್ದ ಅಡಿಗೆ ಪದಾರ್ಥಗಳನ್ನೆಲ್ಲ ಅಮೃತ ದೃಷ್ಟಿಯಿಂದ ಒಂದು ಸಾರೆ ಅವಲೋಕಿಸಿ 'ಇನ್ನೇನೂ ಚಿಂತೆಯಿಲ್ಲ ಎಲೆ ಬಡಿಸಲು ಪ್ರಾರಂಭವಾಗಲಿ. ರಾಮನನ್ನು ದೃಢವಾಗಿ ನಂಬಿರಿ.' ಎಂದು

ಹೇಳಿದನು. ಆಗ ಮಾತ್ರ ಭಾರವಿಳಿದವರಂತೆ ಶಾಸ್ತ್ರಿಗಳು ಸಮಾಧಾನ ಹೊಂದಿದರು. ಅದು ಸಹಜವೇ. ಈಗ ಬಂದ ಜನರನ್ನೆಲ್ಲ ಊಟ ಮಾಡಿಸಿ ತೃಪ್ತಿಗೊಳಿಸುವ ಭಾರವನ್ನು ಸಿದ್ಧ ಸ್ವೀಕರಿಸಿದ್ದನು.

ಬಂದ ಜನರೆಲ್ಲ ಉಂಡು ತೇಗಿದರು. ಇನ್ನೂ ತುಸು ಸಂಗ್ರಹ ಉಳಿದೇ ಇತ್ತು. ಆದರೆ ಚಮತ್ಕಾರ. ಬಡಿಸುವ ಜನರ ಊಟವಾದ ಮೇಲೆ ಏನೂ ಉಳಿಯಲಿಲ್ಲ. ಅದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಸಚ್ಚಿದಾನಂದರು ಸಿದ್ಧನನ್ನು ಮನಸಾರೆ ಸ್ತುತಿಸಿ ಭಕ್ತಿಯಿಂದ ಮಣಿದರು. ಉತ್ಸವ ಸಮಾಪ್ತವಾಯಿತು. ಸದ್ಗುರು ತನ್ನ ಆಶ್ರಮಕ್ಕೆ ಮರಳಿದನು.

ತಮ್ಮಣ್ಣ ಶಾಸ್ತ್ರಿಗಳು ದೈವಭಕ್ತಿಯ ಜಾಗೃತಿಯನ್ನೇ ತಮ್ಮ ವ್ರತವಾಗಿ ಸ್ವೀಕರಿಸಿದರು. ಯಾವಾಗಲೂ ಅವರಿಗೆ ಲೋಕೋದ್ಧಾರದ ಯೋಚನೆಯೇ ಯೋಚನೆ. ಒಮ್ಮೆ ಅವರು ಸಿದ್ಧನ ಬಳಿಗೆ ಬಂದು ನುಡಿದರು.

'ಪೂರ್ವ ಜನ್ಮದ ಪುಣ್ಯವು ಸಂಗ್ರಹವಾಗಿದ್ದರೆ ಮಾತ್ರ ಪಾಪನಾಶಕ್ಕೆ ಸಾಧನವಾದ ಭಗವನ್ನಾಮದಲ್ಲಿ ಪ್ರಿತಿಯುಂಟಾಗುವುದೆಂದು ಹೇಳುತ್ತಾರೆ. ಹಾಗೆ ಸಹಜ ಪ್ರೀತಿಯಿಂದ ನಾಮಸ್ಮರಣೆಯಲ್ಲಿ ನಿರತರಾದವರ ವಿಷಯವು ಬೇರೆಯಾದುದರಿಂದ ಆ ಮಾತಿರಲಿ. ಈಗ ಎಲ್ಲರಿಗೂ ನಾಮಸ್ಮರಣೆಯಲ್ಲಿ ಅಭಿರುಚಿಯುತ್ಪನ್ನವಾಗಬೇಕು. ಅಂಥದೊಂದು ಉಪಾಯವನ್ನು ಶೋಧಿಸಬೇಕೆನ್ನುತ್ತೇನೆ.'

'ಯಾವುದಾದರೂ ಉಪಾಯ ಕಂಡುಹಿಡಿದಿರುವಿರಾ?'

'ಕಂಡುಹಿಡಿದಿದ್ದೇನೆ ಅದಕ್ಕೆ ನೀವು ಮಾತ್ರ ಒಪ್ಪಬೇಕು.'

'ಯಾವ ಉಪಾಯ ಹೇಳಿರಿ ನೋಡೋಣ.'

'ನಮ್ಮ ಜಪ ಮಂತ್ರವು ತ್ರಯೋದಶಾಕ್ಷರದಿಂದ ಕೂಡಿರುವುದೆಂಬುದನ್ನು ನೀವು ಬಲ್ಲಿರಿ ಅದೇ ಮಂತ್ರ ಜಪ ತ್ರಯೋದಶ ಕೋಟಿಯಾಗಬೇಕಾಗಿದೆ. ಇದು ಮಹಾಕಾರ್ಯ. ಇದರಲ್ಲಿ ಎಲ್ಲರೂ ಭಾಗವಹಿಸಿ ಯಥಾಶಕ್ತಿಯಾಗಿ ಜಪಮಾಡಿ ತಾವು ಮಾಡಿದ ಜಪಸಂಖ್ಯೆಯನ್ನು ತಿಳಿಸಬೇಕು, ಎಂದು ಜನರಲ್ಲಿ ಪ್ರಕಟಗೊಳಿಸಬೇಕು, ಹೀಗೆ ಜನರ ಸಹಕಾರವನ್ನು ಕೋರುವದರಿಂದ ಅನೇಕರು ಇದರಲ್ಲಿ ಭಾಗವಹಿಸುವರೆಂದು ನಿರೀಕ್ಷಿಸಬಹುದು.'

'ಸರಿಯಾದ ಯುಕ್ತಿ ಶಾಸ್ತ್ರಿಗಳೇ. ಅವಶ್ಯವಾಗಿ ಈ ಕಾರ್ಯಮಾಡಿರಿ ನನಗೆ ಸಂತೋಷವಿದೆ.'

ಎಂದು ಸಿದ್ಧನು ಸಮ್ಮತಿ ನೀಡಲು ಶಾಸ್ತ್ರಿಗಳು ಅಪ್ಪಣೆ ಪಡೆದು ಜನರಲ್ಲಿ ತ್ರಯೋದಶಿಕೋಟಿ ರಾಮ ಮಂತ್ರ ಜಪಯಜ್ಞದ ವಿಚಾರವನ್ನು ಪ್ರಸಿದ್ಧಿ ಗೊಳಿಸಿದರು. ಬಹುಜನರು ಬಂದು ತಾವು ಇದರಲ್ಲಿ ಭಾಗವಹಿಸುವೆವೆಂದು ಹೆಸರುಕೊಟ್ಟು ಹೋದರು. ಅದರಂತೆ ಪ್ರತಿದಿನ ಮುಂಜಾನೆ ಬಂದು ತಾವು ಮಾಡಿದ ಜಪಗಳ ಸಂಖ್ಯೆಯನ್ನು ತಿಳಿಸಿ ಹೋಗತೊಡಗಿದರು. ದಿನದಿನಕ್ಕೆ ಸಂಖ್ಯೆ ಬೆಳೆಯುತ್ತ ಐದೂವರೆ ತಿಂಗಳಲ್ಲಿ ಜಪಯಜ್ಞ ಪೂರ್ಣವಾಯಿತು. ಆದರೆ ಜನರು ಜಪ ಮಾಡುವುದನ್ನು ಅಷ್ಟರಲ್ಲಿ ಮೈಗೂಡಿಸಿಕೊಂಡಿದ್ದರು. ಸಂಕಲ್ಪ ಮುಗಿಯಿತು. ಇನ್ನೇನೂ ಜಪಮಾಡುವ ಕಾರಣವಿಲ್ಲ. ಎಂದು ಒಬ್ಬರೂ ಜಪಮಾಡಲಿಲ್ಲ. ಆ ಉತ್ಸಾಹ ಕಂಡು ಶಾಸ್ತ್ರಿಗಳು ಪುನಃ ತ್ರಯೋದಶಕೋಟಿ ಜಪಯಜ್ಞದ ಸಂಕಲ್ಪ ಮಾಡಿದರು. ಭಕ್ತಿಪೂರ್ವಕವಾಗಿ ಜನರು ಜಪಮಾಡಿ ಸಂಖ್ಯೆಯನ್ನು ಒಪ್ಪಿಸತೊಡಗಿದರು. ಆ ಸಂದರ್ಭದಲ್ಲಿ ಯಾರೊಬ್ಬರ ಕೈಯಲ್ಲಿ ಜಪಮಣಿ. ಬಾಯಲ್ಲಿ ರಾಮಮಂತ್ರ.

ಅವರವರ ಪ್ರೀತಿ-ವಿಶ್ವಾಸಗಳ ತಾರತಮ್ಯದಂತೆ ಜಪಯಜ್ಞದಲ್ಲಿ ಭಾಗ ವಹಿಸಿದವರಿಗೆ ಆ ಜಪದಿಂದ ನಿರ್ವಿಷಯ ಆನಂದ ದೊರೆತು, ಆತ್ಮಲಾಭವಾಗಿರ ಬೇಕು. ಹೀಗಾಗಿ ಭಗವನ್ನಾಮದಲ್ಲಿ ಅತಿಶಯ ಪ್ರೀತಿಯುತ್ಪನ್ನವಾಗಿ ಯಾರೊಬ್ಬರೂ ಜಪ ಬಿಡಬಾರದು. ಇದನ್ನು ಕಂಡು ಶಾಸ್ತ್ರಿಗಳಿಗೆ ಬಹಳ ಸಂತೋಷ ಒಬ್ಬರನ್ನು ಕಂಡು ಒಬ್ಬರು ಎಂದಂತೆ ಅವರ ಕಾಲದ ಗಂಡು-ಹೆಣ್ಣು ಹುಡುಗ-ಹುಡಿಗೆ ಮೊದಲಾಗಿ ಎಲ್ಲರೂ ರಾಮನಾಮವನ್ನು ಜಪ ಮಾಡುವರು. ತಮ್ಮಣ್ಣ ಶಾಸ್ತ್ರಿಗಳ ಸಹವಾಸದಿಂದ ನಾವು ಪುಣ್ಯ ಭಾಗಿಗಳಾದೆವೆಂದು ಜನ ತಿಳಿಯುತ್ತಿದ್ದರೆ ಶಾಸ್ತ್ರಿಗಳ ವಿಚಾರವೇ ಬೇರೆ. ಸಿದ್ಧನ ಕೃಪೆಯಿಂದಲೇ ಜನರಲ್ಲಿ ದೈವಭಕ್ತಿ ಜಾಗೃತವಾಯಿತೆಂದು ತಿಳಿಯುತ್ತಿದ್ದರು. ಇದು ನನ್ನಿಂದಾಯಿತೆಂದು ಅವರು ಒಂದು ದಿನವೂ ಅಭಿಮಾನ ತಾಳಲಿಲ್ಲ.

ಒಟ್ಟು ಸಿದ್ಧನ ಭಾಂಡಾರದ ಭಕ್ತರತ್ನಗಳಲ್ಲಿ ಶಾಸ್ತ್ರಿಗಳೊಂದು ಉಜ್ವಲ ರತ್ನ.

————

೪೬

ಭೋಗಾಪವರ್ಗ ಪ್ರದಮಾರ್ತಬಂಧುಂ ಕಾರುಣ್ಯಸಿಂಧುಂ
ಪರಿಹಾಯ ಬಂಧುಮ್ ।
ಹಿತಾಯ ಚಾನ್ಯಂ ಪರಿಮಾರ್ಗಯಂತಿ ಹಾ ಮಾದೃಶೋ
ನೆಷ್ಟದೃಶೋ ವಿಮೂಢಾಃ ॥

—ವಾಸುದೇವಾನಂದ ಸರಸ್ವತಿ

ಐಹಿಕ ಸುಖ ಮತ್ತು ಮೋಕ್ಷವನ್ನು ಕೊಡುವವನು, ಕರುಣಾಸಮುದ್ರನಾಗಿ ಆರ್ತರಿಗೆ ಬಂಧುವೆನಿಸಿರುವವನನ್ನು ಬಿಟ್ಟು ನನ್ನಂಥ ಬುದ್ಧಿಗೇಡಿಗಳಾದ ಕುರುಡರು ಬೇರೆಯವರನ್ನು ತಮ್ಮ ಹಿತಕರ್ತರೆಂದು ಹುಡುಕುತ್ತಾರೆ.

ಸಿದ್ಧಾರೂಢಸ್ವಾಮಿಗಳ ಭಕ್ತರಲ್ಲಿ ನಾರಾಯಣರಾಯ ಮೋಡಕರೆಂಬವರೊಬ್ಬರು, ಅವರ ವಿಶ್ವಾಸವು ಗುರುಗಳಲ್ಲಿ ಅತಿಶಯ. ಎಂಥ ಕ್ಷುದ್ರಕಾರ್ಯವೇ ಇರಲಿ, ಅದು ನೆರವೇರಬೇಕಾದರೆ ಗುರುಕೃಪೆಯಿಂದಲೇ ಎಂದು ಅವರು ತಿಳಿಯುವರು, ಮತ್ತು ಅದರಂತೆ ನಡೆಯುವರು. ಅವರ ಮಗಳು ಚಂಪಾವತಿ. ಅವಳಿಗೂ ಸಿದ್ಧನಂತೆ ಬಹಳ ಭಕ್ತಿ. ಅಷ್ಟೇ ಏಕೆ, ಆ ಮನೆಯ ಮಂದಿ ಎಲ್ಲರೂ ಸಿದ್ಧನ ಭಕ್ತರು. ಚಂಪಾವತಿ ಉಪವರಳಾದಳು, ನಾರಾಯಣರಾಯರು ಸಿದ್ಧನಿಗೆ ವಂದಿಸಿ ವರಶೋಧದಲ್ಲಿ ತೊಡಗಿದರು. ಮೊದಲು ವರಹೊಂದುವ ಲಕ್ಷಣವೇ ತೋರಲಿಲ್ಲ. ಹೀಗಾಗಿ ತುಸು ತ್ರಾಸವೆನಿಸಿದರೂ ಕೊನೆಯಲ್ಲಿ ಉತ್ತಮನಾದ ವರ ಸಿಕ್ಕನು. ಅದರಿಂದ ರಾಯರಿಗೆ ಬಹಳ ಸಂತಸವಾಯಿತು.

ಊರಿಗೆ ಮರಳಿದವರೇ ಮೊದಲು ಮಠಕ್ಕೆ ಬಂದು ಸಿದ್ಧಾರೂಢರ ಮುಂದೆ ಲಗ್ನಗೊತ್ತಾದ ವಿಷಯವನ್ನು ತಿಳಿಸಿ ಈ ಲಗ್ನಕಾರ್ಯವು ನಿರ್ವಿಘ್ನವಾಗಿ ನೆರವೇರುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡರು ಆಗ ಸಿದ್ಧ ನಗುತ್ತ ನುಡಿದನು. 'ನೀವು ಪ್ರಪಂಚದಲ್ಲೇನೋ ಇರುವುದು ನಿಜ. ಆದರೆ ಪ್ರಪಂಚ ಭಾರವೆಲ್ಲ ನಿಮ್ಮ ಆರಾಧ್ಯದೇವನ ಮೇಲೆ. ಅವನು ಆ ಭಾರ ಹೊರಲು ಸಮರ್ಥನಾಗಿದ್ದಾನೆ. ಎಂದಮೇಲೆ ನಿಮಗೇಕೆ ಚಿಂತೆ?'

ಸದ್ಗುರುನಾಥನ ಈ ಮಾತು ಅಭಯವಾಣಿ ಎಂದು ಅವರು ಭಾವಿಸಿಕೊಂಡು ನಿಶ್ಚಿಂತೆಯಿಂದ ಲಗ್ನಸಾಮಗ್ರಿಯ ಸಿದ್ಧತೆಯಲ್ಲಿ ತೊಡಗಿದರು.

ಮುಂದೆ ಬರುವುದು ಫಾಲ್ಗುಣಮಾಸ ಶುದ್ಧ ಬಿದಿಗೆಯದಿನ ಲಗ್ನಮುಹೂರ್ತವೆಂದು ಗೊತ್ತಾಗಿತ್ತು. ಅದರಂತೆ ಎಲ್ಲಕಡೆಗೂ ಪತ್ರಿಕೆಗಳು ಹೋದವು. ಆಪ್ತೇಷ್ಟರೆಲ್ಲ ಕೂಡಿದರು. ಇನ್ನು ಲಗ್ನಕ್ಕೆ ಎರಡೇ ದಿನ ಅವಕಾಶ, ಅಷ್ಟರಲ್ಲಿ ರಾಯರ ಹೆಂಡತಿ ಬಂದು ಹೇಳಿದಳು– 'ಲಗ್ನಕ್ಕೆ ಇನ್ನು ಉಳಿದಿರುವುದು ಎರಡು ದಿನಗಳ ಅವಧಿ, ಚಂಪಾವತಿಗೆ ಕೆಂಡದಂಥ ಜ್ವರಬಂದಿವೆ. ಮುಂದೆ ಹೇಗೆ ?'

ಹೆಂಡತಿಯು ಮಾತು ಕೇಳಿ ರಾಯರು ಘಾಬರಿಯಾದರು. ಆದರೂ ಧೈರ್ಯ ತಂದುಕೊಂಡು– 'ಮನೆಯಲ್ಲಿ ಕೆಲಸ ಬಹಳವಾಗಿ ಆಯಾಸದಿಂದ ಜ್ವರ ಬಂದಿರಬಹುದು. ನಾಳಿಗೆ ಆರಾಮವೆನಿಸೀತು. ಇದೂ ಮೀರಿ ಸದ್ಗುರುನಾಥನಿದ್ದಾನೆ' ಎಂದರು. ಆದರೂ ಮನಸ್ಸಿಗೆ ಸಮಾಧಾನವೆನಿಸಲಿಲ್ಲ. ಒಳಗೆ ಬಂದು ಮಗಳ ಸ್ಥಿತಿ ನೋಡಿದರು. ಆ ಜ್ವರ ಸಾಮಾನ್ಯವೆಂದು ತೋರಲಿಲ್ಲ. ಮರುದಿನಕ್ಕೂ ಜ್ವರ ಇಳಿಯಲಿಲ್ಲ. ಹಿಂದಿನ ದಿನಕ್ಕಿಂತ ಅಂದು ಹೆಚ್ಚಾಗಿದ್ದವು. ಅವಳ ಮೈಮೇಲೆ ಎಚ್ಚರವೂ ಇರಲಿಲ್ಲ. ಜ್ವರದ ತಾಪದಿಂದ ಏನೇನೋ ಬಡಬಡಿಸತೊಡಗಿದ್ದಳು.ಅದನ್ನು ಕಂಡು ರಾಯರಿಗೆ ಭಯವಾಗಿ- 'ಗುರುದೇವಾ, ಲಗ್ನಗೊತ್ತಾಗಿರುವುದೆಂದು ನಾನು ತಿಳಿಸಲು ನೀನು ಪ್ರಸನ್ನನಾಗಿ ನಿರ್ವಿಘ್ನವಾಗಿ ಲಗ್ನ ನೆರವೇರುವುದೆಂದು ಅಭಯ ಕೊಟ್ಟೆ. ಇದುವರೆಗೆ ನಾನು ನಿಶ್ಚಿಂತೆಯಿಂದ ಇದ್ದೆ. ಈಗ ಏನೂ ಮಾಡಲಿ ? ನನಗೆ ಯಾವುದೂ ತೋಚದಂತಾಗಿದೆ. ನೀನೇ ನನ್ನ ಮಾನವುಳಿಸಬೇಕು' ಎಂದು ಮೊದಲಾಗಿ ಅನನ್ಯಭಾವದಿಂದ ಸಿದ್ಧನನ್ನು ಪ್ರಾರ್ಥಿಸುತ್ತಿರಲು ಯಾರೋ ಬಂದು ಹೇಳಿದರು. 'ಕಾರಣಾಂತರದಿಂದ ಬೀಗರು ಒಂದುದಿನ ಮೊದಲೇ ಹೊರಟು ಇಲ್ಲಿಗೆ ಬಂದಿದ್ದಾರೆ.'

ಈ ಮಾತನ್ನು ಕೇಳಿದ ಮೇಲಂತೂ ನಾರಾಯಣರಾಯರು ಇಳಿದು ಹೋದರು. ಆದರೂ ಮುಂದೆ ಕಾರ್ಯ ನಡೆಯಬೇಕಾಗಿತ್ತು. ಹೆಂಡತಿಯನ್ನು ಕೂಗಿ ಚಂಪಾವತಿಯನ್ನು ನೋಡಿಕೊಳ್ಳುವಂತೆ ತಿಳಿಸಿ ಬೀಗರನ್ನು ಇಳಿಸುವ ವ್ಯವಸ್ಥೆ ಮಾಡಿದರು. ಮನವೆಲ್ಲ ಮನೆಯಕಡೆಗಿತ್ತು. ಬಂದವರೇ ಕೈಕಾಲು ತೊಳೆದುಕೊಂಡು ಶುಚಿರ್ಭೂತರಾಗಿ ಸದ್ಗುರುನಾಥನಲ್ಲಿ ಮೊರೆಇಡಲಾರಂಭಿಸಿದರು. 'ಚಂಪಾವತಿಯ ಬೇನೆ ಕಡಿಮೆಯಾಗಿ ಅವಳ ಲಗ್ನವು ಸುಸೂತ್ರವಾಗಿ

ನೆರವೇರುವಂತೆ ಅನುಗ್ರಹಮಾಡು.' ಎಂದು ಪ್ರಾರ್ಥಿಸುತ್ತ ಕುಳಿತಿರಲು ಮನದಲ್ಲಿ ಅನೇಕ ಭಾವನೆಗಳು ನುಗ್ಗಿ ಕಣ್ಣುಗಳು ಅಶ್ರುಪೂರ್ಣವಾದವು. ಗುರುನಾಥನು ಸುರಮ್ಯ ಮೂರ್ತಿಯು ,ಪ್ರಪಂಚ ಭಾರವೆಲ್ಲ ನಿಮ್ಮ ಆರಾಧ್ಯ ದೇವನ ಮೇಲೆ, ಎಂಬ ಅವನಮಾತೂ ನೆನಪಿಗೆಬಂದವು.ಅಷ್ಟರಲ್ಲಿ ಚಂಪಾವತಿಯನ್ನು ಮಲಗಿಸಿದ ಕೋಣೆಯ ಬಾಗಿಲು ತೆರೆದಂತಾಯಿತು. ಅತ್ತ ನೋಡುತ್ತಿರಲು ಆಪದ್ಬಂಧುವೂ, ಕರುಣಾಸಮುದ್ರನೂ ಆದ ಸದ್ಗುರು ಮೂರ್ತಿ ಕಾಣುತ್ತಿದೆ. ಥಟ್ಟನೆ ಎದ್ದು ಪಾದಗಳಲ್ಲಿ ಹೊರಳಿ 'ಕೊನೆಗೆ ಭಕ್ತನ ಮೊರೆಕೇಳಿ ಬಂದೆಯ? ಸ್ವಾಮಿ,' ಎಂದು ಗದ್ಗದಿತರಾದರು. ಆಗ ಸದ್ಗುರುನಾಥ ಅವರನ್ನು ಸಮಾಧಾನಗೊಳಿಸಿ 'ನಿಮ್ಮ ಅಪೇಕ್ಷೆಯಂತೆ ಲಗ್ನ ಕಾರ್ಯವು ಸುಸೂತ್ರವಾಗಿ ನೆರವೇರುತ್ತದೆ. ಎಳ್ಳಷ್ಟು ಚಿಂತಿಸಬೇಡಿರಿ.' ಎಂದು ನುಡಿದು ಕೃಪಾದೃಷ್ಟಿಯಿಂದ ಚಂಪಾವತಿಯನ್ನು ನೋಡುತ್ತ ಅವಳ ತಲೆಯ ಮೇಲೆ ಕೈಯಾಡಿಸಿ, ಮುಂದಿನ ಕಾರ್ಯ ಸಾಗಲಿ' ಎಂದು ನುಡಿದು ಅದೃಶ್ಯನಾದನು. ಆಶ್ಚರ್ಯ ಹೊಂದಿ ನಾರಾಯಣರಾಯರು ಮಗಳ ಕೈಮುಟ್ಟಿ ನೋಡಿದರು. ಜ್ವರ ಇಳಿದು ಹೋಗಿದ್ದವು. ಆಗ ರಾಯರು ಮನೆಮಂದಿಯನ್ನೆಲ್ಲ ಕರೆದು 'ನೀವು ವೈದ್ಯರಿಗೆ ತೋರಿಸಬೇಕು. ಡಾಕ್ಟರರಿಗೆ ತೋರಿಸಬೇಕು. ಎನ್ನುತ್ತಿದ್ದಿರಿ. ಆದರೆ ಯಾರಲ್ಲಿಯಾದರೂ ನನಗೆ ವಿಶ್ವಾಸವಿಲ್ಲ. ಸಿದ್ಧಾರೂಢ ಸದ್ಗುರುನಾಥನೊಬ್ಬನೇ ನನ್ನ ವಿಶ್ವಾಸಪಾತ್ರ. ನೋಡಿದಿರಾ ಸದ್ಗುರುಕೃಪೆಮಾಡಿ ಚಂಪಾವತಿಯನ್ನು ಆರಾಮಗೊಳಿಸಿದನು.' ಎಂದು ನುಡಿದು ಕ್ಷಣದ ಮೊದಲು ಸದ್ಗುರುನಾಥ ಅಲ್ಲಿಗೆ ಬಂದು ಹೋದ ಕಥೆಯನ್ನು ತಿಳಿಸಿದರು. ಆದರೆ ಎಲ್ಲರೂ ಮನೆಯಲ್ಲಿರುವಾಗ ಒಬ್ಬರಿಗೂ ಅರಿಯದಂತೆ ಗುರುನಾಥ ಬಂದುದು ಹೇಗೆ? ಹೋದುದು ಹೇಗೆ? ಎಂಬುದನ್ನು ತಿಳಿಯಲು ಒಬ್ಬರೂ ಸಮರ್ಥರಾಗಲಿಲ್ಲ. ಲಗ್ನಕ್ಕೆ ಬಂದ ವಿಘ್ನವು ತೊಲಗಿತಲ್ಲ. ಎಂದು ಎಲ್ಲರೂ ಸಮಾಧಾನ ಹೊಂದಿದರು. ರಾಯರ ಹೆಂಡತಿ ಕೇಳಿದಳು.

"ನಮಗಂತೂ ಸದ್ಗುರುನಾಥ ಬಂದು ಹೋದ ವಿಷಯ ಗೊತ್ತಾಗಲಿಲ್ಲ. ಆಗ ನಾವು ಒಳಮನೆಯಲ್ಲಿದ್ದೆವೆಂದು ಕಾಣುತ್ತದೆ. ಸಮ್ಮದಿರಲಿ. ಅನಾಯಾಸ ಬಂದಿರುವ ನೀವಾದರೂ ಅವನ ಪೂಜೆ ಮಾಡಿದಿರಷ್ಟೇ?'

ತಾವು ಪೂಜೆಮಾಡಲಿಲ್ಲವೆಂಬುದು ಆಗ ನೆನಪಾಗಿ ನಾರಾಯಣರಾಯರು ಬಹಳ ವಿಷಾದಪಟ್ಟರು. ಅಷ್ಟರಲ್ಲಿ ಚಂಪಾವತಿ ಕಣ್ಣು ತೆರೆದು ಆಚೀಚೆ ನೋಡತೊಡಗಿದ್ದಳು. ಎಲ್ಲರೂ ಅವಳ ಬಳಿಗೆ ಬಂದು ನೋಡಿದರು. ಆಗ ಜ್ವರವಿಳಿದು ಹೋದುದೇನೋ ನಿಜ. ಆದರೆ ಮೈತುಂಬ ಸಿಡಬು (ವೈಲಿ) ಎದ್ದಿದ್ದವು. ಜ್ವರವಿಳಿದವೆಂಬ ಸಂತಸದಿಂದ ಅರಳಿದ ಎಲ್ಲರ ಮೋರೆ ಪುನಃ ನಿಸ್ತೇಜವಾದವು. ಇದು ಭಯಂಕರವಾದ ಬೇನೆ. ಇದರಿಂದ ಮುಖಲಕ್ಷಣ ಕೆಡಬಹುದು. ಕಣ್ಣು ಹೋಗಬಹುದು. ಮತ್ತೇನಾದರೂ ಅಪಾಯವುಂಟಾಗಬಹುದು. ಹೇಗೆ ಮಾಡಬೇಕು? ಏನಾದರೂ ಹೇಳಿ ಲಗ್ನವನ್ನು ಮುಂದೆ ಹಾಕಬೇಕೆಂದರೆ ಬೀಗರು ಲಗ್ನಕ್ಕೆಂದು ಬಂದು ಕುಳಿತಿದ್ದಾರೆ. ನಮ್ಮ ಮನೆಯಲ್ಲಿ ನೋಡಿದರೆ ಸ್ವತಃ ಮಗಳ ಪರಿಸ್ಥಿತಿ ಹೀಗೆ ಏನುಗತಿ? ಎಂದು ಮನೆಯವರೆಲ್ಲ ತಳಮಳಗೊಂಡರು.

ಮರುದಿನ ನೋಡಿದರೆ ಸಿಡಬು ದೊಡ್ಡವಾಗಿ ಹಾಲು ತುಂಬಿಕೊಂಡಿದ್ದವು. ವಧುವಿಗೊದಗಿದ ಪ್ರಸಂಗವು ಬೀಗರಿಗೂ ತಿಳಿಯಿತು. ತಲೆಗೊಂದರಂತೆ ಮಾತಾಡಿಕೊಂಡರು. ಒಂದು ವೇಳೆ ವಿದ್ರೂಪವಾದರೆ ಹೇಗೆ? ಕಣ್ಣು ಹೋದರೆ ಹೇಗೆ? ಇತ್ಯಾದಿ ಮಾತುಗಳನ್ನು ವರನು ಕೇಳಿ ಚಿಂತೆಗೀಡಾದನು. ಕನ್ನೆಗೆ ನೆಟ್ಟಗಾಗುವವರೆಗೆ ನಿಂತು ಲಗ್ನಮುಗಿಸಿಕೊಂಡು ಹೋದರೆ ಹೇಗೆ? ಎಂದು ಕೆಲವರೆಂದರೆ, ಕೆಲವರು ಛೀ, ಅದೇನು ಹಾಸ್ಯಾಸ್ಪದ. ಕೇಳಿದವರು ನಕ್ಕಾರು. ಒಂದುವೇಳೆ ಒಮ್ಮೆ ಮಾತು ಮುಗಿದುಹೋಗಿದೆ. ಇದೇ ಸಂಬಂಧ ಬೆಳೆಸಬೇಕೆಂದು ಇದ್ದರೆ ಈಗ ಊರಿಗೆ ಹೋಗೋಣ. ಹುಡುಗಿ ಆರಾಮವಾಗಲಿ. ಮುಂದೆ ಒಂದು ಮುಹೂರ್ತ ನಿರ್ಧರಿಸಿದ ಮೇಲೆ ಬಂದು ಕಾರ್ಯ ಮುಗಿಸಿಕೊಳ್ಳಲು ಬರುತ್ತದೆ ಎಂದರು. ಇವೆಲ್ಲ ಬೀಗರ ವಿಚಾರಗಳು ನಾರಾಯಣರಾಯರಿಗೆ ತಿಳಿದು ಅವರು ಬಹಳ ವ್ಯಾಕುಲರಾದರು. 'ನೀವು ಚಿಂತಿಸಬೇಡಿರಿ ನಾನು ಸದ್ಗುರುನಾಥನನ್ನು ನಂಬಿದ್ದೇನೆ. ನೀವು ಒಂದು ದಿನ ತಡೆಯಿರಿ. ದೇವರು ಮಾಡಿಸಿದಂತಾಗಲಿ. ಕಾದು ನೋಡುವುದು ಒಳ್ಳೇದೆನಿಸುತ್ತದೆ. ದಯಮಾಡಿ ನನ್ನ ವಿನಂತಿಗೆ ಮಾನ್ಯತೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.' ಎಂದು ಮೊದಲಾಗಿ ಬಹುದೀನರಾಗಿ ಹೇಳಿಕೊಳ್ಳಲು ವರನು ನುಡಿದನು. 'ಸರಿ. ನಾವು ಕಾರ್ಯ ಮುಗಿಸಿಕೊಳ್ಳದೇ ಹಾಗೇ ಹೋದರೆ ನಿಮಗೆ

ಜನರಲ್ಲಿ ಆಗುವ ಅಪಹಾಸ್ಯ, ಸಾಮಗ್ರಿಗಳ ವ್ಯರ್ಥಹಾನಿ ಇವೆಲ್ಲ ನಮಗೆ ತಿಳಿಯವೆಂಬಂತಿಲ್ಲ. ಒಂದು ವೇಳೆ ನಿಮ್ಮ ಮಾತು ಕೇಳಿ ನಿಂತು ನಾವು ಲಗ್ನ ಮುಗಿಸಿಕೊಳ್ಳಬಹುದು. ಆದರೆ ಸಿಡುಬಿನ ರೋಗ ಬಹಳ ಕೆಟ್ಟದು. ಆದರಿಂದ ಹುಡುಗಿಯಲ್ಲೇನಾದರೂ ವ್ಯಂಗ್ಯವುಂಟಾದರೆ ತಿಳಿಯಿರಿ. ಮೋರೆ ತುಂಬ ಕಲೆ ಬೀಳಬಹುದು. ಕಣ್ಣು ಹೋಗಬಹುದು. ಕಿವಿ ಹೋಗಬಹುದು. ಅಥವಾ ಮಾತಾಡುವ ಶಕ್ತಿ ಇಲ್ಲದಂತಾಗಬಹುದು. ನಾನು ಹೇಳಿದ ಸಂಗತಿಗಳಲ್ಲಿ ಒಂದು ವ್ಯಂಗ್ಯವುಂಟಾಗದೇ ನಿಮ್ಮ ಹುಡಿಗೆ ಸರಿಯಾಗಿಯೇ ಉಳಿಯುವಳೆಂಬುದಕ್ಕೆ ಪ್ರಮಾಣವೇನು? ನಾನಂತೂ ಒಪ್ಪಿಕೊಂಡು ಲಗ್ನಕ್ಕೆ ಬಂದಿದ್ದೆವು. ಆದರೆ ಈ ವೇಳೆ ಯಾರೋ ನೆಟ್ಟಗಿದ್ದಂತಿಲ್ಲ. ಈಗ ಲಗ್ನ ನಿಲ್ಲಿಸಿಬಿಡಿರಿ. ಮುಂದೆ ಎಲ್ಲ ಸರಿಯಾಗುವುದಾದರೆ ನೋಡೋಣ.'

ವರನು ಆಡಿದ ಮಾತು ಕೇಳಿದ ಮೇಲಂತೂ ರಾಯರ ಎದೆಯಲ್ಲಿ ತಣ್ಣೀರು ಹೊಯ್ದಂತಾಯಿತು. ಇನ್ನು ಲಗ್ನವಾಗುವುದು ಶಕ್ಯವೇ ಇಲ್ಲವೆಂದು ಅವರು ತಿಳಿದರು. ಆದರೆ ಸದ್ಗುರುನಾಥ 'ನಿರ್ವಿಘ್ನವಾಗಿ ಲಗ್ನವಾಗುವುದು' ಎಂದು ಹೇಳಿದ ಮಾತು ನೆನಪಾಯಿತು. ಕೂಡಲೇ ಸದ್ಗುರುವಿನ ಬಳಿಗೆ ಮನೆಯವರೆಗೆ ಬಂದು ಹೋಗಬೇಕು. ಎಂದು ಬೇಡಿಕೊಂಡರು. ಅದರಲ್ಲಿ ಅವರ ಉದ್ದೇಶವಿಷ್ಟೇ. ಅಂಥ ಮಹಾತ್ಮರ ಮುಖಾಂತರ ಹೇಳಿಸಿದರೆ ಬೀಗರು ಒಪ್ಪಿ ಲಗ್ನಕಾರ್ಯ ಸುಗಮವಾಗಬಹುದು. ಭಕ್ತನಿಗೆ ಬಂದೊದಗಿದ ಆಪತ್ತನ್ನು ತಿಳಿದ ಗುರುದೇವ ಅವರ ಮನೆಗೆ ಬಂದನು. ಬಹಳ ಸಂತೋಷದಿಂದ ರಾಯರು ಅವರ ಹೆಂಡತಿ ಸಿದ್ಧನನ್ನು ಪೂಜಿಸಿದರು. ಮಹಾತ್ಮರ ದರ್ಶನದಿಂದ ಎಲ್ಲರ ಮನಸ್ಸು ತಿಳಿಯಾದವು. ಬೀಗರೂ ಬಂದು ದರ್ಶನ ಪಡೆದರು. ಆಗ ಸದ್ಗುರುನಾಥ ನಾರಾಯಣರಾಯರಿಗೆ 'ಏನೂ ಚಿಂತಿಸುವ ಕಾರಣವಿಲ್ಲ. ಚಂಪಾವತಿಗೆ ಈ ಜಡ್ಡಿನಿಂದ ಯಾವ ವ್ಯಂಗ್ಯವೂ ವುಂಟಾಗದು. ದೇವರ ಹೆಸರನ್ನು ತೆಗೆದುಕೊಂಡು ಲಗ್ನಕಾರ್ಯ ತೀರಿಸಿಬಿಡಿರಿ.' ಎಂದು ಹೇಳಿದನು.

ಮನೆಯಲ್ಲಂತೂ ಯಥಾರೀತಿ ದೇವಕಾರ್ಯ ಮುಂತಾದವು ನಡೆದೇ ಇದ್ದವು. ಸದ್ಗುರು ಬಂದದಿನ ಗೋಧೂಳಿಯ ಕಾಲಕ್ಕೆ ಮುಹೂರ್ತವೂ ಪ್ರಶಸ್ತವಾಗಿತ್ತು. ಸಿದ್ಧನ ಮಾತು ಎಲ್ಲರಿಗೂ ಸಮಾಧಾನವುಂಟು ಮಾಡಿತು. ಅಡ್ಡಿ ಯಾತರದು? ಅಕ್ಷತೆಯು ಸಿದ್ಧತೆ ನಡೆಯಿತು. ಸಿದ್ಧ ಭಕ್ತನ ಮನೆಯಲ್ಲಿ

ಭುಜಿಸಿ ಅಕ್ಷತೆಗೆ ನಿಂತುಕೊಂಡನು. ಯೋಗ್ಯವೇಳೆ ಬರಲು ಸಿದ್ಧ ಕೈಮುಟ್ಟಿ ಅಕ್ಷತೆ ಹಾಕಿ ಆಶೀರ್ವದಿಸಿದನು. ಚಂಪಾವತಿ ಅಂದು ಆರೋಗ್ಯವಾಗಿದ್ದವರಂತೆಯೇ ಚಟುವಟಿಕೆಯಿಂದ ಓಡಾಡಿದಳು. ಆದರಿಂದ ನಾರಾಯಣರಾಯಗಾದ ಸಂತೋಷಕ್ಕೆ ಪಾರವಿಲ್ಲ. ಮುಂದೆ ಎರಡು ದಿನ ಬೀಗರಲ್ಲಿ ಆದರದಿಂದ ಊಟ-ಉಪಚಾರ ನಡೆದವು. ಹೀಗೆ ಕಾರ್ಯಗಳೆಲ್ಲ ನೆರವೇರಿದ ಮೇಲೆ ರಾಯರು ಮದುಮಕ್ಕಳನ್ನು ಕರೆದುಕೊಂಡು ಗುರುದರ್ಶನಕ್ಕೆ ಬಂದು ನುಡಿದರು. 'ಸದ್ಗುರುನಾಥ ಈ ಮಕ್ಕಳನ್ನು ಆಶೀರ್ವದಿಸಿರಿ. ಇವರಿಗೆ ನಿನ್ನ ಅನುಗ್ರಹ ಅವಶ್ಯ ಬೇಕು. ಯಾಕಂದರೆ ವಿಶ್ವಕುಟುಂಬಿಯಾದ ನಿನ್ನ ಮನೆಯವರು ಈ ಮದುಮಕ್ಕಳು. ನಾನು ನಿನ್ನ ಸೇವಕ'

ಮಂದಹಾಸ ತೋರಿ ಸಿದ್ಧ ಆಶೀರ್ವದಿಸಿದನು. ಎಲ್ಲರೂ ಸಂತೋಷದಿಂದ ಮನೆಗೆ ತೆರಳಿದರು. ಅಂದಿನಿಂದ ನಾರಾಯಣರಾಯರು-ಸದ್ಗುರುನಾಥನೆಂದರೆ—'ಭಯಕದ್ಭಯನಾಶನ' ಎಂದು ಯಾವಾಗಲೂ ಹೇಳತೊಡಗಿದರು.

ಭಯವಿಲ್ಲದಿದ್ದರೆ ಮನುಷ್ಯ ಸ್ವಚ್ಛಂದಚಾರಿಯಾಗಬಹುದು. ಸ್ವಚ್ಛಂದಚಾರಿಯಾದವನಲ್ಲಿ ಲೋಕೋಪಕಾರ ಗುಣಗಳು ನಾಶವಾಗುವವು. ಲೋಕೋಪಕಾರಕ ಗುಣಗಳಿಲ್ಲದಂತಾದರೆ ವಿನಾಶವು ಸಂಭವಿಸುವುದು. ಆದರೆ ಭಗವಂತ ಬಹು ದಯಾಘನ. ಅವನು ಜೀವವನ್ನು ಉದ್ಧರಿಸುವುದಕ್ಕೆಂದೇ ಮನುಷ್ಯನಲ್ಲಿ ಭಯವೆಂಬ ವೃತ್ತಿಯನ್ನಿಟ್ಟಿದ್ದಾನೆ. ಆ ಭಯವು ಸ್ವಚ್ಛಂದಚಾರಿತ್ವದಿಂದ ಮನುಷ್ಯನನ್ನು ತಿರುಗಿಸುವುದು.

೪೭

ಗುರುರೇಕೋ ವಂದನೀಯಃ ಸೇವನೀಯಂ ಗುರೋ
ಪದಮ್ ॥
ಪೂಜ್ಯಶ್ಚ ಗುರುರೇವೇಹ ಗುರುರಾಪ್ತೋ ಮಹಾನ್ ಸಖಾ ॥

—ಪರಮಾರ್ಥದರ್ಶನ

ಗುರುವೊಬ್ಬನೇ ನಮಸ್ಕಾರಕ್ಕೆ ಯೋಗ್ಯನು. ಗುರುವಿನ ಪದಕಮಲಗಳೇ ಸೇವೆಗೆ ಯೋಗ್ಯವಾದವುಗಳು. ಪೂಜೆಗೆ ಯೋಗ್ಯನು ಗುರುವೇ ಸರಿ. ಗುರು ನಮ್ಮ ಹಿತಚಿಂತಕ. ಗುರುವು ಶ್ರೇಷ್ಠ ಗೆಳೆಯ.

ಮೋಕ್ಷವನ್ನು ಬಯಸುವವರಿಗೆ ಹೇಳಿದ ಮಾತುಗಳು ಮೇಲಿನ ಶ್ಲೋಕದಲ್ಲಿವೆ. ಗುರುವೆಂದರೆ ಸಕಲ ದೇವತಾಮಯನು. ಸಚ್ಚಿದಾನಂದ ಪರಿಪೂರ್ಣನು, ಸರ್ವಜ್ಞನು ಎಂದು ತಿಳಿಯದೇ ಗುರುಸಾಸನೆ ಸಿದ್ಧಿಸುವುದಿಲ್ಲ. ಉಪಾಸನೆ ಇಲ್ಲದೇ ಜ್ಞಾನವೂ ಲಭಿಸುವುದಿಲ್ಲ.

ಹಾಗಾದರೆ ಉಪಾಸನೆ ಮಾಡುವ ಬಗೆ ಯಾವುದು ? ಗುರುವೆಂದರೆ ದೇವರೆಂದು ಭಾವನೆಯಾದ ಮೇಲೆ ದೇವರಂತೆಯೇ ಅವನನ್ನೂ ಉಪಾಸನೆ ಮಾಡಬೇಕು. ದೇವರಲ್ಲಿ ಒಂಭತ್ತು ಪ್ರಕಾರದಿಂದ ಭಕ್ತಿಯನ್ನು ಮಾಡಬಹುದೆಂದು ಭಾಗವತ ಪುರಾಣದಲ್ಲಿ ಹೇಳಿದೆ. ಪೂಜಿಸುವುದು, ವಂದಿಸುವುದು, ಸಂಕೀರ್ತನ ಮಾಡುವುದು, ಇತರ ಸೇವೆ ಮಾಡುವುದು, ಇವೆಲ್ಲ ಭಕ್ತಿ ಪ್ರಕಾರಗಳೇ.

ಆದರೆ ಗುರುವಿಗಿರುವ ಮಹತ್ವವಾಗಲೀ, ದೇವತ್ವವಾಗಲೀ, ಅವನು ತನ್ನ ಶಿಷ್ಯರಿಗೆ ಭವ ಭಯನಾಶಕವಾದ ಜ್ಞಾನವನ್ನು ಕೊಡುವವನೆಂಬುದರಿಂದ, ಎಂಬುದು ನಿಜವಾದರೂ ಮಂದಾಧಿಕಾರಿಗಳು ಗುರುವನ್ನು ಉಪಾಸನೆ ಮಾಡಲು ಯಾವ ಅಭ್ಯಂತರವೂ ಇಲ್ಲ. ಮುಮುಕ್ಷುವಿಗೆ ದೇವರೆಂದರೆ ಗುರುವು.

ಸಿದ್ಧಾರೂಢ ಸ್ವಾಮಿಗಳನ್ನು ಗುರು-ದೇವರೆಂದು ನಂಬಿದ ಅನೇಕ ಭಕ್ತರಿದ್ದರು. ಅವರಲ್ಲಿ ಶರಣಪ್ಪ ಅಕ್ಕಲಕೋಟೆ ಎಂಬವನು ಕೀರ್ತನ ಭಕ್ತಿಯಿಂದ ಗುರೂಪಾಸನೆ ಮಾಡತಕ್ಕವನು. ಗುರುಗಳಲ್ಲಿ ಅವನಿಗೆ ಪ್ರೇಮ ಬಹಳ.

ಶ್ರಾವಣಮಾಸದ ಉತ್ಸವದಲ್ಲಿ, ಶಿವರಾತ್ರಿಯ ಉತ್ಸವದಲ್ಲಿ ಅವನು ತಪ್ಪದೇ ಬಂದು ಸೇವೆ ಮಾಡುವವನು, ಗುರುಭಕ್ತಿಯನ್ನು ಪ್ರಚಾರ ಮಾಡುತ್ತ ಎಲ್ಲ ಕಡೆಗೆ ತಿರುಗುವುದೇ ಅವನ ಕಾರ್ಯ. ಅವನು ವೀರಶೈವ ಮತದವನು, ಆ ಧರ್ಮದಲ್ಲಿ ಅವನಿಗೆ ಬಹಳ ಅಭಿಮಾನ. ಆ ಸಾಂಪ್ರದಾಯಕ್ಕೆ ತಕ್ಕಂತೆ ಗುರು-ಲಿಂಗ-ಜಂಗಮ ಪೂಜೆಯಲ್ಲಿ ಬಹುಭಕ್ತಿ. ಪರೋಪಕಾರ ಮಾಡುವುದರಲ್ಲಿ ಆಸಕ್ತಿ.

ಒಂದು ಪ್ರಸಂಗದಲ್ಲಿ ಇವನು ಅರವತ್ತು ಮೂರು ಮಂಟಪಗಳನ್ನು ರಚಿಸಿ ಪುರಾತನ ಪೂಜೆಯನ್ನು ಮಾಡಿದನು. ಅಲ್ಲಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿ ಪ್ರಾಚೀನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಟ್ಟನು. ದೇಶದಲ್ಲಿ ಎಲ್ಲಿಯಾದರೂ ದುಷ್ಕಾಳವೆಂದರೆ ತೀರಿತು. ಸುತ್ತುಕಡೆಗೆ ಭಿಕ್ಷೆ ಎತ್ತಿ ಅಲ್ಲಿಯ ಜನರಿಗೆ ಅನ್ನ ವಸ್ತ್ರಗಳನ್ನು ಒದಗಿಸುವನು.

ಜನಸೇವೆಯೇ ಶಿವಪೂಜೆ-ಶಿವಯೋಗವೆಂದು ಅವನ ನಂಬಿಗೆ. ಚಿಕ್ಕಂದಿನಿಂದ ಅವನ ವರ್ತನೆಯೇ ಹಾಗೆ. ಹೀಗೆ ಎಷ್ಟೋ ದಿನಗಳ ವರೆಗೆ ಅವನು ನಂಬಿಕೊಂಡಂತೆ ಸಾಧನೆಯಲ್ಲಿನಿರತನಾಗಿದ್ದರೂ ಮನಸ್ಸು ನೆಲೆ ಕಂಡಿರಲಿಲ್ಲ. ಹಿಂದೆ ಶಂಕರನು ಬೃಹದಾಕಾರವಾದ ಲಿಂಗ ರೂಪದಿಂದ ಗೋಚರಿಸಲು ವಿಷ್ಣು ಮತ್ತು ಬ್ರಹ್ಮರು ಆ ಲಿಂಗದ ಆದಿ-ಮಧ್ಯಾಂಗಳನ್ನರಿಯಬೇಕೆಂದು ಯತ್ನಿಸಿ ವಿಫಲರಾದಂತೆ ಅವನ ಗತಿಯೂ ಆಯಿತು. ಚಂಚಲವಾದ ಮನಸ್ಸನ್ನು ಒಂದು ಕಡೆಗೆ ನಿಲ್ಲಿಸುವುದಾಗಲಿಲ್ಲ. ಒಂದು ದಿನ ಯಾರೋ ಸಿದ್ಧಾರೂಢ ಸ್ವಾಮಿಗಳ ಮಹಿಮೆಯನ್ನು ಹೇಳಿದರು.ಅದರಂತೆ ಹುಬ್ಬಳ್ಳಿಗೆ ಬಂದು ಸ್ವಾಮಿ ದರ್ಶನ ಪಡೆಯಲು ಮನಸ್ಸು ಸಮಾಧಾನಗೊಂಡಿತು. ತಾನು ಕೇಳಿದಂತೆ ಸಿದ್ಧ ಸಾಕ್ಷಾತ್ ಶಂಕರನ ಅವತಾರ ರೂಪನಾಗಿ ತೋರಿದನು. ಅಲ್ಲಿ ಕೃತಕೃತ್ಯನಾದೆನೆಂದು ಭಾವಿಸಿದನು. ಗುರುಭಕ್ತಿಯ ಬುಗ್ಗೆ ಪುಟದೆದ್ದಿತು. ಅಂದಿನಿಂದ ಅವನು ಗುರುಭಕ್ತರಲ್ಲಿ ಅಗ್ರಗಣ್ಯನಾದನು.

ಮಾನಾಭಿಮಾನಗಳನ್ನು ಅವನು ನೋಡುತಿರಲಿಲ್ಲ. ತಿನಿಸು-ಉಣಿಸುಗಳ ಕಡೆಗೆ ಲಕ್ಷವಿಲ್ಲ. ಅವನ ಮುಖ್ಯ ಜೀವಿತ ಕಾರ್ಯ ಗುರುಭಕ್ತಿಯ ಪ್ರಚಾರ. ಚಿಕ್ಕಂದಿನಿಂದ ಸಾಧನ ಮಾರ್ಗದಲ್ಲಿ ನಡೆದವ. ಸ್ವತಃ ಗುರುಭಕ್ತಿಯ ಮಹತ್ವವನ್ನರಿತವ. ಮೇಲೆ ಅನುಗ್ರಹ ಪಾತ್ರ. ಅಂದಮೇಲೆ ಕೇಳು

ವುದೇನು ? ಕೀರ್ತನವು ರಸಭರಿತವಾಗಬೇಕು. ಕರುಣಾರಸ ಪ್ರಸಂಗ ಬಂದಿರಲು ಕೇಳುಗರ ಕಣ್ಣಲ್ಲಿ ನೀರು ಸುರಿಯದೇ ಹೋಗುತ್ತಿರಲಿಲ್ಲ. ಭಕ್ತಿರಸ ಪ್ರಸಂಗದಲ್ಲಿ ಆನಂದಬಾಷ್ಪಗಳುದುರದೇ ಹೋಗುವಂತಿಲ್ಲ. ಕೆಲವರಂತೂ ಪಾಂಡುರಂಗ ಭಕ್ತನಾದ ತುಕಾರಾಮನೇ ಅವತರಿಸಿದ್ದಾನೆ ಎಂದು ಶರಣಪ್ಪನಿಗನ್ನುವರು. ಇವನ ಕೀರ್ತನ ಕೇಳಿ ಗುರುಭಕ್ತಿ ಹುಟ್ಟದವರು ವಿರಳ. ಒಂದೊಂದುಸಾರೆ ಅನೇಕರು ಶರಣಪ್ಪನ ಬಳಿಗೆ ಬಂದು– 'ಶರಣಪ್ಪ, ನೀನು ಸಿದ್ಧಾರೂಢರ ಮಹಿಮೆಯನ್ನು ಹೇಳಿ ಅವರಲ್ಲಿ ಭಕ್ತಿಯನ್ನೇನೋ ಹುಟ್ಟಿಸಿದಿ. ಇನ್ನು ಅವರ ದರ್ಶನವನ್ನು ನಮಗೆ ಮಾಡಿಸುವ ಭಾರವೂ ನಿನ್ನದೇ' ಎನ್ನುವರು. ಹೀಗೆ ತನ್ನಕಡೆಗೆ ಬಂದ ಅನೇಕ ಭಕ್ತರನ್ನು ಕಟ್ಟಕೊಂಡು ಹುಬ್ಬಳ್ಳಿಗೆ ಬಂದು ಸದ್ಗುರು ದರ್ಶನ ಮಾಡಿಸುವನು. ಆ ಭಕ್ತರು ಸಿದ್ಧನ ಪಾದಗಳಿಗೆ ವಂದಿಸುತಿರುವುದನ್ನು ಕಂಡು ಆನಂದಬಾಷ್ಪಗಳನ್ನುದುರಿಸುತ್ತ ತಾನು ಕೈಮುಗಿದು ನಿಲ್ಲುವನು. ಈ ರೀತಿಯನ್ನು ಕಂಡು ಒಮ್ಮೊಮ್ಮೆ ಗುರುನಾಥ— 'ಇದೇನೋ ಶರಣ, ಭಕ್ತಿಯ ವ್ಯಾಪಾರ ಮಾಡತೊಡಗಿದೆ ಏನೋ?' ಎಂದು ಹಾಸ್ಯಕ್ಕೆ ಕೇಳಿದರೆ ಶರಣನು– 'ಹೌದು ಗುರುವೇ, ಆದರೆ ಇದು ಬೆಲೆಯಿಲ್ಲದ ವ್ಯಾಪಾರ!' ಎಂದು ಮಾರ್ಮಿಕವಾಗಿ ಉತ್ತರ ಕೊಡುವನು, ಒರಬರುತ್ತ ಇವನ ಗುರುಭಕ್ತಿ ಉತ್ಕಟವಾಯಿತು.

ಕೀರ್ತನಕ್ಕೆಂದು ಇವನು ಹೋದಕಡೆಗಳಲ್ಲಿ ಅರ್ತರು ಕೇಳುವರು– 'ಶರಣಪ್ಪ, ನೀನು ದೊಡ್ಡ ಗುರುಭಕ್ತ, ಇಂಥವರಿಗೆ ಜಡ್ಡಾಗಿದೆ ಕಡಿಮೆಯಾಗಬೇಕಾದರೆ ಏನು ಮಾಡಬೇಕು? ಹೇಳಬಾರದೇ.'

'ಸಿದ್ಧನಿಗೆ ಶರಣು ಹೋಗಿರಿ.'

'ನಮಗೆ ಮಕ್ಕಳಿಲ್ಲ ಶರಣಪ್ಪ.'

'ಶ್ರಾವಣಮಾಸದಲ್ಲಿ ಒಮ್ಮೆ ಶಿವರಾತ್ರಿಗೊಮ್ಮೆ ಸಿದ್ಧನ ಮಠದಲ್ಲಿ ಉತ್ಸವ ನಡೆಯುವದು, ಆ ಉತ್ಸವಕ್ಕೆ ತಪ್ಪದೇ ಬರುವೆನೆಂದು ಸಂಕಲ್ಪ ಮಾಡಿರಿ. ನಿಮ್ಮ ಅಪೇಕ್ಷೆ ಪೂರ್ಣವಾಗುವುದು.'

ಈ ಮಾತಿನಲ್ಲಿ ನಂಬಿಕೆಯಿಟ್ಟು ಅವರು ಉತ್ಸವಕ್ಕೆ ಬಂದುಹೋಗಲು ಅವರ ಅಪೇಕ್ಷೆ ಪೂರ್ಣವಾಗುತ್ತಿದ್ದವು. ಮುಂದೆ ಅವರಿಗೆ ಯಾರೂ ಹೇಳಬೇಕಾಗುತಿರಲಿಲ್ಲ. ತಮ್ಮ ಅನುಭವದಿಂದ ಗುರುದೇವನ ಮಹಿಮೆಯನ್ನು

ಕಂಡು ಉತ್ಸವಕ್ಕೆ ವಾರಕರಿಗಳಾಗುವರು. ಹಾಗೆಯೇ ಗುರುಭಕ್ತಿ ಬೆಳೆದು ಉದ್ಧಾರ ಹೊಂದುವರು.

ರಸಭರಿತವಾದ ಶರಣಪ್ಪನ ಕೀರ್ತನ ಕೇಳಿದವರು ಮುಗ್ಧರಾಗಿ ಹೋಗುತ್ತಿದ್ದರು.

ಒಂದು ಸಾರೆ ಹುಬ್ಬಳ್ಳಿಯ ಸಮೀಪದ ಹಳ್ಳಿ ಎನಿಸಿದ ಉಣಕಲ್ಲಿನ ಭಕ್ತರೆಲ್ಲ ಕೂಡಿಕೊಂಡು ಶರಣಪ್ಪನಿಗಂದರು. 'ಶರಣಪ್ಪ, ನೀನು ನಮ್ಮೂರಿಗೆ ಬಂದು ಒಂದು ತಿಂಗಳ ವರೆಗೆ ಕೀರ್ತನ ಮಾಡಬೇಕು; ಅಂದರೆ ನಮಗೆ ತೃಪ್ತಿಯಾಗುವದು.'

ಆಗ ಶರಣಪ್ಪನಂದನು.

'ನಿಮ್ಮ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಕರಾರು.'

'ಹೇಳು ನೋಡೋಣ.'

'ನೀವು ಗ್ರಾಮವಾಸಿಗಳೆಲ್ಲ ಕೂಡಿ ಈ ವಿಚಾರ ಮಾಡಿದ್ದೀರಿ; ನಿಮಗೆ ನಾನು ಈಗ ಹೇಳುವ ಮಾತೇನೂ ದೊಡ್ಡದಲ್ಲ. ಶ್ರಾವಣ ಸೋಮವಾರದ ದಿನ ಬಂಡಿ ತುಂಬ ಅನ್ನ ತುಂಬಿ ಎಲ್ಲರೂ ಭಜನೆ ಮಾಡುತ್ತ ಬಂದು ಸಿದ್ಧಾರೂಢಸ್ವಾಮಿಗೆ ಅರ್ಪಿಸಬೇಕು; ಈ ಮಾತು ನಡೆದರೆ ನಾನು ಕೀರ್ತನಕ್ಕೆ ಬರುತ್ತೇನೆ.'

ಎಂದು ಶರಣಪ್ಪ ಹೇಳಲು ಆ ಹಳ್ಳಿಗಳು ಆನಂದದಿಂದ ಒಪ್ಪಿಕೊಂಡರು; ಯಾಕಂದರೆ ಅದರಿಂದ ಎರಡು ಬಗೆಯಿಂದ ಪುಣ್ಯ ಸಂಗ್ರಹವಾಗುತ್ತಿತ್ತು. ಹೀಗೆ ತನ್ನ ಮಾತಿಗೆ ಜನ ಒಪ್ಪಿಕೊಂಡುದನ್ನು ಕಂಡು ಅವರ ಊರಿಗೆ ಬಂದು ಕೀರ್ತನ ಆರಂಭಿಸಿದನು. ಅಲ್ಲಿ ಸಾವಿರಾರು ಜನ ಕೀರ್ತನಕ್ಕೆ ನೆರೆದು ರಸಭರಿತವಾದ ಆ ಕೀರ್ತನ ಕೇಳಿ ಕೆಲವೇಳೆಯ ವರೆಗಾದರೂ ಪ್ರಪಂಚವನ್ನು ಮರೆಯುವರು; ಸಿದ್ಧನ ಜಯ ಜಯಕಾರ ಮಾಡುವರು.

ಕೀರ್ತನಕ್ಕೆ ಅಬಾಲ-ವೃದ್ಧರೂ ಮೊದಲುಗೊಂಡು ಸ್ತ್ರೀ-ಪುರುಷರೆಲ್ಲ ಬಂದು ಸೇರುವರು. ಹಾಗೆ ಬರುವ ಸ್ತ್ರೀಯರಲ್ಲಿ ಇಬ್ಬರಿಗೆ ಭೂತೋಪದ್ರವ ವಾಗಿತ್ತು, ಅವರು ನಿತ್ಯದಲ್ಲಿ ಬಂದು ಗುರುಮಹಿಮೆಯನ್ನು ಕೇಳುತ್ತ ಅವನ ಜಯ ಜಯಕಾರ ಧ್ವನಿಯಲ್ಲಿ ಭಾಗಿಗಳಾಗುತ್ತ ಕೆಲದಿನವಿರಲು ಅವರ ಬಾಧೆ ನಿವಾರಣೆಯಾಯಿತು; ಅದನ್ನು ಕಂಡು ಜನರು ಅತ್ಯಾನಂದಿತರಾದರು. ಆಗ

ಶರಣಪ್ಪ ನುಡಿದನು– 'ಅಪ್ಪಗಳಿರಾ ನೋಡಿದಿರಾ, ಸದ್ಗುರು ಕೀರ್ತನದ ಮಹಿಮೆಯನ್ನು, ಇದರಿಂದ ಸರ್ವಾರಿಷ್ಟಗಳೆಲ್ಲ ನಿವಾರಣೆಯಾಗಿ ಇಹ–ಪರ ಸುಖ ಸಾಧಿಸುವುದು ನಡೆಯಿರಿ. ಉತ್ಸವದಿಂದ ಸದ್ಗುರುನಾಥನ ಬಳಿಗೆ ಸಾಗಿ ಆವನ ದರ್ಶನ ಪಡೆಯೋಣ.'

ಎಂದು ಶರಣಪ್ಪ ಹೇಳಲು ಜನರು ಸಾವಿರಾರು ಜತೆ ತಾಳಗಳನ್ನು ಕೂಡಿಸಿದರು, ತಳಿರು–ಹೂಮಾಲೆಗಳಿಂದ ಅದೆಷ್ಟೋ ಚಕ್ಕಡಿಗಳನ್ನು ಶೃಂಗಾರಮಾಡಿದರು. ಮುಂದೆ ಸಾವಿರಾರು ಜನರ ಭಜನೆಯ ಮೇಳ. ಹಿಂದೆ ಕಲಶಾರತಿ ಹಿಡಿದ ಅನೇಕ ಮುತ್ತೈದೆಯರು, ನಾನಾಬಗೆಯ ಪಕ್ವಾನ್ನಗಳು ತುಂಬಿದ ಬಂಡಿಗಳು, ಬಗೆಬಗೆಯ ಮಂಗಲವಾದ್ಯಗಳ ಘೋಷ, ಉತ್ಸಾಹ ಭರಿತರಾಗಿ ಉತ್ಸವದಿಂದ ಸಿದ್ಧನಬಳಿಗೆ ಬಂದರು. ಬಂದ ಜನರಿಗೆಲ್ಲ ದರ್ಶನ ಕೊಡುತ್ತ ಸಿದ್ಧ ಸುಖಾಸನದಲ್ಲಿ ಕುಳಿತಿದ್ದನು. ಈ ಕೌತುಕದ ಸುದ್ದಿ ಕೇಳಿ ಹುಬ್ಬಳ್ಳಿಯ ಅನೇಕ ನಿವಾಸಿಗಳೂ ಬಂದರು. ಉಣಕಲ್ಲಿನ ಭಕ್ತರು ಪ್ರೇಮ ದಿಂದ ತಂದ ಬಗೆಬಗೆಯ ಪಕ್ವಾನ್ನಗಳನ್ನು ಸ್ವೀಕರಿಸಿದೆನೆನ್ನುವಂತೆ ಸಿದ್ಧ ಕೈಯಿಂದ ಸ್ಪರ್ಶಮಾಡಲು ಜಯಜಯಕಾರ ಮಾಡಿ ಜನರು ಎಲೆಹಾಕಿ ಬಡಿಸಿದರು. ಸಂತೋಷದಿಂದ ಜನರು ಊಟಮಾಡುತ್ತಿರುವುದನ್ನು ಕಂಡು ಸಿದ್ಧ ನಲಿಯುತ್ತ ಉನ್ನತಾಸನದಲ್ಲಿ ವಿರಾಜಮಾನನಾಗಿದ್ದನು.

ಭಕ್ತರ ಸೌಖ್ಯವೇ ಸದ್ಗುರುವಿನ ಸಂತೋಷವಲ್ಲವೇ ?

ಇಲ್ಲಿ ದೊರೆತದ್ದೂ ಬರಿಯ ಊಟವಲ್ಲ. ಊಟವಾದರೆ ಹೊಟ್ಟೆ ತುಂಬಿತು, ಇದೊಂದೇ ಮನುಷ್ಯನಿಗಿದೆ. ಇದನೊಂದು ತುಂಬಿಕೊಂಡರಾ ಯಿತು ಎಂದು ತಿಳಿದು ಅನೇಕರು ಎಂಥ ಪಾಪಮಾಡಲಿಕ್ಕೂ ಹೇಸುವುದಿಲ್ಲ. ಹಾಗೆ ಪಾಪ ಮಾಡಿ ಹೊಟ್ಟೆಗೆ ಪಕಾನ್ನಗಳನ್ನು ಹಾಕಿದರೂ ಸುಖವಾಗುವ ದಿಲ್ಲ ಎಂಬುದನ್ನು ತಿಳಿದರೆ ಆಗ ಆವನು ಮನುಷ್ಯನೆನಿಸುವನು.

ಸ್ಥೂಲದೇಹ-ಸೂಕ್ಷ್ಮದೇಹಗಳೆಂದು ಮನುಷ್ಯನಿಗೆ ಎರಡು ದೇಹಗಳು. ಎರಡೂ ದೇಹಗಳಿಗೆ ಬೇರೆ ಬೇರೆ ಬಗೆಯ ಹಸಿವೆ, ಸ್ಥೂಲಹೇಹದ ಹೊಟ್ಟೆಗೆ ಅನ್ನಹಾಕಿದರೆ ತುಂಬುತ್ತದೆ, ಸೂಕ್ಷ್ಮ ದೇಹದ ಹೊಟ್ಟೆ ಸದ್ವಿಚಾರ-ಸತ್ಸಂಗತಿ ಭಕ್ತಿ-ಜ್ಞಾನಗಳಿಂದ ತುಂಬುತ್ತದೆ. ವಸ್ತುಸ್ಥಿತಿ ಹೀಗಿರಲು ಸ್ಥೂಲದೇಹದ ಹೊಟ್ಟೆಯ ವಿಚಾರವೊಂದನ್ನೇ ಮಾಡಿದರೆ ತಪ್ಪಾಗಲಾರದೇ ?

ಅಂದು ಸಿದ್ಧನ ಸನ್ನಿಧಿಯಲ್ಲಿ ಉಂಡ ಜನರಿಗೆ ಎರಡೂಬಗೆಯ ಹೊಟ್ಟೆ ತುಂಬಿದವು. ಅಸಂಖ್ಯ ಜನರ ಊಟವಾಯಿತು. ಎಲ್ಲರ ಊಟ ಮುಗಿದರೂ ಸದ್ಗುರು ಇನ್ನೂ ಮಂಡಿಸಿದ್ದನು. ಜನರು ಅವನ ಸುತ್ತ ಕುಳಿತರು. ಭಕ್ತಿ-ಭರಿತನಾಗಿ ಶರಣಪ್ಪ ಕೀರ್ತನ ಮಾಡಿದನು. ಎರಡುತಾಸು ಹೇಗೆ ಕಳೆದವೋ ಯಾರಿಗೂ ಗೊತ್ತಾಗಲಿಲ್ಲ. ಅಂಥ ರಸ, ಅಂಥ ಮಾಧುರ್ಯ. ಹೀಗೆ ಕೀರ್ತನ ಕೇಳಿ ಧನ್ಯತೆಯನ್ನು ಪಡೆದ ಜನ ಊರಿಗೆ ಹೊರಟು ನಿಲ್ಲಲು ಶರಣಪ್ಪ– 'ಒಂದುಸಾರೆ ಗುರುನಾಥನನ್ನು ಕರೆದುಕೊಂಡು ಹೋಗಿ ಪೂಜಿಸಿರಿ.' ಎಂದು ಸೂಚಿಸಿದನು. ಅದರಂತೆ ಉಣಕಲ್ಲ ಭಕ್ತರು ಸಿದ್ಧತೆ ಮಾಡಿಕೊಂಡು ನಮ್ಮ ಊರಿಗೆ ಬರಬೇಕೆಂದು ಸದ್ಗುರುವನ್ನು ಪ್ರಾರ್ಥಿಸಿದರು. ಭಕ್ತರ ಮಾತಿಗೆ ಗುರುನಾಥ ಏನು ಹೇಳುತ್ತಿದ್ದನೋ ತಿಳಿಯದು. ಹುಬ್ಬಳ್ಳಿಯ ಭಕ್ತರು– 'ಹಾಗೆ ಸಿಕ್ಕಸಿಕ್ಕಂತೆ ಸ್ವಾಮಿಯವರು ಸಂಚಾರ ಮಾಡುವುದು ಸಾಧ್ಯವಿಲ್ಲ. ಆದೇನು ನಿಮ್ಮ ಭಕ್ತಿಯೋ ಇಲ್ಲಿಯೇ ಬಂದು ಸೇವಿಸಿರಿ.' ಎಂದು ಹೇಳಿ ಬಿಟ್ಟರು. ಉಣಕಲ್ಲ ಭಕ್ತರು ಈ ಮಾತನ್ನು ಕೇಳಿ– 'ಗುರುನಾಥ ನಿಮ್ಮವನು ಹೇಗೋ ಹಾಗೆ ನಮ್ಮವನೂ ಆಗಿದ್ದಾನೆ. ನೀವು ಈ ರೀತಿ ಮಾತಾಡುವದು ಯೋಗ್ಯವಲ್ಲ' ಎಂದರು.

ಭಕ್ತರೊಳಗಿನ ಪ್ರೇಮಕಲಹವನ್ನು ನೋಡುತ್ತ ಸಿದ್ಧ ಮೌನವಾಗಿ ಮುಗುಳುನಗೆ ನಗುತ್ತಿದ್ದನು. ಆಗ ಶರಣಪ್ಪ ಉಣಕಲ್ಲ ಭಕ್ತರೊಡನೆ ವಿಚಾರಿಸಿ ಹುಬ್ಬಳ್ಳಿಯವರಿಗೆ– 'ನೀವೇ ಸದ್ಗುರುನಾಥನನ್ನು ಕರೆದುಕೊಂಡು ಉಣಕಲ್ಲಿಗೆ ಬನ್ನಿರಿ, ಎಲ್ಲರೂ ಕೂಡಿ ಪೂಜೆ ಮಾಡೋಣ. ಅಲ್ಲಿಯೇ ಎಲ್ಲರ ಪ್ರಸಾದವೂ ಆಗಲಿ. ಹೀಗೆ ಕಾರ್ಯ ತೀರಿಸಿಕೊಂಡು ಪುನಃ ಹುಬ್ಬಳ್ಳಿಗೆ ಒರಲು ಅಡ್ಡಿ ಏನು ?' ಎಂದು ಹೇಳಲು ಎಲ್ಲರಿಗೂ ಸಮಾಧಾನವಾಯಿತು. ಸದ್ಗುರುನಾಥ ಕೂಡ ಸಮ್ಮತಿಸಿದನು. ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಭಜನೆ ಮಾಡುತ್ತ ಉಣಕಲ್ಲ ಭಕ್ತರು ಮಹಾವೈಭವದಿಂದ ಊರಿಗೆ ಗುರುನಾಥನನ್ನು ಕರೆತಂದರು.

ಅಂದ ಗುರುದೇವನಿಗೆ ವಿಶೇಷಾಲಂಕಾರವಾಯಿತು. ಮೈಮೇಲೆ ಪೀತಾಂಬರದ ಪ್ರಾವರಣ, ತಲೆಯ ಮೇಲೆ ಭಂಗಾರದ ಕಿರೀಟ, ಪುಷ್ಪಗಳ ಮನೋಹರ ಮಾಲೆ, ಆ ಶಾಂತಿ–ಕಾಂತಿ ಆ ವೈಭವ ಕಂಡರೆ ಕ್ಷಣಮಾತ್ರ

ದೇವಲೋಕದ ಕಲ್ಪನೆ ಬಂದಂತಾಗುವುದು, ಆನಂದದಿಂದ ಗುರುವನ್ನು ಪೂಜಿಸಿ ಎಲ್ಲರೂ ನಲಿದರು. ದೊಡ್ಡ ಬೈಲಿನಲ್ಲಿ ಎಲೆ ಹಾಕಿ ಜನರಿಗೆ ಊಟ ಹಾಕಿದರು. ಸಮುದ್ರ ತೆರೆಗಳನ್ನು ಎಣಿಸುವವರಾರು? ಅದರಂತೆ ಹಿಂಡಾಗಿ ಬಂದು ಸಾಲು ಸಾಲಾಗಿ ಕುಳಿತು ಅಂದು ಊಟ ಮಾಡಿದ ಜನರೆಷ್ಟೋ? ಜನರ ಆ ಭಕ್ತಿಯನ್ನು ಕಂಡು ಸಿದ್ಧ ಸಂತೋಷಗೊಂಡು ಶರಣಪ್ಪನಿಗೆ– 'ಶರಣಾ, ಇವರಿಗೇನು ಮಾಟ ಮಾಡಿದೆಯೋ ಭಕ್ತಿಯಿಂದ ಜನ ಹುಚ್ಚರಾಗಿರುವರಲ್ಲ' ಎನ್ನಲು ಶರಣಪ್ಪ– 'ಗುರುವೇ ನಿನಗರಿಯದುದೇನು? ಆದರೂ ಒಂದು ಕಥೆಕೇಳು– ಒಂದು ಕತ್ತಲೆಯ ಗವಿ, ಸುತ್ತುಮುತ್ತು ಅಡವಿ ಅಡವಿಯಲ್ಲಿ ಕಾಡುಜನ, ಮನೆ ಮಾಡಿಕೊಳ್ಳುವ ಬುದ್ಧಿಯಿಲ್ಲ, ವಸ್ತ್ರಗಳ ಕಲ್ಪನೆಯಿಲ್ಲ, ಬೆಂಕಿಯ ಜ್ಞಾನವೂ ಅವರಿಗಿಲ್ಲ, ಥಂಡಿ–ಮಳೆ–ಬಿಸಿಲು ತಾಳುತ್ತ ಹಾಗೆಯೆ ಜೀವನ ಮಾಡಿಕೊಂಡಿದ್ದರು. ಗಾಳಿ–ಮಳೆ–ಥಂಡಿ ಹೆಚ್ಚಲು ಕೆಲವರು ಈ ಗವಿಯನ್ನಾದರೂ ಸೇರಿ ಬೆಚ್ಚಗಿರೋಣ ಎಂದು ಒಳಸೇರುವರು. ಆದರೆ ಹಾಗೆ ಒಳಗೆ ಹೊಕ್ಕವರು ತಿರುಗಿ ಹೊರಗೇ ಬರುತ್ತಿರಲಿಲ್ಲ. ಇದನ್ನು ಕಂಡು ಆ ಕಾಡುಜನ ತಿಳಿದುದೇನಂದರೇ ಈ ಗವಿಯಲ್ಲಿ ಭೂತಗಳಿವೆ, ರಾಕ್ಷಸರಿದ್ದಾರೆ, ಅವರು ನಮ್ಮ ಜನರನ್ನು ಕೊಂದು ತಿಂದಿರಬೇಕು. ಎಂದುಕೊಂಡು ಯಾರೂ ಅತ್ತ ಸುಳಿಯದೇ ಬೈಲಿನಲ್ಲಿಯೇ ಹೇಗೋ ಬದುಕಿದರು. ಒಂದುದಿನ ಬೇರೊಂದು ಗುಂಪಿನವ ಬಂದ. ಅವನಿಗೆ ಬೆಂಕಿಯ ಜ್ಞಾನವಿತ್ತು, ಥಂಡಿಯಾಗಲು ಬೆಂಕಿ ಹೊತ್ತಿಸಿದನು. ಉಳಿದವರು ಕೊಂದು ತಂದ ಮೃಗಗಳ ಮಾಂಸ ಬೇಯಿಸಿಕೊಟ್ಟರು. ಹಸೀ ಮಾಂಸಕ್ಕಿಂತ ರುಚಿಯಾದ ಅದನ್ನು ತಿಂದ ಕಾಡುಜನರಿಗೆ ಸಂತೋಷವಾಯಿತು. ಅಲ್ಲಿ ಗವಿ ಇರುವುದನ್ನೂ, ಅದರಲ್ಲಿ ಪ್ರವೇಶಮಾಡಿ ತಮ್ಮ ಎಷ್ಟೋಜನ ಪ್ರಾಣಕೊಟ್ಟದನ್ನೂ ಅವನಿಗೆ ತಿಳಿಸಿದರು. ಆಗ ಬೆಂಕಿಯನ್ನು ಬಲ್ಲ ಆ ಮನುಷ್ಯನು ಕಟ್ಟಿಗೆಯ ದೊಂದೆಗಳನ್ನು ಹೊತ್ತಿಸಿಕೊಂಡು ಗವಿಗೆ ಬಂದು ನೋಡಿದನು. ಅದರಲ್ಲಿ ಒಳಗೆ ಪ್ರವೇಶಮಾಡಲು ಮಾರ್ಗವೇನೋ ಇತ್ತು. ಆದರೆ ಎಡಬಲಕ್ಕೆ ತಲೆಯಮೇಲೆ ಅನೇಕ ಚೂಪುಗಲ್ಲುಗಳು ಹಾಯ್ದಿದ್ದವು. ಘೋರ ಕತ್ತಲೆಯಲ್ಲಿ ಅದರೊಳಗೆ ಪ್ರವೇಶಮಾಡಿದವರೆಲ್ಲ ಆ ಕಲ್ಲು ತಾಕಿಯೇ ಮರಣ ಹೊಂದಿದ್ದರು. ಅದನ್ನು ಮನಗಂಡು ಆ ತಿಳಿವಳಿಕೆಯುಳ್ಳ ಮನುಷ್ಯನು ಬೇರೆ

ಕಲ್ಲು ತಂದು ಬೆಳಕಿನಲ್ಲಿ ಆ ಚೂಪುಗಲ್ಲುಗಳನ್ನೆಲ್ಲ ಸವರಿಹಾಕಿದನು. ಮಾರ್ಗ ನಿರಾತಂಕವಾಯಿತು. ಗವಿಯೂ ದೊಡ್ಡದಿತ್ತು, ತನ್ನ ಬಾಂಧವರಿಗೆಲ್ಲ ಒಳಗಿರುವಂತೆ ಹೇಳಿದನು. ಅವರು ಆ ತಿಳುವಳಿಕೆಯುಳ್ಳವನ ಉಪಕಾರ ಸ್ಮರಿಸುತ್ತ ಸುಖಿಗಳಾದರು, ಬೆಳಕಿನಿಂದ ಅವರ ಪೀಡೆಗಳೆಲ್ಲ ಕಳೆದವಲ್ಲವೇ? ನಾನು ಸದ್ಗುರು ಸ್ವರೂಪದ ಅಂಥ ಬೆಳಕನ್ನು ಈ ಜನರಿಗೆ ತೋರಿಸಿದ್ದೇನೆ. ಇವರು ಪ್ರಪಂಚವೆಂಬ ಗುಹೆಯನ್ನು ಸ್ವಚ್ಛಮಾಡಿಕೊಂಡು ಅಲ್ಲಿ ಹೊಸದಾಗಿ ವಸತಿ ಮಾಡಿದ್ದಾರೆ' ಎನ್ನಲು ಸಿದ್ಧನು- 'ಶರಣಾ, ನೀನು ಒಳ್ಳೇ ಕೀರ್ತನಕಾರನಾಗಿರುವೆ ಬಿಡು' ಎಂದು ವಿನೋದ ಮಾಡಿದನು.

ಹೀಗೆ ಶರಣಪ್ಪನ ಸಂಕಲ್ಪದಂತೆ ಉತ್ಸವ ಕಾರ್ಯಗಳೆಲ್ಲ ಮುಗಿಯಲು ಪುನಃ ಗುರುನಾಥನನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಹುಬ್ಬಳ್ಳಿಗೆ ಮುಟ್ಟಿಸಿದರು. ಒಟ್ಟಿನಲ್ಲಿ ಶರಣಪ್ಪನ ಕಾರ್ಯವೆಂದರೆ ಗುರುಭಕ್ತಿಯ ಪ್ರಚಾರ ಮಾಡುವದು ಪರಮಾರ್ಥದಲ್ಲಿ ಪ್ರೀತಿಯನ್ನು ಹುಟ್ಟಿಸುವುದು. ಸ್ವಂತದ ವಿಚಾರವೆ ಅವನಿಗಿರಲಿಲ್ಲ.

ಒಂದು ಸಾರೆ ಅವನು ಬೆಳಗಾವಿ ಜಿಲ್ಹೆಯ ಗೋಕಾವಿಯಿಂದ ಹುಬ್ಬಳ್ಳಿಗೆ ಬರಬೇಕಾಗಿತ್ತು. ಆ ದಿನ ಸದ್ಗುರು ದರ್ಶನ ಪಡೆದೇ ಅನ್ನ ನೀರು ತೆಗೆದುಕೊಳ್ಳುವುದು ಎಂದು ಅವನ ಸಂಕಲ್ಪ. ದಾರಿಯಲ್ಲಿ ಘಟಪ್ರಭ ನದಿ ಸೂಸಿ ಹರಿಯುತ್ತಿದ್ದಿತು. ಒಂದು ದಂಡೆಗೆ ನಿಂತನು, ಅಲ್ಲಿ ಜನರನು ದಾಟಿಸುವದಕ್ಕೆಂದು ಇದ್ದ ಒಂದೇ ಒಂದು ಡೋಣಿಯು ಪ್ರವಾಹದಲ್ಲಿ ತೇ ಹೋಗಿತ್ತು. ಅವಶ್ಯಕ ಕಾರ್ಯಗಳಿಗೋಸುಗ ಊರು-ಕೇರಿಗಳಿಗೆ ತೆರ ಬೇಕೆಂದವರು ನದಿಯವರೆಗೆ ಬಂದು ಡೋಣಿ ಇಲ್ಲವೆಂದು ತಿಳಿದು ನಿರಾ ರಾಗುತ್ತಿದ್ದರು, ಬಂದ ಜನರೆಲ್ಲ ತಿರುಗಿ ಹೋದರು. ಆದರೆ ಬೆಳಗಿನಲ್ಲಿ ಬಂ ಶರಣಪ್ಪನು ಮಧ್ಯಾಹ್ನವಾಗುತ್ತ ಬಂದರೂ ಗುರುನಾಮವನ್ನು ಜಪಿಸುತ ದಂಡೆಯಲ್ಲಿ ಕುಳಿತೇ ಇದ್ದನು. ಇವನ ಸ್ಥಿತಿ ತಿಳಿದವರು— ಅಯ್ಯ, ವ್ಯಥ ವಾಗಿ ಇಲ್ಲಿ ಕುಳಿತರೇನು ಬಂದಹಾಗಾಯಿತು? ನಡೆ ತಿರುಗಿ ಹೋಗೋಣ ನಾಳೆ ನದಿ ಇಳಿದನಂತರ ದಾಟಿದರಾಯಿತು' ಎಂದು ಬಹುಪರಿಯಾ ಹೇಳಿದರು. ಇವನ ಒಂದೇ ಉತ್ತರ— 'ಸದ್ಗುರು ದರ್ಶನ ಪಡೆದವೇ ಇತರ ವಿಚಾರ' ಎಂದು ಹಟಮಾರಿತನ ಕಂಡು ಜನರೆಲ್ಲ ಹೋಗಿಬಿಟ್ಟರು

ನದಿಯ ದಂಡೆಯಲ್ಲಿ ಒಬ್ಬನೇ ಒಬ್ಬ, ಹೊತ್ತು ಮುಳುಗಿ ಕತ್ತಲಾಯಿತು. ಆಗ ಶರಣನೆಂದನು— 'ಗುರುವೇ. ಈ ಪ್ರಸಂಗದಲ್ಲಿ ನೀನು ಬಂದು ನನ್ನನ್ನು ದಾಟಿಸದೇ ಹೋದರೆ ನಿನ್ನ ಉತ್ಸವ ಕಾಲದಲ್ಲಿ ನನ್ನ ಕೀರ್ತನವಾಗಬೇಕೆಂದು ಸಂಕಲ್ಪಮಾಡಿದ ವ್ರತವು ಭಂಗವಾಗುವದು. ಹೀಗೆ ಭಕ್ತರ ನಿಷ್ಠೆಯನ್ನು ಕಲಕುವದು ನಿನಗೆ ಇಷ್ಟವೇ? ಸದ್ಗುರುವೆಂದರೆ ಶಿಷ್ಯರನ್ನು ಭವನದಿಯಿಂದ ದಾಟಿಸತಕ್ಕವವಲ್ಲವೇ? ಭವನದಿಯು ಬಹಳ ಭಯಂಕರವಾದುದು. ಎಷ್ಟು ಸುಳಿ, ಎಂಥ ವೇಗ, ಕ್ರೂರ ಜಂತುಗಳೆಷ್ಟು? ಎಂಥ ಆಳ, ಇಂಥ ಮಹಾನದಿ ದಾಟಿಸುವವನಿಗೆ ಇದೊಂದು ಸಣ್ಣ ನದಿ ಭಯಗೊಳಿಸಿರುವದೇ? ಬೇಗನೇ ಬಂದು ನನ್ನನ್ನು ದಾಟಿಸು. ನಿನ್ನ ಪೂಜೆ ನೋಡದೆ ನಾನು ನಿಲ್ಲಲಾರೆ. ಒಂದುವೇಳೆ ನನ್ನ ನಿಷ್ಠೆಯನ್ನು ಪರೀಕ್ಷಿಸಬೇಕೆಂದ ನಿನ್ನ ಅಪೇಕ್ಷೆಯೇ ಇದ್ದೀತು, ಇಂಥ ವಿನೋದ ನಿನ್ನಲ್ಲಿ ಬಹಳ. ನೋಡಿಬಿಡು' ಎಂದವನೇ ಶರಣಪ್ಪನು- 'ಜಯ ಸಿದ್ಧಾರೂಢ ಸದ್ಗುರು' ಎಂದು ಗರ್ಜಿಸಿ ನದಿಗಿಳಿದನು. ಮಹಾರಭಸದಿಂದ ಗರ್ಜಿಸುತ್ತ ನದಿ ಧಾವಿಸುತ್ತಿತ್ತು. ಆ ಪ್ರವಾಹ ವೇಗಕ್ಕೆ ಶರಣಪ್ಪ ತೇಲಿಹೋಗತೊಡಗಿದನು. ಬಾಯಿಂದ ಗುರುನಾಮ ಘೋಷ ನಡೆದೇ ಇತ್ತು. ಹೀಗೆ ಕೆಲ ದೂರ ತೇಲಿ ಹೋಗುತಿರಲು ಒಂದೇ ನೌಕೆ ನಡೆಸುತ್ತ ಸದ್ಗುರು ನಾವಾಡಿಗನಾಗಿ ಬಂದನು. ಬಹು ಕಷ್ಟದಿಂದ ಆ ಪ್ರವಾಹ ಮಧ್ಯದಲ್ಲಿ ತೇಲುತ್ತ ಸಾಗಿರುವ ಶಿಷ್ಯನನ್ನೆಳೆದು ನಾವಿನಲ್ಲಿ ಹಾಕಿದನು, ನೌಕೆ ಈಚೆಯ ದಂಡೆ ತಲುಪಿತು. ಮೆಲ್ಲನೆ ಅವನನ್ನಿಳಿಸಿ ಗುರುವು ಕಣ್ಮರೆಯಾದನು. ಅಷ್ಟರಲ್ಲಿ ಜಾಗ್ರತನಾದ ಶರಣಪ್ಪ ಕಣ್ಣುಬಿಟ್ಟು ಆಚೀಚೇ ನೋಡಿದರೆ ಅಲ್ಲೇನಿದೆ? ಬಟ್ಟಬೈಲು, ಗಿಡಗಂಟಿ, ಘೋರಕತ್ತಲೆ, ಬಳಿಯಲ್ಲಿಯೇ ಗರ್ಜಿಸುತ್ತ ಪ್ರವಹಿಸುತ್ತಿರುವ ನದಿ. ಕರುಣಾಘನನಾದ ಗುರುನಾಥನೇ ದಾಟಿಸಿದನೆಂದು ತಿಳಿದು ವಂದನೆಗಾಗಿ ಹುಬ್ಬಳ್ಳಿಗೆ ಬಂದನು.

ಗುರುದರ್ಶನವಾದ ಮೇಲೆ ಪರಮಹ್ಲಾದಿತನಾದ ಶರಣಪ್ಪನು ತನ್ನ ಕಥೆಯನ್ನು ಹೇಳಲು-'ಶರಣಾ, ನೀನು ಹಟಮಾರಿ ಎಂಬುದು ನನಗೆ ಗೊತ್ತು ನಿನ್ನ ದೆಸೆಯಿಂದ ಅಂದು ಥಂಡಿಯಲ್ಲಿ ನಾ ಕಷ್ಟಪಡಬೇಕಾಯಿತು. ನೋಡು ನನಗೀಗ ನೆಗಡಿಯಾಗಿದೆ' ಎಂದು ಗುರುನಾಥ ನಗೆಯಾಡಿದನು. ಆ ಮಾತಿಗೆ ಶರಣಪ್ಪನು- 'ಮೋಹಪ್ರವಾಹದಿಂದ ಜೀವಿಗಳನ್ನು ಪಾರುಮಾಡು

ವದು ಗುರುವಿನ ಕರ್ತವ್ಯ. ಅದಕ್ಕೆ ಯಾರೇನು ಮಾಡಬೇಕು? ಎಂದು ನಗುತ್ತ ನುಡಿದನು. ಶಿಷ್ಯನ ಮಾತು ಕೇಳಿ ಸದ್ಗುರು ಮಂದಸ್ಮಿತನಾಗಿ ತನಗಾದ ಆನಂದವನ್ನು ಸೂಚಿಸಿದನು.

ಭಾವದಂತೆ ಸಿದ್ಧಿ ಎಂಬ ನಾಣ್ಣುಡಿಯಂತೆ ಶರಣಪ್ಪ ಸದ್ಗುರುವೆಂದರೆ ಅಘಟಿತ ಘಟನಾ ಸಾಮರ್ಥ್ಯವುಳ್ಳ ದೇವರೆಂದು ತಿಳಿದಿದ್ದನು. ಅಖಂಡವಾಗಿ ಅವನನ್ನು ಆರಾಧಿಸುತ್ತಿದ್ದನು. ಅದೇ ಬಲ-ಅದೇ ಶಕ್ತಿಯಿಂದ ಅಸಾಧ್ಯ-ಅಶಕ್ಯವೆನಿಸುವಂಥ ಕಾರ್ಯಗಳನ್ನು ಮಾಡಿ ಸದ್ಗುರು ಭಕ್ತರಿಗೆ ಮೇಲ್ಪಂಕ್ತಿಯಾದನು.

ಶ್ರಾವಣಮಾಸ-ಶಿವರಾತ್ರಿಯ ಉತ್ಸವಗಳಲ್ಲಿ ಅನ್ನದಾನಕ್ಕೆ ಅನೇಕ ಶಿಷ್ಯರು ಸಾಮಗ್ರಿಗಳನ್ನು ಶೇಖರಿಸುವರು. ಅವರಲ್ಲಿ ಶರಣಪ್ಪ ಶೇಖರಿಸಿದ ಪಾಲು ದೊಡ್ಡದು. ಇವನು ಸಿದ್ಧಾಶ್ರಮಕ್ಕೆ ಬಂದ ದಿನ ಯಾವ ಸ್ಥಳದಲ್ಲಿ ಗುರುದರ್ಶನವು ಮೊಟ್ಟಮೊದಲು ತನಗಾಯಿತೋ ಆ ಸ್ಥಳ ಬಹು ಪವಿತ್ರವೆಂದು ಇವನು ತಿಳಿಯುತ್ತಿದ್ದನು. ಹಾಗೆಂದು ಅಲ್ಲೊಂದು ಧರ್ಮಛತ್ರವನ್ನೂ ಭಜನ ಮಂದಿರವನ್ನೂ ಸ್ವತಃ ಕೀರ್ತನದಿಂದ ಸಂಪಾದಿಸಿದ ಹಣದಿಂದ ಕಟ್ಟಿಸಿ ಭಜನ ಮಂದಿರದಲ್ಲಿ ಯಾವಾಗಲೂ ಪಂಚಾಕ್ಷರೀ ಮಂತ್ರ-ಶಿವಭಜನೆ ನಡೆಯುವಂತೆ ವ್ಯವಸ್ಥೆ ಮಾಡಿದನು. ಇದಲ್ಲದೇ ಬೇರೆ ಊರುಗಳಲ್ಲಿ ಇವನು ಸ್ಥಾಪಿಸಿದ ಭಜನ ಮಂದಿರಗಳುಂಟು.

ಅವನಲ್ಲಿ ಯಾವ ಭಿಡೆ-ಮುರವತ್ತುಗಳೂ ಇರಲಿಲ್ಲ. ಮಾನಾಪಮಾನಗಳ ಪರಿವೆ ಇರಲಿಲ್ಲ. ರಾಜರಿರಲಿ-ಮಹಾರಾಜರಿರಲಿ, ಶೇಟ-ಸಾಹುಕಾರರಿರಲಿ, ಅವರಲ್ಲಿ ಹೋಗುವನು. ಸಿದ್ಧನ ಮಹಿಮೆ ವರ್ಣಿಸುವನು. ಪ್ರಸಾದ ಕೊಡುವನು, ಪ್ರತ್ಯಕ್ಷವಾಗಿ ಗುರು ಮಹಿಮೆ ಕಾಣುವದಿದ್ದರೆ ಹುಬ್ಬಳ್ಳಿಗೆ ಬನ್ನಿರೆಂದು ಆಮಂತ್ರಿಸುವನು. ಗುರುವಿನ ಚಿತ್ರವನ್ನೂ ಚರಿತ್ರವನ್ನೂ ಇವನು ಎಷ್ಟು ಜನರಿಗೆ ಹಂಚಿದನೋ ಆ ಸಂಖ್ಯೆ ತಿಳಿಯುವಂತಿಲ್ಲ.

ಇವನು ಅನೇಕ ಶೇಟರನ್ನು ಕರೆತಂದು ಸಿದ್ಧನ ದರ್ಶನ ಮಾಡಿಸಿದನು. ಪದ್ಮಾಲಾಲರೆಂಬ ಜೈನಮಹಾರಾಜರೊಬ್ಬರು ಇವನಿಂದಲೇ ದರ್ಶನಕ್ಕೆ ಬಂದು ಹೋದರು. ಅನೇಕ ಸತ್ಪುರುಷರು ಇವನ ಪರಿಚಯದಿಂದ ಸಿದ್ಧಾಶ್ರಮಕ್ಕೆ ಬಂದರು.

ಸದ್ಗುರುಸ್ವಾಮಿ ಶರಣಪ್ಪನ ಭಕ್ತಿಗೆ ಮೆಚ್ಚಿದ್ದನು. ಹಾಗೆಂದು ಶಿವ ರಾತ್ರಿಯ ದಿನ ರುದ್ರಾಕ್ಷಮಂಟಪದಲ್ಲಿ ಸದ್ಗುರು ಮಂಡಿಸಲು ಮಹಾ ವೈಭವ ದಿಂದ ಪೂಜೆಮಾಡುವ ಮರ್ಯಾದೆ ಶಿವಪ್ಪನದಾಗಿತ್ತು.

———

೪೮

ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥

--ಭ. ಗೀತಾ.

ಯಾವ ಭಾವವನ್ನು ಮನದಲ್ಲಿಟ್ಟುಕೊಂಡು ಕೊನೆಗಾಲದಲ್ಲಿ ದೇಹ ಬಿಡುವನೋ, ಅವನು ಯಾವಾಗಲೂ ಅದೇ ಭಾಗದಲ್ಲಿರುವವನಾದುದರಿಂದ, ಅರ್ಜುನನೇ ಅದನ್ನೇ ಹೊಂದುತ್ತಾನೆ.

ಸಿದ್ಧಾರೂಢ ಗುರುನಾಥರು ಲೋಕೋದ್ಧಾರ ಕಾರ್ಯ ಮಾಡುತ್ತ ಆಶ್ರಮದಲ್ಲಿ ನೆಲೆಸಿರಲು ಒಂದುದಿನ ಭಕ್ತರೊಬ್ಬರು ಬಂದು ಹೇಳಿದರು. 'ಗುರುದೇವನೇ, ದೂರದೇಶದಿಂದ ಬಂದ ವೃದ್ಧಬ್ರಾಹ್ಮಣರೊಬ್ಬರು ನಮ್ಮ ಮನೆಗೆ ಬಂದು ಜಡ್ಡಾಗಿ ಮಲಗಿದ್ದಾರೆ. ಲಕ್ಷಣ ನೋಡಿದರೆ ಅವರು ಈ ಜಡ್ಡಿನಿಂದ ಪಾರಾಗುವರೆಂದು ಅನಿಸುವುದಿಲ್ಲ. ಯಾವಾಗಲೂ ಬಾಯಲ್ಲಿ ನಿನ್ನ ನಾಮವನ್ನು ಜಪಿಸುತ್ತ ,ಗುರುದರ್ಶನವು ನನಗೆ ಹೇಗಾದೀತು?' ಎಂದು ಕಳವಳಪಡುತ್ತಾರೆ. ಇದಕ್ಕೇನು ವಿಚಾರವೆಂಬುದು ನನಗೆ ತಿಳಿಯ ದಾಗಿದೆ. ಎನ್ನಲು ಸಿದ್ಧನು-ಚಟ್ಟನೆ ಮೇಲೆದ್ದು ಆ ಭಕ್ತನ ಮನೆಗೆ ಬಂದನು. ಆಕಸ್ಮಾತ್ತಾಗಿ ಹೀಗೆ ಗುರುದರ್ಶನವಾಗಲು ಸಾಯಲಾದ ಬ್ರಾಹ್ಮಣ ಮೇಲೆದ್ದು ಬಂದು ನಮಸ್ಕರಿಸಿ- 'ಕರುಣಾಸಮುದ್ರನಾದ ಗುರುವೇ ? ಇದೇನಾಶ್ಚರ್ಯ, ನಿನ್ನ ದರ್ಶನಮಾತ್ರದಿಂದ ನನ್ನ ಕೊರಳಿಗೆ ಬಿದ್ದ ಯಮ ಪಾಶ ಸಡಲಿತೆಂದು ಕಾಣುತ್ತದೆ ನೋಡು, ಎದ್ದು ಬಂದು ನಮಸ್ಕರಿಸುವಷ್ಟು ಶಕ್ತಿ ಬಂದಿತು. ಬಹಳ ದಿನಗಳಿಂದ ನಿನ್ನ ದರ್ಶನ ಪಡೆಯಬೇಕೆಂದು ನಾನು

ಹಂಬಲಿಸುತ್ತಿದ್ದೆವು. ನಿನ್ನ ದರ್ಶನವಾಯಿತು ಸಾಕು. ಇನ್ನೇನೂ ನನಗೆ ಬೇಡ. ಈಗಲೆ ನಾನು ಸಾಯಲು ಸಿದ್ಧ. ಸರ್ವಜ್ಞ ಮೂರ್ತಿಯೇ, ನನ್ನ ಗುರುವು ತಿಳಿಯಿತೇ? ಶ್ರೀಶೈಲ ಕ್ಷೇತ್ರದಲ್ಲಿ ಗಜದಂಡ ಸ್ವಾಮಿಗಳ ಸಮ್ಮುಖದಲ್ಲಿ ನಾನು ನಿನ್ನೊಡನೆ ವಾದಮಾಡಿದೆನು. ಅದನ್ನು ನೀನು ಖಂಡಿಸಿದೆ. ನೆನಪುಂಟೇ ? ನನ್ನ ಹೆಸರು ಸುಬ್ಬಯ್ಯಶಾಸ್ತ್ರಿ. ನನ್ನನ್ನು ನೀನು ಜಯಸಿದ್ದರಿಂದ ನಿನ್ನ ಹೆಸರು ಪ್ರಖ್ಯಾತವಾಯಿತು. ಪಂಡಿತಶ್ರೇಷ್ಠನೆಂಬ ನನ್ನ ಗರ್ವ ನಾಶವಾಯಿತು. ಅಂದು ಸೋಲು ಬಂದ ಸ್ಥಿತಿಯೇ ಒಳ್ಳೇಯದಾಯಿತೆಂದು ಕಾಲಾಂತರದಲ್ಲಿ ನಾನು ತಿಳಿದೆನು. ನಿನ್ನ ದರ್ಶನ ಪಡೆಯುವ ಬಯಕೆ ಹೆಚ್ಚಿತು. ನಾನು ಹೊರಟೆ. ಆದರೆ ನೀನು ಆ ತರುವಾಯದಲ್ಲಿ ತೀರ್ಥ-ಯಾತ್ರೆಗೆ ತೆರಳಿರುವೆ, ಎಂದು ತಿಳಿದುಬರಲು ನಾನೂ ತೀರ್ಥಕ್ಷೇತ್ರಗಳನ್ನು ಸಂಚರಿಸುತ್ತ ಕೊನೆಗೆ ಇಲ್ಲಿ ಬಂದೆನು. ದಾರಿಯಲ್ಲಿಯೇ ನನಗೆ ಜಡ್ಡಾಯಿತು. ನಿನ್ನ ದರ್ಶನ ಪಡೆಯದೇ ಮರಣ ಬರುವುದಲ್ಲ. ಎಂದು ಮಿಡುಕುತ್ತ ಹೇಗೋ ಇಲ್ಲಿಗೆ ಬಂದೆ. ನಿನ್ನ ದರ್ಶನವೂ ಆಯಿತು. ಆದರೆ ಗುರುನಾಥಾ ನಿನ್ನ ಬಳಿಯಲ್ಲಿ ಕೆಲವುದಿನ ಇರಬೇಕು. ಸೇವೆಮಾಡಿ ನಿನ್ನ ಕೃಪೆ ಸಂಪಾದಿಸಬೇಕು. ಆದರಿಂದ ಜ್ಞಾನಪಡೆದು ಉದ್ಧಾರಹೊಂದಬೇಕು. ಎಂಬ ಆಶೆ ಇದ್ದಿತು. ಈ ಜನ್ಮದಲ್ಲಿ ಅದೇನೂ ಪೂರ್ಣವಾಗುವ ಯೋಗವಿದ್ದಂತೆ ಕಾಣಲಿಲ್ಲ.' ಎನ್ನುತ್ತ ಕಣ್ಣೀರು ತರಲು ಸಿದ್ದನು- ಶಾಸ್ತ್ರಿಗಳೇ, ಅಜ್ಞಾನಿಗಳಂತೆ ನೀವು ಕಣ್ಣೀರು ಹಾಕಬಾರದು. ನಿಮಗೆ ಶಾಸ್ತ್ರಜ್ಞಾನವುಂಟು. ಸುಂದರವಾದ ವಿವೇಚನಾ ಶಕ್ತಿಯುಂಟು. ಹೀಗಿರಲು ಯೋಗ್ಯ ಗುರುವಿನ ಸಹವಾಸ ಪ್ರೊದಗಿದ್ದರೆ ಜ್ಞಾನಲಾಭವೊದಗಿ ನಿಜಾನಂದ ಪ್ರಾಪ್ತಿಯೂ ಆಗಬೇಕಾಗಿತ್ತು. ನೀವಂದಂತೆ ಈ ಜನ್ಮದಲ್ಲಿ ಆ ಯೋಗವಲ್ಲವೆಂದು ಕಾಣುತ್ತದೆ. ಆದರೆ ಚಿಂತಿಸುವ ಕಾರಣವಿಲ್ಲ. ಸಾಧನ ಪೂರ್ಣವಾಗದೇ ಮರಣ ಹೊಂದಿದವರು. ಮುಂದಿನ ಜನ್ಮದಲ್ಲಿ ಸಾಧನೆಯಲ್ಲಿ ಪೂರ್ಣ ಮಾಡಿಕೊಂಡು ಗತಿ ಪಡೆಯುವರು. ಎಂದು ಬ್ರಹ್ಮವಿದ್ಯೆಯ ಯೋಗಶಾಸ್ತ್ರವು ಹೇಳುವುದಲ್ಲವೇ ? ಅಲ್ಲದೇ ಯಾವ ಭಾರವನ್ನು ಮನದಲ್ಲಿಟ್ಟುಕೊಂಡು ಮರಣ ಹೊಂದುವನೋ, ಅವನು ಅದನ್ನೇ ಹೊಂದುತ್ತಾನೆ. ಎಂದೂ ಶಾಸ್ತ್ರದಲ್ಲಿದೆ. ಈ ಶಾಸ್ತ್ರಪ್ರಮಾಣಗಳನ್ನು ನಿಮಗೆ ಹೇಳಿಕೊಡುವ ಅವಶ್ಯವಿಲ್ಲ. ಸದ್ಯಕ್ಕಂತೂ ನೀವು ಸಜ್ವಾಸನಾಯುಕ್ತರಾಗಿದ್ದೀರಿ.

ಗುರು-ಜ್ಞಾನ-ಮುಕ್ತಿ-ಇವೇ ನಿಮ್ಮ ಮನಸ್ಸೆಲ್ಲ ವ್ಯಾಪಿಸಿವೆ. ಇವು ಮನುಷ್ಯ ಜನ್ಮವನ್ನು ಸಫಲಗೊಳಿಸುವಂಥ ಭಾವಗಳು. ಇವುಗಳನ್ನೇ ಸ್ಮರಿಸುತ್ತ ಸಮಾಧಾನವಾಗಿ ದೇಹವನ್ನು ಬಿಡಿರಿ. ಭಗವಂತನ ಮುಂದಿನ ಜನ್ಮದಲ್ಲಿ ನಿಶ್ಚಯವಾಗಿ ನಿಮ್ಮ ಉದ್ಧಾರಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಡುವನು.' ಎಂದು ಹೇಳಿದನು. ಈ ಮಾತುಗಳನ್ನಾಲಿಸುತ್ತಿದ್ದಂತೆ ಶಾಸ್ತ್ರಿಗಳ ಮುಖವು ಪ್ರಸನ್ನವಾಯಿತು. 'ಜಯ ಸಿದ್ಧಾರೂಢ, ಜಯ ಸಿದ್ಧಾರೂಢ.' ಎಂದು ಉಚ್ಚರಿಸುತ್ತ ಪ್ರಾಣತ್ಯಾಗ ಮಾಡಿದನು.

ಕೂಡಲೇ ಬ್ರಾಹ್ಮಣರೆಲ್ಲ ನೆರೆದು ಶಾಸ್ತ್ರಿಗಳಿಗೆ ಗತಿಗಾಣಿಸಿ– ಸದ್ಗುರುನಾಥನನ್ನು ಪೂಜೆಮಾಡಿ ಮಠಕ್ಕೆ ಕಳಿಸಿದರು.

* * * * * *

ಗರಗದ ಮಡಿವಾಳಪ್ಪ ತಮ್ಮ ಮಠದಲ್ಲಿದ್ದು ಲೋಕೋದ್ಧಾರದ ಕಾರ್ಯವನ್ನು ಮಾಡುತ್ತಿದ್ದರಷ್ಟೇ, ಅವರಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ನೇಕಾರ ಶಿವಬಸವನೆಂಬವನೊಬ್ಬನು. ಅವನು ಹಗಲೆಲ್ಲ ನೆಯ್ಗೆಯ ಕೆಲಸ ಮಾಡಿಕೊಂಡು ರಾತ್ರಿ ಸ್ವಾಮಿಸೇವೆ ಮಾಡತಕ್ಕವನು. ಪ್ರತ್ಯಕ್ಷವಾಗಿ ಸ್ವಾಮಿ ಅವನಿಗೆ ಯಾವ ಸೇವೆಯನ್ನೂ ಹೇಳುತ್ತಿರಲಿಲ್ಲ. ಯಾವ ಉಪದೇಶವನ್ನೂ ಕೊಡುತ್ತಿರಲಿಲ್ಲ. ಆದರೆ ಭಾವಿಕನಾದ ಶಿವಬಸವನಿಗೆ ಗುರು ಸನ್ನಿಧಿಯೇ ಕೈಲಾಸವೆನಿಸಿತ್ತು. ರಾತ್ರಿಯಲ್ಲಿ ಅಲ್ಲಿ ನಡೆಯುವ ಭಜನೆ–ವೇದಾಂತಶ್ರವಣಗಳಲ್ಲಿ ಭಾಗಿಯಾಗಿ ಯಾವಾಗಲೂ ಅದನ್ನೇ ಚಿಂತಿಸುತ್ತ ಬೆಳಗಿನಲ್ಲೆದ್ದು ಮನೆಗೆ ಬರುವುದು ಅವನ ವಾಡಿಕೆಯ ಕ್ರಮ. ಬೇಕಾದಂಥ ಕಠಿಣ ಕೆಲಸವು ಮಠದಲ್ಲಿ ಮೈಮೇಲೆ ಬಿದ್ದರೂ ನಿರಭಿಮಾನದಿಂದ ಅದನ್ನು ಮಾಡಿ ಮುಗಿಸುವನು. ಶಿವಲಿಂಗವ್ವ ಅವನಿಗೆ ಅನುರೂಪಳಾದ ಹೆಂಡತಿ. ಪತಿಯ ಪರಮಾರ್ಥ ಪ್ರೀತಿಯನ್ನು ಕಂಡು ಅವಳೂ ಪ್ರಭಾವಿತರಾಗಿ ಪತಿಗೆ ಅನುಕೂಲವೊದಗಿಸಿ ಕೊಡುವಳು. ಕೆಲವು ಸಾರೆ ತಾನೂ ಮಠದ ಕಾರ್ಯಕ್ರಮದಲ್ಲಿ ಭಾಗಿಯಾಗುವಳು ಇದರಂತೆ ಎಷ್ಟೋ ದಿನ ಕಳೆದವು.

ಆ ದಂಪತಿಗಳ ನಿಷ್ಠೆಯನ್ನೂ, ಪರಮಾರ್ಥ ಪ್ರೀತಿಯನ್ನೂ ಕಂಡು ಮಡಿವಾಳಸ್ವಾಮಿ ಸಂತೋಷಿತನಾದನು. ಅವರನ್ನು ಅನುಗ್ರಹಿಸಬೇಕೆಂದು ಇಚ್ಛೆಯಾಯಿತು. ಹೀಗಿರಲು ಒಂದುದಿನ ಕೇಳಿದನು– 'ಶಿವಬಸವ, ಬಹಳ

ದಿನಗಳಿಂದ ನಮ್ಮ ಸೇವೆ ಮಾಡುತ್ತಿರುವೆ. ಪರೀಕ್ಷಿಸಬೇಕೆಂದು ನಾನೂ ಉದಾಸೀನತೆಯಿಂದ ಕಂಡೆ. ಆದರೆ ನಿಷ್ಠೆಭಂಗವಾಗಲಿಲ್ಲ. ಹೇಗೆ ನಿನಗೆ ಯಾವ ಇಚ್ಛೆ ಇರುವುದು?' ಎನ್ನಲು ಅವನು 'ಅಪ್ಪ, ನನಗೆ ಸಂಸಾರದಲ್ಲಿ ಬೇಜಾರು ಹುಟ್ಟದೆ. ಸಂಸಾರದ ಯಾವ ವಿಷಯಗಳೂ ರುಚಿಸುವುದಿಲ್ಲ. ಹೇಗಾದರೂ ನನ್ನನ್ನು ಬಿಡುಗಡೆ ಮಾಡು. ಇಲ್ಲಿಯೇ ಇದ್ದು ನಿನ್ನ ಸೇವೆ ಮಾಡಿಕೊಂಡಿರುತ್ತೇನೆ.' ಎಂದನು.

ಸ್ವಾಮಿ ನಸುನಕ್ಕು ಅದೇ ಮಾತನ್ನು ಅವನ ಹೆಂಡತಿಗೆ ಕೇಳಲು ಅವಳು—'ಸ್ವಾಮಿ ನೂತದ್ದು ನಿಜ, ನೇತದ್ದು ನಿಜ, ವಸ್ತ್ರವೇ ಸಿದ್ಧವಾಗಲಿಲ್ಲ. ಎಂದಂತಾಯಿತಲ್ಲ ನಮ್ಮ ಬಾಳು. ಬಹಳ ದಿನಗಳಾದ ಮೇಲೆ ದಯಮಾಡಿ ಕೇಳುತ್ತಿರುವೆ. ಒಳ್ಳೆಯವನಾದ ಒಬ್ಬ ಮಗನನ್ನು ಕರುಣಿಸಬಾರದೇ?' ಎಂದು ಬೇಡಿದಳು. ಸ್ವಾಮಿ ನುಡಿದನು. 'ಶಿವಲಿಂಗವ್ವ, ಮಕ್ಕಳಾದಲ್ಲಿ ಸುಖವುಂಟೆಂದು ತಿಳಿದಿರುವೆಯ'

'ಸಂಸಾರದಲ್ಲಿ ಕಷ್ಟವಿಲ್ಲದ ಸುಖ ಯಾವುದಿದೆ? ಗುರುವೇ ಮಕ್ಕಳಾದರೆ ಒಂದು ರೀತಿ ಕಷ್ಟವೂ ಉಂಟು, ಸುಖವೂ ಉಂಟು, ಎಂಬುದನ್ನು ಬಲ್ಲೆ ಆದರೂ ಒಂದು ಮಗು ಬೇಕೆಂದು ನನ್ನ ಹೆಣ್ಣು ಜೀವದ ಅಪೇಕ್ಷೆ.'

'ಕೇಳಿದೆಯ? ಶಿವಬಸವ. ನಿನ್ನ ಹೆಂಡತಿಯ ಅಪೇಕ್ಷೆ ನೀನು ಹೇಳುವೆ ನನ್ನನ್ನು ಸಂಸಾರದಿಂದ ಬಿಡುಗಡೆ ಮಾಡು ಎಂದು ನಿನ್ನ ಹೆಂಡತಿ ಅನ್ನುವಳು ಸಂಸಾರವನ್ನು ಬೆಳೆಸೆಂದು ನಾನು ಯಾರ ಮಾತು ಕೇಳಲಿ?'

'ಗುರುಸ್ವಾಮಿಯೇ ದೇವಾಧಿದೇವತೆಗಳೇ ಎಷ್ಟೋ ಪ್ರಸಂಗಗಳಲ್ಲಿ ಶಕ್ತಿಗಾಧೀನರಾಗಿ ನಡೆದುಕೊಂಡಿದ್ದಾರೆ. ಅಲ್ಪನಾದ ನಾನು ವಿರುದ್ಧವಾಗ ಬಲ್ಲೆನೇ? ಅವಳ ಮಾತಿಗೆ ನಾನು ಸೋಲುವುದೇ ಸರಿ.'

ಹೀಗೆ ನುಡಿದ ಆ ದಂಪತಿಗಳ ಮಾತುಗಳನ್ನು ಕೇಳಿ ಸ್ವಾಮಿ ನಗುತ್ತ- 'ಒಳ್ಳೇದು ಜ್ಞಾನಿಯಾದ ಮಗನು ನಿಮಗೆ ಹುಟ್ಟುವನು' ಎಂದು ಆಶೀರ್ವದಿಸಿ ಕಳಿಸಿದನು. ಕೆಲವು ದಿನಗಳ ನಂತರ ಶಿವಲಿಂಗವ್ವ ಗರ್ಭವತಿಯಾಗಿ ನವ ಮಾಸ ತುಂಬಲು ಒಂದು ಗಂಡು ಕೂಸು ಹೆತ್ತಳು. ಮಲ್ಲಿಗೆ ಮೊಗ್ಗೆಯಂತೆ ಕೂಸು ಅರಳತೊಡಗಿತು. ಒಂದು ದಿನ ಅಕಸ್ಮಾತ್ತಾಗಿ ಮನೆಗೆ ಬಂದ ಜೊಯಿಸರು ಶುಭಲಕ್ಷಣದಿಂದ ಕೂಡಿದ ಆ ಕೂಸನ್ನು ಕಂಡು ಹರ್ಷದಿಂದ

ಹೇಳಿದರು. 'ಅಹಾ. ನೀವು ಪುಣ್ಯವಂತರು. ನಿಮ್ಮ ಹೊಟ್ಟೆಯಿಂದ ಹುಟ್ಟಿದ ಕೂಸು ಮಾನ್ಯವಲ್ಲ. ಇದಕ್ಕೆ ಶಿವಪುತ್ರನೆಂದು ಹೆಸರಿಟ್ಟು ಕರೆಯಿರಿ. ಇವನು ಯಾರೋ ಯೋಗಭ್ರಷ್ಟ ಹುಟ್ಟಿಬಂದಿದ್ದಾನೆ. ಮುಂದೆ ಇವನು ಮಹಾ ಜ್ಞಾನಿಯಾಗುವ ಲಕ್ಷಣಗಳಿವೆ. ಇಂದಿನಿಂದ ನಿಮ್ಮ ವಂಶವೇ ಉದ್ಧಾರವಾಗುವುದು' ಎಂದು ಹೇಳಿ ಹೊರಟುಹೋದರು.

ದಿನದಿನಕ್ಕೆ ಹುಡುಗ ಬೆಳೆದು ಹನ್ನೆರಡು ವರ್ಷದವನಾದನು. ರೂಢಿಯಂತೆ ತಾಯ್ತಂದೆಗಳು ಆಗ ಲಗ್ನ ಮಾಡಿದರು. ಆದರೆ ಶಿವಪುತ್ರನಲ್ಲಿರುವ ತೇಜವೇ ಬೇರೆ. ಅವನನ್ನು ಸಂಸಾರವು ಆಕರ್ಷಿಸಲಿಲ್ಲ. ಅದೇ ತಾನೇ ಹದಿನೈದು ವರ್ಷ ತುಂಬಿದ್ದವು. ಹೆಂಡತಿ ಇನ್ನೂ ಮನೆಗೆ ಬಂದಿರಲಿಲ್ಲ. ಉತ್ಕಟವಾದ ವೈರಾಗ್ಯದಿಂದ ಶಿವಪುತ್ರ ಗುರುವಿನೆಡೆಗೆ ಸಾಗಬೇಕೆಂದು ತವಕಿಸುತ್ತಿದ್ದನು. ಒಂದು ರಾತ್ರಿ ಮನೆಯಲ್ಲಿ ನಿಲ್ಲುವುದೂ ಅಸಹ್ಯವಾಯಿತು. ತಾಯ್ತಂದೆಗಳಿಗೆ ಕೂಡ ಹೇಳದೆ ಹೊರಟು ಹುಬ್ಬಳ್ಳಿಗೆ ಬಂದು ಸಿದ್ಧ ಸದ್ಗುರುವಿನ ಪಾದಗಳಲ್ಲುರುಳಿದನು. ಕರುಣಾಘನನಾದ ಗುರುವು ಮೇಲೆಬ್ಬಿಸಿ– 'ಏನೆಂದು' ವಿಚಾರಿಸಲು— 'ಗುರುನಾಥನೇ ಸಂಸಾರದಲ್ಲಿರುವುದು ನನಗೆ ಅಸಹ್ಯವೆನಿಸಿ ಉದ್ಧಾರ ಹೊಂದಲೆಂದು ಸನ್ನಿಧಿಗೆ ಬಂದೆನು. ನಿನಗೆ ತಿಳಿದಂತೆ ಮಾಡು.' ಒಂದು ಕೈಮುಗಿದನು. ಸಿದ್ಧನಿಗೆ ಅವನ ಗುರುತು ತಿಳಿಯಿತು. ಹಿಂದಿನ ಸುಬ್ಬಯ್ಯ ಶಾಸ್ತ್ರಿಯೇ ಅವನಾಗಿದ್ದನು. ಆ ಶಾಸ್ತ್ರಿ ಮಹಾಪಂಡಿತ. ಈಗ ಯತ್ನಿಸಿದರೆ ಪೂರ್ವಸಂಸ್ಕಾರ ಬಲದಿಂದ ಇವನಾದರೂ ಪಂಡಿತನಾಗುವಲ್ಲಿ ಸಂಶಯವಿಲ್ಲ. ಎಂದು ವಿಚಾರಿಸಿ ಗುರುದೇವನು ಅವನನ್ನು ಸಂಸ್ಕೃತ ಪಾಠಶಾಲೆಗೆ ಕಳಿಸಿದನು. ಕೆಲದಿನಗಳಲ್ಲಿ ಕುಶಾಗ್ರಮತಿಯಾದ ಶಿವಪುತ್ರನು ಉತ್ತಮ ಪಂಡಿತನೆನಿಸಿದನು. ಶಾಸ್ತ್ರಾಭ್ಯಾಸವೂ ಆಯಿತು, ವೇದಾಂತ ಗ್ರಂಥಗಳನ್ನೂ ಪರಿಶೀಲಿಸಿದನು. ಇಷ್ಟಾದ ಮೇಲೆ ಸನ್ಯಾಸ ದೀಕ್ಷೆ ನಡೆಯಿತು.

ಒಂದು ದಿನ ಗುರುವು ಶಿವಪುತ್ರಸ್ವಾಮಿಗೆ ಭಾರವಾದುದೊಂದು ಕಲ್ಲು ತೋರಿಸಿ 'ಇದನ್ನು ಎತ್ತಿಕೊಂಡು ಓಡು ನೋಡೋಣ' ಎಂದು ಹೇಳಲು ಅದರಂತೆ ಅವನು ಓಡಲಾರಂಭಿಸಿದನು. ಆದರೆ ಆ ಕಲ್ಲು ಬಹಳ ಭಾರವಾಗಿದ್ದಿತು. ಓಡುವುದಾಗದೇ ಬಳಲಿ ಬಿದ್ದು ಬಿಟ್ಟನು. ಮೈ-ಕೈಗೆ ಪೆಟ್ಟಾಗಿ

ಘಾಯಗಳು ಆದವು. ಶಿವಪುತ್ರಸ್ವಾಮಿ ಅದರಿಂದ ದುಃಖಿತನಾಗಿ ಸಣ್ಣ ಮೋರೆ ಮಾಡಿದನು.

ಅದನ್ನು ಕಂಡು ಸದ್ಗುರು ಕೇಳಿದನು 'ನಿನ್ನ ಮುಖವೇಕೆ ಬಾಡಿತು?,

'ಪೆಟ್ಟು ತಾಕಿ ಮೈ-ಕೈ ನೋವಾಗಿದೆ.'

'ಅವುಗಳ ಸಂಬಂಧ ನಿನಗೇನು? ನನ್ನ-ದೇಹ ನನ್ನ-ಮೈ ನನ್ನ-ಕೈ ಎಂದು ನೀನು ತಿಳಿಯುವುದಿಲ್ಲವೇ?'

'ನಿಜ.'

'ಎಂದಮೇಲೆ ನೀನು ಬೇರೆ ಇರುವೆ. ನಿನ್ನ ದೇಹ ದೇರೆ ಇರುವುದು ಎಂದಂತಾಯಿತು. ನಿನ್ನಿಂದ ಬೇರೆ ಎನಿಸಿದ ದೇಹದ ಧರ್ಮಗಳನ್ನು ನಿನ್ನ ಮೇಲೆ ಹಾಕಿಕೊಂಡು ದುಃಖಪಡುವುದೇಕೆ? ಹೇಳು ವಿಚಾರಿಸಿ ನೋಡು ದೇಹವು ಅಶುಚಿ-ದುಃಖಕ್ಕೆ ಮೂಲ ಮನೆ. ಏನು ಪ್ರಯತ್ನ ಮಾಡಿದರೂ ದೇಹದ ಧರ್ಮಗಳನ್ನು ನಾಶ ಪಡಿಸುವುದು ಶಕ್ಯವಿಲ್ಲ. ಇಂಥ ದೇಹವೇ ನಾನೆಂದು ವಿವೇಕರಹಿತನಾಗಿ ನೀನು ತಿಳಿದರೆ ಅದರ ಧರ್ಮಗಳೆಲ್ಲ ನಿನಗೂ ಅಂಟುವವು. ವಸ್ತುತಃ ದೇಹವು ನೀನಲ್ಲ. ಮರಣವೊದಗಲು ನಾನು-ನಾನು ಎಂದು ತಿಳಿದ ದೇಹವು ಇಲ್ಲಿಯೇ ಬಿದ್ದುಕೊಳ್ಳುವುದು. ಯಾರೋ ಇದನ್ನೆತ್ತಿ ಗತಿಗಾಣಿಸುವರು. ಜೀವನು ತನ್ನ ಪುಣ್ಯ-ಪಾಪ ಕರ್ಮಗಳಿಗನುಸಾರವಾಗಿ ಬೇರೆ ಬೇರೆ ಲೋಕಗಳಿಗೆ ಹೊರಟುಹೋಗುವನು. ಇದು ನೋಡು. ಇಲ್ಲಿ ಬಿದ್ದ ಕಲ್ಲು ನಿನಗೆ ಕಾಣುವುದಷ್ಟೇ? ಆ ಕಲ್ಲಿಗೆ 'ನಾನು' ಎಂದು ಎಂದಾದರೂ ಅನ್ನುವುದು ಶಕ್ಯವಿದೆಯೇ? ಅರ್ಥಾತ್ ಇಲ್ಲ. ಯಾಕಂದರೆ ಅದು ಜಡ. ಮತ್ತು ನಿನ್ನಿಂದ ಬೇರೆಯಾದುದು. ಈ ದೇಹವಾದರೂ ಅಷ್ಟೇ. ಅದು ಬೇರೆ ನಾನು ನಾನು ಎಂದು 'ಅಹಂ ಸ್ಫೂರ್ತಿ ಕೊಡುವ ಚೈತನ್ಯವು ಬೇರೆ'

ಎಂದು ಗುರು ನುಡಿಯಲು ಶಿವಪುತ್ರಸ್ವಾಮಿ ವಿಚಾರ ಮಗ್ನನಾದನು. ಎಷ್ಟೋ ದಿನಗಳ ವರೆಗೆ ಗುರುವಿನ ಆ ಮಾತನ್ನೇ ವಿಚಾರಿಸಿ ನೋಡಿದನು. 'ನಾಹಂ ದೇಹೋನೇಂದ್ರಿಯಾಣ್ಯಂತರಂಗಮ್' ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ. ಹಾಗಾದರೆ ನಾನು ಯಾರು! ಸದ್ಗುರುವನ್ನು ವಿಚಾರಿಸಿದನು. ಅವನು ಅವಸ್ಥಾತ್ರಯವಿವೇಕವನ್ನು ತಿಳಿಸಿ— 'ಎಚ್ಚರದಲ್ಲಿ, ಕನಸಿನಲ್ಲಿ, ಗಾಢ ನಿದ್ರೆಯಲ್ಲಿ ಯಾವ ಜ್ಞಾನವು ತಾನು ವಿಕಾರಹೊಂದದೇ

ಇದ್ದು ಎಚ್ಚರ ಮೊದಲಾದ ಅವಸ್ಥೆಗಳನ್ನು ಬೆಳಗುವದೋ ಆ ಸಚ್ಚಿದಾಂದ ಪದಾರ್ಥವೇ ನೀನು. ಈ ಪದುರ್ಥವು ನಿತ್ಯ-ನಿರ್ಮಲ-ನಿರ್ವಿಕಾರ-ಆನಂದ ಪರಿಪೂರ್ಣ,ಇದು ನಿತ್ಯಸ್ವರೂಪ. ಈ ಸಾಕ್ಷಿಯ ಅಭ್ಯಾಸವನ್ನು ನೀನುಮಾಡು.

ತಚ್ಚಿಂತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್ ।
ಏತದೇಕಪರತ್ವಂ ಚ ಬ್ರಹ್ಮಾಭ್ಯಾಸಂ ವಿದುರ್ಬುದಾಃ ॥

ಅದನ್ನೇ ಧ್ಯಾನಿಸಬೇಕು. ಅದನ್ನೇ ಹೇಳಬೇಕು. ಸಮಾನಧರ್ಮಿಗಳು. ಕೂಡಿದಾಗ ಅದನ್ನೇ ಪರಸ್ಪರವಾಗಿ ಉಪಯೋಗಿಸಬೇಕು. ಹೀಗೆ ಅದೊಂದೇ (ಬ್ರಹ್ಮವೊಂದನ್ನೇ) ಅವಲಂಬಿಸಿಕೊಂಡಿರುವುದಕ್ಕೆ 'ಬ್ರಹ್ಮಾಭ್ಯಾಸ'ವೆಂದು ಪಂಡಿತರು ತಿಳಿಯುವರು. ಎಂದು ಗುರುವು ಹೇಳಲು ಶಿವಪುತ್ರ ಸ್ವಾಮಿ ಅನಂದಮಗ್ನನಾಗಿ ಕೆಲವೇಳೆ ಕುಳಿತನು. ನಂತರ ಜಾಗ್ರತನಾಗಿ ಗುರುವಿನ ಬಳಿಗೆ ಬಂದು 'ನಿನ್ನ ಅನುಗ್ರಹದಿಂದ ಧನ್ಯನಾದೆ' ಎಂದು ವಂದಿಸಲು ಗುರುವು ಅಂತರಂಗದಲ್ಲಿ ಬ್ರಹ್ಮದರ್ಶನ ಪಡೆದಂತೆ ಬಹಿರಂಗದಲ್ಲಿಯೂ ಪಡೆಯುವ ಯತ್ನ ಮಾಡು. ಎಲ್ಲ ಕಡೆಗೆ ಬ್ರಹ್ಮನನ್ನು ಕಂಡವನು ಕೃತಾರ್ಥನಾದನು. ಅವನಿಗೇನೂ ಕರ್ತವ್ಯವುಳಿಯುವುದಿಲ್ಲ.' ಎಂದು ಬೋಧಿಸಲು ಶಿವಪುತ್ರಸ್ವಾಮಿ ತೀವ್ರ ಸಾಧನೆ ಮಾಡಿ ಬ್ರಹ್ಮಸಿದ್ಧಿಯನ್ನು ಪಡೆದು ಕೃತಾರ್ಥನಾದನು.

ಇವನು ಪಂಡಿತೋತ್ತಮನಾದ ಮೂಲಕ ಸದ್ಗುರುನಾಥ ಮಠದಲ್ಲಿ ವೇದಾಂತ ನಿರೂಪಣೆ ಮಾಡುವಂತೆ ಹೇಳಲು ಅದೇ ಕಾರ್ಯವನ್ನು ಮಾಡುತ್ತ ಧನ್ಯವೆನಿಸಿದನು.

————

೪೯

ದುರ್ಗಿ ಮಾರಿಯು ಚಂಡಿ । ಯುಗ್ಗದಾಶಕ್ತಿಗಳು ।
ಸದ್ಗುಣ ಸತ್ಯಮುಸುಕಿಹರ ಮುಟ್ಟೆಪಿದು ।
ಸದ್ಗುರುವಿನಾಜ್ಞೆ ಸರ್ವಜ್ಞ ॥ —ಸರ್ವಜ್ಞ

ವಿಜಾಪುರ ಜಿಲ್ಹೆಯ ಬಾಗಿಲಕೋಟೆಯಲ್ಲಿ ಪಾಟೀಲರೆಂಬ ಅಡ್ಡ ಹೆಸರಿನ ಒಬ್ಬ ಶ್ರೀಮಂತರು. ಮನೆ-ಮಾರು-ಮಕ್ಕಳು-ಧನ-ಕನಕ ಯಾವುದಕ್ಕೂ

ಕೊರತೆ ಇಲ್ಲ. ಯಾವುದೋ ಪ್ರಾಚೀನ ಪುಣ್ಯದಿಂದ ಇದೆಲ್ಲ ಅವರಿಗೆ ಲಭಿಸಿತ್ತು. ಎಂದು ಜನರನ್ನುವರು. ಯಾಕಂದರೆ ಈ ಜನ್ಮದಲ್ಲಿ ಪಾಟೀಲರು ಪುಣ್ಯ ಕಾರ್ಯ ಮಾಡಿದುದನ್ನು ಬಹುಶಃ ಯಾರೂ ಕಂಡಿರಲಿಲ್ಲ. ಅವರ ವ್ಯವಸಾಯ ದೊಡ್ಡದು. ಸಾಲ ಕೊಡುವುದು ವಸೂಲು ಮಾಡುವುದು. ಕನಿಕರವಿಲ್ಲದೆ ಕಾಸಿರಬಡ್ಡಿಯನ್ನೂ ಪಡೆದುಕೊಳ್ಳುವುದು. ಇವೆಲ್ಲ ಅವರಿಗೆ ಸಹಜ. ಯಾವಾಗಲೂ ಹಣದ ಮಾತೇ ಮಾತು. ಮತ್ತೊಂದು ಅವರು ಅರಿಯರು. ಅವರ ಒಬ್ಬ ಮಗಳ ಹೆಸರು ರುಕ್ಮಿಣಿ. ಇವಳು ಗುಣವತಿಯೂ ಹೌದು. ರೂಪವತಿಯೂ ಹೌದು. ಆದುದರಿಂದ ಎಲ್ಲರ ಅಚ್ಚುಮೆಚ್ಚಿನವಳೆನಿಸಿದ್ದಳು. ಹೀಗಿರಲು ಅದೇನು ಕಾರ್ಯವೋ ಅವಳಿಗೆ ಭೂತಬಾಧೆಯಾಗಿ ಬಹಳ ತ್ರಾಸವಾಗಲಾರಂಭಿಸಿತು.

ಒಂದು ಸಾರೆ ಭೂತಾವೇಶವಾದ ಪ್ರಸಂಗದಲ್ಲಿ ಅವಳು ತಾಯ್ತಂದೆಗಳೇ ಮೊದಲಾಗಿ ಎಲ್ಲರನ್ನೂ ಬೈಯ್ಯುತ್ತ ನಾನು ಲಗ್ನ ಮಾಡಿಕೊಳ್ಳುವುದಿಲ್ಲ. ಹಾಗೇ ಇರುತ್ತೇನೆ. ಯಾರು ನನ್ನ ಕೈ ಹಿಡಿಯುವವರು? ಎಂದು ಸಿಕ್ಕಂತೆ ಬಡಬಡಿಸಹತ್ತಿದಳು. ಇದೇ ರೀತಿ ದಿನ ಒಂದಕ್ಕೊ ಆಗತೊಡಗಲು ರುಕ್ಮಿಣಿ ಸೊರಗಿ ಕಡ್ಡಿಯಾದಳು. ಭೂತಾವೇಶವಿರುವವರೆಗೆ ಅವಳು ಊಟವಿಲ್ಲದೇ ನಿದ್ರೆ ಇಲ್ಲದೆ ಹಾಗೇ ಬಳಲುವಳು. ಇದರ ಪರಿಣಾಮವು ಅವಳ ದೇಹ–ಮನಸ್ಸುಗಳ ಮೇಲಾಗಿತ್ತು. ಮಗಳ ಸ್ಥಿತಿ ಕಂಡು ಪಾಟೀಲರು ಕಳವಳಿಸಿದರು. ಹಣ ವೆಚ್ಚ ಮಾಡಬೇಕಾದರೆ ಮನವೇನೋ ಮರಗುವದು. ಜನನಿಂದೆ ತಡೆಯಲಾರದೇ ಯಂತ್ರ-ಮಂತ್ರ-ಹರಿಕೆ ಮುಂತಾದ ಉಪಾಯಗಳನ್ನು ಮಾಡಿ ನೋಡಿದರು. ಆದರೆ ಯಾರಿಂದಲೂ ಗುಣ ಕಂಡು ಬರಲಿಲ್ಲ. ಅಷ್ಟರಲ್ಲಿ ಲೋಕ ಸಂಚಾರಿಯಾದ ಸದ್ಗುರು ಭಕ್ತ ಶರಣಪ್ಪನು ಆ ಊರಿಗೆ ಬಂದಿರಲು ತನ್ನ ಕಾಯಕದಂತೆ ಇವರ ಮನೆಗೆ ಭಿಕ್ಷೆಗೆ ಬಂದನು. ಅದೇ ವೇಳೆಯಲ್ಲಿ ರುಕ್ಮಿಣಿಗೆ ಭೂತಾವೇಶವಾಗಿತ್ತು. ಅದನ್ನು ಕಂಡು ಶರಣಪ್ಪ ಮರಮರನೆ ಮರುಗಿದನು. ಆಗ ಯಾರೋ ಒಬ್ಬರು 'ಏನಯ್ಯ ನೀನು ಲೋಕ ಸಂಚಾರಿ. ಅನೇಕ ಕಡೆಗೆ ತಿರುಗಿದವ. ಇವಳ ಭೂತ ಬಾಧೆ ಹೋಗುವಂತೆ ಉಪಾಯ ಗೊತ್ತಿದ್ದರೆ ಹೇಳಬಾರದೇ ?' ಎಂದರು.

ಶರಣಪ್ಪ ಏನು ಹೇಳಬೇಕು ? ಸಕಲಾರ್ಥಗಳಿಗೂ ಸದ್ಗುರುವೆಂಬ ಒಂದೇ ಒಂದು ಚಿಂತಾಮಣಿಯನ್ನು ಬಳಸಿಕೊಂಡವನವನು. ಅವನ ಕೃಪೆ ಯಿಂದ ಎಲ್ಲವೂ ಕ್ಷೇಮವಾಗುತ್ತದೆಂದು ಅವನ ನಂಬಿಗೆ. ಮದುವೆಯಾಗಬೇಕಾದರೆ. ಮಕ್ಕಳಾಗಬೇಕಾದರೆ, ಗಂಡ-ಹೆಂಡತಿ ಅನುರಾಗವುಳ್ಳವರಾಗಬೇಕಾದರೆ, ಹಣ-ಹೊನ್ನು-ಮಾನ-ಸನ್ಮಾನ ದೊರೆಯಬೇಕಾದರೆ, ರೋಗ ಮುಕ್ತಿಯಾಗಬೇಕಾದರೆ ಭೂತಬಾಧೆ ನೀಗಬೇಕಾದರೆ ಸದ್ಗುರು ಸೇವೆ ರಾಮಬಾಣ ಉಪಾಯ. ಸರಿ ಅದನ್ನೇ ಹೇಳಿಬಿಟ್ಟನು.

'ಯಾವ ಯೋಚನೆಯನ್ನೂ ಮಾಡಬೇಡರಿ. ಒಂದು ಸಪ್ತಾಹದ ವರೆಗೆ ಇವಳು ಸಿದ್ಧಾರೂಢ ಸ್ವಾಮಿಗಳ ಚರಿತ್ರವನ್ನು ಓದಲಿ. ಮತ್ತು ನಿತ್ಯ ಅವರ ಸ್ಮರಣ ಮಾಡುತ್ತ ಅವರ ಚರಣ ತೀರ್ಥ ತೆಗೆದುಕೊಳ್ಳಲಿ. ಅದರಿಂದ ಎಲ್ಲವೂ ಗುಣಮುಖವಾಗುವುದು.'

ಆ ಮಾತು ಕೇಳಿ ಶ್ರೀಮಂತರು 'ಏನುಂಟೋ ತಿಳಿಯದು. ಈಗಾಗಲೇ ಎಷ್ಟೋ ದುಡ್ಡು ಖರ್ಚಾಗಿದೆ. ಯಾವ ಮಂತ್ರ-ತಂತ್ರದಿಂದಲೂ ಗುಣವಾಗ ಲಿಲ್ಲ. ಎಷ್ಟೋ ದೇವರಿಗೆ ಹರಿಕೆ ಹೊತ್ತರೂ ಬಾಧೆ ಹೋಗಿಲ್ಲ. ಈಗ ನೀನು ಹೊಸದೊಂದು ಉಪಾಯ ಹೇಳುತ್ತಿರುವೆ. ಇದನ್ನೂ ಮಾಡಿ ನೋಡೋಣ' ಎಂದರು. ಅವರ ಔದಾಸೀನ್ಯ ಕಂಡು ಶರಣಪ್ಪ ಪುನಃ ಹೇಳಿದನು. 'ಸಾವುಕಾರರೇ ತಡಮಾಡದೇ ನಾನು ಹೇಳಿದ ಉಪಾಯ ಮಾಡಿರಿ. ನಿಶ್ಚಯವಾಗಿ ಗುಣವಾಗುತ್ತದೆ. ಬಹಳವೇನು ? ಕೇವಲ ಸಿದ್ಧಾರೂಢ ಸ್ವಾಮಿಗಳ ನಾಮೋಚ್ಚಾರ ಕೇಳಿ ಎಷ್ಟೋ ಕಡೆಗೆ ಭೂತಬಾಧೆ ನಿವಾರಣೆಯಾದ ಉದಾಹರಣೆಗಳಿವೆ. ಪಾಪ ಎಳೆ ಹೆಣ್ಣುಮಗಳು ಕಂದಿಹೋಗಿದ್ದಾಳೆ.'

ಶ್ರೀಮಂತರೆಂದರು 'ಚರಿತ್ರ ಪಠಣವೆಂದರೆ ಎಲ್ಲಿಯಾದರೂ ಹುಡುಕಿ ಪುಸ್ತಕ ತಂದು ಪಠಣ ಮಾಡಿಸಬಹುದು. ಚರಣತೀರ್ಥಕ್ಕೇನು ಮಾಡಬೇಕು? ಹೋಗಿ ತರಬೇಕೆಂದರೆ ನನಗೆ ಕ್ಷಣಕೂಡ ಪುರಸೊತ್ತು ಸಿಗುವುದಿಲ್ಲ. ಆಗಲಿ, ಯಾರನ್ನಾದರೂ ಕಳಿಸಿ ತೀರ್ಥತರಿಸುತ್ತೇನೆ. ಯಾತರಿಂದಲೇ ಆಗಲಿ ಇವಳಿಗೆ ಗುಣವಾದರಾಯಿತು. ನಿತ್ಯ ಇವಳ ಕಷ್ಟ ನೋಡದಂತಾಗಿದೆ.'

ಶರಣಪ್ಪ ವಿನಯದಿಂದ- 'ಇದು ತೆಗೆದುಕೊಳ್ಳಿರಿ. ಸಿದ್ಧಾರೂಢರ ಚರಿತ್ರ. ನಾನು ಅವರ ಭಕ್ತ. ಊರೂರು ತಿರುಗಿ ಅವರ ಚರಿತ್ರವನ್ನು

ಕೀರ್ತನ ಮಾಡುತ್ತೇನೆ. ನಿಮ್ಮ ಮಗಳು ಇದನ್ನೋದಿ ಗುಣಹೊಂದಲಿ. ಚರಣತೀರ್ಥವನ್ನು ತರಿಸಿಕೊಳ್ಳಿರಿ.' ಎಂದು ಹೇಳುತ್ತ ಪುಸ್ತಕಕೊಟ್ಟು 'ಜಯ ಸಿದ್ಧಾರೂಢ ಗುರುವೇ' ಎಂದು ನಾಮಘೋಷವನ್ನು ಮಾಡಿದನು. ಅದರಂತೆ ರುಕ್ಮಿಣಿಯೂ ನಾಮಘೋಷ ಮಾಡಲು ಎಲ್ಲರೂ ಅವಳ ಕಡೆಗೆ ತಿರುಗಿ ನೋಡತೊಡಗಿದರು. ಆಗ ರುಕ್ಮಿಣಿ 'ನನಗೆ ಈ ನಾಮದಲ್ಲಿ ಬಹಳ ಪ್ರೀತಿ ಎನಿಸುತ್ತದೆ. ಇದನ್ನು ನಾನು ಯಾವಾಗಲೂ ಜಪ ಮಾಡುತ್ತೇನೆ.' ಎನ್ನಲು ಶರಣಪ್ಪನು 'ಹಾಗೆಮಾಡು ತಾಯಿ. ಇದರಿಂದ ನಿನ್ನ ಬಾಧೆಹೋಗಿ ಕಲ್ಯಾಣವಾಗುವುದು.' ಎಂದು ಹೇಳಿ ಹೋಗಿಬಿಟ್ಟನು.

ಪಾಟೀಲರು ಹುಬ್ಬಳ್ಳಿಯಿಂದ ಸಿದ್ಧದ ಚರಣತೀರ್ಥವನ್ನು ತರಿಸಿದರು. ಅದನ್ನು ತೆಗೆದುಕೊಂಡ ಕೂಡಲೇ ರುಕ್ಮಿಣಿ ಸ್ವಸ್ಥಳಾಗಿ ಒಂದು ಸಪ್ತಾಹದ ವರೆಗೆ ಸದ್ಗುರುನಾಥನ ಚರಿತ್ರವನ್ನು ಪಠಿಸಿದಳು. ಆ ಏಳು ದಿನಗಳಲ್ಲಿ ಒಂದು ದಿನ ಕೂಡ ಭೂತಾವೇಶ ಉಂಟಾಗಲಿಲ್ಲ. ಅದಕ್ಕಿಂತ ಮೊದಲು ತಪ್ಪದೇ ದಿನಕ್ಕೊಮ್ಮೆ ಬಾಧೆಯುಂಟಾಗುತ್ತಿತ್ತು. ಹೀಗೆ ರುಕ್ಮಿಣಿಗೆ ಆರಾಮ ವಾಗಲು ಎಲ್ಲರಿಗೂ ಸಂತೋಷವಾಗಿ ಸಿದ್ಧನಲ್ಲಿ ವಿಶೇಷ ಭಕ್ತಿಯು ಹುಟ್ಟಿ ಒಮ್ಮೆ ದರ್ಶನ ಪಡೆಯಬೇಕೆಂದು ಯೋಚಿಸತೊಡಗಿದರು. ಅಷ್ಟರಲ್ಲಿ ಒಂದು ಘಟನೆಯಾಯಿತು. ಅವರ ಮನೆ ಮುಂದೆ ದೊಡ್ಡ ಅರಳಿಯ ಮರವಿತ್ತು. ಅದಕ್ಕೊಂದು ಕಟ್ಟೆಯನ್ನು ಯಾರೋ ಕಟ್ಟಿಸಿದ್ದರು. ಆದಿನ ಮಧ್ಯಾಹ್ನವೇಳೆ ರುಕ್ಮಿಣಿ ಆ ಕಟ್ಟೆಯ ಮೇಲೆ ಕುಳಿತಿದ್ದಳು. ಕೆಲವೇಳೆಯ ನಂತರ ಕೆಳಗಿಳಿ ಯಬೇಕೆಂದಳು. ಒಮ್ಮೆಲೇ ತಲೆತಿರುಗಿದಂತಾಗಿ ಧೊಪ್ಪನೆ ಉರುಳಿದಳು. ಕಲ್ಲುತಾಕಿ ತಲೆಯೊಡೆದು ರಕ್ತಹರಿಯಲಾರಂಭಿಸಿತು. ಆಕಸ್ಮಾತ್ ಹೊರಗೆ ಬಂದ ತಂದೆ ಮಗಳ ಸ್ಥಿತಿ ನೋಡಿದರು. ರಕ್ತದ ಮಡುವಿನಲ್ಲಿ ಮಗಳು ಮಲಗಿದ್ದಾಳೆ. ಘಾಬರಿಗೊಂಡು ಬಳಿಗೆ ಬಂದು ನೋಡುತಿರಲು ರುಕ್ಮಿಣಿಯ ಪ್ರಾಣಪಕ್ಷಿ ಹಾರಿಹೋಗಿತ್ತು. ಶ್ರೀಮಂತರಿಗೆ ಅದರಿಂದ ಬಹಳ ದುಃಖವಾಗಿ ಸಿದ್ಧಾರೂಢನಿಗೆ ಅನೇಕ ಬಗೆಯಿಂದ ಮೊರೆಯಿಟ್ಟರು.

'ಸದ್ಗುರುನಾಥನೇ, ಇದನ್ನೇನು ಮಾಡಿದೆ ಸ್ವಾಮಿ? ಭೂತ ಬಾಧೆ ಕಳೆದು ನೆಟ್ಟಗಾದಳೆನ್ನುವಷ್ಟರಲ್ಲಿ ಮರಣ ತಂದು ಬಿಟ್ಟೆಯಲ್ಲ, ಇವಳನ್ನು ಕರೆದುಕೊಂಡು ನಿನ್ನ ದರ್ಶನಕ್ಕೆ ಬರಬೇಕೆಂದು ಹಾರೈಸಿದ್ದೆನಲ್ಲ, ನನ್ನ

ಮಗಳು ಬಹಳ ಗುಣವಂತಿ. ಎಷ್ಟು ಪ್ರೇಮದಿಂದ ನಿನ್ನ ಚರಿತ್ರ ಓದಿದಳು, ನಿನ್ನ ನಾಮವನ್ನು ಹೇಗೆ ಸ್ಮರಿಸುತ್ತಿದ್ದಳು. ಅದೆಲ್ಲ ನಿನಗೆ ಅರಿಕೆಯಾಗಲಿಲ್ಲವೇ? ಈಗ ನೋಡು ನಿನ್ನ ಸೇವೆ ಮಾಡಿ ಮುಗಿಸಿ ನನ್ನ ಮಗಳು ಈಗ ವಿಶ್ರಾಂತಿ ಪಡೆಯಲು ಇಲ್ಲಿ ಕುಳಿತಿದ್ದಳು. ಇಂಥ ಹೊತ್ತಿನಲ್ಲಿ ಮರಣ ತಂದರೆ ಆ ಅಪಕೀರ್ತಿ ನಿನಗೆ. ಈ ಸಂಗತಿ ತಿಳಿದ ನಿನ್ನ ಭಕ್ತರು ನಿನ್ನ ಕೃತಿಯನ್ನು ಒಪ್ಪುವರೇ? ಶರಣಾಗತ ರಕ್ಷಕನೆಂಬ ನಿನ್ನ ಬಿರುದನ್ನು ಉಳಿಸಿಕೋ? ನನ್ನ ಮಗಳನ್ನು ಬದುಕಿಸು, ಆಮರಣ ಪರಿಯಂತರವಾಗಿ ನಿನ್ನ ಸೇವೆಮಾಡುವೆ'

ಎಂದು ಮೊದಲಾಗಿ ಶ್ರೀಮಂತರು ಶೋಕಿಸುತ್ತಿರಲು ಶಾಂತಿಯೇ ಮೂರ್ತಿಗೊಂಡಂತಿರುವ ಒಬ್ಬ ಸಾಧುವು ಅಲ್ಲಿಗೆ ಬಂದನು. ಅವನ ತಲೆಗೊಂದು ಕೆಂಪು ವಸ್ತ್ರ, ಮೈಮೇಲೊಂದು ಶಾಟಿ, ಕೊರಳಲ್ಲಿ ರುದ್ರಾಕ್ಷಿಮಾಲೆ ಕೈಯಲ್ಲೊಂದು ಕಮಂಡಲು, ಅಜಾನುಬಾಹು. ಆ ಸಾಧುವನ್ನು ಕಂಡು ಪಾಟೀಲರು ಚಕಿತರಾದರು. ಆ ಸಾಧು– 'ಇವಳಿಗೇನಾಯಿತು ? ನೀನು ಯಾರೋ ಸಾಧುವಿನ ಹೆಸರಿನಿಂದ ಶೋಕ ಮಾಡುತಿರುವೆಯಲ್ಲ.' ಎಂದು ಕೇಳಲು ಶ್ರೀಮಂತರು ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಅದನ್ನು ಕೇಳಿ ಆ ಸಾಧುವು 'ಹಾ ಇದೇನು? ನಿನ್ನ ಮಾತಿನಂತೆ ಸಿದ್ಧಾರೂಢ ಸ್ವಾಮಿಗೆ ಇವಳನ್ನು ಕೊಂದ ಅಪವಾದ ಬಂದಂತಾಯಿತಲ್ಲ. ಕೇಳು ಅವರವರ ಕರ್ಮದಂತೆ ಜನನ-ಮರಣಗಳಾಗುತ್ತವೆ. ಇವಳಿಗೆ ಕಾಲ ಕರ್ಮವಶದಿಂದ ಮರಣ ಬಂದಿದೆ. ಹೀಗಿರಲು ಈ ಅಪರಾಧವನ್ನು ಮತ್ತೊಬ್ಬರ ಮೇಲೆ ಹೊರಿಸಿದರೆ ತಪ್ಪಾಗುವದು. ಆದರೆ ಸದ್ಗುರು ಬಹು ಕರುಣಾಳು, ನಿನ್ನೆ ನಾನು ಅವರನ್ನು ಕಂಡಾಗ ಹೇಳಿದರು. 'ಅಯ್ಯಾ, ನಾಳೆ ನೀನು ಬಾಗಿಲುಕೋಟೆಯಲ್ಲಿ ಒಬ್ಬ ಕನ್ಯೆ ಕೆಳಗುರುಳಿ ಬಿದ್ದ ಮರಣಹೊಂದಿರುವುದನ್ನು ಕಾಣುವೆ. ಆಗ ಅವಳ ಮುಖದಲ್ಲಿ ಈ ವಿಭೂತಿಯನ್ನು ಹಾಕಿ ಅವಳನ್ನು ಜೀವಂತಗೊಳಿಸು.' ಎಂದು ಹೇಳಿದ್ದನು. ಇಂದು ಆ ಮಾತು ನಿಜವೇ ಆಯಿತು. ಆ ಸದ್ಗುರುಮೂರ್ತಿ ಸರ್ವಜ್ಞ ಅವನಿಗೆ ಎಲ್ಲವೂ ಗೊತ್ತು. ಅವನ ಕೃಪೆಯಿಂದ ನಿನ್ನ ಮಗಳು ಬದುಕುವಳು.' ಎಂದು ಹೇಳಿ ತನ್ನ ಜೋಳಿಗೆಯಿಂದ ವಿಭೂತಿಯನ್ನು ತೆಗೆದು 'ಎಲೆ ಕನ್ನೆಯೇ, ಸಿದ್ಧಾರೂಢ ಸದ್ಗುರುವಿನ ಆಜ್ಞೆಯಂತೆ ಅವನ ಹೆಸರನ್ನುಚ್ಚರಿಸಿ ನಾನು ನಿನ್ನ ಮುಖದಲ್ಲಿ ಈ ವಿಭೂತಿಯನ್ನು ಹಾಕುವೆನು. ಬೇಗನೇ

ನೀನು ಎದ್ದು ಕೂಡಬೇಕು. ಜಯ ಸಿದ್ಧಾರೂಢ ಗುರುವೇ' ಎಂದು ನುಡಿದು ರುಕ್ಮಿಣಿಯ ಬಾಯಲ್ಲಿ ವಿಭೂತಿಹಾಕಿ ಸಿದ್ಧಾರೂಢ ನಾಮಘೋಷ ಮಾಡುತ್ತ ನಿಂತರು.ಒಂದು ಕ್ಷಣದಲ್ಲಿ ರುಕ್ಮಿಣಿ ಕಣ್ಣು ತೆರೆದಳು.ಸಾವುಕಾರರ ಆನಂದಕ್ಕೆ ಪಾರವುಳಿಯಲಿಲ್ಲ. ಮೇಲೆದ್ದು ಸ್ವಾಮಿಯ ಪಾದಧೂಳಿಯನ್ನು ಮಸ್ತಕದಲ್ಲಿ ಧರಿಸಿದರು. ತಿರುಗಿ ನೋಡುತಿರಲು ಮಗಳು ಎದ್ದು ಕುಳಿತಿದ್ದಳು. ಇದೇನು ಕನಸೋ ? ನನಸೋ ? ಒಂದೂ ತಿಳಿಯದಾಗಿ ಎಲ್ಲರೂ ಆನಂದಾಶ್ಚರ್ಯ ಭರಿತರಾದರು. ಸಿದ್ಧನು ಅದೃಶ್ಯನಾದನು. ಈ ಗಡಿಬಿಡಿಯಲ್ಲಿ ರುಕ್ಮಿಣಿಯ ತಾಯಿಯು ಮನೆಯಲ್ಲಿರಲಿಲ್ಲ. ಅವಳಿಗೆ ಇದೆಲ್ಲ ಸುದ್ದಿ ತಿಳಿಯಲು ಅವಸರ ದಿಂದ ಧಾವಿಸಿದಳು. ಮಗಳು ಕ್ಷೇಮದಿಂದಿದ್ದಳು. ಅವಳ ಬಳಿಯಲ್ಲಿ ಕುಳಿತು ಅಳುತ್ತ ನಡೆದ ಸಂಗತಿಯನ್ನು ಕೇಳಿದ್ದೇ ಕೇಳಿದ್ದು.

ತಮ್ಮ ಮನೆಯಲ್ಲಿಯೇ ನಡೆದ ಪ್ರಸಂಗನಿಂದ ಶ್ರೀಮಂತರ ಮನಸ್ಸು ತಿರುಗಿತು. ತಂತಾವೇ ಸದ್ಗುಣಗಳು ಪ್ರಕಟವಾಗಲಾರಂಭಿಸಿದವು. ಪ್ರಪಂಚ ಧನವೊಂದೇ ಇದುವರೆಗೆ ಪರಮ ಪುರುಷಾರ್ಥವೆನಿಸಿತ್ತು. ನ್ಯಾಯವಿರಲಿ, ಅನ್ಯಾಯವಿರಲಿ ಧನಬಂದರಾಯಿತು ಎಂಬುದು ಶ್ರೀಮಂತ ರೀತಿ. ಅದ ರಂತೆಯೇ ಇದುವರೆಗೆ ಅವರು ನಡೆದವರು. ಆದರಿಂದು ಅದ್ಭುತ ಬದಲಾವಣೆ ಯಾದುದು ಎಲ್ಲರ ಅನುಭವಕ್ಕೂ ಬಂದಿತು. ಮನೆಯವರನ್ನೆಲ್ಲ ಕೂಡಿ ಕೊಂಡು ಸಿದ್ಧನ ದರ್ಶನಕ್ಕೆ ಬಂದರು. ಆಗ ಸಿದ್ಧ ವಿಚಾರಿಸಿದನು. 'ರುಕ್ಮಿ ಣಿಯ ಪ್ರಕೃತಿ ಈಗ ಹೇಗಿದೆ ?'

ಗುರುವಿನ ಮಾತು ಕೇಳಿ ಶ್ರೀಮಂತರಿಗೆ ಅತೀವಾಶ್ಚರ್ಯವೆನಿಸಿ'ನಾನು ಯಾವ ಸುದ್ದಿಯನ್ನೂ ಇದುವರೆಗೆ ತಿಳಿಸಿಲ್ಲ. ಆದರೆ ರುಕ್ಮಿಣಿಯ ಸುದ್ದಿ ತಿಳಿದ ಬಗೆ ಹೇಗೆ?' ಎಂದು ಯೋಚಿಸುತ್ತ ಭಯ-ಭಕ್ತಿಯಿಂದ ವಿಪುಲ ಕಾಣಿ ಕೆಯನ್ನು ಅರ್ಪಿಸಿ ರುಕ್ಮಿಣಿಯ ಕಥೆಯನ್ನು ಹೇಳಿದರು. ರುಕ್ಮಿಣಿ ಗುರುಗ ಳನ್ನು ವಂದಿಸಿ ಆಶೀರ್ವಾದ ಪಡೆದಳು. ಕೆಲದಿನ ನಿಂತು ಊರಿಗೆ ತೆರಳುವಾಗ ಶ್ರೀಮಂತರು ಹೇಳಿದುದೇನಂದರೆ 'ಗುರುನಾಥನೇ, ನಿನ್ನಿಂದಲೇ ನಾನು ಮನುಷ್ಯನಾದೆ. ಇದುವರೆಗೆ ದೈತ್ಯನಂತೆ ವರ್ತಿಸಿದೆ. ಇನ್ನು ಮುಂದೆ ಭಕ್ತಿ ಭಾಗ್ಯವನ್ನು ಕೊಟ್ಟು ಉದ್ಧರಿಸುವ ಭಾರ ನಿನ್ನದು' ಎಂದು ತಮ್ಮೂರಿಗೆ ಬಂದರು.

———

೫೦

.... — ಸ ಈಶ್ವರಃ ಪಾತು ಭಯಾದಶೇಷಾತ್ ॥

–ಸ್ಕಾಂದ

(ಜಗತ್ತನ್ನು ಆಳುವ ಆ ಭಗವಂತ ಎಲ್ಲ ಭಯಗಳಿಂದ ರಕ್ಷಿಸಲಿ.)

ಮತ್ಸರಿಸಿದರೇನ ಮಾಡಲಾಪರು ಎನ್ನ । ಅಚ್ಯುತ ನಿನ್ನಯ ಕೃಪೆ ಇರಲು
ನಿಚ್ಚವು ನಿನ್ನಯ ನಾಮವ ಜಪಿಸಲು । ಕಿಚ್ಚಿಗೆ ಇರುವೆ ಮುತ್ತುವನೆ ? ಹೇಳೆಲೊ ರಂಗ ॥

–ಪುರಂದರದಾಸ

ಹುಬ್ಬಳ್ಳಿಯಲ್ಲಿರುವ ಗುರುಭಕ್ತರಲ್ಲಿ ಉಪ್ಪಿನ ಬಸಪ್ಪರವರು ಒಬ್ಬರು. ಅವರು ಲಿಂಗವಂತ ಧರ್ಮಾನುಯಾಯಿಗಳು. ಆದರೂ ಸಿದ್ಧಾರೂಢರ ಮೇಲೆ ಅವರ ಭಕ್ತಿ ಅತಿಶಯ. ಅವರ ಮನೆಯ ಸಮೀಪದಲ್ಲಿಯೇ ರುದ್ರಾಕ್ಷಿಮಠವಿತ್ತು.

ಪ್ರಕಾಶವು ಸಹನವಾಗದ ಜೀವಿಗಳು ಭೂಮಿಯ ಮೇಲೆ ಇರುವವಲ್ಲವೇ ? ಹಾಗೆ ಮೋಕ್ಷಪ್ರದನಾದ ಗುರುವು ಸನಿಯದಲ್ಲಿದ್ದರೂ ಅವನನ್ನರಿತುಕೊಳ್ಳದೇ ಇರುವಂಥ ಮನುಷ್ಯರೂ ಇರುವರು. ಇಂಥವರ ಬಾಳನ್ನು ಕುರಿತು ತಿಳಿದವರು.

ಒಂದೂರೊಳಿರಲು ಗುರು । ವಂದನೆಯ ಮಾಡದಲೆ ।
ಸಂದಿಸಿಕೊಳನುಣುತಿಪ್ಪವನ ಬದಕು ।
ಹಂದಿಯಂತೆಂದ ಸರ್ವಜ್ಞ ॥ — ಸರ್ವಜ್ಞ

(ಎಂದು ಹಳಿಯುತ್ತಾರೆ. ಏನಾದರೇನು ? ಅಂಥವರು ಕಣ್ಣು ತೆರೆದು ನೋಡುವುದಿಲ್ಲ.)

ಬಸಪ್ಪನವರ ಗುರುಭಕ್ತಿ ಅವರ ಧರ್ಮದ ಎಷ್ಟೋ ಜನರ ಮನಸ್ಸಿಗೆ ಬರುತ್ತಿರಲಿಲ್ಲ. ಪ್ರಸಂಗವೊದಗಿದರೆ ಅವರನ್ನು ನಿರ್ಬಂಧಪಡಿಸಲೂ ಅವರು ಹಿಂದೆಗೆಯುವವರಲ್ಲ. ಕಾರಣಾಂತರಗಳಿಂದ ಅವರು ತಪ್ಪಿಗಿದ್ದರು. ಹೀಗಿರಲು

ಒಂದುದಿನ ಪ್ರಸಂಗವೊದಗಿತು. ಪ್ರತಿದಿನ ಬಸಪ್ಪನವರು ಭಕ್ತಿಯಿಂದ ಮಠಕ್ಕೆ ತೆರಳಿ ಸಿದ್ಧದರ್ಶನ ಪಡೆದೇ ಪಡೆಯುತ್ತಿದ್ದರು. ಒಮ್ಮೆ ಶಿವರಾತ್ರಿಯು ಬರಲು ಆ ಪರ್ವಕಾಲದಲ್ಲಿ ಸಿದ್ಧ ಸದ್ಗುರುವನ್ನು ವೈಭವದಿಂದ ಪೂಜಿಸಬೇಕೆಂದು ಅಪೇಕ್ಷೆಯುಂಟಾಯಿತು. ಮತ್ತು ಹೇಗೂ ಮನೆಯ ಸಮೀಪದಲ್ಲಿ ರುದ್ರಾಕ್ಷಿಮಠವಿದೆ, ಅದೂ ಪವಿತ್ರವಾದ ಸ್ಥಳ. ಅಲ್ಲಿ ಪೂಜೆ ನಡೆದರೆ ಬರುವ ಜನಗಳಿಗೆ ಅನುಕೂಲವಾಗುತ್ತದೆ. ಎಂದು ವಿಚಾರಿಸಿಕೊಂಡು ಅದರಂತೆಯೇ ವ್ಯವಸ್ಥೆ ಮಾಡಿದರು. ವಿಜೃಂಭಣೆಯಿಂದ ಸಿದ್ಧನ ಪೂಜೆ ನಡೆಯಿತು. ಸಾವಿರಾರು ಜನ ಅದನ್ನು ಕಂಡು ಪುನೀತರಾದರು. ಎಷ್ಟೋ ವರ್ಷಗಳಿಂದ ಹೀಗೆ ಬಸಪ್ಪನವರ ಕಾರ್ಯ ನಡೆದುಬಂದಿರಲು ಒಂದುಸಾರೆ ಕೆಲವು ಮತಾಂಧರು ಮಾತಾಡಿಕೊಂಡು ಸಿದ್ಧನಿಗೆ ಲಿಂಗವಿಲ್ಲ, ಅದುದರಿಂದ ಅವನು ಭವಿ. ನಮ್ಮ ಪವಿತ್ರಸ್ಥಳದಲ್ಲಿ ಅಂಥವನ ಪೂಜೆ ನಡೆಯಗೊಡಲಿಕ್ಕಿಲ್ಲ, ಒಂದುವೇಳೆ ಹಟಕ್ಕೆ ಬಿದ್ದು ನಡೆಸಿದುದೇ ಆದರೆ ನಿಮ್ಮೆಲ್ಲರ ಜೀವವುಳಿಯುವುದು ಕಠಿಣವಾದೀತು' ಎಂದು ಭಯಗೊಳಿಸಲು ಬಸಪ್ಪ ಮರುಗಿ ಗುರುವಿನ ಮುಂದೆ ಹೇಳಿದರು. ಆಗ ಗುರುನಾಥ– ನಮ್ಮ ಪೂಜೆನಡೆಯುವದರಿಂದ ಜನರ ಮನಸ್ಸು ನೋಯುವುದಾದರೆ ನಾವು ಆ ಮಠಕ್ಕೆ ಹೋಗುವದೇಬೇಡ' ಎಂದು ಸಮಾಧಾನ ಹೇಳಿದನು. ಆದರೂ ಬಸವಣ್ಣನವರಿಗೆ ಸಮಾಧಾನವಿರಲಿಲ್ಲ. ಜನ ಇತ್ತಂಡವಾಯಿತು. ಸಿದ್ಧನ ಪೂಜೆ ಮಠದಲ್ಲಿ ನಡೆದೇತೀರಬೇಕೆಂಬುದೊಂದು ವರ್ಗ, ನಡೆಯಲಾಗದೆಂಬುದೊಂದು ವರ್ಗ, ಸರಕಾರದ ಒಬ್ಬ ದೊಡ್ಡ ಅಧಿಕಾರಿಗಳು ಇತ್ತ ಮನಸ್ಸುಹಾಕಿದರು. ಮತ್ತು ಅದರಂತೆ ಬಂದು ಬಸಪ್ಪನವರಿಗೆ 'ನಿಮ್ಮ ಪದ್ಧತಿಯಂತೆ ಆ ಮಹಾತ್ಮರ ಪೂಜೆಯು ರುದ್ರಾಕ್ಷಿಮಠದಲ್ಲಿ ನಡೆಯಲಿ. ಆಗ ಏನಾದರೂ ಗಲಭೆಯಾದರೆ ನಾನು ನೋಡಿಕೊಳ್ಳುತ್ತೇನೆ. ನೀವು ಚಿಂತಿಸಬೇಡಿ' ಎಂದರು.

ಅದರಿಂದ ಬಸಪ್ಪನವರು ಹರ್ಷಗೊಂಡು ಪೂಜೆಯನ್ನು ನಡೆಸಿದರು. ಆ ಕಾಲದಲ್ಲಿ ಸಶಸ್ತ್ರರಾದ ಪೋಲೀಸರು ಎಲ್ಲಕಡೆಗೆ ತಿರುಗುತ್ತ ಪುಂಡ-ಪೋಕರಿಗಳನ್ನು ಚನ್ನಾಗಿ ದಮನಮಾಡಿದರು. ಆ ದುಷ್ಟರ ಆಟ ಸಾಗಲಿಲ್ಲ. ವಿಷಾದದಿಂದ ಅವರು ಆ ದಿನ ಮರಳಿ ಮತ್ತೊಮ್ಮೆ ಕ್ವಾದೀಮಠದಲ್ಲಿ ಕಲೆತು ದುರಾಲೋಚನೆ ಮಾಡತೊಡಗಿದರು. ಅವರೆಲ್ಲ ಸಿದ್ಧಾರೂಢಸ್ವಾಮಿಗಳ ಯೋಗ್ಯತೆ

ಯನ್ನು ತಿಳಿಯಲೆತ್ನಿಸಿದ ಮತಾಂಧರು. ಕೇವಲ ಬಾಹ್ಯಾಚಾರಗಳಿಂದ ನಾವು ಧರ್ಮವಂತರೆಂದು ಮೆರೆಯುವ ಡಾಂಭಿಕರು. ಸಿದ್ಧಾರೂಢನು ಭವಿಯು, ಅವನಿಗೆ ಲಿಂಗವಿಲ್ಲ. ಲಿಂಗಾಯತಧರ್ಮ ನಾಶಮಾಡುವದಕ್ಕಾಗಿಯೇ ಅವನು ಇಲ್ಲಿ ನೆಲೆಸಿದ್ದಾನೆ. ಧರ್ಮಾಭಿಮಾನಿಗಳಾದವರು ಅವನನ್ನು ಉಳಿಸಬಾರದು, ಜೀವದರಸೆ ಹೊಡೆದುಹಾಕಬೇಕು. ಒಂದುವೇಳೆ ಅವನನ್ನು ಹಾಗೆ ಬಿಟ್ಟು ನಿತ್ಯನಡೆಯುವ ಧರ್ಮನಾಶಕ್ಕೆ ನಾವು ಅಪ್ರತ್ಯಕ್ಷವಾಗಿ ಪ್ರೋತ್ಸಾಹಕೊಡುತ್ತ ಹೋದರೆ ಬಸವೇಶ್ವರ ಕ್ಷುದ್ರನಾಗಿ ನಮ್ಮ ವಂಶವನ್ನುಳಿಸಲಿಕ್ಕಿಲ್ಲ. ಒಟ್ಟು ಸಿದ್ಧಾರೂಢನನ್ನು ನಾಶಗೊಳಿಸಬೇಕು. ಅದರಿಂದ ಧರ್ಮೋದ್ಧಾರವಾಗುವುದೆಂಬ ವಿಚಾರವು ಎಲ್ಲರಿಗೂ ಒಪ್ಪಿಗೆಯಾಗಿತ್ತು. ಆದರೆ ನಾಶಮಾಡುವುದು ಹೇಗೆ? ಯಾವಾಗಲೂ ಅವರ ಸುತ್ತುಮುತ್ತು ಅಸಂಖ್ಯ ಶಿಷ್ಯವರ್ಗವಿರುತ್ತದೆ, ಎಂಬ ವಿಚಾರ ಬರಲು ಅನೇಕರು ನಾಶದ ಅನೇಕ ಉಪಾಯಗಳನ್ನು ಹೇಳಿದರು. ನಮ್ಮೊಳಗಿನ ಒಬ್ಬರು ಯಾರಾದರೂ ಸಿದ್ಧನನ್ನು ಊಟಕ್ಕೆ ಕರೆಯಬೇಕು, ಅವನೇನು ಬಂದೇಬರುತ್ತಾನೆ. ಆಗ ನಾಶಮಾಡಿಬಿಟ್ಟರಾಯಿತು. ಅದಕ್ಕೇನು ಹೊತ್ತು ಬೇಕಾಗಿದೆ ಎಂದು ಒಬ್ಬನ ವಿಚಾರ, ಅದು ಬಹುಶಃ ಎಲ್ಲರ ಮನಸ್ಸಿಗೂ ಬಂತು. ಆದರೆ ಅವರು ಮನಸಾ ಸಿದ್ಧನನ್ನು ದ್ವೇಷಿಸತಕ್ಕವರು, ಶುದ್ಧ ಧರ್ಮಾಭಿಮಾನಿಗಳು. ಜಾತಿ-ಮತ-ಪಂಥ-ಕುಲ-ಗೋತ್ರಗಳಿಲ್ಲದ ಆ ಸಾಧುವನ್ನು ಊಟಕ್ಕೆ ಕರೆಯುವುದು ಹೇಗೆ? 'ಕೊನೆಗೆ ನಾನು ಭಕ್ತನಂತೆ ವೇಷಹಾಕಿ ಅವನನ್ನು ಊಟಕ್ಕೆ ಕರೆದುಕೊಂಡು ಬರುತ್ತೇನೆ. ಆಗ ಈ ಮಠಕ್ಕೆ ಕರೆತಂದು ನಮ್ಮ ಕಾರ್ಯಸಾಧಿಸೋಣ.' ಎಂದು ಒಬ್ಬನು ಹೇಳಲು ಎಲ್ಲರೂ ಒಳ್ಳೆಯ ಉಪಾಯವೆಂದು ಸಂತೋಷಪಟ್ಟು ಮನೆಗೆ ತೆರಳಿದರು.

ಮುಂದೆ ಒಂದುದಿನ ಸಂಧ್ಯಾಕಾಲ, ಒಬ್ಬ ಲಿಂಗವಂತ ಭಕ್ತನು ಬಂದು ವಿನಯದಿಂದ ವಂದಿಸಿ ನುಡಿದನು. 'ಗುರುಸ್ವಾಮಿಯೇ, ಇವತ್ತು ನಮ್ಮಲ್ಲಿ ವಿಶೇಷ ಕಾರ್ಯವೊಂದಿರುತ್ತದೆ. ದಯಮಾಡಿ ನೀವು ಊಟಕ್ಕೆ ಬರಬೇಕು.'

'ಅಯ್ಯಾ, ನಿನ್ನ ಭಾವ ಒಳ್ಳೆಯದು. ನಾನು ರಾತ್ರಿಯ ಹೊತ್ತಿನಲ್ಲಿ ಊಟ ಮಾಡುವದಿಲ್ಲವಲ್ಲ. ನಾಳೆ ಬಂದರಾಗದೇ? ನಾಳೆ ಅವಶ್ಯ ಬರುತ್ತೇನೆ ಚಿಂತಿಸಬೇಡ.'

'ಸ್ವಾಮಿ ನೀವು ಭಕ್ತರ ಮನಸ್ಸನ್ನು ಮುರಿಯಬಾರದು. ನೀವು ಬಂದು ನಮ್ಮ ಪೂಜೆಯನ್ನು ಸ್ವೀಕರಿಸಿ ತುಸು ಹಣ್ಣು-ಹಾಲನ್ನಾದರೂ ನಮ್ಮ ಮನೆಯಲ್ಲಿ ಸ್ವೀಕರಿಸಿ ಬಂದರೆ ನಮಗೆ ಸಮಾಧಾನವಾಗುವುದು. ನಿಮ್ಮ ಪೂಜೆ ಮಾಡಿ ವಿಶೇಷವಾದ ಒಂದು ಊಟ ಹಾಕಬೇಕೆಂದು ಬಹಳ ದಿನಗಳಿಂದ ನಮ್ಮದೊಂದು ಹರಿಕೆ. ಆದರೆ ಇದುವರೆಗೆ ಅನುಕೂಲವಾಗಿರಲಿಲ್ಲ. ಇವತ್ತು ಇದ್ದುದರಲ್ಲಿ ಅನುಕೂಲ ಮಾಡಿಕೊಂಡು ಎಲ್ಲ ಸಿದ್ಧತೆ ಮಾಡಿದ್ದೇನೆ. ನೀವು ಬರದಿದ್ದರೆ ನಮ್ಮ ಹರಿಕೆ ಕೈಗೂಡದೇ ಮಾಡಿದ ಕಾರ್ಯ ವ್ಯರ್ಥವೆನಿಸುವುದು. ಮಾಡಿದಡಿಗೆ ಒಬ್ಬರಿಗೂ ರುಚಿ ಎನಿಸಲಾರದು' ಎಂದು ಬಹುಬಗೆಯಾಗಿ ಬೇಡಿಕೊಳ್ಳಲು ಭಕ್ತಾಭಿಮಾನಿಯಾದ ಗುರುನಾಥ ಅವನ ಸಂಗಡ ಹೊರಟನು. ಬಂದವನ ಮನೋಗತವನ್ನು ಸಿದ್ಧ ತಿಳಿದನೋ ಅಥವಾ ತಿಳಿದೂ ಉಪೇಕ್ಷಿಸಿದನೋ ? ಯಾರು ಬಲ್ಲರು. ಕರೆಯಬಂದ ಮನುಷ್ಯ ಸಿದ್ಧನೊಬ್ಬನಿಗೇ ಬರಬೇಕೆಂದು ಔತಣ ಕೊಟ್ಟನು. ಹೀಗಾಗಿ ಮಠದೊಳಗಿನ ಯಾವ ಶಿಷ್ಯರೂ ಜತೆಗೆ ಬರಲಿಲ್ಲ. ಒಬ್ಬ ಸಿದ್ಧ. ಒಬ್ಬ ಕರೆಯಬಂದವ.

ಕರೆತಂದು ಕೌದೀಮಠದ ಒಂದು ಕೋಣೆಯಲ್ಲಿ ಕುಳ್ಳಿರಿಸಿ 'ಈಗಬಂದೆ' ಎಂದು ಹೇಳಿ ಹೊರಬಂದು ಮೆಲ್ಲನೆ ಬಾಗಿಲ ಚಿಲಕ ಹಾಕಿಬಿಟ್ಟನು. ಉಳಿದ ಸಂಗಡಿಗರು ಏನು ವಿಷಯವೆಂದು ಕೇಳಲು ಅತ್ತೂ ಕರೆದು ಕೋಣೆಯಲ್ಲಿ ಕೂಡಿಸಿ ಚಿಲೂಕ ಹಾಕಿ ಬಂದಿದ್ದೇನೆ. ನಡುರಾತ್ರಿಯಾಗಿ ಎಲ್ಲ ಕಡೆಯ ಸದ್ದು ಅಡಗಲಿ ಕ್ಷಣಾರ್ಧದಲ್ಲಿ ಮುಗಿಸಿಬಿಡೋಣ'ಎಂದು ಮಾತಾಡಿಕೊಂಡು ಗಾಂಜಿ ಸೇದುತ್ತ ಕುಳಿತರು. ಬಹಳ ಹೊತ್ತಾದರೂ ಊಟಕ್ಕೆ ಕರೆತಂದವನ ಸುದ್ದಿಯೇ ಇಲ್ಲದಂತಾಗಲು ಸಿದ್ಧನು ಅಂತರ್ಜ್ಞಾನದಿಂದ ಎಲ್ಲವನ್ನೂ ತಿಳಿದನು. ಅವರ ದುಷ್ಕೃತ್ಯವು ತಿಳಿದು ಬಂದರೂ ಸ್ವಾಮಿಗೆ ಕೋಪ ಬರಲಿಲ್ಲ. ಅವರ ಅಜ್ಞಾನ-ಕುಸಂಸ್ಕಾರಗಳನ್ನು ನೆನೆದು ಕನಿಕರಗೊಂಡನು. ಕ್ಷಣಮಾತ್ರದಲ್ಲಿ ಅವರನ್ನು ನಾಶಮಾಡುವ ಶಕ್ತಿತನಗಿದ್ದರೂ ದುರ್ಲಭವಾದ ಮನುಷ್ಯ ಜನ್ಮತಳೆದ ಜೀವಗಳು. ಇವುಗಳನ್ನು ಸನ್ಮಾರ್ಗಕ್ಕೆ ಹಚ್ಚಬೇಕೆಂದು ಮನಸ್ಸು ಮಾಡಿದನು. ಆದರೆ ಹೇಗೆ ಏನಾದರೊಂದು ಪವಾಡ ತೋರಬೇಕು. ಎಂದು ವಿಚಾರಿಸಿ– 'ಸ ಈಶ್ವರಃ ಪಾತು ಭಯಾದಶೇಷಾತ್' ಎಂದು ಸಗುಣ ಬ್ರಹ್ಮನಿಗೆ ಸೂಚನೆ ಕೊಟ್ಟು ತಾನು ಧ್ಯಾನಸ್ಥನಾದನು.

ಇತ್ತ ಸದ್ಗುರುನಾಥ ಬಹಳ ಹೊತ್ತಾದರೂ ತಿರುಗಿ ಬರದಂತಾದ ಕೂಡಲೇ ಶಿಷ್ಯರಲ್ಲಿ ಗಡಿಬಿಡಿ ಎದ್ದಿತು. ನೋಡಿಯಾದರೂ ಬರೋಣವೆಂದು ಕೆಲವರು ಹೊರಟರು. ಆದರೆ ಸಿದ್ಧ ಯಾರಲ್ಲಿ ಊಟಕ್ಕೆ ಹೋಗಿದ್ದಾನೆ ಎಂಬ ವಿಷಯ ಒಬ್ಬರಿಗೂ ಗೊತ್ತಿರಲಿಲ್ಲ. ಕಂಡವರನ್ನೆಲ್ಲ ವಿಚಾರಿಸುತ್ತ ತಿರುಗಿದರು. ಯಾರಿಂದಲೂ ಸುದ್ದಿ ತಿಳಿಯದಾಗಲು ಅವರು ಶೋಕಾಕುಲ ರಾಗಿ—'ಸದ್ಗುರುವೇ ಬೇಗ ಬಂದು ನಿನ್ನ ಭಕ್ತರಿಗೆ ದರ್ಶನವನ್ನು ಕೊಡು. ನಿನ್ನನಗಲಿ ಬಹಳ ವೇಳೆ ಇರಲಾರೆವು' ಎಂದು ಮೊರೆ ಇಡುತ್ತ ಬಳಲಿ ಒಂದು ಬಾವಿಯ ದಂಡೆಯ ಮೇಲೆ ಕುಳಿತುಬಿಟ್ಟರು. ಒಬ್ಬರಿಗೂ ಮಾತಾಡಲು ಬರದಂತಾಯಿತು. ಕಂಗಳಲ್ಲಿ ನೀರು ಧಾರಾಕಾರವಾಗಿ ಸುರಿಯತೊಡಗಿದವು. ಒಂದೊಂದೇ ಸದ್ಗುರುವಿನ ಗುಣಗಳನ್ನು ನೆನೆಯುತ್ತ ಮೌನವಾಗಿ ರೋಧಿಸ ಹತ್ತಿದರು.

ಆಶ್ಚರ್ಯ. ಅಂಥ ಘೋರ ಕತ್ತಲೆಯಲ್ಲಿ ಭಯನಿವಾರಿಸುವಂಥ ಪ್ರಕಾಶ ಅಲ್ಲಿ ಸಿದ್ಧಾರೂಢ ಸದ್ಗುರು ಮೂರ್ತಿ. ಓಡುತ್ತ ಹೋಗಿ ವಂದಿಸಿದರು. ಗುರುನಾಥ ಪ್ರೇಮದಿಂದ ಹಿಡಿದೆತ್ತಿ ಅವರನ್ನೆಲ್ಲ ಆಲಂಗಿಸಿ ತನ್ನ ಶಾಟಿಯಿಂದ ಕಣ್ಣೀರು ಒರೆಸಿದನು. ಆಗ ಭಕ್ತರೆಲ್ಲ ಕಳೆದುಕೊಂಡ ನಿಧಿಯನ್ನು ಪಡೆದ ವರಂತೆ ಸಮಾಧಾನಗೊಂಡು ಗುರುನಾಥನನ್ನು ಮಠಕ್ಕೆ ಕರೆತಂದರು. ತಡ ವಾದ ಕಾರಣವನ್ನು ವಿಚಾರಿಸಿದರು. ಆಗ ಸಿದ್ಧನು ಆ ಕುಕರ್ಮಿಗಳ ಆಲೋ ಚನೆಯನ್ನು ತಿಳಿಸಿ ನಿಮ್ಮ ಆರ್ತಧ್ವನಿ ಕೇಳಿ ಆ ಕೋಣೆಯಿಂದ ಬಂದನೆಂದು ಹೇಳಿದನು.

'ಅವರನ್ನು ಸುಟ್ಟು ಹಾಕಬೇಕಿತ್ತು.' ಎಂದು ಶಿಷ್ಯರಂದರು.

ಇತ್ತ ಆ ದುರುಳರು ಮಧ್ಯರಾತ್ರಿಯಾಗುವ ಅವಕಾಶವನ್ನೇ ನೋಡುತ್ತ ಕುಳಿತಿದ್ದರು. ಹೇಗಿದ್ದರೂ ಸಿದ್ಧ ನಮ್ಮ ಕೈಯ್ಯಲ್ಲಿ ಸಿಕ್ಕಿರುವನು, ಅವನು ಹೋಗುವುದೆಲ್ಲಿಗೆ? ಇವತ್ತು ನಿರಾಯಾಸವಾಗಿ ಅವನನ್ನು ಮುಗಿಸಬಲ್ಲೆವು. ಆಗ ಕೂಗಲು ಬರದಂತೆ ಅವನ ಬಾಯಲ್ಲಿ ಅರಿವೆ ತುರುಕಿ ಹಣಿದರಾಯಿತು. ಎಂದು ಮೊದಲಾಗಿ ಯೋಚನೆಯಲ್ಲಿ ಕುಳಿತಿರಲು ಮೆಲ್ಲನೆ ಬೀದಿಗಳಲ್ಲಿ ಜನ ಸಂಚಾರವಡಗಿ ಸದ್ದಡಗಿತು. ದುಷ್ಕರ್ಮಿಗಳು ಮೇಲೆದ್ದು ಬಂದು ಆ ಕೋಣೆಯ ಬಾಗಿಲು ತೆರೆದರು. ಅಲ್ಲಿಯ ದೀಪ ಯಾವಾಗಲೋ ನಂದಿಹೋ

ಗಿತ್ತು, ಬೇರೊಂದು ದೀಪವನ್ನು ತಂದು ನೋಡಿದರು, ಎಲ್ಲಿಯೂ ಸಿದ್ಧ ಕಾಣಿಸಲಿಲ್ಲ. ಆ ಮೂಲೆಯಲ್ಲಿ ಅಡಗಿರಬೇಕೆಂದು ಒಬ್ಬರು, ಇತ್ತ ಕುಳಿತಿರಬೇಕೆಂದು ಇನ್ನೊಬ್ಬರು, ಕೈಯಲ್ಲಿ ಬಡಿಗೆ ತೆಗೆದುಕೊಂಡು ಗೋಡೆ ಹಾಯ್ದರು; ಕಂಬಗಳನ್ನು ಹಣೆಗೆ ಬಡಿಸಿಕೊಂಡರು. ಬೇಟೆ ಕೈತಪ್ಪಿಸಿಕೊಂಡು ಹೋದುದಕ್ಕೆ ಅವರಲ್ಲಿ ಒಂದು ಬಗೆಯ ಆವೇಶ ತುಂಬಿದಂತಾಗಿತ್ತು; ಆ ಆರೂ ಜನರ ಮನದಲ್ಲಿ ಸಿದ್ಧ ವ್ಯಾಪಿಸಿದನು, ಎಲ್ಲ ಕಡೆಗೆ ಸಿದ್ಧನೇ ಕಂಡಂತಾಗತೊಡಗಿತು. ಸಿದ್ಧ ಸಿಕ್ಕ, ಸಿದ್ಧ ಸಿಕ್ಕ ಎನ್ನುತ್ತ ಒಬ್ಬರು ಒಬ್ಬರನ್ನು ಥಳಿಸಿದರು, ಎಲ್ಲರ ಮೈ ನುಗ್ಗಾದವು, ಅವರಲ್ಲಿ ಕೆಲವರಂತೂ ಆರ್ತನಾದ ಮಾಡಿದರು, ಚೀರಿದರು, ಬೈಯ್ಯತೊಡಗಿದರು, ಇವರ ಗದ್ದಲ ಚೀರಾಟ ಕೇಳಿ ಅಕ್ಕಪಕ್ಕದ ಜನ ಮೇಲೆದ್ದು ಬಂದು ಇವರನ್ನು ಹಿಡಿದು ನಡೆದ ಸಂಗತಿಯನ್ನು ವಿಚಾರ ಮಾಡಿದರು, ಮೊದಲು ಯಾರೂ ಹೇಳಲಿಲ್ಲ, ಹಿಂದಿಸಿಂದ ಪೆಟ್ಟು ತಿಂದು ಬಹಳ ವೇದನೆ ಹೊಂದಿದವನೊಬ್ಬನು ತಾವು ಮಾಡಿದ ಧರ್ಮೋದ್ಧಾರದ ಯೋಚನೆಯನ್ನು ತಿಳಿಸಲು ಕೂಡಿದ ಜನ ಮೂರ್ಖರಿದ್ದೀರಿ, ನಿಮ್ಮ ಗೊಂದಲ ಮುಂದಿಗೆ ಗೊತ್ತಾದರೆ ಸೆರೆಮನೆಗೆ ಹೋದೀರಿ. ಎಚ್ಚರಿಕೆ. ಆ ಮಹಾತ್ಮನಾದ ಯೋಗಪುರುಷ ನಿಮ್ಮ ಕೈಗೆ ಸಿಕ್ಕಬಹುದೇ? ಈಗವನು ಸುಖವಾಗಿ ತನ್ನ ಆಶ್ರಮದಲ್ಲಿ ನಿದ್ರಿಸುತ್ತಿರಬಹುದು, ನೀವು ಮಾತ್ರ ಸತ್ಪುರುಷರಲ್ಲಿ ದ್ವೇಷತಾಳಿ ನಿಮ್ಮ ಘಾತಮಾಡಿಕೊಳ್ಳುತ್ತಿದ್ದೀರಿ, ಮನೆಗೆ ಹೋಗಿ ಮಲಗಿಕೊಳ್ಳಿರಿ, ಎಂದು ಒಳಿತಾಗಿ ಛೀಮಾರಿಹಾಕಲು ನಾಚಿಕೊಂಡು ಆ ದುರುಳರು ಕಣ್ಮರೆಯಾದರು. ಆದರೆ ಚಮತ್ಕಾರ, ಅಂದಿನಿಂದ ಅವರು ಸಿದ್ಧನ ಪರಮಭಕ್ತರಾದರು.

ಇವರಿಗೆ ನಾನಾರೀತಿಯ ಆಶೆತೋರಿಸಿ ಇಂಥ ನಿಂದ್ಯಕಾರ್ಯಕ್ಕೆ ಪ್ರೇರಿಸಿದ ಮನುಷ್ಯನಿಗೆ ತನ್ನ ಕೈಕೆಳಗಿನ ಬಂಟರು ಸಿದ್ಧನ ಭಕ್ತರಾದುದನ್ನು ಕಂಡು ಅತಿಶಯ ಸಂತಾಪವಾಯಿತು. ಏನೇ ಆಗಲಿ ತಾನು ಸಂಕಲ್ಪಿಸಿಕೊಂಡ ಸಿದ್ಧ ವಿನಾಶವನ್ನು ಪೂರ್ಣಮಾಡಿ ಧರ್ಮೋದ್ಧಾರ ಮಾಡಲೇಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ಬಗೆಬಗೆಯ ಉಪಾಯಗಳನ್ನು ಚಿಂತಿಸಿದನು, ಕೊನೆಗೆ ಒಬ್ಬ ಬಡವಿಗೆ ಹಣಕೊಟ್ಟು ಬಗೆ ಬಗೆಯ ಭಕ್ಷ್ಯಗಳನ್ನು ಮಾಡುವಂತೆ ತಿಳಿಸಿದನು. ಅವಳು ಅದರಂತೆ ಸಿದ್ಧಗೊಳಿಸಲು ಇವುಗಳನ್ನೊಯ್ದು ಸಿದ್ಧನಿಗೆ

ರ್ಪಿಸಿ ಉಣಿಸಿಬಾ, ಉಂಡು ಆ ಕರ್ಮಚಾಂಡಾಲ ಸತ್ತುಹೋಗಲಿ, ಹಾಗಾದ ಪಕ್ಷದಲ್ಲಿ ನಿನ್ನ ದರಿದ್ರತನ ಹಿಂಗಿತೆಂದು ತಿಳಿ, ಎಂದು ಆಶೆತೋರಿಸಿ ಸಿದ್ಧನ ಬಳಿಗೆ ಕಳಿಸಿದನು. ಅವಳು ಶುಚಿಯಾಗಿ ಮಠಕ್ಕೆ ಬಂದು ವಿನಯದಿಂದ ಬಡವಿಯ ಭಕ್ಷ್ಯವನ್ನು ಸ್ವೀಕಾರ ಮಾಡಬೇಕೆಂದು ಕೈಮುಗಿದು ಬೇಡಿದಳು. ಅವಳ ಕಪಟಾಚರಣೆಯನ್ನು ಗುರು ಗುರುತಿಸಿದನೋ ಏನೋ? ಇದೇ ನನ್ನ ಊಟವಾಯಿತಲ್ಲ, ಎಂದು ಹೇಳಲು ಅವಳು ಒಂದು ತುತ್ತು ಬಾಯಿಯಲ್ಲಿ ಹಾಕಿಕೊಂಡಾದರೂ ನನ್ನ ಇಚ್ಛೆ ಪೂರ್ಣಗೊಳಿಸಬೇಕೆಂದು ಬಹಳ ಪರಿಯಾಗಿ ಬೇಡಲು ಸಿದ್ಧ ಒಂದು ತುತ್ತು ಬಾಯಿಗಿಟ್ಟುಕೊಂಡು ಹೋಗು, ನಿನ್ನ ಕೆಲಸ ತೀರಿದಂತಾಯಿತು; ಎಂದು ಹೇಳಿ ಮನೆಗೆ ಕಳಿಸಿದನು.

ಗುರುನಾಥನಿಗೆ ಅವು ವಿಷಕೂಡಿದ ಪದಾರ್ಥಗಳೆಂಬುದು ತಿಳಿದುಹೋಗಿತ್ತು, ಅವುಗಳನ್ನು ತಂದುಕೊಟ್ಟ ಹೆಣ್ಣುಮಗಳು ಮನೆಗೆತೆರಳಲು ಸಿದ್ಧಳಾದ ನಂತರ ಸಿದ್ಧ ತನ್ನ ಶಿಷ್ಯರಿಗೆ- ಯಾವ ಪ್ರಾಣಿಗಳೂ ಮುಟ್ಟದಂತೆ ತೆಗ್ಗು ತೆಗೆದು ಮಣ್ಣಿನಲ್ಲಿ ಹೂಳಿಬಿಡಿರಿ, ಇವು ವಿಷಯುಕ್ತ ಭಕ್ಷ್ಯಗಳು, ಎಂದು ಹೇಳಿದುದನ್ನು ಕೇಳಿ ಆ ಹೆಣ್ಣುಮಗಳು ಘಾಬರಿಗೊಂಡು ಬಾಯಲ್ಲಿ ಏಸರಿಲ್ಲದಂತೆ ಮನೆಗೋಡಿದಳು.

ನಾನು ಸಲ್ಲದ ಕೆಲಸ ಮಾಡಿದೆನೆಂದು ಅವಳಿಗೆ ಭಯವಾಯಿತು. ಕಾಲರೂಪನಾಗಿ ಎಲ್ಲ ಕಡೆಗೆ ಸಿದ್ಧ ಕಾಣತೊಡಗಿದನು. ಎಲ್ಲಿ ನೋಡಿದಲ್ಲಿ ಸಿದ್ಧ, ಕಂಡವಸ್ತುಗಳೆಲ್ಲ ಸಿದ್ಧ, ಹೀಗೆ ಸರ್ವಾತ್ಮರೂಪನಾದ ಸಿದ್ಧನಿಗೆ ನಾನು ದ್ರೋಹಮಾಡಿದೆ ಎಂದು ಹಲುಬಿದಳು. ಹೀಗೆ ಸುಮಾರು ೧೫-೨೦ ದಿನಗಳ ವರೆಗೆ ಹಲುಬಿ ಒಂದು ದಿನ ಸಿದ್ಧನನ್ನು ನೆನೆಯುತ್ತ ಅವಳು ಪ್ರಾಣತ್ಯಾಗ ಮಾಡಿದಳು.

ಇತ್ತ ಸಿದ್ಧ ತನ್ನಲ್ಲಿ ವಿಚಾರಿಸಿಕೊಂಡನು, ಆ ಹೆಣ್ಣುಮಗಳು ತಂದುಕೊಟ್ಟ ವಿಷಯುಕ್ತ ಪದಾರ್ಥಗಳನ್ನು ತಿಂದುದರಿಂದ ನನ್ನ ದೇಹದಲ್ಲಿ ವಿಷವು ಸೇರಿದೆ, ಅದನ್ನು ನಾನು ಅರಗಿಸಿಕೊಂಡು ಉಪಯೋಗವಿಲ್ಲ, ವಿಷಬಾಧೆಯಿಂದಾಗುವ ಪೀಡೆಯನ್ನು ಸ್ವೀಕರಿಸಿ ಜನರಿಗೊಂಡು ಪಾಠವನ್ನು ಕಲಿಸಬೇಕು, ಯಾಕಂದರೆ ಯುಗಯುಗಗಳಲ್ಲಿ ಸತ್ಪುರುಷರು ವಿಷಯಗಳಲ್ಲಿ ಸುಖವಿಲ್ಲ, ಅವುಗಳಲ್ಲಿ ನಿಜವಾದ ಸುಖ ಲಾಭವಾಗುವದಿಲ್ಲ, ಅವುಗಳಿಗಾಶೆ

ಪಟ್ಟು ಅಧೋಗತಿಹೊಂದಬೇಡಿರಿ; ಎಂದು ಬಹುಬಗೆಯಿಂದ ಹೇಳುತ್ತ ಬಂದರೂ ಜನರಿಗೆ ಆ ವಿಚಾರ ಮನಸ್ಸಿಗೆ ನಾಟಲ್ಲ, ಆದ ಕಾರಣ ನಾನೀಗ ದುಃಖಭೋಗಿಸಲೇಬೇಕು. ನಾಲಿಗೆಯ ಸವಿಗೆ ಮರುಳಾಗಿ ವಿಷಯುಕ್ತ ಭಕ್ಷ್ಯವನ್ನು ಸ್ವೀಕರಿಸಲು ನಾನು ಹಿಂದೆ ಮುಂದೆ ನೋಡಲಿಲ್ಲ. ಇದೋ ತಿಂದುದಕ್ಕೆ ನರಳಬೇಕಾಯಿತು. ನೀವಂತೂ ಪಂಚೇಂದ್ರಿಯಗಳನ್ನು ಹರಿಬಿಟ್ಟಿರುವಿರಿ, ಅದರ ಪರಿಣಾಮವೇನಾದೀತು ? ವಿಚಾರ ಮಾಡಿರಿ ಎಂದು ತನ್ನ ಭಕ್ತರಿಗೆ ಎಚ್ಚರ ಕೊಡಲೇನೋ ಎಂಬಂತೆ ನಿರಾಮಯನಾದ ಗುರುನಾಥ ರೋಗಿಯಾದನು. ಮೈಮೇಲೆ ಮುತ್ತುಹಚ್ಚಿದಂತೆ ಗುರುಳೆಗಳೆದ್ದು ತಾಳಲಾಗದ ಉರುಪು ಪ್ರಾರಂಭವಾಯಿತು. ನಾಲಿಗೆಯು ಅತಿಶಯ ಉಬ್ಬಿ ಬಾಯಿ ಚಂದನ ಕೊಳವೆಯಂತೆ ಕೆಂಪಗಾಯಿತು. ಆ ಪ್ರಸಂಗದಲ್ಲಿ ಆಹಾರದ ಮಾತಂತೂ ದೂರ,ಗಂಟಲದಲ್ಲಿ ಹಾಕಿದ ನೀರಿಳಿಯುವುದೂ ಕಷ್ಟವೆನಿಸ ತೊಡಗಿತು. ಕಣ್ಣುಗಳು ಕೆಂಪಗಾಗಿ ಉಬ್ಬಿಕೊಂಡವು. ಸಿದ್ಧ ಭಯಂಕರ ರೂಪನಾಗಿ ತೋರಿದನು.

ಭಕ್ತರು ಘಾಬರಿಯಾಗಿ ಕಣ್ಣೀರು ಹಾಕತೊಡಗಿದರು. ಕೆಲವರು ವೈದ್ಯರನ್ನು ಕರೆತಂದರು. ವೈದ್ಯರು ಅನೇಕ ಬಗೆಯಾಗಿ ಪರೀಕ್ಷಿಸಿ ಇವರಿಗೆ ವಿಷಪ್ರಯೋಗವಾಗಿದೆ. ಅದು ಈಗ ರಕ್ತದಲ್ಲೆಲ್ಲ ವ್ಯಾಪಿಸಿದ್ದರಿಂದ ಹೀಗೆ ಗುರುಳೆಗಳೆದ್ದು ಉರುಪು ಪ್ರಾರಂಭವಾಗಿದೆ.ಇದಕ್ಕೆ ಈ ಮೊದಲೇ ಉಪಾಯ ವಾಗಬೇಕಾಗಿತ್ತು. ಈಗ ಕಾಲ ಮೀರಿ ಹೋಗಿದೆ. ಇನ್ನು ಇವರು ಬದುಕಲಾರರು' ಎಂದು ಹೇಳಿ ನಡೆದುಬಿಟ್ಟರು. ಅದನ್ನು ಕೇಳಿದ ಭಕ್ತಜನರ ಗೋಳನ್ನು ಹೇಳಲಾಸಲ್ಲ.

ತನ್ನ ಪರಿಹಾರವೆಲ್ಲ ದುಃಖಮಗ್ನವಾಗಿರುವುದನ್ನು ಗ್ರಹಿಸಿ ಗುರುನಾಥ ಸನ್ನೆಮಾಡಿ ಭಯಗೊಳ್ಳಬೇಡಿರೆಂದು ಹೇಳಿದ ಮೇಲೆ ಭಕ್ತವೃಂದ ತುಸು ಸಮಾಧಾನಗೊಂಡಿತು. ಒಂದೇಸಮನೆ ೧೦-೧೫ ದಿನಗಳವರೆಗೆ ಹಗಲು-ರಾತ್ರಿ ಸದ್ಗುರುನಾಥನನ್ನು ಬಿಟ್ಟು ಕದಲಲಿಲ್ಲ. ಆ ಅವಧಿಯಲ್ಲಿ ಸರಿಯಾಗಿ ಅನ್ನ-ನೀರು ಕಂಡವರು ಯಾರೋ. ನಿದ್ದೆ ಮಾಡಿದವರು ಯಾರೋ. ಅವರಿಗೆ ಏನಾದರೂ ಹೇಳಬೇಕೆನಿಸಿದರೂ ಸಿದ್ಧನಿಗೆ ಮಾತಾಡಲು ಬರುತ್ತಿರಲಿಲ್ಲ. ಏನೂ ಹೇಳಿದರೂ ಸನ್ನೆಯಿಂದಲೇ ಹೇಳಬೇಕು. ಆ ಸನ್ನೆ ತಿಳಿದರೂ ಭಕ್ತರಿಗೆ

ಸಮಾಧಾನವಿಲ್ಲ. ದೇವರಿಗೆ ಸದ್ಗುರುನಾಥನನ್ನು ಉಳಿಸು. ಎಂದು ಮೊರೆ ಇಡುತ್ತ ಅವರು ಕುಳಿತುಬಿಟ್ಟರು.

ಹದಿನೈದು ದಿನಗಳ ವರೆಗೆ ನರಳಿ ಮುಗ್ಗಲಾಗಿ ಮಲಗಲಿಕ್ಕೂ ಬರದಂತೆ ವೇದನೆ ಅನುಭವಿಸಿದ ನಂತರ ಮೆಲ್ಲನೆ ಸಿದ್ಧನಲ್ಲಿ ಬೇನೆ ಹಿಮ್ಮೆಟ್ಟಿದ ಚಿಹ್ನಗಳು ಕಾಣಹತ್ತಿದವು. ಗುರುಳಿಗಳೆಲ್ಲ ಒಡೆದು ಮಕ್ಕು ಬಾಡಿದವು. ನಾಲಿಗೆ ಸರಿಯಾಯಿತು, ಕಣ್ಣು ತಿಳಿಯಾದವು, ಒಂದೊಂದೇ ಮಾತು ಆರಂಭವಾದವು, ಮುಂದೆ ಎಂಟು ದಿನ ಕಳೆದಮೇಲೆ ಒಂದು ದಿನ ಸಿದ್ಧನು ತನ್ನ ಬೇನೆಯ ನೆವವಿಟ್ಟುಕೊಂಡು ವಿಷಯ ಪದಾರ್ಥಗಳಿಂದೊದಗುವ ಅನರ್ಥಗಳನ್ನು ಬಿಂಬಿಸುವಂತೆ ತನ್ನ ಭಕ್ತರಿಗೆ ವಿವರಿಸಿದನು.

೫೧

ಗುರುಸೇವೆ ಕೈಕೊಂಡು । ಹಿರಿದಾಗಿ ಮಾಡದಲೆ ।
ಹರಿದೇರಿ ಮುಕ್ತಿ ಪಡೆಯುವಡೆ ಅದು ತಾನು ।
ಹಿರಿದಾದ ತೆವರ ? ಸರ್ವಜ್ಞ ॥

–ಸರ್ವಜ್ಞ

ಧಾನ್ಯಗಳನ್ನು ಬಿತ್ತಿ ಬೆಳೆದುಕೊಳ್ಳಬೇಕಾದರೆ ಆರು ತಿಂಗಳು ಕಾಯ ಬೇಕು. ಹಿಟ್ಟು ಬೇಯಿಸಿ ತಿನ್ನಬೇಕಾದರೆ ಒಂದು ಘಳಿಗೆಯಾದರೂ ಹೊತ್ತು ಬೇಕು.

ಪ್ರಪಂಚವು ಸತ್ಯವಾಗಿದೆ ಎಂದು ತಿಳಿದು ಅನೇಕ ಜನ್ಮಗಳಿಂದ ಸಂಗ್ರಹ ಮಾಡಿಕೊಂಡ ಪಾಪವು ನಾಶವಾಗಿ ಕುಸಂಸ್ಕಾರಗಳೆಲ್ಲ ಅಳಿದು ಸ್ವರೂಪಾ ನಂದ ಕೈಗೂಡಬೇಕಾದರೆ ಸುಲಭವೆನ್ನಬಹುದೇ ? ಸ್ವತಂತ್ರವಾಗಿ ಯತ್ನಿಸಿ ಪಂಡಿತನಾಗಬಹುದು, ಧನ ಗಳಿಸಬಹುದು, ಮಾನ-ಸನ್ಮಾನ ಪಡೆಯ ಬಹುದು, ಜನಾನುರಾಗವನ್ನು ಹೊಂದಬಹುದು, ಆದರೆ ಮುಕ್ತಿಯನ್ನು ?

ಗುರುವಿನ ಅನುಗ್ರಹವಿಲ್ಲದೆ ಪಡೆಯುವದು ಅಶಕ್ಯ. ನಿರಭಿಮಾನಿ

ಯಾಗದೇ ಗುರುವಿನ ಅನುಗ್ರಹ ದೊರಕಿಸುವದು ಅಸಾಧ್ಯ. ಹೀಗಿದೆ ಮುಕ್ತಿಯ ಪ್ರಾಪ್ತಿ.

ಚನಮಲ್ಲಪ್ಪ ಸಿದ್ಧಾರೂಢರ ನಿಸ್ಸೀಮ ಭಕ್ತ. ಅವನಿಗೆ ಗುರುಸೇವೆ ಮಾಡಲು ದೊರೆತರೆ ಮನೆ-ಮಾರು ನೆನಪಾಗಲಿಕ್ಕಿಲ್ಲ. ಪ್ರತಿನಿತ್ಯ ಅವನು ಬಂದು ಗುರುಸನ್ನಿಧಿಯಲ್ಲಿ ಕೂಡುವನು. ಆಗ ಸದ್ಗುರುನಾಥ ಹೇಳಿದ ಕಾರ್ಯಗಳನ್ನು ಮಾಡಬೇಕು. ಇಲ್ಲವಾದರೆ ಸ್ವಸ್ಥವಾಗಿ ಕುಳಿತಿರಬೇಕು. ಇವನು ಬೇರೆ ಸಾಹುಕಾರರ ಮನೆಯಲ್ಲಿ ನೇಕಾರಿಕೆಯ ಉದ್ಯೋಗ ಮಾಡಿ ಅದರಿಂದ ಹೊಟ್ಟೆ ತುಂಬಿಕೊಳ್ಳತಕ್ಕದ್ದು. ಅದರಿಂದ ಒಟ್ಟನಲ್ಲಿ ಹೇಗೋ ಜೀವನ ಸಾಗಿತ್ತು.

ಒಂದು ದಿನ ಇವನು ಮಠದಿಂದ ಮನೆಗೆ ಬರಲು ಅವನ ಹೆಂಡತಿ ಸಿಟ್ಟಿನಿಂದ ನುಡಿದಳು— 'ಹೀಗಾದರೇನು ಗತಿ ? ನೀವು ಯಾವಾಗಲೂ ಸಿದ್ಧನ ಬಳಿಯಲ್ಲಿ ಹೋಗಿ ಕುಳಿತುಕೊಳ್ಳುತ್ತೀರಿ, ಮನೆ-ಮಾರಿನ ವಿಚಾರ ನಿಮಗೆ ಇರಬಾರದೇ ? ಊಟದ ಮಟ್ಟಿಗೆ ಮಾತ್ರ ನಿಮಗೆ ಮನೆಯ ನೆನಪು. ಹೇಗೋ ಹೊಟ್ಟೆಯೊಂದು ಸಾಗಿದೆ; ಉಪ್ಪು - ಎಣ್ಣೆ, ಅರಿವೆ-ಅಂಚಡಿ ಬೇಡವೇ? ದಿನಾಲು ಇದಕ್ಕಿಂತ ಹೆಚ್ಚು ದುಡಿದರೆ ಏನಾದರೂ ಆದೀತು. ಹಗಲು ಹೊತ್ತಿನಲ್ಲಂತೂ ಮಠವಾಯಿತು, ನೀವಾಯಿತು. ರಾತ್ರಿ ದುಡಿಯುವದಾಗಬೇಕು, ನಿದ್ದೆಯಾಗಬೇಕು. ಇಷ್ಟು ದಿನವಾಯಿತು. ಒಂದು ಫಳಿಕೆ ಎಂದಿರಾ? ಒಂದು ಆಭರಣವೆಂದಿರಾ? ಮಂದಿ ಎಷ್ಟು ಆಸ್ಥೆಯಿಂದ ಪ್ರಪಂಚ ಮಾಡುತ್ತಾರೆ. ಅವರ ಬಾಳ್ವೆ ಕಂಡರೆ ಸಂತೋಷವಾಗುತ್ತದೆ. ಏನು ಹರಿದಾಡಿದರೂ ನಾನು ಒಬ್ಬಳೇ; ನನಗೆ ಬೇಜಾರಾಯಿತು, ನಾನು ದುರ್ದೈವಿ. ದೇವರು ನಿಮ್ಮ ಸಂಗತಿ ಗಂಟುಹಾಕಿದ್ದಾನೆ, ಮಾಡುವದೇನು?'

ಅವಳ ಮಾತು ಕೇಳಿ ಚನಮಲ್ಲಪ್ಪ ಅಂದನು– 'ಆ ನಿನ್ನ ದುರ್ದೈವವನ್ನು ತಿದ್ದಿಕೊಳ್ಳಬಹುದಲ್ಲ'

'ಅಂದರೆ ನನಗೆ ತಿಳಿಯಲಿಲ್ಲ'

'ಅಂದರೆ ನಾನು ಹೇಳಿ ಕೇಳಿ ಬಡವ, ನನ್ನ ಬಳಿಯಲ್ಲಿದ್ದರೆ ನಿನ್ನ ಆಶೆಗಳು ಪೂರ್ಣವಾಗುವದು ಸಾಧ್ಯವಿಲ್ಲ. ನಿನಗೆ ಬೇಕಾಗಿದ್ದರೆ ಈಗ ನನ್ನನ್ನು ಬಿಟ್ಟು ಯಾರಾದರೊಬ್ಬ ಶ್ರೀಮಂತನ ಕೈ ಹಿಡಿಯಬಹುದು. ಅದಕ್ಕೇನೂ

ನನ್ನ ಅಡ್ಡಿಯಿಲ್ಲ. ಇದುವರೆಗೆ ಪ್ರಪಂಚಿಕನೆನಿಸುವ ಬಡವನಾಗಿದ್ದೆ, ಇನ್ನು ನಿಜವಾಗಿ ಭಿಕ್ಷುಕನಾಗುತ್ತೇನೆ'

ಎಂದು ನುಡಿದ ಚನಮಲ್ಲಪ್ಪನ ಮಾತುಕೇಳಿ ಅವನ ಹೆಂಡತಿ ಅವಾಕ್ಕಾಗಿ ಗಂಡನ ಮುಖ ನೋಡತೊಡಗಿದಳು. ಅವನು ನಿಜವಾಗಿ ಅರಿವೆಗಳನೆಲ್ಲ ಕಳಚಿ ಭಿಕ್ಷುಕವೇಷ ಧರಿಸಿದನು. ಮನೆಯೊಳಗೆ ಯಾವ ಪದಾರ್ಥಗಳನ್ನೂ ಮುಟ್ಟಲಿಲ್ಲ. ಒಂದು ಕೌಪೀನ, ಒಂದು ಜೋಳಿಗೆ ಧರಿಸಿದವನೇ ಹೊರಗೆ ನಡೆದು ಮನೆ ಮನೆ ಭಿಕ್ಷ ಬೇಡತೊಡಗಿದನು. ಜೋಳಿಗೆ ತುಂಬಲು ಅದನ್ನೆಲ್ಲ ತೆಗೆದುಕೊಂಡು ಸಿದ್ಧನ ಮುಂದಿಟ್ಟು ಕೈ ಮುಗಿದು ನಿಂತನು. ಅವನ ವೇಷ-ಆಕಾರಗಳನ್ನು ಕಂಡು ಸಿದ್ಧ ಕೇಳಿದನು--'ಚನಮಲ್ಲ ಇದೇನು ಆಕಾರ ನಿಜ ಹೇಳು'

'ಗುರುನಾಥನೇ, ಏನು ಹೇಳಲಿ? ಕೈ ಹಿಡಿದ ಹೆಂಡತಿ ನನಗೆ ವೈರಾಗ್ಯ ಉಪದೇಶ ಕೊಟ್ಟಳು.'

'ಹಾಗೆಂದರೆ ?'

'ಅವಳಾಡಿದ ಕಠಿಣ ಮಾತುಗಳಿಂದ ಮನಸ್ಸು ಸಂಸಾರಕ್ಕೆ ಹೇಸಿತು. ಅವಳಿಗಾಗಿ ನಾನು ಪ್ರಪಂಚದಲ್ಲಿರಬೇಕಾಗಿತ್ತು. ಅವಳು ಬೇಡವೆಂದಮೇಲೆ ಮತ್ತೇನು? ನಿನ್ನ ಪಾದಗಳಲ್ಲಿ ಬಂದು ಬಿದ್ದುಕೊಂಡೆ, ಇಷ್ಟು ನಿಜ ಸ್ಥಿತಿ.

ಮುಂದೆ ಸಿದ್ಧ ಬಹಳ ವಿಚಾರಿಸದೇ ಆಗಲೆಂದನು. ತನಗೆ ಗುರುವಿನ ಆಶ್ರಯ ದೊರೆತುದರಿಂದ ಚನಮಲ್ಲಪ್ಪ ಬಹಳ ಸಂತೋಷಗೊಂಡು ಮಠದಲ್ಲಿ ವಾಸ ಮಾಡಿದನು. ಪ್ರತಿದಿನ ಮನೆ ಮನೆ ತಿರುಗಿ ಭಿಕ್ಷೆ ಮಾಡಿಕೊಂಡು ಬಂದು ಗುರುವಿಗರ್ಪಿಸಬೇಕು, ಅವನು ಕೊಟ್ಟಷ್ಟನ್ನು ಉಂಡು ತೃಪ್ತಿಪಡಬೇಕು. ಇದರಂತೆ ಕೆಲವು ದಿನ ಕಳೆಯಲು ಚನಮಲ್ಲಪ್ಪ ಮನದಲ್ಲಿ ವಿಚಾರಿಸಿಕೊಂಡನು. 'ಅಹಾ, ನಾನು ಇಲ್ಲಿ ನಿಂತುಕೊಂಡದ್ದೇಕೆ? ಗುರು ಸೇವೆ ಮಾಡುವದಕೋ? ಹೊಟ್ಟೆ ತುಂಬಿಸಿಕೊಳ್ಳಲಿಕ್ಕೋ? ಗುರುಸೇವೆ ಮಾಡದೆ ಜೀವನವನ್ನು ವ್ಯರ್ಥ ಕಳೆಯಬಾರದು'

ಎಂದು ನಿರ್ಧರವಾಗುವದೇ ತಡ ಮರುದಿನದಿಂದ ಗುರುವಿನ ಮುಖ ಪ್ರಕ್ಷಾಲನ, ಶೌಚ ಮುಂತಾದ ಕಾರ್ಯಗಳಲ್ಲಿ ನೀರು ಕೊಡುವದೇ ಮುಂತಾದ ಸೇವೆಯಲ್ಲಿ ನಿಮಗ್ನನಾದನು. ಅದರಲ್ಲಿ ಒಂದು ವಿಶೇಷ, ಮುಖ ಪ್ರಕ್ಷಾಲನ

ಕಾಲದಲ್ಲಿ ಸಿದ್ಧ ಬಾಯಿ ಮುಕ್ಕಳಿಸಿ ಉಗುಳಿದ ನೀರನ್ನು ಬೇರೆ ತೆಗೆದಿಟ್ಟು ಕೊಂಡು ತೀರ್ಥವೆಂದು ತೆಗೆದುಕೊಳ್ಳುವನು. ಮಲಗಲು ಗುರುವಿಗೆ ಹಾಸಿಗೆ ಹಾಕಿಕೊಟ್ಟು ಪಾದಸೇವೆ ಮಾಡುವನು. ಹೀಗೆ ಬಗೆಬಗೆಯ ಸೇವಾತತ್ಪರ ನಾಗಿದ್ದರೂ ಅವನಿಗೆ ತೃಪ್ತಿಯಿಲ್ಲ. ರಾತ್ರಿ ಯಾತಕ್ಕಾಯಿತೋ? ಇನ್ನೂ ಹಗಲು ಇದ್ದರೆ ಸೇವೆಯ ಭಾಗ್ಯ ದೊರೆಯುತ್ತಿತ್ತಲ್ಲ' ಎನ್ನುವನು.

ಒಂದು ದಿನ ಸೇವೆ ಮುಗಿಸಿಕೊಂಡು ಗುರುವಿನ ಶಯ್ಯಾಗ್ರಹದಲ್ಲಿ ಹೊರಮುಗ್ಗಲು ಚನಮಲ್ಲಪ್ಪ ಮಲಗಿರಲು ಏನೋ ಒಂದು ಬಗೆಯ ಸಪ್ಪಳ ಕೇಳಿದಂತಾಗಿ ಎಚ್ಚರವಾಯಿತು. ಒಂದು ಘೋರ ಸರ್ಪವು ಶಯ್ಯಾಗ್ರಹ ಪ್ರವೇಶಿಸುವ ಹವಣಿಕೆಯಲ್ಲಿತ್ತು. ಅಹಾ! ಘಾತವೆಂದುಕೊಂಡವನೇ ಆ ಸರ್ಪದ ಬಾಲ ಹಿಡಿದು ಹೊರಗೆಳೆದನು. ಆಗ ಸರ್ಪವು ಸಿಟ್ಟಿಗೆದ್ದು ಹೊರಳಿ ಇವನ ಕೈಗೆ ಕಚ್ಚಿಬಿಟ್ಟಿತು. ಅಷ್ಟಾದರೂ ಇವನು ಅದನ್ನು ಬಿಡದೇ ದೂರ ಒಯ್ದು ಆ ದುಷ್ಟ ಜಂತುವನ್ನು ಕೊಂದು ಹಾಕಬೇಕೆಂದು ತೆಗೆದುಕೊಂಡು ಹೊರಟನು. ಅವನು ಹಾಗೆ ಯೋಚಿಸುವುದಕ್ಕೆ ಒಂದು ಕಾರಣವಿತ್ತು. ಇಲ್ಲಿ ಸದ್ದು ಮಾಡಿದರೆ ಗುರುನಾಥನಿಗೆ ಎಚ್ಚರವಾಗುವದು. ಆದಕಾರಣ ಇಲ್ಲಿಂದ ದೂರ ಒಯ್ಯಬೇಕು ಎಂದುಕೊಂಡು ದೂರ ಒಯ್ದನು. ಮೊದಲು ಈ ಸರ್ಪವನ್ನು ಕೊಲ್ಲಬೇಕೆಂದು ಅವನ ವಿಚಾರವಿರಲಿಲ್ಲ. ಆದರೆ ಇದು ದುಷ್ಟ ಜಂತು. ಯಾವದಾದರೂ ಇತರ ಪ್ರಾಣಿಗೆ ಕಡಿದೀತು. ಇದನ್ನು ಕೊಂದೇ ಬಿಡೋಣ ಎಂದು ಸರ್ಪವನ್ನು ಮುಗಿಸಿ ಮತ್ತೆ ಮೊದಲಿನ ಸ್ಥಳಕ್ಕೆ ಬಂದು ಮಲಗಿದನು. ತನ್ನ ಭಕ್ತಿ ಬಲದಿಂದ ತನಗೆ ಹಾವು ಕಡಿದುದನ್ನು ಚನಬಸಪ್ಪ ಎಷ್ಟೇ ನಿರ್ಲಕ್ಷಿಸಿದರೂ ಪ್ರಕೃತಿ ಧರ್ಮ ಕೇಳಬೇಕಲ್ಲ. ವಿಷವೇರಿ ಎಚ್ಚರದಪ್ಪಿಹೋಯಿತು.

ಅಷ್ಟರಲ್ಲಿ ಎಚ್ಚತ್ತ ಸಿದ್ಧನು ಆದೇಕೋ ಹೊರಬಂದು ಶಿಷ್ಯನನ್ನು ಕೂಗಿದನು. ಎಚ್ಚರವಿದ್ದರೆ ಉತ್ತರ ಕೊಡಬೇಕಷ್ಟೇ. ಆಗ ಸದ್ಗುರು ಚಕಿತನಾಗಿ ವಿಚಾರಿಸಿದುದದೇನಂದರೆ— ಪ್ರತಿದಿನ ನಾನು ಎದ್ದು ಕೂಡಲೇ ಜಾಗ್ರತನಾಗಿ ಕೈಕಟ್ಟಿ ನಿಲ್ಲುವ ಇವನು ಹೀಗೇಕೆ ಮಲಗಿರಬಹುದು? ಎಂದು ಅಲುಗಾಡಿಸಿ ಚನಮಲ್ಲಪ್ಪನನ್ನು ಎಚ್ಚರಿಸಬೇಕೆಂದು ಪ್ರಯತ್ನಮಾಡಿದನು. ಏನಾದರೂ ಏಳದಿರಲು ಅಂತರ್ದೃಷ್ಟಿಯಿಂದ ನೋಡಲು ಸರ್ಪದಂಶದಿಂದ ಮೃತನಾದಂತೆ

ತಿಳಿಯಿತು. ಅಹಾ ನನಗೆ ಬಂದ ಗಂಡಾಂತರವನ್ನು ತಪ್ಪಿಸಲು ಈ ಭಕ್ತನು ತನ್ನ ಪ್ರಾಣಕೊಟ್ಟು ಧನ್ಯನಾದನು. ಆದರೆ ಅವನನ್ನು ಬದುಕಿಸಬೇಕು.' ಎಂದುಕೊಂಡು 'ಶಿವಾಯನಮ ಎಂಬ, ಪಂಚಾಕ್ಷರಿ ಮಂತ್ರವನ್ನುಚ್ಚರಿಸಿ ತನ್ನ ಅಮೃತ ಕರದಿಂದ ಶಿಷ್ಯನನ್ನು ಸ್ಪರ್ಶ ಮಾಡಿದನು. ಕೂಡಲೇ ಅವನಲ್ಲಿ ಚೈತನ್ಯವುಂಟಾಗಿ ಕ್ಷಣಾರ್ಧದಲ್ಲಿ ಚನಮಲ್ಲಪ್ಪ ಎದ್ದು ಕುಳಿತು ಎದುರಿಗೆ ಸದ್ಗುರುವನ್ನು ಕಂಡು--'ಆಹಾ ಸದ್ಗುರುವೇ ನಿನ್ನನ್ನು ಕಂಡು ಧನ್ಯನಾದೆ. ನೀನು ಎದ್ದು ಬಹಳ ಹೊತ್ತಾಯಿತೇ? ನನಗೇಕೋ ಗಾಢವಾದ ನಿದ್ರೆ ಹತ್ತಿಬಿಟ್ಟಿತ್ತು. ಗುರುವೇ ಆಗ ನಾನೊಂದು ಕನಸು ಕಂಡೆ'

'ಏನದು ಕನಸು.'

'ನಿನ್ನ ಮುಂದೆ ಹೇಳಿದೆ ಇನ್ನಾರ ಮುಂದೆ ಹೇಳಲಿ. ಇಲ್ಲಿಂದ ಎಳೆದೊಯ್ದ ಯಮದೂತರು ನನ್ನನ್ನು ಯಮನ ಮುಂದೆ ನಿಲ್ಲಿಸಿದರು. ಅಷ್ಟರಲ್ಲಿ ಅಲ್ಲಿಗೆ ನಿನ್ನಂಥ ಸಾಧುಗಳೊಬ್ಬರು ಬಂದು 'ಇವನನ್ನು ಈಗಲೇ ಬಿಟ್ಟುಬಿಡಿರಿ. ಎಂದು ಹೇಳಿದರು. ಯಮನು ಅವರ ಮಾತಿಗೆ ಮರ್ಯಾದೆ ಕೊಟ್ಟು ಇಲ್ಲಿಗೆ ಕಳಿಸಿದನು. ಅಷ್ಟಕ್ಕೆ ಎಚ್ಚರವಾಯಿತು.'

'ಅದಿರಲಿ ಕನಸಿನ ಮಾತು. ನೀನು ಆ ಸರ್ಪವನ್ನು ಕೈಯಿಂದ ಹಿಡಿದು ಹೋಗಬಹುದೇ ? ಚನಮಲ್ಲ.'

'ಗುರುವೇ, ನಾನು ಏನೆಂದು ಉತ್ತರ ಹೇಳಲಿ ? ಈ ದೇಹವು ನಿನ್ನ ಪಾದಕ್ಕರ್ಪಿಸಿದ್ದು ನಿನಗೆ ಗೊತ್ತಿಲ್ಲವೇ ?'

ಎಂದು ಶಿಷ್ಯನು ಹೇಳಲು ಗುರುನಾಥ ಪ್ರೀತಿಯಿಂದ ಅವನನ್ನು ತಬ್ಬಿಕೊಂಡನು. ಯಾಕಂದರೆ ಚನಮಲ್ಲಪ್ಪನಾಡಿದ ಮಾತು ಸತ್ಯವಾಗಿತ್ತು.

ಒಂದು ಸಾರೆ ಸಿದ್ಧನಿಗೆ ಜ್ವರಬಂದವು. ನಡುನಡುವೆ ಕೆಮ್ಮು ಬರುತ್ತಿದ್ದಿತು. ಅಂದು ರಾತ್ರಿಎಲ್ಲ ಚನಮಲ್ಲಪ್ಪ ಗುರುವಿನ ಬಳಿಯಲ್ಲಿ ಕುಳಿತು, ಗುರು ಕೆಮ್ಮಿ ಉಗುಳಿದ ಕಫವನ್ನೆಲ್ಲ ಕುಡಿದು ಧನ್ಯನಾದೆನೆಂದು ಭಾವಿಸಿದನು. ಹೀಗೆ ಎಷ್ಟು ಬಗೆಯಿಂದ ಗುರುವಿಗೆ ತನ್ನನ್ನರ್ಪಿಸಿಕೊಂಡರೂ ಅವನಿಗೆ ತೃಪ್ತಿಯಾಗುತಿರಲಿಲ್ಲ.

ಎತ್ತಾಗಿ ತೊತ್ತಾಗಿ । ಹಿತ್ತಲದ ಗಿಡನಾಗಿ ।
ಮತ್ತೆಪಾದದ ಕೆರನಾಗಿ ಗುರುವಿನ ।
ಹತ್ತಿಲಿರು ಎಂದ ಸರ್ವಜ್ಞ.

ಎಂದು ಹಾಡುವನು. ಒಟ್ಟಿನಲ್ಲಿ ಗುರುವಿನ ಉಪಯೋಗಕ್ಕೆ ಬೀಳುವ ಪದಾರ್ಥಗಳೆಲ್ಲ ನಾನಾಗಬೇಕೆಂದು ಅವನ ಅಪೇಕ್ಷೆ, ಮತ್ತೊಂದು ದಿನ ಗುರುನಾಥ ಮೂತ್ರಕ್ಕಾಗಿ ಏಳಲು ಹೊರಗೆ ಕತ್ತಲೆ ಥಂಡಿ ಬೇರೆ. ಅಲ್ಲಿಯವರಿಗೆ ಹೋಗುವುದು ಬೇಡ. ಇಲ್ಲಿಯೇ ಪಾತ್ರೆ ಇಡುತ್ತೇನೆ. ಎಂದು ಹೇಳಿ ಆ ಮೂತ್ರವನ್ನು ಕುಡಿದುಬಿಟ್ಟನು. ಅವನು ಅದು ನಿಂದ್ಯವೆನ್ನಲಿಲ್ಲ. ಅಸಹ್ಯವೆನಲಿಲ್ಲ. ರೀತಿ ಏನೇ ಆಗಲಿ ಗುರುನಾಥನ ಉಪಯೋಗಕ್ಕೆ ಬಿದ್ದಷ್ಟು ಭಾಗ್ಯಶಾಲಿ ಎಂಬ ಭಾವನೆ ಅವನಿಗೆ. ಇದೇ ಗುರುಸೇವೆಯ ಪರಾಕಾಷ್ಠೆಯ ದಶೆ. ಅದನ್ನವನು ತಲುಪಿದ್ದನು. ಅವನಿಗೆ ಗುರುವೆಂದರೆ ನರನಲ್ಲ. ಅವನು ದೇವಾಧಿದೇವ. ಅವನು ಎಲ್ಲ ರೀತಿಯಿಂದ ಪೂಜ್ಯ. ಅವನ ನಿರ್ಮಾಲ್ಯವೆಲ್ಲ ಪ್ರಸಾದ ಎನ್ನುವ ಸ್ಥಿತಿ ಚನಮಲ್ಲಪ್ಪನದು.

ಊಟ ಮಾಡುವವನ ಗಂಟಲದಲ್ಲಿ ಸಿಲುಕಿಕೊಂಡ ಕಡ್ಡಿಯಂತಿರುವ ಅಹಂಕಾರವನ್ನು ನೀಗಿದವ. 'ನಾನೆಂಬ ರೋಗ ನೀಗಿದರೆ ಗುರುಬೋಧೆ ತಾನೆ ಫಲಿಸುವುದು.' ಎಂದಂತೆ ಚನಮಲ್ಲಪ್ಪ ಗುರುಕೃಪೆಗೆ ಪಾತ್ರನಾಗಿ ಕೃತಾರ್ಥತೆಯನ್ನು ಪಡೆದನು.

———

೫೧

ಉರಿಯುಂಡ ಕರ್ಪುರವು । ಸರಕು ಮಾರುವುದುಂಟೆ ? ।
ಗುರುಕರುಣದಿಂದ ನಿಜದೊಳಗೆ ಬೆರೆದಾತ ।
ನರಕಕೂಡುವನೆ ? ಸರ್ವಜ್ಞ ॥ —ಸರ್ವಜ್ಞ

ತಾಳೀಕೋಟೆಯ ಭಕ್ತನೊಬ್ಬನು ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿ ಸಿದ್ಧಾರೂಢ ಸ್ವಾಮಿಗಳನ್ನಾಶ್ರಯಿಸಿದನು. ಅವನ ವೈರಾಗ್ಯ ಬಹು ಕಠೋರ.

ಕನಸು-ಮನಸಿನಲ್ಲಿಯೂ ಅವನಿಗೆ ವಿಷಯುಗಳ ಚಿಂತನವಿರಲಿಲ್ಲ. ದೇಹಾಭಿಮಾನವಂತೂ ಮೊದಲೇ ಇರಲಿಲ್ಲ. ಇವನು ಬಂದು ಆಶ್ರಯುವನ್ನು ಬೇಡಿದಾಗಲೇ ಸಿದ್ಧನಿಗೆ ತಿಳಿದುಹೋಯಿತು. ಜ್ಞಾನಕ್ಕೆ ಯೋಗ್ಯನಾದ ಅಧಿಕಾರಿಯಾಗಿದ್ದಾನೆ. ಆಗಲೆಂದು ಹೇಳಿದನು. ಹಾಗೆ ಆಶ್ರಯ ದೊರೆತ ದಿನವೇ ಸಿದ್ಧ ಅವನಿಗೆ ಖಾಸಗತಸ್ವಾಮಿ ಎಂದು ನಾಮಕರಣ ಮಾಡಿದನು. ಆದಿನ ಸ್ವಾಮಿ ಊರೊಳಗೆ ಭಿಕ್ಷೆಗೆಂದು ಹೋಗಿರಲು ಒಬ್ಬ ಹೆಣ್ಣುಮಗಳು ಅತ್ಯಾದರ ತೋರಿ ಅವನನ್ನು ಒಳಗೆ ಕರೆದು 'ಸ್ವಾಮೀ, ಇಂದು ನಮ್ಮಲ್ಲಿ ಉತ್ತಮೋತ್ತ ಪಕ್ವಾನ್ನದಡಿಗೆಯಾಗಿದೆ. ನೀವು ಹೊಟ್ಟೆತುಂಬ ಉಂಡು ತಮ್ಮ ಕಲ್ಯಾಣವಾಗುವಂತೆ ಆಶೀರ್ವದಿಸಿರಿ' ಎಂದು ಹೇಳಲು ಖಾಸಗತಸ್ವಾಮಿ'ಇಲ್ಲವ್ವ ಯಾರದೇ ಮನೆಯಲ್ಲಾಗಲಿ ಹಾಗೆ ಊಟ ಮಾಡಲು ನನಗೆ ಗುರುಗಳಪ್ಪಣೆ ಇಲ್ಲ. ಸುಮ್ಮನೆ ಭಿಕ್ಷೆ ಹಾಕಿ ಕಳಿಸಿಬಿಡು' ಎಂದು ಹೇಳಿದನು. ಆ ಹೆಣ್ಣುಮಗಳು ಅಷ್ಟಕ್ಕೆ ಬಿಡಲಿಲ್ಲ. ಬಹಳ ಆಗ್ರಹಪಡಿಸಿದಳು. ಏನಾದರೂ ಸ್ವಾಮಿ ಸಮ್ಮತಿಸದಾಗಲು ಹೆಚ್ಚಾಗಿಯೇ ಭಿಕ್ಷೆ ಹಾಕಿ ಅಪ್ಪಣೆ ಕೊಟ್ಟಳು. ಅದನ್ನು ತಂದು ಸಿದ್ಧನಿಗರ್ಪಿಸಲು ಅವನು ಪ್ರೀತಿಯಿಂದ ಕೈಮುಟ್ಟಿ ಅದರೊಳಗಿನ ಕೆಲಭಾಗವನ್ನು ಶಿಷ್ಯನಿಗೆ ಅನುಗ್ರಹಿಸಿದನು. ಆದರೆ ಖಾಸಗತಸ್ವಾಮಿ ಅದನ್ನು ಸ್ವೀಕರಿಸದೇ ಸಿದ್ಧ ಹಾಗೂಇತರ ಶಿಷ್ಯರ ಊಟವಾಗುವವರೆಗೆ ಕಾದಿದ್ದು ಅವರೆಲ್ಲರ ಎಂಜಲ ಪಾತ್ರೆಗಳನ್ನು ಎತ್ತಿಕೊಂಡು ಹೊರಭಾಗಕ್ಕೆ ಬಂದನು. ಮತ್ತು ಆ ಪಾತ್ರೆಗಳಲ್ಲಿ ಉಳಿದ ಎಂಜಲವನ್ನೆಲ್ಲ ಬಳಿದು ಒಂದುಗೂಡಿಸಿ ತಾನು ಊಟ ಮಾಡತೊಡಗಿದನು. ಆಗ ಒಂದು ನಾಯಿ ಇವಳ ಬಳಿಗೆ ಆಶೆಗಣ್ಣಿನಿಂದ ನೋಡುತ್ತ ನಿಂತುಕೊಳ್ಳಲು ಅದಕ್ಕೆ ತನ್ನಪಾಲಿನ ಅನ್ನವನ್ನೆಲ್ಲ ಅದಕ್ಕೆಹಾಕಿದನು. ಅದರಿಂದ ಸವಿಗಲಿತ ನಾಯಿ ಪ್ರತಿದಿನ ಬಂದು ಅನ್ನ ತಿಂದು ಹೋಗಲಾರಂಭಿಸಿತು. ಒಂದೆರಡು ಕಾಗೆ ಬಂದವು. ಅವುಗಳಿಗೂ ಅನ್ನ ಹಾಕಿದನು. ಕೆಲದಿನಗಳಲ್ಲಿ ಇವನು ಪ್ರತೀಕಾರ ಮಾಡದವನು ಎಂಬುದನ್ನರಿತ ಆ ಪ್ರಾಣಿಗಳು ಪ್ರತಿದಿನ ಆ ವೇಳೆಗೆ ಬಂದು ಇವನು ಊಟಮಾಡುವ ಪಾತ್ರದಲ್ಲಿ ಬಾಯಿಹಾಕಿ ಆಹಾರ ಸ್ವೀಕರಿಸತೊಡಗಿದವು. ಹೀಗೆ ನಡೆಯುವ ಸ್ವಾಮಿಯ ಊಟವನ್ನು ಕಂಡು ಇತರ ಶಿಷ್ಯರು ಚಕಿತರಾದರು. ಯಾಕಂದರೆ ಇದೊಂದು ವಿಲಕ್ಷಣ ಪದ್ಧತಿಯಾಗಿತ್ತು. ಮನುಷ್ಯರ ಜೊತೆಗೆ ಕುಳಿತು ಊಟ ಮಾಡು

ವುದು ಲೋಕಾರೂಢಿ. ಆದರೆ ಇವನು ಕಾಗೆ-ನಾಯಿ ಮುಂತಾದ ಪ್ರಾಣಿಗಳೊಡನೆ ಊಟ ಮುಗಿಸಿಕೊಳ್ಳುವನು.

ಒಂದೊಂದು ದಿನ ಉಚ್ಛಿಷ್ಟವು ದೊರೆಯದಂತಾಗಲು ಎಲ್ಲಿಯಾದರೂ ಉಳಿದಿರುವ ತಂಗಳ ರೊಟ್ಟಿಯನ್ನು ದೊರಕಿಸಿ ಖಾಸಗತಸ್ವಾಮಿ ಊಟ ಮಾಡುವನು. ಇದನ್ನು ಕಂಡ ಚನಮಲ್ಲಪ್ಪ—'ಹೀಗೇಕೆ ನಿನ್ನ ಊಟದ ರೀತಿ?' ಎನ್ನಲು ಸ್ವಾಮೀ—'ಅಯ್ಯ, ಅದರಲ್ಲಿ ವಿಶೇಷವೇನೂ ಇಲ್ಲ. ಒಂದು ವೇಳೆ ನಾನು ಒಳ್ಳೆಯ ಅಡಿಗೆಯನ್ನು ಉಣ್ಣ ತೊಡಗಿದರೆ ಅದರಿಂದ ರುಚಿಗಂಡ ನಾಲಿಗೆ ದಿನಾಲು ಪಕ್ವಾನ್ನವನ್ನೇ ಬೇಡತೊಡಗೀತು ಅಲ್ಲದೇ ರುಚಿಯಾದುದನ್ನು ತಿನ್ನುವ ಅಭ್ಯಾಸವಾದಲ್ಲಿ ತುಸು ಹೆಚ್ಚಾಗಿಯೇ ಅನ್ನವು ಹೋಗಿ ಅದರಿಂದ ಹೊಟ್ಟೆ ಜಡವಾಗುವದು. ಮೈಯಲ್ಲಿ ಆಲಸ್ಯ ಬೆಳೆಯುವದು. ಮೈಯಲ್ಲಿ ಆಲಸ್ಯ ಉಂಟಾಗುವದರಿಂದ ಜಪ-ಧ್ಯಾನ ಮುಂತಾದವು ಸಾಗುವದಿಲ್ಲ' ಎಂದು ಹೇಳಿದನು. ಅವನ ಮಾತುಗಳನ್ನು ಕೇಳಿ ಚನಮಲ್ಲಪ್ಪ ಅವನ ರೀತಿಯನ್ನನುಸರಿಸಿದನು.

ಇದಲ್ಲದೇ ಇನ್ನೂ ಒಂದು ಗುಣವು ಖಾಸಗತಸ್ವಾಮಿಯಲ್ಲಿತ್ತು. ಮಠಕ್ಕೆ ಯಾರಾದರೂ ಹೆಣ್ಣುಮಕ್ಕಳು ಬಂದಿರುವರೆಂದರೆ ತೀರಿತು. ಸ್ವಾಮಿ ಹೊರಟು ಹೊರಗೆ ನಡೆದುಬಿಡುವನು. ಅವರು ಮನೆಗೆ ಹೋದರೆಂದು ತಿಳಿದನಂತರವೇ ಮರಳಿ ಮಠದಲ್ಲಿ ಬರುವನು. ಇವನ ರೀತಿ ಗುರುನಾಥನಿಗೆ ತಿಳಿಯಲು ಒಂದುಸಾರೆ—'ಹೆಂಗಸರನ್ನು ಕಂಡರೆ ಅಷ್ಟೇಕೆ ನಿನಗೆ ಭಯ? ನೀನು ಎಲ್ಲ ಕಡೆಗೂ ಕಾಣುತಿರುವ ಬ್ರಹ್ಮವು ಅವರಲ್ಲಿಲ್ಲವೇ? ಅವೇ ಬಣ್ಣಗಳನ್ನು ಉಪಯೋಗಿಸಿ ಚಿತ್ರಕಾರನು ಗಂಡು-ಹೆಣ್ಣು ಚಿತ್ರ ಬರೆಯುವದಿಲ್ಲವೆ? ಹಾಗೆ ತಿಳಿದು ಮನಸ್ಸನ್ನು ಚಂಚಲಗೊಳಿಸದಿರಬೇಕು' ಎಂದು ಹೇಳಿದರು. ಅದಕ್ಕೆ ಖಾಸಗತ ಸ್ವಾಮಿ ಹೇಳಿದರು :-

'ಗುರುಮೂರ್ತಿಯೇ, ನೀವು ಹೇಳುವದು ನಿಜ. ನನ್ನ ಮನದಲ್ಲಿ ಬ್ರಹ್ಮವು ನೆಲೆಗೊಂಡಿಲ್ಲ. ಎಷ್ಟೇ ಪ್ರಯತ್ನಪಟ್ಟರೂ ಸ್ಥಿರತೆ ಎಂಬುದಿಲ್ಲ. ಒಂದುವೇಳೆ ನನ್ನಮೇಲೆ ಗುರುಕೃಪೆಯಾಗಿ ಬ್ರಹ್ಮಬುದ್ಧಿ ದೃಢವಾಗುವದಾದರೆ ನಾನು ಯಾವದಕ್ಕೂ ಅಂಜದಿರುವೆನು. ಹೆಂಗಸರನ್ನು ಕಂಡಕೂಡಲೇ

ಮನದಲ್ಲಿ ಅನೇಕ ವಿಚಾರ ತರಂಗಗಳು ಏಳುವವು. ಇದುವರೆಗೆ ಸರ್ವತ್ರ ವ್ಯಾಪಕನಾದ ಬ್ರಹ್ಮದರ್ಶನ ನನಗಿಲ್ಲ. ಹೀಗಾಗಿ ಹೆದರುತ್ತೇನೆ'

ಎಂದು ನುಡಿದ ಶಿಷ್ಯನ ಮಾತುಗಳನ್ನು ಕೇಳಿ ಸಿದ್ಧ 'ಆಹಾ, ಇವನು ಬೇಗನೇ ಬ್ರಹ್ಮದರ್ಶನ ಪಡೆಯುವನೆಂದು' ಹರ್ಷಗೊಂಡನು. ಒಂದುಸಾರೆ ಖಾಸಗತ ಸ್ವಾಮಿಗೆ ಜ್ವರ ಬಂದವು. ಚನಮಲ್ಲಪ್ಪ ಉಪಚರಿಸತೊಡಗಿದನು. ಇದನ್ನು ಕಂಡು ಸ್ವಾಮಿ ಬಹು ವಿಷಾದಪಟ್ಟನು. ಯಾಕಂದರೆ ತಾನು ಜನರಿಗೆ ಭಾರವಾದೆನಲ್ಲ, ನೆಟ್ಟಗಿದ್ದು ಮುಂದಿಗೆ ನೆರವಾಗುವದರ ಬದಲು ಈ ರೀತಿ ಪರೋಪದ್ರವಿಯಾಗಿ ಇರಬಾರದು ಎಂದು ಮೊದಲಾಗಿ ವಿಚಾರ ಮಾಡಿಕೊಂಡು ಸಮಯ ಸಾಧಿಸಿ ಯಾರಿಗೂ ತಿಳಿಸದೇ ಅಡವಿಗೆ ಹೋಗಿ ಬಿಟ್ಟನು. ಹಾಸಲು ಹೊದೆಯಲು ಕೂಡ ವಸ್ತ್ರಗಳಿರಲಿಲ್ಲ. ಇದ್ದದೊಂದು ಹರಕು ಅರಿವೆ, ಅದನ್ನೇ ಮೈಮೇಲೆ ಚೆಲ್ಲಿಕೊಂಡು ಮಲಗಿದನು. ಮಗ್ಗಲಿಗೆ ಕಲ್ಲು-ಕಡ್ಡಿಗಳು ಒತ್ತುತ್ತಿದ್ದವು. ಆದರೆ ಅವನಿಗೆ ಯಾತರ ಪರಿವೆಯೂ ಇರಲಿಲ್ಲ. ಸುಮ್ಮನೇ ಆಯಾಸಪಟ್ಟುಕೊಂಡದ್ದರಿಂದ ಜ್ವರ ಹೆಚ್ಚಾದವು ಸದ್ಗುರುನಾಥನನ್ನು ನೆನೆಯುತ್ತ ಸ್ವಾಮಿ ಮಲಗಿಬಿಟ್ಟನು.

ಮೇಲಿಂದಮೇಲೆ ಅವನಲ್ಲಿ ಒಂದು ವಿಚಾರ ಸುಳಿಯಬೇಕು. ಏನಂದರೆ ನನ್ನನ್ನು ಹುಡುಕುತ್ತ ಬಹುಶಃ ಯಾರಾದರೂ ಬರುತ್ತಾರೆ. ಅವರ ಕಣ್ಣಿಗೆ ನಾನು ಬಿದ್ದರೆ ಮರಳಿ ಪರಪೀಡಾಕರನಾದಂತೆ. ಹಾಗೆ ಆಗಬಾರದು. ಆದರೆ ಯಾರ ಕಣ್ಣಿಗೂ ಬೀಳದಂತೆ ಎಲ್ಲಿಗೆ ಹೋಗಬೇಕು? ನನ್ನ ಸಲುವಾಗಿ ಪರರು ಶ್ರಮವಹಿಸುವದೆಂದರೆ ಅವರಿಗೆ ತಾಪವಾಗುವದಿರಲಿ, ನನಗೆ ತಾಪವಾಗುತ್ತದೆ. ಏನು ಮಾಡಲಿ? ಎನ್ನುತಿರುವಾಗ ಒಂದು ಕಾಗೆ ಸಡಗರದಿಂದ ಕುಣಿಯುತ್ತ ಇವನ ಬಳಿಗೆ ಬಂದು ಹಿಂದೆ ಸರಿಯುತಿದ್ದಿತು. ಅದರ ನಡತೆ ಕಂಡು ನಕ್ಕು ಸ್ವಾಮಿಯು--ಎಲೆ ಕಾಗೆಯೇ ನಿನ್ನ ಬಾಳು ಬಹು ಕಷ್ಟಕರವೆಂಬುದನ್ನು ನಾನು ಬಲ್ಲೆನು. ನಿನ್ನನ್ನು ಕಂಡರೆ ಸಾಕು. ಜನ ದೂರ ಓಡಿಸುವರು. ನನಗೆ ಭಿಕ್ಷೆ ಹಾಕುವರು. ಎಂಥ ಭೇದಭಾವ. ಅಡವಿಯಲ್ಲಿ ಕ್ರೂರ ಪ್ರಾಣಿಗಳಿರುವಂತೆ ಸಾಧು ಪ್ರಾಣಿಗಳೂ ಇವೆ. ವನದೇವಿ ಎಷ್ಟು ದಯಾಳುವಂತಳು. ಯಾರು ಬಂದರೂ ನಿರಾಕರಿಸಲಾರಳು. ಯಾರನ್ನೂ ದ್ವೇಷ ಮಾಡಲಾರಳು. ಇವಳ ನಡತೆ ನನಗೆ ಮೆಚ್ಚಿಕೆಯಾಗಿದೆ.

ಆದಕಾರಣ ಇಲ್ಲಿ ಆಶ್ರಯಕ್ಕೆ ಬಂದಿದ್ದೇನೆ. ಜನರಲ್ಲಿದ್ದರೆ ನನಗೆ ಸುಖವೆಸ್ತು ವೆಯ ? ಅಲ್ಲಿ ನಾನಾ ವಿಷಯ ಪದಾರ್ಥಗಳು. ಅವುಗಳನ್ನೆಲ್ಲ ಕಾಣುತ್ತ ಒಮ್ಮೆ ರಾಗ, ಒಮ್ಮೆ ದ್ವೇಷ. ಮನಸ್ಸಿನ ಹರಿದಾಟದಿಂದ ಬಹಳ ದುಃಖ ಹಾ ಹೋಗಲಿ ನಿನ್ನ ಆಶೆ ನನಗೆ ತಿಳಿದಿದೆ. ಬೇಗ ನಿನಗೆ ನನ್ನ ಇಡೀ ದೇಹ ವನ್ನು ಆಹಾರಕ್ಕಾಗಿ ಕೊಡುವೆ. ಆದರೇನು ಮಾಡಲಿ? ಇದುವರೆಗೆ ಸದ್ಗುರು ನಾಥನ ಬಗೆಗಿರುವ ನನ್ನ ಆಕರ್ಷಣೆ ಕಡಿಮೆಯಾಗಿಲ್ಲ. ಅಲ್ಲಿಗೆ ಹೋಗಬೇಕು. ಅವನ ಬಳಿಯಲ್ಲಿರಬೇಕು ಎಂದು ಅನಿಸುತ್ತದೆ. ತಾಳಿಕೊಂಡಿರು. ಎಂದಾದ ರೊಂದು ದಿನ ಈ ನನ್ನ ದೇಹ ನಿನ್ನ ಭಕ್ಷ್ಯ. ನನ್ನ ಜ್ವರ ಕಡಿಮೆಯಾಗುವ ವರೆಗೆ ಮಾತ್ರ ಇಲ್ಲಿ ಇರುತ್ತೇನೆ' ಎಂದು ನುಡಿದು ಸುಮ್ಮನಾದನು. ಕಾಗೆ ಹಾರಿಹೋಯಿತು.

ಇತ್ತ ಮಠದಲ್ಲಿ ಗುರುನಾಥನು ಖಾಸಗತಸ್ವಾಮಿ ಇಲ್ಲದಂತಾದುದನ್ನು ತಿಳಿದು ಬಹು ಚಿಂತಾಕ್ರಾಂತನಾದನು. ಮಗುವನ್ನು ಕಳೆದುಕೊಂಡ ತಾಯಿ ಯಾಗಿತ್ತು ಅವನ ಸ್ಥಿತಿ. ಯಾಕಂದರೆ ಮಗುವು ತನ್ನ ಎಲ್ಲ ಭಾರವನ್ನು ತಾಯಿಯ ಮೇಲಿರಿಸಿ ತಾನು ತಿರುಗುವಂತೆ ಈ ಖಾಸಗತ ಸ್ವಾಮಿಯು ಕೂಡ ಗುರುವನ್ನವಲಂಬಿಸಿದವನಾಗಿದ್ದನು. ಅವನಿಗೆ ತನ್ನ ದೇಹದ ಪರಿವೆ ಇರಲಿಲ್ಲ. ಮಾನಾಭಿಮಾನಗಳ ಅರಿವಿರಲಿಲ್ಲ. ಹಸಿವೆ—ನೀರಡಿಕೆಗಳ ಎಚ್ಚರವಿಲ್ಲ. ವಿಶ್ರಾಂತಿ ನಿದ್ದೆಯು ಗೊತ್ತಿರಲಿಲ್ಲ. ಇದನ್ನೆಲ್ಲ ನೆನೆದು ಗುರುನಾಥನ ಕಂಗಳು ಅಶ್ರುಪೂರ್ಣವಾದವು. ಅವನನ್ನು ಹುಡುಕಲೇಬೇಕೆನಿಸಿತು. ಆಗ ಉಳಿದವ ರಿಗೆ ನೀವೆಲ್ಲ ಮಠದಲ್ಲಿ ಇದ್ದುಬಿಡಿರಿ. ನಾನು ಖಾಸಗತನನ್ನು ಹುಡುಕಿಕೊಂಡು ಬರುತ್ತೇನೆ ಎಂದು ನುಡಿದು ಜತೆಗೆ ಚನಮಲ್ಲಪ್ಪನನ್ನು ಕರೆದುಕೊಂಡು ಹುಡು ಕುತ್ತ ನಡೆದನು. ಆಗ ಯಾರಾದರೂ ಸದ್ಗುರುನಾಥನನ್ನು ಕಂಡರೆ ನಿಜ ವಾಗಿ ಇವನು ಶಿಷ್ಯನ ಸಲುವಾಗಿ ಹುಚ್ಚನಾಗಿದ್ದಾನೆ ಎನಿಸದೇ ಹೋಗುತ್ತಿರ ಲಿಲ್ಲ. ಕಂಡವರನ್ನೆಲ್ಲ ನಮ್ಮ ಶಿಷ್ಯನನ್ನು ಕಂಡಿದ್ದೀರಾ ? ಎನ್ನುವನು.

ಹೀಗೆ ತಿರುಗುತ್ತ ತಿರುಗುತ್ತ ಅಡವಿಯನ್ನು ಹೊಕ್ಕರು. ಅಲ್ಲಿಯ ದೊಡ್ಡ ಗಿಡಗಳ ನೆರಳಿನಲ್ಲಿ ಹುಡುಕಿದನು. ಪೊದೆ-ಪೊದೆಗಳಲ್ಲಿ ಶೋಧಿಸಿದರು. ತೆವರು-ತೆಂಬಗಳನ್ನರಸಿದರು. ಎಲ್ಲಿಯೂ ಶಿಷ್ಯ ಕಾಣಲಿಲ್ಲ. ಆಗ ಗುರು ನಾಥ ಶಿಷ್ಯನನ್ನು ಕೂಗುತ್ತ ಮುಂದೆ ಮುಂದೆ ಸಾಗುತಿರಲು ಒಂದು ಗಿಡದ

ಕೆಳಗೆ ಖಾಸಗತ ಮಲಗಿರುವುದು ಕಾಣಿಸಿತು. ಓಡುತ್ತ ಹೋಗಿ ಸಿದ್ಧ ಶಿಷ್ಯನ ಮೈದಡವಿದನು. ಕಣ್ಣು ನೀರು ತುಂಬಿದವು. ಸ್ವರ ಗದ್ಗದವಾಯಿತು. 'ಅಯ್ಯೋ, ಮಗು ನಾನಿರುವಾಗ ಪರದೇಶಿಯಂತೆ ನೀನು ಅಡವಿಗೇಕೆ ಬಂದೆ? ಅಲ್ಲಿ ನಿನಗೆ ಯಾರೂ ಉಪಚರಿಸಲಿಲ್ಲವೇ? ನನಗೆ ಹೇಳಬಹುದಿತ್ತು. ನಾನು ನಿನಗೆ ತಕ್ಕ ಉಪಚಾರ ಮಾಡುತ್ತಿದ್ದೆ.' ಎಂದು ಗುರುನಾಥ ನುಡಿಯಲು ಚನಮಲ್ಲಪ್ಪ ಗುರುದೇವ ಕ್ಷಮಿಸಿರಿ. ನಾನು ಇವರನ್ನು ಉಪಚರಿಸುತ್ತಿದ್ದೆ. ನನ್ನ ಆ ಒರಟು ಉಪಚಾರಕ್ಕೆ ಬೇಸರಗೊಂಡು ಇವರು ಇಲ್ಲಿಗೆ ಬಂದಂತೆ ಕಾಣುತ್ತದೆ. ಏನು ಮಾಡಲಿ? ನನ್ನಿಂದ ಅಪರಾಧವಾಗಿದೆ.' ಎನ್ನುತ್ತ ಕೈ ಮುಗಿದನು. ಖಾಸಗತಸ್ವಾಮಿ ಇಬ್ಬರ ಮಾತುಗಳನ್ನೂ ಕೇಳಿದನು. ಅವರ ಮಾತುಗಳಲ್ಲಿ ತನ್ನ ಬಗೆಗೆ ಅಪಾರವಾದ ಪ್ರೀತಿ ಇತ್ತು. ಆ ಪ್ರೀತಿ ಕಂಡು ಅವನು ಕರಗಿದನು. ಅಳುತ್ತ ಮೇಲೆದ್ದು ಇಬ್ಬರನ್ನೂ ವಂದಿಸಿ 'ಇಲ್ಲ ಇಲ್ಲ ನೀವು ತಪ್ಪು ತಿಳಿಯಬಾರದು. ಯಾರ ವಿಷಯದಲ್ಲಿಯೂ ಯಾರೂ ನನಗೆ ಬೇಸರವಿಲ್ಲ. ನಾನು ಪರಾವಲಂಬಿಯಾಗಬಾರದೆಂದು ಅಡವಿಗೆ ಬಂದಿದ್ದೇನೆ. ಆದರೆ ಗುರುನಾಥನೇ ಇಲ್ಲಿಗೆ ಬಂದರೂ ನನಗೆ ಸಮಾಧಾನ ದೊರೆಯಲಿಲ್ಲ. ಯಾಕೆಂದರೆ ಕ್ಷುದ್ರನಾದ ನನ್ನ ಸಲುವಾಗಿ ನೀವು ಅಡವಿಗೆ ಬರುವ ಶ್ರಮ ವಹಿಸಬೇಕಾಯಿತು.' ಎಂದನು.

ಅವನ ಮಾತು ಕೇಳಿ ಗುರುನಾಥ- ನೀನು ಕಣ್ಮರೆಯಾದಾಗಿನಿಂದ ನನಗೆ ಸಮಾಧಾನವೇ ಇಲ್ಲದಂತಾಗಿತ್ತು. ಇನ್ನು ಮೇಲೆ ಎಂದೂ ಇಂಥ ಅವಿಚಾರತನ ಮಾಡಬೇಡ.' ಎಂದು ಬುದ್ಧಿವಾದ ಹೇಳಿ ಅವನ ಮೈಮೇಲೆ ಕೈಯಾಡಿಸಲು ಜ್ವರ ಇಳಿದು ಹೋದವು. ಮೂವರೂ ಕೂಡಿ ಮಠಕ್ಕೆ ಬಂದರು. ಹೀಗೆ ಖಾಸಗತ ಸ್ವಾಮಿ ಮಠಕ್ಕೆ ಮರಳಿ ಬಂದುದರಿಂದ ಎಲ್ಲರಿಗೂ ಸಮಾಧಾನವಾಯಿತು.

————

೫೩

ವಿಷಯಕ್ಕೆ ಕುಡಿಯದಿರು । ಅಶನಕ್ಕೆ ಹರಿಯದಿರು ।
ಅಸರೂಪನಡಿಯ ಬಿಡದಿರು ಗುರುಕರುಣ ।
ವಶವರ್ತಿಯಹುದು ಸರ್ವಜ್ಞ ॥ --ಸರ್ವಜ್ಞ

ವಿರಕ್ತನೂ, ಸತ್ವಶೀಲನೂ ಆದ ನಿರ್ವಾಣಪ್ಪನ ಊರು ಉಗರಗೊಳ್ಳ. ಬಹುದಿನಗಳ ವರೆಗೆ ಸಾಧನ ಮಾಡುತ್ತಿದ್ದರೂ ಸಮಾಧಾನವಾಗಲಿಲ್ಲ. ನಿಜದ ನೆಲೆ ತಿಳಿಯಲಿಲ್ಲ. ಹೀಗೆ ತನ್ನ ಸಾಧನ ವ್ಯರ್ಥವಾದುದನ್ನು ಕಂಡು ಅವನು ಗುರುಕೃಪೆಯಿಲ್ಲದೆ ಬಿಡುಗಡೆ ಇಲ್ಲವೆಂಬ ನಿರ್ಣಯಕ್ಕೆ ಬಂದನು. ಚಿಕ್ಕಂದಿನಿಂದಲೂ ಅವನು ಸಾಧಕ. ಈಗ ಅವನಿಗೆ ಹದಿನಾರು ವರ್ಷಗಳಾಗಿದ್ದವು. ಆಗ ಯಾರದೋ ಮುಖದಿಂದ ಸಿದ್ಧಾರೂಢರ ಮಹಿಮೆ ಕೇಳಿ ಹುಬ್ಬಳ್ಳಿಗೆ ಬಂದು ಗುರುದರ್ಶನ ಪಡೆದನು. ಆ ಸಮಯದಲ್ಲಿ ಅವನ ಬಾಯಿಂದ ಮಾತೇ ಹೊರಡದಾದವು. ಸುಮ್ಮನೇ ಕೈ ಮುಗಿದುಕೊಂಡು ಎಷ್ಟೋವೇಳೆ ನಿಂತು ಬಿಟ್ಟನು. ಸದ್ಗುರು ಅವನ ಸ್ಥಿತಿ-ಗತಿಗಳನ್ನು ತಿಳಿದು ಇವನು ಒಳ್ಳೆ ಅಧಿಕಾರಿಯಾಗಿದ್ದಾನೆ, ಎಂದು ಕಂಡುಕೊಂಡು ವಿಚಾರಿಸಿದನು-

'ಮಗುವೇ ನೀನು ಇಲ್ಲಿಗೆ ಬಂದ ಕೆಲಸವೇನು ?'

'ಸರ್ವಜ್ಞಮೂರ್ತಿಯೇ, ನಿನಗೆ ಹೇಳಬೇಕಾದುದೇನು ? ನನಗೆ ಸಂಸಾರದಲ್ಲಿ ಒಂದೊದಗುವ ದುಃಖ ಪರಂಪರೆಗಳು ಸಹನವಾಗದಂತಾದವು ! ದೇವರೇ, ದೇವರೇ, ಎನ್ನುತ್ತ ಕಾಲ ಕಳೆಯುತ್ತಿದ್ದರೂ ದುಃಖ ನಿವಾರಣೆಯಾಗದೇ 'ಅಂಜಿದವರ ಮೇಲೆ ಕಪ್ಪೆ ಹಾಕಿದರು.' ಎಂದಂತೆ ಮತ್ತೆ ಮತ್ತೆ ದುಃಖಗಳೇಕೆ ಬರಬೇಕು. ಈ ದುಃಖಗಳೆಲ್ಲ ಇಲ್ಲದಂತಾಗಿ ಶಾಶ್ವತವಾಗಿ ಸುಖ ಪಡೆಯುವಂಥ ಒಂದು ಉಪಾಯವಿಲ್ಲವೇ ? ಎಂದು ಬಹಳ ರೀತಿ ವಿಚಾರ ಮಾಡಿದೆನು. ಆದರೆ ನನಗೆ ಆ ಉಪಾಯ ತಿಳಿಯಲಿಲ್ಲ. ಆದರೆ ಇಲ್ಲಿ ನಿನ್ನ ದರ್ಶನ ಪಡೆದ ಮೇಲೆ ಅಂಥದೊಂದು ಉಪಾಯವುಂಟು. ಅವರ ರಹಸ್ಯಗಳೆಲ್ಲ ನಿನಗೆ ತಿಳಿದಿವೆ, ಎಂದು ನಂಬಿಗೆ ಎನಿಸತೊಡಗಿದೆ.'

'ಒಳ್ಳೇದು. ಹಾಗೆ ನಿನಗೆ ನಮ್ಮಲ್ಲಿ ನಂಬಿಗೆ ಹುಟ್ಟಿದರೆ ಕೆಲವುದಿನ ಮಠದಲ್ಲಿದ್ದು ವೇದಾಂತಶ್ರವಣ ಮಾಡು- ಅದರಿಂದ ಸಮಾಧಾನ ದೊರೆಯುವುದು.'

ಎಂದು ಗುರುನಾಥ ನುಡಿಯಲು ನಿರ್ವಾಣಪ್ಪ ಹರ್ಷಿತನಾಗಿ ಮಠದಲ್ಲಿ ನಿಂತು ಗುರುವಿನಾಜ್ಞೆಯಂತೆ ವರ್ತಿಸತೊಡಗಿದನು. ನಿತ್ಯವೇದಾಂತ ಶ್ರವ- ಣಕ್ಕೂ ಅವನು ಕೂಡುವನು. ಕೆಲದಿನ ಹೀಗೆ ವರ್ತಿಸುತ್ತಿರಲು ರಾಗ ದ್ವೇಷಾದಿಗಳಿಂದ ಉದ್ದೀಪನಗೊಳ್ಳುವ ಮನೋವೃತ್ತಿಗಳು ತಂತಾವೇ ಶಾಂತ ವಾದವು. ಆಗ ಸಮಾಧಾನದಿಂದ ಗುರುವಿನುಪದೇಶದ ಒಂದೊಂದೇ ವಾಕ್ಯ ಗಳನ್ನು ಮನನಮಾಡಿಕೊಳ್ಳಲಾರಂಭಿಸಿದನು. ಈಗ ಅವನು ಬಹುತರವಾಗಿ ಮೌನವನ್ನವಲಂಬಿಸಿದನು. ದಕ್ಷತೆಯಿಂದ ಗುರುಸೇವೆ ಮಾಡುತ್ತ ಭೂತ ಮಾತ್ರರಲ್ಲಿ ಪ್ರೇಮವನ್ನು ತೋರುತ್ತ ಸಾಧನಪಥವನ್ನು ಕ್ರಮಿಸತೊಡಗಿದನು. ಸಚೇತನ ಪದಾರ್ಥಗಳನ್ನಷ್ಟೇ ಅವನು ಪ್ರೇಮದಿಂದ ಕಾಣುತ್ತಿದ್ದನೆಂದಲ್ಲ. ಅಚೇತನ ವಸ್ತುಗಳಲ್ಲಿಯೂ ಅವನಿಗೆ ಪ್ರೇಮ.

ಹೀಗಿರಲು ಒಂದುದಿನ ಗುರುನಾಥನ ಬಳಿಗೆ ಬಂದು ವಂದಿಸಿ ಭಕ್ತಿ ಯಿಂದ ಕೈಮುಗಿದು ನಿಂತುಕೊಳ್ಳಲು ಸಿದ್ಧ ಕೇಳಿದನು.

'ಇದೇನೋ ನಿರ್ವಾಣ್ಣಾ, ಇನ್ನೂ ನಿನ್ನ ಸಂಕೋಚವು ಹೋಗಿಲ್ಲವಲ್ಲ'

'ಇಲ್ಲ ಗುರುನಾಥಾ, ನಿನ್ನ ಮುಂದೆ ಯಾತರ ಸಂಕೋಚ, ನಿನ್ನ ಕೃಪೆ ಯಿಂದಲೇ ನನ್ನ ಸಂಸಾರ ತಾಪವು ನಿವಾರಣೆಯಾಯಿತು. ಈಗ ಒಂದು ಸಂಶಯವಿದೆ, ನೀನು ಅಪ್ಪಣೆ ಕೊಟ್ಟರೆ ಕೇಳುತ್ತೇನೆ.'

'ಅವಶ್ಯವಾಗಿ ಕೇಳು.'

'ಇದುವರೆಗೆ ಮನವು ನಿರ್ವಿಷಯವಾಗಲೊಲ್ಲದು. ಹೊರಗಿನಿಂದ ನೋಡಿದರೆ ನಾನು ವೈರಾಗ್ಯಶೀಲನೆಂದೆನಿಸುತ್ತದೆ. ಅಂತರಂಗದ ವಿಷಯ ವಾಸನೆಗಳು ತುಂಬಿಹೋಗಿವೆ. ವಿಷಯದರ್ಶನವಾದರಂತೂ ತೀರಿಹೋಯಿತು ಮನದಲ್ಲಿ ತುಮುಲವೇ ಆರಂಭವಾಗುತ್ತದೆ. ಹೀಗಾಗುವದೆಂದು ವಿಷಯ ದಿಂದ ದೂರಾಗಿ ಏಕಾಂತದಲ್ಲಿ ಉಳಿಯಬೇಕೆಂದರೆ ಅಲ್ಲಿ ಕೂಡ ವಿಷಯ ಚಿಂತನದ ಹೊರತು ಬೇರೆ ವಿಚಾರಗಳೇ ಬರುವುದಿಲ್ಲ. ಇದರಿಂದ ಬಿಡುಗಡೆ ಹೊಂದಲು ನನಗೆ ಯಾವ ಉಪಾಯವೂ ಹೊಳೆದಿಲ್ಲ. ಏನು ಮಾಡಲಿ?'

'ಮಗು, ನಿಜವಾದ ಸಾಧನವೆಂದರೇ ವಿಷಯಚಿಂತನ ಬಿಡುವದು. ಇರಲಿ. ನೀನು ಯೋಗ್ಯನಾದ ಅಧಿಕಾರಿ ಶಿಷ್ಯನಿರುವೆ. ಸತ್ಸಂಗವಿಲ್ಲದ ಕಾರಣ ನಿನ್ನ ಸಾಧನವು ಪ್ರಗತಿಹೊಂದಿಲ್ಲ. ಇಲ್ಲಿ ಬಂದನಂತರ ನಿನಗೆ ಸತ್ಸಂಗವಂತೂ ನಿತ್ಯ ಇದ್ದೇಇದೆ. ಸಜ್ಜನರು ಹೇಗಿರುತ್ತಾರೆ. ವಿಷಯಗಳನ್ನು ಒಂದುವೇಳೆ ಸ್ವೀಕರಿಸಿದರೂ ಯಾವ ಭಾವನೆಯಿಂದ ಸ್ವೀಕರಿಸುತ್ತಾರೆ ಎಂಬುದನ್ನು ವಿಚಾರಿಸು. ಮತ್ತು ಅವರ ನಡತೆ-ನಡಾವಳಿ ಮಾತುಕಥೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡು. ಪುನಃ ಪುನಃ ವಿಚಾರಿಸು. ನಿನ್ನ ಮನಸ್ಸಿಗೆ ಪ್ರಶ್ನೆಹಾಕು. ನೀನು ವಿಷಯಗಳನ್ನಂತೂ ಚಿಂತನ ಮಾಡುತ್ತಿರುವೆ. ಇದು ಸರಿ. ಆದರೆ ನಿನಗೆ ವಿಷಯಗಳಿಂದ ಪೂರ್ಣ ಸಮಾಧಾನವಾಗುವುದೇ ಎಂದು ಕೇಳು. ಮತ್ತು ವಿಷಯಗಳ ಗುಣಧರ್ಮಗಳನ್ನು ತಿಳಿದುಕೋ.

'ವಿಷಯಗಳ ಗುಣ-ಧರ್ಮಗಳು ಯಾವವು?'

'ವಿಷಯಗಳು ಕ್ಷಣಮಾತ್ರ ತೃಪ್ತಿಕೊಡತಕ್ಕವು. ಈಗ ವಿಷಯಸೇವನೆ ಯಾಯಿತು. ಮುಂದೆ ಕೆಲಹೊತ್ತಿನಲ್ಲಿ ಮತ್ತೆ ಬೇಕೆಂದು ಎನಿಸತಕ್ಕವುಗಳು. ಹಾಗೆ ಮತ್ತೆ ಮತ್ತೆ ಸೇವನ ಮಾಡತೊಡಗಿದರೆ ಅಪಾಯವನ್ನು ತಂದೊಡ್ಡುವಂಥವು. ಒಂದುವೇಳೆ ನಾವು ಅಪೇಕ್ಷೆ ಪಟ್ಟ ಪದಾರ್ಥ ದೊರೆಯದಿದ್ದರೆ ದುಃಖವನ್ನುಂಟುಮಾಡತಕ್ಕವು. ಈಗ ತಿಳಿ. ಊಟಮಾಡಿದರೆ ನಮ್ಮ ಹಸಿವೆ ಶಾಂತವಾಗಿ ಸುಖವಾಗುವುದಷ್ಟೇ. ಉಣ್ಣಲು ರುಚಿಯಾಗುವುದೆಂದು ಹೆಚ್ಚಾಗಿ ಊಟಮಾಡಿದರೆ ಆಗುವ ಪರಿಣಾಮವೇನು? ಹೊಟ್ಟೆ ನೋಯತೊಡಗುವದು. ಈಗ ವಿಚಾರಿಸು. ಉಣ್ಣುವುದರಲ್ಲಿ ಸುಖ ನಿಜವಾಗಿಯೇ ಇರುವುದಾದರೆ ಹೆಚ್ಚೆಚ್ಚು ಊಟಮಾಡಿದ ಹಾಗೆಲ್ಲ ಹೆಚ್ಚು ಸುಖವಾಗಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ದುಃಖವಾಯಿತು. ಇದರಂತೆಯೇ ವಿಷಯಗಳನ್ನು ತಿಳಿ.'

'ಜ್ಞಾನಿಗಳಾದವರಿಗೆ ವಿಷಯ ಸುಖದ ಅಪೇಕ್ಷೆಯೇ ಇರುವುದಿಲ್ಲ, ಎನಿಸುವುದಲ್ಲ.'

'ನಿಜ. ಸಾತಿಶಯವೆನಿಸುವ ಅಂದರೆ ಈಗ ತಿಳಿ' ಒಬ್ಬನು ಪ್ರತಿದಿನ ಜೋಳದ ಅಂಬಲಿಯುಂಡು ತೃಪ್ತನಾಗಿ ತಣ್ಣಗಿದ್ದಾನೆ. ಅವನಿಗೆ ಒಂದುದಿನ ಒಬ್ಬನು ಅಕ್ಕಿಯ ಅನ್ನ ಇದಕ್ಕಿಂತ ರುಚಿ, ಎಂದು ಹೇಳಿದನು. ಅದರಿಂದ

ಜೋಳದ ಅಂಬಲಿಯಲ್ಲಿದ್ದ ರುಚಿ-ತೃಪ್ತಿಗಳು ಅವನಿಗೆ ದೊರೆಯದಾದವು. ಮನಸ್ಸು ಅಕ್ಕಿಯಅನ್ನವನ್ನು ಧ್ಯಾನಿಸತೊಡಗಿತು, ಹಾಗೆ ವಿಷಯಗಳ ಸ್ಥಿತಿ. ಜ್ಞಾನಿಯೇ ಇರಲಿ, ಅಜ್ಞಾನಿಯೇ ಇರಲಿ ದೇಹವಿರುವವರೆಗೆ ವಿಷಯಗಳ ಸಂಗ ತಪ್ಪಿದುದಲ್ಲ. ಜ್ಞಾನ ದೊರೆತದ್ದರಲ್ಲಿ ಸಮಾಧಾನಪಡುತ್ತಾನೆ, ದೊರೆಯದಿರುವದನ್ನು ಕುರಿತು ಅವನು ಹಂಬಲಿಸುವದಿಲ್ಲ. ಅಜ್ಞಾನಿ ದೊರೆತುದರಲ್ಲಿ ತೃಪ್ತಿತಾಳುವದಿಲ್ಲ. ದೊರೆಯದಿರುವದನ್ನು ಕುರಿತು ಯಾವಾಗಲೂ ಹಂಬಲಿಸತೊಡಗುತ್ತಾನೆ, ಹೀಗಾಗಿ ಅವನಿಗೆ ಸಮಾಧಾನ ದೊರೆಯುವುದಿಲ್ಲ. ಇದಿರಲಿ, ಜ್ಞಾನಿ ವಿಷಯಗಳಿಂದ ನಿಜವಾದಸುಖ ಲಾಭವಿಲ್ಲವೆಂದು ದೃಢವಾಗಿ ತಿಳಿದಿರುವನು. ಅವುಗಳನ್ನು ಸಂಪಾದಿಸಬೇಕಾದರೆ ಕಷ್ಟ, ಹೆಚ್ಚು ಉಪ-ಭೋಗಿಸಿದರೆ ಕಷ್ಟ, ದೊರೆಯದಿದ್ದರೆ ಕಷ್ಟ. ಹೆಚ್ಚಿನ ತರಗತಿಯದು ದೊರೆಯದೇ ಕಡಿಮೆ ತರಗತಿಯದು ದೊರೆತರೆ ಕಷ್ಟ, ಒಟ್ಟು ವಿಷಯಗಳು ದುಃಖದಾಯಕವಾದವುಗಳು. ನಿಜವಾದ ತೃಪ್ತಿಯನ್ನು ಕೊಡದಂಥವುಗಳು. ಎಂದು ತಿಳಿದು ವಿಷಯಗಳಲ್ಲಿ ದುಃಖದೋಷಾನು ದರ್ಶನವಾದರೆ ವಿಷಯಪ್ರೀತಿ ಕಡಿಮೆಯಾಗಿ ಮನಸ್ಸು ನಿರ್ಮಲವಾಗುವದು. ಇಷ್ಟಾದ ಮೇಲೆ ಮುಂದಿನ ವಿಚಾರ.

ಎಂದು ಗುರುನಾಥನ ಉಪದೇಶ ಕೇಳಿ ನಿರ್ವಾಣಪ್ಪ ಅದನ್ನೇ ತಿರು-ತಿರುಗಿ ವಿಚಾರಮಾಡುತ್ತ ಕೆಲ ದಿನಗಳಲ್ಲಿ ಶುದ್ಧ ಮನಸ್ಕನಾಗಿ ಗುರುವಿಗೆ ನಮಸ್ಕರಿಸಲು ಗುರುನಾಥ ವೇದಾಂತೋಪದೇಶವನ್ನು ಕೊಟ್ಟು ಅವನನ್ನು ಉದ್ಧರಿಸಿದನು. ಮುಂದೆ ನಿರ್ವಾಣಪ್ಪ ಜ್ಞಾನಿ ಎನಿಸಿ 'ಪಂಚೀಕರಣ'ವೆಂಬ ವೇದಾಂತ ಗ್ರಂಥವನ್ನು ರಚನೆಮಾಡಿದನು.

————

೫೪

ಗುರುವೆ ನಿಮ್ಮನು ನೆನೆದು । ಉರಿವ ಕಿಚ್ಚನುಹೊಗಲು ।
ಉರಿತಗ್ಗಿ ಉದಕ ಕಂಡಂತೆ ನಿಮ್ಮಯ ।
ಕರುಣವುಳ್ಳರಿಗೆ ಸರ್ವಜ್ಞ ॥ —ಸರ್ವಜ್ಞ

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಶ್ರೀಧರ-ಲಕ್ಷ್ಮೀಬಾಯಿ ಎಂಬ ದಂಪತಿಗಳು, ಅವರಲ್ಲಿ ಲಕ್ಷ್ಮೀಬಾಯಿ ಚಿಕ್ಕಂದಿನಿಂದಲೂ ಸಿದ್ಧಾರೂಢ ಸ್ವಾಮಿಯ ಭಕ್ತಳು. ಹುಬ್ಬಳ್ಳಿ ಅವಳ ತವರುಮನೆ, ಅಲ್ಲಿರುವಾಗಂತೂ ಸ್ವಾಮಿಯ ದರ್ಶನ ಪಡೆಯದೇ ಒಂದು ದಿನವೂ ಇರುತ್ತಿರಲಿಲ್ಲ. ಗುರುನಾಥ ಅವಳಿಗೆ ಅಷ್ಟು ಪ್ರೀತಿ.

ಮದುವೆಯಾಗಿ ಗಂಡನಮನೆಗೆ ಹೋಗುವಾಗ ಅವಳು ದರ್ಶನಕ್ಕೆ ಬಂದು ಗುರುನಾಥಸ್ವಾಮಿಗೆ- 'ಸ್ವಾಮೀ, ನಾನು ಹೆಣ್ಣುಮಗಳು ಮದುವೆಯಾಯಿತು, ಇನ್ನು ಪತಿಗೃಹಕ್ಕೆ ತೆರಳಬೇಕು. ಕುಂದಾಪುರದಲ್ಲಿ ಪತಿಯ ಮನೆ. ದೂರ ಹೋದಳೆಂದು ನನ್ನನ್ನು ಮರೆಯದೇ ಕೃಪೆತೋರಬೇಕು' ಎಂದು ಬಹುಕಷ್ಟದಿಂದ ನುಡಿದು ಕಣ್ಣೀರು ಸುರಿಸಿದಳು. ನವಪರಿಗಣಿತಳಾದ ಆ ವಧುವಿನ ಉದ್ಗಾರವನ್ನು ಕೇಳಿ ಗುರುನಾಥ ಬಹು ಬಗೆಯಾಗಿ ಅವಳನ್ನು ಸಮಾಧಾನಗೊಳಿಸುತ್ತ ಸ್ತ್ರೀ-ಧರ್ಮವನ್ನು ಉಪದೇಶಿಸಿ ಅಳಬೇಡವೆಂದು ಹೇಳಿದನು. ಅವಳು—

'ನಾನು ಪತಿಗೃಹಕ್ಕೆ ತೆರಳುವುದಕ್ಕೆ ಅಳುವುದಿಲ್ಲ. ಏನು ಮಾಡಲಿ, ನಿನ್ನ ದರ್ಶನವಿಲ್ಲದೇ ಅಲ್ಲಿ ಹೇಗಿರಲಿ' ಎಂದು ದುಃಖವಾಗಿದೆ. ಎಂದು ನುಡಿಯಲು ಸಿದ್ಧನು- 'ಮಗಳೇ, ಅದಕ್ಕಾಗಿ ಚಿಂತಿಸಬೇಡ. ನಿನಗೆ ಇಷ್ಟವೆನಿಸಿದ ದೇವರ ನಾಮವನ್ನು ಯಾವಾಗಲೂ ಸ್ಮರಿಸುತಿರು. ಎಂಥ ಪ್ರಸಂಗಬಂದರೂ ಈ ವ್ರತವನ್ನು ನೀನು ಬಿಡದೇ ಪಾಲಿಸಿದರೆ ಅವನ ಅನುಗ್ರಹದಿಂದ ನಿನ್ನ ಪ್ರಪಂಚವು ಸುಖಮಯವಾಗುವುದು. ಚಿಂತಿಸಬೇಡ' ಎಂದು ಹೇಳಿದನು.

ಆ ಮಾತುಗಳಿಂದ ಅವಳು ಸಮಾಧಾನಗೊಂಡರೂ 'ಬೇಗನೇ ಕರೆಸಿಕೊಂಡು ದರ್ಶನಕೊಡಬೇಕು' ಎಂದು ನುಡಿಯಲು ವಿನೋದವಾಗಿ ಸಿದ್ಧನು 'ನಿನ್ನ ತಾಯ್ತಂದೆಗಳನ್ನು ಬಿಟ್ಟುಹೋಗಲು ನಿನಗೆ ಕಷ್ಟವಿಲ್ಲವೇ?' ಎಂದು ಕೇಳಿದನು. ಥಟ್ಟನೇ ಅವಳು 'ಇಲ್ಲ ಗುರುವೇ, ಅವರನ್ನು ಅಗಲಿ ಹೋಗಲು ಅಷ್ಟೊಂದು ದುಃಖವೆನಿಸಿಲ್ಲ. ಅವರಿಗಿಂತ ನಿನ್ನಲ್ಲಿ ಹೆಚ್ಚಿನದೇನೋ ಇದೆ, ನಿನ್ನನ್ನು ಬಿಟ್ಟುಹೋಗುವದು ಬಹಳ ಕಷ್ಟವೆನಿಸಿದೆ. ಕಾರಣ ಮಾತ್ರ ತಿಳಿಯದು ' ಎಂದು ನುಡಿದು ವಂದಿಸಿ ಪತಿಯ ಮನೆಗೆ ತೆರಳಿದಳು.

ದೂರದ ಆ ಊರಿಗೆ ಬಂದರೂ ಸಿದ್ಧನನ್ನು ಅವಳು ಮರೆಯಲಿಲ್ಲ. ಮನದಲ್ಲಿ ಅವನ ರೂಪವನ್ನು ನೆನೆಯುತ್ತ, ನಾಮಸ್ಮರಣೆ ಮಾಡುತ್ತ ದಿನಗಳೆಯತೊಡಗಿದಳು. ಪೂರ್ವ ದಕ್ಷತೆಯಿಂದ ಮನೆವಾರ್ತೆ ನೋಡಿಕೊಂಡು ಪತಿಯ ಮನವರಿತು ಅವನನ್ನು ಸಂತೋಷಗೊಳಿಸಿ ಪ್ರೀತಿಪಾತ್ರಳೆನಿಸಿದಳು. ಹೀಗಿದ್ದರೂ ಅವಳಿಗೆ ಸಿದ್ಧನ ಧ್ಯಾನವೇ ಧ್ಯಾನ. ಕೆಲದಿನಗಳ ನಂತರ ಶಿವರಾತ್ರಿಯ ಉತ್ಸವ ಬರಲು ಅವಳು ಪತಿಗಂದಳು.

'ಹುಬ್ಬಳ್ಳಿಯ ಸಿದ್ಧಾರೂಢ ಗುರುಗಳ ಮಠದಲ್ಲಿ ಶಿವರಾತ್ರಿಗೆ ಬಹು ದೊಡ್ಡ ಉತ್ಸವವಾಗುತ್ತದೆ. ದೂರದೂರದಿಂದ ಭಕ್ತರು ಬರುತ್ತಾರೆ, ಅಖಂಡ ಭಜನೆ ಏನು? ಕೀರ್ತನವೇನು? ಏಳು ದಿನವೆಂದರೆ ದಿನಕ್ಕೊಂದು ಚಂದ. ಬೆಳಗಾದರೆ ವೇದಾಂತ ಶ್ರವಣ, ಮಧ್ಯಾಹ್ನದಲ್ಲಿ ಅನ್ನಸಂತರ್ಪಣ, ಸಂಜೆಗೆ ಸದ್ಗುರುನಾಥನ ಮಹಾಪೂಜೆ, ಭೇ ಅದನ್ನು ನೋಡಿಯೇ ಆನಂದಿಸಬೇಕು. ಏಳನೆಯ ದಿನವಂತೂ ಮಹಾಜಾತ್ರೆ. ಅಂದು ರಥೋತ್ಸವ, ಜನರ ಸಂತೋಷಕ್ಕೆ ಮಿತಿಯೇ ಇಲ್ಲ. ಆಕಾಶ ಬಿರಿದು, ಸ್ವರ್ಗದ ಬಾಗಿಲು ತೆರೆದಂತೆ ನಾಮಗರ್ಜನೆ ಮಾಡುತ್ತ ರಥವೆಳೆಯುವರು. ನಾವೂ ಹೋಗಿಬರೋಣವೇ?'

'ಹೋಗುವದು ತಪ್ಪಲ್ಲ. ಆದರೆ ನಮಗೆ ಅವಕಾಶವೆಲ್ಲಿ? ನೀನೇ ನೋಡುತ್ತಿರುವೆಯಲ್ಲ. ನಿನಗೆ ಜಾತ್ರೆ ನೋಡುವ ಇಚ್ಛೆ ಇದ್ದರೆ ಸಮೀಪ ಗೋಕರ್ಣವಿದೆ, ಅಲ್ಲಿಯೂ ಸಹಸ್ರಗಟ್ಟಲೆ ಜನ ಕೂಡುತ್ತಾರೆ. ರಥೋತ್ಸವವೂ ನಡೆಯುತ್ತದೆ. ಅದನ್ನು ನೋಡಿಬರಬಹುದು.

'ಗೋಕರ್ಣವು ಪವಿತ್ರ ಕ್ಷೇತ್ರ, ಅಲ್ಲಿಯೂ ಉತ್ಸವ ನಡೆಯುತ್ತದೆ. ಇಲ್ಲವೆನ್ನುವದಿಲ್ಲ, ನಿಮ್ಮ ಗೋಕರ್ಣದ ಮಹಾಬಳೇಶ್ವರ ದರ್ಶನಕ್ಕೆ ಬಂದ

ದ್ದರು. ಇನ್ನು ಲಕ್ಷ್ಮೀಬಾಯಿಯ ಸರದಿ. ದಾಟಬೇಕೆನುವಾಗ ದಾಟ
ಸಾಧನ ಮುಳುಗಿಹೋಯಿತು, ಸರಿ ಇನ್ನು ಮೇಲೆ ಜಲಸಮಾಧಿಯೇ ಗ

ಹಡಗದಲ್ಲಿ ನೀರು ತುಂಬುತ್ತ ತುಂಬುತ್ತ ಟೊಂಕಮಟ್ಟಕ್ಕೆ ಏರಿ
ಉಳಿಯುವ ಆಶೆ ಇಲ್ಲದಂತಾಯಿತು. ಆ ಕೂಸನ್ನು ಹೆಗಲ ಮೇಲೆ ಹ
ಕೊಂಡು-- 'ಸದ್ಗುರುನಾಥನೇ, ಎಷ್ಟು ಸಂತೋಷದಿಂದ ನಿನ್ನ ದರ್ಶನ
ಹೊರಟಿದ್ದೆನಲ್ಲ, ನೀನು ದರ್ಶನ ಕೊಡಲಿಲ್ಲವೆಂದು ಶಪ್ಪನಾದೆಯ
ನೋಡು, ನೀರಿನಲ್ಲಿ ಮುಳುಗಿ ಪ್ರಾಣನೀಗುವ ವೇಳೆ ಬಂದಿತು, ಸಾಲದ್ದ
ನನ್ನ ಕಣ್ಣಿಗೆ ಈ ಕೂಸು ಬೀಳುವಂತೆ ಮಾಡಿ ಇದನ್ನೂ ಕಟ್ಟಿಕೊಂಡು ನಾ
ಸಾಯುವ ಹೊತ್ತು ತಂದೆ. ಇಂಥ ದುರ್ಮರಣ ತರಬೇಕಾದರೆ ನಾ
ಮಾಡಿದ ಅಪರಾಧವೇನು? ಸ್ವಾಮಿ, ಈ ಕೂಸನ್ನು ಉಳಿಸಬೇಕೆಂದು ನಾ
ಗದ್ದಲದಿಂದ ಹಿಂದುಳಿಯಬೇಕಾಯಿತು. ಪತಿಯಂತೂ ಎತ್ತಹೋದರೆ
ತಿಳಿಯದಂತಾಯಿತು, ಜನರು ಪಾರುಮಾಡುವ ಮತ್ತೊಂದು ಹಡಗ
ದೂರಾಯಿತು, ಇನ್ನು ನಾನು ಉಳಿಯುವ ಆಶೆ ಮಾಡುವುದು ವ್ಯರ್ಥ
ನಿನ್ನ ವಿನಾ ನನಗೆ ಸಹಾಯ ಮಾಡುವವರು ಯಾರು ಇಲ್ಲ. ನಿನಗೆ ಬೇಕಾ
ದರೆ ಉಳಿಸು, ಬೇಡಾದರೆ ಬಿಡು, ಎಂದು ಆರ್ತಳಾಗಿ ಮೊರೆ ಇಡುತಿರಲು
ಒಂದು ಸಣ್ಣ ಡೋಣಿಯಲ್ಲಿ ಕುಳಿತುಕೊಂಡು ಬಂದ ಸಿದ್ಧನು ಕಾಣಿಸಿದನು.
ಅವನನ್ನು ಕಂಡಕೂಡಲೇ ಲಕ್ಷ್ಮೀಬಾಯಿ ಹರ್ಷಭರಿತಳಾಗಿ- 'ಬಂದೆಯಾ?
ಸ್ವಾಮಿ,' ಎಂದು ನುಡಿದು ಮೊದಲು ಕೂಸನ್ನು ಅವನ ಕೈಗಿತ್ತಳು. ತ
ವಾಯ ಸಿದ್ಧ ಕೈಕೊಡಲು ಮುಳುಗುವ ಹಡಗದಿಂದ ಸುರಕ್ಷಿತವಾದ
ಡೋಣಿಗೆ ಬಂದುಕುಳಿತಳು. ಆದರೆ ಆಶ್ಚರ್ಯ, ಸಣ್ಣ ಡೋಣಿಯೂ ಇಲ್ಲ,
ಸದ್ಗುರುನಾಥನೂ ಇಲ್ಲ. ಲಕ್ಷ್ಮೀಬಾಯಿ ಕೂಸೆತ್ತಿಕೊಂಡು ಎಲ್ಲರೂ ಏ
ಕುಳಿತ ಹಡಗದಲ್ಲಿಯೇ ಬಂದಿದ್ದಳು. ಇವಳು ಬಂದಕೂಡಲೇ ಆ ಕೂಸಿನ
ತಾಯಿ ಓಡುತ್ತಬಂದು ತನ್ನ ಕೂಸೆತ್ತಿಕೊಂಡು ಅವ್ವಾ, ನೀನು ಜಗದಂಬೆಯೆ
ಸರಿ, ನನ್ನ ಕಂದನನ್ನು ಉಳಿಸಿಕೊಟ್ಟೆ, ನಿನ್ನ ಉಪಕಾರವನ್ನು ನಾನು ತೀರಿಸ
ಲಾರೆ ಎನ್ನುತ್ತ ಹಲವುಸಾರೆ ಕೈಮುಗಿದಳು. ಅವಳಿಗೆ ಕೂಸನ್ನೊಪ್ಪಿ
ಲಕ್ಷ್ಮೀಬಾಯಿ ಗಂಡನನ್ನು ಹುಡುಕತೊಡಗಲು, ಹೆಂಡತಿ ಸುರಕ್ಷಿತ
ಬಂದುದನ್ನು ನೋಡಿ ಅವನಿಗೇಕೋ ನಾಚಿಕೆ ಎನಿಸಿ ಒಂದು ಕಡೆಗೆ ಮ

ನು ಕುಳಿತಿದ್ದನು. ಒಬ್ಬರು ಯಾರೋ ಅವನನ್ನು ಕರೆತರಲು
ಯಿ ಪತಿ ಪಾದಗಳಲ್ಲಿ ಮಣಿದು- 'ಅಹಾ ಸದ್ಗುರುನಾಥ, ಬಹಳ
ನನಗೆ ಪುನಃ ನಿಮ್ಮ ಪಾದಗಳ ದರ್ಶನ ಮಾಡಿಸಿದ, ನಾವು ಅಲ್ಪ
, ಎಂದು ನುಡಿಯಲು ಎಲ್ಲರೂ ಅವಳ ನಿರ್ಮಲಪ್ರೇಮವನ್ನು
ಗಾದರು.

ರರಾಯರು ಹೆಂಡತಿಯಿಂದ ನಡೆದ ವೃತ್ತಾಂತವನ್ನೆಲ್ಲ ಕೇಳಿ ತಲೆ
ಕ್ಷ್ಮೀ ನಾನು ಪಾಪಿ, ನಿನ್ನಂಥ ರತ್ನವನ್ನು ತ್ಯಾಗಮಾಡಿ ಬಂದು
ವರೆಗೆ ಎರವಾಗುತ್ತಿದ್ದೆ, ನನ್ನನ್ನು ಕ್ಷಮಿಸು' ಎಂದು ನುಡಿ
ಳು- 'ಇಂಥ ಗೊಂದಲದಲ್ಲಿ ಪಾರಾಗಿ ನೀವು ಸುರಕ್ಷಿತವಾಗಿ
ಗೆ ಬಿದ್ದಿರಿ, ಇದೊಂದು ನನ್ನ ಪುಣ್ಯವೆಂದು ತಿಳಿಯುತ್ತೇನೆ'
ಥ ಅಗಾಧ ಚರಿತ್ರನೇ ಸರಿ ಎಂದು ಪತಿಯನ್ನು ಸಮಾಧಾನಗೊಳಿ
ಷ್ಟರಲ್ಲಿ ಇಳಿಯುವ ಸ್ಥಳ ಬಂದಿತು, ಹಡಗದಿಂದ ಇಳಿದು ಉಗೆ
ಹುಬ್ಬಳ್ಳಿಗೆ ಬಂದು ಸಿದ್ಧನನ್ನು ಕಂಡರು. ಹಾಗೆ ಕಾಣುವುದೇ
ೀಬಾಯಿ ಗದ್ಗದಿತಳಾಗಿ ತಾವು ಬರುವಾಗ ಘಟಿಸಿದ ಸಂಗತಿಯ
ೇದಿಸಿದಳು. ಹಸನ್ಮುಖನಾಗಿ ಅವನೆಲ್ಲ ಕೇಳುತ್ತ ಗುರುನಾಥ-
ಬಲದಿಂದಲೇ ಸಂಕಟಮುಕ್ತಳಾದೆ, ಹೀಗೆ ನಿನ್ನ ಭಕ್ತಿ ವರ್ಧಿಸಲಿ'
ರ್ವದಿಸಿದನು. ಏಳು ದಿನಗಳ ಉತ್ಸವಕಾರ್ಯ ಮುಗಿಯಿತು.
ಣುತ್ತ ದಂಪತಿಗಳು ನಲಿದರು.

ಾಯ ಲಕ್ಷ್ಮೀಬಾಯಿ ಗುರುವಿನ ಬಳಿಗೆ ಬಂದು- 'ಸದ್ಗುರುವೇ,
ನನ್ನು ಬಿಟ್ಟು ಹೋಗಲು ಮನಸ್ಸೆ ಬಾರದಾಗಿದೆ, ನೀನು ಅಪ್ಪಣೆ
ಸ್ವಸ್ಥವಾಗಿ ಇಲ್ಲಿಯೇ ಇದ್ದು ಬಿಡುವೆವು. ಎನ್ನಲು ಗುರುನಾಥ-
ರ್ಯ ತೀರಿತು, ನಿಮ್ಮೂರಿಗೆ ತೆರಳಲು ಮನಸ್ಸೇಕೆ ಇಲ್ಲ, ಎಲ್ಲಿದ್ದ
ಗವಂತ ಬೇರೆಯಾಗುತ್ತಾನೆಯೇ, ಇಲ್ಲಿರುವವನೇ ಅಲ್ಲಿಯೂ
ರ್ವತ್ರದಲ್ಲಿಯೂ ಇರುತ್ತಾನೆ. ಅವನ ನಾಮವನ್ನು ನೆನೆಯುತ್ತ
ದ ಊರಿಗೆ ಹೋಗಿ ನೆಲೆಸಿರಿ, ನಿಮ್ಮ ಕಲ್ಯಾಣವಾಗುತ್ತದೆ'
ದನು. ಆ ಮಾತನ್ನು ಕೇಳಿ ಸಮಾಧಾನಗೊಂಡು ಗುರುವಿ
ದು ದಂಪತಿಗಳು ತಮ್ಮೂರಿಗೆ ಮರಳಿದರು.

ನಿತ್ಯ ಚಿಂತನದಿಂದ ದೂರದಲ್ಲಿದ್ದ ಗುರುನಾಥ ಬಳಿಯಲ್ಲಿದ್ದಂತೆ ಭಾಸವಾಗಿ ಅವನ ಕೃಪೆಯಿಂದ ಗಂಡ-ಹೆಂಡತಿ ಸುಖವಾಗಿ ಬಾಳಿದರು.

೫೫

ಒಂದೊಂದು ಹನಿ ಬಿದ್ದು । ನಿಂದಲ್ಲಿ ಮಡವಕ್ಕು ।
ಸಂದ ಸತ್ಪುರುಷನೊಡನಾಡೆ ಪರಬೊಮ್ಮ ।
ಮುಂದೆ ಬಂದಕ್ಕು ಸರ್ವಜ್ಞ ॥ — ಸರ್ವಜ್ಞ

ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತು ಮರ್ಹತಿ ॥
—ಭವಭೂತಿ

ಮಹಾತ್ಮರ ಮನಸ್ಸನ್ನು ತಿಳಿಯಬಲ್ಲ ಸಮರ್ಥರು ಯಾರು ?

ಒಂದುದಿನ ಇಳಿಹೊತ್ತು, ಸದ್ಗುರುನಾಥ ತನ್ನ ಶಿಷ್ಯರನ್ನು ಕರೆದು ಹೇಳಿದನು– 'ಇದೋ ಮಠದ ಪಶ್ಚಿಮಭಾಗದ ಗುಡ್ಡವಿರುವುದಲ್ಲ, ಈಗಲೆ ಎಲ್ಲರೂ ಅಲ್ಲಿಗೆ ಹೊರಡಬೇಕು, ಜೊತೆಗೆ ಎಲ್ಲರಿಗೂ ಸಾಲುವಷ್ಟು ರೊಟ್ಟಿ-ಹುಳಿ ತೆಗೆದುಕೊಂಡು ನಡೆಯಿರಿ; ಆರಾಮವಾಗಿ ಹೋಗಿಬರೋಣ.' ಅದ-ರಂತೆಯೇ ಶಿಷ್ಯರು ಸಿದ್ಧಮಾಡಿಕೊಂಡು ನಿಂತಕೂಡಲೇ ಗುರು ಸುಮಾರು ಇಪ್ಪತ್ತೈದು ಶಿಷ್ಯರಿಂದ ಕೂಡಿಕೊಂಡು ಆ ಗುಡ್ಡಕ್ಕೆ ಬಂದನು. ಭಜನೆಮಾಡುತ್ತ ಎಲ್ಲರೂ ಗುಡ್ಡವೇರಿದರು. ಅಲ್ಲೆಲ್ಲ ಕಲ್ಲುತುಂಬಿದ್ದರೂ ಇದ್ದುದರಲ್ಲಿ ಸರಿಯಾದ ಸ್ಥಳಮಾಡಿಕೊಂಡು ಒಂದು ಎತ್ತರವಾದ ಕಲ್ಲ ಮೇಲೆ ಸಿದ್ಧನನ್ನು ಕುಳ್ಳಿರಿಸಿ ಶಿಷ್ಯರು ಕುಳಿತರು. ಆಗ ಗುರುವನ್ನು ಪೂಜೆ ಮಾಡಬೇಕೆಂದು ಅವರು ವಿಚಾರಿಸಿ ಅಲ್ಲಿ ದೊರಕಿದ ಪತ್ರ-ಪುಷ್ಪಗಳ ಶೇಖರಿಸಿ ಒಂದು ಉದ್ದನ್ನ ಮಾಲೆ ಸಿದ್ಧಗೊಳಿಸಿ ಸಿದ್ಧನಿಗೆ ಅರ್ಪಿಸಿದರು. ಆ ಬಣ್ಣ-ಬಣ್ಣದ ಮಾಲೆಯಿಂದ ಗುರುನಾಥ ಬಲುಶೋಭಿಸಿದನು. ಹಿಂ ಪಾರ್ವತಿ ಮಹಾದೇವ ತನ್ನನ್ನು ಸ್ವೀಕರಿಸಬೇಕೆಂದು ದೊರೆತ ವನ್ಯಕುಸುಮ

ಪತ್ರಗಳಿಂದಲೇ ಅವನನ್ನು ಪೂಜಿಸುತ್ತಿದ್ದಳಂತೆ, ಹಾಗಿತ್ತು ಈ ಪೂಜೆ. ಹೀಗೆ
ಪೂಜೆ ಮುಗಿಸಿ ಶಿಷ್ಯರೆಲ್ಲ ಸುತ್ತುಗಟ್ಟಿನಿಂತು ಸುಸ್ವರದಿಂದ ಭಜನೆಮಾಡುತ್ತ
ಕುಣಿದರು. ೨-೩ ಘಳಿಗೆ ಈ ರೀತಿ ಕಳೆದುಹೋದವು, ಆ ಭಜನೆಯಿಂದ
ಸಿದ್ಧ ಸುಪ್ರಸನ್ನನಾದನು. ಹೀಗೆ ವೇಳೆ ಕಳೆದುಹೋಗಲು ಎಲ್ಲರೂ ವಿಶ್ರಾಂತಿ
ಪಡೆದರು. ಮತ್ತು ಜೊತೆಗೆ ತಂದ ರೊಟ್ಟಿಗಳನ್ನೆಲ್ಲ ಮುರಿದು ಅಲ್ಲಿರುವ
ಒಂದು ಕಲ್ಲಿನ ತೆಗ್ಗಿನಲ್ಲಿ ಹಾಕಿ ಮೇಲೆ ಹುಳಿಯನ್ನು ಹಾಕಿ ಕಲಿಸಿದರು.
ಪ್ರಸಾದದ ಮೇಲೆ ಅದರ ಒಂದೊಂದೇ ತುಣುಕುಗಳನ್ನು ತೆಗೆದುಕೊಳ್ಳುತ್ತ
ಬ್ಬರ ಬಾಯಿಯಲ್ಲಿ ಮತ್ತೊಬ್ಬರು ಹಾಕಿದರು. ಸದ್ಗುರುವೂ ಆ ಲೀಲೆಯಲ್ಲಿ
ಾಗಿಯಾದನು; ಆಗ ಎಲ್ಲರಿಗಾದ ಆನಂದಕ್ಕೆ ಪಾರವುಳಿಯಲಿಲ್ಲ.

ವಿಲಕ್ಷಣವಾದ ಈ ಲೀಲೆಯನ್ನು ಕಾಣಲು ಆಶಿಸಿ ಸ್ವರ್ಗವಾಸಿಗಳೆಲ್ಲ
ತಂತಮ್ಮ ವಾಹನಗಳನ್ನೇರಿಬಂದರು. ಆಕಾಶಪಥ ದೇವತೆಗಳಿಂದ ತುಂಬಿ
ಹೋಯಿತು. ಅವರೆಲ್ಲರ ಕಣ್ಣು ಭೂಲೋಕದಲ್ಲಿ ನಡೆದ ಈ ಲೋಕೋತ್ತರ
ದ್ಗುರುನಾಥನ ಕ್ರೀಡೆಯ ಕಡೆಗೆ,ಅವರು ತಮ್ಮೊಳಗೆ ಮಾತಾಡಿಕೊಳ್ಳತೊಡ
ದರು. 'ನೋಡಿದೆಯಾ ? ಸದ್ಗುರು ತುತ್ತು ನೀಡಿ ತನ್ನ ಶಿಷ್ಯರ ತನು-ಮನ
ಹೊಟ್ಟೆ ತುಂಬಿಸುತ್ತಿದ್ದಾನೆ. ಏನು ಮಾಡುವುದು ನಾವು ಸ್ವರ್ಗವಾಸಿ
ಾಗಿ ತಪ್ಪುಮಾಡಿದೆವು. ನಮ್ಮ ಪುಣ್ಯವೇ ಈ ಅನ್ನಾಮೃತಾನ್ನ ಪಡೆಯಲು
ಸುಗೆ ಆತಂಕವಾಗಿದೆ; ಸಿದ್ಧನ ಕೃಪೆಯಿಂದ ಈ ಅನ್ನಾಮೃತಾನ್ನ ಪಡೆದ
ಶಿಷ್ಯರು ಧನ್ಯರು.'

'ಸ್ವರ್ಗದಲ್ಲಿ ನಾವೂ ಅಮೃತವನ್ನು ಪ್ರಾಶನಮಾಡುತ್ತಿರುವೆವಲ್ಲ.'

'ಅದು ನಿಜ, ಆದರೆ ನಮ್ಮ ಪುಣ್ಯಸಂಗ್ರಹವು ಎಂದು ತೀರುವುದೋ
ನಾವು ಭೂಲೋಕಕ್ಕಿಳಿಯಬೇಕಾಗುವುದೋ ಎಂಬ ಭಯ ಬೇನೆ
ಬಿಟ್ಟಿಲ್ಲ.'

'ನಾವು ಒಂದು ದಿನದ ಸ್ವರ್ಗವಾಸ ಪಡೆದು ಅಮೃತಪ್ರಾಶನ ಮಾಡ
ವರೆ ಅದಕ್ಕೆ ಯೋಗ್ಯವೆನಿಸಿದಷ್ಟು ಪುಣ್ಯಾಂಶವನ್ನು ನಾವು ವೆಚ್ಚಮಾಡ
ಆದರೆ ಕೆಳಗೆ ನೋಡಿರಿ, ಗುರುವಿನ ಲೀಲೆಯನ್ನು ನಿರಪೇಕ್ಷ ದಯಾ
ದ ಜನ್ಮ-ಮರಣಗಳ ಭಯವನ್ನು ತಪ್ಪಿಸಬಲ್ಲ ಕವಳವನ್ನು ಶಿಷ್ಯರ
ಕುತ್ತಿರುವನು.

ಎಂದು ಮಾತಾಡಿಕೊಳ್ಳುತ್ತ ದೇವತೆಗಳು ಮರುಗುತ್ತಿರಲು ಅದೇ ಸ್ಥಳಕ್ಕೆ
ಶಿವ-ಪಾರ್ವತಿಯರ ವಿಮಾನ ಬಂದಿತು. ಒಂದೇ ಕಡೆಗೆ ದೇವತೆಗಳ ದಟ್ಟಣೆ
ಯಾದುದನ್ನು ಕಂಡು ಪಾರ್ವತಿ ಕುತೂಹಲಭರಿತಳಾಗಿ ಇಲ್ಲಿಗೆ ವಿಮಾನವನ್ನು
ಹಾರಿಸಿದ್ದಳು. ಅಲ್ಲಿಗೆ ಬಂದು ವಿಮಾನವು ನಿಲ್ಲಲು ಪಾರ್ವತಿ, ದೇವ ಇದೇ
ಕಿಲ್ಲಿ ದೇವತೆಗಳ ಗುಂಪು? ಎಂದು ಕೇಳಿದಳು. ಆಗ ಮಹಾದೇವ-
'ನೋಡುವ ನಡೆ, ಎಂದು ತುಸು ಮುಂದೆಸಾಗಿ ಸಿದ್ಧನ ಲೀಲೆಗಳನ್ನು
ಕಂಡರು.' ಪಾರ್ವತಿ-ಮಹಾದೇವನಿಗೆ— 'ದೇವ, ಇವರು ಯಾರು, ಸಿದ್ಧಾ
ರೂಢ ಸ್ವಾಮಿ?' ಎಂದು ಕೇಳಿದಳು.

'ಪಾರ್ವತಿ ನಿನಗೆ ಗೊತ್ತಿಲ್ಲವೇ? ಈಗ ಕೆಲವು ದಿನಗಳ ಹಿಂದೆ ದೇವತೆ
ಗಳೆಲ್ಲ ಬಂದು ಭೂಲೋಕದ ಪರಿಸ್ಥಿತಿಯನ್ನು ನಿವೇದಿಸಿ ಅವತಾರಮಾಡೆಂದು
ಹೇಳಿದುದು.'

'ಓ ಇದ್ದೀತು, ಎಷ್ಟೋ ವರ್ಷಗಳ ಮಾತು, ಅದಕ್ಕೂ ಇದಕ್ಕೂ
ಸಂಬಂಧವೇನು?'

'ಸಂಬಂಧವಿರುವುದೆಂದೇ ಇದನ್ನು ನೀನು ಕಾಣುತಿರುವೆ.'

'ಅಂದರೆ?'

'ಭೂಲೋಕದಲ್ಲಿ ಪಾಪವು ಹೆಚ್ಚಿದೆ, ಜನರು ಧರ್ಮ-ಕರ್ಮಗಳನ್ನು
ಮರೆತು ಸ್ವೇಚ್ಛೆಯಾಗಿ ವರ್ತಿಸತೊಡಗಿದ್ದಾರೆ. ಅದಕ್ಕಾಗಿ ನೀನು ಅವತರಿಸ
ಬೇಕಾದ ಕಾಲವು ಸನ್ನಿಹಿತವಾಗಿರುವುದೆಂದು ನಮಗನಿಸುತ್ತದೆ; ಎಂದು
ಪ್ರಾರ್ಥಿಸಿದುದನ್ನು ಮರೆತೆಯ?'

'ನಿಜ, ನಿಜ, ಈ ಸಿದ್ಧಾರೂಢನ ಅವತಾರ ನಿನ್ನದೆಂಬುದನ್ನು ತಿಳಿದೆ

'ಪಾರ್ವತಿ, ಇಲ್ಲೊಂದು ವಿಶೇಷವಿದೆ. ಅಧರ್ಮಚಾರಿಗಳು ಈ ಅ
ತಾರ ಕಾಲದಲ್ಲಿ ನಾಶಹೊಂದುವದಿಲ್ಲ. ಪುಣ್ಯವಂತರ ಉನ್ನತಿಯೂ, ಪ
ಗಳ ಹೃದಯಪರಿವರ್ತನೆಯೂ ಆಗಿ ಲೋಕಕ್ಕೆ ಕ್ಷೇಮವನ್ನುಂಟುಮಾಡು
ವುದು ಮುಖ್ಯ ಕಾರ್ಯವಾಗಿದೆ.'

'ಈ ಉದ್ದೇಶ ಸಿದ್ಧಿಸಿರುವುದೇ?'

'ದೇವತೆಗಳೂ ಬೇರೆ ಬೇರೆ ರೂಪದಿಂದ ಬಂದು ನನಗೆ ಸಹಾಯ
ಮಾಡುತ್ತಿದ್ದಾರೆ; ನಾನಂತೂ ಸಿದ್ಧನೆಂಬ ನಾಮಾಭಿಮಾನದಿಂದ ಕಾರ್ಯ